



ಕರ್ಮವೀರ

ದೀಪಾವಳಿ ವಿಶೇಷ ಸಂಚಿಕೆ ೧೯೫೭


ಟಿನೋಪಾಲ್‌ನ ಬಿಳುಪು ಎಂದರೆ ಅತ್ಯಧಿಕ ಬಿಳುಪು



ನಿಮ್ಮ ಬಿಳಿ ಬಟ್ಟೆಗಳನ್ನು ಸಾಮಾನ್ಯ ಸೋಪಿನಿಂದ ಒಗೆದ ಮೇಲೆ ಟಿನೋಪಾಲನ್ನು ಉಪಯೋಗಿಸಿರಿ. ಆಗ ನಿಮ್ಮ ಬಿಳಿಬಟ್ಟೆಗಳು ಎಲ್ಲರ ದೃಷ್ಟಿಯನ್ನು ಆಕರ್ಷಿಸುವುದನ್ನು ನೋಡುವಿರಿ. ಟಿನೋಪಾಲ್‌ನಲ್ಲಿರುವ ಒಂದು ವಿಶಿಷ್ಟ ಸತ್ವವು ಬಿಳಿ ಬಟ್ಟೆಗಳಿಗೆ ಅತ್ಯಂತ ಉಜ್ಜ್ವಲ ಬಿಳುಪನ್ನು ಕೊಡುತ್ತದೆ.



ಟಿನೋಪಾಲ



"ಟಿನೋಪಾಲ" ಜೆ. ಆರ್. ಗೈಗಿ ಎಸ್. ಎ. ಬೇಸ್ಲ ಸ್ವಿಟ್ಜರ್ಲೆಂಡ ಇವರ ರಜಿಸ್ಟರ್ಡ ವ್ಯಾಪಾರಿಚಿಹ್ನೆ

ಅಮಾಲ್ಗಮೇಟೆಡ್ ಕೆಮಿಕಲ್ಸ್ ಅಂಡ್ ಡೈಸ್ಟಫ್ಸ್ ಕಂಪೆನಿ ಪ್ರೈವೇಟ್ ಲಿಮಿಟೆಡ್. ಪೋಸ್ಟ್ ಆಫೀಸ್ ಬಾಕ್ಸ್ ೯೬೫, ಮುಂಬಯಿ.

ಸ್ಟಾಕಿಸ್ಟರು :

೧. ಮೆಸರ್ಸ್ ಡಿ. ಡಬ್ಲ್ಯೂ ರಾನಡೆ ಮತ್ತು ಕಂ. ಸಾಖರಪೇಟ ಸೊಲ್ಲಾಪೂರ

೨. ಮೆಸರ್ಸ್ ಎಸ್. ಮಹಮ್ಮದ ಘೌಸ ಸನ್ಸ ಮತ್ತು ಕಂ. ೩೬೫/೬, ಮುನಿಸಿಪಲ್ ಮೇನರೋಡ, ಆದವಾನಿ



ಪೋಸ್ಟೇಜು ಮತ್ತು ಪ್ಯಾಕಿಂಗ್
೧-೯-೦ ಪ್ರತ್ಯೇಕ
(ಸಂಪೂರ್ಣ ಔಷಧಗಳಿಗೆ ಕ್ಯಾಟಲಾಗ ನೋಡಿರಿ)

ಕಲಕತ್ತಾ ಡಾಕ್ಟರ್- ಎ. ಎನ್. ಆರ್. ಗೋಪಾಲ್ & ಸನ್ಸ

— ಇವರ —

ಕ್ಯೂರ್ ನಂ. ೧ **ಬ್ರೌನಾಯಿಲ್**

— ಮತ್ತು —

ಕ್ಯೂರ್ ನಂ. ೨೩ **ಬ್ಲೂಯಿಂಟ್** ರಜಿಸ್ಟರ್ಡ

೩೦ ವರ್ಷಗಳಿಂದಲೂ ಮಕ್ಕಳ ಖಾಯಿಲೆಗಳಿಗೆ ಪ್ರಸಿದ್ಧಿಯಾಗಿದೆ. ನಿಮ್ಮ ಮಕ್ಕಳಿಗೆ ಶಠರೋಗ, ಪಕ್ಕೆ ಹೊಡೆತ, ಬಾಲಗ್ರಹ, ಕಫ ಮೊದಲಾದ ಶೀತ ಸಂಬಂಧ ಖಾಯಿಲೆಗಳಿಗೆ ಉಪಯೋಗಿಸುವುದಲ್ಲದೆ ಪ್ರತಿ ವಾರವೂ ತಪ್ಪದೆ ಮಕ್ಕಳಿಗೆ ಉಪಯೋಗಿಸಿ ಆರೋಗ್ಯವನ್ನು ಕಾಪಾಡಿಕೊಳ್ಳಿರಿ.

ಕ್ಯೂರ್ ನಂ. ೧ ಬ್ರೌನಾಯಿಲ್ ಬೆಲೆ ೧-೦-೦, ಕ್ಯೂರ್ ನಂ. ೨೩ ಬ್ಲೂಯಿಂಟ್ ೦-೧೪-೦
ಕ್ಯೂರ್ ನಂ. ೧೮ ಹನಿ ಮಕ್ಕಳ ಎಲ್ಲಾ ವಿಧವಾದ ವಾಂತಿ ನಿಲ್ಲಿಸುವದು ೧-೦-೦
ಕ್ಯೂರ್ ನಂ. ೩೬ ವೆಜಿಟೆಬಲ್ ಟಾನಿಕ್ ಮಕ್ಕಳಿಗೆ ಶಕ್ತಿಯನ್ನುಂಟು ಮಾಡುತ್ತದೆ. ೩-೮-೦

ಸೂಚನೆ :— ಆರು ಬಣ್ಣ ಮತ್ತು ಆರು ಭಾಷೆಗಳ ಲೇಬಲ್ಲುಗಳಿರುವ "ಬ್ರೌನಾಯಿಲ್" ಬಾಟ್ಲಗಳನ್ನೇ ಕೊಂಡು ಉಪಯೋಗಿಸಿರಿ !

ಬ್ರೌನಾಯಿಲ್ ಕಂಪನಿ .... ದಾವಣಗೆರೆ (ಮೈಸೂರ ಸ್ಟೇಟ)

INDEX TO ADVERTISERS

Cover Pages

ಪರಿವಿಡಿ

ವಿದ್ಯಾಧರ

(ಜೀವನದ ಕನಸುಗಾರಿಕೆಯ ಒಂದು ಕಾಣ್ಕೆ)

ಕನಸಿನಲ್ಲಿ ಕಂಡರಿಸಿದ ವೇಣುವನದ ಹೃದಯದಿ
ವರ್ಣಶಿಲ್ಪ ಮೂಡುತಿರಲು ಬಾಲಸೂರ್ಯನುದಯದಿ
ಮುಗಿಲಿನೆದೆಯ ವರ್ಣಕೋಶ ಸೂರೆಯಾಗಿ ಸುರಿಯಲು
ವಿದ್ಯಾಧರ ಕುಣಿಯುತಿಹನು ಹಿಗ್ಗು ಮೊಗ್ಗೆ ಬಿರಿಯಲು ॥೧॥

ಸಂಜೆಯೊಂದು ಹವಳದ್ವೀಪ; ಆ ಅಶೋಕ ಛಾಯೆಗೆ
ಬೆಳುದಿಂಗಳು ಒಪ್ಪವಾಗಿ ನಗುತ ದಿವ್ಯ ಮಾಯೆಗೆ
ಪಾರಿಜಾತರಾಶಿಯಂತೆ ಸುರಿಯೆ ಚಲುವಿನಿಳೆಯಲಿ
ವಿದ್ಯಾಧರ ಕುಣಿಯುತಿಹನು ಸೌಂದರ್ಯದ ಸುಳಿಯ ಲಿ. ॥೨॥

ಗಳಿಗೆ ಗಳಿಗೆ ಪಾರಿವಾಳದಂತೆ ಹಾರಿ ನಡೆಯಲು
ಒಂದು ಎರಡು ಎಣಿಸಿ ಮುಗ್ಧ ಮನವು ನಲಿವ ಪಡೆಯಲು
ರಸನಿಮಿಷವೆ ಕಣ್ಣು ಮುಚ್ಚಿ ತೆರೆದು ಬಾಳನಳೆದಿರೆ
ವಿದ್ಯಾಧರ ಕುಣಿಯುತಿಹನು ಜಗನೆ ಕಾಂತಿ ತಳೆದಿರೆ. ॥೩॥

ಬಾಳಿದೊಂದು ಚಕ್ರನಾಟ್ಯ ಋತು ಯಾತ್ರೆಯ ವೈಭವ
ಚಂದ್ರನೆದೆಯ ಏರಿಳಿತವೆ ಪ್ರತಿಫಲಿಸಿತೊ ವಿಶ್ವವ!
ಹತ್ತುನೂರು ಸಾವಿರಾರು ಬಾಳು ಸುಳುವು ಪಡೆದಿರೆ
ವಿದ್ಯಾಧರ ಕುಣಿಯುತಿಹನು ಕಾಲಹೃದಯ ಮಿಡಿದಿರೆ ॥೪॥

ಬಾನಿನೊಂದು ಉಯ್ಯಾಲೆಗೆ ಇಂದ್ರಧನುವೆ ತೋರಣ
ನೆಲಕೆ ಹಸಿರು ರತ್ನಸುರಿಯೆ ಕನಸುಗಣ್ಣ ಶ್ರಾವಣ
ಆನಂದದ ಹಾಲುಗಡಲು ಉಕ್ಕೇರುತ ಹರಿದಿರೆ
ವಿದ್ಯಾಧರ ಕುಣಿಯುತಿಹನು ಬಾಲ್ಯ ನಲಿದು ಕರೆದಿರೆ ॥೫॥

ವಾಸ್ತವವೇ ಕಂಡ ಕನಸು ರಮ್ಯವಾಗಿ ಸುಳಿಯಲು
ಕಂಡ ನೋಟ ಎದೆಯೊಲುಮೆಗೆ ಕಾವ್ಯವಾಗಿ ತೆರೆಯಲು
ಸೂರ್ಯನ ಬಿಸಿಲುಂಡು ಚಂದ್ರ ಬೆಳುದಿಂಗಳ ಕರೆವೊಲು
ವಿದ್ಯಾಧರ ಕುಣಿಯುತಿಹನು ಕನಸಿನೊಂದು ತೆರೆಯೊಲು. ॥೬॥

—ಕೀರ್ತಿನಾಥ

ಆದರ್ಶ ಜೀವನ ನಡೆಸಲು ಸಹಕಾರಿಗಳಾದ ದೃಷ್ಟಾಂತಸೂಕ್ತಿಗಳು

ಸಂಗ್ರಾಹಕ:... **ಅಮ್ಮೆಂಬಳ ಅನಂತಯ್ಯ ನಾವಡ ಮಂಗಳೂರು**

ಮಹಾತ್ಮರನ್ನು ಸ್ತುತಿ ಮಾಡುವುದೂ, ಸೇವಿಸುವುದೂ ಉನ್ನತಿಗೆ ಕಾರಣವಾಗಿದೆ. ಶ್ರೀರಾಮನ ಭಜನೆಯನ್ನು ಮಾಡಿದ ಹನುಮಂತನು ಸರ್ವಕಾರ್ಯ ಸಮರ್ಥನಾದನು.

ಲೋಭಿಗಳೂ, ಕ್ರೂರರೂ ವಕ್ರಸ್ವಭಾವದವರೂ ಆದ ಜನರನ್ನು ಹತ್ತಿರ ಸೇರಿಸಿಕೊಳ್ಳಬಾರದು. ಪ್ರೀತಿಯಿಂದ ಸತ್ಕಾರ ಮಾಡಿದ ವಶಿಷ್ಠನ ಧೇನುವನ್ನು ವಿಶ್ವಾಮಿತ್ರನು ಅಪಹರಿಸಲು ಪ್ರಯತ್ನಿಸಿದನು.

ದುಃಖದ ಸಂದರ್ಭದಲ್ಲಿ ಕುಗ್ಗದೆ ಧೈರ್ಯ ತಾಳಬೇಕು. ಅಶ್ವತ್ಥಾಮನು ಹತನಾದನೆಂಬ ಮಾತನ್ನು ಕೇಳಿ ದುಃಖಪರಶನಾದ ದ್ರೋಣನು ಪ್ರಾಣವನ್ನು ಕಳೆದುಕೊಂಡನು.

ಬಂಧುಗಳನ್ನು ದೂಷಿಸುವುದೂ ತ್ಯಜಿಸುವುದೂ ಯೋಗ್ಯವಲ್ಲ. ಈಶ್ವರನನ್ನು ಅವಮಾನಿಸಿದ್ದರಿಂದ ದಕ್ಷನು ನಾಶಹೊಂದಿದನು.

ತೀಕ್ಷ್ಣ ಬಾಣ ಪ್ರಹಾರಗಳಿಂದಲೂ ಹೆಚ್ಚು ವೇದನೆಯನ್ನುಂಟುಮಾಡುವ ಪರುಷೋಕ್ತಿಗಳನ್ನು ಆಡಬಾರದು. ಕೌರವರ ಕರ್ಕಶವಚನಗಳಿಂದ ಕೋಪಿತನಾದ ಭೀಮಸೇನನು ಕುರುಕುಲವನ್ನು ಧ್ವಂಸಮಾಡಿದನು.


ಸ್ತ್ರೀಯರ ಅನುರಾಗ ಮೋಹಗಳಿಂದ ಜಿತನಾಗದವನು ನಾಶಹೊಂದುತ್ತಾನೆ. ಕೈಕೇಯಿಯಲ್ಲಿ ವಿಶೇಷ ಪ್ರೀತಿಯನ್ನಿಟ್ಟಿದ್ದ ದಶರಥನು ಪುತ್ರ ಶೋಕದಿಂದಾಗಿ ಸ್ವರ್ಗಸ್ಥನಾದನು.

ತಂದೆ ತಾಯಿಗಳನ್ನು ಭಕ್ತಿಯಿಂದ ಸೇವಿಸಿ ಸಂತೋಷ ಪಡಿಸಬೇಕು. ತನ್ನ ಯೌವನವನ್ನು ಕೊಟ್ಟು ತಂದೆಯಾದ ಯಯಾತಿಯ ಮುದಿತನವನ್ನು ಪಡಕೊಂಡ ಪುರುವು ಸಂತುಷ್ಟನಾದ ಅವನಿಂದ ಚಕ್ರವರ್ತಿಯಾಗಿ ಮಾಡಲ್ಪಟ್ಟನು. ತಂದೆ ತಾಯಿಗಳು ಕೋಪಗೊಳ್ಳುವಂತೆ ಮಾಡಬಾರದು. ಮಾತೃ ಶಾಪ ಹೊಂದಿದ ನಾಗಗಳು ಜನಮೇಜಯನ ಸರ್ಪಯಾಗದಲ್ಲಿ ನಾಶಹೊಂದಿದುವು.

ಸ್ವಕಾರ್ಯ ಸಿದ್ಧಿಯ ಉದ್ದೇಶದಿಂದ ಸತ್ಯವನ್ನು ಬಿಡಬಾರದು. ಒಮ್ಮೆ ಅಸತ್ಯವನ್ನಾಡಿದ್ದರಿಂದ ಯುಧಿಷ್ಠಿರನು ನರಕಕ್ಲೇಶವನ್ನು ನೋಡಬೇಕಾಯಿತು.

ಸಜ್ಜನರ ಸಂಗವನ್ನು ಮಾಡಬೇಕಲ್ಲದೆ ಗುಣಹೀನರಾದ ದುರ್ಜನರ ಸಹವಾಸವನ್ನು ಮಾಡಬಾರದು. ರಾಘವನ ಸಂಗವನ್ನು ಮಾಡಿದ ವಿಭೀಷಣನು ಲಂಕಾಧಿಪತ್ಯವನ್ನು ಪಡೆದನು.

(ಸಂಸ್ಕೃತದಿಂದ)



ಕರ್ಮವೀರ

ದೀಪಾವಳಿ ಸಂಚಿಕೆ ೧೯೫೬

ಸಂಸ್ಥಾಪಕರು : ರಂ. ರಾ. ದಿವಾಕರ

ಸಂಪಾದಕರು : ಹ. ರಾ. ಪುರೋಹಿತ

ನಮ್ಮ ನುಡಿ

ಇಂದು 'ಕರ್ಮವೀರ'ದ ಒಂಭತ್ತನೆಯ ದೀಪಾವಳಿ ಸಂಚಿಕೆಯನ್ನು ವಾಚಕರ ಕೈಗೆ ಸಮರ್ಪಿಸಲು ನಮಗೆ ಅತ್ಯಾನಂದವಾಗುತ್ತದೆ. ಕರ್ಮವೀರವು ಹೊರಡುವಾಗ ಇಟ್ಟುಕೊಂಡಿದ್ದ ಎರಡೂ ಧ್ಯೇಯಗಳು - ಸ್ವತಂತ್ರ ಭಾರತ ಮತ್ತು ಏಕೀಕೃತ ಕರ್ನಾಟಕ - ಇಂದು ಕೈಗೂಡಿದಂತಾಗಿವೆ. ಕಳೆದ ವರ್ಷ ದೀಪಾವಳಿ ಸಂಚಿಕೆಯನ್ನು ಹೊರಡಿಸುವಾಗ ನಾವುಕರ್ನಾಟಕ ರಾಜ್ಯ ಸ್ಥಾಪನೆಯಾಗುವದೊ ಇಲ್ಲವೊ ಎಂಬ ಬಗ್ಗೆ ಕೆಲಮಟ್ಟಿಗೆ ಸಾಶಂಕರಾಗಿದ್ದೆವು. ಮೈಸೂರಿನವರು ಆ ಬಗ್ಗೆ ತಾಳಿದ್ದ ಅನಾಸ್ಥೆಯೇ ಇದಕ್ಕೆ ಕಾರಣವಾಗಿದ್ದಿತು. ಆದರೆ ಇಂದು ಮೈಸೂರಿನವರೂ ಸ್ವತಂತ, ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಒಪ್ಪಿಕೊಂಡದ್ದರಿಂದ ನವಕರ್ನಾಟಕ ರಾಜ್ಯ ಸ್ಥಾಪನೆಯಾಗಿದೆ. ಈ ಶುಭ ಪ್ರಸಂಗದಲ್ಲಿ ನಮ್ಮ ಸಂಚಿಕೆಯನ್ನು ವಾಚಕರಿಗೆ ಅರ್ಪಿಸಲು ಸಂತೋಷವೆನಿಸುತ್ತದೆ.

ನವಕರ್ನಾಟಕದಲ್ಲಿ ಐದು ಬೇರೆ ಬೇರೆ ಘಟಕಗಳು ಸೇರಿಕೊಂಡಿದ್ದರಿಂದ ಕರ್ನಾಟಕದ ಭವ್ಯ ಭವಿಷ್ಯತ್ತಿಗೆ ಹಲವಾರು ಅಡಿ ಅಡಚಣೆಗಳು ಇರುವವು. ಇವೆಲ್ಲವುಗಳನ್ನು ಹೋಗಲಾಡಿಸಿ ಎಲ್ಲ ಭಾಗಗಳಲ್ಲಿ ಎಲ್ಲ ಬಗೆಯಿಂದ ಏಕರೂಪತೆಯನ್ನು ಸಾಧಿಸುವದಗತ್ಯವಾಗಿದೆ— ನವಕರ್ನಾಟಕವು ಶ್ರೀ. ಎಸ್. ನಿಜಲಿಂಗಪ್ಪನವರನ್ನು ಧುರೀಣರನ್ನಾಗಿ ಆರಿಸಿಕೊಂಡಿದ್ದು ಅವರು ಇಷ್ಟರಲ್ಲಿಯೇ ಮಂತ್ರಿಮಂಡಳವನ್ನು ಸ್ಥಾಪಿಸಿಕೊಂಡು ಆಡಳತೆಯನ್ನು ವಹಿಸಿಕೊಳ್ಳುವರು. ಕರ್ನಾಟಕದ ಮಾರಮಣರೆಂದು ಖ್ಯಾತಿ ಪಡೆದ ಒಡೆಯರ ವಂಶದ ಶ್ರೀ ಜಯಚಾಮರಾಜೇಂದ್ರ ಒಡೆಯರರು ನೂತನ ಕರ್ನಾಟಕದ ಮೊದಲನೆಯ ರಾಜ್ಯಪಾಲರೆಂದು ನೇಮಕ ಹೊಂದಿದ್ದಾರೆ. ರಾಜಮನೆತನದವರೂ ಆಡಳತೆಯ ಅನುಭವವುಳ್ಳವರೂ ಆಗಿರುವ ಅವರ ನೇತೃತ್ವದಲ್ಲಿ ನಿಜಲಿಂಗಪ್ಪ ಮಂತ್ರಿಮಂಡಳವು ಸಮರ್ಥ ರೀತಿಯಿಂದ ಆಡಳತೆಯನ್ನು ಸಾಗಿಸಿ ಕರ್ನಾಟಕದ ಸರ್ವತೋಪರಿ ಅಭಿವೃದ್ಧಿಯನ್ನು ಸಾಧಿಸುವದೆಂದು ನಂಬಲಾಗಿದೆ.

ಭಾರತ ಸಂವಿಧಾನವು ರಾಜ್ಯಪುನರ್ಘಟನೆಯ ವಿಧೇಯಕವನು ಸ್ವೀಕರಿಸಿದ್ದರಿಂದ ಇದೇ ನವಂಬರದಿಂದ ರಾಷ್ಟ್ರದಲ್ಲಿ ಒಟ್ಟಿಗೆ ೧೪ ಹೊಸ ರಾಜ್ಯಗಳು ಸ್ಥಾಪಿತವಾಗಿವೆ. ಆಯಾ ರಾಜ್ಯಗಳ ಮಂತ್ರಿಮಂಡಳಗಳೂ ಸ್ಥಾಪಿತವಾಗಿವೆ. ಹೊಸ ರಾಜ್ಯಗಳು ತಮ್ಮ ರಾಜ್ಯಗಳ ಅಭಿವೃದ್ಧಿಯನ್ನು ಸಾಧಿಸುವದಲ್ಲದೆ ಭಾರತದ ಸಾರ್ವಾಂಗಿಕ ಅಭಿವೃಧ್ಧಿ ಸಾಧನೆಯಲ್ಲಿಯೂ ಸಕ್ರಿಯ ಸಹಕಾರ ನೀಡುವವೆಂದು ನಂಬಿದ್ದೇವೆ.

ಕಾಶ್ಮೀರ ಮತ್ತು ಗೋವೆ ಪ್ರಶ್ನೆಗಳು ಇನ್ನೂ ಹಾಗೆಯೇ ಉಳಿದಿವೆ. ಆದರೆ ಕಾಶ್ಮೀರ ಘಟನಾ ಸಮಿತಿ ಉಪಸಮಿತಿಯು ಘಟನೆಯ ಕರಡನ್ನು ಸಿದ್ಧಪಡಿಸಿದ್ದು ಅದರಲ್ಲಿ ಕಾಶ್ಮೀರ ಭಾರತದಲ್ಲಿ ಸೇರ್ಪಡೆಯಾದುದಕ್ಕೆ ಮನ್ನಣೆ ಕೊಡಲಾಗಿದೆ. ಪೋರ್ತುಗೀಜ ಸರಕಾರದವರು ಗೋವೆಯ ಸಮಸ್ಯೆಯನ್ನು ಶಾಂತಮಾರ್ಗದಿಂದ ಬಗೆಹರಿಸುವ ಮನೋವೃತ್ತಿಯನ್ನು ಇನ್ನೂ ತಾಳಿರುವದಿಲ್ಲ. ಅಂತಾರಾಷ್ಟ್ರೀಯ ರಂಗದಲ್ಲಿ ಭಾರತವು ತನ್ನ ವಿಶಿಷ್ಟ ಪಾತ್ರವನ್ನು ವಹಿಸುತ್ತಲೆ ಇದೆ. ಇದೀಗ ಜಗತ್ತಿನ ಎಲ್ಲ ಪ್ರಮುಖ ರಾಷ್ಟ್ರಗಳ ಲಕ್ಷ್ಯವನ್ನು ವೇಧಿಸಿದ ಸುಯೇಜ ಸಮಸ್ಯೆಯ ಪರಿಹಾರದಲ್ಲಿ ಭಾರತವು ಮಹತ್ವದ ಪಾತ್ರವನ್ನು ವಹಿಸುತ್ತಿರುವದು ಸಂತೋಷದ ಸಂಗತಿಯಾಗಿದೆ.

ಈ ನಮ್ಮ ವಿಶೇಷ ಸಂಚಿಕೆಯ ಬಗ್ಗೆ ಹೆಚ್ಚಿಗೇನನ್ನೂ ಹೇಳಬಯಸುವದಿಲ್ಲ-ಎಂದಿನಂತೆ ಇದನ್ನು ಸರ್ವಾಂಗಸುಂದರ ಸಂಚಿಕೆಯನ್ನಾಗಿ ಮಾಡಲು ಪ್ರಯತ್ನಿಸಿದ್ದೇವೆ. ಮುಖಚಿತ್ರವನ್ನು ತಯಾರಿಸಿಕೊಟ್ಟ ಶ್ರೀ ಪೋತದಾರಕೃಷ್ಣರಾವ, ವ್ಯಂಗ್ಯಚಿತ್ರಾದಿಗಳನ್ನುತಯಾರಿಸಿಕೊಟ್ಟ ಸದಾಶಿವ ಬಾಂದವಡೇಕರ, ಮಾರ್ಶಲ್, ವಿನಯ ಜತಾರ, ಪರ್ವತೀಕರ ಇವರನ್ನೂ ಪಡಿಯಚ್ಚುಗಳನ್ನು ಮಾಡಿಕೊಟ್ಟ ಹುಬ್ಬಳ್ಳಿಯ ಆಯ್ಡಿಯಲ್ ಫೋಟೋ ಬ್ಲಿಂಕೋ ವರ್ಕ್ಸ, ರವಿಪ್ರೊಸೆಸ್ ವರ್ಕ್ಸ ಮತ್ತು ಧಾರವಾಡದ ಶ್ರೀನಿವಾಸಕಂಪನಿ ಇವರಿಗೆ ಕೃತಜ್ಞರಾಗಿದ್ದೇವೆ. ಲೇಖ, ಕವನ, ಭವಿಷ್ಯಾದಿಗಳನ್ನುಕೊಟ್ಟು ಸಹಕರಿಸಿದ ವಿದ್ವಾಂಸರಿಗೆ ಚಿರಋಣಿಯಾಗಿರುತ್ತೇವೆ. ಜಾಹೀರಾತುಗಳನ್ನಿತ್ತು ಸಹಾಯ ಮಾಡಿದ ವ್ಯಾಪಾರಸ್ಥರು ಮೊದಲಾದವರನ್ನೂ ಈ ಸಂಚಿಕೆ ಸುಂದರವಾಗಿ ಮಾಡಲು ಶಕ್ತಿಮೀರಿ ದುಡಿದ ನಮ್ಮ ಸಹಕಾರಿಗಳನ್ನೂ ಮಳೆ ಜೋಡಿಸುವ ಮುದ್ರಣ ಮತ್ತು ಬಾಯಿಂಡಿಂಗ ವಿಭಾಗಗಳ ಕೆಲಸಗಾರರನ್ನೂ ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ಪಂಚದೈವತಗಳು

ನಿಂತೆನಾರತಿಯೆತ್ತಿ ಗುಡಿಯೊಳರ್ಚಕನಾಗಿ.
ಎಲ್ಲಿಹನು ದೇವ ದೇವ ?
ಏನು ಸಮ್ಮುಖದಲ್ಲಿ ಶೋಭಿಸುವ ಸನ್ನಿಧಿಯ
ಗುರುತಿಸದೋ ನನ್ನ ಭಾವ ?
ದಾಸರಿಗೆ ಕಂಡಿರುವ ವಿಠ್ಠಲನು ಕಾಣದಿರೆ
ಚಲಿಸೆ ನಾ ಪಥನ ಬಿಟ್ಟು
ನನ್ನ ವಿಠ್ಠಲನಹುದು ವಿಷದುಣಿಸಿನೊಳು ವಾಸ
ಸತಿಕಂಡ ಮೂಗುಬೊಟ್ಟು
ವಿಶ್ವಪುರುಷನ ಭವ್ಯರೂಪವನು ಕಾಣದಲೆ
ವಿದ್ರೂಪವಿರಲು ಮನಸು—
ನನ್ನ ದೈವತವೆಂಬೆ ವಿಶ್ವದೊಲವನೆ ತೆರೆದ
ಅಕ್ಕರೆಯು ಚಿಕ್ಕೆಗನಸು
ಕಾಣಳಿಂದೆನೆಗೆ ಮಾಧವ ಮುನಿಗೆ ಹೊನ್ನುಮಳೆ-
ಗರೆದಿರುವ ಭುವನೇಶ್ವರಿ.
ದೀನದಲಿತರ ಬವಣೆಗಳನು ಮುಗಿಸುವ ಕರುಣೆ
ಯಹುದೆನ್ನ ಮಾಹೇಶ್ವರಿ.
ಧ್ರುವನ ದೃಢ ಸಂಕಲ್ಪವಿಂದೆಲ್ಲಿ ಫಲಿಸಿಹುದು ?
ಎಳೆಯರಂಥವರ ಕಾಣೆ
ಫಲವಿರಲಿ, ಇರದಿರಲಿ, ಸಾಹಸದ ಬಲವನ್ನೆ
ದೈವತವು, ದೇವರಾಣೆ !
ಕಾಣಲಿಲ್ಲವು ನನಗೆ ಪರಮಹಂಸರು ಕಂಡ
ವಿಖ್ಯಾತೆ, ಕಾಲಿಮಾತೆ,
ಅಹುದು ಭಾರತಮಾತೆ ನಾನರ್ಚಿಸುವ ದೇವಿ,
ಜನಶಂಕರಿಯು, ವಿನೂತೆ.
ಬಾಳುವೆನು ನಾನಿಂತು ದಿವ್ಯ ಪಂಚಾಯತನ
ದಡಿಯಲ್ಲಿ ಮನವ ತೀಡಿ;
ಪಂಚದೈವತಗಳಿಗೆ ಪಂಚಪ್ರಾಣಗಳನ್ನು
ಪಂಚನುದಿ ಹಾಡಿ ನೀಡಿ
ಓಂ ಎನ್ನು, ಓ ಗೆಳೆಯ ! ಅಹುದೆನ್ನು ! ಇಹುದೆನ್ನು !
ಬಹುದು ಬಂಗಾರವೆನ್ನು !
ತಥಾಸ್ತು, ಶರಣೆನ್ನು, ಶಾಂತಿ ಶ್ಯಾಂತಿಃ ನೋಂಪಿ
ಬಾಳ ಸಿಂಗಾರವೆನ್ನು

—ವಿನಾಯಕ

ದೀಪಸ್ತಂಭ

'ಉದಯವಾಯಿತು ನಮ್ಮ ಚೆಲುವ ಕನ್ನಡನಾಡು'
ಮಿದುವಾಗಿ ಹದಗೊಂಡು ಹರಿವುದೀ ಹಾಡು
ಗೂಡಿಂದ ಬಾನಿನಂಗಣಕೇರಿ ಕರೆಯುತಿದೆ
ಸಹ್ಯಾದ್ರಿ ಶಿಖರದಲಿ ನಿಂತು ನೋಡು:
ಮೂಡ ಪಡುವಲ ತೆಂಕು ಬಡಗು ಕೊಡಗಿನ ನಾಡು
ಎಲ್ಲ ಒಂದೇ ರಸದ ಯಶದ ಬೀಡು ;
ಬಾ ಬಂಧು, ಹತ್ತಿರದಿ ನಿಂದು, ಸಂತೋಷದಿಂದ ಹಾಡು.
ಶತಮಾನಗಳ ನಾಡ ಗತವೈಭವವ ನೆನೆದು
ಸಣ್ಣತನ, ಸ್ವಾರ್ಥ, ಸಂಕೋಚಗಳ ರಾಡಿಮಡುವ ನುಳಿದು
ನಿನ್ನ ಮನಸಿನ ಮೂಲೆಗಂಟಿರುವ ಸಂಶಯದ ಜೇಡಬಲೆ ಹರಿದು
ಶುಭದ ಹಾರೈಕೆಯಲಿ ನಿನ್ನೆದೆಯು ದಾಳಿಂಬವಾಗಿ ಬಿರಿದು
ನಾಡಿನಂತಃಕರಣದಲ್ಲಿ ಬೆರೆದು.

ಈಸುದಿನ ಹತ್ತಿರಿದ್ದರು ದೂರ
ಕಂಡರೂ ಕೆಂಡ ಮುಟ್ಟಿದ ತೆರದಿ ಒಂದು ತರಹ
ಗೋಡೆಗೋಡೆಗೆ ಹಾಯ್ದು ತಡಕಾಡುತಿದ್ದವರು ಈಗ ಬಂದಿದ್ದೇವೆ
ಹೊಂಬೆಳಕು ಹರಡಿರುವ ಹುಲ್ಲುಗಾವಲಕೆ, ಹೂಗಾಳಿಗೆ–
ಆಗಲಿ ಕೂಡಿದ್ದೇವೆ ಹೊಸ ಬಾಳಿಗೆ.
ಮೇಲೇರಿದಂತೆ ಕ್ಷಿತಿಜ ವಿಸ್ತಾರಗೊಳ್ಳುವುದ ಬಲ್ಲೆಯ,
ಅಷ್ಟು ದೂರದ ಮಾತು ಒಲ್ಲೆಯ, ಬಿಡು;
ಇಲ್ಲೆ ಕಣ್ಣೆದುರು ಅರಳಿದೆ ಸೃಷ್ಟಿ:
ನೀಲಿ, ಬಿಳಿ, ಹಳದಿ, ಕೆಂಪು, ಕಂಪು;
ಟುವ್ವಿಡುವ ಕುಕಿಲಿರಿವ ಗಾನದೊನಪು;
ವರ್ಣಮಂಡಲ ರಚಿಸಿ ಆಗಸವ ತೊಯ್ಸಿ
ಮಂಜು ಹನಿಯಾಗಿಳಿದ ಹಾಡಿನಿಂಪು.
ಈ ಹಾಡಿಗೆಂದೆ ಶ್ರುತಿಮಾಡಿಟ್ಟ ವೀಣೆ:
ಕೃಷ್ಣೆ, ಕಾವೇರಿ, ವರದೆ, ತುಂಗಭದ್ರೆ !
ಜೋಗದಲ್ಲಿಳಿದು ಕಾಮನಬಿಲ್ಲನೊಡಮುರಿದು ಬರೆ ಶರಾವತಿ
ಬೆಳಕಿನಮರಾವತಿ !
ಇಲ್ಲಿ ನುಡಿಯುವ, ನಡೆವ, ದುಡಿದು ಪಡೆಯುವ, ಕೊಡುವ
ಇದನುಟ್ಟು ಇದನುಂಡು ಕೊಂಡುಕೊನೆವ
ಈ ಜನದ ಬದುಕಿನ ಸೊಗಸು ಸಂಸ್ಕೃತಿಯರಳಿ ಪರಿಮಳಿಸಲೆಂದು
ಹೊಸತಿಲಲಿ ಹಚ್ಚಿಟ್ಟ ಹಣತೆ—
ಒಳಗು ಹೊರಗೂ ಕೂಡಿ ಬೆಳಗಲೆಂದು.
ಗಡಿಯಾಚೆ ಗಡಿಯೀಚೆ ಒಂದೆ ಕನ್ನಡ ಗುಡಿಯು
ಪೂಜೆಗೊಳ್ಳುವ ತಾಯಿ ಬನಶಂಕರಿ
ಕಡಲಕರೆ, ಮಲೆನಾಡು, ಬೆಳುವಲ್ಲೈಸಿರಿ ತೆನೆಯು
ಎಲ್ಲ ಹದ ರುಚಿ ಬೆರೆತ ಜೀವಲಹರಿ !
ಇಲ್ಲಿ ಕೂಡಲ ಬಾಳು ಗೊಮ್ಮಟನ ಔನ್ನತ್ಯ
ವೀರನಾರಾಯಣನೆ ನುಡಿದ ಕಾವ್ಯ
ಶಿಲೆಯ ಅಂತಃಪುರದಿ ಕಲೆಯ ಕಿಂಕಿಣಿ ನಾದ
ಸುಳಿವ ಶಾಸನವಾಗಿ ಮೆರೆದ ಜೀವ !
ಎದ್ದೇಳುತಿದೆ ನಾಡನಡೆಯು ದೀಪಸ್ತಂಭ
ಉದಯವಾಗಿದೆ ಒಳಗೆ ಚೈತ್ಯ ಬಿಂಬ
ಒಂದು ದೀಪಕೆ ಲಕ್ಷ ದೀಪ ಹೊತ್ತಿಸಿ ಹೊಗರಿ
ಬೆಳಗಲಿದೆ ಇನ್ನೇನು ಕಣ್ಣು ತುಂಬ !

—ಚೆನ್ನವೀರ ಕಣವಿ

ಕರ್ನಾಟಕ ಏಕೀಕರಣ–ಹಲವು ನೆನಹುಗಳು

ಕರ್ನಾಟಕ ಏಕೀಕರಣವಾಗಿ ಇಂದು ಹೊಸ ಮೈಸೂರ ರಾಜ್ಯವು ತಲೆಯೆತ್ತಿರುವದು. ಆದರೆ ಅದಕ್ಕಾಗಿ ಕಳೆದ ೪೦ ವರುಷಗಳಿಂದ ಶ್ರಮಿಸಲಾಗಿರುವದು. ಈ ಅವಧಿಯಲ್ಲಿ ಕೆಲ ವಿಶಿಷ್ಟ ಘಟನೆಗಳು ಜರುಗಿವೆ. ಅಂಥ ಕೆಲ ಪ್ರಸಂಗಗಳ ಬಗ್ಗೆ ತಮ್ಮ ಸ್ಮೃತಿಗಳನ್ನು ಶ್ರೀ ದಿವಾಕರರು ಇಲ್ಲಿ ಮನೋರಂಜಕವಾಗಿ ನಿರೂಪಿಸಿರುವರು.

★

ಲೇಖಕರು : ಶ್ರೀ ಆರ್. ಆರ್. ದಿವಾಕರ

ಇದೇ ನವಂಬರ ೧-೧೧-೫೬ ನೇ ದಿನ ಏಕೀಕೃತ ಕರ್ನಾಟಕ ಅಥವಾ ಏಕತಂತ್ರ ಕರ್ನಾಟಕ ಅಸ್ತಿತ್ವದಲ್ಲಿ ಬಂದಿತು. ಅದಕ್ಕೆ ಸುಮಾರು ನಾಲ್ವತ್ತು ವರ್ಷಗಳ ಇತಿಹಾಸವಿದೆ. ಆ ಅವಧಿಯಲ್ಲಿಯ ಹಲವೊಂದು ವೈಯಕ್ತಿಕ ಅನುಭವಗಳನ್ನು ಇಲ್ಲಿ ಕೊಡುತಿರುವೆ. ಅವು ವೈಯಕ್ತಿಕವಿದ್ದರೂ ಸಾರ್ವಜನಿಕ ದೃಷ್ಟಿಯಿಂದ ಹಾಗೂ ಏಕೀಕರಣದ ದೃಷ್ಟಿಯಿಂದ ಮನೋರಂಜಕವಾಗಬಹುದೆಂದು ಭಾವಿಸಿ ಬರೆದಿರುವೆ. ಕರ್ನಾಟಕದ ನನ್ನ ಸಹಾನುಭವಿ ವಾಚಕರು ಮನ್ನಿಸುವರೆಂದು ನಂಬಿದ್ದೇನೆ.

೧೯೦೫-೦೬ ಇದು ಸ್ವದೇಶೀ ಚಳವಳಿಯ ಕಾಲ. ಆಗ ನಾನು ಬೆಳಗಾಂವಿಯಲ್ಲಿರುತ್ತಿದ್ದೆ. ನಾವು ಆಗ ಶಾಲೆ ಕಲಿಯುತ್ತಿದ್ದೆವು. ಆದರೆ ಚಳವಳಿಯ ಬಗ್ಗೆ ಸಾಕಷ್ಟು ರುಚಿ ಇತ್ತು. ನನ್ನ ಮಾತೃಭಾಷೆ ಕನ್ನಡ, ಶಾಲೆಯಲ್ಲಿ ಓದುವ ಭಾಷೆ ಕನ್ನಡ. ಆದರೆ 'ಕೇಸರಿ', 'ಕಾಳ', 'ಭಾಲಾ' ಎಂಬ ಮರಾಠಿ ವೃತ್ತಪತ್ರಗಳನ್ನು ನಾವು ಹುರುಪಿನಿಂದ ಗುಂಪು ಕಟ್ಟಿಕೊಂಡು ಓದುತಿದ್ದೆವು. ಕನ್ನಡ—ಮರಾಠಿವಾದಕ್ಕೆ ಆಗ ಯಾವ ಸ್ವರೂಪವೂ ಬಂದಿರಲಿಲ್ಲ.

ಬೆಳಗಾಂವಿಯಲ್ಲಿ ಮರಾಠಿಯ ಪ್ರಾಬಲ್ಯವೆ ಇದ್ದುದರಿಂದ ಕನ್ನಡಕ್ಕೆ ಅಷ್ಟೊಂದು ಬಲ ಇರಲಿಲ್ಲ. ಕನ್ನಡ-ಮರಾಠಿವಾದವು ಹುಟ್ಟಿದುದು ಧಾರವಾಡದಲ್ಲಿ. ಆ ವಾದವನ್ನು ಕುರಿತು ಬರೆಯುವ ಸಮಯವು ಇದಲ್ಲ. ಆದರೆ ಉತ್ತರ ಕರ್ನಾಟಕದಲ್ಲಿ ಕನ್ನಡದ ಹಾಗೂ ಕರ್ನಾಟಕದ ಬಗ್ಗೆ ಜಾಗ್ರತಿ ಉಂಟಾದುದು ಆ ವಾದದಿಂದಲೆ ಎಂದು ಹೇಳಬಹುದು. ೧೯೧೬-೧೮ ರ ಸುಮಾರಕ್ಕೆ ಆ ವಾದಕ್ಕೆ ಕಳೆಕಟ್ಟಿತ್ತು. ಆಗ ಧಾರವಾಡದಲ್ಲಿ 'ರಾಜಹಂಸ' ಎಂಬ ದಿನಪತ್ರಿಕೆ ಹೊರಡುತ್ತಿತ್ತು. ಕನ್ನಡದ ಏಳ್ಗೆ, ಮರಾಠಿಯನ್ನು ಹೀಯಾಳಿಸುವದರಿಂದ, ಹೀನಾಯಿಸುವದರಿಂದ, ಅಥವಾ ದ್ವೇಷಿಸುವದರಿಂದ ಆಗಲರಿಯದು; ಕನ್ನಡವನ್ನು ಸುಧಾರಿಸಿ, ಕನ್ನಡದಲ್ಲಿ ಶ್ರೇಷ್ಠ ಗ್ರಂಥಾದಿಗಳನ್ನು ಬರೆದು ಆ ಏಳ್ಗೆಯನ್ನು ಸಾಧಿಸಲಿಕ್ಕೆ ಬೇಕು, ಎಂದು 'ರಾಜಹಂಸ' ದಲ್ಲಿ ನಾನು ಬರೆದುದು ನೆನಪಿಗೆ ಬರುವದು. ವೃತ್ತಪತ್ರದಲ್ಲಿ ನಾನು ಬರೆದುದು ಅದೇ ಮೊದಲನೆ ಸಾರೆ ಇರಲಿಕ್ಕೆ ಸಾಕು.

೧೯೧೫-೧೬ ರಲ್ಲಿ ಹಾಸನದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಲನವೆ ಕನ್ನಡ ಸಾಹಿತ್ಯ ಪರಿಷತ್ತಿನ ತಳಹದಿಯನ್ನು ಹಾಕಿತು. ಅದಕ್ಕೆ ೭-೮ ಜನ ಪ್ರತಿನಿಧಿಗಳು ಧಾರವಾಡದಿಂದ ಹೋಗಿದ್ದರು. ಅವರಲ್ಲಿ ನಾನೊಬ್ಬ. ನನ್ನ ಮಟ್ಟಿಗೆ ಸಾಹಿತ್ಯ ಸೇವೆಯ ಪ್ರಥಮಾಂಕುರವದು ಎಂದು ಹೇಳಲು ಅಡ್ಡಿಯಿಲ್ಲ. ೧೯೨೦ ರಲ್ಲಿ ಧಾರವಾಡದಲ್ಲಿ ನಡೆದ ಪ್ರಥಮ ಏಕೀಕರಣ ಸಮ್ಮೇಲನದ ಸ್ವಾಗತಾಧ್ಯಕ್ಷರ ಪದವನ್ನು ಸ್ವೀಕರಿಸಬೇಕೆಂದು ಕೇಳಿಕೊಳ್ಳಲು ಕಡಪಾ ರಾಘವೇಂದ್ರರಾಯರು ನನ್ನನ್ನು ಬ್ಯಾಹಟ್ಟಿ ಸುಬ್ರಾಯರ (ಹುಬ್ಬಳ್ಳಿ) ಬಳಿ ಕರೆದೊಯ್ದರು. ಅವರು ಸದಗ್ರಹಣ ಮಾಡಿದರಲ್ಲದೆ ೫೦೦ ರೂ. ಕೊಟ್ಟರು. ಕಡಪಾ ಹರುಷ ಭರಿತರಾದರು. ಅವರನ್ನು ಅಭಿನಂದಿಸಿ ನಾನೊಂದು ಲೇಖವನ್ನು 'ರಾಜಹಂಸ'ದಲ್ಲಿ ಬರೆದುದು ನೆನಪಿನಲ್ಲಿದೆ.

ಇವು ಚಿಲ್ಲರೆ ನೆನಪುಗಳು. ಆದರೆ ಆಗಿನ ತರುಣರ ಮನಸಿನ ಮೇಲೆ ಯಾವ ರೀತಿಯ ವಿಚಾರ-ಭಾವನೆಗಳು ಪರಿಣಾಮ ಮಾಡುತ್ತಿದ್ದವು ಎಂಬುದು ಇವುಗಳಿಂದ ವ್ಯಕ್ತವಾಗುವದು. ಈ ಕೆಳಗಿನ ನೆನಪುಗಳು ಹೆಚ್ಚು ಮಹತ್ವದವು.

೧೯೨೫-೨೬ ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಕಮೀಟಿ ಕಚೇರಿ ಗದುಗಿನಿಂದ ಧಾರವಾಡಕ್ಕೆ ಸ್ಥಳಾಂತರಿಸಲಾಯಿತು. ಆಗಿನಿಂದ ಮುಂದೆ ಆ ಕಮೀಟಿಯು ಸತತವೂ ಏಕೀಕರಣದ ಪ್ರಶ್ನೆಯನ್ನು ಬಿಡಿಸಲು ಪ್ರಯತ್ನ ಮಾಡುತ್ತ ಬಂದಿದೆ. ಆಗ ನಾನು ಆ ಕಮೀಟಿಯ ಕಾರ್ಯದರ್ಶಿಗಳಲ್ಲೊಬ್ಬನಾಗಿದ್ದೆನು. ಶ್ರೀ ಹುಕ್ಕೇರಿಕರರು ಇನ್ನೊಬ್ಬರಾಗಿದ್ದರು. ನೆಹರೂ ಕಮೀಟಿ ನೇಮಕವಾದ ಬಳಿಕ (೧೯೨೭-೨೮) ಪಂಡಿತ ಜವಾಹರಲಾಲರು (ಆಗ ಅವರು ಕಾಂಗ್ರೆಸ್ಸಿನ ಹಾಗೂ ನೆಹರೂ ಕಮೀಟಿಯ ಕಾರ್ಯದರ್ಶಿಗಳಾಗಿದ್ದರು) ಧಾರವಾಡಕ್ಕೆ ಬಂದಿದ್ದರು. ಆಗ ಕರ್ನಾಟಕ ಏಕೀಕರಣದ ಪ್ರಸ್ತಾಪವನ್ನೆತ್ತಲಾಗಿ, ನೀವು ನೆಹರೂ ಕಮೀಟಿ ಮುಂದೆ ನಿಮ್ಮ ಪಕ್ಷವನ್ನು ಮಂಡಿಸಬೇಕೆಂದು ಪ್ರೋತ್ಸಾಹವಿತ್ತರು. ನಾನು ನೆಹರೂ ಕಮೀಟಿ ಎದುರು ಅಲಾಹಾಬಾದಕ್ಕೆ ಪ್ರತಿನಿಧಿಯಾಗಿ ಹೋಗುವುದಕ್ಕೆ ಅದೇ ಪ್ರಥಮವಾಯಿತು.

ನೆಹರೂ ಕಮೀಟಿಯ ನನ್ನ ಅನುಭವ ಸ್ವಲ್ಪ ಹೇಳುವಂತಿದೆ. ನಾನು ಅಲಹಾಬಾದಕ್ಕೆ ಹೋದಾಗ ವಿಪರೀತ ಬಿಸಿಲು, ಮೈ ಮೇಲೆಲ್ಲ ಗುಳ್ಳಿ ಬಂದು ಬಿಟ್ಟವು. ಕಮೀಟಿ ಆನಂದಭವನದಲ್ಲಿ ಸೇರಿತ್ತು. ಜವಾಹರಲಾಲರು ಹಸನ್ಮುಖದಿಂದ ನನ್ನನ್ನು ಬರಮಾಡಿಕೊಂಡು ಕಮೀಟಿಗೆ ನನ್ನ ಪರಿಚಯ ಮಾಡಿಕೊಟ್ಟರು. ಆದರೆ ಮರುಕ್ಷಣ ತಮ್ಮ ಬೇರೆ ಕೆಲಸಕ್ಕಾಗಿ ಹೊರಟು ಹೋದರು. ಆಗ ಕಮೀಟಿಯ ಅಧಿವೇಶನದಲ್ಲಿ ತಂದೆಮಕ್ಕಳಿಬ್ಬರೂ ಗೈರಹಾಜರ ! ಕರ್ನಾಟಕದ ವಿಷಯವು ಆಗ ಅಷ್ಟೊಂದು ಮಹತ್ವದ್ದಿರಲಿಲ್ಲ. ನನಗೆ ನೆನಪಿದ್ದ ಮಟ್ಟಿಗೆ ಸುಭಾಸ ಬೋಸ, ಜಯಕರ, ಸಮರ್ಥ ಇನ್ನೊ ಒಬ್ಬಿಬ್ಬರು ಹಾಜರು ಇದ್ದರು. ಅವರಲ್ಲಿ ಒಬ್ಬರೂ ಅನುಕೂಲರಿದ್ದಿಲ್ಲ. ಸುಂದರವಾದ ಮುಂಬೈ ಪ್ರಾಂತವನ್ನು ಒಡೆಯುವದೇಕೆ, ಎಂಬುದರಿಂದ ಪ್ರಾರಂಭ ! ಕಾಂಗ್ರೆಸ್ಸಿನ ಪರಿಚಯ ಸುಭಾಸರಿಗೆ ಮಾತ್ರ. ಅವರು ಸುಮ್ಮನೆ ನೋಡುತ್ತ ಕುಳಿತುಬಿಟ್ಟರು. ಯಾವ ಬೇರೆ ವಿಚಾರದಲ್ಲಿ ಮಗ್ನರಾಗಿದ್ದರೋ ಏನೋ ! ಇತರರಿಗೆ ಕಾಂಗ್ರೆಸ್ಸಿನ ಬಗ್ಗೆ ವಿರೋಧಭಕ್ತಿ! ಕಾಂಗ್ರೆಸ್ಸು ಮಾಡುತಿರುವುದೆಲ್ಲ ಮೂರ್ಖತನದ್ದು ಇಲ್ಲವೆ ಹುಚ್ಚುತನದ್ದು ಎಂದು ಅವರ ಭಾವನೆ. ಮೆಲ್ಲಮೆಲ್ಲನೆ ನಾನು ಒಂದೊಂದೇ ಮಾತನ್ನು ಹೇಳುತ್ತ, ನಕ್ಷೆಗಳನ್ನು ತೋರುತ್ತ, ನಮ್ಮ ಅಡಿ ಅಡಚಣೆಗಳನ್ನು ವಿವರಿಸುತ್ತ ಹೋದಂತೆ ಅವರು ಸ್ವಲ್ಪ ಸಮಾಧಾನದಿಂದ ಕೇಳುವ ಪರಿಸ್ಥಿತಿಯುಂಟಾಯಿತು. ಸಂನ್ಯಾಸಿಯ ಲಗ್ನಕ್ಕೆ ಜುಟ್ಟಿದಿಂದ ಪ್ರಾರಂಭ ಎನ್ನುವಂತೆ ಕನ್ನಡ ಎಂಬುದೊಂದು ಭಾಷೆಯಿದೆ, ಅದನ್ನು ಮಾತಾಡುವವರ ಸಂಖ್ಯೆ ಇಂತಿಷ್ಟಿದೆ, ಎಂದು ಹೇಳುವದರಿಂದ ಪ್ರಾರಂಭ. ಹೀಗೆ ಒಂದು ಒಂದೂವರೆ ಘಂಟೆಕಾಲ ನನ್ನ 'ಕ್ರಾಸ್ ಎಕ್ಝಾಮಿನೇಶನ್' ನಡೆಯುವಷ್ಟರಲ್ಲಿ ತಟ್ಟನೆ ಮೋತೀಲಾಲರು ಬಂದು ಬಿಟ್ಟರು. ಅವರು ಅತ್ತಿತ್ತ ಒಂದು ಕ್ಷಣ ನೋಡಿದವರೆ, ನಿಮ್ಮ ನಿವೇದನೆ ನೋಡಿದ್ದೇನೆ, ಚೆನ್ನಾಗಿದೆ, ಮತ್ತೇನಾದರೂ ಹೇಳುವದಿದೆಯೆ, ಎಂದು ನನ್ನನ್ನು ಪ್ರಶ್ನಿಸಿದರು. ಇಂಥಿಂಥ ಸಂಶಯಗಳನ್ನು ನಿಮ್ಮ ಸಹಬಂಧುಗಳು ಎತ್ತಿದ್ದರು, ಅವುಗಳಿಗೆ ನಾನು ಈ ರೀತಿ ಉತ್ತರ ಕೊಡುತ್ತಾ ಇದ್ದೆ, ಎಂದೆನು. ಎಲ್ಲವನ್ನೂ ಕೇಳಿಕೊಳ್ಳುವಷ್ಟು ತಾಳ್ಮೆ ಅವರಲ್ಲಿ ಆಗ ಇರಲಿಲ್ಲ. ಆದರೆ ಅವರ ವ್ಯಕ್ತಿಮತ್ವದ ಪ್ರಭಾವ ಎಷ್ಟು ಎಂಬುದು ನನಗೆ ಕೂಡಲೆ ಗೊತ್ತಾಯಿತು. ಉಳಿದ ಸಭಾಸದರು ಯಾವ ಮಾತನ್ನೂ ಎತ್ತದೆ ಸುಮ್ಮನೆ ಕುಳಿತುಬಿಟ್ಟರು. ಆಯಿತು ನಿಮ್ಮ ಕೆಲಸ, ಇನ್ನು ಹೋಗಬಹುದು, ಎಂದು ನನಗೆ ಅಪ್ಪಣೆಯನ್ನಿತ್ತರು. ಸರಿ. ನಕ್ಷೆಗಳ ಸುರುಳಿಗಳನ್ನು ಸುತ್ತಿ ಬಗಲಿನಲ್ಲಿಟ್ಟುಕೊಂಡು ನಾನು ಹೊರಟುಬಿಟ್ಟೆ !

ಮುಂದೆ ೧೯೨೮ ರಲ್ಲಿ ಸರ್ವಪಕ್ಷೀಯ ಪರಿಷತ್ತು ನಡೆದಾಗ ತುಳುನಾಡಿನ ಪ್ರತಿನಿಧಿಗಳೆಂದು ಶ್ರೀ ವಾಸುದೇವಾಚಾರ್ಯ ಹಾಗೂ ಶ್ರೀ ಜಿನರಾಜ ಹೆಗಡೆ (ಮುಂದೆ ಏಕೀಕರಣದ ಮಹಾಪಕ್ಷಪಾತಿಗಳಾದವರು) ಇವರು ಬನಾರಸ ವಿಶ್ವವಿದ್ಯಾಲಯದಿಂದ ಪ್ರತ್ಯೇಕ ತುಳುನಾಡಿನ ಬೇಡಿಕೆ ಮುಂದಿಡಲು ಬಂದಿದ್ದರು. ಅವರು ನನ್ನನ್ನು ಕಾಣಲಾಗಿ ಅದು ಸಲ್ಲದು ಎಂದು ಅವರಿಗೆ ತಿಳಿಹೇಳಲು ಪ್ರಯತ್ನಿಸಿದೆ. ಕೊನೆಗೆ ತಮ್ಮ ಮನೆಯಲ್ಲಿ ಅವರು ಸ್ವಲ್ಪ ಫರಾಳ ಮಾಡಿದರು. ಆದರೂ ಮೋತಿಲಾಲರನ್ನು ಕಂಡು ನಾನು ಅವರಿಗೆ ತುಳುನಾಡಿನ ಬೇಡಿಕೆಯ ವಿಷಯವನ್ನು ತಿಳಿಸಿದೆ. ಆಗ ಅವರು 'ಇಂಥ ವಿಷಯಗಳನ್ನು ಬಗೆಹರಿಸುವ ರೀತಿಯನ್ನು ನಾವು ಬಲ್ಲೆವು' ಎಂದು ಹೇಳಿಬಿಟ್ಟರು.

ವಿರೋಧ, ಅಜ್ಞಾನ, ಇವೇ ನಮ್ಮ ಶಕ್ತಿಗಳನು ಬೆಳೆಸಲು ಕಾರಣವಾಗುವವು ಎಂಬುದಕ್ಕೆ ನಿದರ್ಶನ ರೂಪವಾಗಿ ಒಂದು ಘಟನೆ ನಡೆದುದನ್ನು ಇಲ್ಲಿ ಹೇಳಬಹುದು. ೧೯೨೭ - ೨೮ ರಲ್ಲಿ ಏಕೀಕರಣದ ದೃಷ್ಟಿಯಿಂದ ನಾನು ನೀಲಗಿರಿಗೆ ಹೋದಾಗ ಅಲ್ಲಿ ಮದ್ರಾಸದ ಮಂತ್ರಿಗಳಾಗಿದ್ದ ಶ್ರೀ. ರಂಗನಾಥ ಮುದಲಿಯಾರರನ್ನು ಕಂಡೆ. ಅವರು ಬಳ್ಳಾರಿಯವರು, ಕನ್ನಡ ಚನ್ನಾಗಿ ಬಲ್ಲವರು. ಅವರೆದುರು ಏಕೀಕರಣದ ಪ್ರಸ್ತಾಪವನ್ನೆತ್ತಲು ಹಿರಿಯರು ಚಿಕ್ಕ ಮಕ್ಕಳನ್ನು ಹಳಿಯುವಂತೆ, ಪ್ರಾಂತ ರಚನೆಯೆಂದರೇನು ಚೇಷ್ಟೆಯೆ, ಅದಕ್ಕೇನು ಹಿಂದೆ-ಮುಂದೆ ಬೇಡವೊ, ನೋಡಿರಿ ಮದ್ರಾಸ, ಮುಂಬಯಿ ಎತ್ತ ? ನೀವು ಹೇಳುವ ಕರ್ನಾಟಕವೆತ್ತ ? ಏನಿದೆ ನಿಮ್ಮಲ್ಲಿ, ಅಂಕಿ-ಸಂಖೆಗಳನ್ನೇನಾದರೂ ಸಂಗ್ರಹಿಸಿರುವಿರೋ, ಎಂದು ಮುಂತಾಗಿ ಪ್ರಶ್ನೆಗಳ ಸುರಿ-ಮಳೆ ಮಾಡಿಬಿಟ್ಟರು. ಆಗ ಚಿಕ್ಕವನಲ್ಲಿ ಚಿಕ್ಕವನಾಗಿ, ಅದೇನೇನು ಬೇಕು ಎಂಬುದನ್ನು ಕೇಳುವದಕ್ಕಾಗಿಯೆ ನಿಮ್ಮೆಡೆಗೆ ಬಂದಿದ್ದೇನೆ, ಎಂದು ಹೇಳಿಕೊಂಡೆನು. ಆಗ ಸಮಾಧಾನದಿಂದ ಅವರು ನಾಲ್ಕು ಮಾತುಗಳನ್ನು ಹೇಳಿದರು. ಅವುಗಳ ಟಿಪ್ಪಣಿ ಮಾಡಿಕೊಂಡೆನು. ಇದೊಂದು ಅಜ್ಞಾನವಿದೆ ಎಂದು ಮನಸ್ಸಿನಲ್ಲಿ ಗಂಟಿಕ್ಕಿಕೊಂಡೆನು. ಮುಂದೆ ಒಂದು ವರುಷದಲ್ಲಿ 'ಯುನಾಯಟೆಡ್ ಕರ್ನಾಟಕ' ಎಂಬ ಸಚಿತ್ರ ಸನಕ್ಷೆ ಪುಸ್ತಕ ಬರೆದು ರಂಗನಾಥ ಮುದಲಿಯಾರರಿಗೆ ಕಾಣಿಕೆಯಾಗಿ ಸಲ್ಲಿಸಿದೆನು. ಆ ಪತ್ರದಲ್ಲಿಯೆ ಅವರು ಏಕೀಕರಣ ಪರಿಷತ್ತಿಗೆ ಅಧ್ಯಕ್ಷರಾಗಬೇಕೆಂದು ಕೇಳಿಕೊಂಡಿದ್ದೆನು. ಅವರು ಒಪ್ಪಿದರು!

೧೯೨೮ ರಲ್ಲಿ ಭಾರತಕ್ಕೆ ಬಂದ ಸಾಯಮನ್ ಕಮೀಶನ್ನಿಗೆ ಕಾಂಗ್ರೆಸ್ಸು ಬಹಿಷ್ಕಾರ ಹಾಕಿತ್ತು. ಆದುದರಿಂದ ಅದರ ಮುಂದೆ ಸಾಕ್ಷಿ ಕೊಡಲು ಯಾರೂ ಹೋಗಕೂಡದು ಎಂಬ ನೀತಿ ಜಾರಿಯಲ್ಲಿತ್ತು. ಆದರೆ ಆಗ ಧಾರವಾಡದ ಕಲೆಕ್ಟರರಾಗಿದ್ದ ನಾಯಕ ಎಂಬುವವರು ವಿದ್ಯಾವರ್ಧಕ ಸಂಘದ ಪರವಾಗಿ ಸಾಯಮನ್ ಕಮೀಶನ್ನಿನ ಮುಂದೆ ಕರ್ನಾಟಕ ಏಕೀಕರಣದ ಪಕ್ಷವನ್ನು ಮುಂದಿಡಬೇಕೆಂದು ಯೋಜನೆ ಹಾಕಿದ್ದರು. ಏಕೀಕರಣ ಎಲ್ಲರಿಗೂ ಬೇಕಾದುದು, ಆದರೆ ಬಹಿಷ್ಕಾರ ಅಂದ ಬಳಿಕ ಅದು ಸಾಯಮನ್ ಕಮೀಶನ್ನಿನ ಪೂರ್ಣ ಬಹಿಷ್ಕಾರವಾಗಬೇಕು ಎಂಬುದು ಕರ್ನಾಟಕದ ಭಾವನೆಯಾಗಿತ್ತು. ಆದುದರಿಂದ ನಾವು ಹಲವರು ಕೂಡಲೆ ವಿದ್ಯಾವರ್ಧಕ ಸಂಘದ ಸಭಾಸದರಾಗಿ ಬಹುಮತ ಮಾಡಿಕೊಂಡು ಕಲೆಕ್ಟರರ ಪ್ರಯತ್ನವನ್ನು ಖಂಡಿಸಿದೆವು. ಕರ್ನಾಟಕ ಏಕೀಕರಣ ಸಂಘದ ಹಲವು ಸಭಾಸದರು ಮಾಡಿದ ಪ್ರಯತ್ನವನ್ನು ಕೂಡ ಇದೇ ರೀತಿ ನಿಷ್ಫಲಗೊಳಿಸಲಾಯಿತು! ಈ ಎರಡೂ ಯತ್ನಗಳಲ್ಲಿ ದಿವಂಗತ ಕೌಜಲಗಿ ಹಣಮಂತರಾಯರು ಬಹಳ ಆಸ್ಥೆಯಿಂದ ಕೆಲಸ ಮಾಡಿದರು.

೧೯೩೧ ರಲ್ಲಿ ಬೆನಗಲ್ ಶಿವರಾಯರು ಹಾಗೂ ಸರ ಮಿರ್ಝಾ ಇವರು ದುಂಡುಮೇಜಿನ ಪರಿಷತ್ತಿಗೆ ವೈಯಕ್ತಿಕ ರೀತಿಯಲ್ಲಿ ಆಮಂತ್ರಿತರಾಗಿ ಹೋಗಿದ್ದರು. ಅವರು ಏಕೀಕರಣವನ್ನು ಕುರಿತು ಅಂಕಿಸಂಖ್ಯೆ ಮುಂತಾದವುಗಳನ್ನು ಕೇಳಿದ್ದರಿಂದ ಅವು ಅವರಿಗೆ ಸಲ್ಲಿಸಲಾದವು. ಆಗ ಪುಣೆಯಲ್ಲಿ ಶ್ರೀ ಸಾವೂರ ಎಂಬವರ ಮನೆಯಲ್ಲಿ ಶ್ರೀ ಶಿವರಾಯರನ್ನು ಅವರು ಹೋಗುವ ಪೂರ್ವದಲ್ಲಿ ಕಂಡು ಮಾತಾಡಿದ್ದು ನನ್ನ ನೆನಪಿನಲ್ಲಿದೆ.

ಮುಂದೆ ೧೯೩೧ ರಲ್ಲಿ ಗಾಂಧೀಜಿಯವರೇ ಸ್ವತಃ ದುಂಡುಮೇಜಿಗೆ ಹೋಗುವದು ಗೊತ್ತಾಯಿತು. ಆಗ ಅವರಿಗೆ ಕರ್ನಾಟಕ ಏಕೀಕರಣದ ನೆನಪು ಕೊಡುವದಕ್ಕಾಗಿ ಡಾ. ಹರ್ಡೀಕರರನ್ನು ಕಳಿಸಬೇಕೆಂದು ನಿಶ್ಚಯಿಸಿದೆವು. ಅವರಿಗೆ ಗಾಂಧೀಜಿಯವರು ಕೊಟ್ಟ ಉತ್ತರವು ಬಹಳ ಮಾರ್ಮಿಕವಿರುವದು.

'ನಿಮ್ಮ ಶ್ರದ್ಧೆ ಬಹಳ ದುರ್ಬಲವಾದುದು. ಸ್ವರಾಜ್ಯ ದೊರೆತ ಪಕ್ಷದಲ್ಲಿ ಏಕೀಕರಣ ಕಟ್ಟಿದಗಂಟು,' (ಯೀ ಆಫ್ ಲಿಟಲ್ ಫೇಥ್, ಇಫ್ ಸ್ವರಾಜ್ಯ ಕಮ್ಸ್ ಯುನಿಫಿಕೇಶನ್ ಫಾಲೋಜ್) ಎಂದು ಹೇಳಿದುದು ನನ್ನ ನೆನಪಿಗೆ ಬರುವದು!

ಭಾಷಾನುಗುಣ ತತ್ವವನ್ನು ಬಿಡದಿದ್ದರೂ ತಂಟೆ ತಕರಾರುಗಳಿಲ್ಲದೆ ಆ ವಿಷಯ ಬಗೆಹರಿಯುವ ಲಕ್ಷಣವಿಲ್ಲವೆಂದು ಈಚೆಗೆ ಗಾಂಧೀಜಿಯವರಿಗೆ ತೋಚುತ್ತಿತ್ತು. ಆದುದರಿಂದ 'ಗಡಿಗಳ ಪ್ರಶ್ನೆಯನ್ನು ನಿಮ್ಮ ನಿಮ್ಮೊಳಗೆ ನಿರ್ಣಯಿಸಿಕೊಂಡು ಒಪ್ಪಿತವಾದ ಒಂದು ನಕ್ಷೆಯನ್ನು ನಮ್ಮ ಮುಂದೆ ಇಟ್ಟರೆ, ಭಾಷಾನುಗುಣ ಪ್ರಾಂತಗಳನ್ನು ನಿಮ್ಮ ಉಡಿಯಲ್ಲಿ ಚಲ್ಲಬಲ್ಲೆವು,' ಎಂದು ಅವರು ನಮಗೆಲ್ಲರಿಗೂ ೧೯೪೬ ರಲ್ಲಿಯೆ ಹೇಳಿದರು. ಆಗ ನಾನೊಂದು ಅವರಿಗೆ ಪತ್ರವನ್ನು ಬರೆದನು. ಅದರ ಆಶಯವು ಹೀಗಿತ್ತು: ನಾವು ನಮ್ಮ-ನಮ್ಮೊಳಗೆ ಬಗೆಹರಿಸಲು ಯತ್ನಿಸುವೆವು. ಒಂದೊಪ್ಪತ್ತು ಬಗೆಹರಿಯದಿದ್ದರೆ ಪಂಚಾಯತಿಯ ಮುಖಾಂತರ ಆ ಮಾತನ್ನು ಬಗೆಹರಿಸಿಕೊಳ್ಳಲು ನಾವು ಸಿದ್ಧರು. ಅದಕ್ಕೆ ಉತ್ತರ ರೂಪವಾಗಿ ಅವರು ಹೇಳಿದ್ದು: ಅದಾಗುವ ಲಕ್ಷಣವನ್ನು ನಾನು ಸದ್ಯದ ಪರಿಸ್ಥಿತಿಯಲ್ಲಿ ಕಾಣುವದಿಲ್ಲ. ಆ ವಿಷಯವನ್ನು ನಿಮ್ಮ ನಿಮ್ಮೊಳಗೆಯೇ ಬಗೆಹರಿಸಿಕೊಳ್ಳತಕ್ಕದ್ದು. ಇಲ್ಲದಿದ್ದರೆ ಅದು ಯಾದವೀ ಕಲಹಕ್ಕೆ ಕಾರಣವಾಗುವದು. ಅವರು ನುಡಿದುದು ಭವಿಷ್ಯೋಕ್ತಿಯಾಗಿಯೆ ಪರಿಣಮಿಸಿತು. ನಮ್ಮ ದುರ್ದೈವವೆನ್ನಬೇಕು. ರಾಷ್ಟ್ರಾಂತರದಲ್ಲಿ ಭಾಷಾನುಗುಣ ಪ್ರಾಂತಗಳನ್ನು ರಚಿಸಿಕೊಳ್ಳಲು ಇಷ್ಟೊಂದು ಕಹಿತನ, ಹಿಂಸಾಚಾರ, ದ್ವೇಷ ಇವು ಉಂಟಾಗಬಹುದೆಂದು ಯಾರೂ ಎಣಿಸಿರಲಿಲ್ಲ.

೧೯೪೬ ರಷ್ಟೊತ್ತಿಗೆ ಮಹಾರಾಷ್ಟ್ರವು ಕೂಡ ಸಂಯುಕ್ತ ಮಹಾರಾಷ್ಟ್ರದ ಬಗ್ಗೆ ಆತುರನಾಗುತ್ತ ನಡೆದಿತ್ತು. ದೇವ ಶಂಕರರಾಯರು ಆ ವಿಷಯದ ಧುರೀಣತ್ವವನ್ನು ವಹಿಸಿದ್ದರು. ಕಾಂಗ್ರೆಸ್ಸು ೧೯೩೧ ರಲ್ಲಿ ಸಿದ್ಧಪಡಿಸಿದ ಗಡಿಗಳನ್ನೆ ಇಟ್ಟು-ಕೊಂಡು ನಾವು ಪ್ರಾಂತಗಳನ್ನು ಮಾಡಿಕೊಂಡು ಬಿಡಬೇಕು, ಗಡಿಗಳಲ್ಲಿಯ ಹೆಚ್ಚು ಕಡಿಮೆಗಳನ್ನು ಆಮೇಲೆ ಆಯಾ ಪ್ರಾಂತಿಕ ಸರಕಾರದವರು ಸಮಂಜಸವಾಗಿ ಪರಿಪಡಿಸಿಕೊಳ್ಳಬೇಕು, ಎಂಬುದು ನನ್ನ ಅಭಿಪ್ರಾಯವಿತ್ತು. ಆದರೆ ಅವನ್ನೆಲ್ಲ ಈಗೆಯೆ ಸುಲಭವಾಗಿ ಮಾಡಿಕೊಳ್ಳಬಹುದು ಎಂದು ದೇವ ಮುಂತಾದವರು ಅಭಿಪ್ರಾಯಪಟ್ಟರು. ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಒಂದೊಂದು ಚಿಕ್ಕ ಕಮಿಟಿಯನ್ನು ನೇಮಿಸಿದರು. ಅವುಗಳ ಸಂಯುಕ್ತ ಸಭೆ ಮುಂಬೈ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಕೂಡಿತು. ನಾನು ಪುನಃ ನನ್ನ ಅಭಿಪ್ರಾಯವನ್ನೆ ವ್ಯಕ್ತಗೊಳಿಸಿದೆನು. ಆದರೆ ಚರ್ಚೆ ಹಾಗೆಯೇ ಸಾಗಿತು. ಕೊನೆಗೆ ಯಾವ ತತ್ವವನ್ನೊಳಗೊಂಡು ಗೆರೆ ಎಳೆಯಬೇಕು, ಜಿಲ್ಲೆಯೆಂದೋ, ತಾಲೂಕೆಂದೊ, ಹಳ್ಳಿಯೆಂದೋ, ಆಯಾ ಭಾಷೆಯಾಡುವವರ ಸಂಖ್ಯೆ ಶೇಕಡಾ ೫೧ ಇರಬೇಕೋ ೬೦ ಇರಬೇಕೊ ೭೦ ಇರಬೇಕೊ ಯಾವುದೂ ಗೊತ್ತಾಗದೆ ಹೋಯಿತು ! ಯಾವ ಕೆಲಸವೂ ಮುಂದರಿಯದೆ ರಾತ್ರಿ ೧೧ ರ ವರೆಗೆ ಕುಳಿತು ಕಮಿಟಿಯನ್ನು ಮುಂದರಿಸಲಾಯಿತು.

ಕೊನೆ ಕೊನೆಗೆ ಬಳ್ಳಾರಿಯದೊಂದು ಮಹಾಭಾರತವೆ ಆಯಿತು ! ಭಾಷಾನುಗುಣ ಪ್ರಾಂತ ರಚನೆಯ ಸಂದರ್ಭದಲ್ಲಿ ಬಳ್ಳಾರಿ ಬಗ್ಗೆ ನಡೆದಷ್ಟು ಚರ್ಚೆ, ಆದಷ್ಟು ಪರಿವರ್ತನೆಗಳು, ವಿಚಾರಣೆಗಳು ಇನ್ನಾವ ಭಾಗದ ಸಂಬಂಧದಿಂದಲೂ ಆಗಿಲ್ಲ! ಕೇಳಕರ ಅವಾರ್ಡು, ವಾಂಚೂ ವಿಚಾರಣ, ಮಿಶ್ರರ ವಿಚಾರಣೆ, ಪಾರ್ಲಿಮೆಂಟಿನ ನಿರ್ಣಯ, ಕರ್ನಾಟಕದ ಭಾರವತ್ತಾದ ಹೇಳಿಕೆ, ಬೇಡಿಕೆ ಇವೆಲ್ಲ ತನ್ನೆದುರು ಇದ್ದರೂ ರಾಜ್ಯ ಪುನರ್ರಚನಾ ಆಯೋಗದವರು 'ಗುಡ್ಡ ಸುತ್ತಿ ಮೈಲಾರಕ್ಕೆ ಬಂದರು' ಎಂಬಂತೆ ಮತ್ತೆ ಬಳ್ಳಾರಿಯ ತಾಲೂಕು, ಪಟ್ಟಣ, ಅದರ ಮೇಲೆ ಮತ್ತೆ 'ದಕ್ಷಿಣೆ' ಎಂದು ಹೊಸಪೇಟೆ ಮುಂತಾದವುಗಳು ಆಂಧ್ರಕ್ಕೆ ಸೇರಬೇಕೆಂದು ನಿರ್ಣಯ ಕೊಟ್ಟುಬಿಟ್ಟರು ! ಇನ್ನು ಹಲವೇ ದಿನಗಳಲ್ಲಿ ವರದಿ ಪ್ರಕಟವಾಗುವ ಸಂದರ್ಭದಲ್ಲಿ ನಾನು ಆಯೋಗದ ಸಭಾಸದರನ್ನು ಕಂಡೆನು. ಆಂಧ್ರಕ್ಕೆ ತುಂಗಭದ್ರಾಯೋಜನೆಯ ಪೂರ್ಣ ಲಾಭ ಸಿಕ್ಕಬೇಕು ಇದು ನ್ಯಾಯ ಸಮ್ಮತ. ಕರ್ನಾಟಕಕ್ಕೆ ಅನ್ಯಾಯವಾಗದಂತೆ ಆ ಲಾಭ ಆಂಧ್ರಕ್ಕೆ ಆಗಬೇಕು. ಆದರೆ ಆದಕ್ಕಾಗಿ ಸೀಮೆಯನ್ನೆ ಕೊಟ್ಟುಬಿಡುವದು ಯಾವ ಊರ ನ್ಯಾಯ ? ಈ ನ್ಯಾಯದಿಂದ ಬಿಹಾರದ ದಾಮೋದರ ಕಣಿವೆಯ ಯೋಜನೆಯ ಪೂರ್ಣ ಲಾಭ ಬಂಗಾಲಕ್ಕೆ ದೊರೆಯಬೇಕೆಂದು ಬಿಹಾರದ ಇಡೀ ಛೋಟಾ ನಾಗಪೂರ ವಿಭಾಗವನ್ನೆ ಬಂಗಾಲಕ್ಕೆ ಕೊಟ್ಟು ಬಿಡಬೇಕಾದೀತು ! ಆದುದರಿಂದ ಬಳ್ಳಾರಿಯ ಕನ್ನಡ ಭಾಗವೆಲ್ಲ ಕರ್ನಾಟಕದಲ್ಲಿಯೇ ಉಳಿಯಬೇಕು, ನೀರಿನ ಹಂಚುವಿಕೆ ನ್ಯಾಯದಿಂದ ಇಬ್ಬರ ನಡುವೆಯೂ ಆಗಬೇಕು, ಇದೇ ಯೋಗ್ಯವಾಗಬಲ್ಲದು ಎಂದು ನಾನು ಎಷ್ಟು ವಾದಿಸಿದರೂ ಉಪಯೋಗವಾಗಲಿಲ್ಲ ! ಆದರೆ ಕೊನೆಗೆ ಆದದ್ದೇನು ? ಅದೇ. ಹೀಗೆ ಒಂದಲ್ಲ, ಎರಡಲ್ಲ. ಅನೇಕಾನೇಕ ಸಣ್ಣ ದೊಡ್ಡ ನೆನಪುಗಳನ್ನು ಉಲ್ಲೇಖಿಸಬಹುದು. ಇರಲಿ. ಸದ್ಯಕ್ಕೆ ಇಷ್ಟೇ ಸಾಕು.

ಪ್ರಹ್ಲಾದ ಚರಿತ್ರೆಯ ಪಾಠಗಳು

ಲೇಖಕರು : ಶ್ರೀ. ವಿ. ಬಿ. ನಾಯಕ

★

ಭಗವದ್ಭಕ್ತಿಯೇ ನಿಜವಾದ ಸುಖಕ್ಕೆ ಕಾರಣ; ಪರಮಾತ್ಮನಲ್ಲಿ ಅನನ್ಯಭಕ್ತಿಯನ್ನು ಇರಿಸುವದರಿಂದಲೇ ಶಾಶ್ವತ ಆನಂದ. ಪರಮಾತ್ಮನು ಸರ್ವತಂತ್ರ ಸ್ವತಂತ್ರನು, ಸರ್ವವ್ಯಾಪಿಯೆಂಬುದನ್ನು ಪ್ರಹ್ಲಾದ ಚರಿತ್ರೆ ವಿವರಿಸುವದಲ್ಲದೆ ಅಯೋಗ್ಯರಿಗೆ ವರ ಪ್ರದಾನ ಮಾಡಬಾರದೆಂಬುದನ್ನು ಎತ್ತಿ ತೋರಿಸುತ್ತದೆ. ಹೀಗೆ ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಪ್ರಹ್ಲಾದ ಚರಿತ್ರೆ ಅದ್ವಿತೀಯ ಸ್ಥಾನ ಪಡೆದಿದೆ.

ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಶ್ರೀಮದ್ಭಾಗವತದಲ್ಲಿ ಉಕ್ತವಾದ ಪ್ರಹ್ಲಾದ ಚರಿತ್ರೆಗೆ ಇರುವ ಸ್ಥಾನವು ಅದ್ವಿತೀಯವಾಗಿದೆ. ಸತ್ಯಸಂಧತೆ, ತತ್ತ್ವನಿಷ್ಠೆ ಇವುಗಳಿಗೆ ಪ್ರಹ್ಲಾದನ ಚರಿತ್ರೆಯು ಪರಮೋಚ್ಚ ಆದರ್ಶವೆಂಬ ಸಂಗತಿಯು ಅನೇಕರಿಗೆ ಗೊತ್ತಿದೆ. ಆಸುರೀ ಶಕ್ತಿಯನ್ನು ಎದುರಿಸಿ ನಿಂತ ದೈವೀಶಕ್ತಿಯ ಅಂತಿಮ ವಿಜಯದ ಸಂಕೇತವೇ ಪ್ರಹ್ಲಾದ ಚರಿತ್ರೆಯೆಂದು ನಿರಾತಂಕವಾಗಿ ಹೇಳಬಹುದು. ಅಲ್ಲದೆ ಪಾಮರರಾದ ನಮ್ಮಂತಹರಿಗೆ ಆ ಚರಿತ್ರೆಯು ಇನ್ನೂ ಅನೇಕ ಬಗೆಯಿಂದ ಉದ್ಬೋಧಕವಾಗಿದೆ. ಅದರಲ್ಲಿ ಹುದುಗಿದ ಮಾರ್ಮಿಕ ಪಾಠಗಳನ್ನು ಒಂದೊಂದಾಗಿ ನಮ್ಮ ಜೀವನದಲ್ಲಿ ನಾವು ಅಳವಡಿಸಿಕೊಂಡು ಅದರ ರಹಸ್ಯವನ್ನು ಅರಿತುಕೊಂಡು ಮೈಗೂಡಿಸಿಕೊಂಡರೆ ನಮ್ಮ ಬಾಳಿಗೆ ದೊರೆತ ಹೊಳಪು ಎಂತಹ ಕುರುಡರ ಕಣ್ಣನ್ನಾದರೂ ಕುಕ್ಕಿಸಬಹುದು. ಆದರೆ ಈ ಪ್ರಯತ್ನವು ಭಾಗವತೋತ್ತಮನಾದ ಪ್ರಹ್ಲಾದನ ಮಾತನ್ನು ಗೆಲಿಸಿದ ಶ್ರೀ ನೃಸಿಂಹದೇವರ ಅನುಗ್ರಹದಿಂದಲೇ ಸಾಧ್ಯವೆಂಬುದನ್ನು ಮಾತ್ರ ಯಾರೂ ಮರೆಯಕೂಡದು.

ಭಕ್ತ ಪ್ರಹ್ಲಾದನ ಚರಿತ್ರೆಯ ವಿವರಗಳು ಸಾಮಾನ್ಯವಾಗಿ ಎಲ್ಲರಿಗೆ ಗೊತ್ತಿವೆ. ಹಿರಣ್ಯಕಶಿಪು ಎಂಬ ದೈತ್ಯರಾಜನ ಉದರದಲ್ಲಿ ಮಹಾಭಾಗವತೋತ್ತಮನಾದ ಪ್ರಹ್ಲಾದನು ಜನಿಸಿದನೆಂಬ ಅಂಶವನ್ನು ಬಗೆದಂದು ವಿಚಾರ ಮಾಡಿದರೆ ಜೀವ ಜೀವರ ದೈಹಿಕ ಸಂಬಂಧವು ಪರಮಾತ್ಮನ ಸಂಕಲ್ಪದ ಪ್ರಕಾರ ಹಾಗು ಅವರ ಶುಭಾಶುಭ ಕರ್ಮದ ಅಥವಾ ಪ್ರಾರಬ್ಧದ ಪ್ರಕಾರ ಸಂಭವಿಸುತ್ತದೆಂಬ ಮಾತು ಮನಸ್ಸಿಗೆ ಹೊಳೆಯುತ್ತದೆ. ಅದೇ ಮೇರೆಗೆ ಪ್ರಹ್ಲಾದರಾಜನು ಶ್ರೀಹರಿಯ ಸಂಕಲ್ಪದ ಪ್ರಕಾರ ಅಸುರಯೋನಿಯಲ್ಲಿ ಹುಟ್ಟಿ ಭಾರತ ಧರ್ಮದ ಶ್ರೇಷ್ಠತೆಯನ್ನು ತನ್ನ ಚರಿತ್ರೆಯಿಂದ ಜಗತ್ತಿಗೇ ತೋರಿಸಿಕೊಡಬೇಕಾಯ್ತು. ಇರಲಿ.

ಆಪಾತತಃ ಪ್ರಹ್ಲಾದನು ತಂದೆಯಾದ ಹಿರಣ್ಯಕಶಿಪುವಿನ ಮಾತನ್ನು ಮೀರಿ ನಡೆದನು; ಗುರುಗಳು ಹೇಳಿಕೊಡುತ್ತಿದ್ದ ಪಾಠಗಳನ್ನು ಕಲಿಯಲಿಲ್ಲೆಂದು ಅವನ ಚರಿತ್ರೆಯನ್ನು ಅನುವಾದಿಸಿ ಕೆಲವರು ಹೇಳುವ ಸಂಭವವಿದೆ. ಅರ್ಥಾತ್ ಪ್ರಹ್ಲಾದನು ಪಿತೃದ್ರೋಹಿ, ಗುರುದ್ರೋಹಿಎಂದು ಅಪಾರ್ಥವನ್ನು ಮಾಡಿ ಬುದ್ಧಿಭೇದವನ್ನು ಹುಟ್ಟಿಸಬಹುದು. ಆದರೆ ಅವರು ಹೇಳುವ ಅಂತಹ ಅಪಾರ್ಥಕ್ಕೆ ಒಳಸೋಲುವ ಮುನ್ನ ತಂದೆಯಾಗಿದ್ದ ಹಿರಣ್ಯಕಶಿಪು ಎಂತಹನು? ಗುರುಗಳು ಹೇಳುತ್ತಿದ್ದ ಪಾಠಗಳು ಎಂತಹವು? ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಅಂದರೆ ಪಿತೃದ್ರೋಹ, ಗುರುದ್ರೋಹ ಎಂಬ ಶಬ್ದಗಳಿಗೆ ಯಾವ ಅರ್ಥವನ್ನು ಮಾಡಿಕೊಳ್ಳಬೇಕೆಂಬ ವಿಷಯವು ಸ್ಪಷ್ಟವಾಗುವದು.

ಬ್ರಹ್ಮದೇವನನ್ನು ಕುರಿತು ತಪಸ್ಸನ್ನು ಮಾಡಿ ಹಿರಣ್ಯಕಶಿಪು ತನಗೆ ಮನುಷ್ಯರಿಂದಾಗಲಿ, ಮೃಗಗಳಿಂದಾಗಲಿ, ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ, ಒಳಗಾಗಲಿ ಹೊರಗಾಗಲಿ, ಹಗಲಾಗಲಿ ರಾತ್ರಿಯಾಗಲಿ ಮರಣವುಂಟಾಗಬಾರದೆಂಬ ವರವನ್ನು ಪಡೆದನಷ್ಟೆ! ಈ ಪ್ರಕಾರವಾಗಿ ವರವನ್ನು ಪಡೆದ ದೈತ್ಯನು ಭಗವಂತನ ದ್ವೇಷವನ್ನು ಮಾಡತೊಡಗಿದನು. (ಏವಂ ಲಬ್ಧವರೋ ದೈತ್ಯಃ ಬಿಭ್ರದ್ಧೇಮಮಯಂ ವಪುಃ। ಭಗವತ್ಯಕರೋದ್ವೇಷಂ ಭ್ರಾತುರ್ವಧಮನುಸ್ಮರನ್ ಭಾ. ಸ. ೭ ೪ ಶ್ಲೋಕ ೪) ಆ ದೈತ್ಯನು ಮಾಡಿದ ತಪಸ್ಸು ಎಷ್ಟು ತಾಮಸ ಸ್ವರೂಪದ್ದೆಂಬುದನ್ನು ಒಡೆದು ಹೇಳುವ ಕಾರಣವಿಲ್ಲ. ಅದರಿಂದಾಗತಕ್ಕ ಫಲವು ಅನರ್ಥಕಾರಿಯೆಂದು ಬೇರೆ ಹೇಳಬೇಕಾಗಿಲ್ಲ. ಸಮಸ್ತ ಚರಾಚರ ಪ್ರಪಂಚವನ್ನು ಸೃಜಿಸಿ ಅದರ ನಿಯಾಮಕನಾಗಿರುವ ಪರಮಾತ್ಮನನ್ನು ದ್ವೇಷಿಸಿ ಮಗನಾದ ಪ್ರಹ್ಲಾದನನ್ನು ಕುರಿತು:

" ಯಸ್ತ್ವಯಾ ಮಂದಭಾಗ್ಯೋಕ್ತೋ
ಮದನ್ಯೋ ಜಗದೀಶ್ವರಃ।
ಕ್ವಾಸೌ ಯದಿ ಸ ಸರ್ವತ್ರ ಕಸ್ಮಾತ್ ಸ್ತಂಭೇ
ನ ದೃಶ್ಯತೇ ॥ ಭಾ. ಸ. ೭೮ ಶ್ಲೋಕ ೧೩

ಮಂದಭಾಗ್ಯನಾದ ಪ್ರಹ್ಲಾದನೇ, ನನ್ನ ಹೊರತು ಬೇರೊಬ್ಬ ಜಗದೀಶ್ವರನಿರುವನೆಂದು ನೀನು ಹೇಳುತ್ತಿರುವವನು ಎಲ್ಲಿರುವನು? ಅವನು ಎಲ್ಲೆಡೆಯಲ್ಲಿಯೂ ಇದ್ದರೆ ಈ ಕಂಬದಲ್ಲಿ ಯಾಕೆ ಕಾಣಿಸುವದಿಲ್ಲ? ಎಂದು ಉನ್ಮತ್ತ ಪ್ರಳಾಪವನ್ನು ಮಾಡಿದ ಹಿರಣ್ಯಕಶಿಪುವಿನ ಸ್ವರೂಪವನ್ನು ಹಾಗು ಅದರ ಅನರ್ಥಕರವಾದ ಪರಿಣಾಮವನ್ನು ಬಗೆದಂದರೆ ಅಂತಹ ತಂದೆಯ ಮಾತನ್ನು ಕೇಳಿ ಅದಕ್ಕೆ ವಿಧೇಯನಾಗಿ ನಡೆಯದಿದ್ದರೆ ಅದು ಪಿತೃದ್ರೋಹವಾದೀತೆ? ಎಂಬುದನ್ನು ಪರಾಮರ್ಶಿಸಬೇಕು. ಅಧಿಕಾರ ಹಾಗು ಐಶ್ವರ್ಯಮದದಿಂದ ಉನ್ಮತ್ತನಾದ ಮನುಷ್ಯನು ಜಗತ್ತನ್ನೆಲ್ಲ

ಆಳತಕ್ಕ ಶಕ್ತಿಯುಳ್ಳವನು ತಾನೇ ಎಂದು ಹೇಳಿ ದೇವರ ಅಸ್ತಿತ್ವವನ್ನೇ ಅಲ್ಲಗಳೆದು ದುರಾಚಾರ ಕ್ಕೊಳಗಾಗಿ ಎಲ್ಲರೂ ತನಗೆ ಬೊಗ್ಗಿಯೇ ನಡೆಯು ಬೇಕೆಂದೂ ಹಾಗೆ ನಡೆಯಲೊಪ್ಪದವರು ತನ್ನ ದ್ರೋಹಿಗಳೆಂದೂ ಹೇಳಿದರೆ ಅದು ಎಷ್ಟರ ಮಟ್ಟಿಗೆ ಸಮಂಜಸವಾದೀತೆಂಬುದು ವಿಚಾರ-ಣೀಯ ಅಂಶ. ಪ್ರಲ್ಹಾದ ಚರಿತ್ರೆಯು ಈ ದೃಷ್ಟಿಯಿಂದ ಬಹಳ ಉದ್ಬೋಧಕವಾಗಿದೆ. ಯಾಕಂದರೆ ಅನೇಕಸಲ ಕೇವಲ ರಕ್ತ ಸಂಬಂಧ, ಜಾತಿಸಂಬಂಧ, ಗುರು-ಶಿಷ್ಯ ಸಂಬಂಧ ಎಂಬ ಕಾರಣಗಳಿಂದ ಅಸಮಂಜಸ ವಾದ ಅನ್ಯಾಯ್ಯವಾದ ತಮ್ಮ ರೀತಿ ನೀತಿ ಗಳನ್ನು ಮಕ್ಕಳು, ಜ್ಞಾತಿಗಳು, ಶಿಷ್ಯರು ಸಮರ್ಥಿಸಲೇಬೇಕೆಂಬ ಅಗ್ರಹವನ್ನು ಕೆಲವರು ಹಿಡಿಯುವದುಂಟು. ಅಂತಹ ಸಂದರ್ಭದಲ್ಲಿ ಮಕ್ಕಳಾಗಲಿ ಜ್ಞಾತಿಗಳಾಗಲಿ ಶಿಷ್ಯರಾಗಲಿ ಹಿರಿಯರು ಅನುಸರಿಸುತ್ತಿರುವ ರೀತಿನೀತಿಗಳು ಯೋಗ್ಯವಲ್ಲವೆಂದು ತೋರಿಸಿಕೊಡಲು ಹವಣಿಸಿದರೆ ಸ್ವಜನದ್ರೋಹ, ಕುಲದ್ರೋಹ, ಗುರು ದ್ರೋಹ ಮೊದಲಾದ ಮಾತುಗಳಿಂದ ಬುದ್ಧಿ ಭೇದವನ್ನು ಹುಟ್ಟಿಸಲಾಗುತ್ತಿದೆ. ಅಂತಹ ಬುದ್ಧಿ ಭೇದಕಾರಕ ಮಾತುಗಳಿಗೆ ಯಾವ ಬೆಲೆಯನ್ನು ಕೊಡಬೇಕೆಂಬ ಅಂಶವನ್ನು ಪ್ರಹ್ಲಾದ ಚರಿತ್ರೆಯು ಎತ್ತಿ ತೋರಿಸುತ್ತದೆ. " ಗುರೋರಪ್ಯಾವಲಿಪ್ತಸ್ಯಾ ಕಾರ್ಯಾಕಾರ್ಯಮಜಾನತಃ । ಉತ್ಪಥ ಪ್ರತಿಪನ್ನಸ್ಯನ್ಯಾಯ್ಯಂ ಭವತಿ ಶಾಸನಂ ॥ " ಅಂದರೆ ಕಾರ್ಯಾ ಕಾರ್ಯವನ್ನು ತಿಳಿಯದಂತಹ ಹಾಗು ಋಜುಮಾರ್ಗವನ್ನು ಬಿಟ್ಟು ನಡೆವಂತಹ ಗುರು ವನ್ನು ಕೂಡ ದಂಡಿಸುವದು ನ್ಯಾಯವೆಂಬ ಮಾತಿನ ನಿದರ್ಶನವನ್ನು ಪ್ರಹ್ಲಾದಚರಿತ್ರೆಯಲ್ಲಿ ಕಾಣುತ್ತೇವೆ. ಹಾಗೆಯೆ ತತ್ವನಿಷ್ಠವಾದ ಜೀವನ ವನ್ನು ಸಾಗಿಸುವದು ಎಷ್ಟು ಕಠಿಣ ; ಅದಕ್ಕೆ ಮಾಡಬೇಕಾದ ತ್ಯಾಗವೆಂತಹದು ಮತ್ತು ಆತ್ಮ ಸಂಯಮವು ಎಷ್ಟು ಅಚಲವಾಗಿರಬೇಕು ? ಎಂಬ ವಿಷಯಗಳ ಆಗರವೇ ಪ್ರಹ್ಲಾದ ಚರಿತ್ರೆಯೆಂದರೆ ತಪ್ಪಾಗಲಾರದು. ಅದರಂತೆಯೆ ಪ್ರಹ್ಲಾದನು ತನ್ನ ಒಡನಾಡಿಗಳಿಗೆ " ಗುರೂಕ್ತಮಪಿ ನ ಗ್ರಾಹ್ಯಂ ಯದನರ್ಥೇಽರ್ಥಕಲ್ಪನಂ " ಭಾ. ಸ. ಅ. ೬ ಶ್ಲೋಕ ೨—ಅಂದರೆ ಅನರ್ಥಕರವಾಗಿದ್ದುದನ್ನು ಪುರುಷಾರ್ಥಕಾರಿಯೆಂದು ಉಪದೇಶಿಸುವ ಗುರುವಿನ ಮಾತನ್ನು ಕೇಳಕೂಡದೆಂದು ಸ್ಪಷ್ಟವಾಗಿ ಹೇಳಿದ್ದುದನ್ನು ನೋಡಿದರೆ ಗುರುಗಳ ಮಾತು ಎಂಬ ಒಂದೇಒಂದುಕಾರಣದಿಂದ ಅದರ ಔಚಿತ್ಯಾನೌಚಿತ್ಯಗಳನ್ನಾಗಲಿ ಇಲ್ಲವೆ ಅದರಿಂದಾಗುವ ಹಿತಾಹಿತ ಪರಿಣಾಮಗಳನ್ನಾಗಲಿ ವಿಮರ್ಶಿಸದೆ ಅದನ್ನು ಗ್ರಾಹ್ಯವೆಂದು ಒಪ್ಪಕೂಡದೆಂಬ ಪಾಠ ವನ್ನು ಪ್ರಹ್ಲಾದ ಚರಿತ್ರೆಯಿಂದ ಕಲಿಯಬಹುದು.

ಮಕ್ಕಳ ಶಿಕ್ಷಣವು ಎಂತಹದಿರಬೇಕು ? ಅದನ್ನು ತಾತ್ಕಾಲಿಕವಾದ ಪ್ರಭುತ್ವವು ತನ್ನ ವಿಶಿಷ್ಟ ವಾದ ಧ್ಯೇಯಕ್ಕೆ ಅನುಗುಣವಾಗುವಂತೆ ಒಂದು ಪಡಿಯಚ್ಚಿನಲ್ಲಿ ಎರಕಹೊಯ್ದಂತೆ ಎಷ್ಟರಮಟ್ಟಿಗೆ ನಿರೂಪಿಸಿ ನಿಯಂತ್ರಿಸಬಹುದು ? ಎಂಬ ಅಂಶ ಗಳಿಗೂ ಪ್ರಹ್ಲಾದ ಚರಿತ್ರೆಯು ಮಾರ್ಗದರ್ಶಕ ವಾಗಿದೆ. ಅರಸನಾಗಿದ್ದ ಹಿರಣ್ಯಕಶಿಪು ಮಕ್ಕಳ ಶಿಕ್ಷಣವು ತನ್ನ ತತ್ವಕ್ಕೆ ಅನುಗುಣವಾಗಿ ಸಾಗಬೇಕೆಂಬ ಆಗ್ರಹದಿಂದ ಪ್ರಹ್ಲಾದನ ಗುರುವಿಗೆ ಇಂತಿಂತಹದನ್ನೇ ಕಲಿಸಬೇಕೆಂದು ಆಜ್ಞಾಪಿಸಿ ದನು. ಆದರೆ ಅದು ಎಷ್ಟರ ಮಟ್ಟಿಗೆ ಯಶಸ್ವಿಯಾಯ್ತೆಂಬುದನ್ನು ನೋಡಬೇಕು. ಸತ್ಯ ಸಿದ್ಧಾಂತವನ್ನು ವಿರೋಧಿಸಿ ' ಅಹಂಕರ್ತಾ ಅಹಂ ಭೋಕ್ತಾ ' ಎಂಬ ದುರಹಂಕಾರಪ್ರಣೀತವಾದ ಶಾಸ್ತ್ರವ್ಯಾಸಂಗವನ್ನು ಮಾಡಲು ಮಕ್ಕಳಿಗೆ ಭೋಧಿಸಬೇಕೆಂದು ಹಿರಣ್ಯಕಶಿಪು ಗುರುಗಳಿಗೆ ಕಟ್ಟಪ್ಪಣೆಯನ್ನು ಮಾಡಿದನು. ಆದರೆ ಅದರ ಗತಿಯು ಏನಾಯ್ತು ? ಪ್ರಹ್ಲಾದನು ಆ ಕಟ್ಟಪ್ಪ ಣೆಗೆ ಒಳಗಾದ ಗುರುಗಳ ಸ್ವರೂಪವನ್ನು ತಿಳಿದು ಕೊಂಡು ತನ್ನ ಸಹಾಧ್ಯಾಯಿಗಳಿಗೆ " ಗುರೂಕ್ತಮಪಿ ನ ಗ್ರಾಹ್ಯಂ " ಎಂದು ಬೋಧಿಸುವ ಸಾಹಸವನ್ನು ಮಾಡಿದನಲ್ಲದೆ ತಂದೆಗೆ ನವಲಕ್ಷಣಯುಕ್ತವಾದ ಭಗವದ್ಭಕ್ತಿಯೇ ಉತ್ತಮ ಅಧ್ಯಯನವೆಂದು ನಿರ್ಭಯವಾಗಿ ಹೇಳಿದನು. ಇದರಿಂದ ಮಕ್ಕಳೆಂದರೆ ಮಣ್ಣಿನ ಮುದ್ದೆಯಲ್ಲ ; ಅವರ ಅಂತರ್ಯಾಮಿಯಾಗಿರತಕ್ಕ ಪರಮಾತ್ಮನು ಆಯಾಯ ಜೀವನ ಸ್ವರೂಪಕ್ಕೆ ತಕ್ಕಂತೆ ಕಾಲಕಾಲಕ್ಕೆ ಪ್ರೇರಣೆಯನ್ನು ಮಾಡುತ್ತಿರುತ್ತಾನೆ. ಹಾಗು ಪೂರ್ವಜನ್ಮದ ಸಂಸ್ಕಾರವಿಶೇಷದ ಪ್ರಭಾವವೂ ಅವರವರ ಜೀವನವಿಕಾಸದ ಮೇಲೆ ಆಗುತ್ತಿರುತ್ತದೆಯೆಂಬ ಮಾತು ಸ್ಪಷ್ಟವಾಗುತ್ತದೆ. ಪ್ರಯುಕ್ತ ವಿವೇಕಿಯಾದ ಪ್ರಭುತ್ವವು ಹಠದಿಂದ ಮಕ್ಕಳ ಶಿಕ್ಷಣವು ಹೀಗೆಯೇ ಇರಬೇಕೆಂದೂ ಹೀಗೆ ಇರ ಬಾರದೆಂದೂ ನಿರ್ಬಂಧಿಸುವದಿಲ್ಲ.

ಎಲ್ಲಕ್ಕಿಂತ ಮಿಗಿಲಾಗಿ ನಿಜವಾದ ಸುಖಕ್ಕೆ ಭಗವದ್ಭಕ್ತಿಯೆ ಕಾರಣವಲ್ಲದೆ ಹಣಕಾಸು ಮುಂತಾದುದಲ್ಲೆಂದು "ತುಷ್ಟೇ ಚ ತತ್ರ ಕಿಮಲಭ್ಯಂ" ಅಂದರೆ ಪರಮಾತ್ಮನು ಪ್ರೀತನಾದರೆ ಯಾವುದು ತಾನೆ ಅಲಭ್ಯವೆಂದು ಪ್ರಲ್ಹಾದನು ಸಹಾಧ್ಯಾಯಿಗಳಿಗೆ ಮಾಡಿದ ಉಪದೇಶವು ಹಾಗು ಅದರಂತೆ ನಡೆದು ತೋರಿಸಿದ ಆತನ ಚರಿತ್ರೆಯು ಮಾರ್ಗದರ್ಶಕವಲ್ಲದೆ ಬೇರಿನ್ನಾವುದಾಗಬಲ್ಲದು? ಪುರುಷೋತ್ತಮನಾದ ಭಗವಂತನನ್ನು ಮೆಚ್ಚಿಸಲು ಸುಲಭ ಸಾಧನವಾವುದೆಂಬುದನ್ನು ಪ್ರಹ್ಲಾದ ಚರಿತ್ರೆಯು ನಮಗೆ ಚೆನ್ನಾಗಿ ತಿಳಿಸುತ್ತದೆ.

ಮನ್ಯೇ ಧನಾಭಿಜನ ರೂಪತಪಃ
ಶ್ರುತೌಜಸ್ತೇಜಃ ಪ್ರಭಾಬಲ
ಪೌರುಷ ಬುದ್ಧಿಯೋಗಾಃ।
ನಾರಾಧನಾಯ ಹಿ ಭವಂತಿ
ಪರಸ್ಯಪುಂಸೋ ಭಕ್ತ್ಯಾ ತುತೋಷ
ಭಗವಾನ್ನನುಯೂಥಪಾಯ ॥

ಭಾ. ಸ. ಅ ೯ ಶ್ಲೋ. ೯

ಅಂತಹ ಅನನ್ಯ ಭಕ್ತಿಯನ್ನು ಪರಮಾತ್ಮನಲ್ಲಿ ಪ್ರಹ್ಲಾದನು ಇಟ್ಟುಕೊಂಡುದರಿಂದಲೇ ಆತನ ಮಾತನ್ನು ನಡೆಸಿಕೊಡುವ ಉದ್ದೇಶದಿಂದ ಪರಮಾತ್ಮನು:

ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ
ವ್ಯಾಪ್ತಿಂ ಚ ಭೂತೇಷ್ವಖಿಲೇಷು ಚಾತ್ಮನಃ।
ಅದೃಶ್ಯತಾತ್ಯದ್ಭುತರೂಪಮುದ್ವಹನ್
ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಂ ॥

ಭಾ. ಸ. ಅ ೮ ಶ್ಲೋ. ೧೮

ನೃಸಿಂಹಾವತಾರವನ್ನು ತಾಳಿ ಕಂಭದಿಂದ ಹೊರಬಂದನು. ಪರಮಾತ್ಮನು ಸರ್ವತಂತ್ರಸ್ವತಂತ್ರನು; ಸರ್ವವ್ಯಾಪಿ ಎಂಬ ತತ್ವವನ್ನು ಬಿಂಬಿಸಿ ಐಹಿಕಾಮುಷ್ಮಿಕ ಶಾಶ್ವತ ಆನಂದವನ್ನು ಆತನಿಂದಲೇ ಪಡೆಯಬಹುದಲ್ಲದೆ ಇತರ ಯಾರಿಂದಲೂ ಶಕ್ಯವಿಲ್ಲೆಂಬುದನ್ನು ಮನಗಾಣಿಸಿಕೊಡುವದೇ ಪ್ರಹ್ಲಾದ ಚರಿತ್ರೆಯ ರಹಸ್ಯವಾಗಿದೆ. ಇದನ್ನೇ ಶ್ರೀ ವಿಜಯಧ್ವಜತೀರ್ಥರು:

ಮುಕುಂದ ಚರಣಾರವಿಂದ ನಿರಂತರ ಸೇವೈವ
ಇಹಾಮುತ್ರ ಅನಶ್ವರಾನಂದ ನಿದಾನಂ
ನಾನ್ಯತ್ ಅತಃ ಸೈವ ಬುಭೂಷುಭಿರನುದಿನಂ
ಕರ್ತವ್ಯ ಇತಿ ವಿಧೀಯತೇಽಸ್ಮಿನ್ನಧ್ಯಾಯೇ

ಎಂದು ತಮ್ಮದೇ ಆದ ಅನುಪಮ ಶೈಲಿಯಲ್ಲಿ ಹೇಳಿದ್ದಾರೆ. ಪ್ರಹ್ಲಾದನಾದರೂ:

ಕಃ ಶತ್ರುಃ ಕ ಉದಾಸೀನಃ
ಕಿಂ ಮಿತ್ರಂ ಚೇಹ ಆತ್ಮನಃ।
ಭವತ್ಸ್ವಪಿ ನಯ್ಯೈಃ ಕಿಂ ಸ್ಯಾತ್
ದೈವಂ ಸಂಪದ್ವಿಪತ್ಪದಂ ॥

ಭಾ. ಸ. ಅ ೬ ಶ್ಲೋ ೪

ಅಂದರೆ ಶತ್ರು ಯಾರು ಉದಾಸೀನನಾರು ಮಿತ್ರನಾರು ಈ ರಾಜನೀತಿ ಶಾಸ್ತ್ರದಿಂದಾಗುವದೇನು? ಪರಮಾತ್ಮನೇ ಸಂಪತ್ತಿಗೂ ವಿಪತ್ತಿಗೂ ಆಶ್ರಯನು ಎಂದು ಸ್ಪಷ್ಟವಾಗಿ ಹೇಳಿ:

ದುರ್ಲಭಂ ಮಾನುಷಂ ಜನ್ಮ
ತದಪ್ಯಧ್ರುವಮರ್ಥದಂ

ಭಾ. ಸ. ಅ ೬ ಶ್ಲೋ. ೭

ಅಂದರೆ ಮನುಷ್ಯ ಜನ್ಮವು ದುರ್ಲಭವಾದುದು; ಅದುವೇ ಪುರುಷಾರ್ಥದಾಯಕವಾದುದು ಎಂದು ಪ್ರಹ್ಲಾದಚರಿತ್ರೆಯು ತಿಳಿಸುವ ಮಾತನ್ನೇ 'ಮಾನವ ಜನ್ಮ ದೊಡ್ಡದು; ಅದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಪುರಂದರದಾಸರು ತಿಳಿಗನ್ನಡದಲ್ಲಿ ತಿಳಿಸಿ ಮಹದುಪಕಾರ ಮಾಡಿರುವರು.

ಕೊನೆಯದಾಗಿ ಅಯೋಗ್ಯರಿಗೆ ವರಪ್ರದಾನವನ್ನು ಮಾಡಬಾರದೆಂಬ ಪಾಠವನ್ನು ಪ್ರಹ್ಲಾದ ಚರಿತ್ರೆಯು ಚೆನ್ನಾಗಿ ತಿಳಿಸುತ್ತದೆ. ಬ್ರಹ್ಮದೇವರಿಗೆ ಭಗವಂತನು

ನೈವಂ ವಿಧೋಽಸುರಾಣಾಂ
ತೇ ಪ್ರದೇಯಃ ಪದ್ಮಸಂಭವ।
ವರಃ ಕ್ರೂರನಿಸರ್ಗಾಣಾಂ
ಅಹೀನಾಂ ಅಮೃತಂ ಯಥಾ ॥

ಭಾ. ಸ. ಅ ೧೦ ಶ್ಲೋ ೩೧

ಕಮಲಸಂಭವನಾದ ಬ್ರಹ್ಮನೇ, ಹಾವುಗಳಿಗೆ ಅಮೃತವನ್ನು ಕೊಟ್ಟಂತೆ ಕ್ರೂರರಾದ ಅಸುರರಿಗೆ ಈ ಪ್ರಕಾರ ವರವನ್ನು ಕೊಡತಕ್ಕದ್ದಲ್ಲ ಎಂದು ಕೊಟ್ಟ ಎಚ್ಚರಿಕೆಯು ಅತ್ಯಂತ ಮನನೀಯವಾಗಿದೆ-

★

ಕರ್ನಾಟಕ ಏಕೀಕರಣ—ಹೊಸ ಮೈಸೂರು

ಲೇ: ಶ್ರೀ ರಾ. ನ. ಮಳಿಗಿ, ಹುಬ್ಬಳ್ಳಿ.

೧೮೫೮ ರಲ್ಲಿ ಭಾಷಾನ್ವಯ ರಾಜ್ಯಗಳ ವಿಚಾರ ಹೊಳೆದು ಸುಮಾರು ನೂರು ವರುಷಗಳ ಹೊತ್ತಿಗೆ ಈಗ ಅವು ಅಸ್ತಿತ್ವದಲ್ಲಿ ಬರುತ್ತಿವೆ. ಕರ್ನಾಟಕ ಏಕೀಕರಣಕ್ಕಾಗಿ ಕಳೆದ ೪೦ ವರ್ಷಗಳಿಂದ ಕರ್ನಾಟಕ ಏಕೀಕರಣ ಸಂಘ, ಕಾಂಗ್ರೆಸ್ ಸಮಿತಿ ಹಾಗೂ ಅನೇಕ ವ್ಯಕ್ತಿಗಳು ಶ್ರಮಿಸುತ್ತ ಬಂದಿರುವವು. ಈ ಕುತೂಹಲಕಾರಿ ಹೋರಾಟದ ವಿವರಣೆಯನ್ನು, ಹೊಸ ಮೈಸೂರ ರಾಜ್ಯದ ಸಾಂಪತ್ತಿಕ ಸ್ಥಿತಿಯ ಚಿತ್ರವನ್ನು ಲೇಖಕರು ಇಲ್ಲಿ ಕೊಟ್ಟಿರುವರು.

ಭಾರತೀಯರು ಭಾಷಾನ್ವಯ ಪ್ರಾಂತರಚನೆಯ ಹೋರಾಟವನ್ನು ಪ್ರಾರಂಭಿಸುವದಕ್ಕೆ ಎಷ್ಟೋ ಮೊದಲು, ಸುಮಾರು ೧೦೦ ವರ್ಷಗಳ ಹಿಂದೆಯೇ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಈ ವಿಷಯಕವಾದ ಸೂಚನೆಯು ಬಂದಿತ್ತೆಂದರೆ ನಿಜವಾಗಿಯೂ ಆಶ್ಚರ್ಯವೆನಿಸುವಂತಿದೆ. ೧೮೫೮ ನೇ ಜೂನ್ ತಿಂಗಳಿನಲ್ಲಿ ಬ್ರಿಟಿಶ್ ಪಾರ್ಲಿಮೆಂಟಿನ ಮುಂದೆ ಭಾರತ ಸರಕಾರ ವಿಧೇಯಕದ ದ್ವಿತೀಯ ವಾಚನವು ನಡೆದಾಗ ಸುಪ್ರಸಿದ್ಧ ರಾಜಕಾರಣಿಗಳೂ ವಾಗ್ಮಿಗಳೂ ಆದ ಜಾನ್ ಬ್ರೈಟರು ಒಂದು ಮಹತ್ವದ ಭಾಷಣವನ್ನು ಮಾಡಿದರು. ಅದರಲ್ಲಿ ಅವರು ಭಾರತ ಸಾಮ್ರಾಜ್ಯವನ್ನು ಭೌಗೋಲಿಕ ಮತ್ತು ಭಾಷಾನ್ವಯ ದೃಷ್ಟಿಯಿಂದ ಐದು ಆಡಳಿತೆಯ ಗುಂಪುಗಳನ್ನಾಗಿ ವಿಭಜಿಸಬೇಕೆಂದು ಒತ್ತಿ ಹೇಳಿದರು.

ಭಾಷಾವಾರ ರಾಜ್ಯದ ಪ್ರಥಮ ಬೇಡಿಕೆ

ಭಾರತದಲ್ಲಿಯ ಜನತೆಯು ಭಾಷಾನ್ವಯ ಪ್ರಾಂತರಚನೆಯ ಬೇಡಿಕೆಯನ್ನು ಸರಕಾರದ ಮುಂದೆ ಮಂಡಿಸಿದ್ದು ೧೮೭೬ರಲ್ಲಿ. ಆಗ ಉರಿಯಾ ಭಾಷೆಯನ್ನಾಡುವ ಪ್ರದೇಶಗಳನ್ನು ಒಂದುಗೂಡಿಸಿ ಉರಿಯಾ ಪ್ರಾಂತರಚನೆಯಾಗಬೇಕೆಂಬ ಚಳವಳಿಯು ಒರಿಸ್ಸಾದಲ್ಲಿ ನಡೆಯಿತು. ನಂತರ ೧೮೯೬ ರಲ್ಲಿ ಬಿಹಾರಿನ ಮಹೇಶ ನಾರಾಯಣರು ಭಾಷಾನುಗುಣ ಪ್ರಾಂತರಚನೆಯ ಪಲ್ಲವಿಯನ್ನು ಹಾಡಿದರು. ಇವರ ಚಳವಳಿಗೆ ಅಲ್ಲಿಯ ಜನತೆಯು ವಿಶೇಷ ಬೆಂಬಲವನ್ನು ಕೊಟ್ಟಿತು.

ಏಕಭಾಷೆಯ ಬಾಂಧವ್ಯವನ್ನುಳ್ಳವರಲ್ಲಿ ಐಕಮತ್ಯವುಂಟಾಗುವುದೆಂಬ ತತ್ವವನ್ನು ಬ್ರಿಟಿಶ್ ಆಡಳಿತಗಾರರು ಅರಿತಿದ್ದರು. ಆದರಿಂದ ಅವರು ಬಂಗಾಲಿಗಳ ಐಕಮತ್ಯವನ್ನೂ ಪ್ರಾಬಲ್ಯವನ್ನೂ ಮುರಿಯುವ ಉದ್ದೇಶದಿಂದ ೧೯೦೫ರಲ್ಲಿ ಬಂಗಾಲವನ್ನು ಇಬ್ಭಾಗಿಸಿದರು. ಅನಂತರ ಅಖಿಲಭಾರತದಲ್ಲಿ ವಂಗಭಂಗ ಚಳವಳಿಯು ಹಬ್ಬಿತು ಹಾಗೂ ಇದರಿಂದ ಇತರ ಭಾಷೆಯವರೂ ತಾವು ಒಂದಾಗಿ ಬಾಳಬೇಕೆಂದು ಬಯಸತೊಡಗಿದರು. ವಂಗಭಂಗ ಚಳವಳಿಯ ಭೀಕರತೆಯನ್ನು ನೋಡಿ ಬ್ರಿಟಿಶ ಸರಕಾರವು ೧೯೧೧ ರಲ್ಲಿ ವಂಗಭಂಗವನ್ನು ರದ್ದುಗೊಳಿಸಿತು. ಆದರೆ ಭಾಷಾನ್ವಯವಾಗಿ ತಾವೆಲ್ಲರೂ ಒಂದುಗೂಡಬೇಕೆಂಬ ಜನತೆಯ ಹೋರಾಟವು ಮಾತ್ರ ನಿಲ್ಲಲಿಲ್ಲ. ಈ ಚಳವಳಿಯು ೧೯೧೩ ರಲ್ಲಿ ಆಂಧ್ರದಲ್ಲಿಯೂ ೧೯೧೫ರಲ್ಲಿ ಮಹಾರಾಷ್ಟ್ರದಲ್ಲಿಯೂ ೧೯೧೬ ರಲ್ಲಿ ಕರ್ನಾಟಕದಲ್ಲಿಯೂ ಪ್ರಾರಂಭವಾಯಿತು.

ನಿಜವಾಗಿ ನೋಡಿದರೆ ಕರ್ನಾಟಕ ಪ್ರಾಂತ ರಚನೆಯ ಚಳವಳಿಯ ಉಗಮವು ೨೦-೭-೧೮೯೦ ರಲ್ಲಿ ಧಾರವಾಡದಲ್ಲಿ ಆಯಿತೆನ್ನಬಹುದು. ಏಕೆಂದರೆ ಅಂದು "ಕರ್ನಾಟಕ ವಿದ್ಯಾವರ್ಧಕ ಸಂಘ''ದ ಸ್ಥಾಪನೆಯಾಯಿತು. ಪ್ರಾರಂಭಕ್ಕೆ ಇದರ ಕಾರ್ಯಕ್ಷೇತ್ರವು ಕನ್ನಡ ಭಾಷಾಭಿವೃದ್ಧಿಗೆ ಮಾತ್ರ ಮರ್ಯಾದಿತವಾಗಿದ್ದರೂ ಕೆಲಕಾಲ ನಂತರದಲ್ಲಿಯೆ ಅಂದರೆ ೭-೧೦-೧೯೧೬ ನೇ ದಿನ ಇದು ಕನ್ನಡ ಭಾಷೆಯನ್ನಾಡುವ ಸಕಲ ಪ್ರದೇಶಗಳನ್ನೂ ಒಂದುಗೂಡಿಸಿ ಕರ್ನಾಟಕ ಪ್ರಾಂತವನ್ನು ರಚಿಸತಕ್ಕದ್ದೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಇದು ಕರ್ನಾಟಕ ಏಕೀಕರಣದ ಮೊಟ್ಟಮೊದಲಿನ ಗೊತ್ತುವಳಿಯಾಗಿದೆ.

ಧಾರವಾಡದಲ್ಲಿ ೧೯೧೬ ರಲ್ಲಿ "ಕರ್ನಾಟಕ ಸಭೆ''ಯ ಸ್ಥಾಪನೆಯಾಯಿತು. ರಾಜಕೀಯವಾಗಿ ಕನ್ನಡಿಗರನ್ನು ಒಂದುಗೂಡಿಸುವುದು ಇದರ ಉದ್ದೇಶವಾಗಿತ್ತು. ಕರ್ನಾಟಕ ಸಭೆಯೂ ಕರ್ನಾಟಕ ವಿದ್ಯಾವರ್ಧಕ ಸಂಘವೂ ಕನ್ನಡಿಗರಲ್ಲಿ ಜಾಗೃತಿಯನ್ನುಂಟು ಮಾಡಿದುವು. ೧೯೨೪ ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನವು ನಡೆಯಿತು. ಇದೇ ಸಮಯದಲ್ಲಿ ಶ್ರೀಯುತರಾದ ಕಡಪಾ ರಾಘವೇಂದ್ರರಾಯರು, ಆಲೂರು ವೆಂಕಟರಾಯರು, ಹೊನ್ನಾಪುರಮಠ ಗದಿಗೆಯ್ಯನವರೇ ಮೊದಲಾದವರ ಪ್ರಯತ್ನದ ಫಲವಾಗಿ ಬೆಳಗಾವಿಯಲ್ಲಿ "ಕರ್ನಾಟಕ ಏಕೀಕರಣ ಸಂಘ''ವು ಸ್ಥಾಪಿಸಲ್ಪಟ್ಟಿತು. ಮೇಲ್ಕಂಡ "ಕರ್ನಾಟಕ ಸಭೆ''ಯು ಇದರಲ್ಲಿ ವಿಲೀನವಾಯಿತು. ಅಂದಿನಿಂದ ಕರ್ನಾಟಕ ಏಕೀಕರಣ ಚಳವಳಿಯು ಭರದಿಂದ ಬೆಳೆಯತೊಡಗಿತು. ಅತ್ತ ಮೈಸೂರಿನಲ್ಲಿ "ಕನ್ನಡ ಸಾಹಿತ್ಯ ಪರಿಷತ್ತು'' ೧೯೧೫ ರಲ್ಲಿ ಜನಿಸಿತು ಹಾಗೂ ಇದು ಅಖಿಲ ಕರ್ನಾಟಕದಲ್ಲಿ ಕನ್ನಡ ಸಾಹಿತ್ಯಾಭಿವೃದ್ಧಿಯಾಗಲು, ಕನ್ನಡಿಗರು ಸಾಹಿತ್ಯಕವಾಗಿ ಒಂದುಗೂಡಲು ಹೆಣಗುತ್ತ ಬಂದಿದೆ.

ಹಿಂದೆ ಹೇಳಿದ "ಕರ್ನಾಟಕ ಸಭೆ''ಯು ೧೯೧೬ ರಲ್ಲಿ ಮಾಂಟೆಗ್ಯೂ ಚೆಮ್ಸಫರ್ಡರ ಮುಂದೆ ಮೊದಲ ಬಾರಿ ಕರ್ನಾಟಕ ಏಕೀಕರಣದ ಬೇಡಿಕೆಯನ್ನು ಮಂಡಿಸಿತು. ನಂತರ ೧೯೨೦ ರಲ್ಲಿ ನಾಗಪುರದಲ್ಲಿ ಅಖಿಲ ಕಾಂಗ್ರೆಸ್ಸಿನ ಇತಿಹಾಸಪ್ರಸಿದ್ಧ ಅಧಿವೇಶನವು ಸೇರಿ, ಭಾರತದಲ್ಲಿಯ ಪ್ರಾಂತಗಳನ್ನು ಭಾಷಾನ್ವಯವಾಗಿ ಪುನರ್ಘಟಿಸತಕ್ಕದ್ದೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಹಾಗೂ ಕಾಂಗ್ರೆಸ್ಸಿನ ಘಟನೆಯಲ್ಲಿ ಕರ್ನಾಟಕ ಪ್ರಾಂತವನ್ನು ನಿರ್ಮಿಸಿಕೊಂಡಿತು. ಪರ ಪ್ರಾಂತಗಳ ಕಾಂಗ್ರೆಸ ಸಮಿತಿಗಳಿಗೆ ಅಧೀನರಾಗಿದ್ದ ಕರ್ನಾಟಕ ಕಾಂಗ್ರೆಸ್ಸಿಗರಿಗೆ ಅಂದಿನಿಂದ ಪರಾವಲಂಬನವು ತಪ್ಪಿತು. ಕನ್ನಡ ಭಾಷೆಯನ್ನಾಡುವ ಸಕಲ ಪ್ರದೇಶಗಳ ಮೇಲೂ ಅಧಿಕಾರವಿರುವ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಸ್ಥಾಪಿತವಾಯಿತು. ಇದು ೧೯೨೫ ರಲ್ಲಿ ಕರ್ನಾಟಕ ಏಕೀಕರಣ ಚಳವಳಿಗೆ ಬೆಂಬಲಕೊಟ್ಟು, ತಾನೂ ಇದರಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿತು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಸಂಘ ಇವೆರಡೂ ಕರ್ನಾಟಕ ಪ್ರಾಂತರಚನೆಯ ಕಾರ್ಯದಲ್ಲಿ ಹೆಗಲಿಗೆ ಹೆಗಲು ಹಚ್ಚಿ ಹೋರಾಡತೊಡಗಿದವು.

ನೆಹರು ಸಮಿತಿಯ ಶಿಫಾರಸು

ಅಖಿಲ ಭಾರತ ಕಾಂಗ್ರೆಸ್ಸು ೧೯೨೭ ರಲ್ಲಿಯ ಮುಂಬಯಿ ಅಧಿವೇಶನದಲ್ಲಿ ಮೊಟ್ಟ ಮೊದಲು ಆಂಧ್ರ, ಸಿಂಧ ಹಾಗೂ ಕರ್ನಾಟಕ ಪ್ರಾಂತಗಳನ್ನು ರಚಿಸಬೇಕೆಂದು ನಿರ್ಧರಿಸಿತು. ಭಾರತದಲ್ಲಿ ಭಾಷಾನ್ವಯ ಪ್ರಾಂತ ರಚನೆಯನ್ನು ಮಾಡುವ ಬಗ್ಗೆ ಸರ್ವಪಕ್ಷ ಪರಿಷತ್ತು ನೆಹರು ಸಮಿತಿಯನ್ನು ೧೯೨೮ ರಲ್ಲಿ ನೇಮಿಸಿತು. ಈ ಪರಿಷತ್ತಿಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಹಾಗೂ ಅಖಿಲ ಕರ್ನಾಟಕ ಏಕೀಕರಣ ಸಂಘ ಇವುಗಳೆರಡರ ಪ್ರತಿನಿಧಿಗಳಾಗಿ ಶ್ರೀ ರಂ. ರಾ. ದಿವಾಕರರು ಹೋಗಿದ್ದರು. ಅವರು ಅಲ್ಲಿ ಅಂಕೆ-ಸಂಖ್ಯೆಗಳ ಆಧಾರದಿಂದ ಕರ್ನಾಟಕ ಪ್ರಾಂತ ರಚನೆಯ ಅವಶ್ಯಕತೆಯನ್ನು ಚನ್ನಾಗಿ ಪ್ರತಿಪಾದಿಸಿದರು. ಅನೇಕ ಧುರೀಣರ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರ ಕೊಟ್ಟರು. ಇದರ ಫಲವಾಗಿ ಪರಿಷತ್ತು ಕರ್ನಾ

ಟಕ ಪ್ರಾಂತ ರಚನೆಯು ಯೋಗ್ಯವೆಂಬುದನ್ನು ಹುನಗಂಡಿತು. ಈ ಸಮಿತಿಯ ವರದಿಯನ್ನು ಸರ್ವಪಕ್ಷ ಪರಿಷತ್ತು ಅದೇ ವರ್ಷ ಅಲಹಾಬಾದಿನ ತನ್ನ ಅಧಿವೇಶನದಲ್ಲಿ ಚರ್ಚಿಸಿ, ಕರ್ನಾಟಕ ಪ್ರಾಂತ ರಚನೆಗೆ ತನ್ನ ಒಪ್ಪಿಗೆಯನ್ನು ಕೊಟ್ಟಿತು.

೧೯೨೭ ರಲ್ಲಿ ಮತ್ತು ೧೯೨೮ ರಲ್ಲಿ ಕೇಂದ್ರ ವಿಧಿಮಂಡಲದಲ್ಲಿ ಕರ್ನಾಟಕ ಏಕೀಕರಣದ ಗೊತ್ತುವಳಿಯನ್ನು ಮಂಡಿಸಲಾಯಿತು. ಬ್ರಿಟಿಶ್ ಆಡಳಿತಗಾರರು ಭಾಷಾನ್ವಯ ಪ್ರಾಂತರಚನೆಗೆ ವಿರೋಧಿಗಳಾಗಿದ್ದುದರಿಂದಲೂ ಬಹುಮತವು ದೊರೆಯದಿದ್ದುದರಿಂದಲೂ ಅದು ಬಿದ್ದು ಹೋಯಿತು. ೧೯೨೯ ರಲ್ಲಿ ಮುಂಬಯಿ ಶಾಸನ ಸಭೆಯಲ್ಲಿಯೂ ಸೈಮನ್ ಕಮಿಶನ್ನಿನ ಮುಂದೂ ಕರ್ನಾಟಕ ಪ್ರಾಂತ ರಚನೆಯ ವಿಷಯವು ಬಂದಿತು. ೧೯೩೬ ರಲ್ಲಿ ಮದರಾಸಿನ ಡಾ| ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತಿನ ಆರನೆಯ ಅಧಿವೇಶನವು ಬೆಳಗಾಂವಿಯಲ್ಲಿ ನಡೆಯಿತು. ಇದರಲ್ಲಿ ಏಕೀಕರಣದ ಧ್ಯೇಯವು ಬರಿಯ ಬ್ರಿಟಿಶ್ ಕರ್ನಾಟಕಕ್ಕೆ ಮಾತ್ರ ಮರ್ಯಾದಿತವಾಗಿಲ್ಲವೆಂದೂ ಕನ್ನಡ ಸಂಸ್ಥಾನಗಳ ವಿಲೀನೀಕರಣವೂ ಇದರಲ್ಲಿ ಅಡಕವಾಗಿರುವುದೆಂದೂ ಸ್ಪಷ್ಟಪಡಿಸಲಾಯಿತು. ೧೯೩೭ರಲ್ಲಿ ಅಖಿಲ ಭಾರತ ಕಾಂಗ್ರೆಸ್ಸು ಕಲ್ಕತ್ತೆಯ ಅಧಿವೇಶನದಲ್ಲಿ ಕರ್ನಾಟಕ ಏಕೀಕರಣವನ್ನು ಎತ್ತಿ ಹಿಡಿಯಿತು ಹಾಗೂ ಈ ವರ್ಷ ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ, ಏಕೀಕರಣ ದಿನಾಚರಣೆಯು ನಡೆಯಿತು. ೧೯೩೮ ರಲ್ಲಿ ಮುಂಬಯಿ ಮತ್ತು ಮದ್ರಾಸಿನ ಶಾಸನ ಸಭೆಗಳು ಕರ್ನಾಟಕ ಏಕೀಕರಣದ ಗೊತ್ತುವಳಿಯನ್ನು ಸ್ವೀಕರಿಸಿದುವು. ಇದೇ ವರ್ಷ ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಸಮಿತಿಯು ವರ್ಧಾದಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಆಶ್ವಾಸನವನ್ನು ಕೊಟ್ಟಿತು ಹಾಗೂ ಮಹಾತ್ಮಾ ಗಾಂಧಿಯವರು ಕರ್ನಾಟಕ ಪ್ರಾಂತರಚನೆಗೆ ತಮ್ಮ ಬೆಂಬಲವಿರುವುದಾಗಿ ಸಾರಿದರು.

೧೯—೧—೧೯೪೬ ನೇ ದಿನ ಕರ್ನಾಟಕ ಏಕೀಕರಣ ಪರಿಷತ್ತಿನ ೧೦ ನೆಯ ಅಧಿವೇಶನವು ಮುಂಬಯಿಯಲ್ಲಿ ಶ್ರೀ ಬಿ. ಜಿ. ಖೇರರ ಅಧ್ಯಕ್ಷತೆಯಲ್ಲಿ ಸೇರಿತು. ಇದನ್ನು ಶ್ರೀ ವಲ್ಲಭಭಾಯಿ ಪಟೇಲರು ಉದ್ಘಾಟಿಸುತ್ತ, ಕರ್ನಾಟಕ ಪ್ರಾಂತರಚನೆಯಾಗಲೇಬೇಕೆಂದು ಒತ್ತಿ ಹೇಳಿದರು ಹಾಗೂ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದೊಡನೆಯೇ ಭಾಷಾನ್ವಯ ಪ್ರಾಂತಗಳನ್ನು ರಚಿಸುವುದಾಗಿ ಸಾರಿದರು.

ಕರ್ನಾಟಕಸ್ಥರ ಮಹಾ ಸಭೆ

೧೨-೯-೪೬ ರಲ್ಲಿ ದಾವಣಗೆರೆಯಲ್ಲಿ "ಕರ್ನಾಟಕಸ್ಥರ ಮಹಾಸಭೆ"ಯು ಸೇರಿತು. ಇದು ಅಖಿಲ ಕರ್ನಾಟಕವನ್ನು ಪ್ರತಿನಿಧೀಕರಿಸಿತ್ತು; ಇದಕ್ಕೆ ಸಕಲ ಕಡೆಗಳಲ್ಲಿಯ ಸಕಲ ಸಂಘಸಂಸ್ಥೆಗಳೂ ಮುಂಬಯಿ, ಮದರಾಸು, ಕೊಡಗು ಪ್ರಾಂತಗಳ ಶಾಸನ ಸಭೆಯ ಕನ್ನಡ ಸದಸ್ಯರೂ ಬಂದಿದ್ದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸ ಸಮಿತಿಯೂ ಏಕೀಕರಣ ಸಂಘವೂ ಒಟ್ಟಾಗಿ ಪ್ರಯತ್ನಿಸಿ ಈ ಮಹಾಸಭೆಯನ್ನು ಸೇರಿಸಿದುವು. ಶ್ರೀ ಎಂ. ಪಿ. ಪಾಟೀಲರು ಇದರ ಅಧ್ಯಕ್ಷರಾಗಿದ್ದರು. ಈ ಮಹತ್ವದ ಮಹಾಸಭೆಯಲ್ಲಿ ಸಂಯುಕ್ತ ಕರ್ನಾಟಕವನ್ನು ನಿರ್ಮಿಸಬೇಕೆಂಬ ಗೊತ್ತುವಳಿಯು ಸ್ವೀಕೃತವಾಯಿತು.

ಅತ್ತ ಮೈಸೂರು ಸಂಸ್ಥಾನದಲ್ಲಿ ೧೯೪೪ ರಲ್ಲಿ ಸ್ಥಾಪಿತವಾದ "ಪ್ರಜಾ ಸಂಯುಕ್ತ ಪಕ್ಷ"ವು ತನ್ನ ಹೋರಾಟವನ್ನು ಸಾಗಿಸಿತು. ಅದು ೧೬-೧೦-೪೭ರಲ್ಲಿ ಸಂಯುಕ್ತ ಕರ್ನಾಟಕ ರಚನೆಯಾಗಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಹಾಗೂ ಇದು ಅದೇ ವರ್ಷ ಕಾಂಗ್ರೆಸ್ಸಿನಲ್ಲಿ ತನ್ನ ಉದ್ದೇಶವನ್ನು ಸಾಧಿಸುವುದಕ್ಕಾಗಿ ಸೇರಿ ಹೋಯಿತು. ನಂತರ ೬-೧೧-೪೮ನೇ ದಿನ ಬೀರೂರಿನಲ್ಲಿ ಸೇರಿದ ಮೈಸೂರು ಕಾಂಗ್ರೆಸ್ ಸಮಿತಿಯು ಒಂದೇ ಕರ್ನಾಟಕ ಪ್ರಾಂತವಾಗಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿತು.

೧೯೪೭ ರಲ್ಲಿ ಪುನಃ ಮುಂಬಯಿ — ಮದ್ರಾಸ ಶಾಸನ ಸಭೆಗಳಲ್ಲಿ ಕರ್ನಾಟಕಪ್ರಾಂತರಚನೆಯ ಗೊತ್ತುವಳಿಯು ಸ್ವೀಕೃತವಾಯಿತು. ೧೯೪೮ ರಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಕರ್ನಾಟಕ ಪ್ರಾಂತರಚನೆಯ ಬಗ್ಗೆ ಕಾರ್ಯವನ್ನು ಕೈಕೊಳ್ಳದಿದ್ದರೆ ಶಾಸನ ಸಭೆಗಳಲ್ಲಿಯ ಕನ್ನಡ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುವುದಾಗಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಕಾಂಗ್ರೆಸ್ ವರಿಷ್ಠರಿಗೆ ಇಲ್ಲಿಯ ಪರಿಸ್ಥಿತಿಯನ್ನು ನಿವೇದಿಸಿತು. ಇದೇ ವರ್ಷ ಸಂಸ್ಥಾನಗಳು ವಿಲೀನವಾದ್ದರಿಂದ ಏಕೀಕರಣದ ದಾರಿಯು ಸುಗಮವಾಯಿತು

ಭಾರತ ಘಟನಾ ಸಮಿತಿಯು ಭಾಷಾನ್ವಯ ಪ್ರಾಂತಗಳನ್ನು ನಿರ್ಮಿಸುವ ಸಾಧ್ಯಾಸಾಧ್ಯತೆಯನ್ನು ವಿಚಾರಿಸಿ ವರದಿ ಮಾಡಲು ದರ್ ಸಮಿತಿಯನ್ನು ೧೯೪೮ ರಲ್ಲಿ ನೇಮಿಸಿತು. ಭಾಷಾನ್ವಯ ಪ್ರಾಂತರಚನೆಯನ್ನು ಮುಂದೂಡುವುದು ವಿಹಿತವೆಂದು ಈ ವರದಿಯಲ್ಲಿ ಹೇಳಲಾದ್ದರಿಂದ, ಪ್ರತಿಗಾಮೀ ಸ್ವರೂಪದ ಈ ವರದಿಯನ್ನು ಭಾರತದ ಎಲ್ಲ ಭಾಗಗಳವರೂ ಬಲವಾಗಿ ಪ್ರತಿಭಟಿಸಿದರು. ಆದ್ದರಿಂದ ಇದೇ ವರ್ಷ ತ್ರಿಮೂರ್ತಿ ಸಮಿತಿಯು (ನೆಹರೂ-ಪಟೇಲ-ಪಟ್ಟಾಭಿ) ಜಯಪುರಕಾಂಗ್ರೆಸ ಅಧಿವೇಶನದಲ್ಲಿ ರಚಿತವಾಯಿತು. ಇದರ ವರದಿಯು ನಿರಾಶಾದಾಯಕವಿದ್ದುದರಿಂದ ೮-೫-೪೯ ನೇ ದಿನ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯು ಹುಬ್ಬಳ್ಳಿಯಲ್ಲಿ ಸೇರಿ, ಕೇಂದ್ರ ಹಾಗೂ ಪ್ರಾಂತಗಳ ಶಾಸನಸಭೆಯಲ್ಲಿಯ ಕನ್ನಡ ಸದಸ್ಯರು ರಾಜೀನಾಮೆಯನ್ನು ಸಲ್ಲಿಸಬೇಕೆಂದು ವಿಧಿಸಿತು. ಇದರಿಂದ ಸಾಕಷ್ಟು ಪರಿಣಾಮವಾಗಲಿಲ್ಲ. ಆಂಧ್ರಪ್ರಾಂತವನ್ನು ರಚಿಸುವುದು ಮಾತ್ರ ಸುಲಭವೆಂದು ಕೇಂದ್ರ ಸರಕಾರದ ಅಭಿಪ್ರಾಯವಿತ್ತು.


೧೯೫೧ರ ಚುನಾವಣೆಯ ಕಾಲಕ್ಕೆ ಕಾಂಗ್ರೆಸ್ಸು ತಾನಿನ್ನೂ ಭಾಷಾನ್ವಯ ಪ್ರಾಂತರಚನೆಗೆ ಅಂಟಿಕೊಂಡಿರುವದಾಗಿ ಸಾರಿತು. ೧೯೫೩ರಲ್ಲಿ ಹೈದರಾ



ಏನು ಚೋಕ್ಕ ಭೋಜನಾ ಅಂತೀರಿ!

ಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ತಾನು ಭಾಷಾನ್ವಯ ಪ್ರಾಂತರಚನೆಯ ತತ್ವವನ್ನು ಒಪ್ಪಿದ್ದರೂ ಕೆಲಕಾಲದವರೆಗೆ ಆಂಧ್ರ ಪ್ರಾಂತದ ಹೊರತು ಬೇರಾವುದನ್ನೂ ರಚಿಸುವದಿಲ್ಲವೆಂದು ಹೇಳಲಾಯಿತು. ಆಗ ಕನ್ನಡ ಜನತೆಯ ತಾಳ್ಮೆಯು ಮೇರೆಯನ್ನು ಮೀರಿತು. ೧೯೫೩ ನೇ ಎಪ್ರಿಲ್ ತಿಂಗಳಿನಲ್ಲಿ ಕ. ಪ್ರಾಂ. ಕಾಂಗ್ರೆಸ ಸಮಿತಿಯ ವಿಶೇಷ ಸಭೆಯು ಹುಬ್ಬಳ್ಳಿಯಲ್ಲಿ ಸೇರಿ ೨೧-೧೦-೫೩ನೇ ದಿನಾಂಕದೊಳಗಾಗಿ ೧೯೫೪ರ ಅಂತ್ಯದೊಳಗಾಗಿ ಕರ್ನಾಟಕ ಪ್ರಾಂತರಚನೆಯನ್ನು ಮಾಡುವ ಆಶ್ವಾಸನವನ್ನು ಕೇಂದ್ರ ಸರಕಾರವು ಕೊಡದಿದ್ದರೆ ಕ. ಪ್ರಾಂ. ಕಾಂಗ್ರೆಸ ಸದಸ್ಯರು ಮೊದಲಿನ ಹೆಜ್ಜೆಯೆಂದು ತಮ್ಮ ಸದಸ್ಯತ್ವವನ್ನು ಬಿಟ್ಟುಕೊಡಬೇಕೆಂದೂ ಎಲ್ಲ ರಾಜ್ಯಗಳಲ್ಲಿಯ ಕನ್ನಡ ಸದಸ್ಯರು ರಾಜೀನಾಮೆಯನ್ನು ಕೊಟ್ಟು ಹೊರಕ್ಕೆ ಬರಬೇಕೆಂದೂ ನಿರ್ಧರಿಸಿತು.

ಅತ್ತ ದಾವಣಗೆರೆಯಲ್ಲಿ ೨೭-೫-೫೩ನೆಯ ದಿನ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು



ಇಂದಿನ ಕರ್ನಾಟಕ

೧-೧೧-೧೯೫೬

ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸೇರಿ, ಕೂಡಲೇ ಸಂಯುಕ್ತ ಕರ್ನಾಟಕದ ಗಡಿಸಮಿತಿಯನ್ನು ರಚಿಸದಿದ್ದರೆ ತಾನು ಶಾಂತಮಯ ಹೋರಾಟವನ್ನು ಪ್ರಾರಂಭಿಸುವುದಾಗಿ ಸಾರಿ ಹೇಳಿತು, ಹಾಗು ಅಗಸ್ಟ ತಿಂಗಳಿನಲ್ಲಿ ಹೋರಾಟವು ಅರಂಭವಾಗಿ ಅನೇಕ ನೂರಾರುಜನರು ಸೆರೆ ಹಿಡಿಯಲ್ಪಟ್ಟರು. ನಂತರ ಕ. ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರಿಗೆ ನೆಹರೂ ಅವರಿಂದ ಎರಡು ಪತ್ರಗಳು ಬಂದವು. ಅದರಲ್ಲಿ ಕರ್ನಾಟಕ ಪ್ರಾಂತರಚನೆಯ ಬಗ್ಗೆ ಆಶ್ವಾಸನವಿದ್ದುದರಿಂದ ಜನತೆಯು ಉಗ್ರೋಪಾಯಗಳನ್ನು ಬಿಟ್ಟುಕೊಟ್ಟಿತು.

ನಂತರ ಭಾರತ ಸರಕಾರವು ೧೯೫೩ ರಲ್ಲಿ ರಾಜ್ಯ ಪುನರ್ಘಟನಾ ಆಯೋಗವನ್ನು ನೇಮಿಸಿತು. ಅದು ತನ್ನ ವರದಿಯನ್ನು ೧೦-೧೦-೫೫ನೇ ದಿನ ಒಪ್ಪಿಸಿತು. ಈ ಸಮಯದಲ್ಲಿ ಮೈಸೂರಿನ ಕೆಲ ಮುಖಂಡರೂ ಕೆಲ ಅಧಿಕಾರಿಗಳೂ ಕೆಲ ಮಂತ್ರಿಗಳೂ ಕೆಲ ಶಾಸನ ಸಭೆಯ ಸದಸ್ಯರೂ ಎರಡು ಕರ್ನಾಟಕ ಪ್ರಾಂತಗಳಾಗಬೇಕೆಂಬ ಅಪಸ್ವರವನ್ನೆತ್ತಿದರು. ಮೈಸೂರು ಪ್ರದೇಶದ ಕಾಂಗ್ರೆಸ ಸಮಿತಿಯು ಸಹ ಇದಕ್ಕೆ ಮೊದಮೊದಲು ತನ್ನ ದನಿಯನ್ನು ಕೂಡಿಸಿತು. ರಾಜ್ಯಪುನರ್ರಚನಾ ಆಯೋಗವು ಬೆಂಗಳೂರಿಗೆ ಬಂದಾಗ ಮೈಸೂರು ಸರಕಾರವು ತನ್ನ ಸಾಕ್ಷ್ಯವನ್ನು ಕೊಡಲಿಲ್ಲ ಸಹ. ಆನಂತರವೂ ಈ ಚಳವಳಿಯು ಅಲ್ಲಿ ಸ್ವಲ್ಪಕಾಲ ನಡೆಯಿತು. ಇತ್ತ ಅಲ್ಲಿಯ ಸಮಗ್ರ ಜನಸಾಮಾನ್ಯರೂ ಸಾರ್ವಜನಿಕ ಸಂಸ್ಥೆಗಳೂ ಸಕಲ ವೃತ್ತಪತ್ರಗಳೂ ಕನ್ನಡ ಸಾಹಿತ್ಯ ಪರಿಷತ್ತೂ ಸಂಯುಕ್ತ ಕರ್ನಾಟಕ ಪ್ರಾಂತರಚನೆಯನ್ನು ಎತ್ತಿ ಹಿಡಿದಿದ್ದವು. ಇದರ ಫಲವಾಗಿ ರಾಜ್ಯಪುನರ್ಘಟನಾ ಆಯೋಗವು ಒಂದೇ ಕರ್ನಾಟಕ ಪ್ರಾಂತವಾಗಬೇಕೆಂದು ವರದಿಯಲ್ಲಿ ಹೇಳಿತು ಹಾಗು ರಾಜ್ಯಪುನರ್ಘಟನಾ ವಿಧೇಯಕಕ್ಕೆ ೩೧-೮-೫೬ನೇ ದಿನ ರಾಷ್ಟ್ರಪತಿಗಳ ಅಂಕಿತವು ಬಿದ್ದುದರಿಂದ ಇಂದು ಹೊಸ ಮೈಸೂರು ರಾಜ್ಯದ ಉದಯವಾಗಿದೆ.

ಸಂಯುಕ್ತ ಕರ್ನಾಟಕದ ಸ್ವರೂಪ

ಹೊಸಮೈಸೂರು ರಾಜ್ಯವೆಂಬ ಕರ್ನಾಟಕ ಪ್ರಾಂತವು ಅಭೂತಪೂರ್ವವಾದುದು. ಹಿಂದೆ ಕರ್ನಾಟಕವು ಕಾವೇರಿಯಿಂದ ಗೋದಾವರಿಯ ವರೆಗೆ ವಿಸ್ತಾರವಾಗಿದ್ದರೂ ಅದು ಇಂದಿನಂತೆ ಹಿಂದೆಂದೂ ಒಂದೇ ಪ್ರಾಂತವಾಗಿರಲಿಲ್ಲ; ಈ ಪ್ರದೇಶದಲ್ಲಿ ನೂರಾರು ರಾಜ್ಯಗಳಿದ್ದುವು.

ಈ ಕರ್ನಾಟಕ ಪ್ರಾಂತದ ವಿಸ್ತೀರ್ಣವು ೭೨೭೩೦ ಚದುರು ಮೈಲುಗಳು; ಜನ ಸಂಖ್ಯೆಯು ೧ ಕೋಟಿ, ೯೦ ಲಕ್ಷ. ವಿಸ್ತೀರ್ಣದ ದೃಷ್ಟಿಯಿಂದ ಕರ್ನಾಟಕವು ಅಖಿಲ ಭಾರತದ ೧/೧೬ ಕ್ಕೆ ಸ್ವಲ್ಪ ಕಡಿಮೆಯಿದೆ. ಇದರ ಜನಸಂಖ್ಯೆಯು ಭಾರತದ ಜನಸಂಖ್ಯೆಯ ೧/೧೯ ದಷ್ಟಿದೆ.

ಸಂಯುಕ್ತ ಕರ್ನಾಟಕವು ಮದರಾಸು ರಾಜ್ಯದ ೧ ೧/೩ ಪಟ್ಟು, ಹಿಂದಿನ ಮೈಸೂರು ಸಂಸ್ಥಾನದ ೨ ೧/೨ ಪಟ್ಟು, ಬ್ರಹ್ಮದೇಶದ ೧/೪ ದಷ್ಟು, ಜಪಾನಿನ ಅರ್ಧಕ್ಕಿಂತ ಹೆಚ್ಚು, ಫ್ರಾನ್ಸಿನ ೧/೩ ದಷ್ಟು, ಆಲ್ಬೇನಿಯಾ, ಆಸ್ಟ್ರಿಯಾ, ಬೆಲ್ಜಿಯಂ, ಡೆನ್ಮಾರ್ಕ್‌ಗಳ ಒಟ್ಟು ವಿಸ್ತೀರ್ಣಕ್ಕಿಂತ ದೊಡ್ಡದೂ ಇರುತ್ತದೆ.

ಇಲ್ಲಿಯ ಜನಸಂಖ್ಯೆಯು ಲಂಕೆಯ ೨ ೧/೨ ದಷ್ಟು, ಬ್ರಹ್ಮದೇಶದ ಮೂರರಷ್ಟು, ಫ್ರಾನ್ಸಿನ ಅರ್ಧದಷ್ಟು, ಅಲ್ಬೇನಿಯಾ, ಆಸ್ಟ್ರಿಯಾ, ಬೆಲ್ಜಿಯಂ, ಡೆನ್ಮಾರ್ಕ್‌ಗಳ ಒಟ್ಟು ಜನಸಂಖ್ಯೆಯಷ್ಟು, ಪಾಕಿಸ್ಥಾನದ ೧/೪ ದಷ್ಟು, ಗ್ರೇಟ್‌ಬ್ರಿಟನ್ನಿನ ೧/೩ ದಷ್ಟು ಇದೆ.

ಸಾಂಪತ್ತಿಕ ಸ್ಥಿತಿ

ಖನಿಜ ಸಂಪತ್ತು : ಖನಿಜ ಸಂಪತ್ತಿನ ದೃಷ್ಟಿಯಿಂದ ಕರ್ನಾಟಕವು ಅತ್ಯಂತ ಅದೃಷ್ಟಶಾಲಿಯಾಗಿದೆ. ಇಲ್ಲಿ ಲೋಹದ ಮೂರು ಮುಖ್ಯ ವಲಯಗಳಿವೆ (೧) ಸೊಂಡೂರು, ಶಿವಮೊಗ್ಗ-ಬೆಳಗಾವಿ ಇವುಗಳ ಮಧ್ಯಪ್ರದೇಶ (೨) ಕೊಡಗು-ನೀಲಗಿರಿಗಳ ಮಧ್ಯಂತರದಲ್ಲಿಯ ವಿಭಾಗ (೩) ಕೋಲಾರ-ಹಟ್ಟಿ ಪ್ರದೇಶ. "ಭಾರತದ ಈಶಾನ್ಯ ಭಾಗದಲ್ಲಿಯ ಭೂಗರ್ಭದಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಲೋಹಗಳು ಅಡಗಿವೆ. ಇಂತಹ ಎರಡನೆಯ, ಆದರೆ ಅಷ್ಟೇ ಮಹತ್ವವುಳ್ಳ, ಲೋಹಗಳ ತವರುಮನೆಯು ಕರ್ನಾಟಕವಾಗಿದೆ ಎಂಬ ಮಾತನ್ನು ಮರೆಯತಕ್ಕದ್ದಲ್ಲ," ಎಂದು ಪ್ರೊ ಲೇಲೆಯವರು "ಕರ್ನಾಟಕದ ಭೂವರ್ಣನೆ" ಎಂಬ ಅಂಗ್ಲ ಲೇಖನದಲ್ಲಿ ಇತ್ತೀಚೆಗೆ ಬರೆದಿರುವುದನ್ನು ಇಲ್ಲಿ ಲಕ್ಷಿಸಬಹುದು.

ಶಿವಮೊಗ್ಗಾ ಜಿಲ್ಹೆಯ ಕುಮುಸಿಯಲ್ಲಿ ಮ್ಯಾಂಗನೀಜ ಲೋಹವು ವಿಪುಲವಾಗಿ ದೊರೆಯುತ್ತಿದೆ; ಇದು ಬೆಳಗಾವಿ, ಉತ್ತರ ಕನ್ನಡ ಹಾಗೂ

ಬಳ್ಳಾರಿ ಜಿಲ್ಲೆಗಳಲ್ಲಿ ಸಹ ಅಂತರ್ಗತವಾಗಿದೆ. ಮ್ಯಾಂಗನೀಜ ಲೋಹವು ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿಯೂ ದೊರೆಯುತ್ತದೆ. ಮೈಸೂರು ಸಂಸ್ಥಾನವು ಹೆಚ್ಚಾಗಿ ಉಳಿದ ಮ್ಯಾಂಗನೀಜನ್ನು ಪರರಾಷ್ಟ್ರಗಳಿಗೆ ಕಳಿಸುತ್ತಾ ಬಂದಿದೆ. ಇಲ್ಲಿ ಕಲ್ಲಿದ್ದಲು ದೊರೆಯದಿದ್ದರೂ ಅದರ ಕೆಲಸವನ್ನು ಜೋಗದ ವಿದ್ಯುತ್ತು ಹಾಗೂ ತುಂಗಭದ್ರಾ ಯೋಜನೆಯ ಜಲವಿದ್ಯುತ್ತು ಮಾಡಬಲ್ಲದು. ಈ ವಿದ್ಯುತ್ತಿನ ದರವೂ ಕಡಿಮೆ.

ಬೆಳಗಾವಿಯಲ್ಲಿ ಸಿಮೆಂಟನ್ನು ಉತ್ಪಾದಿಸಲು ಯೋಗ್ಯವಾದ ಸುಣ್ಣದ ಕಲ್ಲುಗಳಿವೆಯೆಂದೂ, ವಿಜಾಪುರದಲ್ಲಿ ಉಕ್ಕಿನ ಉದ್ದಿಮೆಯಲ್ಲಿ ಉಪಯೋಗಿಸಲು ಯೋಗ್ಯವಾದ ಸುಣ್ಣದ ಕಲ್ಲಿನ ಬಂಡೆಗಳು ಹೇರಳವಾಗಿವೆಯೆಂದೂ "ಮಿನರಲ್ ರಿಸೋರ್ಸಿಸ್ ಆಫ್ ಬಾಂಬೆ'' ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಈ ಪ್ರದೇಶವು ಮಹತ್ವದ ಸಿಮೆಂಟಿನ ಉದ್ದಿಮೆಗೆ ಯೋಗ್ಯವಾದ್ದರಿಂದ ಬಾಗಲಕೋಟೆಯಲ್ಲಿಯ ಸಿಮೆಂಟ್ ಕಾರ್ಖಾನೆಯು ಯಶಸ್ವಿಯಾಗಿ ನಡೆದಿದೆ.

ಜಗತ್ತಿನಲ್ಲಿಯೇ ದ್ವಿತೀಯ ಸ್ಥಾನವನ್ನು ಪಡೆದ ಪಾಟಿಯ ಕಲ್ಲುಗಳು ವಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಹಬ್ಬಿವೆ. ಮೊದಲಿನ ಸ್ಥಾನವನ್ನು ಇಟಲಿಯು ದೊರಕಿಸಿದೆ.

ಗಾಜನ್ನು ತಯಾರಿಸಲು ಬರುವಂತಹ ಶುದ್ಧ ತರಗತಿಯ ಉಸುಕಿನ ಕಲ್ಲುಗಳ ಥರಗಳು ವಿಜಾಪುರ ಜಿಲ್ಲೆಯ ಕಲಾದಗಿಯಲ್ಲಿವೆ. ಈ ಥರಗಳು ೧೦ ರಿಂದ ೫೦ ಫೂಟು ಆಳಗಳ ವರೆಗೂ ಹೋಗಿವೆ. ಆದ್ದರಿಂದ ಇಲ್ಲಿ ಕಾಜಿನ ಕಾರ್ಖಾನೆಗಳನ್ನು ನಿಶ್ಚಿತವಾಗಿ ತೆರೆಯಬಹುದಾಗಿರುವದು.

ಲೋಹಗಳು

ಭಾರತದಲ್ಲಿ ಅಲ್ಯೂಮಿನಿಯಂ ಲೋಹವು ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಇದನ್ನು ಬೆಳಗಾವಿಯಲ್ಲಿ ದೊರಕಿಸುವುದು ಸಾಧ್ಯ. ಈ ಜಿಲ್ಲೆಯ ಭೂಗರ್ಭದಲ್ಲಿ ಅಲ್ಯೂಮಿನಿಯಂ ತಯಾರಿಕೆಗೆ ಬೇಕಾದ ಬಾಕ್ಸೈಟೆಂಬ ಲೋಹವು ಬೇಕಾದಷ್ಟು ಪ್ರಮಾಣದಲ್ಲಿ ಅಡಗಿದೆ. ಇದು ಕೆಲಮಟ್ಟಿಗೆ ಉತ್ತರಕನ್ನಡ ಜಿಲ್ಲೆಯಲ್ಲಿಯೂ ದೊರೆಯುತ್ತದೆ.

ನಮ್ಮದು ಚಿನ್ನದ ನಾಡಾದರೂ, ಕೋಲಾರವನ್ನು ಬಿಟ್ಟು ಬೇರೆಡೆಯಲ್ಲಿ ಅಡಗಿದ ಚಿನ್ನವನ್ನು ದೊರಕಿಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಭೂಗರ್ಭಶಾಸ್ತ್ರಜ್ಞರ ಅಭಿಪ್ರಾಯದ ಪ್ರಕಾರ ಚಿನ್ನವು ಕಪ್ಪತ್ತಗುಡ್ಡದಲ್ಲಿ ಮಾತ್ರವಲ್ಲದೆ, ಕೋಡ, ರಾಣೇಬೆನ್ನೂರ, ಮುಳಗುಂದ, ಕೊಲಾರ, ನ್ಯಾಮತಿ (ಶಿವಮೊಗ್ಗ ಜಿಲ್ಲೆ), ತರೀಕೆರೆ ತಾಲೂಕು (ಕಡೂರು ಜಿಲ್ಲೆ) ಚಿತ್ರದುರ್ಗದ ಬಳಿ, ಶ್ರೀರಂಗಪಟ್ಟಣ (ಮೈಸೂರು ಜಿಲ್ಲೆ)ದ ಬಳಿ, ಹುಣಸೂರು ಹಾಗೂ ಕೃಷ್ಣರಾಜಪೇಟೆಯ ಸುತ್ತಲಿನ ಪ್ರದೇಶ— ಇವುಗಳಲ್ಲದೆ, ಭಾರತದಲ್ಲಿ ದೊರೆಯುವ ಒಟ್ಟು ಚಿನ್ನದಲ್ಲಿ ೮೦% ಕೋಲಾರದಲ್ಲಿ ದೊರೆಯುತ್ತದೆ.

ಯಂತ್ರ ಮೊದಲಾದುವುಗಳಿಗೆ ಅವಶ್ಯವಿರುವ ಕಬ್ಬಿಣದ ಅದುರು ಬಾಬಾಬುಡನ್‌ಗಿರಿ, ಶಿವಮೊಗ್ಗಾ ಚಿತ್ರದುರ್ಗ ಜಿಲ್ಲೆಗಳು ಹಾಗೂ ಮುಳವಳ್ಳಿ (ಮಂಡ್ಯ ಜಿಲ್ಲೆ) ಯಲ್ಲಿ ಹೇರಳವಾಗಿದೆ. ಬಾಬಾಬುಡನ್‌ಗಿರಿಯಲ್ಲಿ (ಜಿಲ್ಲಾ ಶಿವಮೊಗ್ಗಾ) ೧೫ ಕೋಟಿ ಟನ್ ಕಬ್ಬಿಣದ ಅದುರು ಇದೆ. ಇದನ್ನೇ ಭದ್ರಾವತಿ ಕಾರಖಾನೆಯಲ್ಲಿ ಉಪಯೋಗಿಸುತ್ತಾರೆ. ಕೆಮ್ಮನಗುಂಡಿ ಗುಡ್ಡದಲ್ಲಿ ೧೯೪೬ ರಲ್ಲಿ ೩೬೦೦೦ ಟನ್ ಕಬ್ಬಿಣದ ಅದುರು ದೊರೆತರೆ, ೧೯೪೮ ರಲ್ಲಿ ೫೩೦೦೦ ಟನ್ ದೊರೆಯಿತು. ಇದಕ್ಕೂ ಉಜ್ವಲ ಭವಿಷ್ಯವಿದೆ.

ಉಕ್ಕಿನ ತಯಾರಿಕೆಗೆ ಶ್ರೇಷ್ಠವಾದ ಮ್ಯಾಂಗನೀಜ ಲೋಹದಿಂದೊಡಗೂಡಿದ ಕಬ್ಬಿಣವು ತೇಗೂರಿನಲ್ಲಿಯೂ (ಕಲಘಟಗಿ ತಾಲೂಕ ಧಾರವಾಡ ಜಿಲ್ಲೆ) ಕಪ್ಪತ್ತಗುಡ್ಡದಲ್ಲಿಯೂ (ಗದಗ ತಾಲೂಕು, ಧಾರವಾಡ ಜಿಲ್ಲೆ) ದೊರೆಯುತ್ತದೆ.

ವಿಜಾಪುರ ಜಿಲ್ಲೆಯ ಕೆಲವು ಭಾಗಗಳಲ್ಲಿ, ಹೊನ್ನಾವರದ (ಉ. ಕನ್ನಡ) ಬಳಿ, ಬಳ್ಳಾರಿ, ಸೊಂಡೂರು ಮುಂತಾದೆಡೆಗಳಲ್ಲಿ ಸಹ ಕಬ್ಬಿಣವಿದೆ.

ವಿದ್ಯುತ್ತಿನ ಕೆಲಸವೇ ಮೊದಲಾದುವುಗಳಿಗೆ ಅತ್ಯಂತ ಅವಶ್ಯವಾದ ತಾಮ್ರವು ಸ್ವಲ್ಪಮಟ್ಟಿಗೆ

ಕಪ್ಪತಗುಡ್ಡದಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿಯೂ ಇದೆ. ಇತರ ಸ್ಥಳಗಳಲ್ಲಿ ಇದ್ದಿರುವ ಸಂಭವವು ವಿಶೇಷವಾಗಿದ್ದರೂ ಇನ್ನೂ ಸಂಶೋಧನೆಯು ನಡೆದಿಲ್ಲ.

ಅಭ್ರಕವು (ಕಾಗೆಬಂಗಾರ) ಗೋಕಾಕ, ಕಂಪಲಿ, ರಾಯದುರ್ಗ, ಶೃಂಗೇರಿ, ಹಾಸನ, ಹೊಳೆನರಸೀಪುರ ಮೊದಲಾದ ಕಡೆಗಳಲ್ಲಿದೆ. ಪ್ರತಿ ವರ್ಷ ಮೈಸೂರು ಜಿಲ್ಲೆಯಲ್ಲಿ ೨೦೦ ಟನ್ ಸೀಸವೂ ಕ್ರೋಮಿಯಮೂ ದೊರೆಯುತ್ತವೆ.

ಅರಣ್ಯಸಂಪತ್ತು

ಕೊಡಗು, ಉತ್ತರ ಹಾಗೂ ದಕ್ಷಿಣ ಕನ್ನಡಗಳಲ್ಲಿಯ ಅರಣ್ಯಸಂಪತ್ತು ವರ್ಣನಾತೀತವಾಗಿದೆ. ಉತ್ತರ ಕನ್ನಡ, ಧಾರವಾಡದ ಪಶ್ಚಿಮ ಭಾಗ, ಬೆಳಗಾವಿ ಜಿಲ್ಲೆಗಳಲ್ಲಿ ೯೦% ಪ್ರದೇಶವು ಅರಣ್ಯದಿಂದ ವ್ಯಾಪ್ತವಾಗಿದೆ. ಇದರ ವಿಸ್ತಾರವು ೨ ಕೋಟಿ ಎಕರೆ !! ಅರಣ್ಯದ ವರಪ್ರಸಾದದಿಂದ ಕಾಗದದ ಕಾರಖಾನೆ, ಹಡಗು ಕಟ್ಟುವ ಉದ್ದಿಮೆ, ಬೆಂಕೀಪೆಟ್ಟಿಗೆಯ ಕಾರಖಾನೆ, ಪ್ಲಾಯವುಡ್ಡಿನ ಉದ್ದಿಮೆ, ಜೇನಿನ ವ್ಯವಸಾಯ, ಆಯುರ್ವೇದ ಔಷಧಿಗಳ ತಯಾರಿಕೆ ಮೊದಲಾದವನ್ನು ಇಲ್ಲಿ ಪ್ರಾರಂಭಿಸಬಹುದಾಗಿದೆ. ಇಲ್ಲಿಯ ಗಿಡಮೂಲಿಕೆಗಳಿಂದ ಇಡೀ ಭಾರತಕ್ಕೆ ಸಾಕಾಗಿ ಉಳಿಯುವಷ್ಟು ಔಷಧಿಗಳನ್ನು ತಯಾರಿಸಬಹುದಾಗಿದೆ.

ಬಿದಿರು ಬೆತ್ತಗಳ ಉದ್ದಿಮೆಗೂ ಈ ಪ್ರದೇಶವು ತವರುಮನೆಯಾಗಬಲ್ಲುದು. ಮುಂಬಯಿ ಕರ್ನಾಟಕವೊಂದರಲ್ಲಿಯೇ ಪ್ರತಿವರ್ಷ ಕಡಿಮೆಯೆಂದರೆ ೨೦,೪೫,೩೦೦ ಬಿದುರುಗಳನ್ನು ವಿಶೇಷ ಪ್ರಯತ್ನವಿಲ್ಲದೆ ಕೀಳಲಾಗುತ್ತದೆ. ಬೆತ್ತದ ಕೆಲಸವು ಉತ್ತಮ ಗೃಹೋದ್ಯಮವಾಗಬಲ್ಲದು- ಈ ಪ್ರದೇಶದ ಅಡವಿಗಳಲ್ಲಿ ಗಂಧದ ಮರಗಳಿವೆ. ಗಂಧದ ಕೆತ್ತನೆಯ ಕೆಲಸವೂ ಉತ್ತಮ ಗೃಹೋದ್ಯಮವಾಗಬಹುದು. ಇದು ಸಾಗರ ಸೊರಬಗಳಲ್ಲಿ (ಶಿವಮೊಗ್ಗಾ ಜಿಲ್ಹಾ) ಹೀಗಾಗಿದೆ. ೧೯೪೯ರಲ್ಲಿ ಉತ್ತರ ಕರ್ನಾಟಕದಲ್ಲಿ ೪,೧೬,೦೦೦ ರೂ. ಬೆಲೆಯ ಗಂಧದ ಗಿಡಗಳೂ ೧,೮೮,೦೦೦ ರೂ. ಬೆಲೆಯ ಬಿದಿರೂ ೫,೬೭,೦೦೦ ರೂ. ಬೆಲೆಯ ಹುಲ್ಲೂ ಅಡವಿಯಿಂದ ದೊರೆತವು.

ಹೀಗೆ ಯಾವುದೇ ದೃಷ್ಟಿಯಿಂದ ನೋಡಿದರೂ ಏಕೀಕೃತ ಕರ್ನಾಟಕಕ್ಕೆ ಸಕಲ ರಂಗಗಳಲ್ಲಿಯೂ ಅತ್ಯಂತ ಉಜ್ವಲವಾದ ಭವಿಷ್ಯವಿರುವುದೆಂದು ಸ್ಪಷ್ಟವಾಗುತ್ತದೆ.

ಕೃಷಿಸಂಪತ್ತು

ಈ ಫಲವತ್ತಾದ ಹೊಸಮೈಸೂರು ರಾಜ್ಯದಲ್ಲಿ ತಕ್ಕ ನೀರಾವರಿ ಯೋಜನೆಗಳಾದವೆಂದರೆ ಕರ್ನಾಟಕವು ಭಾರತದ ಕಣಜವಾಗುವುದರಲ್ಲಿ ಸಂಶಯವಿಲ್ಲವೆಂಬ ಅಂಶವನ್ನು ಮುಂದಿನ ಅಂಕೆ-ಸಂಖ್ಯೆಗಳು ತಿಳಿಸುತ್ತವೆ. ಹೊಸ ಮೈಸೂರಿನಲ್ಲಿ ಸಮಾವೇಶವಾಗುವ ಸಕಲ ಪ್ರದೇಶಗಳ ಅಂಕೆ-ಸಂಖ್ಯೆಗಳು ಪ್ರತ್ಯೇಕವಾಗಿಉಪಲಬ್ಧವಿಲ್ಲ. ಅದ್ದರಿಂದ ಮೊದಲು ಮೈಸೂರು ಸಂಸ್ಥಾನ ಹಾಗೂ ಧಾರವಾಡ, ಬೆಳಗಾವಿ ಮತ್ತು ವಿಜಾಪೂರ ಜಿಲ್ಲೆಗಳಿಗೆ ಸಂಬಂಧಿಸಿದ ಒಟ್ಟುಅಂಕೆ-ಸಂಖ್ಯೆಗಳನ್ನು ಸಮಾಲೋಚಿಸುವಾ. ಈ ಸಂದರ್ಭದಲ್ಲೊಂದು ಮಾತನು ಹೇಳಬೇಕು. ಉತ್ತರ ಕರ್ನಾಟಕವು ಆಹಾರ ಧಾನ್ಯದಲ್ಲಿ ಸ್ವಾವಲಂಬಿಯಾಗಿದೆ ಮಾತ್ರವಲ್ಲ ಈ ಪ್ರದೇಶವು ಉಳಿಕೆಯ ಪ್ರದೇಶವಾಗಿದೆ. ಎಣ್ಣೆಯ ಕಾಳುಗಳು ಹಾಗೂ ಅರಳಿ ಇವು ಇಲ್ಲಿ ಉತ್ಪಾದನೆಯಾಗುವಷ್ಟು ಹೊಸ ಮೈಸೂರಿನ ಯಾವ ಭಾಗದಲ್ಲಿಯೂ ಆಗುವುದಿಲ್ಲ; ಗೋದಿಗೂ ಈ ಮಾತು ಅನ್ವಯಿಸುತ್ತದೆ.

ಮೈಸೂರು ಸಂಸ್ಥಾನ ಹಾಗೂ ಈ ಮೂರು ಜಿಲ್ಲೆಗಳಲ್ಲಿಯ ಬೆಳೆಗಳ ಪ್ರದೇಶವು ಇಂತಿದೆ: ಗೋಧಿ ಮತ್ತು ಬಾರ್ಲಿ ೬,೨೩,೪೦೨ ಎಕರೆ ; ಜೋಳ, ಸಜ್ಜೆ, ರಾಗಿ, ೬೫,೪೮,೮೨೩ ಎಕರೆ ; ಎಣ್ಣೆಯ ಕಾಳುಗಳು ೧೭,೨೩,೮೦೩ ; ಅರಳೆ ೮,೬೮,೮೦೩ ; ಸೆಣಬು ಹಾಗೂ ಇತರ ನಾರುಗಳು ೨೫,೯೬೮ ; ಭತ್ತ ೧೧,೦೮,೩೮೬ ಎಕರೆ.

ಈ ಪ್ರದೇಶದಲ್ಲಿಯ ಸಾಗುವಳಿ ಕ್ಷೇತ್ರವು ೧೯೫೧ರ ಜನಗಣನೆಯ ಪ್ರಕಾರ ೧,೪೬,೭೫,೨೯೮ ಎಕರೆ ಎಂದು ತಿಳಿದು ಬಂದಿದೆ.

ಶೇಷಾದ್ರಿ ಸಮಿತಿಯ ವರದಿಯ ಪ್ರಕಾರ ರಾಯಚೂರು ಕಲಬುರ್ಗಿ ಜಿಲ್ಲೆಗಳಲ್ಲಿಯ ಸಾಗುವಳಿಕ್ಷೇತ್ರವು ೬೧,೦೦,೦೦೦ ಎಕರೆ ಇರುತ್ತದೆ.

ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವರ್ಷಂಪ್ರತಿ ಸರಾಸರಿ ೧೩,೧೮,೭೪೦ ಟನ್ನು ರಾಯಚೂರು ಕಲಬುರ್ಗಿ ಜಿಲ್ಲೆಗಳಲ್ಲಿ ವರ್ಷಂಪ್ರತಿ ಸರಾಸರಿ ೫,೯೦,೦೦೦ ಟನ್ನು ಆಹಾರ ಧಾನ್ಯಗಳು ಬೆಳೆಯುತ್ತವೆ.

ನಿಪ್ಪಾಣಿ (ಬೆಳಗಾವಿ ಜಿಲ್ಲೆ) ಯ ತಂಬಾಕು ಅತಿ ಪ್ರಸಿದ್ಧವಾದುದು. ಈ ಪ್ರದೇಶದಲ್ಲಿ ಸಿಗರೇಟ ಕಾರಖಾನೆಯಾಗುವುದರಲ್ಲಿ ಸಂದೇಹವಿಲ್ಲ. ವಿಶ್ವ ವಿಖ್ಯಾತವಾದ ವರ್ಜೀನಿಯಾದ ಹೊಗೆಸೊಪ್ಪನ್ನು (ತಂಬಾಕು) ಇಲ್ಲಿ ಬೆಳೆಯಬಹುದಂತೆ.

ಕರಾವಳಿಯ ಮಹತ್ವ

೨೦೦ ಮೈಲುಗಳಿಗಿಂತಲೂ ಹೆಚ್ಚಾಗಿರುವ ಸಮುದ್ರ ತೀರದ ಮಹತ್ವವನ್ನು ಎಷ್ಟು ಬಣ್ಣಿಸಿದರೂ ತೀರದು. ಅತಿ ಪೂರ್ವಕಾಲದಲ್ಲಿ ಕರ್ನಾಟಕವು ಇಲ್ಲಿಂದ ಪರದೇಶಗಳೊಡನೆ ವ್ಯಾಪಾರವನ್ನು ನಡೆಸಿತ್ತು. ಹೆಚ್ಚು ಸುಧಾರಿಸಿದ ಇಂದಿನ ಕಾಲದಲ್ಲಿ ಮೊದಲಿಗಿಂತಲೂ ಹೆಚ್ಚಾಗಿ ಸಮುದ್ರ ವ್ಯಾಪಾರವನ್ನು ಮಾಡಿ, ಇಲ್ಲಿಯ ಸಂಪತ್ತನ್ನು ಹೆಚ್ಚಿಸಲು ಸಾಧ್ಯವಿದೆ. ಮಂಗಳೂರು, ಮಲ್ಪೆ, ಭಟಕಳ, ಕಾರವಾರ ಮೊದಲಾದ ಕೆಲವು ಬಂದರುಗಳೂ ಕರಾವಳಿಯನ್ನು ಮುಖ್ಯ ನಗರಗಳಿಗೆ ಸಂಬಂಧಿಸುವ ಉಗಿಬಂಡಿಯ ಸಂಪರ್ಕವೂ ಅಗತ್ಯವಾಗಿವೆ. ಈ ಕಾರ್ಯಗಳು ಕ್ರಮವಾಗಿ ಅಭಿವೃದ್ಧಿಯಾದಹಾಗೆಲ್ಲ ನಮ್ಮ ವಾಣಿಜ್ಯವೂ ಬೆಳೆಯುತ್ತ ಹೋಗುವುದು.

ಈಗ ಈ ಕರಾವಳಿಯಲ್ಲಿ ಬರಿಯ ಮೀನುಗಾರಿಕೆಯ ಉದ್ದಿಮೆಯು ನಡೆದಿದೆ. ಆದರೆ ಶಾಸ್ತ್ರೀಯ ಪದ್ಧತಿಯಿಂದ ಮೀನುಗಳನ್ನು ಕೆಡದಂತೆ ಕಾದಿಡುವ ಕ್ರಮವು ಮೀನುಗಾರರಿಗೆ ಗೊತ್ತಿಲ್ಲದ್ದರಿಂದ ಮತ್ತು ಅವುಗಳನ್ನು ನೆಲಮಾರ್ಗವಾಗಿ ಸಾಗಿಸುವ ಸೌಕರ್ಯವಿರದ್ದರಿಂದ, ಇದು ಬೆಳೆಯ ಬೇಕಾದಷ್ಟು ಬೆಳೆದಿಲ್ಲ. ಆದರೂ ಬರಿಯ ಉತ್ತರಕನ್ನಡ ಜಿಲ್ಲೆಯಿಂದ ಪ್ರತಿ ವರ್ಷ ಮುಂಬಯಿಗೆ ೧೫ಲಕ್ಷ ಮಣ ಮೀನು ಹೋಗುತ್ತದೆ. ಇದು ಭಾರತದಲ್ಲಿ ದೊರಕುವ ಒಟ್ಟು ಮೀನದ ೧/೧೦ ಭಾಗವಾಗಿದೆ.

ಸಮುದ್ರತೀರದಲ್ಲಿ ಬೆಳೆಯುವ ತೆಂಗು ಹಾಗೂ ತಾಳೆಯ ಮರಗಳಿಂದ ಈಗಾಗಲೇ ಸಾಕಷ್ಟು ಸಂಪತ್ತು ದೊರೆಯುತ್ತಿದೆ. ಇನ್ನು ಮುಂದೆ ಈ ವ್ಯವಸಾಯವೂ ವಿಶೇಷ ಬೆಳೆಯುವುದು.

ಈವರೆಗೆ ಕರ್ನಾಟಕವು ವಿವಿಧ ರಾಜ್ಯಗಳಲ್ಲಿ ಹರಿದು ಹಂಚಿಹೋಗಿದ್ದರಿಂದ ಈ ಸಾಧನ ಸಂಪತ್ತಿಯ ಉಪಯೋಗವಾಗಿರುವದಿಲ್ಲ. ಇದೀಗ ಒಗ್ಗೂಡಿದ ಕರ್ನಾಟಕ ರಾಜ್ಯವು ಭಾರತ ಸರಕಾರದ ಸಹಾಯದಿಂದ ತನ್ನ ಹಾಗು ಭಾರತದ ಸಾರ್ವಾಂಗಿಕ ಅಭಿವೃದ್ಧಿಯನ್ನು ಸಾಧಿಸಲು ಸರ್ವವಿಧ ಪ್ರಯತ್ನ ನಡೆಸಿ ಆದರಲ್ಲಿ ಯಶಸ್ವಿಯಾಗುವದೆಂಬಲ್ಲಿ ಸಂದೇಹವಿಲ್ಲ.

ಇದಕೇ ಎಂಬರೆ ದೀವಳಿಗೆ ?

ಬಂದಳು ಬಂದಳು
ಸುಂದರಿ ಶರದಳು
ತಂದಳು ನಾಡೊಳು ದೀವಳಿಗೆ ॥
ನಗುನಗುತಲಿ ಮಿಗೆ
ಹರುಷದಿ ನಿಂತಿಹ
ಭೂಮಾತೆಯು ಹಸಿರುಡಿಗೇ ॥ ೧ ॥

ಬಾನಿನ ಕಣದೊಳು
ಚುಕ್ಕೆಯು ರಾಶಿಯು
ಹಬ್ಬವ ಮಾಡಲು ನೀ ಬಾರೆ ॥
ಬಾಳಿನ ಕಣದೊಳು
ಪ್ರೇಮದ ರಾಶಿಯು
ಹಬ್ಬವ ಗೈಯಲು ದಯದೋರೆ ॥ ೨ ॥

ಮನೆ ಮನೆ ಮುಂಗಡೆ
ಹಣತೆಯ ದೀಪಾ
ದೇವರ ಎದುರಿಗೆ ನಂದಾದೀಪಾ ॥
ಅಂಗಡಿ ಮನೆಗಳ
ಮುಂಗಡೆ ನೋಡಿರೊ
ವಿದ್ಯುದ್ದೀಪದ ಸಮ್ಮೇಳ ॥ ೩ ॥

ಏನೀ ಸೊಬಗಿನ
ಸೊಡರಿನ ಸುಗ್ಗಿಯು
ಕಂಗಳ ಸೆರೆಹಿಡಿವೀಕಾಂತಿ ॥
ನಸುಳಿನೆ ನುಗ್ಗಿವೆ
ದೀಪದ ದಂಡು
ಹಿಡಿ ಹಿಡಿ ಕತ್ತಲೆ ಓಡುತಿದೆ. ॥ ೪ ॥

ಆದರು ಏಕೋ
ಮಾನವನೊಳಗೊಡೆ
ಇರುಳೇ ಇರುಳು ಬರಿ ಇರಳು ॥
ಅಯ್ಯೋ ಪಾಪಾ !
ವಿದ್ಯುದ್ದೀಪಾ !
ವ್ಯರ್ಥವಾಯಿತೆ ನಿನ್ನಾಟೋಪ ॥ ೫ ॥

ಕರುಳಿಗೆ ಯಾವುದೊ
ಬೇನೆಯ ವೇದನೆ
ಮನಕೋ ಚಿಂತೆಯು ತಲೆಸಿಡಿತ ॥
ಹಸಿವೆಯ ಒಡಲಿನ
ಸಹನೆಯು ಸರಳು
ಒಡಲನೆ ಸುಡುವೆನು ಎನ್ನುತಿದೆ ॥ ೬ ॥

ಗಾಣಿಗನೆತ್ತಿನ
ಕಣ್ಣನು ಕಟ್ಟೀ-
ಎಣ್ಣೆಯ ತೆಗೆದನು ಹಗಲಿರಳು ॥
ಕುಂಬಾರನಿಗೋ
ಬಿಡುವೇ ಇಲ್ಲ !
ಇದಕೇ ಎಂಬರೆ ದೀವಳಿಗೆ ? ॥ ೭ ॥

ಎದೆಯ ಹಣತೆಯಲಿ
ಸತ್ಯಧರ್ಮಗಳ
ನಿತ್ಯವಿನೂತನ ಜ್ಞಾನದ ಬೆಳಕಿರೆ ॥
ಮಾನವಲೋಕದ
ಒಳಗೂ ಹೊರಗೂ
ಬೆಳಕೇ ಬೆಳಕು ಬಾಳಿನ ಬೆಳಕು ॥ ೮ ॥

— ರಾಘವೇಂದ್ರ

ರಾಜ್ಯೋದಯ ಗೀತೆ

ರಾಗ : ಹಿಂಧೋಳ ಅಥವಾ ಭೂಪ್.   ತಾಳ : ಜಂಪಿ

ವಂದಿಸುವೆವಾನಂದದಿಂದ ಕನ್ನಡ ತಾಯೆ
ಒಂದುಗೂಡಿದ ಎರಡು ಕೋಟಿ ಬಂಧುಗಳು ॥ ಪ ॥
ಹಲವನ್ಯ ರಾಜ್ಯಾಧಿಪತ್ಯಗಳ ತೊತ್ತಾಗಿ
ಬಳಲಿ ಬಡತನದಲ್ಲಿ ಬಲಹೀನರಾಗಿ ।
ಕಳೆದುಕೊಳ್ಳದೆ ನಮ್ಮ ಕನ್ನಡಿಗತನವನ್ನು
ಉಳಿದು ಬಂದಿಹೆವಮ್ಮ ಬೆಳೆದು ಬಾಳ್ವುದಕೆ ॥ ೧ ॥
ಸ್ಮರಿಸಿ ವಿದ್ಯಾರಣ್ಯ ಗುರುಸಾರ್ವಭೌಮರನು
ನರಪತೀಶ್ವರ ಕೃಷ್ಣದೇವರಾಯರನು ।
ನಿರುಪಮೋಜ್ವಲಸುಖೀ ರಾಜ್ಯನಿರ್ಮಾಣದಲಿ
ನಿರತರಾಗುವೆವಮ್ಮ ಹರಸು ಹೆತ್ತಮ್ಮ ॥ ೨ ॥
ಗತವೈಭವದ ದಿವ್ಯ ಇತಿಹಾಸವೆಮಗುಂಟು
ಶ್ರುತಿಧರ್ಮಗಳ ಸುಧಾರಸದ ಸೆಲೆಯುಂಟು ।
ಸ್ಥಿತಿಯುಂಟು ನೆಲಜಲದ, ವಿಪುಲಫಲಗತಿಯುಂಟು
ಹಿತವಾಗಿ ಬಾಳ್ವ ಸನ್ಮತಿಯನೀಡೆಮಗೆ ॥ ೩ ॥
ನವರಸೋಪೇತ ಸಲ್ಲಲಿತ ಕನ್ನಡನುಡಿಯ
ವಿವಿಧ ವಾಙ್ಮಯಸೃಷ್ಟಿ ಸೌಂದರ್ಯವುಂಟು ।
ಸವಿಯುಂಟು ಸಂಗೀತ ಶಿಲ್ಪ ಚಿತ್ರಗಳಲ್ಲಿ
ಭುವನಜನಹಿತ ಕೃತಿಯ ರತಿಯ ಪತಿಕರಿಸು ॥ ೪ ॥
ಧೀರವೀರರ ನಮ್ಮ ಚೆಲುವ ಕನ್ನಡನಾಡು
ಭಾರತಾಂಬೆಯ ದಯದಿ ಉದಯವಾಗಿಹುದು ।
ಹಾರಿಸುತ ಹೆಮ್ಮೆಯಲಿ ಭಾರತದ ಬಾವುಟವ
ತೋರುವೆವು ನಮ್ಮ ಸಮಭಕ್ತಿ ಸಾಹಸವ ॥ ೫ ॥

— ನೈದೂರು ತಿರುಮಲಾಚಾರ್ಯ, ಹೊಸಪೇಟೆ.



ಓ ! ನಿರ್ಝರಿಣಿ ಏನಿದು ನಿನ್ನಯ ಬಾಷ್ಪ ?

ಗೇರುಸೊಪ್ಪೆಯ ಜಲಪಾತದ ಶೋಭೆ

ತಂತಿ : Lodging   ಫೋನ್: 222



ವಿಶ್ವಭವನ

ಬೋರ್ಡಿಂಗ, ಲಾಜಿಂಗ ಹಾಗೂ ಉಪಹಾರಗೃಹ

★

ಕಾರ್ನಾಡ ಸದಾಶಿವರಾವ ಬೀದಿ,

ಮಂಗಳೂರು—೧

ಊಟ, ವಸತಿ, ಎಲ್ಲ ಸೌಕರ್ಯಗಳಿದ್ದ ಏಕೈಕ ಸ್ಥಾನ

★

ದೀಪಾವಳಿಯ ಶುಭಾಶಯಗಳು

★

- ಪ್ರತಿ ರವಿವಾರ ಮೃಷ್ಟಾನ್ನ ಭೋಜನ
- ಪ್ರತಿ ಮಹಡಿಗೂ ಸ್ನಾನದ ಕೋಣೆಗಳು
- ಬಸ್‌ಸ್ಟ್ಯಾಂಡ, ರೇಲ್ವೆಸ್ಟೇಶನ್, ಕಾಲೇಜ ಹಾಗೂ ಕೋರ್ಟು-ಕಚೇರಿಗಳಿಗೆ ತೀರ ಹತ್ತಿರ

---

೪೭ ವರ್ಷ ಚಾಲೂ ಇದ್ದ . . . .

ಶಕ್ತಿವರ್ಧಕ ಹಾಗು ಧಾತುಪೌಷ್ಟಿಕ

ಚರ್ಮರೋಗ, ಮೈಯಲ್ಲಿ ಉಷ್ಣತೆ, ಸ್ವಪ್ನದೋಷಾದಿ ಧಾತು ವಿಕಾರದಿಂದ ಬಂದಂಥ ಅಶಕ್ತತೆ ಮತ್ತು ಅಪಚನ ಮಲಬದ್ಧತೆ ಮೇಲೆ ಅಪ್ರತಿಮ ಗುಣಕಾರಿ

೧ ಬಾಟ್ಲಿ ಕಿಮ್ಮತ್ತು ೨-೦-೦   ೩ ಬಾಟ್ಲಿ ಕಿಮ್ಮತ್ತು ೫-೮-೦

೧ ಡಜನ್ ಬಾಟ್ಲಿ ಕಿಮ್ಮತ್ತು ೨೦-೦-೦ (ಅಂಚೆವೆಚ್ಚ ಬೇರೆ)

ವಿಳಾಸ

ಢೇರೆ ಕೆಮಿಕಲ್ ವರ್ಕ್ಸ್, ನಿಪ್ಪಾಣಿ, (ಜಿ. ಬೆಳಗಾವಿ)

ಪಂಡಿತ ಜವಾಹರಲಾಲ ನೆಹರು ಇವರಿಂದ ಸುವರ್ಣಪದಕ ಪಡೆದ

ದ್ರಾಕ್ಷಾಮೃತ

ಢೇರೆ ಕೆಮಿಕಲ್ ವರ್ಕ್ಸ್.
ನಿಪ್ಪಾಣಿ — (ಬೆಳಗಾಂವ)

★

ನೆಲ್ಲಿ ಪ್ರಕಾಶ

ಮನೋಹರ ಕೆಫೆ

ಬೋರ್ಡಿಂಗ, ಲಾಜಿಂಗ ಮತ್ತು ಉಪಹಾರಗೃಹ

ನೆಹರೂ ರೋಡ, ಶಿವಮೊಗ್ಗಾ

ಊಟ, ವಸತಿ ಎಲ್ಲ ಸೌಕರ್ಯಗಳಿದ್ದ ಸುಸಜ್ಜಿತ ಏಕೈಕಸ್ಥಾನ

- ಪ್ರತಿ ಮಹಡಿಗೂ ಸ್ನಾನದ ಕೋಣೆಗಳು
- ಪ್ರತಿ ರವಿವಾರ ಮೃಷ್ಟಾನ್ನ ಭೋಜನ
- ಬಸ್ ಸ್ಟ್ಯಾಂಡಿಗೆ ಹತ್ತಿರ
- ಊರಿಗೆ ಕೇಂದ್ರ ಸ್ಥಳದಲ್ಲಿದೆ

★ ದೀಪಾವಳಿಯ ಶುಭಾಶಯಗಳು ★

ಮಾಲಕರು:— ಪಿ. ಕೆ. ಜನಾರ್ದನ ನೆಲ್ಲಿ ಅ್ಯಂಡ ಸನ್ಸ



ಅವಿವಾಹಿತೆ

ಲೇ: ಶ್ರೀ. ವ್ಯಾಸರಾಯ ಬಲ್ಲಾಳ, ಮುಂಬಯಿ.

★

ವಿಧಾತನ ಪಕ್ಷಪಾತದಿಂದ ಕುರೂಪಿಯಾದ ಸ್ತ್ರೀ ಎಂತಹ ವ್ಯಥೆಗೀಡಾಗಬೇಕಾಯಿತು! ನಿರುಪಮೆ ತೊನ್ನಿನ ಕಲೆಗಳು ಮುಖದಮೇಲಿದ್ದುದರಿಂದ ಮೂವತ್ತು ವರುಷಗಳಾಗಿದ್ದರೂ ಅವಿವಾಹಿತೆಯಾಗಿ ಉಳಿಯಬೇಕಾಗಿತ್ತು, ಅವಳ ಈ ಕುರೂಪನ್ನು ನಿರ್ಲಕ್ಷಿಸಿ ಮದುವೆಯಾಗುವ ಕರುಣಾಳುಗಳು ಒಬ್ಬರೂ ಇರಲಿಲ್ಲ. ಪತ್ರಿಕೆಗೆ ಜಾಹೀರಾತು ಕೊಡಿಸಿದಳು. ಆದರೆ ಬಂದ ಉತ್ತರವೇನು? ಅವಳಿಗೆ ಜೀವನದಲ್ಲೂ ಜುಗುಪ್ಸೆಯುಂಟಾಯಿತು.

ಹನಿಹನಿಯಾಗಿ ಮಳೆ ಬೀಳುತ್ತಿತ್ತು. ಸಪ್ಟೆಂಬರದ ಕೊನೆಯ ಮಳೆಗಳು. ಕೈಯಲ್ಲಿ ಕೊಡೆಯಿದ್ದರೂ ಅದನ್ನು ಬಿಡಿಸುವ ಆತುರ ನಿರುಪಮೆಗಿರಲಿಲ್ಲ. ಕುರ್ಲಾ ನಿಲ್ಮನೆಯಿಂದಿಳಿದು ಬಸ್ಸಿನ ದಾರಿ ಕಾಯುಲು ನಿಲ್ಲುವ ತಾಣದ ತನಕವೂ ಆಕೆ ನೆನೆದುಕೊಂಡೇ ಬಂದಿದ್ದಳು. ಬೆವರು ಒರೆಸಿ ನಾರುತ್ತಿದ್ದ ಕಿರು ಕರವಸ್ತ್ರದಿಂದ ಸುತ್ತಿದ ಮುದ್ದಾದ ಗುಲಾಬಿಗಳ ಗೊಂಚಲು ಒಂದು ಕೈಯಲ್ಲಿ. ಆ ಗುಲಾಬಿಗಳ ಮೇಲೆ ಹನಿಹನಿ ಮಳೆ ಬೀಳುವುದನ್ನೆ ನೋಡುತ್ತಿರಬೇಕು ಎಂಬ ಆಸೆ.

ಹನಿಹನಿಯಾದ ಮಳೆ—ಹಸಿರು ಧರಿಸಿದ ಸಿಂಗಾರಿ ಪ್ರಕೃತಿಗೆ ಮುತ್ತಿನ ಮಳೆಗರೆಯುವಂತೆ.

ಮಳೆನಿಂತು ಮೈಯೊಣಗಿಸುವ ಅಕ್ಟೋಬರ್. ಮುಂದೆ ಬರುವ ತಂಪಿನ ದಿನಗಳು—ಮುಂಬಯಿ ಕೂಡ 'ಪರವಾಯಿಲ್ಲ' ಎನ್ನಬಹುದಾದ ವರ್ಷದ ಮೂರೇಮೂರುತಿಂಗಳು — ನವ್ಹಂಬರದಿಂದ ಜನವರಿ.

ಮತ್ತೆ ಸೆಕೆ— ಆಮೇಲೆ ಮಳೆ..... ಮಳೆ ಮುಗಿಯುವ ಸಪ್ಟೆಂಬರ್..

ಋತುಚಕ್ರ ತಿರುಗುತ್ತಲೇ ಇದೆ. ಬಸ್ಸಿನ ಗಾಲಿಗಳಂತೆ, ಪುನಃ ನವಂಬರ.. ಇನ್ನೊಂದು ನವಂಬರ.. ಮತ್ತೊಂದು ನವಂಬರ..

ಹುಟ್ಟುಹಬ್ಬದ ನೆನಪನ್ನು ಗತಿಸಿದ ಆಯುಷ್ಯದ ನೆನಪನ್ನು ತಂದುಕೊಡುವ ನವಂಬರ...

ಬಸ್ಸು ಬರಲು ಇನ್ನೂ ಅವಕಾಶವಿತ್ತು. ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದ್ದ 'ಕ್ಯೂ'ದಲ್ಲಿ ತಾನೂ ಸೇರಿಕೊಂಡು ನಿರುಪಮೆ ಬಸ್ಸಿನ ದಾರಿ ನೋಡುತ್ತ ನಿಂತಳು.

ಅಣ್ಣ ಕಾಯುತ್ತಿರಬಹುದು. ಅತ್ತಿಗೆ ಅದೇ ಅಸಹಾಯ ದೃಷ್ಟಿಯಿಂದ ಮಾಡುನೋಡುತ್ತ ಮಲಗಿರಬಹುದು. ಗೋಪು ಈಗಾಗಲೇ ನಿದ್ರಿಸಿರಬಹುದು.

ರಾತ್ರೆ ಘಂಟೆ ಎಂಟೂವರೆ.

ನಿರುಪಮೆ ಎಂದೂ ತಡವಾಗಿ ಮನೆ ಸೇರಿದವಳಲ್ಲ. ಅದು ನಿತ್ಯನಿಯಮದಿಂದ ಹೊರಗಾದ ರೀತಿ ಎಂತಲೇ ಅಪರಿಚಿತ.

ಆರು ಘಂಟೆಗೆ ಆಫೀಸು ಮುಗಿದ ಮೇಲೆ ನೇರವಾದ ಗುರಿ ಮನೆಯೇ. ಮನೆಗೆ ಬಂದ ಮೇಲೆ ಮಲಗುವ ತನಕ ಇದ್ದೇಇದೆ ನಿತ್ಯದ ಕೆಲಸ. ಬೆಳಗಾದ ಮೇಲೆ ಇದ್ದೇಇದೆ ದುಡಿಮೆಯ ಬದುಕು..


ಯಂತ್ರದಂತೆ ಋತುಚಕ್ರದಲ್ಲೆ ತಿರುಗಿದ್ದ ಹತ್ತು ವರ್ಷಗಳು...

ನಿರುಪಮೆಯ ಪಕ್ಕದಲ್ಲೆ ಒಬ್ಬ ಸಿಂಧೀ ಸರದಾರ ನಿಂತಿದ್ದ. ಗಾತ್ರದ ಪರಿಮಿತಿಗೆ ಹೊಂದಿಕೊಳ್ಳುವುದಿಲ್ಲವೆಂದು ನಿರ್ಧರಿಸಿದಂತಿದ್ದ ದೇಹ... ಭಯ ತರಿಸುವ ಕರಿದಾದ ಮೀಸೆಗಡ್ಡಗಳು...

ನಿರುಪಮೆ ಕೊಡೆ ಬಿಡಿಸಿಲ್ಲವೆಂದು ತನ್ನ ಕೊಡೆಯನ್ನೇ ಮುಂದೆ ಮಾಡಿ ಆಕೆಯ ಮೇಲೆ ಮಳೆ ಬೀಳದಂತೆ ಆತ ಹಿಡಿದಾಗ ನಿರುಪಮೆ ತಿರುಗಿ ನೋಡಿದಳು... ನೋಡಿದವಳೇ ಆತನಿಂದ ದೂರ ಸರಿದಳು—'ಕ್ಯೂ' ನಲ್ಲಿ ಮುಂದೆ ಸರಿಯಲು ಸಾಧ್ಯವಿದ್ದಷ್ಟು ದೂರ....

ಆದರೆ....

ತನ್ನ ಮುಖ ನೋಡಿದೊಡನೆ ಆ ಸರದಾರ ಮುಂದೆ ಸರಿಯುವುದರ ಬದಲು ತಾನೂ ಹಿಂದೆ ಸರಿದು ಬೇರೆ ಕಡೆ ನೋಡತೊಡಗಿದಾಗ ನಿರುಪಮೆಗೆ ಚೇಳು ಕುಟುಕಿದಂತೆ ವೇದನೆಯಾಯಿತು. ರಾತ್ರಿಯ ಅಸ್ಪಷ್ಟ ಬೆಳಕಿನಲ್ಲೂ ಆತ ತನ್ನ ಮುಖವನ್ನು ಚೆನ್ನಾಗಿಯೇ ಗುರುತಿಸಿದ್ದ... 'ಕ್ಯೂ' ನಲ್ಲಿ ನಿಂತಾಗ ತನ್ನ ಹಿಂಭಾಗವನ್ನಷ್ಟೆ ನೋಡಿ. ಪ್ರಾಯಶಃ ಆ ನೀಳವಾದ ಕೇಶರಾಶಿಯನ್ನು ಸಂಗ್ರಹಿಸಿ ಹೆಣೆದ ತುರುಬನ್ನು ನೋಡಿ, ವಯಸ್ಸಿಗೆ ಹೊಂದಿಕೊಂಡು ಮಾಟವಾಗಿಯೇ ಇದ್ದ ತನ್ನ ಮೈಕಟ್ಟನ್ನು ನೋಡಿ ಮೋಸ ಹೋದ ಸರದಾರ ಅಪರಿಚಿತ ಯುವತಿಯನ್ನು ಮಳೆಯಿಂದ ರಕ್ಷಿಸಲು ಮಾಡಿದ ಪ್ರಯತ್ನ....



ಮುಖ ನೋಡಿ ಮುಖಭಂಗವಾಗಿರಬೇಕು . .

ನಿರುಪಮೆಗೆ ನೋವಾಗಿತ್ತು. ಆದರೆ ಇಂಥ ಸನ್ನಿವೇಶಗಳು ತೀರ ಪರಿಚಿತವೆಂಬ ನಿರ್ವಿಕಾರ ಅವಸ್ಥೆಗೆ ತಲಪಿದ ಮೇಲೆ ಈ ವೇದನೆಯೂ ಕ್ಷಣಿಕ ಎಂಬ ತಾತ್ವಿಕ ವಿಚಾರಪ್ರಣಾಲಿ ಯಾವಾಗಲೂ ಮನಸ್ಸಿನಲ್ಲಿ ಸುಳಿಯುತ್ತಲೇ ಇತ್ತು.

ಎಂತಲೇ ಇಂಥ ಘಳಿಗೆಗಳಲ್ಲೆಲ್ಲ ಕಣ್ಣಲ್ಲಿ ನೀರು ತುಂಬುವ ಯುಗ ಎಂದೋ ಮುಗಿದಿತ್ತು.

ತನ್ನ ಆಫೀಸಿನಲ್ಲೇ ನಾಲ್ಕು ವರ್ಷಗಳ ಹಿಂದೆ ಒಬ್ಬ ಯುರೋಪಿಯನ್ ಅಧಿಕಾರಿ ತನ್ನ ಮೇಲಧಿಕಾರಿಯೊಡನೆ ಒನ್ಮೆ ಹೇಳಿರಲಿಲ್ಲವೆ ?

" ದಯಮಾಡಿ ಯಾವ ಕೆಲಸಕ್ಕೂ ಆ ಹುಡುಗಿಯನ್ನು ನನ್ನ ಬಳಿ ಕಳಿಸಬೇಡ ''

ಅದಕ್ಕಿಂತ ಹೆಚ್ಚಿನದೇ ಇದು ?

ನಿಂತು ನಿಂತು ಕಾಲು ನೋಯುತ್ತಿತ್ತು. ಸರದಾರ ಈಗ ಯಾರ ಕಡೆ ನೋಡುತ್ತಿರಬಹುದೆಂದು ನಿರುಪಮೆ ತಿರುಗಿ ನೋಡಿದಳು. ಆತ 'ಕ್ಯೂ'ದ ವಿರುದ್ಧದಿಕ್ಕಿಗೇ ಮುಖಮಾಡಿ ನಿಂತಿದ್ದ.

ನಿರುಪಮೆ ಕೈಯಲ್ಲಿದ್ದ ಗುಲಾಬಿಗಳನ್ನು ಎರಡು ಬಾರಿ ಮೂಸಿ ನೋಡಿದಳು.......

ಆ ಕಂಪು ಮೂಗಿಗೆ ಬಡಿದಾಗ ಮಾತ್ರ, ಸರದಾರನ ವಿಚಿತ್ರ ವರ್ತನೆಗಿಂತಲೂ ಹೆಚ್ಚು ನೋವಾಯಿತು ಆಕೆಗೆ. ಕಣ್ಣು ತುಂಬುವುದರಲ್ಲಿತ್ತು.

ಹೊತ್ತಾಯಿತೆಂದು ವಿ. ಟಿ. ಸೇರುವ ಅವಸರದಲ್ಲಿದ್ದಾಗಲೂ ಆ ಗುಲಾಬಿಯ ಗೊಂಚಲನ್ನು ನೋಡಿದಾಗ ಕೊಳ್ಳದೆ ಮುಂದುವರಿಯುವುದು ಸಾಧ್ಯವಾಗಲಿಲ್ಲ. ಆಕೆ ಹೂವಿನ ಬಳಿ ನಿಂತಾಗಲೇ ಹೂ ಮಾರುವಾತ ಆಕೆಯ ಕಣ್ಣುಗಳು ಯಾವ ಕಡೆ ತಿರುಗಿದ್ದವೆಂಬುದನ್ನು ಗಮನಿಸಿಯೇ ಹೇಳಿದ್ದ.

" ಕೊಳ್ಳಿ.... ಬಾಯಿ....ತಾಜಾ ಗುಲಾಬಿ....... 'ಶೇಟ್' ತುಂಬ ಮೆಚ್ಚಿಕೊಳ್ಳುತ್ತಾರೆ........ ''

ರಸಿಕನಾದ ವ್ಯವಹಾರಜೀವಿ .... ನಿರುಪಮೆ ಹೂವನ್ನೇನೋ ಕೊಂಡಳು. ಆದರೆ ಆ ಮಾತು ಮಾತ್ರ ಹೃತ್ತಂತ್ರಿಯನ್ನು ಮೀಟಿದಂತಾಗಿತ್ತು.

ಗುಲಾಬಿಯನ್ನು ನೋಡಿದೊಡನೆಯೇ ಅಣ್ಣ " ಏನು ವಿಶೇಷ ಇವೊತ್ತು, ಮದುವೆಯೇ ? " ಎಂದು ನಗುತ್ತಲೇ ಕೇಳುತ್ತಾನೆ ಎಂದು ನಿರುಪಮೆಗೆ ತಿಳಿದಿತ್ತು. ಅತ್ತಿಗೆ " ಯಾಕೆ ನಿರೂ....... ಸುಮ್ಮನೆ ದುಡ್ಡು ದಂಡ.......'' ಎಂದು ಹೇಳುವಳೆಂಬುದೂ ನಿರುಪಮೆಗೆ ತಿಳಿದಿತ್ತು.

ಆದರೂ ಗುಲಾಬಿ ಬೇಕೆನಿಸಿತ್ತು. ತನ್ನ ನಿಲುವಿಕೆಯನ್ನು ನೋಡಿ ವಯಸ್ಸನ್ನು ಗುರುತಿಸಿದ್ದ ಹೂವಾಡಿಗ ತರ್ಕಬದ್ಧವಾಗಿಯೇ ಗೃಹಿಣಿಯ ಪದವನ್ನು ತನಗೊದಗಿಸಿದ್ದ. ಆ ಮಾತು ಕಚಕುಳಿಯಾಡಿತೆಂದು ಗುಲಾಬಿ ಪ್ರಿಯವಾಯಿತೆ'

ನಿರುಪಮೆ ದೃಷ್ಟಿ ಹೊರಳಿಸಿ ಮುಂದಿನ ಸಾಲಿನ ಕಟ್ಟಡಗಳತ್ತ ನೋಡಿದಳು. ಜೀರ್ಣವಾದ ಕಟ್ಟಡಗಳು. ಅಣ್ಣ ಯಾವಾಗಲೂ ಹೇಳುತ್ತಿದ್ದ " ನನಗೆ ಅಧಿಕಾರವಿದ್ದಿದ್ದರೆ ಕುರ್ಲಾದ ಎಲ್ಲ ಮನೆಗಳನ್ನು ಡೈನಮ್ಯಾಟ್ ಹಾಕಿ ತೆಗೆಯುತ್ತಿದ್ದೆ'' ಎಂದು.

ಆದರೆ ಆ ಕಟ್ಟಡಗಳಲ್ಲಿ ವಾಸಿಸುತ್ತಿದ್ದ ನೂರಾರು ಸಂಸಾರಗಳು ಜೀರ್ಣವಾಗಿರಲಿಲ್ಲ. ಆ ರಾತ್ರೆಯ ದೀಪಗಳ ಬೆಳಕಿನಲ್ಲೂ ಆ ಮೂರು ಮಾಳಿಗೆಯ ಕಟ್ಟಡದ ಹಲವಾರು ಸಂಸಾರಗಳ ಗೃಹಜೀವನವನ್ನು ಬಸ್ಸಿಗಾಗಿ ಕಾಯುತ್ತ ನಿಂತಾಗ ನೋಡುವುದು ಸಾಧ್ಯ ಎನ್ನುವಂತಿತ್ತು. ರಸ್ತೆಗೆ ಹೊಂದಿಕೊಂಡ ಬಾಲ್ಕನಿಯ ತುಂಡು—ಹತ್ತು ಹದಿನೆರಡು ಅಡಿ ಸ್ಥಳವೇ ಅವರ 'ಡ್ರಾಯಿಂಗ್ ರೂಮ್' ಅಲ್ಲೇ ಹರಟೆ, ಅಲ್ಲೇ ಓದು. ಅಲ್ಲೇ ಲಲ್ಲೆಯಾಟ ಕೂಡ. ಕೆಲವೊಮ್ಮೆ, ದಾರಿಗರು ನೋಡಬಹುದು ಎಂಬ ಹೆದರಿಕೆಯೂ ಇಲ್ಲದವರಂತೆ.

ಮುಂಬಯಿಯ ಜೀವನವೇ ಆ ರೀತಿ.

ನಿರುಪಮೆಯ ದೀರ್ಘವಾದ ಉಸಿರು, ನಿಂತು ಉಂಟಾದ ಆಯಾಸದಿಂದಷ್ಟೆ ಬಂದುದಾಗಿರಲಿಲ್ಲ. ಬಾಲ್ಕನಿಯಲ್ಲೇ ನಿಂತು ಬೀದಿಯ ಜನರನ್ನೇ ನೋಡುತ್ತಿದ್ದ, ಒಂದು ಜತೆ ದಂಪತಿಗಳ ಮುಖದಲ್ಲಿ ಪ್ರತಿಬಿಂಬಿತವಾಗಿದ್ದ ಸಂತೋಷ ಆಕೆಯ ಮುಖದ ಮೇಲೆ ಕರಿಯ ಛಾಯೆಯನ್ನೆ ತಂದಿತ್ತು.

ಹತ್ತು ವರ್ಷಗಳ ಬಿಡುವಿರದ ದುಡಿಮೆಯ ಜೀವನ. ತನ್ನ ಆಯುಷ್ಯದ ಗತಿಸಿದ ಮೂವತ್ತು ವರ್ಷಗಳು.

ಇನ್ನೊಂದು ನವಂಬರದಲ್ಲಿ ಗತಿಸುವ ಮೂವತ್ತ-ಒಂದನೆಯ ವರ್ಷ.

" ನಿರೂ ಮದುವೆಯಾಗಿ ಹೋದ ಮೇಲೆ ನಾನು ನಾಲ್ಕು ಕೈಗಳಿಂದ ಅನುಭವಿಸಲಿಕ್ಕಿದೆ. ''

ಅತ್ತಿಗೆಯ ಪ್ರಾಮಾಣಿಕ ಮಾತು. ಆಕೆ ಈ ಹತ್ತು ವರ್ಷಗಳಲ್ಲಿ ಹಾಗೆ ಸಾವಿರ ಸಲವಾದರೂ ಹೇಳಿರಬೇಕು. ಅಣ್ಣನ ಇದಿರಲ್ಲೆ ಆ ರೀತಿಯ ಮಾತು ಬಂದಾಗ ಅತನ ಉತ್ತರ ಸದಾ ಒಂದೇ ಪಲ್ಲವಿಯದು.

" ನನಗೂ ಅಷ್ಟೆ. ನಿರೂ ಗಂಡಾಗಬೇಕಿತ್ತು. ಯಾಕಾದರೂ ಬ್ರಹ್ಮ ಆಕೆಯನ್ನು ಹೆಣ್ಣಾಗಿ ಸೃಷ್ಟಿಸಿದನೋ. ''

ಮದುವೆಯ ಮಾತಿಗೆ ಅಂಥ ಪರ್ಯವಸಾನ.

ಬಳಸು ಮಾತಿನಲ್ಲೇ ವಿಚಾರದ ಕೊನೆ......

ಅಣ್ಣ ನಿರುಪಮೆಯ ಮದುವೆಗಾಗಿ ಪ್ರಯತ್ನಿಸಿರಲಿಲ್ಲವೆಂದಲ್ಲ. ಆಕೆ ದುಡಿಯುವ ವರ್ಗಕ್ಕೆ ಸೇರಿದ ಹೊಸತಿನಲ್ಲಿ ತನ್ನ ಮದುವೆಯೂ ಆಗಿದೆಯೆಂಬ ಸಂಭ್ರಮದಲ್ಲಿ ಅಣ್ಣ ತಂಗಿಯ ಮದುವೆಯ ವಿಚಾರ ಚಿಂತಿಸಿದ್ದ, ಆ ದೆಸೆಯಲ್ಲಿ ಪ್ರಯತ್ನ ಮಾಡಿಯೂ ಇದ್ದ.

ಆದರೆ ಸಿಂಧೀ ಸರದಾರನಂತೆ ತನ್ನ ಮುಖ ಕಂಡು ಮುಖ ತಿರುಗಿಸುವ ಜನರ ಸಂಖ್ಯೆ ಹೆಚ್ಚಿದಂತೆಲ್ಲ ಸೋಲಿನ ಬೇಸರ ಸಮಸ್ಯೆಯನ್ನೇ ಮರೆಸಿತ್ತು.

ಮುಂಬಯಿಯ ಯಂತ್ರವತ್ತಾದ ಬದುಕಿಗೆ ಹೊಂದಿಕೊಳ್ಳುವಂತೆ ಅಣ್ಣ ಪರಿಸ್ಥಿತಿಗೆ ಹೊಂದಿಕೊಂಡ. ನಿರುಪಮೆಯ ಮದುವೆ ಸಾಧ್ಯವೇ ಇಲ್ಲವೇನೋ ಎಂಬ ಭಾವನೆ ಬಲವಾಗಿ ಅತ ಒಮ್ಮೊಮ್ಮೆ ನಗೆಮಾತು ಆಡಿದುದೂ ಇದೆ.

" ನಿರುಪಮೆಯ ಮದುವೆ ಗಣಪತಿಯ ಮದುವೆಯೇ '' ಎಂದು. ಅಣ್ಣನ ಜೊತೆಗೆ ತಾನೂ ನಕ್ಕಿದ್ದಳು. ಆದರೆ ಎಂಥ ವಿಚಿತ್ರವಾದ ನಗು ಅದು!

ತನ್ನ ಸಹಾಯಕ್ಕೆ ಆಗ ಬಂದಿದ್ದುದು ಅತ್ತಿಗೆಯೇ.

" ಎಂಥ ಹುಚ್ಚು ಮಾತು ಆಡುತ್ತೀರಿ ? ಆಕೆ-ಗೊಬ್ಬ ಗಂಡನನ್ನು ಬ್ರಹ್ಮ ಸೃಷ್ಟಿಸಿಯೇ ಇಲ್ಲವೇ? ತೊನ್ನಿನ ಕಲೆಯಿರುವವರೆಲ್ಲ ಮದುವೆಯಾಗದೆಯೆ ಉಳಿಯುತ್ತಾರೆಯೆ ?''

ಅಣ್ಣ ಪ್ರಭಾಕರ ತನ್ನನ್ನು ತಾನೇ ತಿದ್ದಿ-ಕೊಂಡಿದ್ದ.

" ಹಾಗಲ್ಲ ಪದ್ಮ... ಸುಮ್ಮನೆ ತಮಾಷೆಗೆ ಹೇಳಿದೆ. ಒಂದೆರಡು ವರ್ಷ ತಡವಾದರೇನಂತೆ! ದುಡಿಯುವ ಹುಡುಗಿಯಲ್ಲವೆ ?

ಬಸ್ಸು ಬಂತು. ಕೊಡೆ ಮಡಚಿ ನಿರುಪಮೆ ಇರುವೆಯ ಸಾಲಿನಂತೆ ಸರಿಯುತ್ತಿದ್ದ 'ಕ್ಯೂ' ದಲ್ಲಿ ತಾನೂ ಒಬ್ಬಳಾಗಿ ಮುಂದುವರಿದು ಬಸ್ಸನ್ನೇರಿದಳು...

ತನ್ನ ಹಿಂದೆಯೇ ಬಂದಿದ್ದ ಸರದಾರ ತನಗಿಂತ ಹತ್ತು ಸೀಟುಗಳಾದರೂ ಹಿಂದೆ ಕುಳಿತುಕೊಳ್ಳುವನೆಂದು ಆಕೆ ಊಹಿಸಿದುದು ಸುಳ್ಳಾಗಲಿಲ್ಲ..

ಎಲ್ಲರಂತೆಯೇ ಜೀವನ ಸಾಗಿಸಬೇಕಾದ ಜೀವ -ಎಲ್ಲರಿಗೂ ಬೇಡವಾಗಿ.

ಆಕೆ ನಿರೀಕ್ಷಿಸಿದ್ದಂತೆಯೇ ಪ್ರಭಾಕರ ತಂಗಿಯ ದಾರಿ ಕಾಯುತ್ತಿದ್ದ.

" ಎಷ್ಟು ತಡ ಮಾಡಿಬಿಟ್ಟೆ ನಿರೂ...'' ಹಾಗೇ ಕೈಯ ಗುಲಾಬಿ ಗೊಂಚಲನ್ನು ನೋಡಿ

" ಏನು ವಿಶೇಷ? ಮದುವೆಯೆ!'' ಎಂದ ನಗುತ್ತಾ.

ನಿರುಪಮೆಗೂ ನಗು ಬಂತು. ತನ್ನ ನಿರೀಕ್ಷೆ ಸುಳ್ಳಾಗಿರಲಿಲ್ಲ.

" ಹೌದು, ಮದುವೆ. ನನ್ನದಲ್ಲ ಒಬ್ಬ ಗೆಳತಿಯದು. ಅದರ 'ರಿಸೆಪ್ಶನ್' ಮುಗಿಸಿ ಬರುವಾಗ ಒಳ್ಳೆಯ ಗುಲಾಬಿ ಸಿಕ್ಕಿತು. ತಂದೆ.....''

ತಾನು ನಿರೀಕ್ಷಿಸಿದಂತೆ ಮಲಗಿಕೊಂಡೇ ಇದ್ದ ಅತ್ತಿಗೆ ಹೇಳಿದಳು.

" ಸುಮ್ಮನೆ ದುಡ್ಡು ದಂಡ........ ನಾಳೆ ಪುಡಿ ಪುಡಿಯಾಗಿ ಮನೆಯೆಲ್ಲಾ ಕಸ........''

ನಿರುಪಮೆ ಈ ಮಾತಿಗೆ ಉತ್ತರ ಹೇಳಲಿಲ್ಲ. ತಂಗಿ ಬರುವುದು ತಡವಾಯಿತೆಂದು ಅಣ್ಣ ಅಡುಗೆಯ ಕೆಲಸದಲ್ಲಿ ಹೆಂಡತಿಗೆ ನೆರವು ಕೊಡಲು ಹೋಗಿದ್ದ. ನಿರುಪಮೆ ಬಂದಳೆಂದು ಆತ ಎದ್ದ.

ನಿರೂ. ಊಹಿಸಿದ್ದಂತೆಯೇ ಗೋಪಿ ನಿದ್ರಿಸಿಯಾಗಿತ್ತು.

ಅಣ್ಣ ಮದುವೆಯ ನಗೆಮಾತು ಆಡಿದಾಗ ಇಂದು ಉತ್ತರ ಹೇಳಿಯೇ ತೀರಬೇಕು ಎಂದು ನಿರುಪಮೆ ಯೋಚಿಸಿಕೊಂಡೆ ಬಂದಿದ್ದರೂ ಅದು ಸಾಧ್ಯವಾಗಲಿಲ್ಲ.

ಊಟ ತೀರಿಸಿ ಕೆಲಸ ಬೊಗಸೆಗಳೆಲ್ಲ ಮುಗಿದಾದ ಮೇಲೆ ಮಲಗಲೆಂದು ನಿರುಪಮೆ ಬಾಲ್ಕನಿಗೆ ಹೋದಳು.

ಆ ಬಾಲ್ಕನಿ ಆಕೆಯ ಸರ್ವಸ್ವ. ಎರಡು ದೊಡ್ಡ ಉಕ್ಕಿನ ಟ್ರಂಕುಗಳು, ಒಂದು ಸಣ್ಣ ಮೇಜು, ಕುರ್ಚಿ, ಎರವಲು ತಂದಿದ್ದ, ಹಾಗೇ ಹಳೆಯ ಪುಸ್ತಕಗಳು, ಅಂಗಡಿಗಳಿಂದ ಕೊಂಡುಕೊಂಡಿದ್ದ ಕೆಲವು ಪುಸ್ತಕಗಳು, ಹೂವಿರದ ಹೂದಾನಿ-- ಹತ್ತು ವರ್ಷಗಳ ಹಿಂದೆ ತೆಗೆಸಿದ್ದ ತನ್ನ ಒಂದು ಭಾವಚಿತ್ರ.

ಇವಿಷ್ಟು ಆಕೆಯ ಸರ್ವಸ್ವ.

ಮಲಗಲು ಬಂದ ನಿರುಪಮೆ ಎರಡು ನಿಮಿಷ ತನ್ನ ಭಾವಚಿತ್ರವನ್ನೆ ನೋಡುತ್ತ ನಿಂತಳು. ತಿದ್ದಿದ ಪ್ರತಿಬಿಂಬದಲ್ಲಿ ಅಸಹ್ಯಕಲೆಗಳೆಲ್ಲ ಮಾಯವಾಗಿದ್ದುವು. ಎಂತಲೇ ನೋಡಲು ಮಾಟವಾದ ಮುಖ........

ಹತ್ತು ವರ್ಷಗಳ ಹಿಂದೆ.

" ಈ ಕಲೆಗಳಲ್ಲವಾದರೆ ನನ್ನ ನಿರೂಗೆ ದೊಡ್ಡ ದೊಡ್ಡ ಡಾಕ್ಟರರೇ ತಾನು ಮುಂದೆ ತಾನು ಮುಂದೆ ಎಂದು ಮದುವೆಯಾಗಲು ಬರುತ್ತಿದ್ದರು " ಎಂದು ನಿರುಪಮೆಯ ತಂದೆ ಹೇಳಿದ್ದರು,-ಅದೂ ಎಷ್ಟೋ ಬಾರಿ........

ಅಣ್ಣ ಓದಿಸಿದ, ದುಡಿಯಲಿ ಎಂದು ಬದುಕಿಗೆ ದಾರಿ ತೋರಿಸಿದ . . . . ಸಣ್ಣ ಹಳ್ಳಿಯ ಊರಿಗಿಂತ ವಿಶಾಲವಾದ ಮುಂಬಯಿಯಲ್ಲಿ ನಿರುಪಮೆಗೆ ವರನನ್ನು ಹುಡುಕುವುದು ಸುಲಭ ಎಂದು ತಂದೆ ತಾಯಂದಿರನ್ನು ನಂಬಿಸಿಯೂ ಇದ್ದ.

ಆದರೆ ವಿಶಾಲ ಮುಂಬಯಿಯೆಲ್ಲೂ ನಿರುಪಮೆಯನ್ನು ಒಪಿ ಕೊಳ್ಳುವ ಗಂಡು ಪ್ರಭಾಕರನಿಗೆ ಸಿಗಲಿಲ್ಲ.

ತಂದೆ ತಿ . ಕೊಳ್ಳುವ ವರೆಗೂ ನಿರುಪಮೆಯ ಮದುವೆಯ ವಿಚಾರ ಚಿಂತಿಸುತ್ತಲೇ ಇದ್ದರು.... ಮಗನಿಗೆ ಬರೆಯುತ್ತಿದ್ದ ಕಾಗದಗಳಲ್ಲಿ "ನಿರೂಗೆ ಗಂಡು ನೋಡಿದೆಯಾ ? " ಎಂಬ ಮಾತು ಬರಲೇ ಬೇಕಿತ್ತು. ಪ್ರಭಾಕರನಿಗೆ ಆ ಮಾತಿಗೆ ಉತ್ತರಿಸಿ ಬೇಸರ ಬಂದು ಹೋಗಿತ್ತು.

ಆ ಬೇಸರದಿಂದಲೇ "ಪ್ಲಾಸ್ಟಿಕ್ ಸರ್ಜರಿ ಎಂತ ಏನೋ ಅಮೇರಿಕದಲ್ಲಿ ಬಂದಿದೆಯಂತೆ. ಅದು ನಮ್ಮಲ್ಲಿಗೂ ಬಂದಾಗ, ಅಷ್ಟು ಅನುಕೂಲವಿದ್ದರೆ, ನಿರುಪಮೆಯ ಮುಖ ಬದಲಿಸಿ ಮದುವೆ ಮಾಡಬಹುದು " ಎಂದು ಬರೆದಿದ್ದ.

ಅಂಚೆಗೆ ಹಾಕಲು ನಿರುಪಮೆಯ ಕೈಗೆ ಕೊಟ್ಟ ಕಾಗದ ತಂದೆಗೆ ಕಾಗದವೆಂದು ಆಕೆ, ಅಣ್ಣ ಬರೆದಿರುವ ಕಾಗದವೆಂಬುದನ್ನು ಮರೆತು ಓದಿ ನೋಡಿ, ನಡುಗುವ ಕೈಗಳಿಂದಲೆ ಅಂಚೆಗೆ ಹಾಕಿದ್ದಳು.

ಅದು ಮೂರು ವರ್ಷಗಳ ಹಿಂದೆ.

ಆ ಕಾಗದ ಹಾಕಿ ಆರೇ ತಿಂಗಳಲ್ಲಿ ತಂದೆ ತೀರಿಕೊಂಡ ಸುದ್ದಿ ತಿಳಿದಾಗ ನಿರುಪಮೆಗೆ ತನಗೆ ಅಣ್ಣನ ಆಶ್ರಯವಿದ್ದೂ ತಾನು ಅನಾಥೆ ಎಂದೆನಿಸಿತ್ತು. ತಂದೆಯ ಅಪರಕ್ರಿಯೆಗಳಿಗೆಂದು ತಾವೆಲ್ಲ ಊರಿಗೆ ಹೋದಾಗ ತಾಯಿ ಪ್ರಭಾನೊಡನೆ " ನಿರುಪಮೆಯ ಮದುವೆಯ ವಿಚಾರ ಯೋಚಿಸಿಕೊಂಡೇ ಅವರು ಕೊನೆಯ ಉಸಿರೆಳೆದರು " ಎಂದು ಹೇಳಿದಾಗ ಆಕೆಯ ಕಣ್ಣಲ್ಲಿ ಮಾತ್ರ ನೀರು ತುಂಬಿತ್ತು.

" ನೋಡೋಣ. ನಾನಿಲ್ಲವೆ ? " ಎಂದಿದ್ದ ಪ್ರಭಾ.

ಮೂರು ವರ್ಷಕಾಲ - ತಂದೆ ತೀರಿಕೊಂಡ ಮೇಲೆ ಆತನೇ ಹಿರಿಯನಾಗಿ ಮೂರು ವರ್ಷಕಾಲ ' ನೋಡೋಣ ' ಎಂದೇ ಪ್ರಭಾಕರ ಕಳೆದಿದ್ದ.

ನಿರುಪಮೆಗೆ ಅಣ್ಣನ ಮನೆಯ ಬಾಲ್ಕನಿಯೇ ಸರ್ವಸ್ವ. ಎರಡು ದೊಡ್ಡ ಉಕ್ಕಿನ ಟ್ರಂಕುಗಳು.... ಹೂವಿರದ ಹೂದಾನಿ. ಒಂದು ಸಣ್ಣ ಮೇಜು, ಕುರ್ಚಿ....

ಹೂದಾನಿಯಲ್ಲಿ ತಾನು ತಂದಿಟ್ಟ ಗುಲಾಬಿಗಳನ್ನಿರಿಸಿದ ನಿರುಪಮೆ ಬಾಲ್ಕನಿಯಲ್ಲೆ ಮಲಗಿದ್ದ ಗೋಪಿಯಕಡೆ ನೋಡಿದಳು. . . . ತನ್ನ ಸರ್ವಸ್ವವಾಗಿದ್ದ ಬಾಲ್ಕನಿಯಲ್ಲಿ ತನ್ನ ಮಗುವಿನಂತೆಯೇ ಜೊತೆಗಿರುತ್ತಿದ್ದ ಗೋಪಿ.

ಅತ್ತೆ ಇನ್ನೂ ಬಂದಿಲ್ಲವೆಂದು ಹಾಸಿಗೆಯ ಸುರುಳಿ ಬಿಡಿಸದೇನೇ ಅದರ ಮೇಲೇ ಮಲಗಿದ್ದ.

ಮಲಗಿದ್ದ ಮಗುವನ್ನೆ ನಿರುಪಮೆ ನೋಡಿದಳು ಅಣ್ಣನ ಹತ್ತು ವರ್ಷಗಳ ದಾಂಪತ್ಯಜೀವನದ ಸಂಕೇತವಾಗಿ ಬೆಳೆಯುತ್ತಿದ್ದ ಮಗು . . . ಹಚಿಕೊಂಡುದು ಮಾತ್ರ ತಾಯಿಗಿಂತಲೂ ಹೆಚು ಅತ್ತೆಯನ್ನು.

ಅತ್ತಿಗೆ . . .

ಯಾವಾಗಲೂ ಕೃಶಳಾಗಿಯೇ ಇರುತ್ತಿದ್ದ ಆ ಬಡಕಲು ಜೀವ ನಿರುಪಮೆಗೆ ಸದಾ ಸ್ನೇಹಮಯಿಯೇ. ಮದುವೆಯಾಗಿ ಬಂದ ಮೇಲೆ ಒಂದು ಸಲವಾದರೂ ತಪ್ಪಿಯಾದರೂ ಪದ್ಮಾ ನಿರುಪಮೆಗೆ ಕೆಟ್ಟಮಾತು ಆಡಿರಲಿಲ್ಲ. ತಮ್ಮ ಸಂಸಾರಕ್ಕೆ ಹೊಂದಿಕೊಂಡ ಬಂಧುವಾಗಿ ವಯಸ್ಸು ಮೀರಿದರೂ ಅವಿವಾಹಿತೆಯಾಗಿ ಉಳಿದಿದ್ದ ನಿರುಪಮೆ ತನಗಿಂತ ವಯಸ್ಸಿನಲ್ಲಿ ಒಂದು ವರ್ಷಕ್ಕೆ ಕಿರಿಯಳಾದರೂ ತನ್ನ ತಾಯಿಯಂತೆಯೇ ಇದ್ದಾಳೆಂಬುದನ್ನು ಪದ್ಮಾ ಮರೆತಿರಲಿಲ್ಲ.

ಕಾಯಿಲೆಯಿಂದ ಬಳಲಿದಾಗ, ಪ್ಲೂರಸಿಯೆಂದು ಗಂಡ ನೀರಿನಂತೆ ಹಣವನ್ನು ವ್ಯಯಿಸತೊಡಗಿದಾಗ ನಿಜವಾದ ಆರೈಕೆ ನೋಡಿಕೊಳ್ಳುತ್ತಿದ್ದುದು ನಿರುಪಮೆಯೆ. ಎರಡು ವರ್ಷಕಾಲ ಎಚ್ಚರಿಕೆಯಿಂದ ಒಂದು ವ್ಯಾಧಿಯ ವಿರುದ್ಧ

ದೊಡ್ಡ ಹೋರಾಟವನ್ನೆ ಮಾಡಿದ್ದ ಪದ್ಮಾಗೆ ನಿರುಪಮೆ ಆಕೆ ಹೇಳಿದಂತೆಯೇ ಎರಡು ಭುಜಗಳಂತಿದ್ದಳು . . . ಆಫೀಸಿನ ದುಡಿಮೆ ಮುಗಿಸಿಯೂ ಮನೆಯ ಯೋಗಕ್ಷೇಮ ನೋಡಿಕೊಂಡು ಈಯೆಲ್ಲ ಭಾರವನ್ನೂ ಹೊರುವ ಶಕ್ತಿ ನನಗಿದೆಯೆಂಬಂತೆ ಮೌನವಾಗಿಯೇ ತನ್ನ ಕೆಲಸವನ್ನು ತಾನು ಮಾಡಿಕೊಂಡು ಹೋಗುತ್ತಿದ್ದ. ನಿರುಪಮೆಯನ್ನು ನೋಡಿ ಎಷ್ಟೋ ಬಾರಿ ಪದ್ಮಾಗೆ ವಿಲಕ್ಷಣ ಸಂಕಟವಾಗಿತ್ತು.

ಒಂದೆರಡು ಬಾರಿ ನಿದ್ದೆ ಬಾರದೆ ಹಾಸಿಗೆಯಲ್ಲೆ ಹೊರಳುತ್ತಿದ್ದಾಗ ನಿರುಪಮೆಗೆ ಪಕ್ಕದ ಕೋಣೆಯಲ್ಲೆ ಅತ್ತಿಗೆ ಅಣ್ಣನೊಡನೆ ಆಡುತ್ತಿದ್ದ ಮಾತು ಕೇಳಿದುದೂ ಇದೆ.

"ನಿರೂಗೆ ಎಲ್ಲಾದರೂ ವರ ನೋಡಿದಿರಾ?"

"ನೋಡಿಕೊಂಡೇ ಇದ್ದೇನೆ, ಇಷ್ಟು ವರ್ಷ...."

"ಹಾಗಾದರೆ ಅವಳು ಮದುವೆಯಾಗದೆಯೇ ಉಳಿಯುವುದೆ?"

"ಅವಳ ಹಣೆಯಲ್ಲಿ ಹಾಗೇ ಬರೆದಿದ್ದರೆ ನಾವೇನು ಮಾಡಲು ಸಾಧ್ಯ! ಅವಳ ಮುಖ ನೋಡಿ ಯಾರು ತಾನಾಗಿಯೇ ಮುಂದೆ ಬರುತ್ತಾರೆ. ಇನ್ನು ಯಾರಾದರೂ ಕುಂಟರೋ ಕುರುಡರೋ ಸಿಕ್ಕಿ, ಮದುವೆಯಾಗಬೇಕು... ..."

"ಸಾಕು ಬಿಡಿ. ಹಾಗೇನಾಗಿದೆ ನಿರೂಗೆ ...... ಯಾರೂ ತೊನ್ನು ನೋಡಿಯೇ ಇಲ್ಲ ಜಗತ್ತಿನಲ್ಲಿ."

ಅಂಥ ಮಾತು ಕೇಳಿದಾಗ ನಿರುಪಮೆಗೆ ತನ್ನ ದಿಂಬನ್ನೆ ಎದೆಗವುಚಿಕೊಂಡು ಅಳಬೇಕು ಎನಿಸುತ್ತಿತ್ತು ... ...

ಗೋಪಿಯನ್ನು ಸರಿಯಾಗಿ ಮಲಗಿಸಲೆಂದು ಎತ್ತಿದಾಗ ಆತ ನಿದ್ದೆಗಣ್ಣಲ್ಲೇ "ಅತ್ತೇ! ಪೆಪ್‌ರಮಿಂಟ" ಎಂದ.

"ಕಳ್ಳ! ನಿದ್ದೆಯಲ್ಲೂ ಪೆಪ್‌ರಮಿಂಟ ಬೇಕೇನೋ" ಎಂದು ನಿರುಪಮೆ ನಕ್ಕು ಮೆಲ್ಲ ಹೇಳಿದರೂ ಆತನನ್ನು ಸರಿಯಾಗಿ ಮಲಗಿಸಿಯಾದ ಮೇಲೆ, ತನ್ನ ಕೈಚೀಲ ಬಿಡಿಸಿ ಅದರೊಳಗಿದ್ದ ಪೆಪ್‌ರಮಿಂಟ ಒಂದನ್ನು ಗೋಪಿಯ ಬಾಯಿಗೆ ತುರುಕಿದಳು.

ನಿದ್ರಿಸಿದ್ದ ಮಗುವಿನ ಬಾಯೊಳಗೆ ಹೋಗದೆ ಪೆಪ್‌ರಮಿಂಟ್ ಹಾಗೇ ಕೆಳಗೆ ಬಿತ್ತು.

ಕೈಚೀಲ ಬಿಡಿಸಿದಾಗಲೇ ನಿರುಪಮೆಗೆ ಸಂಜೆ ತಾನು ಹೋಗಿದ್ದ ಮದುವೆಯ ಸತ್ಕಾರಕೂಟ ನೆನಪಿಗೆ ಬಂದುದು. ಆ ಕೈಚೀಲದೊಳಗೆ ಗೋಪಿಯ ಪೆಪ್‌ರಮಿಂಟಿನ ಕಟ್ಟಿನ ಜೊತೆಗೇ ಇದ್ದ, ಸೇವಂತಿಗೆಗಳ ಸಣ್ಣದಾದ ಪುಷ್ಪಗುಚ್ಛ.

ಸಹೋದ್ಯೋಗಿಯೊಬ್ಬಳ ಮದುವೆಯ ಸಂಬಂಧದ ಸತ್ಕಾರಕೂಟ.

ತಾನು ಬರುವುದೇ ಇಲ್ಲವೆಂದು ಹಟ ಹಿಡಿದಿದ್ದರೂ ಗೆಳತಿಯ ಒತ್ತಾಯದ ಮುಂದೆ ಅದು ಫಲಿಸಲಿಲ್ಲ. "ನೀನು ಬಾರದೆ ಉಳಿದರೆ ನಾನು ಮುಂದೆ ನಿನ್ನೊಡನೆ ಮಾತನಾಡುವುದೇ ಇಲ್ಲ..." ಎಂದಿದ್ದಳು ಮೇರೀ ಡೇಸಾ....

ನಿರುಪಮೆ ಮನಬಿಚ್ಚಿ ಮಾತನಾಡುತ್ತಿದ್ದುದು ಮೇರಿಯೊಡನೆ ಮಾತ್ರ. ಹತ್ತು ವರ್ಷಗಳ ಸಹವ್ಯವಸಾಯದಲ್ಲಿ ಇತರರಂತೆ ಆಕೆ ಒಮ್ಮೆಯಾದರೂ "ನಿನ್ನ ಮುಖದ ಕಲೆಗಳಿಗೆ ನಿವೃತ್ತಿಯ ಉಪಾಯವೇ ಇಲ್ಲವೇ?" ಎಂದು ಕೇಳಿರಲಿಲ್ಲ. ಒಮ್ಮೆಯಾದರೂ ತಿಳಿದಾಗಲೀ, ತಿಳಿಯದೆ ಹೋಗಿರಲಿ, ನಿರುಪಮೆಯ ಸೌಂದರ್ಯದ ನ್ಯೂನತೆಯ ಕುರಿತು ನೋವಾಗುವಂತೆ ಒಂದೇ ಒಂದು ಮಾತನಾಡಿರಲಿಲ್ಲ.

ಆದರೂ ನಿರುಪಮೆಗೆ ಹೋಗುವುದೇ ಬೇಡವೇ ಎಂಬ ಸಂದೇಹವಿತ್ತು. ಈ ಹತ್ತು ವರ್ಷಗಳ ಮುಂಬಯಿ ಜೀವನದಲ್ಲಿ ಆಕೆ ಅಂಥ ಯಾವ ಸಾಮೂಹಿಕ ಕೂಟಕ್ಕೂ ಹೋಗಿರಲಿಲ್ಲ; ಹೋಗಬೇಕು ಎನಿಸಿರಲಿಲ್ಲ. ಹೋಗಿರದುದರಿಂದ ಇತರರು ಟೀಕಿಸಿಯೂ ಇರಲಿಲ್ಲ. ಆಕೆ ಬಾರದೆ ಉಳಿದುದೇ ಸ್ವಾಭಾವಿಕವೆನ್ನುವಂತೆ ಇತರರು ವರ್ತಿಸಿದರು. ಅದನ್ನೇ ಸರಿಯಾದ ದಾರಿಯೆಂದು ನಿರುಪಮೆಯೂ ನಂಬಿದ್ದಳು.

ಅಣ್ಣ ಕೂಡ ಅತ್ತಿಗೆಯೊಡನೆ ಅಂಥ ಯಾವುದಾದರೂ ಪರಿಭ್ರಮಣಕ್ಕೆಂದು ಹೊರಟಾಗ ಔಪಚಾರಿಕವಾಗಿ 'ಬಾ' ಎನ್ನುತ್ತಿದ್ದ......... ತಾನು ಬರುವುದಿಲ್ಲವೆಂದು ಹೇಳಿದಾಗ ಒತ್ತಾಯಿಸುತ್ತಿದ್ದುದು ಅತ್ತಿಗೆ ಮಾತ್ರವೆಂದೂ ನಿರುಪಮೆಗೆ ತಿಳಿದಿತ್ತು.

ಎಂತಲೇ ಈ ಬಾರಿ ಗೆಳತಿ ಒತ್ತಾಯ ಪಡಿಸಿದಾಗಲೂ ಆಕೆ ಮೊದಲು 'ಒಲ್ಲೆ' ಎಂದೇ ಹೇಳಿದ್ದಳು.

"ಅಷ್ಟೇಕೆ ಅಳುಕು ನಿರುಪಮಾ?"

"ನಿನಗೆ ತಿಳಿದಿದೆಯಲ್ಲ ಮೇರೀ. ಯಾವ ಕಾರಣಕ್ಕಾಗಿ ನಾನು ಈ ಮುಖವನ್ನು ಮೆರೆಸಬೇಕಾಗಿದೆ ... ... ?"

"ಸಿಲ್ಲಿ., ಇದರಿಂದಾಗಿಯೇ ನೀನು ಬರುವುದಿಲ್ಲವೆಂದು ಹೇಳುವುದೇ? ಹೀಗೆ ನಿನ್ನನ್ನೇ ನೀನು ಹಿಂಸಿಸಿಕೊಳ್ಳುವುದು ಎಷ್ಟುಮಾತ್ರಕ್ಕೂ ಸರಿಯಾದುದಲ್ಲ. ನಿನಗೇನಾಗಿದೆ... ...?"

ಆ ಮೇಲೆ ತುಸು ತಡೆದು

"ಮದುವೆಯಾಗಿಲ್ಲವೆಂದು ಈ ನೋವೇ ನಿರುಪಮಾ...... ನಾನೂ ನಿನ್ನ ವಯಸ್ಸಿನವಳೇ ಅಲ್ಲವೇನೇ? ಮದುವೆಯಾಗಬೇಕೆಂದು ತೋರಿದಾಗ ಒಂದು 'ಟ್ರ್ಯಾನ್ಸ್' ಜಾಹೀರಾತಿನಿಂದಲೇ ನನಗೆ ಬೇಕಾದ ಗಂಡನನ್ನು ಸಂಪಾದಿಸಿಕೊಂಡೆ. ..."

"ನೀನು ಭಾಗ್ಯವಂತೆ ಮೇರೀ?"

"ನಿನ್ನ ಭಾಗ್ಯಕ್ಕೇನಾಗಿದೀಗ ... ... ಹುಚ್ಚು ಹುಚ್ಚು ವಿಚಾರಗಳೆಲ್ಲ ತಲೆಯಲ್ಲಿ ಸುಳಿಯಬಾರದು. ನಿಮ್ಮ ಹಿಂದೂಗಳಲ್ಲೇ ಹಾಗೆ......... ಮೂವತ್ತು ವರ್ಷವಾದರೇನಾಯಿತು, ಮುದುಕಿಯಾದಿಯೇನು? ನಿಜವಾಗಿ ನೋಡಿದರೆ ನಿನಗೆ ಮದುವೆಯಾಗಲು ಇದೇ ಸಮಯ. ... ..."

ಹಾಗೆ ಹೇಳಿ ತನ್ನ ಕೆನ್ನೆಯನ್ನು ಚಿವುಟಿದ್ದ ಗೆಳತಿ . . . ಆಕೆ ಚಿವುಟಿದ ಜಾಗಕ್ಕಿಂತ ತುಸು ಮೇಲೆ ತೊಗಲು ಬಿಳಿಯಾಗಿದೆಯೆಂಬುದು ನಿರುಪಮೆಗೆ ಗೊತ್ತು. ಎಂತಲೇ ಆ ಅಕ್ಕರೆಯ ಚಿವುಟುವಿಕೆ ಆನಂದಬಾಷ್ಪ ತರಿಸುವಷ್ಟು ಪ್ರಿಯವಾಗಿತ್ತು.

ಏಕಾಗಬಾರದು? 'ಟ್ರ್ಯಾನ್ಸ್' ಜಾಹಿರಾತಿನಿಂದಲೇ ಆಕೆ ಗಂಡನನ್ನು ಸಂಪಾದಿಸಿಕೊಂಡಂತೆ

ಏನೂ ಸಂಪಾದಿಸಿಕೊಳ್ಳಬಾರದೇ . . . . . ಈ ಪ್ರಪಂಚದಲ್ಲಿ ಮೇರಿಯಂತೆಯೇ ದಯಾರ್ದ್ರ ಹೃದಯರಾದ ಗಂಡಸರಾರೂ ಇರಲಿಕ್ಕಿಲ್ಲವೆ ?

ಹೃದಯದಾಳದಲ್ಲಿ ಹುದುಗಿದ್ದ ಹಂಬಲ ಭೂತಾಕಾರ ತಳೆದು ನಿರುಪಮೆಯನ್ನು ಕಾಡತೊಡಗಿದುದು ಮೇರಿಯ ಹಿತವಚನ ಕೇಳಿದ ಮೇಲೆಯೆ. ತಂದೆಯ ಪ್ರಯತ್ನವನ್ನು ಕಂಡಿದ್ದಳು....ಅಣ್ಣನ ಪ್ರಯತ್ನವನ್ನು ಕಂಡಿದ್ದಳು.... ಈಗ ತಾನೇ ಏಕೆ ಪ್ರಯತ್ನಿಸಬಾರದು ಎಂದು ತೋರಿದುದು ಗೆಳತಿ ತೋರಿಸಿದ ದಾರಿ ಗಮನಕ್ಕೆ ಬಂದಾಗಲೇ....

ಏಕಾಗಬಾರದು ?

ತನ್ನ ರೂಪು ಕೊಡುವ ನೋವನ್ನು ಮರೆತು ಹೃದಯವನ್ನು ನಲ್ಮೆಯಿಂದ ನೆಚ್ಚಿಕೊಳ್ಳುವವರು ಯಾರೂ ಇಲ್ಲವೆಂದು ಹೇಗೆ ಹೇಳುವುದು ?

ಎಂಟು ದಿನ ಇದೇ ವಿಚಾರ ತುಮುಲ ಪ್ರಬಲವಾಗಿ ನಿರುಪಮೆಯನ್ನು ಕಾಡುತ್ತಿತ್ತು.

ಗೆಳತಿಯ ಒತ್ತಾಯ ಪರಿಣಾಮಕಾರಿಯಾಗಿ ಆಕೆ ಮದುವೆಯ ಸತ್ಕಾರ ಕೂಟಕ್ಕೆ ಅಳುಕಿಕೊಂಡೇ ಹೋದಳು. ಅಲ್ಲಿ ಆಕೆಯ ಆಗಮನದಿಂದ ಆಶ್ಚರ್ಯವಾಗದಿದ್ದುದು ಮೇರಿಗೆ ಮತ್ತು ಆಕೆಯ ಗಂಡನಿಗೆ ಮಾತ್ರ. ತನ್ನ ಸಹೋದ್ಯೋಗಿಗಳಲ್ಲೇ ಹಲವರು ಆಕೆ ಬಂದುದರ ಕುರಿತು ತಮಗಾದ ವಿಸ್ಮಯವನ್ನು ಮುಚ್ಚಿಕೊಳ್ಳಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ.

ಆದಷ್ಟುಬೇಗ ಅಲ್ಲಿಂದ ಹೊರಡಬೇಕು ಎಂದು



ಪ್ರಯತ್ನಿಸಿದರೂ ಮೇರಿ ಬೇಕೆಂದೇ ಅವಳೊಡನೆ ಮಾತನಾಡುತ್ತಲೇ ಆಕೆಯನ್ನು ನಿಲ್ಲಿಸಿಕೊಂಡಳು....

ತಾನು ಕೊಡಲಿದ್ದ ಉಡುಗೊರೆಯನ್ನು ಮೇರಿಯ ಕೈಗೊಪ್ಪಿಸುತ್ತಿದ್ದಾಗ ಆಕೆ "ಇದಕ್ಕಿನ್ನೇನು ಕೂಡಿಸಿ ವಾಪಾಸು ಕೊಡಬೇಕಾಗಿದೆಯೋ ಆದಷ್ಟು ಬೇಗ ಆಮಂತ್ರಣ ಕೊಡು" ಎಂದಾಗ ನಿರುಪಮೆಗೆ ಕರುಳು ಹಿಂಡಿದಂತಾಗಿತ್ತು.

ಇನ್ನೊಂದು ನವಂಬರದಲ್ಲಿ ಮೂವತ್ತೊಂದು......

ದೀಪವಾರಿಸಿ ಗೋಪಿಯ ಬೆನ್ನು ತಟ್ಟುತ್ತಲೇ ಮಲಗಿದ್ದ ನಿರುಪಮೆಗೆ ಬಹಳ ಹೊತ್ತಿನ ತನಕ ನಿದ್ದೆ ಬರಲೇ ಇಲ್ಲ. ಆ ಮೇಲೆ ಜೊಂಪು ಹಿಡಿಯಿತು . . . ಮಧ್ಯರಾತ್ರೆಯ ಹೊತ್ತಿಗೆ ಒಮ್ಮೆಗೇ ಎಚ್ಚರವಾದಾಗ ಪಕ್ಕದ ಕೋಣೆಯಲ್ಲಿ ಅತ್ತಿಗೆ ಅಣ್ಣನೊಡನೆ ಕಿರುದನಿಯಲ್ಲಿ ಮಾತನಾಡುವುದು ಕೇಳುತ್ತಿತ್ತು.

"ನಿರೂ ರಜೆ ಯಾವಾಗ ತೆಗೆದುಕೊಳ್ಳುತ್ತಾಳಂತೆ . . ."

"ಮುಂದಿನ ತಿಂಗಳು ತೆಗೆದುಕೊಂಡರೂ ತೆಗೆದುಕೊಳ್ಳಬಹುದು . . . ಹುಟ್ಟಿದ ಹಬ್ಬಕ್ಕೆ ಊರಿಗೆ ಹೋಗುವ, ಅಮ್ಮನನ್ನು ಕಾಣುವ ಆಸೆಯೆಂದು ತೋರುತ್ತದೆ."

"ಮೂವತ್ತೊಂದು ಅಲ್ಲವೆ !"

"ಹೌದು . . ."

"ಪಾಪ ! . . ."

ಆ ಮೇಲೆ ಕೆಲಕಾಲ ಮೌನ.

"ಅವಳು ಒಂದು ಆರು ತಿಂಗಳು ರಜೆ ಮುಂದೆ ಹಾಕಿದರೆ ನನ್ನ ಹೆರಿಗೆಯ ಸಮಯ ಒಳ್ಳೆಯದಾಗುತ್ತಿತ್ತು . . ."

"ಅದೂ ಹೌದು . . ."

"ಕೇಳಿ ನೋಡುತ್ತೇನೆ ಆದರೆ ಊರಿಗೆ ಹೋಗುವ ಆಸೆಯಿದ್ದರೆ ಯಾಕೆ ಅವಳನ್ನು ತಡೆಯುವದು ?"

"ಚಿಂತಿಲ್ಲ, ಕೇಳು. ಅವಳು 'ಇಲ್ಲ' ಎನ್ನುವುದಿಲ್ಲ. ಊರಿಗೆ ಇನ್ನೊಮ್ಮೆ ಹೋದರಾಯಿತು"

ಆ ಮೇಲೆ ಮೌನ . . .

ಎರಡು ವರ್ಷಕಾಲ ಪ್ಲೂರಸಿಯಿಂದ ನರಳುತ್ತಿದ್ದ ಅತ್ತಿಗೆ ಈಗಷ್ಟೇ ಗುಣಮುಖವಾಗುತ್ತಿದ್ದಾಳೆ . . .

ಇನ್ನೊಂದು ಆರು ತಿಂಗಳಲ್ಲಿ ಗೋಪಿಗೆ ತಮ್ಮನೋ, ತಂಗಿಯೋ ತನಗೆ ಆಡಲು ಇನ್ನೊಂದು ಮಗು.

ಬಳಿಯಲ್ಲಿದ್ದ ದಿಂಬಿನಿಂದಲೆ ನಿರುಪಮೆ ಬಾಯಿ ಮುಚ್ಚಿಕೊಂಡಳು.

ಮರುದಿನ ಬೆಳಿಗ್ಗೆ ತುಸು ಬೇಗನೆ ಎದ್ದ ನಿರುಪಮೆ ಕಾಫಿ ಮುಗಿಸಿದೊಡನೆ ಅಣ್ಣನನ್ನು ಬಾಲ್ಕನಿಗೆ ಕರೆದಳು"

"ಏನೂ ನಿರೂ ಽ ಽ ಽ"

"ಅಣ್ಣಾ! ನೀನು ಬೇಸರ ಮಾಡಿಕೊಳ್ಳುವದಿಲ್ಲವಾದರೆ ಒಂದು ಮಾತು ಹೇಳುತ್ತೇನೆ."

"ಎಂಥಾ ಬೇಸರ ನಿರೂ ! ಏನು ಮಾತು ? ಇಷ್ಟು ದೊಡ್ಡ ಹೆಂಗಸು ನೀನು. ನಿನ್ನ ಮಾತಿನಿಂದ ಬೇಸರವೆ ?"

"ನನ್ನ ಮದುವೆಯ ವಿಚಾರ ಅಣ್ಣಾ. ಅಪ್ಪ ಪ್ರಯತ್ನ ಮಾಡಿದರು. ನೀನು ಪ್ರಯತ್ನ ಮಾಡಿದಿ...... ಈಗ...... ಈಗ......"

"ಏನಾಯಿತು ನಿರೂ ?"

"ನನ್ನ ಪ್ರಯತ್ನವೆಂದು 'ಟೈಮ್ಸ್' ನಲ್ಲಿ ಒಂದು ಜಾಹೀರಾತ ಕೊಡಣ್ಣ...... ಎಷ್ಟು ಕಾಲ ಈ ಒಂಟಿಜೀವನ......"

"ನಾವೆಲ್ಲ ಇಲ್ಲವೆ ನಿರೂ...... ಎಂಥ ಒಂಟಿ ಜೀವನ?" ಎಂದು ಪ್ರಭಾ ತಂಗಿಯ ಕಣ್ಣಲ್ಲಿ ನೀರು ನೋಡಿ ಹೇಳಿದ.

"ನೋಡೋಣ ನಿರೂ......... ಅದಕ್ಕೇನು ? ಆದರೆ ಸತ್ಯ ಹೇಳಿದರೆ ಉತ್ತರ ಸಿಗಲಿಕ್ಕಿಲ್ಲ ; ಸತ್ಯ ಹೇಳದಿದ್ದರೆ ಮುಂದೆ ಅಪಹಾಸ್ಯ...."

"ಇರಲಿ ಅಣ್ಣಾ. ಸತ್ಯವನ್ನೇ ಹೇಳು...... ಈ ಜಗತ್ತಿನಲ್ಲಿ ಬರೇ ರೂಪವನ್ನಷ್ಟೆ ಅಲ್ಲದೆ ದಯೆ, ದಾಕ್ಷಿಣ್ಯ, ಪ್ರೀತಿಗಳನ್ನು ಬಯಸುವವರೂ ಯಾರಾದರೂ ಇರಬಹುದು......"

ಪ್ರಭಾಕರ ಮಾತನಾಡಲಿಲ್ಲ.

"ಕೊಡಿಸುತ್ತೀಯಾ ?"

"ನಿನ್ನಿಷ್ಟ" ಎಂದ.

ನಿರುಪಮೆಗೆ ಅದೇ ಸ್ವರ್ಗ. ಮೇರಿಯಂತೆಯೇ ಪ್ರೀತಿಯೆಂಬುದೇನೆಂದು ಅರಿತಿರುವ ಗಂಡಸರೂ ಯಾರಾದರೂ ಇರಬಹುದು...... ತನ್ನ ಅವಸ್ಥೆಯನ್ನು ಕಂಡು ಕನಿಕರಗೊಂಡು ಉದ್ಧರಿಸುವ ಇಚ್ಛೆಯಿಂದ ಮುಂದೆ ಬರುವ ಯೋಗ್ಯರೂ ಇರಬಹುದು.

ಹಾಗೆ ಬಂದಾಗ...... ತನಗೆ ಬಿಡುಗಡೆ.

ಆ ಬಿಡುಗಡೆ ಸ್ವರ್ಗ. ಆ ಸ್ವರ್ಗದಲ್ಲಿ ತಾನೇ ಅಧಿಪತಿ. ತಾನೇ ಸ್ವಾಮಿನಿ. ಬದುಕಿನಲ್ಲಿ ರೂಪ ಒಂದೇ ಅಲ್ಲ, ಇತರ ಮಾನವೀಯ ಅಂಶಗಳೂ ಇವೆಯೆಂದು ಸಾರುವಂತೆ ತನ್ನ ನಡುವಳಿಕೆಯನ್ನು ರೂಪಿಸಿಕೊಂಡು, ಜಗತ್ತಿನ ಕಲ್ಯಾಣಕ್ಕೆ ಹೆಣಗಲಿರುವ ಧೀರ ಮಹಿಳೆ.........

ಈ ಬಾಲ್ಯನಿಯ ಬಂಧನದಿಂದ, ತನ್ನ ಸ್ವಂತ ಮನೆಗೆ ಬಿಡುಗಡೆಯ ಹಾದಿ ನೇರವಾಗಿ ಸಾಗಿದೆ...

ಮೇರಿಯ ಪ್ರಯತ್ನ ಫಲಿಸಿಲ್ಲವೆ! ಹಾಗೇ ತನ್ನದೂ ಏಕೆ ಫಲಿಸಬಾರದು.........?

ಅಂದು ಸಂಜೆ ಪ್ರಭಾಕರ ಮರಳಿದವನು 'ಟ್ರಾನ್ಸ್' ನಲ್ಲಿ ಜಾಹೀರಾತು ಕೊಟ್ಟಿರುವುದಾಗಿ ತಂಗಿಯೊಡನೆ ತಿಳಿಸಿದ.

ಎರಡು ದಿನ ಕಳೆದು ನಿರುಪಮೆ ತನ್ನ ಮದುವೆಯ ಕುರಿತಾದ, ತನ್ನ ಭವಿಷ್ಯಕ್ಕೆ ಸಂಬಂಧಿಸಿದ ಜಾಹೀರು ಪ್ರಕಟನೆಯನ್ನೇ ಕಂಡಳು:

"೨೮ ವರ್ಷ ವಯಸ್ಸಿನ ದುಡಿಯುವ ಕುಲೀನ ಬ್ರಾಹ್ಮಣ ಯುವತಿಗೆ ಯೋಗ್ಯವರ ಬೇಕಾಗಿದ್ದಾನೆ. ಕೆಲವು ತೊನ್ನಿನ ಕಲೆಗಳನ್ನು ಕಡೆಗಣಿಸುವ ಕರುಣಾಳುಗಳು ಪತ್ರವ್ಯವಹಾರ ಮಾಡಬೇಕು. ಬಾಕ್ಸ ನಂಬರ..."

ನಿರೀಕ್ಷೆಯ ಒಂದೊಂದೇ ದಿನ ಕಳೆಯುತ್ತಿತ್ತು. ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಉತ್ಸಾಹದಿಂದಲೇ ನಿರುಪಮೆ ಅಣ್ಣ ಮನೆಗೆ ಬರುವದನ್ನೇ ಕಾಯುತ್ತಿದ್ದಳು.

"ಏನಾದರೂ ಉಂಟೇ ಅಣ್ಣ?" ಎಂದು

ಆತ ವಿಷಾದದ ನಗೆ ನಗುವಾಗ ಆಕೆಗೆ ಅರ್ಥವಾಗುತ್ತಿತ್ತು. ಬೇರೆ ಮಾತೇ ಆಡುತ್ತಿರಲಿಲ್ಲ. ಇಂದಲ್ಲವಾದರೆ ನಾಳೆ ಯೋಚಿಸಲು ಅವಕಾಶ ಬೇಡವೆ?

ಹತ್ತು ದಿನಗಳ ತನಕ ಇದೇ ನಿರೀಕ್ಷೆ ಸಾಗಿತು. ನಿರುಪಮೆಯ ಉತ್ಸಾಹ ಉಕ್ಕುತ್ತಲೇ ಇದ್ದಿತಾದರೂ ಆಕೆ ಊಟ ಉಪಚಾರಗಳನ್ನು ಕಡೆಗಣಿಸಿ ದೇಹದಲ್ಲಿ ಸೊರಗುತ್ತಿರುವಳೆಂದು ಹೇಳಲು ಸಂದೇಹ ಅಗತ್ಯವಿರಲಿಲ್ಲ.

ಹತ್ತು ದಿನಗಳ ಮೇಲೆ ಪ್ರಭಾ ಒಂದು ಕಾಗದ ಹಿಡಿದುಕೊಂಡು ಬಂದ... ನಿರುಪಮೆ ಪ್ರಶ್ನೆ ಕೇಳುವ ಮೊದಲೇ ಅದನ್ನು ಅವಳಿಗೊಪ್ಪಿಸಿದ. ನಡುಗುವ ಕೈಗಳಿಂದ ಅದನ್ನು ಬಿಡಿಸಿ ನಿರುಪಮೆ ಓದಿದಳು.

"ತಮ್ಮ ಜಾಹೀರಾತು ನೋಡಿದೆ. ನಾನು ತಮ್ಮ ಹುಡುಗಿಯೊಂದಿಗೆ ವಿವಾಹ ಸಂಬಂಧ ಬೆಳಸಲು ಇಚ್ಛಿಸುತ್ತೇನೆ. ನನಗೆ ಸುಮಾರು ನಲವತ್ತು ವರ್ಷ ವಯಸ್ಸಾಗಿದೆ... ತಮ್ಮ ಹುಡುಗಿಯ ಸ್ಥಿತಿ ಕೇಳಿ ತುಂಬ ಕನಿಕರವಾಗಿ ಸಹಾಯ ಮಾಡುವ ಆಸೆ ನನಗಾಗಿದೆ. ನಾನು ಕಳೆದ ಯುದ್ಧದಲ್ಲಿ ದುಡಿದಿದ್ದೆ. ಬರ್ಮಾರಂಗದಲ್ಲಿ ಆದ ಒಂದು ಸ್ಫೋಟದ ಪರಿಣಾಮವಾಗಿ ನನ್ನ ಒಂದು ಕೈ ಮತ್ತು ಒಂದು ಕಾಲು ಹೋಗಿವೆ. ಆದರೆ ನೀವಿದನ್ನು ಗಮನಿಸುವುದಿಲ್ಲವೆಂದು ನಂಬಿದ್ದೇನೆ. ನಾನೂ ಬ್ರಾಹ್ಮಣ ಶಾಕಾಹಾರಿ. ನನಗೆ ಸ್ವಲ್ಪ ಪೆನ್‌ಶನ್ ಹಣ ಬರುತ್ತದೆ. ಆದರೆ ನಿಮ್ಮ ಹುಡುಗಿ ದುಡಿಯುತ್ತಿರುವಳಾದ ಕಾರಣ ಆಕೆಯ ಜೀವನದ ಬಗ್ಗೆ ತೊಂದರೆಯಿಲ್ಲ. ಈ ಸಂಬಂಧದ ಹೆಚ್ಚಿನ ಮಾತುಕತೆಗಾಗಿ ನೀವು ಮೇಲೆ ಕಾಣಿಸಿದ ವಿಳಾಸಕ್ಕೆ ಬಂದರೂ ಆಗಬಹುದು. ಅಥವಾ ನಾನೇ ಅಲ್ಲಿಗೆ ಬರಬೇಕಾದಲ್ಲಿ.....

ನಿರುಪಮೆ ಮುಂದೆ ಓದಲಿಲ್ಲ. ಓದುವ ತಾಳ್ಮೆ ಆಕೆಗಿರಲಿಲ್ಲ. ಕಾಗದವನ್ನು ಹರಿದು ಚೂರು ಚೂರು ಮಾಡಿ ಗಾಳಿಯಲ್ಲಿ ಆ ತುಂಡುಗಳನ್ನು ಎಸೆದಳು.

ಕಣ್ಣೀರಿನ ಎರಡು ದೊಡ್ಡ ಹನಿಗಳು ಆಕೆಯ ಕಪೋಲಗಳ ಮೇಲಿಂದ ಇಳಿದು ತೊನ್ನು ತೊಗಲಿದ ಜಾಗವನ್ನು ದಾಟ ಭೂಮಿಗಿಳಿಯುವ ಪ್ರಯತ್ನದಲ್ಲಿದ್ದವು.

ತನ್ನ ಅಣ್ಣನೆ ಈ ರೀತಿ ಕಾಗದ ಬರೆದು ತಂದಿರಬಹುದು ಎಂಬ ಸಂದೇಹ ಆಕೆಯ ಕನಸಿನಲ್ಲಿ ಕೂಡ ಸುಳಿಯುವಂತಿರಲಿಲ್ಲ.

ಲೇಖನಿಯ ಸೇವಕ

ಹಿಂದೀ ಲೇಖಕ ದಿವಂಗತ ಪ್ರೇಮಚಂದರು ಬಯಸಿದಾಗೆಲ್ಲ ಬರೆಯುತ್ತಿದ್ದರು. ಅವರಿಗೆ ಹೊರಗಿನ ಯಾವ ಉಪಕರಣವೂ ಬೇಕಾಗುತ್ತಿರಲಿಲ್ಲ. ಒಮ್ಮೆ ಅವರೊಡನೆ ಮಾತನಾಡುತ್ತ ಶ್ರೀ ಕನ್ಹೈಯ್ಯಾಲಾಲ ಮಿಶ್ರರವರು ಕೇಳಿದರು. "ನೀವು ಎಂಥ ಕಾಗದದಲ್ಲಿ ಎಂಥ ಪೆನ್ನಿನಿಂದ ಬರೆಯುತ್ತೀರಿ."

ಅವರು ನಗುತ್ತ ಹೇಳಿದರು: "ಹಿಂದೆ ಏನೂ ಬರೆದಿರದ ಕಾಗದದ ಮೇಲೆ ಒಮ್ಮೆಯೂ ನಿಬ್ಬು ಮುರಿಯದ ಪೆನ್ನಿನಿಂದ ಬರೆಯುತ್ತೇನೆ" ಅನಂತರ ಅವರು ಸ್ವಲ್ಪ ಗಂಭೀರವಾಗಿ ಹೇಳಿದರು: "ಅಣ್ಣಾ, ಈ ಎಲ್ಲ ಹುಡುಗಾಟಗಳು ನಮ್ಮಂಥ ಲೇಖನಿಯ ಸೇವಕರಲ್ಲಿ ತಕ್ಕುವಲ್ಲ"

ಏಕೀಕರಣವಾದ ಮೇಲೆ

ಕರ್ನಾಟಕವು ಏಕೀಕರಣಕ್ಕಾಗಿ ಈ ವರೆಗೆ ಶ್ರಮಿಸಿದ್ದಿತು. ಈಗ ಏಕೀಕರಣವು ಸಾಧಿಸಿದೆ. ಕರ್ನಾಟಕ ರಾಜ್ಯವು ತಲೆಯೆತ್ತಿದೆ. ಇನ್ನು ಕನ್ನಡಿಗರಿಗೆ ಯಾವ ಕಾರ್ಯ ? ಕರ್ನಾಟಕ ಸರಕಾರ ತನ್ನ ಜನತೆಗಾಗಿ ಯಾವ ಯಾವ ಕಾರ್ಯ ಮಾಡಬೇಕು, ಪ್ರಗತಿ ಸಾಧಿಸಲು ನಿಸರ್ಗ ಸಂಪತ್ತನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ವಿಚಾರಿಸಬೇಕಾಗಿದೆ. ಲೇಖಕರು ಇಲ್ಲಿ ಆ ದಿಸೆಯಲ್ಲಿ ಸೂಚನೆ ಮಾಡಿರುವರು.

ಇಷ್ಟೊಂದು ದಿನ ಕನ್ನಡದ ಜನತೆ ಒಂದೇ ಆಡಳಿತೆಯ ಕ್ಷೇತ್ರದ ಪರಿಮಿತಿಯಲ್ಲಿ ತಾವು ಬರಬೇಕೆಂದು ಹವಣಿಸಿದ್ದ ಕನಸು, ಸುಮಾರು ಮೂವತ್ತು ವರ್ಷಗಳ ಕಾಲ ಚಳವಳಿ ನಡೆಸಿದ ಬಳಿಕ ಕೈಗೂಡುತ್ತಿದೆ. ಹಿಂದೆ ಆಡಳಿತೆಯ ದೃಷ್ಟಿಯಿಂದ ಕರ್ನಾಟಕ ಒಂದಾಗಿದ್ದ ಕಾಲವು, ವಿಜಯನಗರ ಸಾಮ್ರಾಜ್ಯಕ್ಕಿಂತಲೂ ಮೊದಲಿನದ್ದಿತ್ತು. ವಿಜಯನಗರದ ಅರಸುಗಳ ಕಾಲದಲ್ಲಿ ವಿಜಾಪುರ, ಬೀದರ, ಗೋಲ್ಕೊಂಡ ದೊರೆಗಳ ಕೆಳಗೆ ಕನ್ನಡನಾಡಿನ ಕೆಲವೊಂದು ಭಾಗಗಳು ಹಂಚಿಹೋಗಿದ್ದವು. ಬ್ರಿಟಿಶರ ಕಾಲದಲ್ಲಿ, ಕನ್ನಡ ಜನರು ಹತ್ತಿಪ್ಪತ್ತು ಆಡಳಿತೆಗಳ ಕೈಕೆಳಗೆ ಹಂಚಿ ಹೋಗಿ, ಎಲ್ಲ ಕಡೆಯಲ್ಲಿಯೂ ಅವರು ಅಲ್ಪಸಂಖ್ಯಾಕರೆನಿಸಿದುದರಿಂದ, ಒಂದೇ ಭಾಷೆಯನ್ನಾಡುವ ಜನ ಒಂದು ಆಡಳಿತೆಯ ಕೆಳಗೆ ಇದ್ದಲ್ಲಿ ಹೆಚ್ಚಿನ ಹಿತಸಂಪಾದಿಸಬಹುದೆಂಬ ಆಸೆಯೇ ಈ ಏಕೀಕರಣ ಚಳವಳಕ್ಕೆ ಮೂಲ ಕಾರಣವಾಗಿತ್ತು. ಮೈಸೂರು ಸಾಕಷ್ಟು ದೊಡ್ಡದಿದ್ದುದರಿಂದಲೂ ಅವರಿಗೆ ಅನ್ಯಭಾಷೆಯ ಜನಗಳ ಒತ್ತಾಯ ಬೀಳದಿದ್ದುದರಿಂದಲೂ ಅವರಲ್ಲಿ ಹಲವರಿಗೆ, ಉಳಿದ ಕನ್ನಡ ಜನಗಳ ಏಕೀಕರಣದ ಹಂಬಲ ಅರ್ಥವಾಗಲಾರದು. ಈಗಂತು ಕನ್ನಡನಾಡು ಒಂದಾಗುತ್ತಿದೆ. ಇದರಿಂದ ನಾವು ಸಾಧಿಸಿಕೊಳ್ಳಬಹುದಾದ ಕೆಲಸಗಳಲ್ಲಿ ಇನ್ನಾದರೂ ತೊಡಗಬಹುದೆಂಬ ವಿಶ್ವಾಸ ಜನತೆಗೆ ಬರಬೇಕಾಗಿದೆ.

ಆಡಳಿತ ಸೌಕರ್ಯ

ಇದರ ಮೊದಲಿನ ಪ್ರಯೋಜನ — ಜನಕ್ಕೆ ಸಿಗಬೇಕಾದ್ದು ಆಡಳಿತೆಯ ದೃಷ್ಟಿಯಿಂದ. ಜನಕ್ಕಾಗಿ ಆಡಳಿತೆ ನಡೆಯಬೇಕೇ ವಿನಾ, ಆಳುವವರ ಸೌಕರ್ಯಕ್ಕಾಗಿ ಅದು ಇರುವದಿಲ್ಲವಷ್ಟೆ. ಜನಕ್ಕೆ ತಿಳಿಯುವ ಭಾಷೆಯಲ್ಲಿ, ರಾಜ್ಯದ ವ್ಯವಹಾರಗಳು ನಡೆಯಬೇಕಾಗಿದೆ. ಇಷ್ಟುದಿನ ಇಂಗ್ಲಿಷರ ಸೌಕರ್ಯಕ್ಕಾಗಿ, ತಾಲೂಕು ಹಂತದಲ್ಲಿ ಕೂಡ, ಆಡಳಿತೆಯ ಭಾಷೆ ಇಂಗ್ಲಿಷ ಆಗಿತ್ತು. ಪತ್ರವ್ಯವಹಾರಗಳೆಲ್ಲ ಅದರಲ್ಲೇ ನಡೆದುವು. ಕೊರ್ಟಿನ ಭಾಷೆಯೂ ಅದು. ಸಾರ್ವಜನಿಕ ದಾಖಲೆಪತ್ರಗಳು ಅದರಲ್ಲಿದ್ದುವು. ಇದರಿಂದ, ಪ್ರಯೋಜನ ಹೊಂದಬೇಕಾದ ಪ್ರಜೆಯೂ ಅನುವಾದಕನ ಸಹಾಯವಿಲ್ಲದೆ ಪ್ರಯೋಜನ ಪಡೆಯದಾಗಿತ್ತು. ಇನ್ನು ಮುಂದೆ– ಈ ಅವಾಂತರ ತಪ್ಪಿ, ಪ್ರಾಂತೀಯ ಸರಕಾರದ ಆಂತರಿಕ ವ್ಯವಹಾರಗಳೆಲ್ಲವೂ ಕನ್ನಡದಲ್ಲಿಯೇ ನಡೆಯಬೇಕು. ಸರಕಾರಿ ನಿಯಮಗಳು ಕಾಯದೆಗಳು, ಪತ್ರವ್ಯವಹಾರಗಳು ಕನ್ನಡದಲ್ಲಿ ನಡೆದರೆ ಜನಕ್ಕೆ ಹೆಚ್ಚಿನ ಉಪಯೋಗವಾದೀತು. ಅಂತಃಪ್ರಾಂತೀಯ ಮಟ್ಟದಲ್ಲಿ ಈಗ ಇಂಗ್ಲಿಷನ್ನೂ ಮುಂದೆ ಹಿಂದೀಯನ್ನೂ ಉಳಿಸಬಹುದು ಆದರೆ ಜನತೆಯೊಡನೆ ಇರಿಸಿಕೊಳ್ಳಬೇಕಾದ ಸಂಪರ್ಕ ಅವರಾಡುವ ಮಾತಿನಿಂದಲೇ ಬೆಳೆಯಬೇಕು. ಪ್ರಜೆಯಾದವನು ಪ್ರಜಾಪ್ರಭುತ್ವದಲ್ಲಿ ತನ್ನ ಹಕ್ಕು ಬಾಧ್ಯತೆಗಳನ್ನರಿಯುವುದಕ್ಕೆ, ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸುವುದಕ್ಕೆ, ಅವನಿಗೆ ಸುಲಭದಲ್ಲಿ ತಿಳಿಯುವ ಕನ್ನಡನುಡಿಯೇ, ನಾಡನುಡಿಯೇ, ತಕ್ಕಭಾಷೆ ಹೊರತು ಅನ್ಯ ಭಾಷೆಯಲ್ಲ.

ಶಿಕ್ಷಣಮಾಧ್ಯಮ

ಶಿಕ್ಷಣಮಾಧ್ಯಮ ಬಹು ಜನಗಳ ಪ್ರಯೋಜನವನ್ನು ಸಾಧಿಸಬೇಕಾದರೆ, ಜನಗಳ ಭಾಷೆಯಲ್ಲೇ ನಡೆಯಬೇಕಾಗಿದೆ. ಜನತೆಯ ಶಿಕ್ಷಣ ಎಂಬುದು ವಿವಿಧ ಹಂತಗಳಲ್ಲಿ ನಡೆಯಬೇಕಾಗುತ್ತದೆ. ಜ್ಞಾನಸಂಪಾದನೆಯ ಕೆಲಸದಲ್ಲಿ ಅನ್ಯಭಾಷೆಯೇ ಪ್ರಧಾನಪಾತ್ರ ವಹಿಸಿದರೆ, ಜನಕ್ಕೆ ಅದನ್ನು ತಿಳಿಯುವ ಕಷ್ಟವೇ ಹೆಚ್ಚಿನದಾಗುತ್ತದೆ. ವಿಜ್ಞಾನವಿರಲಿ, ಮತ್ತೊಂದೇ ಇರಲಿ–ಅವನವನ ಭಾಷೆಯಲ್ಲಿ ಹೇಳಲಾರದಂಥ ವಸ್ತು ಅದಲ್ಲ. ಜಪಾನಿನ ವೈಜ್ಞಾನಿಕ ಶಿಕ್ಷಣ, ಅಪಗಾನಿಸ್ಥಾನದ ವೈದ್ಯಕೀಯ ಶಿಕ್ಷಣ ಅಲ್ಲಲ್ಲಿನ ದೇಶಭಾಷೆಗಳಲ್ಲೇ ನಡೆಯುತ್ತಿದೆ. ಇದು ಆಗಬೇಕಾದ ಕೆಲಸ ; ವೈಜ್ಞಾನಿಕ ಪರಿಭಾಷೆಯ ಮಟ್ಟಿಗೆ ಪಾಶ್ಚಾತ್ಯ ಪರಿಭಾಷೆಯನ್ನು ನಾವು ಇರಿಸಿಕೊಳ್ಳಬಾರದೆಂದಲ್ಲ. ವೈಜ್ಞಾನಿಕ ಶಿಕ್ಷಣದಲ್ಲಿ ತಜ್ಞತೆ ಪಡೆಯುವವರು, ವಿಶೇಷ ಅಭ್ಯಾಸ ಮಾಡಬೇಕಾದವರು ದೀರ್ಘ ಕಾಲದ ತನಕವೂ ಕನ್ನಡದಲ್ಲೇ ಅದನ್ನು ಮಾಡಲಾರರು ಎಂಬುದು ನಿಜ. ಆ ಶಿಕ್ಷಣಕೇಂದ್ರಗಳು ಯಾವ ದೇಶದಲ್ಲಿ ಇವೆಯೋ, ಆ ದೇಶ ಭಾಷೆ ಅವರು ಕಲಿಯಬೇಕಾಗುತ್ತದೆ ಅದು ಇಂಗ್ಲಿಷ್ ಇರಬಹುದು; ಜರ್ಮನ್ ಇರಬಹುದು; ಫ್ರೆಂಚ್ ಇಲ್ಲವೆ ರಷ್ಯನ್ ಭಾಷೆಯೂ ಆಗಬಾರದೆಂದಿಲ್ಲ. ಇಂಥ ವಿಶೇಷ ಶಿಕ್ಷಣಶಾಸ್ತ್ರಪಡೆಯುವವರ ಸಂಖ್ಯೆ ನೂರರಲ್ಲಿ ಎಷ್ಟಿರಬಹುದು? ನೂರರಲ್ಲಿ ಒಬ್ಬರೋ! ಇಬ್ಬರೋ ! ಅಂಥವರು ತಮಗೆ ಅನುಕೂಲವಾದ ಒಂದೆರಡು ಅನ್ಯ ಭಾಷೆಗಳನ್ನು ಕಲಿತೇ ಕಲಿಯಬೇಕಾಗುತ್ತದೆ. ಆದರೆ ನೂರಕ್ಕೆ ಒಂದರಷ್ಟಿರುವ ಜನರ ಲಾಭಕ್ಕಾಗಿ, ತೊಂಬತ್ತೊಂಬತ್ತರಷ್ಟು ಜನಗಳ ಮೇಲೆ ಅನ್ಯ ಭಾಷೆಯ ಹೊರೆಯನ್ನು ನಾವು ಹೊರಿಸಬೇಕಿಲ್ಲ. ನಮ್ಮ ಮನಸ್ಸು ವಿಚಾರ ಮಾಡುವ ಭಾಷೆಯೇ ಮಾತೃಭಾಷೆ. ಕರ್ನಾಟಕದಲ್ಲಿ ಕನ್ನಡಭಾಷೆ ಆ ಕೆಲಸ ಮಾಡಬೇಕಾಗುತ್ತದೆ. ಹೊರಗಿಂದ ತಂದ ಇಲ್ಲವೆ ಕಲಿತ ಯಾವೊಂದು ಭಾಷೆಯೂ ನಮ್ಮ ಮನಸ್ಸಿನ ವಿಚಾರದ ಭಾಷೆಯಾಗಲಾರದು.

ಕನ್ನಡದಲ್ಲಿ ಬೇಗನೆ ಶಿಕ್ಷಣ

ಜನರಿಗೆ ಶಿಕ್ಷಣವನ್ನು ಎಷ್ಟು ಬೇಗ ಎಂದರೆ ಅಷ್ಟು ಬೇಗನೆ ನಾವು ಕನ್ನಡದಲ್ಲಿ ಒದಗಿಸಿಕೊಟ್ಟು ತಿಳುವಳಿಕೆಯನ್ನು ಉಂಟುಮಾಡಬೇಕು. ಇದು ಶಾಲೆಯ ಒಳಗೂ ಹೊರಗೂ ನಡೆಯಬೇಕಾದ ಕೆಲಸ. ಪತ್ರಿಕೆಗಳೂ ಪುಸ್ತಕಗಳೂ ಈ ಕೆಲಸವನ್ನು ಮಾಡಬೇಕಾಗಿದೆ. ಮಾಡುವ ಅವಸರದಲ್ಲಿ ಕೆಲಸದ ಸ್ವರೂಪವನ್ನೂ ಉದ್ದೇಶವನ್ನೂ ಹಾಳು ಮಾಡಬಾರದು. ಮೂಲಗ್ರಂಥಗಳನ್ನೂ ಮೂಲ ಬರಹಗಳನ್ನೂ ನಾವು ಸೃಷ್ಟಿಸಲಾರೆವಾದರೆ, ಅನುವಾದಗಳು ನಮಗೆ ಬೇಕೇ ಬೇಕು. ಈಗಾಗಲೇ ನಮ್ಮ ಮುಂದಿರುವ ಅನುವಾದ ಗ್ರಂಥಗಳನ್ನು ಓದಿದರೆ, ಪತ್ರಿಕೆಗಳಲ್ಲಿ ಬರುವ ಅನುವಾದಿತ ಲೇಖನ ಮತ್ತು ಸುದ್ದಿಗಳನ್ನು ಓದಿದರೆ, ಅವು ಚೆನ್ನಾಗಿ ಅರ್ಥವಾಗದ ವಸ್ತುಗಳಾಗಿ ಕಾಣುತ್ತವೆ—ಏಕೆ ? ಅನ್ಯ ಭಾಷೆಯ ವಾಕ್ಯಗಳನ್ನು ಶಬ್ದಕ್ಕೆ ಶಬ್ದ, ಮಾತಿಗೆ ಮಾತು,

ಲೇ : ಶಿವರಾಮ ಕಾರಂತ, ಪುತ್ತೂರು.



“ ಕಾವಲು ನಿಂತಿಹ ತಳವರರಂದದಿ ”

ಮೈಸೂರಿನ ‘ ವೃಂದಾವನ ’ ದ ಒಂದು ದ

ಭಾಷಾಂತರಿಸುವುದರಿಂದ ಎರಡೂ ಭಾಷೆಗಳಲ್ಲಿನ ಶಕ್ತಿಯೂ ದುರ್ಬಲವಾಗುತ್ತದೆ. ಜ್ಞಾನವನ್ನು ನಾವು ಮೂಲಗ್ರಂಥದ ಭಾಷೆಯಿಂದ ತಿಳಿದಾದ ಮೇಲೆ, ಅದನ್ನು ತಿರುಗಿ ನಮ್ಮ ನುಡಿಯಲ್ಲಿ ಹೇಳುವಾಗ—ಹೇಳುವ ಶೈಲಿ, ರೀತಿ, ಚಿತ್ರಣ ವಿಧಾನಗಳು ನಮ್ಮ ಭಾಷೆಯ ಸ್ವಭಾವವನ್ನನುಸರಿಸಬೇಕಾಗುತ್ತದೆ.

ಈಗ ಮಾಡಬೇಕಾದ ಕೆಲಸಗಳು

ಹೀಗೆ ಕನ್ನಡ ನುಡಿಗೆ ಪ್ರಾಶಸ್ತ್ಯ ಕೊಟ್ಟು ಆ ಮೂಲಕ ಜನಕ್ಕೆ ಒದಗಿಸಿಕೊಡಬಹುದಾದ ಅನುಕೂಲತೆಗಳು ಮಾತ್ರವಲ್ಲದೆ, ಈ ಹೊಸ ಪ್ರಾಂತವು ಜನಹಿತಕ್ಕಾಗಿ ಸಾಧಿಸಬಹುದಾದ ಇತರ ಕೆಲಸಗಳು ತುಂಬಾ ಇವೆ. ಸಂಸ್ಕೃತಿಯ ದೃಷ್ಟಿಯಿಂದಲೂ ಸಂಪದುತ್ಪಾದನೆಯ ದೃಷ್ಟಿಯಿಂದಲೂ ನಾವು ಮಾಡಬೇಕಾದಂಥ ಅನೇಕ ಕೆಲಸಗಳಿವೆ. ಅವೇನೆಂದು ಪರಿಶೀಲಿಸುವ—

ಸಂಸ್ಕೃತಿಯ ದೃಷ್ಟಿಯಿಂದ ನಮ್ಮ ಪ್ರಾಂತಕ್ಕೆ ಸಂಬಂಧಿಸುವ, ಹಲವಾರು ವಿಷಯಗಳ ಪರಿಶೀಲನೆ, ಸಂಗೋಪನೆ, ಪ್ರೋತ್ಸಾಹಗಳು ನಡೆಯಬೇಕಾಗಿವೆ. ನಮ್ಮ ನೃತ್ಯ, ಗೀತ, ಚಿತ್ರ, ಶಿಲ್ಪ–ಇಂಥವುಗಳಲ್ಲಿ ಉಳಿದುಕೊಂಡಿರುವ ಅವಶೇಷಗಳಾವುವು ?– ಎಂಬುದರ ಸ್ಪಷ್ಟ ಪರಿಜ್ಞಾನ ನಮಗೆ ಇನ್ನೂ ಆಗಬೇಕಾಗಿದೆ. ಇವೆಲ್ಲವೂ ಜನಜೀವನದ ಸೊಗಸಿಗೆ ಒದಗಬಲ್ಲುವು. ನಮ್ಮಲ್ಲಿ ಕರ್ನಾಟಕ ಸಂಗೀತ ಪರಂಪರೆಯೊಂದು ಇರುವಂತೆಯೇ ಒಂದು ಕಾಲದಲ್ಲಿ, ಸ್ವತಂತ್ರ ಮನ್ನಣೆ ಪಡೆಯುತ್ತಿದ್ದ 'ಯಕ್ಷಗಾನ' ಪದ್ಧತಿಯೂ ಬಂದಿತ್ತು. ಅದು ಸಹ ಉಳಿಸಿಕೊಳ್ಳಬೇಕಾದ ಒಂದು ಗಾನ ಸಂಪ್ರದಾಯ. ಅವರ ಯೋಗ್ಯತೆಯ ಅರಿವಿಲ್ಲದೆ-ಇನ್ನೊಂದು ಸಂಪ್ರದಾಯದ ಅಭ್ಯಾಸದಿಂದ, ಅದನ್ನು ಕೊಲ್ಲುವ ಮತ್ತು ಕೆಡಿಸುವ ಎರಡು ಕೆಲಸಗಳೂ ಇಂದು ನಡೆಯುತ್ತಿವೆ. ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿರುವ ಜಾನಪದ ಗೀತವೂ ಅಭ್ಯಾಸಕ್ಕೆ ತಕ್ಕುದಾದುದು. ಜಾನಪದ ನೃತ್ಯಗಳಲ್ಲೂ ತೀರ ಪ್ರಾಥಮಿಕ ಸ್ಥಿತಿಯಲ್ಲಿರುವ, ಹಾಗೆಯೇ ಸಾಕಷ್ಟು ಬೆಳವಣಿಗೆಯನ್ನು ಪಡೆದಿರುವ, ನೃತ್ಯಮಾರ್ಗಗಳು ಹಲವಾರು ಇನ್ನೂ ಉಳಿದಿವೆ. ಕೆಲವು ನೃತ್ಯಗಳು ಮತಾಚಾರದ ಅಂಗವಾಗಿ ಉಳಿದು ಬಂದಿವೆ. ಲೌಕಿಕ ಜೀವನದ ಅಂಗವಾಗಿರುವ ಎಷ್ಟೋ ನೃತ್ಯಅಂಶಗಳು ನಾಶವಾಗುತ್ತಿವೆ. ಇವುಗಳ ಅಭ್ಯಾಸ, ಸಂಗ್ರಹಕಾರ್ಯ ಇಂದು ನಡೆಯಬೇಕು. ಚಿತ್ರಕಲಾ ಪರಂಪರೆಯ ಅಭ್ಯಾಸ ಕನ್ನಡದಲ್ಲಿ ದೊಡ್ಡದಾದ ಚಿತ್ರಕಲಾ ಪರಂಪರೆ ಎಂಬುದು ಇಂದು ಜೀವಂತವಾಗಿ ಉಳಿದಿಲ್ಲ. ಈ ಕ್ಷೇತ್ರದಲ್ಲಿ ಹಿಂದೆ — ಒಂದೆರಡು ಪರ್ವಕಾಲಗಳು ಆಗಿಹೋದುವು. ಅಜಂತಾದಲ್ಲಿ, ಬಾದಾಮಿಯಲ್ಲಿ ಮಿಂಚಿ ಮೆರೆದ ಚಿತ್ರಶೈಲಿಯು, ಹುಟ್ಟಡಗಿಹೋಗಿ, ತಿರುಗಿ ಕಾಣಿಸಿಕೊಂಡದ್ದು ದಕ್ಷಿಣದಸುಲ್ತಾನರ ಕಾಲದಲ್ಲಿ. ಇವೆರಡೂ ಪಂಥಗಳಿಗೂ ಸೇರದ ಮತ್ತೊಂದು ಸಂಪ್ರದಾಯವೂ ಎರಡು ಶತಮಾನಗಳ ಈಚಿನ ತನಕವೂ ಕನ್ನಡ ನಾಡಿನ ಗೋಡೆಯ ಚಿತ್ರಗಳಲ್ಲೂ ಪುಸ್ತಕಗಳಲ್ಲೂ ಕಂಡು ಬರುತ್ತದೆ. ಇದರಂತೆ ಶಿಲ್ಪ— ಐಹೊಳೆಯಲ್ಲಿ ತೇಜಸ್ವಿಯಾಗಿ ತೊಡಗಿದ ಶಿಲ್ಪಶೈಲಿ, ಅನಂತರ ಬಹುಕಾಲ ಸ್ಫೂರ್ತಿಯಿಲ್ಲದೆ ಉಳಿಯಿತು. ಅನಂತರ ಹಳೆಬೀಡಿನ ಕೃತಿಗಳಲ್ಲಿ ಈ ಶಿಲ್ಪವು ವಿಶೇಷವಾದ ಕಸಬುಗಾರಿಕೆಯಲ್ಲಿ ಪರಿಣಾಮಗೊಂಡುದನ್ನು ಕಾಣುತ್ತೇವೆ. ಮುಂದೆ— ತಿರುಗಿ ಸ್ಫೂರ್ತಿಗೂ ಕಸಬುಗಾರಿಕೆಗೂ ಬರಗಾಲ ಬರುತ್ತದೆ. ನಡುವಣ ಶತಮಾನ ಶತಮಾನಗಳಲ್ಲಿ– ಈ ವಿವಿಧ ಕಾಲಗಳನ್ನು ಜೋಡಿಸಬಲ್ಲ ಶಿಲ್ಪಕೃತಿಗಳೇ ಆಗಿಲ್ಲವೇನು ? ಆಗಿಲ್ಲವೆಂದಲ್ಲ ; ಅವುಗಳ ಅಭ್ಯಾಸ, ಸಂಗ್ರಹ, ಸಂಗೋಪನ ಕರ್ನಾಟಕದಲ್ಲಿ ಚೆನ್ನಾಗಿ ನಡೆದಿಲ್ಲ. ಚೋಳರಕಾಲದ ಕಂಚಿನ ಪ್ರತಿಮೆಗಳಿಗೆ ಸಮಾನವಾದ, ಸುಂದರ ಪ್ರತಿಮೆಗಳು ಕನ್ನಡನಾಡಿನಲ್ಲಿ (ಕದ್ರಿ ದೇವಾಲಯದಲ್ಲಿ) ಇವೆ. ಈ ವಿಷಯಗಳಿಗೆ ಸಂಬಂಧಪಟ್ಟ ಪರಿಶೀಲನೆ, ಸಂಗೋಪನೆ, ಸಂಶೋಧನೆಗಳಾವುವೂ ತಕ್ಕಷ್ಟು ನಡೆದಿಲ್ಲ. ಕರ್ನಾಟಕ ದೇಶವು ಒಂದು ಹಿರಿದಾದ ಪ್ರಾಂತೀಯ 'ಮ್ಯೂಜಿಯಮ'ನ್ನು ಬೆಳೆಯಿಸಿಕೊಳ್ಳಬೇಕು. ಅದಕ್ಕೆ ಬೇಕಾದ ತಜ್ಞರನ್ನು ನೇಮಿಸಿಕೊಳ್ಳಬೇಕು. ಹಾಗೆ ಮಾಡದೆ ಹೋದರೆ ಈ ಕ್ಷೇತ್ರದಲ್ಲಿನ ಬಡತನ ಬಹುದಿನ ಉಳಿದೀತು. ಸಂಪತ್ತು ಇದ್ದೂ ಇಲ್ಲದಂಥ ದಾರಿದ್ರ್ಯ ನಮ್ಮದಾದೀತು. ಸ್ವತಂತ್ರ ಕನ್ನಡ ಪ್ರಾಂತವು ಪ್ರಾಚ್ಯ ಸಂಶೋಧನೆಯನ್ನು ಅನೇಕ ಮುಖಗಳಿಂದ ವಿಸ್ತರಿಸಬೇಕಾಗಿದೆ. ಈ ತನಕ ನಡೆದ ಕೆಲಸಗಳನ್ನು ವಿಶಾಲ ಕರ್ನಾಟಕದ ದೃಷ್ಟಿಯಿಂದ ನಾವು ಸಮನ್ವಯಗೊಳಿಸಬೇಕಾಗಿದೆ. ಇತಿಹಾಸಪೂರ್ವ ಯುಗದ ಕೆಲವೊಂದು ಅದ್ಭುತ ಸಂಶೋಧನೆಗಳಿಗೂ ನಮ್ಮ ನಾಡು ಅವಕಾಶವನ್ನು ಒದಗಿಸಬಲ್ಲುದು. ಅದರಂತೆ ಮಾನವಕುಲ ಶಾಸ್ತ್ರದ (Anthropology) ಹೆಚ್ಚಿನ ಅಭ್ಯಾಸಕ್ಕೆ ನಮ್ಮ ಸರಕಾರವೂ ಮತ್ತು ವಿಶ್ವವಿದ್ಯಾಲಯಗಳೂ ಅವಕಾಶ ಕಲ್ಪಿಸಿದಲ್ಲಿ ತುಂಬ ತಿಳಿವು ನಮಗೆ ದೊರೆತೀತು. ದ್ರಾವಿಡಕುಲದ ನಂಬಿಕೆಗಳಿಗೂ ವಿವಿಧ ರೀತಿಯ ಆದಿವಾಸಿ ಮತಾಚಾರಗಳಿಗೂ ದೇವ್ವಾರಾಧನೆಗಳಿಗೂ ಇಂಬು ಕೊಟ್ಟ ಈನಾಡಿನ ಭಾಗಗಳು, ಇಂದಿಗೂ ಹಲವು ಬಗೆಯ ಹಳೆಯ ಸಂಪ್ರದಾಯಗಳನ್ನುಳಿಸಿಕೊಂಡು ಬಂದಿವೆ.

ಸಂಪತ್ತಿನ ಕ್ಷೇತ್ರದಲ್ಲಿ ನಮ್ಮ ದುಡಿಮೆಗೆ ತಕ್ಕಂತೆ, ದೂರದೃಷ್ಟಿಗೆ ತಕ್ಕಂತೆ, ಶ್ರಮ ಸಾಹಸಗಳಿಗೆ ತಕ್ಕಂತೆ ಇಲ್ಲಿ ವಾಸಿಸುವ ಎರಡು ಕೋಟಿ ಕನ್ನಡಿಗರಿಗೆ ಕನ್ನಡನಾಡು ಬೇಕಾದ ನೆರವನ್ನು ನೀಡಬಲ್ಲದು. ನಮ್ಮ ಭೂಪ್ರಕೃತಿ ಅದಕ್ಕೆ ಬಹು ಅನುಕೂಲವಾಗಿದೆ.

ಬಂದರ ಮತ್ತು ಮೀನುಗಾರಿಕೆ

ಸುಮಾರು ಇನ್ನೂರು ಮೈಲು ಉದ್ದವಾದ ನಮ್ಮ ನಾಡಿನ ಕಡಲು ದೊಡ್ಡದಾದ ಯಾವೊಂದು ಬಂದರವನ್ನೂ ಇಂದು ಪಡೆದಿಲ್ಲ. ಮಲ್ಪೆ, ಕಾರವಾರದಂಥ ಬಂದರುಗಳು, ಕರಾವಳಿಯ ಮತ್ತು ಹಿನ್ನೆಲೆಯ ರೈಲ್ವೆ ಹಾದಿಯೊಡನೆ ಜೋಡಿಸಲ್ಪ

ಟ್ಟರೆ, ಅವನ್ನು ಪ್ರಬುದ್ಧ ಬಂದರನ್ನಾಗಿ ಮಾರ್ಪ ಡಿಸಿದರೆ, ವಿದೇಶ ವ್ಯಾಪಾರಕ್ಕೆ ವಿಶೇಷವಾಗಿ ನೆರವಾಗಬಲ್ಲುದು. ಸ್ಥಳೀಯ ಅಭಿಮಾನವನ್ನು ನಾವು ಬದಿಗಿರಿಸಿ, ನಾಡಿನ ಒಟ್ಟು ಹಿತವನ್ನೆಣಿಸಿ. ಅಂಥ ಒಂದು ಪ್ರಬುದ್ಧ ರೇವಿನ ನಿರ್ಮಾಣಕ್ಕಾಗಿ ಸರಕಾರದ ಮನಸನ್ನೊಲಿಸುವಂಥ ಪ್ರಯತ್ನವನ್ನು ನಮ್ಮ ಜನರು ಮಾಡಬೇಕಾಗಿದೆ. ಈ ಕಡಲು ಆಳವಾದ ಮೀನುಗಾರಿಕೆಗೂ ಆಧುನಿಕ ಮೀನುಗಾರಿಕೆಗೂ ಅನುಕೂಲವಾದುದು. ಅನ್ಯದೇಶದ (ಕೆಲಿಫೋರ್ನಿಯ ಕರಾವಳಿಯಂತೆ) ಪ್ರಸಿದ್ಧ ಮೀನುಗಾರ ಕರಾವಳಿಗಳಂತೆಯೇ, ಇಲ್ಲಿನ ಕಡಲು ಸಹ ನಮಗೆ ಅವಕಾಶ ಕೊಡಬಲ್ಲುದು. ಮೀನಿನ ಉದ್ಯಮದಂತೆಯೇ ಇತರ ಉದ್ಯಮಗಳೂ ಇಲ್ಲಿ ಬೆಳೆಯಬಲ್ಲುವು. ಪಶ್ಚಿಮ ಘಟ್ಟದ ಜಲಪಾತಗಳ ಪೂರ್ಣ ಪ್ರಯೋಜನವನ್ನು ನಾವು ಪಡೆದಲ್ಲಿ ಕಾಸ್ಟಿಕ್ ಸೋಡಾ, ಮೆಗ್ನೇಸಿಯಂ ಲೋಹದ ಉತ್ಪನ್ನ, ಈ ಕಡಲುತೀರಗಳಲ್ಲಿ ಸುಲಭಸಾಧ್ಯ. ಈ ಕರಾವಳಿಯನ್ನು ಪ್ರವಾಸಿಗಳ (Tourist Centre) ಆಕರ್ಷಣೆಗಾಗಿಯೂ ಬಳಸಬಹುದು.

ಸುಮಾರು ಇನ್ನೂರು ಮೈಲು ಉದ್ದದ ಸಹ್ಯಾದ್ರಿಯ ಸೆರಗು, ತುಂಬ ಮಳೆಯುಳ್ಳ ಪ್ರದೇಶವಾಗಿದೆ. ಇಲ್ಲಿನ ಮಲೆನಾಡು, ಅದರಲ್ಲಿಯೂ ಮುಂಬಯಿ ಪ್ರಾಂತಕ್ಕೆ ಸೇರಿದ ಕನ್ನಡ ಜಿಲ್ಲೆಯ ಮಲೆನಾಡಿನ ಸೆರಗು, ಅನೇಕ ರೀತಿಯಿಂದ ನಮ್ಮ ಸಂಪತ್ತಿನ ಅಭಿವೃದ್ಧಿಗೆ ಸಹಾಯಕವಾಗಬಲ್ಲದು. ಬಹು ಕಾಲದ ತನಕವೂ ನಮಗೆ ಬೇಕಾಗುವಷ್ಟು ವಿದ್ಯುತ್ತನ್ನು ಇಲ್ಲಿನ ಜಲಪಾತಗಳು ಒದಗಿಸಿಕೊಡಬಲ್ಲುವು. ಇಲ್ಲಿ ಕಣ್ಣಿಗೆ ಬೀಳುವ ಮತ್ತು ಬೀಳದ ಹತ್ತೆಂಟು ಜಲಪಾತಗಳಿವೆ. ಈ ಶಕ್ತಿಯನ್ನು ಕಾಗದ, ರೆಯಾನ್ ಮೊದಲಾದುವುಗಳ ಉತ್ಪನ್ನದ ಸಲುವಾಗಿಯೂ ಇನ್ನಿತರ ಚಿಕ್ಕ ದೊಡ್ಡ ಉದ್ಯಮಗಳ ಸಲುವಾಗಿಯೂ ಬಳಸುವುದಕ್ಕೆ ಸಾಧ್ಯವಿದೆ. ಮರ ಮತ್ತು ಬಿದಿರುಗಳಿಂದ, ಮರದ ಗೊಜ್ಜು (Wood pulp), ಕೃತಕ ರೇಶ್ಮೆ, ಅಗ್ಗದ ನಿವಾಸ ಸೌಕರ್ಯ (Cheap housing) ಮೊದಲಾದುವುಗಳ ಯೋಜನೆ ಮತ್ತು ನಿರ್ಮಾಣ ಸಾಧ್ಯ. ಇಲ್ಲಿ ವರ್ಷ ವರ್ಷ ಬೆಳೆದು ಸುಟ್ಟು ಹೋಗುತ್ತಿರುವ, ದೊಡ್ಡ ಜಾತಿಯ ಹುಲ್ಲಿನಿಂದಲೂ ನಮ್ಮ ನಾಡು, ದನಕರುಗಳ ಸಲುವಾಗಿ ಮೇವನ್ನು ಪಡೆಯಬಹುದು. ಅದರಿಂದ 'ಸ್ಟ್ರೋ ಬೋರ್ಡ್' ತಯಾರಿಕೆಯೂ ಸಾಧ್ಯ. ಎಸ್ಪರೆಟೊ ಹುಲ್ಲಿನಂತೆ ಈ ಹುಲ್ಲು ಸಹ ಕಾಗದದ ಗೊಜ್ಜಿಗೆ ಬರಬಹುದು.

ಕೃಷಿ ಅಭಿವೃದ್ಧಿ

ಸಹ್ಯಾದ್ರಿ ಬೆಟ್ಟಗಳಿಂದ ನಾವು ಬಯಲು ಸೀಮೆಗೆ ಬಂದೆವೆಂದರೆ ವಿಸ್ತಾರವಾದ, ನಮ್ಮ ನದಿಗಳೆಲ್ಲವನ್ನೂ ಹತೋಟಿಗೆ ತರುವುದರಿಂದ – ಇನ್ನಿಷ್ಟು ವಿಸ್ತಾರವಾದ ಕೃಷಿ ಸಾಧ್ಯವಾಗಬೇಕು. ದಕ್ಷಿಣದ ಎರೆಮಣ್ಣು ನಮ್ಮ ಕೃಷಿಗೆ ವಿಶೇಷವಾದ ಪ್ರಯೋಜನವನ್ನು ಕೊಟ್ಟೀತು. ಮಲೆನಾಡಿನ ಸೆರಗು ಮತ್ತು ಇತರ ಭಾಗಗಳು, ಇನ್ನೂ ಹೆಚ್ಚಾಗಿ ದವಸ, ಧಾನ್ಯ ಬೆಳೆಯುವುದಕ್ಕೆ ಅನುಕೂಲವಾದಾವು. ಬಯಲು ಸೀಮೆಯ ಖನಿಜೋತ್ಪನ್ನಗಳ ಸಮನಾದ ಚಿತ್ರ ನಮಗಿನ್ನೂ ಚೆನ್ನಾಗಿ ಸಿಕ್ಕಿಲ್ಲ. ಹೆಚ್ಚಾಗಿ ಮೇಂಗನೀಜ ಅದುರನ್ನು ಮಾತ್ರ–ಎತ್ತಿ, ರಫ್ತು ಮಾಡುವುದನ್ನು ಕಾಣುತ್ತಿದ್ದೇವೆ. ನಮ್ಮಲ್ಲಿಯೇ ಈ ಅದುರಿನ ಉಪಯೋಗ ಅಥವಾ ಪರಿವರ್ತನೆ ಸಾಧ್ಯವಿಲ್ಲವೇ ಎಂಬ ಪ್ರಶ್ನೆಯು ಬರುತ್ತದೆ. ಇನ್ನು ಯಾವಾವ ಖನಿಜವೃತ್ತಿ ನಮ್ಮಲ್ಲಿ ನಡೆದೀತೆಂದೂ ನಾವು ಶೋಧಿಸಬೇಕಾಗಿದೆ. ಒಬ್ಬ ಸಾಮಾನ್ಯನ ಕಣ್ಣಿಗೆ ಕಾಣಿಸಬಹುದಾದ ಸಂಪದುತ್ಪಾದನೆಯ ಸ್ಥೂಲ ಚಿತ್ರವನ್ನು ಇಲ್ಲಿ ಕೊಟ್ಟದಾಗಿದೆ. ಸರಿಯಾದ ಪರಿಶೀಲನೆಯಿಂದ, ತಜ್ಞರ ನೆರವಿನಿಂದ, ಇಲ್ಲಿ ಸೂಚಿಸಿದ್ದಕ್ಕಿಂತಲೂ ಮಿಗಿಲಾದ ಸಂಪತ್ತುಗಳನ್ನು ಜನಗಳಿಗೆ ಒದಗಿಸಿಕೊಡುವುದು ಸಾಧ್ಯವಿದೆ. ಅದರಿಂದ ಸಾಕಷ್ಟು ಜನಗಳಿಗೆ ಉದ್ಯೋಗವನೂ ಜೀವನಾವಕಾಶಗಳನ್ನೂ ಒದಗಿಸಿಕೊಡಲು ಸಾಧ್ಯವೆಂದು ನನಗೆನಿಸುತ್ತದೆ.

ನಮಗೆ ನಾಡಿನ ವಿಷಯದಲ್ಲಿರುವ ಹೆಮ್ಮೆಯೇ ಕನ್ನಡ ವಿವಿಧ ಭಾಗಗಳೊಂದುಗೂಡುವಂತೆ ಮಾಡಿತು. ಆ ನೆಲದ ಪ್ರಯೋಜನವು ಜನಕ್ಕೆ ಸಿಗುವಂತೆ, ಅದರಿಂದ ಜನಗಳ ಸುಖ, ಸಮೃದ್ಧಿ ಹೆಚ್ಚುವಂತೆ ನಾವೆಲ್ಲ ಕೂಡಿ ದುಡಿಯುವುದು ಇನ್ನು ಮುಂದಿನ ಕೆಲಸ. ಇದು ಎಲ್ಲಕ್ಕಿಂತ ಶ್ರೇಷ್ಠವಾದ ಕರ್ತವ್ಯವೆಂದು ನಾವು ತಿಳಿಯಬೇಕಾಗಿದೆ.

ಅಮಲ್ದಾರರಿಗೆ ರೇಸಿಮೆಯ ಉರುಲು

> ಕ್ಯಾಂಪಿಗೇ ಹೋಗಲು ಹಿಂಜರಿಯುತ್ತಿದ್ದ ಅಮಲ್ದಾರ ವೆಂಕಟ-ರಮಣರು ಮೇಲಿಂದ ಮೇಲೆ ಬಂಗಾರದಹಳ್ಳಿಗೇ ಹೋಗುವದನ್ನು ಕೇಳಿ ಅವರ ಪತ್ನಿಗೆ ಸಂಶಯ ಬಂದಿತು. ಆದರೂ ಅದನ್ನು ತೋರಗೊಡದೆ ಆ ಊರ ದೇವರಿಗೆ ಒಂದು ಕಾಣಿಕೆ ಅರ್ಪಿಸಿದರು. ಅದು ಯಾವುದೋ ಕಾರಣದಿಂದ ಲಕ್ಷ್ಮಿಗೆ ಸಿಕ್ಕು ಉಂಟಾದ ಅವಾಂತರವನ್ನು ಇಲ್ಲಿ ಲೇಖಕರು ನಿರೂಪಿಸಿದ್ದಾರೆ.


ಲೇಖಕರು: ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರ

ಮುಂದಲ ಚುನಾವಣೆ ಹತ್ತಿರವಾಗುತ್ತಿರುವುದರಿಂದ ಕಳೆದ ಚುನಾವಣೆಯಲ್ಲಿ ನಡೆದ ಒಂದು ಸಂಗತಿಯನ್ನು ಹೇಳಿ ಮುಗಿಸುವುದು ಅವಶ್ಯಕವಾಗಿದೆ. ಇದು ಚುನಾವಣೆಗೆ ನೇರವಾಗಿ ಸಂಬಂಧಿಸಿದುದಲ್ಲವಾದರೂ ಚುನಾವಣೆಯ ಕಾಲದಲ್ಲಿ ನಡೆದುದು. ವಿಷಯುವನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಸ್ವಲ್ಪಮಟ್ಟಿಗೆ ಅದರ ಹಿನ್ನೆಲೆಯನ್ನು ತಿಳಿಯುವುದು ಅವಶ್ಯಕ.

ಅಮಲ್ದಾರ್ ವೆಂಕಟರಮಣ ತಿಂಗಳಿಗೆ ಇಪ್ಪತ್ತು ದಿನ ಹಳ್ಳಿಗಳಿಗೆ ಪ್ರವಾಸ ಹೋಗಬೇಕೆಂಬುದು ಸರ್ಕಾರದ ಆಜ್ಞೆಯಾಗಿತ್ತು. ನಮ್ಮ ತಾಲ್ಲೂಕು ಮುಖ್ಯಪಟ್ಟಣಕ್ಕೆ ವರ್ಗವಾಗುವುದಕ್ಕೆ ಮುಂಚೆ, ಬೇರೆ ತಾಲ್ಲೂಕಿನಲ್ಲಿ ಅವರು ಅಮಲ್ದಾರರಾಗಿದ್ದಾಗ, ಏನು ಮಾಡಿದರೂ ಪ್ರವಾಸ ಹೋಗುತ್ತಲೇ ಇರಲಿಲ್ಲವಂತೆ. ಅಷ್ಟು ಬೇಗ ಅವರನ್ನು ಆ ತಾಲ್ಲೂಕಿನಿಂದ ನಮ್ಮ ತಾಲ್ಲೂಕಿಗೆ ವರ್ಗಮಾಡಲು ಅವರ ಈ ವೈಗಳ್ಯತನ ಸಹ ಕಾರಣವೆಂದು ಕಛೇರಿ ಗುಮಾಸ್ತರು ಹೇಳುತ್ತಾರೆ. ನಮ್ಮ ತಾಲ್ಲೂಕಿಗೆ ವರ್ಗವಾದ ಹೊಸದರಲ್ಲಿ, ಅಮಲ್ದಾರರು ಸ್ಥಳ ಮಹಜರು ಸ್ಥಳದಲ್ಲಿ ಹಜಾರು ಖಾಸಗಿ ವಿಚಾರಣೆ ಮುಂತಾದ ಕಾರ್ಯಗಳಿಗಾಗಿ ಕೆಲವು ಹಳ್ಳಿಗಳಿಗೆ ಅನಿವಾರ್ಯವಾಗಿ ಹೋಗಬೇಕಾಗಿ ಬಂತು. ಹೊಸದಾಗಿ ಅಮಲ್ದಾರ್ ಸಾಹೇಬರು ಬರುತ್ತಿದ್ದುದರಿಂದ, ಆ ಮೊದಲ ದಿನವಂತೂ ಹಳ್ಳಿಯವರು ಊರು ಬಾಗಿಲಿಗೆ ತೋರಣ ಕಟ್ಟಿ ಓಲಗ, ತಮಟೆಗಳೊಂದಿಗೆ ಹೊಸ ಧಣಿಗಳನ್ನು ಸ್ವಾಗತಿಸಿ ಊರಿನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರ ತೀರ್ಥ ಪ್ರಸಾದಗಳನ್ನು ಕೊಡಿಸುತ್ತಿದ್ದರು. ಹೀಗೆ ಸ್ಥಳ ಮಹಜರಿಗಾಗಿ ಒಂದು ದಿನ ಅಮಲ್ದಾರ್ ಸಾಹೇಬರು ಬಂಗಾರಹಳ್ಳಿಗೆ ಹೋಗಬೇಕಾಯಿತು. ಅಲ್ಲಿ ಲಕ್ಷ್ಮಿ ಅವರ ಕಣ್ಣಿಗೆ ಬಿದ್ದಳು. ಅಮಲ್ದಾರರ ತಾಪತ್ರಯಗಳೆಲ್ಲ ಅಂದಿನಿಂದಲೇ ಪ್ರಾರಂಭವಾದವು.

ಲಕ್ಷ್ಮಿ ಹಳ್ಳಿಯ ವಾತಾವರಣದಲ್ಲಿ ಮುಂಗಾರು ಮಿಂಚಿನಂತೆ ಹೊಳೆದಳು. ನೀಲಿಶಿಲೆಯಲ್ಲಿಯ ಭಂಗಾರದ ಗೆರೆಯಂತೆ ಉಜ್ವಲೆಯಾಗಿದ್ದಳು. ಅಮಲ್ದಾರ್ ವೆಂಕಟರಮಣರ ಬಿಡಾರಕ್ಕೆ ಊಟದ ಎಲೆಯನ್ನು ತಂದುಕೊಟ್ಟ ಆಕೆ, ತನ್ನ ಕಣ್ಣಿನ ಕಾಂತಿಯನ್ನು ಒಂದುಸಲ ಬಿಡಾರದಲ್ಲಿದ್ದವರ ಮೇಲೆ ಪಸರಿಸಿದ ಕೂಡಲೇ, ಅವರೆಲ್ಲ ಆ ಹೊಳಪನ್ನು ಕಂಡು ದಿಗ್ಭ್ರಾಂತರಾದರು. ಲಕ್ಷ್ಮಿ ತಲೆಯಲ್ಲಿ ಮುಡಿದಿದ್ದ ಏಳು ಸುತ್ತಿನ ಮಲ್ಲಿಗೆಯ ಸುಗಂಧ ಆ ವಾತಾವರಣಕ್ಕೆ ಅಪೂರ್ವವಾದ ಮೆರುಗನ್ನು ಕೊಟ್ಟಿತು. ಅಮಲ್ದಾರ ವೆಂಕಟರಮಣ, ಬೆಂಕಿಯ ಕಾವಿಗೆ ಸಿಕ್ಕಿದ ಹುಳುವಿನಂತೆ ತಳಮಳಿಸಿದರು. ತಾನು ನಿರ್ಮಿಸಿದ ಅವಾಂತರವನ್ನು ಕಂಡು ಲಕ್ಷ್ಮಿಗೆ ತೃಪ್ತಿಯಾತು. ಅವಳು ಬಂದಂತೆಯೇ ಮಿಂಚಿನಂತೆ ಹೊರಟು ಹೋದಳು.

ಉಜ್ವಲವಾದ ಬೆಳಕು ಎದುರಿಗೆ ಬಂದಾಗ, ಅದರ ಪ್ರಕಾಶದ ಪ್ರಖರತೆಯನ್ನು ತಾಳಲಾರದೆ ಒಂದು ಗಳಿಗೆ ಕಣ್ಣು ತನ್ನ ದೃಷ್ಟಿ ಚಾತುರ್ಯವನ್ನು ಕಳೆದುಕೊಂಡು ಅನಂತರ ನಿಧಾನವಾಗಿ ಸ್ವಸ್ಥಿಗೆ ಬರುವಂತೆ, ಅಮಲ್ದಾರ ವೆಂಕಟರಮಣ ಆ ರೂಪರಾಶಿಯ ಅಪ್ಪಳಿಸುವಿಕೆಯಿಂದ ಚೇತರಿಸಿಕೊಳ್ಳುತ್ತಿದ್ದರು. ಅನಂತರ ನಿಧಾನವಾಗಿ ಉಪಾಯವಾಗಿ ಸಂಕೋಚದಿಂದ ತನ್ನ ಮನೋಭಾವ ಇತರರಿಗೆ ವ್ಯಕ್ತವಾಗದಂತೆ, ಲಕ್ಷ್ಮಿಯ ಪೂರ್ವೋತ್ತರಗಳನ್ನು ವಿಚಾರಿಸಿ ತಿಳಿದುಕೊಂಡರು "ಆಕೆ ನಿತ್ಯಸುಮಂಗಲಿ. ಅಂದರೆ ಗಂಡ ಎಲ್ಲಿಯೋ ಹೊರಟು ಹೋದ. ಅವನು ಬದುಕಿದ್ದಾನೋ ಇಲ್ಲವೋ ಗೊತ್ತಿಲ್ಲ ಇಲ್ಲವೆಂಬುದು ಜನರ ನಂಬಿಕೆ. ಗಂಡನು ಬುದ್ಧಿಭ್ರಮೆಯಿಂದ ಊರು ಬಿಟ್ಟು ಹೋಗಿ ಐದು ಆರು ವರುಷಗಳಾದವು. ಅವನು ಊರಿನ ಆಂಜನೇಯ ಗುಡಿಯ ಪೂಜಾರಿಯಾಗಿದ್ದ. ಲಕ್ಷ್ಮಿಯ ಸೋದರಮಾವ ಬೆಂಗಳೂರಿನಲ್ಲಿ ಆಫೀಸಿನಲ್ಲಿ ಜವಾನ. ತಂದೆ ತಾಯಿಗಳಿಲ್ಲದ ಹುಡುಗಿಯನ್ನು ಸೋದರಮಾವನೇ ಬೆಂಗಳೂರಿನಲ್ಲಿ ಸಾಕಿದ. ಹುಡುಗಿಗೆ ಸ್ವಲ್ಪ ವಿದ್ಯೆ ಕಲಿಸಿದ. ಪಟ್ಟಣದ ನಾಗರಿಕತೆಯನ್ನು ಹುಡುಗಿಯೇ ಸ್ವಾಭಾವಿಕವಾಗಿ ಕಲಿತಳು. ದೇವಸ್ಥಾನದ ಪೂಜೆಗೆ ಹೊಸ ಪೂಜಾರಿ ಬಂದು ಐದು ವರುಷಗಳ ಮೇಲೆ ಆಯಿತು. ಲಕ್ಷ್ಮಿಗೂ ದೇವಸ್ಥಾನಕ್ಕೂ ಸಂಬಂಧವೇ ಇಲ್ಲ. ಅವಳು ಒಂದು ದಿನವೂ ದೇವಸ್ಥಾನಕ್ಕೆ ಹೋಗುವುದಿಲ್ಲ. ಗಂಡನ ಮನೆ ಆಸ್ತಿ ಸ್ವಲ್ಪ ಇದೆ. ಲಕ್ಷ್ಮಿ ಮನೆಯಲ್ಲಿ



ವಾಸ ಮಾಡಿಕೊಂಡು ಜಮೀನನ್ನು ಕೂಲಿ ಎತ್ತೂ ಆಳುಗಳಿಂದ ಸಾಗುವಳಿ ಮಾಡಿಸುತ್ತಿದ್ದಾಳೆ. ಯಾವುದಕ್ಕೂ ಅವಳು ಊರಿನವರ ಮೇಲೆ ಅವಲಂಬಿಸಿಲ್ಲ. ಸರ್ಕಾರಿ ಸ್ಕೂಲು ಅಕ್ಷರಸ್ಥರು ಇಲ್ಲದ ಆ ಹಳ್ಳಿಯಲ್ಲಿ ಅವಳು ಒಂದು ಪಾಠಶಾಲೆಯನ್ನು ಮನೆಯಲ್ಲಿಯೇ ಏರ್ಪಡಿಸಿಕೊಂಡು, ಮಕ್ಕಳಿಗೆ ಪಾಠ ಹೇಳಿ ಕೊಡುತ್ತಿದ್ದಾಳೆ. ಹುಡುಗ ಹುಡುಗಿಯರು ಅವಳು ಹೇಳಿಕೊಡುವುದನ್ನು ಬಹು ಬೇಗ ಕಲಿಯುತ್ತಾರೆ. ಲಕ್ಷ್ಮಿ ಯಾವಾಗಲೂ ಗೆಲುವಾಗಿಯೇ ಇರುತ್ತಾಳೆ. ಗಂಡನ ಯೋಚನೆಯಿಂದಲಾಗಲಿ ತಾನು ಒಂಟಿ ಎಂಬ ಕಾರಣದಿಂದಲಾಗಲಿ ಖಿನ್ನಳಾಗಿಲ್ಲ. ಅವಳು ಒಳ್ಳೆ ಜಾಣೆ''

ಬಂಗಾರದಹಳ್ಳಿಯ ಆ ಭಂಗಾರದಂತಹ ಹೆಣ್ಣಿನ ಈ ವಿವರಗಳನ್ನು ಕೇಳಿ ಅಮಲ್ದಾರ್ ವೆಂಕಟರಮಣರಿಗೆ ಸ್ವಲ್ಪವೂ ನಿರುತ್ಸಾಹವೂ ಗಾಬರಿಯೂ ಆಗಲಿಲ್ಲ. ಆ ಕ್ಯಾಂಪಿನಲ್ಲಿಯೇ ಅವರು ಆ ಹಳ್ಳಿಯಲ್ಲಿ ಇನ್ನೂ ಒಂದು ದಿನ ಹೆಚ್ಚಾಗಿ ನಿಂತರು. ಆ ದಿನ ಲಕ್ಷ್ಮಿಯ ಮನೆಗೆ ಅವಳ ಶಾಲೆಯನ್ನು ಪರೀಕ್ಷಿಸುವ ನೆಪದಿಂದ ಹೋದರು. ಲಕ್ಷ್ಮಿಯ ಮನೆಯ ಅಚ್ಚುಕಟ್ಟನ್ನು ನೋಡಿ ಲಕ್ಷ್ಮಿಯ ವಿಷಯದಲ್ಲಿ ಅವರ ಆದರ ಇನ್ನೂ ಹೆಚ್ಚಾಯಿತು. ಇನ್ನೂ ಎರಡು ಮೂರು ಸಲ ಭಂಗಾರದಹಳ್ಳಿಯ ತನಿಖೆ ಪ್ರವಾಸ ಮಾಡುವುದರೊಳಗಾಗಿ ಲಕ್ಷ್ಮಿಗೂ ಅಮಲ್ದಾರ್ ವೆಂಕಟರಮಣರಿಗೂ ಸ್ನೇಹವುಂಟಾಯಿತು.

ಬರಬರುತ್ತ ಅಮಲ್ದಾರ್ ವೆಂಕಟರಮಣರವರ 'ಕ್ಯಾಂಪ್' ಬಂಗಾರದ ಹಳ್ಳಿಗೇ ಆಗತೊಡಗಿತು. ತಾಲ್ಲೂಕಿನ ವ್ಯಾಜ್ಯಗಳನ್ನೆಲ್ಲ ಪರಿಹರಿಸಲು ಅವರು ಅಲ್ಲಿಯೇ ವಿಚಾರಣೆಗೆ ಇಡತೊಡಗಿದರು. ಜಮಾಬಂದಿಗಳೆಲ್ಲ ಅಲ್ಲಿಯೇ ಆದವು. ಹಿಂದೆ ಪ್ರವಾಸವೆಂದರೇ ತಲೆನೋವು ಎನ್ನುತ್ತಿದ್ದ ಇವರು, ಈಗ ನಿತ್ಯಾ ಉತ್ಸಾಹದಿಂದ ಪ್ರವಾಸ ಹೋಗುತ್ತಿದ್ದುದನ್ನು ನೋಡಿ, ಮೊದಮೊದಲು ಅವರ ಪತ್ನಿ ಪಾರ್ವತಮ್ಮ, ಸರ್ಕಾರದ ಬಿಸಿ ಇವರಿಗೆ ತಟ್ಟದೆ ಎಂದುಕೊಂಡಿದ್ದರು. ಆದರೆ ಸ್ವಲ್ಪ ದಿನಗಳೊಳಗೆ ಆ ಪತಿವ್ರತೆಗೆ ಸಾಹೇಬರು ನಿತ್ಯ "ಸರ್ಕೀಟು" ಭಂಗಾರದ ಹಳ್ಳಿಗೇ ಹೋಗುತ್ತಿರುವುದು ಗೊತ್ತಾಯಿತು. ಅಲ್ಲದೆ ಅಮಲ್ದಾರ್ ಸಾಹೇಬರು ಈಚೆಗೆ ಸರ್ಕೀಟು ಹೋಗುವಾಗ, ಹಿಂದಲಂತಲ್ಲದೆ ರವೆ ಸಕ್ಕರೆ ಹಣ್ಣು ವಿಳ್ಳೆದೆಲೆ ಅಡಿಕೆ ಕೆಲವು ಸಮಯಗಳಲ್ಲಿ ಸಣ್ಣ ಅಕ್ಕಿ ಹೂವು ಇವನ್ನೆಲ್ಲ ತೆಗೆದುಕೊಂಡು ಹೋಗುತ್ತಿರುವುದು ಆ ಪತಿವ್ರತೆಗೆ ಗೋಚರವಾಯಿತು. ಜತೆಗೆ ಈಚೆಗೆ ಸಾಹೇಬರು ಒಬ್ಬ ಅಡಿಗೆಯವನನ್ನೂ ಕರೆದುಕೊಂಡು ಹೋಗುತ್ತಿದ್ದರು. ಹಿಂದೆ ಸಾಹೇಬರು "ಕ್ಯಾಂಪ್‌ಗೆ ಮನೆಯಿಂದ ಅಕ್ಕಿ ಬೇಳೆ ತೆಗೆದುಕೊಂಡು ಹೋಗುವ ಅಧಿಕಾರಿಗಿಂತ ಕೈಲಿ ಹರಿಯದವರು ಯಾರಿದ್ದಾರೆ? ತನ್ನ ಅನ್ನವನ್ನೇ ಸಂಪಾದಿಸಿಕೊಳ್ಳಲಾರದವನು ಇನ್ನೇನನ್ನು ತಾನೇ ಮಾಡುತ್ತಾನೆ?'' ಎನ್ನುತ್ತಿದ್ದರು.

ಈಚೆಗೆ ಹೀಗೆ ಸಾಮಾನು ಊರಿನಿಂದ ತೆಗೆದುಕೊಂಡು ಹೋಗುತ್ತಿರುವ ಸುಳಿವನ್ನು ತಿಳಿದು ಪಾರ್ವತಮ್ಮ "ಯಾಕೆ ಅಲ್ಲಿ ಅಡಗೆ ಸರಿಯಾಗಿ ಆಗುತ್ತಿಲ್ಲವೆ?'' ಎಂದು ಕೇಳಿದಾಗ "ಸಂಗತಿಯೆಲ್ಲ ಹೊರಬಿತ್ತಲ್ಲ'' ಎಂದು ಸಾಹೇಬರಿಗೆ ಕೋಪವೂ ಅಸಮಾಧಾನವೂ ಉಂಟಾಯಿತು. ಆದರೂ ಸಮಯಕ್ಕೆ ಸರಿಯಾದ ಬುದ್ಧಿಯುಳ್ಳ ಅವರು "ಬಂಗಾರದ ಹಳ್ಳಿಯ ಆಂಜನೇಯ ದೇವರು ತುಂಬ ಸತ್ಯವಂತ. ಅವನಿಗೆ ಪೂಜೆ ತಳಿಗೆ ಮಾಡಿಸಿ ಮೇಲಿನ ಹುದ್ದೆಗೆ ಬಡ್ತಿಗಾಗಿ ಪ್ರಾರ್ಥಿಸಿಕೊಳ್ಳಬೇಕು. ಹಳ್ಳಿಯವರ ಹತ್ತಿರವೇ ಸಾಮಾನು ತೆಗೆದು ಮಾಡಿಸಬಹುದು. ಆದರೆ ಪುಣ್ಯವೆಲ್ಲ ಅವರಿಗೇ ಹೋಗಿ ಬಿಡುತ್ತೆ. ನಾವೇ ಮಾಡೋಣ'' ಎಂದು ಹೇಳಿ ಮಾತನ್ನು ಹಾರಿಸಿದರು. ಗಂಡನ ಮಾತು ನಿಜವೋ ಸುಳ್ಳೋ ಎಂಬುದು ಎಲ್ಲ ಹೆಂಡತಿಯರಿಗೂ ತಿಳಿಯುವಂತೆ ಆಕೆಗೂ ತಿಳಿಯಿತು.

ಆ ಸಲದ ಕ್ಯಾಂಪ್‌ನಿಂದ ಸಾಹೇಬರು ಹಿಂದಿರುಗಿದ ಕೂಡಲೇ ಹೆಂಡತಿಗೆ ತಮ್ಮ ಮೇಲೆ ಅನುಮಾನ ಬಂದಿರುವುದು ಗೊತ್ತಾಯಿತು. ಪಾರ್ವತಮ್ಮನವರು ಗಂಡನಮೇಲೆ ಕೋಪಗೊಂಡೇ ಇದ್ದರು. ಅಮಲ್ದಾರ್ ವೆಂಕಟರಮಣ, ಕಾಟಾಚಾರದ ಊಟ ಮಾಡಿಕೊಂಡು ಕಛೇರಿಗೆ ಹೋದರು. ಹೆಂಡತಿಯ ಕೋಪದಿಂದ ಉಂಟಾದುದಕ್ಕಿಂತ ಲಕ್ಷ್ಮಿಯಿಂದ ಬೇರೆಯಾಗಿರುವುದು ಅವರಿಗೆ ಹೆಚ್ಚು ದುಃಖದಾಯಕವಾಗಿತ್ತು. ಪಾರ್ವತಮ್ಮನವರಿಗೆ ವಿಷಯಗಳು ಸ್ಪಷ್ಟವಾಗಿ ನಿಖರವಾಗಿ ತಿಳಿದಿರಲಿಲ್ಲ. ಅನುಮಾನ ಮಾತ್ರ ಬಂದಿತ್ತು. ಆಕೆ ಅದನ್ನೇ ಕುರಿತು ಯೋಚಿಸುತ್ತಾ ಮನೆಯ ಅಂಗಳದಲ್ಲಿ ಕುಳಿತಿದ್ದರು. ಮನೆಯಲ್ಲಿ ನಡೆಯುತ್ತಿರುವ ಈ ಅಂತರ್ ಕಲಹ ಗೊತ್ತಾಗಿದ್ದ ಅಡಿಗೆಯವನೂ ಬಾಗಿಲಿನಲ್ಲಿಯೇ ಕುಳಿತಿದ್ದನು. ಆಗ ಆ ಬೀದಿಯಲ್ಲಿ ಹೋಗುತ್ತಿದ್ದ ಭಂಗಾರದ ಹಳ್ಳಿಯ ಪೂಜಾರಿ ಅಡಿಗೆಯವನನ್ನು "ಸಾಹೇಬರು ಕಛೇರಿಗೆ ಹೋದರೆ? ಎಂದು ಕೇಳಿದನು. ಅಡಿಗೆಯವನು ಹೂಂ ಎಂದು ತಲೆಯಲ್ಲಾಡಿಸಲು "ಮೂರು ಗಂಟೆಗೆ ಕಾಫಿಗೆ ಬರುತ್ತಾರೆಯೆ?'' ಎಂದು ಮತ್ತೆ ಕೇಳಿದನು. ಅಡಿಗೆಯವನು "ವಿಚಾರಿಸಿ ಹೇಳುತ್ತೇನೆ" ಎಂದು ಒಳಗೆ ಹೋಗಿ ಪಾರ್ವತಮ್ಮನವರನ್ನು ಕೇಳಿದನು. ಭಂಗಾರದ ಹಳ್ಳಿಯ ಪೂಜಾರಿ ಎಂದಕೂಡಲೇ ಪಾರ್ವತಮ್ಮನವರಿಗೆ ಏನೋ ಹೊಳೆದಂತೆ ಆಗಿ ಅವನನ್ನು ಒಳಕ್ಕೆ ಕರೆದರು. ಅಡಿಗೆಯವನು ಒಳಗೆ ತನ್ನ ಕೆಲಸಕ್ಕೆ ಹೋದನು.

ಪಾರ್ವತಮ್ಮನವರು "ನಿಮ್ಮ ಊರಿನಲ್ಲಿರುವ ದೇವರು ಯಾವ ದೇವರು?'' ಎಂದರು. ಪೂಜಾರಿ ಅತ್ಯುತ್ಸಾಹದಿಂದ "ಅಯ್ಯೊ ಅದೇನ್ಕೇಳ್ತೀರವ್ವ, ಆಂಜನೇಯ. ಈ ಪ್ರಾಂತದಲ್ಲೇ ಇಲ್ಲ. ಸತ್ತದಲ್ಲಿ ಹರಕೆ ಮಾಡಿಕೊಂಡರೆ ಕುರಿತೇಟು. ಈ ಪ್ರಾಂತದವರೆಲ್ಲ ನಿತ್ಯಾ ಬಂದು ಹರಕೆ ಮಾಡ್ಕೋತಾರೆ. ಸಾಹೇಬರೂ ಬಂದಾಗೆಲ್ಲ ಹರ್ಕೆಮಾಡ್ಕೋತಾರೆ'' ಎಂದನು. ಪೂಜಾರಿಗೆ ತನ್ನ ಊರ ದೇವರ ಅಭಿಮಾನ. ಪಾರ್ವತಮ್ಮನವರಿಗೆ ಗಂಡನ ಮೇಲಿನ ಅನುಮಾನ. ಯಾವುದಕ್ಕೂ ದೇವರ ಮೇಲೆ ಭಾರ ಹಾಕುವುದು ವಾಸಿ ಎಂದುಕೊಂಡು ಆಕೆ ಪೂಜಾರಿಗೆ 'ನಾನು ದೇವರಿಗೆ ಒಂದು ಹರಕೆ ಮಾಡಿಕೊಳ್ಳುತ್ತೇನೆ. ಈ ವಿಷಯ ಯಾರಿಗೂ ತಿಳಿಸಬೇಡಿ ನನಗೆ ಸಂಕೋಚವಾಗುತ್ತೆ. ಸಾಹೇಬರಿಗೂ ತಿಳಿಸಬೇಡಿ. ನಿಮ್ಮ ದೇವರಿಗೆ ಒಂದು ಕಾಣಿಕೆ ಅರ್ಪಿಸುತ್ತೇನೆ. ತೆಗೆದುಕೊಂಡು ಸಮರ್ಪಿಸಿ' ಎಂದು ಹೇಳಿ, ನಾಲ್ಕು ದಿನಗಳ ಕೆಳಗೆ ತಮ್ಮ ಸ್ವಂತ ಉಪಯೋಗಕ್ಕಾಗಿ ತೆಗೆದಿಟ್ಟುಕೊಂಡಿದ್ದ ಎರಡು ಗಜ ಅತ್ಯುತ್ಕೃಷ್ಟವಾದ ನೀಲಿಯ ರೇಸಿಮೆಯನ್ನು ಆಂಜನೇಯ ದೇವರಿಗೆ ಕಾಣಿಕೆ ಕೊಟ್ಟರು. ರೇಸಿಮೆಯ ತುದಿಯಲ್ಲಿ ಹಳದಿ ನೂಲಿನಲ್ಲಿ ಅವರು ಒಂದು ಹೂವನ್ನು ಕಸೂತಿ ಹಾಕಿದ್ದರು. "ಆಂಜನೇಯ, ಯಾವ ಪಿಶಾಚ ಡಾಕಿನಿ ಯಜಮಾನರ ಮನಸ್ಸನ್ನು ಹಿಡಿದಿದ್ದರೂ ನನ್ನ ಕಡೆಗೆ ತಿರುಗಿಸಪ್ಪ. ನಿನಗೆ ಇನ್ನೂ ಹರಕೆ ಕೊಡುತ್ತೇನೆ'' ಎಂದು ಮನಸ್ಸಿನಲ್ಲಿ ಪ್ರಾರ್ಥಿಸಿಕೊಂಡರು. ಪೂಜಾರಿ 'ತಾಯಿ ನಿಮ್ಮ ಹರಕೆ ಖಂಡಿತ ಫಲಿಸುತ್ತೆ. ಇದು ಸತ್ಯದ ದೇವರು' ಎಂದು ಹೇಳಿ ಅಭಿಮಾನದಿಂದ ರೇಸಿಮೆಯನ್ನು ತೆಗೆದುಕೊಂಡು ಹೋದನು. ಪೂಜಾರಿ ಮರುದಿನ ಬಂಗಾರದಹಳ್ಳಿಗೆ ಹೋಗಿ ಇಂತಹವರದೆಂದು ಹೇಳದೆ ಒಬ್ಬ ಭಕ್ತರದು ಎಂದು ಹೇಳಿ ರೇಸಿಮೆಯನ್ನು ದೇವರಿಗೆ ಅರ್ಪಿಸಿದನು. ಅನಂತರ ಮಂಗಳಾರತಿ ಮಾಡಿ, ವಿಶೇಷ ದಿನಗಳಲ್ಲಿ ದೇವರಿಗೆ ಧರಿಸುವುದಕ್ಕಾಗಿ ರೇಸಿಮೆಯನ್ನು ತೆಗೆದುಕೊಂಡು ಹೋಗಿ, ತನ್ನ ಮನೆಯ ಗೂಟದಲ್ಲಿ ನೇತು ಹಾಕಿದನು.

ಆ ವೇಳೆಗೆ ೧೯೫೨ ನೆ ಚುಣಾವಣೆ ಬಂತು. ಚುಣಾವಣೆಯಲ್ಲಿ ಎಲ್ಲ ಸರ್ಕಾರಿ ಅಧಿಕಾರಿಗಳಿಗೂ ಕೆಲಸ. ಅಮಲ್ದಾರ್ ವೆಂಕಟರಮಣರವರು ಉಳಿದವರನ್ನು ಬೇರೆ ಬೇರೆ ಕಡೆಗೆ ಕಳುಹಿಸಿ ತಾವು ಬಂಗಾರಹಳ್ಳಿ ಚುಣಾವಣಾ ಕ್ಷೇತ್ರಕ್ಕೆ ಚುನಾವಣಾಧಿಕಾರಿಗಳಾದರು. ಚುನಾವಣೆಯ ಪ್ರಾತಃಕಾಲ ಅಮಲ್ದಾರರು ಬರುವರೆಂದು ಹಳ್ಳಿಯವರು ನಿಶ್ಚಿಂತೆಯಿಂದ ಇದ್ದರು. ಪಟೇಲರೂ ಊರಲ್ಲಿರಲಿಲ್ಲ. ಆದರೆ ಅಮಲ್ದಾರರು ಬಂಗಾರದ ಹಳ್ಳಿಯ ದೇವರಿಂದ ಆಕರ್ಷಿತರಾಗಿ ಮೊದಲ ರಾತ್ರಿಯೇ ಹಳ್ಳಿಗೆ ಬಂದುಬಿಟ್ಟರು. ತಾಲ್ಲೂಕು ಕಛೇರಿಯಿಂದಲೇ ಗಾಡಿಯಲ್ಲಿ ಒಂದು ಮೇಜು ಕುರ್ಚಿ ಬಂದಿತ್ತು. ರಾತ್ರಿಯ ಅಂಧಃಕಾರದಲ್ಲಿ ಚಾವಡಿಯಲ್ಲಿ ಮತದಾನದಪೆಟ್ಟಿಗೆ ಮೇಜು ಕುರ್ಚಿಗಳನ್ನೆಲ್ಲ ಇಟ್ಟರು. ಒಂದೇ ದೀಪ ಮಂಕಾಗಿ ಉರಿಯುತ್ತಿತ್ತು. ಊರಲ್ಲಿ, "ಅಮಲ್ದಾರರು ಬಂದರು" ಎಂದು ಗುಜು ಗುಜು ಆಯಿತು. ಮನೆಗಳಿಂದ ಚಾವಡಿಯಲ್ಲಿ ಹಾಸಲು ಚಾಪೆಗಳನ್ನು ತಂದರು. ಒಬ್ಬ ಗೌಡ, ಪೂಜಾರಿಯ ಮನೆಯಿಂದಲೂ ಒಂದು ಚಾಪೆ ತಂದ. ಪೂಜಾರಿ

ಊರಿನಲ್ಲಿರಲಿಲ್ಲ. ಚಾಪೆ ತೆಗೆದುಕೊಳ್ಳುತ್ತಿರುವಾಗ ಗೌಡ, ಅಲ್ಲಿಯೇ ಮೇಲೆ ಗೂಟದಲ್ಲಿ ನೇತುಬಿದ್ದಿದ್ದ ರೇಸಿಮೆ ಬಟ್ಟೆಯನ್ನೂ - ಅಮಲ್ದಾರರ ಮೇಜಿನ ಮೇಲೆ ಹಾಸಲು - ತೆಗೆದುಕೊಂಡು ಬಂದ. ಮರುದಿನ ಬೆಳಗಿನಿಂದ ರಾತ್ರಿಯ ವರೆಗೆ ಮತದಾನ ನಡೆಯಿತು. ಮತದಾನ ನಡೆಯುತ್ತಿರುವಾಗ ಮೇಜಿನ ಮುಂದೆ ಅನ್ಯಮನಸ್ಕರಾಗಿ ಕುಳಿತಿದ್ದ ಅಮಲ್ದಾರರು ಪದೇ ಪದೇ ರೇಸಿಮೆಯ 'ಟೇಬಲ್ ಕ್ಲಾತ್'ನ್ನು ಮುಟ್ಟಿ ನೋಡುತ್ತಾ "ಎಷ್ಟು ನಯವಾಗಿ ಸೊಗಸಾಗಿದೆ. ಯಾರದೋ ಕಾಣೆ. ಕೊನೆಯಲ್ಲಿರುವ ಕಸೂತಿ ಹೂ ಸಹ ಮುದ್ದಾಗಿದೆ'' ಎಂದುಕೊಂಡರು. ಸಂಧ್ಯಾಕಾಲದ ಹೊತ್ತಿಗೆ ಚುನಾವಣೆಯ ಕಾರ್ಯಗಳೆಲ್ಲ ಮುಗಿದವು. ಬೆಳಗಿನಿಂದ ಕುಳಿತಲ್ಲಿಯೇ ಕುಳಿತಿದ್ದ ಸಾಹೇಬರು ಸ್ವಲ್ಪ ಗಾಳಿ ಸವಾರಿ ಹೊರಟರು.

ಸಾಹೇಬರು ತಂದಿದ್ದ ಹೂವು ಹಣ್ಣುಗಳ ಚೀಲ ಇತ್ತು. ಅಡಿಗೆಯವನು ಅದನ್ನು ಹೊರಗಡೆ ಇಟ್ಟುಕೊಂಡಿದ್ದನು. ಮೇಜಿನ ಮೇಲೆ ಹಾಸಿದ್ದ ರೇಸಿಮೆ ಬಟ್ಟೆ ಯಾರದೆಂಬುದು ಅವನಿಗೆ ಗೊತ್ತಾಗಲಿಲ್ಲ. ಪೂಜಾರಿ ಊರಿನಲ್ಲಿ ಇಲ್ಲದುದರಿಂದಲೂ ಅವನ ಮನೆಯಲ್ಲಿ ಸಣ್ಣ ಹುಡುಗರು ಮಾತ್ರ ಇದ್ದುದರಿಂದಲೂ ಪೂಜಾರಿಯ ಮನೆಯವರು ರೇಸಿಮೆ ವಸ್ತ್ರವನ್ನು ಗಮನಿಸಲಿಲ್ಲ. ಇದು ಸಾಹೇಬರದೇ ಇರಬಹುದು ಎಂದುಕೊಂಡು ಅಡಿಗೆಯವನು ಆ ವಸ್ತ್ರವನ್ನೂ ಮಡಿಸಿ ಹೂವು ಹಣ್ಣು ಚೀಲದಲ್ಲಿ ಹಾಕಿಬಿಟ್ಟನು. ಸಾಹೇಬರು ತಮ್ಮ ಗಾಳಿಸವಾರಿ ಮುಗಿಸಿಕೊಂಡು ಚಾವಡಿಗೆ ಬಂದು, ಚೀಲವನ್ನೂ ತೆಗೆದುಕೊಂಡು ಲಕ್ಷ್ಮಿಯ ಮನೆಗೆ ಹೋದರು. ಚೀಲವನ್ನು ಲಕ್ಷ್ಮಿಗೆ ಕೊಟ್ಟು ಮಾತುಕತೆಯಾಡುತ್ತಿದ್ದು ತಮ್ಮ ಬಿಡಾರದಲ್ಲಿ ಬಂದು ಮಲಗಿದ್ದು ಬೆಳಿಗ್ಗೆ ತಾಲ್ಲೂಕು ಹೆಡ್ ಕ್ವಾರ್ಟರಿಗೆ ಹೊರಟರು. ರೇಸಿಮೆಯ ಜ್ಞಾಪಕ ಅವರಿಗೆ ಬರಲಿಲ್ಲ. ಅದು ತಮ್ಮ ಚೀಲದಲ್ಲಿರಬಹುದೆಂಬುದು ಅವರಿಗೆ ಕನಸಿನಲ್ಲಿಯೂ ಇರಲಿಲ್ಲ. ಮರುದಿನ ಬೆಳಿಗ್ಗೆ ಲಕ್ಷ್ಮಿ ಚೀಲವನ್ನು ಕೊಡವಿದಾಗ ರೇಸಿಮೆಯೂ ಕೆಳಗೆ ಬಿತ್ತು. ಇತರ ಪದಾರ್ಥಗಳ ಜತೆ ಅದನ್ನೂ ಆಕೆ ಒಳಗೆ ಇಟ್ಟಳು.

ಒಂದು ತಿಂಗಳ ನಂತರ, ತಾಲ್ಲೂಕು ಮುಖ್ಯ ನಗರದಿಂದ ಹತ್ತು ಮೈಲಿ ದೂರದ ತೋಪಿನಲ್ಲಿ ಪ್ರತಿವರ್ಷದ ಪದ್ಧತಿಯಂತೆ ಆ ವರುಷವೂ ಭಾರಿ ಸಮಾರಾಧನೆ ನಡೆಯಿತು. ಅದಕ್ಕೆ ರಂಭಾದೇವಿ ಪರ್ವ ಎಂದು ಹೆಸರು. ಅಲ್ಲಿ ಸುಮಾರು ಮೂರು ಸಾವಿರ ಜನ ಊಟ ಮಾಡುತ್ತಿದ್ದರು. ೧೫೦ ಪಲ್ಲ ಅಕ್ಕಿ ಬೇಯುತ್ತಿದ್ದಿತು. ಅಲ್ಲಿಗೆ ಸುತ್ತಣ ಹಳ್ಳಿಗಳಿಂದ ದೇವರುಗಳೆಲ್ಲ ಬರುತ್ತಿದ್ದರು ಆ ಸ್ಥಳವೂ ಕಾಲವೂ ಪವಿತ್ರವೆಂದು ಜನ ಭಾವಿಸಿದ್ದುದರಿಂದ ಎಲ್ಲೆಡೆಯಿಂದಲೂ ಅಲ್ಲಿಗೆ ಭಕ್ತರು ಬರುತ್ತಿದ್ದರು. ಮುಜರಾಯಿ ಅಧಿಕಾರಿಯಾದ ಅಮಲ್ದಾರರೂ ಅಲ್ಲಿದ್ದು, ರಂಭಾದೇವಿಯ ರಥೋತ್ಸವವನ್ನು ನೆರವೇರಿಸುವುದು ಅವರ ಅಧಿಕಾರದ ಕರ್ತವ್ಯವಾಗಿತ್ತು. ಶಾಂತಿ ಶಿಸ್ತು ಪಾಲನೆಗಳ ಕಾರಣದಿಂದಲೂ ತಮ್ಮ ತಾಲ್ಲೂಕಿನ ಆ ದೊಡ್ಡ ಸಮಾರಂಭದಲ್ಲಿ ಅವರು ಭಾಗವಹಿಸುವುದು ಅನಿವಾರ್ಯವಾಗಿತ್ತು.

ಇದ್ದಕ್ಕಿದ್ದಂತೆ ಪಾರ್ವತಮ್ಮನವರಿಗೆ ತಾವೂ ರಂಭಾದೇವಿ ಪರ್ವವನ್ನು ಸೇರಿಸಿ, ಗಂಡನಿಗೆ ಒಳ್ಳೆಯ ಬುದ್ಧಿ ಬರುವಂತೆ ದೇವರನ್ನು ಬೇಡಿಕೊಳ್ಳಬೇಕೆಂದು ತೋರಿತು. ಅವರ ನಿರ್ಧಾರ ಅಮಲ್ದಾರ್ ಸಾಹೇಬರಿಗೆ ಒಪ್ಪಿಗೆಯಾಗಲಿಲ್ಲ. ಅವರು "ಅಲ್ಲಿ ದೊಂಬಿ. ಅಸಾಧ್ಯ ಜನಸಂದಣಿ. ನಾನೇ ಪ್ರಸಾದವನ್ನು ತರುತ್ತೇನೆ'' ಎಂದು ಎಷ್ಟು ಹೇಳಿದರೂ ಪಾರ್ವತಮ್ಮನವರು ಹೊರಟೇ ಬಿಟ್ಟರು. ಹತ್ತು ಗಂಟೆ ವೇಳೆಗೆ ಪಾರ್ವತಮ್ಮನವರೂ ಅಮಲ್ದಾರರೂ ಪರ್ವವಾಗುತ್ತಿದ್ದ ಸ್ಥಳವನ್ನು ಸೇರಿದರು.

ಅಲ್ಲಿ ಅಸಾಧ್ಯ ಜನಗದ್ದಲ. ಸುತ್ತಲ ಐವತ್ತು ಹಳ್ಳಿಯ ಜನ ಹೆಣ್ಣು - ಗಂಡು ಸೇರಿತ್ತು. ಒಂದೊಂದು ಊರಿಗೆ ಒಂದೊಂದು ದೇವರು. ತಮಟೆ, ಕೊಂಬು, ಕಹಳೆಗಳ ಶಬ್ದ ಕಿವಿಯನ್ನು ಕಿವುಡು ಮಾಡುತ್ತಿತ್ತು. ದಾಸಯ್ಯಗಳ ನಗಾರಿ ಭಾಂಕಿ, ಶಂಕು, ಜಾಗಟೆ, ಧ್ವನಿಗಳ ಜತೆಯಲ್ಲಿ ರಂಭಾದೇವಿಯನ್ನು ರಥದ ಮೇಲೆ ಬಿಜಯ ಮಾಡಿಸಿದರು. ಮಧ್ಯಾಹ್ನ ಹನ್ನೆರಡು ಗಂಟೆಯಾದುದರಿಂದ ಬಿಸಿಲು ತುಂಬ ಪ್ರಖರವಾಗಿತ್ತು. ಪಾರ್ವತಮ್ಮನವರು ಬಿಸಿಲಿನ ತಾಪವನ್ನು ತಡೆಯಲಾರದೆ ಒಂದು ಬಟ್ಟೆಯನ್ನು ನೆನೆಸಿ ತಲೆ ಮೇಲೆ ಹಾಕಿಕೊಂಡಿದ್ದರು. ರಥದ ಮೇಲೆ ದೇವರನ್ನು ನೋಡಿ ದವನ ಸಿಕ್ಕಿಸಿದ್ದ ಎರಡು ಬಾಳೆಯ ಹಣ್ಣುಗಳನ್ನು ದೇವರಿಗೆ ಎಸೆದು, ತನ್ನ ಹರಕೆ ಮಾಡಿಕೊಂಡು ಊರ ದಾರಿ ಹಿಡಿಯುವುದು ಅವರ ಉದ್ದೇಶವಾಗಿತ್ತು.

ರಂಭಾದೇವಿ ರಥವನ್ನೂ ಏರಿದುದಾಯಿತು. ಅಮಲ್ದಾರ್ ಸಾಹೇಬರ ಕೊರಳಿಗೆ ಹಾರ ಬಿತ್ತು. ಉತ್ಸವದ ಯಜಮಾನ ಕೊರಳಿಗೆ ಹಾರ ಹಾಕುತ್ತಿದ್ದರೂ ಅಮಲ್ದಾರ್ ಸಾಹೇಬರು ದೇವರ ಕಡೆ ನೋಡದೆ ದೇವರಿಂದ ಬಲಗಡೆಗೆ ನೋಡುತ್ತಿದ್ದರು. ಪಾರ್ವತಮ್ಮನವರ ದೃಷ್ಟಿಯೂ ಅ ಕಡೆಗೇ ಹೋಯಿತು. ಅಲ್ಲಿ ನಿಂತಿದ್ದವಳು ಲಕ್ಷ್ಮಿ; ಅತ್ಯಂತ ರೂಪವತಿಯಾದ ಹೆಣ್ಣು. ರಂಭಾದೇವಿ ಪರ್ವದಲ್ಲಿ ರಂಭಾದೇವಿಯೆ. ಪಾರ್ವತಮ್ಮನವರು ಹಿಂದೆ ಯಾವಾಗಲೂ ಆಕೆಯನ್ನು ನೋಡಿರಲಿಲ್ಲ. ಆದರೆ ಈಗ ಪಾರ್ವತಮ್ಮನವರು ಬೆಚ್ಚಿಬಿದ್ದರು. ಲಕ್ಷ್ಮಿ ಬಿಸಿಲಿಗೆ ಮರೆಯಾಗಿ ತಲೆಯಮೇಲೆ ಆ ನೀಲಿವಸ್ತ್ರವನ್ನು ಹೊದೆದಿದ್ದಳು. ಅದರ ತುದಿಯಲ್ಲಿ ಪಾರ್ವತಮ್ಮನವರು ತಮ್ಮ ಕೈಯಿಂದ ಹಾಕಿದ್ದ ಆ ಹಳದಿ ಕಸೂತಿ ದೇವರಿಗೆ ಕೊಟ್ಟಿದ್ದ ರೇಸಿಮೆ ಇವಳ ತಲೆಯಲ್ಲಿ ಹೇಗೆ? ಅಮಲ್ದಾರ್ ಸಾಹೇಬರಿಗೆ "ಆ ರೇಸಿಮೆ ಎಷ್ಟು ಚನ್ನಾಗಿ ಅವಳಿಗೆ ಒಪ್ಪುತ್ತೆ" ಎಂಬ ಭಾವ ಮೊದಲು ಬಂತು. ಆದರೆ "ಈ ರೇಸಿಮೆ ಹಿಂದೆ ಎಲ್ಲಿ ನೋಡಿದ್ದೆ?'' ಪಾರ್ವತಮ್ಮನವರಿಗೆ ಸ್ಫೂರ್ತಿ ಹೊಳೆದಂತೆ "ಇವಳೇ ಬಂಗಾರದ ಹಳ್ಳಿ ಹೆಣ್ಣು ಎಂಬುದು ಹೊಳೆಯಿತು. ಅವರು ಸಕಾರಣವಾಗಿ ವಾದವಾದಿ ಈ ತೀರ್ಮಾನಕ್ಕೆ ಬರಲಿಲ್ಲ. ಬಂಗಾರದ ಹಳ್ಳಿ ದೇವರಿಗೂ ಲಕ್ಷ್ಮಿಗೂ ಅಮಲ್ದಾರರಿಗೂ ರೇಸಿಮೆ ವಸ್ತ್ರಕ್ಕೂ ಸಂಬಂಧವನ್ನು ಕಲ್ಪಿಸುವ ಗೊಡವೆಗೇ ಅವರು ಹೋಗಲಿಲ್ಲ. ಈ ಪ್ರಕರಣದಲ್ಲಿ ಒಂದು ಹೆಣ್ಣು ಇದೆಯೋ ಇಲ್ಲವೋ ಎಂಬುದೇ ಅನುಮಾನದಲ್ಲಿದ್ದ ಅವರಿಗೆ ಇವಳೇ ಹೆಣ್ಣು ಎಂಬುದು ಖಂಡಿತವಾಗಿ ಹೋಯಿತು. ದೇವರಿಗೆ ಎಸೆಯಬೇಕೆಂದಿದ್ದ ಒಂದು ಬಾಳೆಯ ಹಣ್ಣಿನಿಂದ ಅವರು ಎಲ್ಲ ಬಲವನ್ನೂ ಬಿಟ್ಟು ಅಮಲ್ದಾರ್ ಸಾಹೇಬರ ಕಪಾಳಕ್ಕೆ ಬಾರಿಸಿದರು. ಮತ್ತೊಂದು ಹಣ್ಣನ್ನು ಲಕ್ಷ್ಮಿಯ ಮುಖಕ್ಕೆ ಬೀರಿದರು. ಏಟಿನಿಂದ ಲಕ್ಷ್ಮಿಯ ಮುಖ ಮತ್ತಷ್ಟು ಕೆಂಪಾಯಿತು.

ರೇಸಿಮೆ ವಸ್ತ್ರದಿಂದ ತನ್ನ ಅಪರಾಧ ಪ್ರಕಟವಾಯಿತೆಂಬುದು ಅಮಲ್ದಾರರಿಗೆ ತಿಳಿಯಲಿಲ್ಲ. ವಸ್ತ್ರಕ್ಕೂ ಪಾರ್ವತಮ್ಮನವರಿಗೂ ಏನು ಸಂಬಂಧ ಎಂಬುದು ಲಕ್ಷ್ಮಿಗೂ ಅಮಲ್ದಾರ್ ಸಾಹೇಬರಿಗೂ ತಿಳಿಯಲಿಲ್ಲ.

ಮುಂದಲ ತಿಂಗಳು ಅಮಲ್ದಾರರಿಗೆ ಬೇರೆ ತಾಲ್ಲೂಕಿಗೆ ವರ್ಗವಾಯಿತು. ಮುಂದಲ ಚುನಾವಣೆಯಲ್ಲಿಯೂ ಅವರು ಚುನಾವಣಾ ಕಾರ್ಯವನ್ನು ನಿರ್ವಹಿಸಬೇಕಾಗಿದೆ.

ಭಗವಚ್ಛಬ್ದಾರ್ಥಸಾರ

ಲೇ: ಪ್ರೊ. ಉಡುಪಿ ವೆಂಕಟಕೃಷ್ಣರಾವ, ಎಂ. ಎ.

★

ಮಾನವಕೋಟಿಗೆ ಕಲ್ಯಾಣಕರನಾದ ಭಗವಂತನನ್ನು ಸಂಪಾದಿಸುವದಕ್ಕೆ ಭಕ್ತಿ ಮಾರ್ಗವೊಂದೆ ಸರ್ವಸುಲಭವಾದ ಮಾರ್ಗ. ಈ ಮಾರ್ಗವನ್ನನುಸರಿಸಿ ದೇವ ಸಾಕ್ಷಾತ್ಕಾರದ ಪರಮಾನಂದವನ್ನು ಹೊಂದಿದ ಭಕ್ತವರೇಣ್ಯರ ಮಾರ್ಗವನ್ನು ಸೋದಾಹರಣೆಗಳಿಂದ ವಿವರಿಸಿ, ಲೇಖಕರು ಭಕ್ತಿಮಾರ್ಗದ ವಿಷಯದಲ್ಲಿ ಸ್ಪಷ್ಟ ತಿಳಿವಳಿಕೆಯನ್ನು ಕೊಟ್ಟಿದ್ದಾರೆ. ಆಲಂಕಾರಿಕರಿಗೆ ಈ ಭಕ್ತಿರಸವು ಒಪ್ಪಿತವಾಗ ದಿದ್ದರೂ ಅದರ ಹಿರಿಮೆಗೆ ಇದರಿಂದೇನೂ ಕುಂದಿಲ್ಲ.

ಸರ್ವದಾ ಸರ್ವಕಾರ್ಯೇಷು ನಾಸ್ತಿ ತೇಷಾಂ
ಅಮಂಗಲಂ।
ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾ
ಯತನಂ ಹರಿಃ॥

ಭಗವಚ್ಛಬ್ದಕ್ಕೆ ಮುಖ್ಯಾಶ್ರಯನೇ ಪರಮಾತ್ಮನು. ಲೋಕದಲ್ಲಿ ದೊಡ್ಡ ಹುದ್ದೆಯಲ್ಲಿರುವವನನ್ನೋ ಶ್ರೀಮಂತನನ್ನೋ ನಾವು ಭಗವಂತನೆಂದು ಕರೆದರೆ, ಅದು ಸರ್ವಥಾ ಔಪಚಾರಿಕ. ಅವನ ಹುದ್ದೆಯೋ ಐಶ್ವರ್ಯವೋ ಕಾರಣಾಂ-ತರಗಳಿಂದ ಕರಗಿ ಹೋದರೆ, ಆದರ ಮರುಕ್ಷಣವೇ ಯಾರೂ ಅವನನ್ನು ಮಾತಾಡಿಸುವದು ಕೂಡ ಇಲ್ಲವೆಂಬದನ್ನು ನಾವು ಸುತ್ತುಮುತ್ತಲೂ ಕಂಡೇ ಇರುತ್ತೇವಷ್ಟೆ. ಶಾಶ್ವತವಾಗಿ ಅಪಾಯವಿಲ್ಲದಿರುವ ಅಚ್ಯುತವಾದ ಸ್ಥಾನಮಾನವೆಂದರೆ ಪರಮಾತ್ಮನಿಗೆ ಮಾತ್ರ. ಅವನ ಅಂಶಭೂತಗಳಾದ ನಮ್ಮಲ್ಲಿ ಈ ಭಗವತ್ತ್ವವು ಎಂದೆಂದಿಗೂ ಸಾಧ್ಯವಿಲ್ಲವೆಂಬುದು ಹದಿನಾರಾಣೆ ಸತ್ಯ.

ಈ ಭಗವಂತನ ಗುಣಗಳನ್ನೇ ಗಾನ ಮಾಡುವ ಕಾವ್ಯಗಳೇ ಶಬ್ದಬ್ರಹ್ಮನಾದ ಪರಮಾತ್ಮನ ಅಂಶಗಳಾಗಿ ಲೋಕದಲ್ಲಿ ಹೆಸರುವಾಸಿಗಳಾಗುತ್ತವೆಂದು 'ಶಬ್ದಮೂರ್ತಿ ಧರಸ್ಯೈತೇ ವಿಷ್ಣೋಃ ಅಂಶಾಃ ಮಹಾತ್ಮನಃ' ಎಂದು ಕೊಂಡಾಡಲ್ಪಡುತ್ತವೆ. ಉಳಿದವುಗಳೆಲ್ಲವೂ ಕಾವ್ಯಾಲಾಪಗಳು. ಈತನು ಭಕ್ತರ ಹೃದಯಾಕಾಶ – ಇದನ್ನೇ ಉಪನಿಷತ್ತುಗಳು ದಹರಾಕಾಶವೆನ್ನುವವು–ದಲ್ಲಿಯೇ ಸರ್ವದಾ ನೆಲೆಸಿರುವದರಿಂದ ಈ 'ಹೃದಿ-ಅಯಂ' ಎಂಬ ಎರಡು ಶಬ್ದಗಳು ಸೇರಿಯೇ ಹೃದಯಂ ಎಂಬ ಶಬ್ದವು ಬಳಕೆಯಲ್ಲಿ ಬಂದಿದೆ. ಆತನನ್ನು ಹೊಗಳದ ಹೃದಯವು ಕಲ್ಲಿನಿಂದ ನಿರ್ಮಿತವಾದುದೆಂದು ಸೊಗಸಾಗಿ ಭಾಗವತವು ಎರಡನೇ ಸ್ಕಂಧದಲ್ಲಿ–

ತದಶ್ಮಸಾರಂ ಹೃದಯಂ ಬತೇದಂ
ಯದ್ಗೃಹ್ಯಮಾಣೈಃ ಹರಿನಾಮಧೇಯೈಃ।
ನವಿಕ್ರಿಯೇತಾಽಥ ಸದಾ ವಿಕಾರಃ
ನೇತ್ರೇ ಜಲಂ ಗಾತ್ರರುಹೇಷು ಹರ್ಷಃ॥

ಎಂದು ಸಾರುತ್ತದೆ.

ಈ ಸರ್ವೋತ್ತಮನಾದ ಭಗವಂತನಲ್ಲಿ ಭಕ್ತಿ ಮಾಡುವದು ನಮ್ಮ ಕರ್ತವ್ಯ. ಈ ಭಕ್ತಿಯನ್ನು ಸಮುದ್ರದೊಡನೆ ಹೋಲಿಸುವದು ಭಕ್ತಿಶಾಸ್ತ್ರದಲ್ಲಿ ವಾಡಿಕೆಯಾಗಿ ಬಿಟ್ಟಿದೆ. ಸಮುದ್ರದಲ್ಲಿಯೂ ಭಕ್ತಿಯಲ್ಲಿಯೂ ಅಕ್ಷಯತ್ವ (ಎಷ್ಟು ಖರ್ಚಾದರೂ ಉಳಿಯುವದು), ಅಗಾಧತ್ವ (ವಿಶೇಷವಾಗಿ ಆಳವಾಗಿರುವದು) ಶ್ರೀಮತ್ತ್ವ (ಐಶ್ವರ್ಯ) ಅಮೃತೋದಯ। ರತ್ನವತ್ತ್ವ (ರತ್ನಗಳಿರುವದು), ಎಂಬ ಐದು ಗುಣಗಳು ಸರ್ವದಾ ಕಾಣಬರುವವು. ಇದನ್ನೇ ಸಂಸ್ಕೃತದಲ್ಲಿ ಹೀಗೆ ಹೇಳಬಹುದು:

ಅಕ್ಷಯತ್ವಂ ಅಗಾಧತ್ವಂ ಶ್ರೀಮತ್ತ್ವಂ ಅಮೃತೋದಯಃ।
ರತ್ನವತ್ತಾ ಚ ಸಿಂಧೂಕ್ತಾ, ಭಕ್ತೇಃ ಪಂಚ ಗುಣಾಃ ಸ್ಮೃತಾಃ॥

ಇಂಥ ಭಕ್ತಿವಿಶಿಷ್ಟರಾದವರು ನಾಲ್ಕು ವಿಧದವರು ತನ್ನನ್ನಾಶ್ರಯಿಸುವರೆಂದು ಭಗವಂತನೇ ಗೀತೆಯಲ್ಲಿ ಸಾರಿರುವನು - ಚತುರ್ವಿಧಾ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ॥ ಆರ್ತೋ, ಜಿಜ್ಞಾಸುಃ ಅರ್ಥಾರ್ಥೀ, ಜ್ಞಾನೀ ಚ ಭರತರ್ಷಭ॥ ಈ ನಾಲ್ಕು ವಿಧದ ಭಕ್ತರನ್ನೂ ನಾವು ಶ್ರೀಮದ್ರಾಮಾಯಣದಲ್ಲಿ ಕಾಣುತ್ತೇವೆ. ಆರ್ತನ ಭಕ್ತಿಯೆಂದರೆ ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸವೆಂದು ಖ್ಯಾತರಾದ ಪಾಂಡವರ ಭಕ್ತಿ



ಆಕಾಶಪುಟ್ಟಿ ಬೆಳಗಿಸಲು ಪತ್ನಿಗೆ ಮಂಕಪ್ಪನವರ ನೆರವು!

ಯಂಥಾದ್ದು. ರಾಮಾಯಣದಲ್ಲಿಯಾದರೋ ವಂಶಕರರಾದ, ಮಕ್ಕಳಿಲ್ಲವೆಂದು ಸಾವಿರಾರು ವರ್ಷ ಬಳಲಿ ನೊಂದು ತಪಿಸುತ್ತಿದ್ದ ದಶರಥ. ಇಂಥ ಆರ್ತನಲ್ಲಿ ಅಂದರೆ ನೊಂದವನಲ್ಲಿ ಧಾರ್ಮಿಕ ಬುದ್ಧಿಯು ಉದಿಸುವದು ಅತಿ ಸಹಜ. ಜಿಜ್ಞಾಸು ಭಕ್ತರಲ್ಲಿ ಶ್ರೇಷ್ಠನೇ ವಾಲ್ಮೀಕಿಯಾದ್ದರಿಂದ ಆತನ ಎದುರಿನಲ್ಲಿ ಬ್ರಹ್ಮನೇ ಪ್ರತ್ಯಕ್ಷನಾದಾಗ ಯಾವಾತನು ಉತ್ತಮನೆಂದು ತಿಳಿದುಕೊಳ್ಳುವ ಕುತೂಹಲವುಳ್ಳವನಾಗಿ 'ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್' ಇತ್ಯಾದಿ ಪ್ರಶ್ನೆಗಳನ್ನೇ ಕೇಳಿ, ತಾನೇ ಜ್ಞಾತುಂ ಇಚ್ಛೇಃ ಅಥವಾ ತಿಳಿಯಲಿಚ್ಛಿಸಿದವನಾಗಿ, ಕಟ್ಟಕಡೆಗೆ ತನ್ನ ಭಕ್ತಿಯ ಪ್ರತಿಬಿಂಬವಾಗಿ ರಾಮಾಯಣವೆಂಬ ಉತ್ತಮ ಪುರುಷಾರ್ಥಪ್ರದವಾಗಿಯೂ ಮೋಕ್ಷಪ್ರದವಾಗಿಯೂ ಇರುವ ಆದಿಕಾವ್ಯವನ್ನು ರಚಿಸಿ ನಮಗೆಲ್ಲ ಗುರುವೂ ಮಾರ್ಗದರ್ಶಕನೂ ಆಗಿದ್ದಾನೆ. ಇನ್ನು ಅರ್ಥಾರ್ಥಿಭಕ್ತನೆಂದರೆ ರಾಜ್ಯವನ್ನಾಶಿಸಿ ಬಂದ ವಿಭೀಷಣನು ನಮ್ಮ ಪಾಮರರಂತಿದ್ದು, ಶರಣಾಗತಿ ಎಂಬ ಭಕ್ತಿಶಾಸ್ತ್ರವನ್ನೇ ಹೊರಡಿಸಿದವನಾಗಿ ಬಿಟ್ಟಿದ್ದಾನೆ. ಅಂದರೆ ಇವನು ಶ್ರೀರಾಮಚಂದ್ರನನ್ನಾಶ್ರಯಿಸಿದಾಗ ನುಡಿದ 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ' ಎಂಬ ಶ್ಲೋಕವನ್ನೇ ರಾಮಾನುಜೀಯರಾದರಿಸಿ ಶರಣಾಗತಿ ಭಕ್ತಿ ಅಥವಾ ಪ್ರಪತ್ತಿಯನ್ನೂ ಸಾಧಿಸಿದ್ದಲ್ಲವೇ? ಇನ್ನು ನಿತ್ಯಯುಕ್ತನಾಗಿ ಪರಮೋತ್ಕೃಷ್ಟವಾದ ಭಕ್ತಿಯಿಂದ ಸರ್ವಭೂತಹಿತದಲ್ಲಿಯೇ ರತನಾದ (—ಯಸ್ಯ ವೀರ್ಯೇಣ ಕೃತಿನೋ ವಯಂ ಚ ಭುವನಾನಿ ಚ ಎಂದು ರಾಮಚಂದ್ರನ ಬಾಯಿಯಿಂದಲೇ ಭವಭೂತಿಯ ಉತ್ತರರಾಮ ಚರಿತದಲ್ಲಿ ಹೊಗಳಿಸಿಕೊಂಡ—) ಹನುಮಂತನೇ ಜ್ಞಾನಿಭಕ್ತರಲ್ಲಿ ಶ್ರೇಷ್ಠನಾಗಿ ಶ್ರೀರಾಮನ ಆತ್ಮವನ್ನೂ ಕೊಳ್ಳೆಹೊಡೆದು, ಜ್ಞಾನೀತ್ವಾತ್ಮೈವ ಮೇ ಮತಂ ಎಂಬ ಪರಮಾತ್ಮನ ಮಾತಿಗೇ ದೃಷ್ಟಾಂತನಾಗಿ ಚಿರಂಜೀವಿಯಾಗಿ ಈ ಹೊತ್ತಿಗೂ ರಾಮನ ಸತ್ಯತ್ವವನ್ನು ಸ್ಥಾಪಿಸುವ ಕೀರ್ತಿಸ್ತಂಭದಂತೆ ರಾರಾಜಿಸುತ್ತಾನಲ್ಲವೇ?

ಇನ್ನು ಈ ಭಗವಚ್ಛಬ್ದದ ನಿರ್ವಚನ ಅಂದರೆ ಅರ್ಥವನ್ನು ವಿಚಾರಿಸುವಾ. ಪುರಾಣರತ್ನವೆಂದು ರಾಮಾನುಜಾಚಾರ್ಯರಿಂದ ಆದೃತವಾದ ವಿಷ್ಣು ಪುರಾಣದಲ್ಲಿಯೇ ಇದಕ್ಕೆ ಸರಿಯಾಗಿ ವಿವರಣೆ ದೊರಕುವದು. ಆರನೇ ಅಂಶದ ಐದನೆಯ ಅಧ್ಯಾಯದ ೭೨ ನೇ ಶ್ಲೋಕದಿಂದ ಪ್ರಾರಂಭಿಸುವ ಈ ಸಂದರ್ಭವು ಹೀಗಿರುವದು–ಸರ್ವ ಕಾರಣ ಕಾರಣನಾದ ಪರಮಾತ್ಮನಿಗೇನೆ ಈ ಶಬ್ದವು ಮೀಸಲ್ಪಟ್ಟದ್ದೆಂದು ಪೀಠಿಕೆ ಹಾಕಿ, ಭ, ಗ, ವ ಎಂಬೀ ಅಕ್ಷರಗಳಿಗೆ ಪ್ರತ್ಯೇಕವಾಗಿ ಅರ್ಥಗಳನ್ನು ಕಲ್ಪಿಸಿರುವರು. ಭ ಎಂದರೆ ಎರಡರ್ಥವಂತೆ. ಸಂಭರ್ತ ಅಥವಾ ಆತನೇ ಸರ್ವತ್ರ ನಮ್ಮನ್ನು ಪಾಲಿಸುವವ. ನಾವೆಲ್ಲರೂ ಆತನ ಭೃತ್ಯರೆಂದೂ 'ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ' ಎಂದಿದೆ. ನಮ್ಮೆಲ್ಲರನ್ನೂ ತನ್ನ ಗರ್ಭದಲ್ಲಿಟ್ಟುಕೊಂಡು–ಗರ್ಭಿಣಿಯು ಹೊಟ್ಟೆಯೊಳಗಿದ್ದ ಮಗುವನ್ನು ಸರ್ವಾಪಾಯದಿಂದಲೂ ಸಂರಕ್ಷಿಸುವಂತೆ—ನಮ್ಮನ್ನು ಕಾಯಬಲ್ಲವನೇ ಭಗವಂತ. 'ಗ' ಎಂಬ ಎರಡನೇ ಅಕ್ಷರಕ್ಕೆ 'ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥ: ತಥಾ ಮುನೇ' ಅಂದರೆ ದರ್ಶಕನಾಗಿ ಹಾದಿ ತೋರಿಸುವವ, ನಡೆಯುವ ಶಕ್ತಿಯನ್ನೂ ಕರುಣಿಸುವವ, ಸೃಜಿಸುವವ, ಒಂದೇ ಮಾತಿನಿಂದ ಹೇಳುವದಾದರೆ ಜೀವರಾಶಿಗಳೆಲ್ಲರಲ್ಲಿಯೂ ದಯಾಶೀಲನಾಗಿ ಮೋಕ್ಷ ಸಾಮ್ರಾಜ್ಯಕ್ಕೆ ಹಾದಿಯನ್ನೇ ತೋರಿಸಿಕೊಂಡೊಯ್ಯುವವನೆಂದಾಯಿತು. ಇನ್ನು 'ವ' ಕಾರ—ವಸಂತಿ ಯತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ। ಸರ್ವ ಭೂತೇಷ್ವಶೇಷೇಷು ವ ಕಾರಾರ್ಥಃ ತತೋಽವ್ಯಯಃ॥ ಅರ್ಥಾತ್ ವ ಕಾರದ ಅರ್ಥವೆಂದರೆ ಗೀತೆಯಲ್ಲಿ ಮಯಿ ತೇ ತೇಷು ಚಾಪ್ಯಹಂ— ಎಲ್ಲಾ ಪ್ರಾಣಿಗಳೂ ಅಖಿಲಾತ್ಮ ಅಥವಾ ವಿಶ್ವಾತ್ಮನಾದ ಪರಮಾತ್ಮನಲ್ಲಿ ವಾಸಿಸುತ್ತವೆ. ಹೀಗೆ ಪ್ರತ್ಯೇಕಾಕ್ಷರಗಳ ಅರ್ಥವನ್ನು ಹೇಳಿ, ಒಟ್ಟಿದ್ದ ಭಗವತ್ ಶಬ್ದದ ಅರ್ಥವೂ ವಾಸುದೇವನಿಗೇ ಅನ್ವಯಿಸುತ್ತದೆಂದು ಬೇರೆ ಹೇಳಬೇಕೆ? ಅದನ್ನೂ ಅಲ್ಲಿಯೇ ಎರಡು ವಿಧವಾಗಿ–ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ। ಜ್ಞಾನ ವೈರಾಗ್ಯಯೋಃ ಚೈವ ಷಣ್ಣಾಂ ಭಗ ಇತೀರಿತಾ— ಅಂದರೆ ಸಮಗ್ರವಾದ ಐಶ್ವರ್ಯ, ವೀರ್ಯ, ಕೀರ್ತಿ, ಸಂಪತ್ತು, ಜ್ಞಾನ ವೈರಾಗ್ಯ— ಈ ಆರರ ನಿಧಿಯೆಂದೂ 'ಉತ್ಪತ್ತಿಂ ಚ ವಿನಾಶಂ ಚ ಭೂತಾನಾಮಾಗತಿಂ। ಗತಿಂ ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ'– ಎಂದರೆ ಪ್ರಾಣಿಸಾಮಾನ್ಯಗಳ ಹುಟ್ಟುವಿಕೆ, ಅಳಿ

ಯುವಿಕೆ, ವಿವಿಧ ಯೋನಿಗಳಲ್ಲಿ ಸಂಚಾರ, ವಿದ್ಯೆ, ಅವಿದ್ಯೆ- ಇತ್ಯಾದಿಗಳನ್ನೆಲ್ಲ ತಿಳಿದವನೆಂದೂ ವಿವರಿಸುವರು. ಇದನ್ನೇ ವಿಷ್ಣು ಸಹಸ್ರನಾಮದಲ್ಲಿ ಭಗವಾನ್ ಭಗಹಾ ಎಂದು ಆತನನ್ನು ನಿರ್ದೇಶಿಸುವಾಗ ಅನ್ಯರಿಗೆ ಯಾರಿಗಾದರೂ ಭಗ ಶಬ್ದವು ಉಪಯೋಗಿಸಲ್ಪಟ್ಟರೆ ಅಹಂಕಾರ ಭರಿತನಾದ ಅವನನ್ನು ಕೊಲ್ಲುವವನೆಂದೂ ವರ್ಣಿಸಿದ್ದು. ಇದನ್ನೇ- ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈಃ ಗುಣಾದಿಭಿಃ ॥ ಎಂದರೆ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ - ಇವಿಷ್ಟಕ್ಕೂ ತವರುಮನೆಯಂತಿದ್ದುದು ಗುಣಗಳೊಂದು ಇಲ್ಲದವನೇ ಭಗವಂತನೆಂದು ಅಲ್ಲಿ ಈ ಸಂದರ್ಭವನ್ನು ಮುಗಿಸುವರು. ಎಲ್ಲಾ ಪ್ರಾಣಿಗಳೂ ಪರಮಾತ್ಮನಲ್ಲಿದ್ದು, ಆತನು ಸರ್ವಾತ್ಮನಾಗಿದ್ದುದರಿಂದಲೇ ಆತನಿಗೆ ವಾಸುದೇವನೆಂತಲೂ ಹೆಸರಾಯಿತಂತೆ !

ಇನ್ನು ಈ ಭಗವಂತನಲ್ಲಿ ಭಕ್ತಿಯನ್ನರ್ಪಿಸುವದೇ ನಮ್ಮ ಪರಮ ಕರ್ತವ್ಯವೆಂದು ಬೇರೆ ಹೇಳಬೇಕೇ ? ಈ ಭಕ್ತಿ ರಸವನ್ನು ಆಲಂಕಾರಿಕರೇನೋ ಅಲಂಕಾರ ಶಾಸ್ತ್ರದಲ್ಲಿ ಒಪ್ಪಿಕೊಳ್ಳದಿದ್ದರೂ, ನಿಜವಾದ ಆನಂದಾನುಭವವು ಇಲ್ಲಿಯೇ ಸಾಧ್ಯವೆಂದು ಬಹಳ ಸೊಗಸಾಗಿ ಪ್ರತಿಪಾದಿಸಿ, ಮಧುಸೂದನ ಸರಸ್ವತಿಯೆಂಬ ಪರಮಹಂಸ ಪರಿವ್ರಾಜಕಾಚಾರ್ಯರಾದ ಅದ್ವೈತ ಸಂಪ್ರದಾಯದ ಯತಿವರರೊಬ್ಬರು ತಮ್ಮ ಭಗವದ್ಭಕ್ತಿ ರಸಾಯನವೆಂಬ ಅಪೂರ್ವವಾದ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಭರತನು ಹೇಳಿದ ೮ ರಸಗಳಲ್ಲಿಯೂ ಈ ಆನಂದಾನುಭವವು ಸಾಕ್ಷಾತ್ತಾಗಿ ತೋರುವದಿಲ್ಲವೆಂಬುದಕ್ಕೆ ಸಹೃದಯರಾದ ನಾವೆಲ್ಲರೇ ಸಾಕ್ಷಿಗಳಾಗುತ್ತೇವೆ. 'Our sweetest songs are those that tell us saddest thoughts' ಎಂದು ಆಂಗ್ಲ ಕವಿ (Shelley) ಯು ಹಾಡಿರಲಿಲ್ಲವೇ? ಶಾಂತರಸದಿಂದಲೂ ತೃಪ್ತರಾಗದ ಈ ಶ್ರೇಷ್ಠ ಆಲಂಕಾರಿಕರು ಈ ಭಕ್ತಿರಸವನ್ನೇ ಶೃಂಗಾರ, ವೀರ, ರೌದ್ರ, ಕರುಣ ರಸಾದಿಗಳ ಮಟ್ಟಕ್ಕೇರಿಸಿ ಅದಕ್ಕೆ ಸ್ಥಾಯಿ ಭಾವ, ಅಲಂಬನ, ವಿಲಂಬನ, ವಿಭಾವ, ಅನುಭಾವ, ವ್ಯಭಿಚಾರಿಗಳನ್ನೆಲ್ಲಾ ಭಾಗವತ ಪುರಾಣದಿಂದ ಆಯ್ದು ತೆಗೆದ ಉತ್ತಮವಾದ ಶ್ಲೋಕಗಳಿಂದ ಸ್ಥಾಪಿಸಿ (ಪ್ರಹ್ಲಾದ, ಪೃಥು ಧ್ರುವ ಇತ್ಯಾದಿಗಳ ಮಾತನ್ನಾಲಂಬಿಸಿ)

ಇತ್ಯಚ್ಯುತಾಂಘ್ರಿಂ ಭಜತೋಽನುವೃತ್ತ್ಯಾ
ಭಕ್ತಿರ್ವಿರಕ್ತಿರ್ಭಗವತ್ಪ್ರಬೋಧಃ ।
ಭವಂತಿ ವೈ ಭಾಗವತಸ್ಯ ರಾಜನ್
ತತಃ ಪರಾಂ ಶಾಂತಿಮುಪೈತಿ ಸಾಕ್ಷಾತ್


—೧೧ ಸ್ಕಂಧ ಅ ೨.

ನಮಗೆಲ್ಲರಿಗೂ ಪ್ರಾತಃಸ್ಮರಣೀಯರಾಗಿದ್ದಾರೆ. ಆನಂದವರ್ಧನರ ಶಾಂತರಸಪ್ರತಿಪಾದನೆ – ಅಂದರೆ ಮಹಾಭಾರತದಲ್ಲಿ ವೈರಾಗ್ಯ ಸ್ಥಾಯಿ ಭಾವಕನಾಗಿ ಸನಾತನಾದ ವಾಸುದೇವನಿಲ್ಲಿ ಕೀರ್ತಿತನಾಗಿದ್ದಾನೆಂದರೂ-ಯೂ ಇವರಿಗೆ ತೃಪ್ತಿಯಾಗದೇ ಹೋಯಿತು. ಅವರ ಮಾತಿನಲ್ಲಿ ಹೇಳುವದಾದರೆ ಶ್ರದ್ಧಾ ಭಕ್ತಿ ರಸಾನುಭವವಿದ್ದರೆ ರತಿಯೆಂಬ ಸ್ಥಾಯೀ ಭಾವವೇ ಭಕ್ತಿರಸವಾಗಿ ಕ್ರಮೇಣ ಮಾರ್ಪಡುತ್ತದೆ. 'ತದೇವ ಸತ್ಯಂ ತದಿಹೈವ ಮಂಗಲಂ ತದೇವ ಪುಣ್ಯಂ ಭಗವದ್ಗುಣೋದಯಂ । ತದೇವ ರಮ್ಯಂ ರುಚಿರಂ ನವಂ ನವಂ ತದೇವ ಶಶ್ವನ್ಮನಸೋ ಮಹೋತ್ಸವಂ' ಎಂಬ ಭಾಗವತ ೧೧ ನೇ ಸ್ಕಂಧದ ೧೨ ನೆಯ ಅಧ್ಯಾಯದ ಶ್ಲೋಕವನ್ನು ನಮ್ಮ ನೆನಪಿಗೆ ತಂದುಕೊಡುವರು. ಗೋಪೀವಲ್ಲಭನಾದ ಶ್ರೀಕೃಷ್ಣನ ಚರಿತ್ರ ಮೊಟ್ಟಮೊದಲು ನಮಗೆ ಕರುಣಿಸುವದಕ್ಕೆ ಕಾರಣರಾದ ಗೋಪಿಗಳೇ ಧನ್ಯರು- ಅಹೋ ಭಾಗ್ಯಂ ಅಹೋ ಭಾಗ್ಯಂ ನಂದಗೋಪವ್ರಜೌಕಸಾಂ । ಯನ್ಮಿತ್ರಂ ಪರಮಾನಂದಂ ಪೂರ್ಣಂ ಬ್ರಹ್ಮ ಸನಾತನಂ ॥ ಈ ಗೋಪಿಗಳೆಂದರೆ ಅಧ್ಯಾತ್ಮರೀತ್ಯಾ ತಮ್ಮ ಸ್ವಾಶಯದೊಳಗೆ ಕೃಷ್ಣನನ್ನು ಕಾಪಾಡಿದ ಪ್ರೇಮದ ದಿವ್ಯ ಮೂರ್ತಿಗಳು :

ಪ್ರೇಮ್ಣಾ ಪ್ರೇಮಣ್ಯೇಧಮಾನೇಽತಿ ಕೇಲಂ
ಗೋಪೀಸಂಜ್ಞಾಃ ಶಾಶ್ಚ ಸಾವಿರ್ಭವಂತಿ ।
ಧರ್ಮಾಧರ್ಮೌ ತಾ ಹಿ ಜಾತಾಃ ತ್ಯಜಂತ್ಯಃ
ಗೋಪಾಯಂತಿ ಸ್ವಾಶಯೇ ಕೃಷ್ಣಮೇಕಂ ॥

ಇಂಥವರ ಭಕ್ತಿ ರಸಸ್ಥಾಯಿ ಭಾವವೇ ದ್ರುತ (ಕರಗಿದ) ಚಿತ್ತ ವೃತ್ತಿಯೊಳಗೆ ಹೊಕ್ಕಿದ ಭಗವದಾಕಾರವೆಂಬ ಸಂಸ್ಕಾರ ವಿಶೇಷವಾಗಿ ಭಾಗವತ ಧರ್ಮಾನುಷ್ಠಾನಕ್ಕೆ ಬೀಜವಾಗುವಂತೆ, ಈ ಗೋಪಿಗಳಿಗೆ ಪರಮಾತ್ಮನನ್ನೊಂದೇ ಕ್ಷಣ ಕಾಣದಿದ್ದರೂ ಯುಗವೆಂದು ಭಾಸವಾಗುತ್ತಿದ್ದಂತೆ ಅವರಿಗೆ ಕೃಷ್ಣನು ಪ್ರಿಯ, ಆತ್ಮ, ಮಗ, ಸಖ, ಗುರು, ಸುಹೃತ್, ಇಷ್ಟ ದೈವ - ಎಲ್ಲವೂ ಆಗಿದ್ದನಂತೆ ! ಹೀಗೆ ವೇದಾಂತ ಸಿದ್ಧಾಂತವೆಂಬ ಗಂಗಾಪ್ರವಾಹದಲ್ಲಿ ಆಲಂಕಾರಿಕ ಸಿದ್ಧಾಂತವೆಂಬ ಯಮುನಾಸಂಗಮವನ್ನು ತಂದೊಡ್ಡಿದ ಈ ಯತಿವರ್ಯರು ಭಗವದ್ಭಕ್ತಿಯೆಂಬ ಕ್ಷೀರಸಿಂಧುವಿನಲ್ಲಿ ಪವಡಿಸಿದ ಪರಮಾತ್ಮನ ಸಾನ್ನಿಧ್ಯಕ್ಕೆ ನಮ್ಮನ್ನೊಯ್ಯಲು ಮಧುರವಾದ ಮಾರ್ಗವನ್ನು ಕಲ್ಪಿಸಿದ್ದಾರೆ.

ದೀಪಾವಳಿ ಉಡುಗರೆಗಳ ದೀರ್ಘ ಯಾದಿಯನ್ನು ಅಳಿಯ ದೇವರು ಮಾವನಿಗೆ ಕಳಿಸಿದ್ದರು. ಮಾವನಿಂದ ವೇಳೆಗೆ ಸರಿಯಾಗಿ ಉತ್ತರ ಬರಲಿಲ್ಲ. ದೀಪಾವಳಿಯೇ ತಪ್ಪೀತೆಂದು ಮಾವನ ಮನೆಗೆ ಬಂದುಬಿಟ್ಟರು. ಹೆಂಡತಿಯಿಂದಲೇ ಮೊದಲ ಸ್ವಾಗತವಾಯಿತು. ಅಂಕಿ–ಸಂಖ್ಯಾತಜ್ಞರಾದ ಅಳಿಯದೇವರು ಉಡುಗರೆಗಳ ಯಾದಿಯ ಗುಟ್ಟನ್ನು ತಿಳಿಸಿದರು. ಆದರೆ ಹೆಂಡತಿಯ ಕೈಗೆ ಜುಟ್ಟು ಕೊಟ್ಟು ಫಜೀತಿಯಾದರು.



(ಯಶವಂತರಾಯರ ಮನೆ. ಅವರ ಮಗಳು ಸುಧಾ ತನ್ನಷ್ಟಕ್ಕೆ ಹಾಡಿಕೊಳ್ಳುತ್ತಿರುವದು ಕೇಳಿಸುವದು.)

ಸುಧಾ :– "ರಾಯರು ಬಂದರು ಮಾವನ ಮನಿಗೆ ರಾತ್ರಿಯಾಗಿತ್ತು, ಹುಣ್ಣಿವೆ ಹರಿಸಿದ ಬಾನಿನ ನಡುವೆ ಚಂದಿರ ಬಂದಿತ್ತು" (ಅವಳು ಒಂದೆರಡು ಸಲ ಈ ಚರಣವನ್ನು ಅನ್ನುವಷ್ಟು ಹೊತ್ತಿಗೆ ಬೂಟಿನ ಸಪ್ಪಳ ಕೇಳಿಸುವದು. ತಟಕ್ಕನೆ ಹಾಡು ನಿಲ್ಲಿಸಿ) ಯಾರು? ಅವ್ವಯ್ಯಾ! ನೀವೇನು? ನಾ ಯಾರು ಬಂದ್ರೊ ಅಂತ ನಾಚಿ ಸತ್ತುಹೋಗಿದ್ದೆ.

ವಸಂತ :– ಹುಂ. ಇರಬಹುದು. ಅಲ್ಲಾ, ಹಗಲೊತ್ತು ಮನೀಗೆ ಮಂದಿ ಬಂದಾರು ಅನ್ನೂ ಎಚ್ಚರಿಲ್ದೆ, ಮನಿಯೊಳಗೆ ಮಂದಿ ಇರುವಾಗ್ಲೆ, ಗಂಡ ಬಂದಾ– ಅದೂ ರಾತ್ರಿ ಹೊತ್ತಿನಾಗ ಅಂತ ಹಾಡಲಿಕ್ಕೆ ಹತ್ತಿದಾಗ ತಿಳಿಲಿಲ್ಲೇನು? ಮತ್ತೆ ನಾಚಿಕೆ ಅಂತ!

ಸುಧಾ :– ಬರೇ ಅವಸರ ನೋಡ್ರಿ ನಿಮ್ದು. ಏಳರಾಗ ಹುಟ್ಟಿದ್ರೊ ಏನೊ? ಇದು ಲಗ್ನ ಆದ ನಂತ್ರ ಮೊದಲನೆ ದೀಪಾವಳಿ ಅಂತೇ ನಿಮಗೆ ಬಾ ಅಂದು ಅಪ್ಪ ಮ್ಯಾಲೆ ಮ್ಯಾಲೆ ಸಾದಾ ಪತ್ರ, ಎಕ್ಸಪ್ರೆಸ್ ಪತ್ರ ಬರದರೂ ಅಂತ ನೀವು ಇಂಥಿಂಥಾ ಸಾಮಾನು ಕೊಟ್ರೇನೇ ನಾ ಹಬ್ಬಕ್ಕೆ ಬರಾಂವಾ ಅಂತ ಮಾರುದ್ದ ಯಾದೀನೇ ಕಳಿಸಿದ್ರಿ. ಅಷ್ಟೆಲ್ಲಾ ಕೊಡೂದು ಹ್ಯಾಂಗೆ ನೀಗೀತು ಅಂತ ಬರದ್ರೆ, ಅಳಿಯ ಇಲ್ದೆ ಹಬ್ಬಾ ಮಾಡಿಕೊಳ್ರಿ, ಅಪ್ಪ ಕೊಟ್ಟಮ್ಯಾಲೇ ಮಗಳನ್ನ ಕಳಿಸಿ ಕೊಡ್ರಿ ಅಂತ ನೋಟೀಸ ಕೊಟ್ಟಹಾಂಗ ರಜಿಸ್ಟರ ಪತ್ರ ಬರದ್ರಿ.

ವಸಂತ :– ಹೌದು. ಹಾಂಗ ಬರೀದಿದ್ರೆ ನಾ ಕೇಳಿದ್ದು ಹ್ಯಾಂಗೆ ಸಿಗಬೇಕು?

ಸುಧಾ :– ತುಸಾ ತಡೀರಿ. ನನ್ನ ಮಾತಾರ ಪೂರಾ ಮುಗೀಲಿ. ಅಪ್ಪ ಅವರಿವರ ಕೈಕಾಲು ಹಿಡಿದು ಸಾಲಾ ತಂದು ಈಗ ನಿಮ್ಮ ಸಾಮಾನು ತರ್ಲಿಕ್ಕೆ ಅಂತ ಪ್ಯಾಟೀಗೆ ಹೋಗ್ಯಾನ. "ದೇವರೇ, ಸಾಲ ಸಿಕ್ಕಲಿ. ಅಳಿಯ ಹಬ್ಬಕ್ಕೆ ಬರೂಹಾಂಗ ಆಗ್ಲಿ, ಅಷ್ಟಾತು ಅಂದ್ರೆ ಸತ್ಯನಾರಾಯಣ ಪೂಜಾ ಮಾಡಸ್ತೇನಿ" ಅಂತ ಅವ್ವ ಹರಕೆ ಹೊತ್ತಕೊಂಡಿದ್ಳು. ಸಾಲ ಸಿಕ್ಕಿ ಕೆಲಸ ಆತೂ ಅಂದಕೂಡ್ಲೆ– ನಮ್ಮವ್ವಗ ದೇವರ ಮ್ಯಾಲೆ ಶ್ರದ್ಧೆ ಭಾಳ– ನಾಳೇನೇ ಸತ್ಯನಾರಾಯಣ ಪೂಜಾ ಮಾಡಿ ಬಿಡೋಣ ಅಂತ ಭಟ್ಟರೀಗೆ ಹೇಳಲಿಕ್ಕೆ ಹೋಗ್ಯಾಳ. ಅಂತೂ ನಮ್ಮ ರಾಯ್ರು ಬರವ್ಹಾಂಗಾತು– ಮನಿಯೊಳಗೆ ಯಾರೂ ಇಲ್ಲ ಅಂತ ನಾನೂ . . .

ವಸಂತ :– (ನಕ್ಕು) ಹಾಡು ಅನಕೋತ ಕೂತಿದ್ದಿ ಹೌದಲ್ಲೋ? ಆದರೆ ರಾಯ್ರು ಬಂದಿದ್ದೇನೊ ಖರೇ, ಆದ್ರೂ ಬಂದಿದ್ದು ಮಾತ್ರ ಹಗಲೇ– ರಾತ್ರಿ ಅಲ್ಲ. ತಿಳೀತೇನು? ಎಲ್ಲಿ, ರಾಯರು ಹಗಲೇ ಬಂದ್ರು ಅಂತ ತಿದ್ದಿಕೊಂಡು ಪದಾ ಹೇಳು ನೋಡೋಣ.

ಸುಧಾ:– ತೆಗೀರಿ. ಅಲ್ಲಾ, ಅಂದ್ಹಾಂಗ ಸಾಮಾನು ಕೊಡ್ತೇನಿ ಅಂತ ತಾರ ಕಳಸೂವರೇಗೂ ಬರೂದಿಲ್ಲ ಅಂತ ಕೆಂಪ ಗೆರೀ ಎಳದು ಬರದವರು. ಸರಕ್ಕನೆ ಯಾಕೆ ಬಂದ್ಬಿಟ್ರಿ? ನೀವು ಹೀಂಗ ಬರ್ತೀರಿ ಅಂತ ಗೊತ್ತಿದ್ರೆ . . .

ವಸಂತ :– ಅದು ಹೀಂಗಾತು ನೋಡು. ದೀಪಾವಳಿ ಸೂಟಿಯೊಳಗೆ ಈಗ ಮತ್ತೆ ರೇಲ್ವೆದವರು ಕನಸೆಶನ್ ಟಿಕೇಟು ಕೊಡ್ಲಿಕ್ಕೆ ಹತ್ಯಾರ. ನಮ್ಮ ಬಿ. ಎ. ಕ್ಲಾಸಿನಾಗಿನ ನಾಕ ಮಂದಿ ಫ್ರೆಂಡ್ಸ್ ಮೈಸೂರು ಗಿಯ್ಸೂರು ನೋಡಿಕೊಂಡು ಬರೋಣ ಅಂತ ಮಾಡ್ಯಾರ. ಇಲ್ಲಿ

ಹೆಬ್ಬ ತಪ್ಪ ಅಂದ್ರೆ ಟ್ರಿಪ್ಪಿಗಾದ್ರೂ ಹೋಗೋಣ ಅಂತ, ಹಕೀಕತ್ತು ಏನು ಅಂತ ತಿಳಕೊಂಡು ಹೋಗ್ಲಿಕ್ಕೆ ಬಂದ್ಬಿಟ್ಟೆ.

ಸುಧಾ :– ಹುಂ.

ವಸಂತ :– ಹೌದು. ಅಂತೂ ಟ್ರಿಪ್ ತಪ್ಪುತ್ತ ಅನ್ನೂದು ನಿನ್ನ ಮಾತಿನ ನ್ಯಾಲೆ ತಿಳೀತು. ಅಲ್ಲೆ, ಇಂದ ರಾತ್ರೀನೇ ನೀರಹಾಕ್ಕೊಂಬೂದು. ಏನ ಹಬ್ಬ ಮುಗದ ನ್ಯಾಲೆ ತಿಳಸೋಣ ಅಂತ ನಿನ್ನ ಅಪ್ಪ ಮಾಡಿದ್ನೇನು? ಒಷ್ಮೆ ನನಗನಸ್ತು, ಹೋಗಿ ನೋಡೂದೇನು ? ಟ್ರಿಪ್ಪಿಗೆ ಹೋಗಿ ಬಿಡೋಣ. ಕೂಡ್ಲಿಲಿ ಝುಕ್ಕಸ್ತ ಅಂತ. ಆದರೆ ಮುಂದೆ ನೀ ಅತಗೋತ ಕೂತಿs ಅಂತ . . .

ಸುಧಾ :– ಭಾಳ ನನ್ನ ಪ್ರೀತಿ ಮಾಡವ್ರು ನೀವ್ರ, ಗೊತ್ತದ ಬಿಡ್ರಿ. ಈಗೆಲ್ಲಾ ಸಾಮಾನು ತಂದಿಟ್ಟು, ನಿಮಗೆ ತಾರಲ್ಲ, ಫೋನ ಮಾಡಿ ಹೇಳ್ತೇನಿ, ಎರಡ ತಾಸಿನ ಹಾದಿ, ರಾತ್ರಿ ಬರ್ತಾರ ಅಂತ ಅಪ್ಪ ಅಂದಿದ್ದ. ರೊಕ್ಕ ಕೈಗೆ ಬಂದದ್ದು ಮುಂಜಾನೆ. ಮೊದಲೇ ಹ್ಯಾಂಗ ತಿಳಸ್ತಾನ?

ವಸಂತ :– ಇರ್ಲಿ ಬಿಡು. ಈಗೆಲ್ಲಾ ಹ್ಯಾಂಗೂ ಸುರಳೀತ ಆತಲ್ಲ. ನೋಡು, ನಾ ಹೀಂಗೆ ಮೊದಲೇ ಬಂದ್ರೆ ನನ್ನ ಮರ್ಯಾದಿ ಹೋಗ್ತದ. ಆದಕೇ . . .

ಸುಧಾ :– ಮರ್ಯಾದಿ ಅಂತೆ. ಬಂದದ್ದ ಬಂದೀರಿ. ಹಬ್ಬಾ ಮುಗಿಸಿಕೊಂಡೇ ಹೋಗ್ರಿ. ಬೇಕಾದ್ರೆ ನಾಡದೇ ಹೊರಡೋಣ. ನಾನೂ ಬರ್ತೇನಿ ನಿಮ್ಮ ಗೂಡ ಟ್ರಿಪ್ಪೀಗೆ.

ವಸಂತ:– ಇನ್ನೆಲ್ಲಿ ಟ್ರಿಪ್ಪು? ಇನ್ನ ಒಂದವ್ಯಾಳೆ ನೀ ಏನಾರ ನಿಮ್ಮಪ್ಪನಕಡಿಂದ . . .

ಸುಧಾ :– ರೊಕ್ಕ ಇಸಕೊಂಡ್ರೆ ಹೋಗೋಣ, ಹೌದಲ್ಲೊ ? ಗೊತ್ತಾತು ನೀವು ಮಾಡೂ ಪ್ರೀತಿ. ಕಾಲೇಜ ಮ್ಯಾಗಿಜಿನ್ನದಾಗ ಒಂದೆರಡು ನಿಮ್ಮ ಕವಿತಾ ಬಂದವು ಅಂತ ದೊಡ್ಡ ಕವೀ ಹಾಂಗ ಪತ್ರಾ ಬರೀತೀರಿ – ಚಿನ್ನಾ, ಮುತ್ತೆ ಅಂತಾ. ತಂದ ತೋರಿಸಲೇನು? ಹೋದ ತಿಂಗಳದಾಗ ನೀವು ಹದಿನಾಲ್ಕು ಪತ್ರ ಬರದೀರಿ. ಅದರಾಗ ನೂರಾ ಹದಿನೆಂಟು ಸಲ ನನ್ನ ಚಿನ್ನಾ ಅಂತ ಅಂದೀರಿ, ಎಪ್ಪತ್ತಾರು ಸಲ ಮುತ್ತೇ ಅಂದೀರಿ.

ವಸಂತ :– ಅಂ !

ಸುಧಾ :– ಹೌದು. ನಾ ಲೆಕ್ಕಾ ಮಾಡಿಟ್ಟೇನಿ. ಒಂದಿನಾ ಏನಾತು ? ನಿಮ್ಮ ಹನ್ನೆರಡನೆ ಪತ್ರ ಬಂದಾಗ ಹೀಂಗೇ ಲೆಕ್ಕಾ ಮಾಡಿಕೋತ ಕುಂತಿದ್ದೆ. ಅಷ್ಟರಾಗ ಅಪ್ಪ ಹೊರಗಿಂದ ಬಂದು ಒಂದು ಥಾಲಿ ಕುಡಿಯೂ ನೀರು ತಗೊಂಬಾ ಅಂದ. ನಾ ಪತ್ರ ಅಲ್ಲೆ ಇಟ್ಟು ನೀರು ತಂದ್ಕೊಟ್ಟೆ. ಅವ್ವ ಕಡಗಿ ಆಗಿದ್ಳು. ಅಪ್ಪಗೆ ಛಾ ಮಾಡಿ ಕೊಡೋಣ ಅಂತ ಹಾಂಗೇ ಒಳಗೆ ಹೋದೆ. ಅಪ್ಪ ಪತ್ರ ಓದಿದಾ ಅಂತ ಕಾಣಸ್ತದ. ನಿಮ್ಮ ದೀಪಾವಳಿ ಬೇಡಿಕೆ ಯಾದೀ ಬಂದಾಗ "ಅಲ್ಲೆ ಸುಧಾ, ನಿನ್ನ ಗಂಡ ಭಾಳ ವಿಚಿತ್ರ ಇದ್ದಾನಲ್ಲ? ಭಾಳ ಆಶೆಬುರಕ ಇದ್ಧಾಂಗ ಕಾಣಸ್ತದ. ನಿನ್ನ ಚಿನ್ನಾ, ಚಿನ್ನಾ ಅಂತಾನ. ನೀ ಇದ್ದಿ ೯೮ ಪೌಂಡು ತೂಕ. ಇಷ್ಟ ಬಂಗಾರ ಕೈಗೆ ಸಿಕ್ರೂ ತೃಪ್ತಿ ಆದ್ಹಾಂಗ ಕಾಣೂದಿಲ್ಲ. ೨ ತೊಲಿ ಬಂಗಾರದ ವಾಚಿನ ಚೇನು ಬೇಕು ಅಂತ ಬರದಾನ" ಅಂತ ಚ್ಯಾಷ್ಟಿ ಮಾಡಿದ. ನಾ ನಾಚಿ ಸಣ್ಣಾಗಿ ಹೋದೆ.

ವಸಂತ :– ಆದರೇನಾತು ಬಿಡು. ಎರಡ ತೊಲಿ ಬಂಗಾರ ಈಗ ಸಿಗ್ತದೊ ಇಲ್ಲೋ?

ಸುಧಾ :– ಅದೇ ನಾ ಅಂದದ್ದು. ಬಂಗಾರಾ ದುಡ್ಡು ಅಂದ್ರಾತು ನಿಮಗೆ. ಹೆಂಡತಿ ಮಾಡಿಕೊಳ್ಳೆ ಅದು ಸಿಗವ್ಹಾಂಗಿದ್ರೆ ನೀವು ಲಗ್ನಾನಾರ ಮಾಡಿಕೊಳ್ತಿದ್ರೊ ಇಲ್ಲೊ ?

ವಸಂತ:– ನಿನಗೇನೂ ತಿಳಿಯೂದಿಲ್ಲ ನೋಡು. ಅಲ್ಲೆ, ಲಗ್ನದ ಕಾಲಕ್ಕೆ ಮಾವ ಏನೊ ಒಂದಿಷ್ಟು ಕೊಡ್ತಾನ ಅನ್ನು. ಆದರೆ ಅಳಿಯನ ಸಂಸಾರಕ್ಕೆ ಸಾಯೂತನಕಾ ಅದು ಸಾಕಾದೀತೇನು ? ನಾಳೆ ನಮಗೂ ಮಕ್ಕಳು–ಮರಿ ಆದವು ಅಂದ್ರೆ ಆಗ ಮಾವ ಕೊಡ್ತಾನೇನು ? ಹೆಂಡತಿ ಬೇಕು ಅಂತಲೇ ಲಗ್ನ ಆಗ್ತೇವೇ ಹೊರ್ತು ಮಾವ ಕೊಡೂ ರೊಕ್ಕಕ್ಕಲ್ಲ, ತಿಳೀತೇನು ? ಏನೋ ಅನಾಯಾಸ ಕನ್ಯಾದ ಜೋಡಿ ಕನಕಾನೂ ಬರ್ತದ ಅಂತ. . .

ಸುಧಾ:– ಹೆಣ್ಣ ಹಡದವ್ರನ್ನ ಅರೀತೀರಿ. ಅಲ್ಲಾ ನಮ್ಮಪ್ಪಂದೇನು ಪೆನ್ಶ್ಯನ್ ನೋಕರಿ ಅಲ್ಲ. ಮುಂದೆ ಮುಪ್ಪಿನ ಕಾಲಕ್ಕೆ ಇರ್ಲಿ ಅಂತ ಒಂದ ಉಡಲಿಲ್ಲ, ಒಂದ ತಿನಲಿಲ್ಲ. ಹೊಟ್ಟೆ ಬಟ್ಟೆ ಕಟ್ಟಿ ಮೂರ ಸಾವಿರ ರೂಪಾಯಿ ಕೂಡಿಸಿಟ್ಟಕೊಂಡಿದ್ದ. ನಿಮಗೆ ವರದಕ್ಷಿಣೆ, ಲಗ್ನದಖರ್ಚು, ನನಗೆ ಕೈಗೊಂದು ನಾಕ ಬಳೆ ಅಂತ ಅಂವಾ ೨೦ ವರ್ಷ ದುಡದು ಕೂಡ್ಸಿದ್ದು ನಾಕ ದಿನದಾಗ ಚಟ್ ಅಂದ್ಹೋತು. ಇಷ್ಟಾದ್ರೂ ನಿಮಗೆ ತೃಪ್ತಿ ಅನ್ನೂವಿಲ್ಲ. ಈಗ ಮತ್ತೆ ಬಂಗಾರದ ಚೇನು, ಅದು ಇದು ಅಂತ ೩೦೦–೪೦೦ ರೂಪಾಯಿಗೆ ಚಕ್ರ ಹಾಕಿದ್ರಿ. ನಮ್ಮಪ್ಪ ಏನು ಬದಕಬೇಕೋ

ಬ್ಯಾಡೊ? ಅಂವಗೂ ವಯಸ್ಸಾಗ್ತಾ ಬಂತು. ಎಂದೂ ಇಲ್ದೆ ಈ ಮುಪ್ಪಿನಾಗ ಸಾಲಾ ಮಾಡಿಕೊಂಡು . . . .

ವಸಂತ:– ಅಲ್ಲೆ, ಏನ ನಾ ಒಬ್ಬನ್ನೆ ಈ ಜಗತ್ತಿನಾಗ ಕೇಳೂ ಅಳಿಯ ಅನ್ನವ್ಹಾಂಗೆ ಮಾತಾಡ್ತಿಯಲ್ಲ? ಖರೇ ಅಂದ್ರೆ ಮಗಳ ಸುಖಕ್ಕಾಗಿ ಅಂತ . . . .

ಸುಧಾ:– ಮಾವ ಅಳಿಯಗೆ ಅಂವ ಕೇಳಿದ್ದು ಕೇಳಿದಾಗ ಕೊಡ ಬೇಕು ಅಂತೀರೇನು? ಆದರೆ ಮನಶಾ ಅನ್ನಾಂವಾ ಮುಂದಿನ ವಿಚಾರಮಾಡಿ ಕೆಲಸಾ ಮಾಡ್ಬೇಕು. ನಿಮಗೆ ನಾಳೆ ಒಂದ ನಾಲ್ಕು ಹೆಣ್ಮಕ್ಳು ಹುಟ್ಟಿದ್ರು, ನಿಮ್ಮ ಹಾಂಗೆ ನಿಮ್ಮ ನಾಲ್ಕೂ ಅಳಿಯಂದ್ರು ನಿಮ್ಮನ್ನ ಹರೀಲಿಕ್ಕೆ ಹತ್ತಿದ್ರು ಅಂದ್ರೆ ಏನಾದೀತು ಅಂತ ತುಸಾ ಲೆಕ್ಕಾ ಹಾಕ್ರಿ. ಆ ಲೆಕ್ಕದ ಅಂದಾಜು ಹತ್ತಿತು ಅಂದ್ರೆ . . . .

ವಸಂತ:– ಅಂದಾಜ ಅದ ಅಂತಲೇ ಈಗಿಂದ ತಯಾರಿ ನಡಸೇನಿ. ತಿಳೀತೇನು? ಏನೊ ನೀ ಒಬ್ಬ ದೊಡ್ಡ ಶ್ಯಾಣ್ಯಾಕಿ ಅಂತ ತಿಳದು ಮಾತಾಡ್ಲಿಕ್ಕೆ ಹತ್ತೀದಿ ತೀರ್ರು. ಈಗ ನಿಮ್ಮಪ್ಪ ಕೊಟ್ಟ ಬಂಗಾರದ ಚೇನು ನಾ ಏನ ನುಂಗತೇನೇನು? ಇರ್ತದ ಹಾಂಗೇ. ನಾಳೆ ನನಗೆ ಮಗಳು ಹುಟ್ಟಿ, ಅಳಿಯ ಚೇನು ಚೇನು ಅಂದಾ ಅಂದ್ರೆ ತುಸಾ ಒಪ್ಪಾ ಹಾಕ್ಸಿ ಇದನ್ನೆ ಅವನ ಕೈಗೆ ಕಟ್ಟಲಿಕ್ಕೆ ಬರ್ತದ. ಎಲ್ಲಿಟ್ಟೀದ್ದಿ ನಿನ್ನ ತಲಿ?

ಸುಧಾ:– ಇಲ್ಲೇ ಅದ. ಇದು ಒಬ್ಬ ಅಳಿಯನ ಮಾತಾತು. ಮತ್ತೆ, ಎರಡನೆಯವಂದು, ಮೂರನೆಯವಂದು ಏನು ಮಾಡ್ತೀರಿ? ನನ್ನ ಅಪ್ಪನ ಹತ್ರ ಕೇಳೂ ಬಾಬು ಇಲ್ಲೀಗೆ ಮುಗದ ಹೋತು. ಏನೊ ಮೊದಲನೆ ದೀಪಾವಳಿ ಅಂತ . . .

ವಸಂತ:– ಮನಿಯೊಳಗೆ ಯಾರೂ ಇಲ್ಲಾಂತ ಏನಾರ ಹೇಳ್ತೀಯೊ ಅಥವಾ ಹೀಂಗ ಮಾತಾಡಿ ನನ್ನ ಸಿಟ್ಟಿಗೆಬ್ಸಿ, ಪರತ ಕಳ್ಸಿ ಅಪ್ಪನ ರೊಕ್ಕ ಉಳಸೋಣ ಅಂತ ಮಾಡೀಯೊ? ನಾ ಬಿ. ಎ. ಕ್ಕ ಸ್ಟ್ಯಾಟಿಸ್ಟಿಕ್ಸ ತಗೊಂಡೇನಿ ಗೊತ್ತದೇನು? ಅದರಾಗ ಆನರ್ಸ ಆಗಾಂವ ಇದ್ದೀನಿ. ಏನೂ ವಿಚಾರಾ ಮಾಡದೆ, ಲೆಕ್ಕ ಹಾಕದೆ ನಿನ್ನ ಲಗ್ನಾ ಮಾಡಿಕೊಂಡೆ ಅಂತ ತಿಳದೀಯೇನು? ನಿನ್ನ ಮುತ್ತಜ್ಜಗ ನಿಮ್ಮ ಅಜ್ಜ ಒಬ್ಬನೇ ಮಗ, ನಿನ್ನ ಅಜ್ಜಗೆ ನಿನ್ನಪ್ಪ ಒಬ್ಬನೇ ಮಗ, ನಿನ್ನ ಅಪ್ಪಗೆ ನೀ ಒಬ್ಬಾಕೀನೇ ಮಗಳು. ನನ್ನ ಮುತ್ತಜ್ಜಗೂ ನನಜ್ಜ, ನನ್ನಜ್ಜಗೆ ನನ್ನಪ್ಪ, ನನ್ನಪ್ಪಗೆ ನಾನು ಹೀಂಗೆ ಇಬ್ಬರ ವಂಶದಾಗೂ ಏಕ ಸಂತಾನ ಪರಂಪರೆ ನಡದು ಬಂದದ. ನಮಗೂ ಅಷ್ಟೆ. ಹುಟ್ಟಿದ್ರೆ ಒಬ್ಬ ಮಗಳೊ, ಒಬ್ಬ ಮಗನೊ ಹುಟ್ತಾರ, ತಿಳೀತೇನು?

ಸುಧಾ:– ವ್ಹಾ! ವ್ಹಾ! ಭೇಶದ. ಆನರ್ಸ ಸಿಗಬಹುದು ನಿಮಗೆ.

ವಸಂತ:– ಯಾಕೆ, ನಗಚಾಟಿಕಿ ಮಾಡತೀಯೇನು?

ಸುಧಾ:– ಅಲ್ಲರೀ, ಇಂಥಾ ಲೆಕ್ಕ ಎಲ್ಲ್ಯಾರ ದಡಕ್ಕೆ ಹತ್ತೀತೇನು? ಇಲ್ಲೆ, ನಮ್ಮ ಓಣಿಯೊಳಗೆ ಇದ್ದಾರಲ್ಲ ಯಶೋದಾಬಾಯಿ! ಲಗ್ನ ಆಗಿ ೨೦ ವರ್ಷದ ತನಕಾನೂ ಅವರೀಗೆ ಮಕ್ಳೇ ಆಗಿದ್ದಿಲ್ಲ– ಮಕ್ಳಾಗೂದಿಲ್ಲ ಅಂತ ನಕ್ಕಿ ಆಗಿ ಹೋಗಿತ್ತು. ಅಂಥಾದ್ದರಾಗ ಲಗ್ನ ಆಗಿ ೨೧ ನೇ ವರ್ಷಕ್ಕೆ, ಅವರ ೪೦ ನೇ ವರ್ಷಕ್ಕೆ ಒಂದು ಕೂಸು ಹುಟ್ಟಿತು. ಮುಂದೆ ಆರು ವರ್ಷದೊಳಗೆ ಆರು ಮಕ್ಕಳು ಹುಟ್ಟಿದವು. ಏನಂತೀರಿ ಇದಕ್ಕೆ?

ವಸಂತ:– ಬಿಡು. ಅಪವಾದದ ಮಾತು ಏನ ಹೇಳ್ತಿ? ನೇಮದ ಮಾತು ಹೇಳು.

ಸುಧಾ:– ಹಾಂಗೇ ನಿಮ್ಮದ, ಒಂದ ಅಪವಾದ ಆಗಿ ನಾಕ ಹೆಣ್ಮಕ್ಕಳು ಹುಟ್ಟಿದ್ರು ಅಂದ್ರೆ!

ವಸಂತ:– ಆಗ ನೋಡ್ತೇನಂತೆ.

ಸುಧಾ:– ಹೋಗ್ಲಿ ಬಿಡ್ರಿ. ನಾನಾದರೂ ಮುಂದಿನ ಮಾತು ಈಗ ಯಾಕೆ ಅನ್ಲಿ? ಅಲ್ಲಾ, ಖರೇ ಅಂದ್ರೂ ನೀವು ಪತ್ರದಾಗ ಬರಿ. ತಿರಲ್ಲ-ಹಾಂಗ ನನ್ನ ಮ್ಯಾಲೆ–

ವಸಂತ:– ಪ್ರೀತಿ ಅದ. ಇಲ್ದಿದ್ರೆ ಹಾಂಗೆ ಬರೀತಿದ್ದೆನೇನು? ನಿನಗೆ ಎಷ್ಟ ಪತ್ರ ಹಾಕ್ತೇನಿ, ಪೋಸ್ಟಿಗೆ ಎಷ್ಟ ರೊಕ್ಕ ಬಡೀತೀನಿ ಅದರ ಮ್ಯಾಲಿಂದಾದ್ರೂ . . . .

ಸುಧಾ:– ಹೌದು. ನನಗೂ ನೀವು ನನ್ನಮ್ಯಾಲೆ ಪ್ರೀತಿ ಮಾಡ್ತೀರಿ ಅನ್ನೂದು ಗೊತ್ತಾಗ್ಯದ. ಅದಕೇ ಒಂದ ವರಾ ಕೇಳಿಕೋತೇನಿ ಕೊಡ್ತೀರೇನು?

ವಸಂತ:– ಆಗಬಹುದು ಪ್ರಿಯೆ. ಆದರೆ ದಶರಥ ಮಹಾರಾಜನನ್ನು ಸಂಕಟಕ್ಕೆ ಸಿಲುಕಿಸಿದ ಕೈಕೆಯಿಯಂತೆ ಸಂಕಟಕ್ಕೆ ಮಾತ್ರ ನನ್ನನು ಸಿಲುಕಿಸಬೇಡ, ಅರೇ ರಾಣಿ, ಕೋಕಿಲವಾಣಿ.

ಸುಧಾ:– ಹುಂ. ಅಂತೂ ವರಾ ಕೊಟ್ಟರೂ ಶರ್ತಿನ ಮ್ಯಾಲೆ ಕೊಡ್ತೀರಿ ಅನ್ರಿ. ಹಾಂಗಾದ್ರೆ ನನಗೇನು . . . .

ವಸಂತ:— ಛೆ! ಛೆ! ದೊಡ್ಡಾಟದ ನಮೂನೀಲೆ ಹೇಳಿದೆ ಅಂದ ಮ್ಯಾಲೆ ಚ್ಯಾಷ್ಟಿ ಅನ್ನೂದು ತಿಳೀಬಾರ್ದೇನು ?

ಸುಧಾ:— ಹೌದ? ಹಾಂಗಾದರೆ ಹೇಳಲ್ಯಾ? ಅಪ್ಪ ಈಗ ಭಾರಿ ತ್ರಾಸಿನಾಗ ಇದ್ದಾನ. ಅಂವಗ ಎಂಥಾದ್ದೊ ಒಂದ ನಮೂನಿ ಜಡ್ಡಾಗಿ ಇಂಜಕ್ಯನ್ನೂ ಟಾನಿಕ್ಕೂ ಹಣ್ಣು – ಹಂಪಲೂ ಅಂತ ಈ ಮೂರು ತಿಂಗಳದಾಗ ೪೦೦ ರೂಪಾಯಿ ಸಾಲಾ ಮಾಡಿಕೊಂಡಾನ. ಅಂಥಾದ್ದರಾಗ ಈಗ ಮತ್ತೆ ಸಾಲಾ ಮಾಡ್ಲಿಕ್ಕೆ ಹಚ್ಚಬ್ಯಾಡ್ರಿ. ಅಂವಾ ತುಸಾ ಸುಧಾರಿಸಿಕೊಂಡ ಮ್ಯಾಲೆ ನಾನೇ ಹೇಳಿ ನಿಮ್ಮ ಯಾದಿ ಪ್ರಕಾರ . . . .

ವಸಂತ:— ಆದರೆ ಈಗ ಸಾಮಾನು ಖರೀದಿ ಮಾಡ್ಲಿಕ್ಕೆ ಹೋಗ್ಯಾರ ಅಂದಿಯಲ್ಲ! ಮೊದಲೇ ತಿಳಿಸಿದ್ರೆ ಏನಾರ ವಿಚಾರ ಮಾಡಬಹುದಿತ್ತು.

ಸುಧಾ:— ಈಗ ಏನ ಘಾತ ಆಗಿಲ್ಲ. ಅಪ್ಪ ಎಲ್ಲಾ ಸಾಮಾನ ಉದ್ದರೀ ತರ್ತೇನಿ ಅಂದಾನ. ಮನಸೀಗೆ ಬರಲಿಲ್ಲ ಅಂದು ತಂದ ಸಾಮಾನು ತಿರುಗಿ ಕೊಟ್ರಾತು.

ವಸಂತ:— ಅದು ಹ್ಯಾಂಗ ಆಗ್ತದ? ಅಳಿಯಗೆ ದೀಪಾವಳಿ ಉಡುಗರೆ ಅಂತ ಹೇಳೇ ತಂದಿರ್ತಾರ. ತಿರಿಗಿ ಕೊಟ್ರೆ ಮರ್ಯಾದಿ ಉಳದೀತೇನು? ಮರ್ಯಾದಿಕಿಂತ ಸಾಲ ಹೆಚ್ಚಿಂದೇನು?

ಸುಧಾ:— ಅಂತೂ ಸಾಮಾನಿಲ್ದೆ ನಿಮ್ಮ ಸಮಾಧಾನ ಆಗೂದಿಲ್ಲ ಅನ್ರಿ. ನಾ ಕೇಳಿದ ವರಾ ಕೊಡೂದಿಲ್ಲ ಅನ್ರಿ.

ವಸಂತ: – ಮೊದಲೇ ಹೇಳಲಿಲ್ಲ ನಿನಗೆ, ಕೈಕಯಿ ಹಾಂಗ.

ಸುಧಾ :– ಹೌದು. ನಾ ಕೈಕಯಿ. ಆದರೆ ನೀವೇನು ದಶರಥ ಆಗ್ಲಿಲ್ಲ. ಆದರೆ ಖರೇ ಮಾತು ಬ್ಯಾರೆ ಅದ. ನಾ ಮೊದಲು ಅಂದದ್ದೆಲ್ಲ ಸುಳ್ಳು. ನೋಡೋಣ ನಮ್ಮ ದೇವರ ಗುಣ ಅಂತ ಹೇಳ್ದೆ. ಅಪ್ಪ ಸಾಮಾನ ತರ್ಲಿಕ್ಕೆ ಹೋಗೇಇಲ್ಲ. ಬಂದರ ಬರ್ತಾನ ಇಲ್ಲದಿದ್ರೆ ಇಲ್ಲ. ನಾ ಏನ ಒಂದ ಪೈ ಸಾಮಾನ ಕೊಡವ್ಹಾಂಗಿಲ್ಲ ಅಂತ ನಿರ್ಧಾರ ಮಾಡಿಬಿಟ್ಟಾನ. ನಿಮ್ಮ ಹಾಂಗ ಆ ರಾಧಾನ ಗಂಡನೂ ತನ್ನ ಮಾವಗ ಯಾದಿ ಕಳಿಸಿದ್ದನಂತ. ಅಪ್ಪ ರಾಧಾನ ಅಪ್ಪನ ಜೋಡಿ ಮಾತಾಡ್ಲಿಕ್ಕೆ ಹೋಗ್ಯಾನ. ಇಬ್ರೂ ಕೂಡಿ, ನೀವೇನಾದ್ರೂ ಹೆಂಡತೀ ಬಿಡ್ತೇವಿ ಅಂದ್ರೆ, ನೀವು ಬರೆದ ಪತ್ರ ಪೇಪರಿನಾಗ ಛಾಪಸಿ ಅಳಿಯಂದಿರ ಜಾತೀದೇ ಫಜೀತಿ ಮಾಡ್ಬೇಕು ಅಂತ ಮಾಡ್ಯಾರ. ಅದಕೇ ಮುಂದಿಂದೆಲ್ಲಾ ಹ್ಯಾಂಗ ಹ್ಯಾಂಗ ಮಾಡ್ಬೇಕು, ಅಳಿಯಂದರ ವಿರುದ್ಧ ಚಳವಳಿ ಹ್ಯಾಂಗ ಹೂಡಬೇಕು ಅಂತ.

ವಸಂತ :– ಮಾಡ್ಲಿ. ಅಳಿಯಂದಿರ ಕಡಿಂದ ತಮ್ಮ ಮಕ್ಳೀಗೆ ಸೋಡಚೀಟಿ ಬಂತೂ ಅಂದ್ರ ಈ ಮಾವಂದಿರ ಚಳವಳಿ ಥಣ್ಣಗ ಆಗ್ತದ. ನನಗೇನು ನೀ ಅಂಜಿಕಿ ಹಾಕೂದು ಬ್ಯಾಡ. ಮತ್ತ, ನಿನ್ನ ಅವ್ವ ಯಾವ ಚಳವಳಿ ಹೂಡ್ಲಿಕ್ಕೆ ಹೋಗ್ಯಾಳ.

ಸುಧಾ :– ಆಕಿ ಏನು ಚಳವಳಿ ಹೂಡ್ಲಿಕ್ಕೆ ಹೋಗಿಲ್ಲ. ಜಹಾಂಗೀರ ಮಾಡೂದು ಹ್ಯಾಂಗ ಅಂತ ಕೇಳಿಕೊಂಡು ಬರ್ಲಿಕ್ಕೆ ಹೋಗ್ಯಾಳು.

ವಸಂತ:— ಹುಂ. ಛಲೋದೆ ಆತನ್ನು ಅದದ್ದು. ಮುಂದೇನು ಮಾಡ್ಬೇಕು ಅನ್ನೂದು ನಿಕ್ಕಿ ಆದ್ಹಾಂಗ ಆತು. ನಾ ಹೊಂಟೆ. ಹೂಡನ್ನು ನಿಮ್ಮ ಅಪ್ಪಗ ಚಳವಳೀನ. ಛಾಪಸನ್ನು ಪೇಪರಿನಾಗ. ಮುಂದೆ ಅನುಭವಸೂ ಪಾಳಿ ಬಂದಾಗ - -

ಸುಧಾ:— ನಾ ಗಟ್ಟಿ ಇದ್ದೀನಿ. ನಾನೇ ಹಿಂಗ ಮಾಡೂ ಅಂತ ಹೇಳೇನಿ. ಅಲ್ರೀ, ಎಲ್ಲೀವರೀಗೆ ಹೆಂಗಸರು ಗಂಡಸರ ಗುಲಾಮರಾಗಿರಬೇಕು? ಎಲ್ಲೀವರೆಗೆ ಅಳಿಯಂದಿರು ಮಾವಂದಿರ ಕತ್ತು ಹಿಚಕಬೇಕು? ಏನಾರ ಅದನೊ ಇಲ್ಲೊ ಅದಕ್ಕೆ? ನನ್ನದೇನಾರ ಆಗ್ಲಿ, ಸಮಾಜದ ಹುಡಗಿಯರ ಕಲ್ಯಾಣಾದ್ರೂ ಆಗ್ಲಿ ಅಂತ.

ವಸಂತ:— ಭೇಶ ಮಾಡ್ದಿ. ಮಾಡು. ಮುಂದಾಳಾಗು. ಜೈ ಅನ್ನಿಸ್ಕೊ. ಆದರೆ ಮುಗೀತು ಇಲ್ಲಿಗೆ ನನ್ನ ನಿನ್ನ ಸಂಸಾರಾ ಅನ್ನುದನ್ನ ಸೆರಗೀಗೆ ಗಂಟ ಹಾಕ್ಕೊ.

ಸುಧಾ:— ಅಂದ್ರೆ ಒಂದಿಷ್ಟು ರೊಕ್ಕದ ಕಾಲದಾಗ, ಚಿನ್ನ ಅಂತ ಕರದ ಹೆಂಡತೀನ.

ವಸಂತ:— ಚಿನ್ನ ಅಂತ ತಿಳಕೊಂಡಿದ್ದು ಕಬ್ಬಿಣ ಅಂತ ಗೊತ್ತಾದ ಮ್ಯಾಲೆ ಉಳೀತೇನು? ಈ ಜಗತ್ತೆ ರೊಕ್ಕದ ಮ್ಯಾಲೆ ನಿಂತದ. ನಾ ಏನ ಜಗತ್ತಿನ ಹೊರಗಿನಾಂವ ಅಲ್ಲ. ತಿಳೀತೇನು? ಒಳ್ಳೇದು. ಬರ್ತೇನಿ. ಬಂದ್ರು, ಹೋದ್ರು, ಚಳವಳಿ ಮಾಡ್ಲಿಕ್ಕೆ ಹೇಳಿ ಹೋಗ್ಯಾರ ಅಂತ ನಿಮ್ಮಪ್ಪಗೆ ಹೇಳ್ಬಿಡು.

ಸುಧಾ :– ಅಲ್ರೀ, ತುಸಾ ಅವರು ಬರೂತನಕಾ . . .

ವಸಂತ :– ಏನಗತ್ಯ ಇಲ್ಲ. ನಾ ಹೊರಟೆ.

ಶಾರದಾ :– (ಪ್ರವೇಶಿಸಿ) ಯಾರು? ವಸಂತ ಏನು? ಯಾವಾಗ ಬಂದಿಯುಪಾ? ನೀ ಇಂದ ರಾತ್ರಿ ಹನ್ನೊಂದರ ಗಾಡೀಗಾಗಲಿ, ಹತ್ತರ ಮೋಟರಿಗಾಗ್ಲಿ ಬರ್ತಿ ಅಂತ ಮಾಡಿದ್ವಿ. ಛಲೋ ಆತು ಬಂದದ್ದು. ಇದೇ ಈಗ ಬಂದಿಯೇನು? ಕೈಯಾಗ ಚೀಲಾ ಹಿಡಕೊಂಡೇ ನಿಂತೀದಿ. ಅಲ್ಲೆ, ಸುಧಾ, ಬಂದವಗ ಕೂಡು ಅನ್ನಬಾರದ? ಯಾವಾಗ ಸಂಸಾರಾ ಮಾಡ್ಲಿಕ್ಕೆ ತಿಳೀತದೆ ನಿನಗೆ?

ಸುಧಾ :– ಅವರು ಬಂದು ಒಂದ ಹತ್ತಿಪ್ಪತ್ತು ಮಿನೀಟಾತು. ತಿರಗಿ ಹೋಗ್ತೇವಿ ಅಂತ ಹೊಂಟು ನಿಂತಾರ.

ಶಾರದಾ :– ಯಾಕೆ?

ಸುಧಾ :– ಅಂದ್ರೆ ....

ವಸಂತ :– ಅತ್ತೆ, ಎಲ್ಲಾ ಗೊತ್ತಿದ್ದು ಯಾಕೆ ಸೋಗು ಮಾಡ್ತಿರಿ? ನಾ ಪದ್ಧತಿ ಪ್ರಕಾರ ದೀಪಾವಳಿ ಉಡುಗರೆ ಕೇಳ್ದೆ ಅಂತ ನೀವು ಗಂಡಾ – ಹೆಂಡತಿ – ಮಗಳು ಕೂಡಿಕೊಂಡು ಏನ ಮಸಲತ್ತು ಮಾಡೀರಿ ಅನ್ನೂದನ್ನ ಈಕಿ ಈಗ ನನಗೆ ಹೇಳಿದ್ಳು.

ಶಾರದಾ :– ಮಸಲತ್ತು! ಸುಧಾ ಹೇಳಿದ್ಳು! ಅಂತೀಯರ ಏನಪಾ?

ವಸಂತ :– ವ್ಹಾ! ನಾಟಕದಾಗ ಪಾರ್ಟಗೀರ್ಟ ಮಾಡೀರೇನ. ಎಂದಾದ್ರೂ? ಮಾಡಿಲ್ಲಾಂದ್ರೆ ಮಾಡ್ರಿ. ಪ್ರಖ್ಯಾತ ನಟಿ ಅಂತ ಅನ್ನಸ್ಕೊ ಬಹುದು. ನಿಮ್ಮ ರಾಯ್ರು ಅಂದ್ರೆ ನನ್ನ ಮಾವ, ಮತ್ತೆ ಯಾವಾಕೀನೊ ರಾಧಾ ಅಂತ ಆಕೀ ಅಪ್ಪ ಕೂಡಿಕೊಂಡು ಅಳಿಯಂದಿರ ವಿರುದ್ಧ ಚಳವಳಿ ಹೂಡ್ತಾರಂತ. ಪೇಪರಿನಾಗ

ಭಾಸಸ್ತಾರಂತ. ನನಗೆ ಒಂದ ಪೈ ಸಾಮಾನ ಸುದ್ಧಾ ಕೊಡೂದಿಲ್ಲ ಅಂತ ಪ್ರತಿಜ್ಞಾ ಮಾಡ್ಯಾರಂತ.

ಶಾರದಾ:– ಅಂ ?

ವಸಂತ:– ಹೌದು. ನಿಮ್ಮ ಮಗಳೇ ಹೇಳಿದ್ಲು. ನನ್ನ ಹೆದರಸಿ, "ಸಾಮಾನಿಲ್ಲಿದ್ರೆ ಇಲ್ಲ, ಹಬ್ಬ ಮುಗಿಸಿಕೊಂಡು ಹೋಗ್ರಿ, ಚಳವಳಿ ಬಾಯಾಗ ಬಿದ್ದು ಫಜೀತಿ ಆಗಬ್ಯಾಡ್ರಿ" ಅಂತ ಉಪದೇಶ ಬ್ಯಾರೆ ಮಾಡಿದಳು. ಆಗ್ಲಿ ಮಾಡಂತ ಹೇಳ್ರಿ, ನಿಮ್ಮ ಯಜಮಾನ್ರಿಗೆ ಚಳವಳೀನ. ಭಾಪಸಂತನ್ರಿ. ಆ ಮ್ಯಾಲೆ ಮಗಳನ್ನ ಮನಿಯೊಳಗಿಟ್ಟಕೊಂಡು ಹೊಟ್ಟೆ ಹೊರಿರಿ ಅನ್ರಿ. ನಾ ಹೊಂಟಿ ಇಂಥಾದ್ದಕ್ಕೆಲ್ಲ ಹೆದರಾಂವ ಅಲ್ಲ, ತಿಳೀತೇನು ?

ಶಾರದಾ :– ಕೂಡೋ ವಸಂತಾ. ಸುಧಾ, ಏನ ತಲೀಗಿಲಿ ಕೆಟ್ಟದೇನು ನಿಂದು ? ವಸಂತಾ, ನೀ ಶಾಣ್ಯಾ ಅಂತ ತಿಳಿದಿದ್ದೆ. ಅಲ್ಲೊ, ಎಲ್ಯಾರ ಆಗ ಹೋಗು ಮಾತೇನು ಇದು? ಇಂಥಾ ಚಳವಳಿ ನಡದೀತೇನು ? ಅಳಿಯಂದರು ಕೇಳೂದು, ಮಾವಂದಿರು ಕೊಡೂದು ಇದ್ದೇಅದ. ನಿನಗೆ ಕೊಡೂ ಸಾಮಾನ ತರ್ಲಿಕ್ಕೇ ಅವ್ರು ಪ್ಯಾಟಿಗೆ ಹೋಗ್ಯಾರ. ಅಲ್ಲಿಂದಲ್ಲೆ ನಿನಗೆ ಫೋನ ಮಾಡಿ . . . .

ವಸಂತ :– ಅಂದ್ರೆ ? ಮಿನೀಟಿಗೊಂದು ಮಾತಂದ್ರೆ ನಾ ಏನಂತ ನಂಬಲಿ ? ಮೊದಲು ಈಕೀನೂ ಹಾಂಗೇ ಅಂದ್ಳು. "ಆ ಮ್ಯಾಲೆ ಅಪ್ಪಗ ಜಡ್ಡಾಗೇದ, ಔಷಧಿಪಥ್ಯ ಅಂತ ಸಾಲ ಆಗ್ಯದ, ಈಗ ಮತ್ತೆ ಸಾಲಾ ಮಾಡೇ ಸಾಮಾನು ತರ್ಬೇಕು, ಅವನ ಮ್ಯಾಲೆ ದಯಾ ತೋರಿಸಿ ಸಾಮಾನ ಬ್ಯಾಡ ಅಂತ ಅನ್ರಿ" ಅಂತಂದ್ಳು. ಮಾತುಮಿಕ್ಕಿ ಹೋಗ್ಯದ. ಮೊದಲೆ ತಿಳಿಸಿದ್ರ ಏನಾರ ಮಾಡಬಹುದಿತ್ತು. ಅಂತ ನಾ ಅಂದ್ರೆ, 'ಅಪ್ಪ ನಿಮಗೆ ಏನೇನೂ ಕೊಡೂದಿಲ್ಲ, ನಿಮ್ಮ ವಿರುದ್ಧ ಚಳವಳಿ ಮಾಡ್ತಾನ' ಅಂತಂದ್ಲು. ಈಗ ನೀವು ಹಾಂಗ ಅಂತೀರಿ. ಇದರಾಗ ಯಾವದು ಖರೇ ಅಂತ. . .

ಶಾರದಾ :– ನಾ ಅಂದದ್ದೇ ಖರೆ, (ನಕ್ಕು) ಅಂತೂ ಛಲೋ ನಾಟಕ ಮಾಡಿದಳು ಅನ್ನಬಾರ್ದ ನಮ್ಮ ಸುಧಾ ? "ಅವ್ವಾ ಈ ಸಲ ಅವ್ರು ಬರ್ಲಿ. ಅವರ ಫಜೀತಿ ಮಾಡ್ತೇನಿ" ಅಂತ ಒಂದೇ ಸವನೆ ಅಂತಿದ್ಲು. ನಾ ಅಂದೆ, ಬ್ಯಾಡ ನಮ್ಮವ್ವಾ. ಗಂಡಸರ ಮೂಗಿನ ತುದೀ ಮ್ಯಾಲ ಸಿಟ್ಟಿರ್ತದ. ಒಂದ ಮಾಡ್ಲಿಕ್ಕೆ ಹೋಗಿ ಒಂದಾದೀತು, ಅಂತ. ಕೇಳ್ಬೇಕಲ್ಲ ಖೋಡಿ. ಮನಿಯೊಳಗೆ ಯಾರೂ ಇಲ್ಲದ್ದ ಕಂಡು ಅಂದ ಹಾಂಗೆ ಮಾಡೇಬಿಟ್ಲು. ಹುಚ್ಚ ಹುಡಗಿ ತಂದು. ಈಗ ನಾ ಬರದಿದ್ರೆ ನೀ ಹೋಗಿ ಬಿಡ್ತಿದ್ದಿ. ಮತ್ತೆ ನಿನ್ನ ಕರಕೋಂಬರ್ಲಿಕ್ಕೆ ನಾವು ಒದ್ದಾಡಬೇಕಾಗ್ತಿತ್ತು. ಅವರಿಗೆ ಜಡ್ಡೂ ಆಗಿಲ್ಲ, ಸಾಲಾನೂ ಆಗಿಲ್ಲ. ಇಡೂ ಕೈಚೀಲಾನ ಕಳೀ ಕೋಟು. ಅರಾಮ ಕೂತಕೊ. ಇಷ್ಟರಾಗ ಅವರು ಸಾಮಾನು ತಗೊಂಡು ಬರ್ತಾರ. ಯಾವದಾದ್ರೂ ಮನಸೀಗೆ ಬರದಿದ್ರೆ, ಮತ್ತೆ ಅವರ ಜೋಡಿ ಹೋಗಿ ಬದಲಾಯ್ಸಿಕೊಂಡು ಬಂದೀ ಅಂತ, ಕೂಡು. ಮತ್ತೆ ಇಲ್ಲಿ ಕಪ್ಪು ಬಸಿ ಏನೂ ಕಾಣವಲ್ದು. ಬಂದವಗ ಒಂದಿಷ್ಟು ಛಾನೂ ಮಾಡಿ ಕೊಟ್ಟಿಲ್ಲ ಹೌದಲ್ಲೊ? ಸಾಕಾತರವಾ ಈಗಿನ ಕಾಲದ ಹುಡಗೀರ ಕಾಲಾಗ. ಹ್ಯಾಂಗ ಸಂಸಾರಾ ಮಾಡತಾವೊ, ಹ್ಯಾಂಗ ಬದಕತಾವೊ ? ದೇವ್ರೆ ಪಾರ ಮಾಡ್ಬೇಕು. ಕೂಡು. ನಾ ಛಾ ಮಾಡಿಕೊಂಡು ಬರ್ತೇನಿ.

ಸುಧಾ :– ಕೂಡ್ರಿ.

ವಸಂತ :– ನೀ ಏನ ಹೇಳೂದು ಬ್ಯಾಡಂದೆ, ನನ್ನ ಮಂಗ್ಯಾನ ಹಾಂಗ ಮಾಡಿ.

ಸುಧಾ :– ಹಂ ! ಅವ್ವಗೆ ಕೇಳೀತು. ಹೆಂಡತೀ ಮುಂದೆ ಕುಣೀದಿದ್ರೆ ಗಂಡ ಬದಕೂ ಕಾಲ ಆಗಿ ಹೋತು. ಇದು ಕಲಿಯುಗ. ಹೆಂಡತೀನ ತಲೀಮ್ಯಾಲೆ ಕೂಡ್ರಿಸಿಕೊಂಬೂ ಕಾಲ.

ವಸಂತ :– ಹುಂ. ನಮ್ಮ ಸಂಸಾರ ಪ್ರಾರಂಭ ಆಗ್ಲಿ. ಆಗ ....

ಸುಧಾ :– ಹೌದು. ನೋಡೋಣಂತ ಆಗ. ರಥದ ಸಾರಥಿ ಯಾರ ಆಗ್ತಾರ ಅನ್ನೂದನ್ನ ! ಬೇಕಾದರೆ ಸಂಸಾರದಾಗ ಗಂಡ ಹೆಚ್ಚೊ ಹೆಂಡ್ತಿ ಹೆಚ್ಚೊ ಅನ್ನೂದರ ಸ್ಟ್ಯಾಟಿಸ್ಟಿಕ್ಸ ಅಂತೀರಲ್ಲ, ಅದನ್ನ ತಗದು ಪಿ. ಎಚ್. ಡಿ. ಆಗ್ರಿ. (ನಗುವಳು).

—o—

ಐವತ್ತು ವರ್ಷಗಳ ಮೇಲಿನ ರಾಸಾಯನಿಕ ಜಗತ್ತು

★

ರಸಾಯನ ಶಾಸ್ತ್ರ ೧೭ನೇ ಶತಮಾನದಲ್ಲಿಯಕ್ಕಿಂತ ೧೮ನೇ ಶತಮಾನದಲ್ಲಿ ಬದಲಾವಣೆ ಹೊಂದಿ ಶುದ್ಧ ವಿಜ್ಞಾನದ ಅಂಗವಾಯಿತು; ಮೇಣಬತ್ತಿ ಉರಿಯುವದೇತಕ್ಕೆ ಎಂಬ ಬಗ್ಗೆ ಸರಿಯಾದ ಕಲ್ಪನೆ ಇರದ ಕಾಲವದು. ಆದರೆ ೧೯ನೇ ಶತಮಾನದಲ್ಲಿ ಅದ್ಭುತ ಪ್ರಗತಿ ಸಾಧಿಸಿತು. ಇಂದಂತೂ ಅದು ವಿಜ್ಞಾನದ ಪ್ರಮುಖ ಅಂಗವಾಗಿರುವದು. ಇನ್ನು ೫೦ ವರ್ಷಗಳ ನಂತರ ರಾಸಾಯನಿಕ ಜಗತ್ತು ಹೇಗಿರಬಹುದೆಂಬುದಕ್ಕೆ ಲೇಖಕರು ಇಲ್ಲಿ ಸೂಚ್ಯವಾದ ಉತ್ತರ ಕೊಟ್ಟಿರುವರು.

★

ಲೇಖಕರು : ಪ್ರೊ. ಜೆ. ಎ. ಅಪ್ಪಪುತ್ರೆ, ಎಂ. ಎಸ್‌ಸಿ., ಜನತಾ ಕಾಲೇಜ, ಧಾರವಾಡ.

ಕಳೆದ ಎರಡು ಮೂರು ಶತಕಗಳಿಂದ ರಸಾಯನ ಶಾಸ್ತ್ರದ ಪ್ರಗತಿ ಅವ್ಯಾಹತವಾಗಿ ನಡೆದಿದೆ. ಈ ಮಾತು ವಿಜ್ಞಾನದ ವಿವಿಧಾಂಗಗಳಿಗೂ ಅನ್ವಯಿಸುತ್ತದೆ. ರಸಾಯನಶಾಸ್ತ್ರದ ಪ್ರಗತಿಯಿಂದ ಇಂದು ಮಾನವ ಜನಾಂಗದ ಮೇಲೆ ತುಂಬ ಪರಿಣಾಮವಾಗಿರುತ್ತದೆ. ಕೆಲವು ಒಳ್ಳೆಯ ಪರಿಣಾಮಗಳಾಗಿರಬಹುದು, ಕೆಲ ಅನಿಷ್ಟ ಪರಿಣಾಮಗಳೂ ಆಗಿರಬಹುದು. ಆದರೆ ಒಂದು ಮಾತನ್ನು ಮಾತ್ರ ಎಲ್ಲರೂ ನಿರ್ವಿವಾದವಾಗಿ ಒಪ್ಪಬಹುದು. ಜನಜೀವನವನ್ನು ನೇರವಾಗಿ ಮಾರ್ಪಾಡುಗೊಳಿಸುವಲ್ಲಿ ರಸಾಯನ ಶಾಸ್ತ್ರದಷ್ಟು ಪ್ರಭಾವಿಯಾದ ಶಾಸ್ತ್ರವು ಬೇರೊಂದಿಲ್ಲ. ಇನ್ನು ಐವತ್ತು ವರುಷಗಳ ಮೇಲೆ ರಸಾಯನ ಶಾಸ್ತ್ರದ ಪ್ರಗತಿ ಎಷ್ಟಾದೀತು ? ಸನ್ ೨೦೦೬ ರಲ್ಲಿ ರಸಾಯನ ಶಾಸ್ತ್ರದ ಸ್ಥಿತಿಗತಿ ಹೇಗಾಗಬಹುದು ? ಆ ಪ್ರಗತಿಗೆ ಮಾರ್ಪಾಡು ಹೊಂದಿ ಜನಜೀವನವು ಯಾವ ಸ್ವರೂಪಕ್ಕಿಳಿದೀತು ? ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದ ಈ ಅಥವಾ ಇಂತಹ ಪ್ರಶ್ನೆಗಳನ್ನು ಕೇಳುವದೇ ಧಾರ್ಷ್ಟ್ಯದ ಮಾತು. ಈ ಪ್ರಶ್ನೆಗಳಿಗೆ ಉತ್ತರ ಹೇಳಬಲ್ಲೆನೆನ್ನುವದಂತೂ ತುಂಬ ಎದೆಗಾರಿಕೆಯ ಮಾತಾದೀತು. ಆದರೆ ಉತ್ತರ ಸರಿಯಾಗಿಯೇ ಇರಬೇಕೆಂಬ ನಿಯಮವೇನೂ ಇಲ್ಲವಲ್ಲ. ಭವಿಷ್ಯತ್ಕಾಲದ ಗರ್ಭದಲ್ಲಡಗಿರುವ ಯಾವ ಸಂಗತಿಯನ್ನೂ ನಿಷ್ಕೃಷ್ಟವಾಗಿ ಹೇಳೇನೆಂಬುವ ಧೈರ್ಯ ಯಾರಿಗಿದೆ ? ಪರಿಸ್ಥಿತಿ ಹೀಗಿರುವಾಗ ' ಮುಂದೆ ಹೀಗಾಗಬಹುದು ' ಎಂದು ಊಹಿಸುವದರಲ್ಲಿ ಏನೂ ತಪ್ಪಾಗಲಿಕ್ಕಿಲ್ಲ. ಕಲ್ಪನಾ ಸಾಮ್ರಾಜ್ಯಗಳನ್ನು ರಚಿಸಿ ಸಂತೋಷಪಡುವ (ಅಥವಾ ದುಃಖಪಡುವ) ಹಕ್ಕು ' ಕವಿ ' ಗಳಿಗಷ್ಟೇ ಮರ್ಯಾದಿತವಾಗಿರಬೇಕಿಲ್ಲ. ವಿಜ್ಞಾನಿಯೂ ಕನಸು ಕಾಣಬಲ್ಲ-ಭವಿಷ್ಯತ್ತನ್ನು ಕುರಿತು ಯೋಚಿಸಲು ಸಮರ್ಥನಾಗಬಲ್ಲ - ಭವಿಷ್ಯತ್ತನ್ನು ರೂಪಿಸಬಲ್ಲ. ಆದರೆ ವೈಜ್ಞಾನಿಕ - ಪ್ರಾಯೋಗಿಕ ಪದ್ಧತಿಯ ಚೌಕಟ್ಟಿನಲ್ಲಿ ಆವಿಷ್ಕಾರ ಹೊಂದಿದ ವಿಜ್ಞಾನಿಯ ಮನಸ್ಸು ಕನಸು ಕಾಣುವದರಲ್ಲಿಯೂ ತುಂಬ ಮರ್ಯಾದಿತವಾಗಿರಬೇಕಾಗುತ್ತದೆ. ಸನ್ ೨೦೦೬ ರಲ್ಲಿಯ ರಸಾಯನ ಶಾಸ್ತ್ರದ ಪ್ರಗತಿಯನ್ನು ಕಲ್ಪಿಸಲೆತ್ನಿಸುವ ರಸಾಯನ ಶಾಸ್ತ್ರಜ್ಞ ೧೯೫೬ ನೆಯ ಇಸ್ವಿಯಲ್ಲಿ ರಸಾಯನ ಶಾಸ್ತ್ರದ ಪ್ರಗತಿ ಯಾವ ಮೆಟ್ಟಲಿನಲ್ಲಿದೆ, ಅದರ ಮುಖ್ಯವಾದ ಸಮಸ್ಯೆಗಳಾವವು ಎಂಬ ವಿಚಾರವನ್ನು ಪೂರ್ಣವಾಗಿ ಅರಿತವನಾಗಿರಬೇಕು. ಅದನ್ನು ಚನ್ನಾಗಿ ಅರಿತಿದ್ದರೆ ನಂತರ ಆತ ಇನ್ನೂರು ವರುಷ ಹಿಂದೆ ತನ್ನ ದೃಷ್ಟಿ ತಿರುಗಿಸಬೇಕು. ೧೭ ನೆಯ ಶತಮಾನದಲ್ಲಿ ರಸಾಯನ ಶಾಸ್ತ್ರ ಯಾವ ಸ್ಥಿತಿಯಲ್ಲಿತ್ತು. ಅಲ್ಲಿಂದ ಇಲ್ಲಿಯವರೆಗೆ ಇನ್ನೂರು ವರುಷ ಅದರ ಪ್ರಗತಿಪಥ ಹೇಗೆ ಸಾಗುತ್ತ ಬಂದಿದೆ ಎಂಬ ವಿಷಯ ಕೂಲಂಕಷವಾಗಿ ತಿಳಿದಿರಬೇಕು. ಇನ್ನೂರು ವರುಷದ ಪ್ರಗತಿ ಪಥದ ಅಭ್ಯಾಸ ಬಲದಿಂದ -ಅದಕ್ಕೆ ತನ್ನ ಕಲ್ಪನಾಶಕ್ತಿಯನ್ನು ಸೇರಿಸಿ - ಆತ ಮುಂದಿನ ಐವತ್ತು ವರುಷದ ಕನಸಿನ ಚಿತ್ರವನ್ನು ರೂಪಿಸಲು ಯತ್ನಿಸಬಹುದು. ನಾನಿನ್ನೊಂದು ಸಲ ಹೇಳುವೆ ' ಯತ್ನಿಸಬಹುದು ' ಅಷ್ಟೆ.

ಅಧಿಕ ಲೋಹದ ಬದಲಾವಣೆ

ಇಂದಿನ ಜಗತ್ತಿನಲ್ಲಿ 'ಬದಲಾವಣೆ'ಯ ವೇಗ ಅತ್ಯಧಿಕವಾಗಿದೆ. ದಿನದಿನವೂ ದ್ವಿಗುಣಿತವಾಗುತ್ತ ಹೋಗುತ್ತಿದೆ. ಈ ಮಾತು ಮಾನವ ಜೀವನಕ್ಕೆ ಸರ್ವತೋಮುಖವಾಗಿ ಅನ್ವಯಿಸುತ್ತದೆ. ವಿಜ್ಞಾನವೂ ಇದಕ್ಕೆ ಹೊರತಾಗಿಲ್ಲ. ರಸಾಯನ ಶಾಸ್ತ್ರವೂ ಹೊರತಾಗಲಾರದು. ಇಂದು ಇಷ್ಟು ಪ್ರಾಧಾನ್ಯವಾಗಿರುವ "ರಸಾಯನಶಾಸ್ತ್ರ" ಎರಡನೂರು ವರುಷಗಳ ಹಿಂದೆ ಇನ್ನೂ ಸರಿಯಾಗಿ ಜನ್ಮಕೂಡ ತಾಳಿದ್ದಿಲ್ಲ ಎಂದು ಹೇಳಿದರೆ ಆಶ್ಚರ್ಯವಾಗಬಹುದು. ನಮ್ಮ ಸುತ್ತಲೂ ಕಾಣುವ ಅನೇಕ ಪದಾರ್ಥಗಳ ಸ್ವರೂಪಜ್ಞಾನವನ್ನು ಯಥಾರ್ಥವಾಗಿ ಮಾಡಿಕೊಳ್ಳುವದೇ ರಸಾಯನಶಾಸ್ತ್ರದ ಪ್ರಾಮುಖ್ಯವಾದ ಗುರಿ. ವಿಜ್ಞಾನದ ಇತರ ವಿಭಾಗಗಳಂತೆ ಇದಕ್ಕೂ ಪ್ರಾಯೋಗಿಕ ಪರೀಕ್ಷೆಯೇ ಆಧಾರ. ಪ್ರಾಯೋಗಿಕಪರೀಕ್ಷೆ ಹಾಗೂ ಪದಾರ್ಥ ಸ್ವರೂಪದ ಬಗ್ಗೆ ಸೈದ್ಧಾಂತಿಕ ಉಪಕಲ್ಪನೆಗಳನ್ನೊಳಗೊಂಡು ರಸಾಯನಶಾಸ್ತ್ರವು ಶುದ್ಧವಿಜ್ಞಾನದ ಒಂದು ಅಂಗವಾಗಿ ಪರಿಣಮಿಸಿದ್ದು ೧೮ ಶತಮಾನದಲ್ಲಿ ಮಾತ್ರ. 'ಮೇಣಬತ್ತಿ ಉರಿಯುವದೇತಕ್ಕೆ'ಎಂಬ ಬಗ್ಗೆಯೂ ಸರಿಯಾದ ಕಲ್ಪನೆ ಇರದ ಕಾಲವದು. ಆದರೆ ಒಂದೇ ಒಂದು ಶತಮಾನದಲ್ಲಿ ಅದೆಂತಹ ಮಹಾ ಪ್ರಗತಿ ಸಾಧಿಸಿತು. ೧೯ ನೆಯ ಶತಮಾನದ ಮಧ್ಯ ಭಾಗದ ಸುಮಾರಕ್ಕೆ ಸಸ್ಯ ಹಾಗೂ ಪ್ರಾಣಿವರ್ಗಗಳಿಂದ ದೊರೆಯಬಹುದಾದ ವಸ್ತುಗಳನ್ನುಳಿದು ಉಳಿದ ಯಾವತ್ತು ಖನಿಜ ಇತ್ಯಾದಿ ವಸ್ತುಗಳು ರಸಾಯನ ಶಾಸ್ತ್ರಜ್ಞನ ಪ್ರಯೋಗ ಶಾಲೆಯಲ್ಲಿ ಪ್ರಥಕ್ಕರಣ ಹೊಂದಿ ಆತನಿಗೆ ಬೇಕಾದ ರೀತಿಯಲ್ಲಿ ಪುನರುತ್ಪತ್ತಿ ಹೊಂದ ತೊಡಗಿದ್ದವು. ದೊಡ್ಡ ದೊಡ್ಡ ರಾಸಾಯನಿಕ ಉದ್ದಿಮೆಗಳು ಭರದಿಂದ ಬೆಳೆಯ ತೊಡಗಿದ್ದವು. ಮಾನವ ಜನಾಂಗದ ನಾಗರಿಕತೆಯ ಇತಿಹಾಸದಲ್ಲಿ ಅತ್ಯಂತ ಕ್ರಾಂತಿಕಾರಿ ಬದಲಾವಣೆಯನ್ನೆಸಗಿದ ' ಔ ದ್ಯೋ ಗಿ ಕ ಕ್ರಾಂತಿ'ಯ ತಳಹದಿಗೆ ರಾಸಾಯನಿಕ ಉದ್ದಿಮೆಗಳೂ ಬಹುಮಟ್ಟಿಗೆ ಕಾರಣವೆಂದು ಹೇಳಲಡ್ಡಿ ಇಲ್ಲ. ಹಳ್ಳಿಗಳು ಹಾಗೂ ಚಿಕ್ಕಪುಟ್ಟ ಕೈಗಾರಿಕೆಗಳ ನಾಶ ಮತ್ತು ಪಟ್ಟಣಗಳು ಹಾಗೂ ದೊಡ್ಡ ಉದ್ದಿಮೆಗಳ ಅಭಿವೃದ್ಧಿ ಇದು ಔದ್ಯೋಗಿಕ ಕ್ರಾಂತಿಯಿಂದ ಬಂದೆಸಗಿದ ಅವಸ್ಥೆ. ಅರ್ವಾಚೀನ ವೈಜ್ಞಾನಿಕ ಸಂಶೋಧನೆಯ ತವರುಮನೆಯಾದ ಪಶ್ಚಿಮ ಯುರೋಪಖಂಡದಲ್ಲಿ ಈ ಕ್ರಾಂತಿ ಮೊದಲು ತನ್ನ ವಿಜಯ ಪತಾಕೆ ಹಾರಿಸಿದರೂ, ಈಗ ಅದು ಪ್ರಪಂಚದ ಉಳಿದೆಲ್ಲ ಭಾಗಗಳಲ್ಲಿಯೂ ಭರದಿಂದ ಹರಡುತ್ತಿದೆ. " ಹೊಸ ಸಮಾಜವಾದೀ ಸ್ವರೂಪದ ಸಮಾಜ ರಚನೆ"ಯತ್ತ ಮಾನವ ಜನಾಂಗ ಧಾವಿಸುತ್ತಿದೆ. ಇನ್ನೂರು ವರುಷಗಳಿಂದ ಇಲ್ಲಿಯವರೆಗೆ ರಸಾಯನಶಾಸ್ತ್ರವು ಸಾಧಿಸಿದ ಪ್ರಗತಿಗಿಂತ ಹೆಚ್ಚು ಪ್ರಗತಿಯನ್ನು ಅದು ಮುಂದಿನ ಹತ್ತೇ ವರುಷಗಳಲ್ಲಿ ಸಾಧಿಸಬಹುದು. ಯಾರಿಗೆ ಗೊತ್ತು ? ಬದಲಾವಣೆಯ ಗತಿ ಅಷ್ಟು ಅಧಿಕವಾಗಿದೆ. ದಿನಗಳೆದಂತೆ ಇನ್ನೂ ಹೆಚ್ಚು ಆಗಲಿದೆ.

ಪ್ರಾಂಗಾರಿಕ-ಅಪ್ರಾಂಗಾರಿಕ ವಸ್ತುಗಳು

ಸಜೀವನಾದ-ಪ್ರಾಣಿವರ್ಗ ಹಾಗೂ ಸಸ್ಯ ವರ್ಗಗಳಿಂದ ಉತ್ಪನ್ನವಾಗುವ ವಸ್ತುಗಳಿಗೆ 'ಪ್ರಾಂಗಾರಿಕ ವಸ್ತು' (organic)ಗಳೆಂದೂ ಇನ್ನುಳಿದ ಖನಿಜ ಇತ್ಯಾದಿ ವಸ್ತುಗಳಿಗೆ 'ಅಪ್ರಾಂಗಾರಿಕ ವಸ್ತು' (inorganic)ಗಳೆಂದೂ ಕರೆಯೋಣ. [ಅಂಗಾರ = ಇದ್ದಲು; ಪ್ರಾಂಗಾರ = (carbon); ಪ್ರಾಂಗಾರಿಕ = compounds of carbon ಇತ್ಯಾದಿ.] ಕ್ರಿ. ಶ. ೧೮೩೦ ರ ವರೆಗೂ ರಸಾಯನ ಶಾಸ್ತ್ರಜ್ಞರಿಗೆ 'ಪ್ರಾಂಗಾರಿಕ ವಸ್ತು'ಗಳ ಸ್ವರೂಪಜ್ಞಾನ ಸರಿಯಾಗಿ ಇರಲಿಲ್ಲ. ಅಪ್ರಾಂಗಾರಿಕ ವಸ್ತುಗಳನ್ನು ಪರೀಕ್ಷಿಸುವ ವಿಧಾನಗಳಿಂದ ಪ್ರಾಂಗಾರಿಕ ವಸ್ತುಗಳನ್ನು ಪರೀಕ್ಷಿಸುವದು ಸಾಧ್ಯವಾಗಿರಲಿಲ್ಲ. ಪರೀಕ್ಷೆಯೂ ಪೃಥಕ್ಕರಣವೂ ಅಸಾಧ್ಯವಾಗಿದ್ದಾಗ ಅವುಗಳನ್ನು ಕೃತಕವಾಗಿ ಪ್ರಯೋಗ ಶಾಲೆಯಲ್ಲಿ ನಿರ್ಮಿಸುವ ಪ್ರಶ್ನೆಯಂತೂ ದೂರವೇ ಉಳಿಯಿತು. ಇವುಗಳೆಂದೆಂದಿಗೂ ಮಾನವ ನಿರ್ಮಿತವಾಗುವ ಸಂಭವವೇ ಇಲ್ಲ ಎಂದು ಅನೇಕರು ನಂಬಿದ್ದರು. ಏಕಂದರೆ ಪ್ರಾಣಿ ಹಾಗೂ ಸಸ್ಯಗಳಲ್ಲಿರುವ 'ಜೀವ ಶಕ್ತಿ'ಯ ಆಧಾರದಿಂದ ಇವು ನಿರ್ಮಿತವಾಗಿವೆ. ರಸಾಯನ ಶಾಸ್ತ್ರಜ್ಞರಿಗೆ 'ಜೀವ ಶಕ್ತಿ'ಯು ಎಂದೂ ತಿಳಿಯಲಾರದು. ಆದ್ದರಿಂದ ಅವುಗಳ ನಿರ್ಮಾಣ ರಸಾಯನ ಶಾಸ್ತ್ರಜ್ಞರಿಗೆ ನಿಲುಕದ ಸಂಗತಿ, ಇತ್ಯಾದಿಯಾಗಿ ಅವರು ತರ್ಕ ಸರಣಿಯನ್ನು ಮುಂಡಿಸುತ್ತಿದ್ದರು. ಆದರೆ ೧೮೩೦ ನೆಯ ಇಸ್ವಿಯ ಸುಮಾರಕ್ಕೆ ನಡೆದ ಪ್ರಯೋಗಗಳ ಫಲವಾಗಿ ಪ್ರಾಂಗಾರಿಕ ವಸ್ತುಗಳಲ್ಲಿಯೂ ಅಪ್ರಾಂಗಾರಿಕ ವಸ್ತುಗಳಲ್ಲಿಯೂ ಯಾವದೇ ವಿಶೇಷ ಅಂತರವಿದ್ದುದು ಕಂಡು ಬರಲಿಲ್ಲ. ಪ್ರಾಂಗಾರಿಕ ವಸ್ತುಗಳ ಸಂರಚನೆ ಮಾತ್ರ ಹೆಚ್ಚು ಜಟಿಲವಾಗಿದ್ದುದರಿಂದ ಅವುಗಳ ಪ್ರಾಯೋಗಿಕ ಪರೀಕ್ಷಣೆಗೆ ಹೊಸ ಹೊಸ ವಿಧಾನಗಳ ಶೋಧನೆಯಾಗಿ ಅವು ಬಳಿಕೆಯಲ್ಲಿ ಬರತೊಡಗಿದವು. ಪ್ರಾಂಗಾರಿಕ ವಸ್ತುಗಳು ಒಂದೊಂದೇಯಾಗಿ ಪೃಥಕ್ಕರಣ ಹೊಂದಿ ಪ್ರಯೋಗ ಶಾಲೆಯಲ್ಲಿ ನಿರ್ಮಾಣವಾಗತೊಡಗಿದವು. ರಸಾಯನ ಶಾಸ್ತ್ರಜ್ಞನ ಸಂಶೋಧನೆಗೆ ವಿಸ್ತಾರವಾದ ಕ್ಷೇತ್ರವೊಂದು ಜೋಡಿಸಲ್ಪಟ್ಟು 'ಪ್ರಾಂಗಾರಿಕ ರಸಾಯನಶಾಸ್ತ್ರ' (organic chemistry) ಜನ್ಮನೆತ್ತಿತು. ಅದು ಜನ್ಮನೆತ್ತಿದ ಈ ನೂರು ವರುಷಗಳಲ್ಲಿ ಊಹಿಸಲಸಾಧ್ಯವಾಗಿ ಬೆಳೆದು ಬಿಟ್ಟದೆ. 'ಜೀವ ಶಕ್ತಿ'ಯ ಆಧಾರ ಹಿಡಿದು ವಾದಿಸುತ್ತಿದ್ದವರ ಆಧಾರ ತಪ್ಪಿದಂತಾಗಿದೆ. ಆದರೇನು ಅವರ ವಾದ ನಿಂತಿಲ್ಲ. ರಸಾಯನ ಶಾಸ್ತ್ರಜ್ಞ ತನ್ನ ಪ್ರಯೋಗ ಶಾಲೆಯಲ್ಲಿ "ಜೀವ"(Life)ವನ್ನಿನ್ನೂ ಸೃಷ್ಟಿಮಾಡಿಲ್ಲವಲ್ಲ!

ಜೀವ ಶಾಸ್ತ್ರ ಮತ್ತು ವಿಕಾಸ ವಾದ

ಸಜೀವಿಗಳನ್ನು ನಿರ್ಜೀವಿಗಳಿಂದ ಬೇರ್ಪಡಿಸಿ ಅವುಗಳ 'ಜೀವ' ವ್ಯಾಪಾರಗಳನ್ನು ಕೂಲಂಕಷವಾಗಿ ಅಭ್ಯಸಿಸುವದು ಜೀವಶಾಸ್ತ್ರಜ್ಞನ ಕಾರ್ಯ. (Biologist). ಸಜೀವಿಗಳನ್ನು ಅನೇಕವಿಧವಾಗಿ ವಿಂಗಡಿಸಬಹುದು-ಅಭ್ಯಾಸದ ಅನುಕೂಲತೆಗಾಗಿ. ಪ್ರಾಣಿಗಳು, ಸಸ್ಯಗಳು. ಪ್ರಾಣಿಗಳನ್ನು-ಕ್ರಿಮಿಕೀಟಗಳಿಂದ ಹಿಡಿದು ಮನುಷ್ಯನ ವರೆಗೆ-ಪುನರ್ವಿಂಗಡಿಸಬಹುದು. ಈ ಪ್ರಕಾರ ವಿಂಗಡಿಸಿ ಅವುಗಳ ಸೂಕ್ಷ್ಮ ನಿರೀಕ್ಷಣೆ ಹಾಗೂ ಪರೀಕ್ಷಣೆಯಿಂದ ಅವುಗಳಲ್ಲಿರುವ ಸಾಮಾನ್ಯ ಸಂಬಂಧವು ಕಂಡುಬಂದು ಮುಂದೆ ಇದೇ 'ವಿಕಾಸವಾದ' (Evolution)ಕ್ಕೆ ತಳಹದಿಯಾಯಿತು. ಸಜೀವಿಗಳ ರಚನೆಗೆ 'ಜೀವಾಣು' (Cells) ಗಳೇ ತಳಹದಿ-ಪದಾರ್ಥಗಳ ರಚನೆಗೆ ಮೂಲವಸ್ತುಗಳ ಪರಮಾಣುಗಳಿದ್ದಂತೆ. ಒಂದು 'ಜೀವಾಣು' ಮಾತ್ರ ಉಳ್ಳ 'ಏಕಾಣು' ಜೀವಿಯಾದ 'ಅಮೀಬಾ' (Amoeba) ವೇ ಸಾವಿರಾರು ಅಥವಾ ಲಕ್ಷಾಂತರ ವರುಷಗಳ ಕಾಲದಲ್ಲಿ 'ವಿಕಸನ' ಹೊಂದಿ 'ಮನುಷ್ಯ'ನಾಗಿ ಪರಿಣಮಿಸಿದೆ ಎಂದು 'ಜೀವಶಾಸ್ತ್ರ' ಹೇಳುತ್ತದೆ. ಜೀವಶಾಸ್ತ್ರದ ಈ ವಿಕಾಸವಾದಕ್ಕೆ ಸಾಕಷ್ಟು ಆಧಾರಗಳೂ ಇವೆ. ಹಾಗಾದರೆ ಅತ್ಯಂತ ಸೂಕ್ಷ್ಮವಾದ ಆ 'ಏಕಾಣು ಜೀವಿ'ಯ ಜನ್ಮವಾದುದು ಹೇಗೆ? ಬೇರೆ ಶಬ್ದಗಳಲ್ಲಿ ಹೇಳುವದಾದರೆ ಈ ಪೃಥ್ವಿಯ ಮೇಲೆ 'ಜೀವ'ಉತ್ಪತ್ತಿಯಾದುದು ಹೇಗೆ? ಜೀವಾಣುವನ್ನು 'ಜೀವಶಾಸ್ತ್ರಜ್ಞ' ಹೆಚ್ಚು ಪರೀಕ್ಷಿಸಲು ಯತ್ನಿಸಿದರೆ ಆತನಿಗೇನು ಕಂಡುಬರುತ್ತದೆ-ಜೀವಕಣ (Nucleus), ಜೀವರಸ (Protoplasm)-ಇನ್ನೂ ಸೂಕ್ಷ್ಮವಾಗಿ ಹೋದರೆ-ನ್ಯೂಕ್ಲಿಯಿಕ್ ಆಮ್ಲಗಳು, ಪ್ರೋಟೀನ್‌ಗಳು .... ಎಲ್ಲವೂ ಜಟಿಲತಮವಾದ 'ಪ್ರಾಂಗಾರಿಕ ವಸ್ತುಗಳು'! ಸರಿ, ಆತ ಪ್ರಾಂಗಾರಿಕ ರಸಾಯನ ಶಾಸ್ತ್ರಜ್ಞನಿಗೆ ಶರಣು ಹೋಗುತ್ತಾನೆ. ಸಾಮಾನ್ಯವಾದ ಅನೇಕ ಪ್ರಾಂಗಾರವಸ್ತುಗಳನ್ನು ಪರೀಕ್ಷಿಸಿದ ಪ್ರಾಂಗಾರಿಕ ರಸಾಯನ ಶಾಸ್ತ್ರಜ್ಞನೂ ಸಹ ಇಷ್ಟು ಜಟಿಲತಮ ಪ್ರಾಂಗಾರಿಕ ವಸ್ತುಗಳನ್ನು ಪರೀಕ್ಷಿಸಲಸಮರ್ಥನಾಗಿದ್ದಾನೆ. ಈಗಿರುವ ಪರೀಕ್ಷಾ ವಿಧಾನಗಳು ಸಾಲವು. ಇನ್ನೂ ಸೂಕ್ಷ್ಮತರ ಸಾಧನಗಳು ಬೇಕು. ಪ್ರಾಂಗಾರಿಕ ರಸಾಯನ ಶಾಸ್ತ್ರದ ಕೊನೆ ಎಲ್ಲಿ ಹಾಗೂ ಜೀವಶಾಸ್ತ್ರದ ಪ್ರಾರಂಭವೆಲ್ಲಿ ಹೇಳುವದು ಕಷ್ಟವಾಗಿದೆ. ಅವೆರಡರ 'ಸೀಮೆ'ಯಲ್ಲಿಯೇ ಅತ್ಯಂತ ಮಹತ್ವದ ಸಂಶೋಧನೆ ನಡೆಯಬೇಕಾಗಿದೆ. 'ಜೀವೋತ್ಪತ್ತಿಗೆ' ವಿವರಣೆ ಬೇಕಾಗಿದೆ. ಅದಕ್ಕಾಗಿ ಹೊಸದಾದ 'ಜೀವ-ರಸಾಯನ ಶಾಸ್ತ್ರ' (Biochemistry) ಹುಟ್ಟಿ, ಬೆಳೆಯುತ್ತಿದೆ. 'ಏಕಾಣುಜೀವಿ'ಯಾದ ಅಮೀಬಾಕ್ಕಿಂತಲೂ ಸೂಕ್ಷ್ಮವಾದ ಅನೇಕ ರೋಗಾಣುಗಳು (Bacteria) ಈ ಮೊದಲೇ ಕಂಡು ಹಿಡಿಯಲ್ಪಟ್ಟವೆ. ಇತ್ತೀಚೆಗೆ ಈ ರೋಗಾಣುಗಳಿಗಿಂತಲೂ ಸೂಕ್ಷ್ಮತರವಾದ ಜೀವಿಗಳು — 'ವಿರೂಸ' (Virus) ಗಳೆಂಬವು ಶೋಧಿಸಲ್ಪಟ್ಟವೆ. ಇವೂ ಒಂದುಬಗೆಯ ರೋಗಾಣುಗಳೆಂದರೂ ಆದೀತು. ಸಾಮಾನ್ಯಶೀತ, ಇನ್‌ಫ್ಲುಎಂಝಾ, ದನಗಳಿಗೆ ಬರುವ ಕಾಲು ಹಾಗೂ ಬಾಯಿಬೇನೆ ಇತ್ಯಾದಿಗಳಿಗೆ ಈ 'ವಿರೂಸ'ಗಳು ಕಾರಣೀಭೂತವಾಗಿರುತ್ತವೆ. 'ವಿರೂಸ'ವು ಅತ್ಯಂತ ಸೂಕ್ಷ್ಮವಾದ ಸಜೀವಿಯೋ ಅಥವಾ ಅತ್ಯಂತ ಜಟಿಲ ಸಂರಚನೆಯುಳ್ಳ ಪ್ರಾಂಗಾರಿಕ ನಿರ್ಜೀವ ಪದಾರ್ಥವೋ

ಎಂದು ನಿಶ್ಚಯವಾಗಿ ಹೇಳುವದೇ ಅಸಾಧ್ಯವಾಗಿದೆ! ನಿರ್ಜೀವ ಪದಾರ್ಥಗಳಿಂದಲೇ ಕಾಲಾನುಕ್ರಮದಿಂದ ಈ ಪೃಥ್ವಿಯ ಮೇಲೆ ಜೀವೋತ್ಪತ್ತಿಯಾಯಿತು. ಎಂದು ಖಂಡಿತವಾಗಿ ಹೇಳಬಹುದೇ? ಜೀವಶಾಸ್ತ್ರದ ವಿಕಸನದಿಂದ 'ಅಮೀಬಾ'ವು ಮನುಷ್ಯನಾಗಿ ಪರಿವರ್ತಿಸಿದಂತೆ, ರಾಸಾಯನಿಕ ವಿಕಸನದಿಂದ ನಿರ್ಜೀವ ಪ್ರಾಂಗಾರಿಕ ವಸ್ತುವು ಜಟಿಲವಾಗುತ್ತ ಆಗುತ್ತ ಸಜೀವಿಯಾಗಿರಬಹುದೇ? ಇದನ್ನು ಪ್ರಾಯೋಗಿಕವಾಗಿ ಮನಗಾಣಿಸಬಹುದೇ?


ರಸಾಯನ ಶಾಸ್ತ್ರದ ಗುರಿ

ವಸ್ತುಸ್ವರೂಪದ ಯಥಾರ್ಥ ಜ್ಞಾನವೇ ರಸಾಯನ ಶಾಸ್ತ್ರದ ಗುರಿ ಎಂದು ಈ ಮೊದಲೇ ಹೇಳಿರುವೆ. ಆದರೆ ಈ ಸ್ವರೂಪಜ್ಞಾನವನ್ನರಿತು ಕೊಳ್ಳಲು ರಸಾಯನ ಶಾಸ್ತ್ರಜ್ಞ ಹೆಚ್ಚಾಗಿ ಭೌತ ಶಾಸ್ತ್ರ (physics)ದ ವಿಧಾನಗಳನ್ನೇ ಅನುಸರಿಸುತ್ತಾನೆ. ರಸಾಯನಶಾಸ್ತ್ರದ ಒಂದು ಕಡೆಯ 'ಸೀಮೆ'ಯಲ್ಲಿ "ಜೀವರಸಾಯನಶಾಸ್ತ್ರ" ಸೃಷ್ಟಿಯಾಗಿದ್ದರೆ ಅದರ ಇನ್ನೊಂದು "ಸೀಮೆ ಯಲ್ಲಿ 'ಭೌತ—ರಸಾಯನಶಾಸ್ತ್ರ' (physical chemistry) ಉದ್ಭವಿಸಿದೆ. ಭೌತಶಾಸ್ತ್ರದಲ್ಲಿ ಸೈದ್ಧಾಂತಿಕವಾಗಲಿ ಅಥವಾ ಪ್ರಾಯೋಗಿಕವಾಗಿ ಹೊಸ ಶೊಧನೆಗಳಾದರೆ ಅದರ ಪರಿಣಾಮ ತಕ್ಷಣ ರಸಾಯನಶಾಸ್ತ್ರದ ಮೇಲಾಗುತ್ತದೆ. ರಸಾಯನ ಶಾಸ್ತ್ರಜ್ಞನ ಕೈಯಲ್ಲಿ ಮತ್ತೊಂದು ಹೊಸ 'ಬ್ರಹ್ಮಾಸ್ತ್ರ' ದೊರಕುತ್ತದೆ-ಜಟಿಲ ವಸ್ತುಗಳ ಜಟಿಲತೆಯೊಡನೆ ಹೋರಾಡಲಿಕ್ಕೆ. ೧೯ ನೆಯ ಶತಮಾನದ ಕೊನೆಯ ೧೦..೧೫ ವರುಷಗಳು ಭೌತಶಾಸ್ತ್ರದಲ್ಲಿ ಅತ್ಯಂತ ಕ್ರಾಂತಿಕಾರಿಯಾದ ಕಾಲಖಂಡ. ಆಶ್ಚರ್ಯಕರವಾದ, ದೂರಗಾಮಿ ಪರಿಣಾಮನ್ನೊಳಗೊಂಡ ಶೋಧನೆಗಳು ಒಂದರ ಹಿಂದೊಂದರಂತೆ ಮಾಡಲ್ಪಟ್ಟವು. ಕ್ಷ-ಕಿರಣಗಳ ಶೋಧನೆ, ವಿದ್ಯುದ್ವಿಸರಣ(Radioactivity)ದ ಶೋಧನೆ, ಎಲೆಕ್ಟ್ರಾನಿನ ಶೋಧನೆ, ಕ್ವಾಂಟಮ್ ಸಿದ್ಧಾಂತ (Quantum theory)-ಇವೇ ಕೆಲ ಉದಾಹರಣೆ ಸಾಕು. ಇದರಿಂದ ರಸಾಯನ ಶಾಸ್ತ್ರದಲ್ಲಿಯೂ ಅದ್ಭುತ ಪ್ರಗತಿಯಾಯಿತು. ಮೂಲವಸ್ತುಗಳ ಪರಮಾಣುಗಳ ಆಧಾರದಿಂದ ಆತ ಒಂದೆಡೆ 'ಜೀವ'ಕ್ಕೆ ಕಾರಣೀಭೂತವಾದ ಜಟಿಲ ಪ್ರಾಂಗಾರಿಕ ವಸ್ತುಗಳ ಸಂರಚನೆಯನ್ನು ಬಿಡಿಸಲೆತ್ನಿಸುತ್ತಿದ್ದರೆ ಇನ್ನೊಂದೆಡೆ ಭೌತಶಾಸ್ತ್ರಜ್ಞರು ಅತನ ಪರಮಾಣುಗಳನ್ನು ಛಿನ್ನ-ವಿಚ್ಛಿನ್ನಗೊಳಿಸಿ ಅದಕ್ಕೂ ಸೂಕ್ಷ್ಮವಾದ ಮೂಲಕಣ (Fundamental particles)ಗಳನ್ನು ಶೋಧಿಸಿದರು. ಅಲ್ಬರ್ಟ ಐನ್‌ಸ್ಟೀನರ ಸಾಪೆಕ್ಷತ್ವ (Relativity)'ವಸ್ತುಶಕ್ತಿ'ಗಳ ನಡುವಿನ ವೈಷಮ್ಯವನ್ನೇ ತೊಡೆದು ಹಾಕಿತು. ಶಾಸ್ತ್ರಜ್ಞರಿಗೆ 'ಪರಮಾಣು-ಶಕ್ತಿ'ಯ ಅರಿವುಂಟಾಯಿತು. ಮೂಲಕಣದ ಶೋಧನೆಗೆ ಸಹಾಯವಾಗಿರತಕ್ಕಂತಹ ಅತ್ಯಂತ ಶಕ್ತಿದಾಯಕವಾದ 'ವಿಶ್ವಕಿರಣ' (Cosmic rays)ಗಳ ಸಂಶೋಧನೆಯಾಗಿದೆ. ವಿಶ್ವಕಿರಣಗಳ ಮೂಲ ಇನ್ನೂ ಒಂದು ಬಿಡಿಸಲಾರದ ಸಮಸ್ಯೆಯಾಗಿದೆ. ಪೃಥ್ವಿಯನ್ನು ಬಿಟ್ಟು ಹೊರಗಡೆ ಹೋಗಿ ಸಂಶೋಧನೆ ಮಾಡಿದುದಾದರೆ ವಿಶ್ವಕಿರಣಗಳ ಬಗ್ಗೆ ಹೆಚ್ಚು ವಿಚಾರ ತಿಳಿಯಬಹುದಾಗಿದೆ. ಪ್ರಚಂಡವಾದ ಪರಮಾಣು—ಶಕ್ತಿಯನ್ನುಪಯೋಗಿಸಿ ರಾಕೆಟ್ಟುಗಳ ಮೂಲಕ ಪೃಥ್ವಿಯನ್ನು ಬಿಟ್ಟು ಹೊರಗೆ ಹೋಗುವದು ಸಾಧ್ಯವೆ? "ಚಂದ್ರ"ನ ಮೇಲೆ ಸ್ವಾರಿ ಮಾಡಬಹುದೇ? ಅಂತರ್—ಗ್ರಹ ಪ್ರಯಾಣ—ಬರಿಯ ಕನಸಲ್ಲವಷ್ಟೆ! 'ಹೈಡ್ರೋಜನ್‌ಬಾಂಬು' ಸೂರ್ಯ ಹಾಗೂ ನಕ್ಷತ್ರಗಳಲ್ಲಿಯ ಶಕ್ತಿಯ ಉಗಮದ ಕಲ್ಪನೆಯನ್ನು ಶಾಸ್ತ್ರಜ್ಞರಿಗೆ ಮಾಡಿಕೊಟ್ಟದೆ.

ಭೌತಶಾಸ್ತ್ರ ಸಂಶೋಧನೆಯ ಲಾಭ

ಭೌತಶಾಸ್ತ್ರದಲ್ಲಿಯ ಸಂಶೋಧನೆಯ ತೀವ್ರಗತಿಯ ಲಾಭ ರಸಾಯನ ಶಾಸ್ತ್ರಜ್ಞನಿಗೆ ತುಂಬ ಆಗಿದೆ; ಆಗಲಿದೆ. ವಸ್ತು ಸಂರಚನೆಯ ಜಟಿಲತೆಯನ್ನು ಬಿಡಿಸಲು ಭೌತಶಾಸ್ತ್ರವು ರಸಾಯನ ಶಾಸ್ತ್ರಜ್ಞನ ಕೈಯಲ್ಲಿ ಹೊಸ ಹೊಸ ಶಕ್ತ್ಯಾಯುಧಗಳನ್ನು ಕೊಡುತ್ತಲಿದೆ. 'ವಿರೂಪ'ಗಳನ್ನಷ್ಟೇ ಏಕೆ ದೊಡ್ಡ ದೊಡ್ಡ ಪ್ರಾಂಗಾರಿಕ ವಸ್ತುಗಳ ಅಣುಗಳನ್ನೂ ಸಹ 'ಎಲೆಕ್ಟ್ರಾನ್ ಮೈಕ್ರೋಸ್ಕೋಪ' (Electron microscope)ದಿಂದ ಇಂದು ಚಿತ್ರಿಸಲು ಸಾಧ್ಯವಿದೆ. ಕ್ಷ ಕಿರಣಗಳು, ರಕ್ತಾತೀತ (Infrared) ಹಾಗೂ ನೀಲಾತೀತ (ultra--violet) ಕಿರಣಗಳು ಇವನ್ನುಪಯೋಗಿಸಿ ಸ್ಪೆಕ್ಟ್ರೋಸ್ಕೋಪಿನ ಸಹಾಯದಿಂದ ಅಣು ರಚನೆಯ ಅನೇಕ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗಿದೆ. 'ಪರಮಾಣು-ವಿಭಜನಾ' ಕಾರ್ಯದಲ್ಲಿ ಉತ್ಪನ್ನವಾಗುವ ಹಾಗೂ ಕೃತಕವಾಗಿ ತಯಾರಿಸಬಹುದಾದ ವಿದ್ಯುದ್ವಿಸರಣ ಶಕ್ತಿಯುಳ್ಳ 'ಐಸೋಟೋಪು' (Isotopes)ಗಳು ರಸಾಯನ ಕ್ರಿಯೆಗಳನ್ನು ಹಂತ ಹಂತವಾಗಿ ಸರಿಯಾಗಿ ತಿಳಿದುಕೊಳ್ಳಲು ಅತ್ಯಂತ ಪ್ರಭಾವೀ ಸಾಧನಗಳಾಗಿ (Radio active tracer technique) ಪರಿಣಮಿಸಿವೆ. ಸಾಮಾನ್ಯವಾದ ವಸ್ತುಗಳಾದ ನೀರು ಹಾಗೂ ಅಂಗಾರಾಮ್ಲ ವಾಯುಗಳನ್ನು ಸೇರಿಸಿ ಸಸ್ಯಗಳು ಅಹಾರೋತ್ಪತ್ತಿ ಹೇಗೆ ಮಾಡುತ್ತವೆ? ಮನುಷ್ಯನು ಸೇವಿಸುವ ಆಹಾರವಾಗಲಿ, ಔಷಧಿಯಾಗಲಿ ಆತನ ದೇಹದಲ್ಲಿ ಹೇಗೆ ಪರಿಣಾಮವನ್ನುಂಟು ಮಾಡುತ್ತದೆ? 'ಐಸೋಟೋಪು'ಗಳು ಈ ಪ್ರಶ್ನೆಗೆ ಉತ್ತರ ಕಂಡು ಹಿಡಿಯಲು ಸಹಾಯ ಮಾಡುತ್ತಿವೆ. ಆಹಾರೋತ್ಪತ್ತಿಯ ವಿಧಾನ ತಿಳಿದು ಸಸ್ಯವರ್ಗದ ಸಹಾಯವಿಲ್ಲದೆ ಮನುಷ್ಯನೇ ಕೃತಕವಾಗಿ ಅಹಾರೋತ್ಪಾದನೆ ದೊಡ್ಡ ಪ್ರಮಾಣದಲ್ಲಿ ಮಾಡಬಹುದೇ?

ಕ್ರಿ. ಶ. ೨೦೦೬ ರಲ್ಲಿ ರಸಾಯನ ಶಾಸ್ತ್ರದ ಪ್ರಗತಿ ಎಷ್ಟಾದೀತು? ರಾಸಾಯನಿಕ ಜಗತ್ತಿನ ಸ್ಥಿತಿಗತಿ ಏನು? ಈ ಪ್ರಶ್ನೆಯನ್ನು ನನ್ನೀ ಪ್ರಸ್ತುತ ಲೇಖನದ ಮೊದಲಿಗೆ ಎತ್ತಿದ್ದೆ. ಲೇಖನದ ಕೊನೆಗೆ ಒಂದೇ ಉತ್ತರ ಹೇಳಬಯಸುವೆ. ಲೇಖನದಲ್ಲಿ ಎಲ್ಲೆಲ್ಲಿ ಪ್ರಶ್ನಾರ್ಥಕ ಚಿಹ್ನವಾಗಲಿ ಅವಗ್ರಹ ಚಿಹ್ನವಾಗಲಿ ಕಂಡು ಬರುವವೋ ಆ ಎಲ್ಲ ಚಿಹ್ನಗಳು ಸನ್ ೨೦೦೬ ರಷ್ಟೊತ್ತಿಗೆ ಕಣ್ಮರೆಯಾಗಬಹುದು.



> ಜನತೆ ಪುಸ್ತಕಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದುದು ಕೈಹೊತ್ತಿಗೆಯ ತಂತ್ರವೊಂದೇ. ಪ್ರಕಾಶಕರು ಪೂರ್ವ ಯೋಜನೆ ಮಾಡಿಕೊಂಡು ಲೇಖಕರಿಂದ ಉತ್ತಮ ಕತೆ ಕ ದಂಬರಿಗಳನ್ನು ಬರೆಯಿಸಿ ಪ್ರಕಾಶಿಸಿದರೆ ಓದುಗರಿಗೆ ತುಂಬ ಪ್ರಯೋಜನವಾಗದಿರದು. ಬರೆಹಗಾರರಲ್ಲಿಯೂ ಧ್ಯೇಯಾರಾಧನೆ ಬೇಕು. ಉಭಯತರೂ ಸಂಘಟಿತರಾದಲ್ಲಿ ಕನ್ನಡ ಸಾಹಿತ್ಯ ನಿರರ್ಗಳವಾಗಿ ವೃದ್ಧಿ ಹೊಂದಬಲ್ಲುದು.

ಕೈ ಹೊತ್ತಿಗೆಗಳು

ಲೇ:-ಪ್ರೊ. ಬಿ. ಎಚ್. ಶ್ರೀಧರ, ಎಂ. ಎ., ಕುಮಟಾ

ಅತ್ಯುತ್ತಮವಾದುದು ಯಾವುದು? ಅದನ್ನು ಅತ್ಯುತ್ತಮವಾಗಿ ಬಳಸಿಕೊಂಬುದು ಹೇಗೆ? ಎಂಬುದು ಶಿಕ್ಷಣದಿಂದ ಗೊತ್ತಾಗುತ್ತದೆ ಎಂದವರುಂಟು. ಅದೇ ಮೇರೆಗೆ ಸಾಮಾನ್ಯವಾಗಿ ಮಿತ್ರಸಂಮಿತಿಯಿಂದ ಒತ್ತಾಯ ಮಾಡಿ ವಸ್ತುಗಳ ಬೆಲೆಯನ್ನು ತಿಳಿಸುವುದು ಶಿಕ್ಷಣದ ಕೆಲಸ ಎಂದವರೂ ಉಂಟು. ಮನುಷ್ಯರ ಎಲ್ಲ ಸಾಮಾಜಿಕ ವ್ಯವಹಾರದಲ್ಲೂ ಒಬ್ಬನು ಕಲ್ಪನೆಗಳನ್ನು ಇನ್ನೊಬ್ಬನ ಮನಸ್ಸಿನೆಡೆಗೆ ತೇಲಿಬಿಡುವುದು ಕಂಡು ಬರುತ್ತದೆ. ತೇಲಿ ಹೋದ ತೆಂಗಿನ ಕಾಯಿಯಂತೆ ಅದು ಒಬ್ಬನದಲ್ಲದಿದ್ದರೆ ಇನ್ನೊಬ್ಬನ ಮನದಲ್ಲಿ ನಿಂತು ಬಲಿಯುತ್ತದೆ.

ವರ್ತಮಾನ ಸಾಹಿತ್ಯ ಕೃತಿಗಳ ರಸಾತ್ಮಕ ಮೌಲ್ಯವನ್ನು ಪ್ರಸ್ತುತ ತಲೆಮಾರಿನ ಜನ ಖಚಿತವಾಗಿ ಅಳೆದಿಡಲಾರರೆಂಬುದು ಸಾಮಾನ್ಯ ಲೋಕಾನುಭವ. ಪ್ರಜಾಸತ್ತೆಯ ಇಂದಿನ ದಿನಗಳಲ್ಲಿ ಸಾಹಿತಿಗಳು ಜನತಾಜನಾರ್ದನನ ಆರ್ಥಿಕ ಪ್ರೋತ್ಸಾಹವನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿರುವುದರಿಂದ ಅವರೂ ಅವರ ಕೈಗಳಾದ ಪ್ರಕಾಶಕರೂ ಸಂತೆಗೆ ತಕ್ಕಂತೆ ಮೆಂತೆಯನ್ನು ಮಾರಬೇಕಾದ ಸಂದರ್ಭ ಅನೇಕ ಸಲ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಅತಿ ಸನಾತನವಾದ ಶುದ್ಧ ಸಾಹಿತ್ಯವಾದವಾಗಲಿ ಅತ್ಯಾಧುನಿಕವಾದ ಶುದ್ಧಾ-ಶುದ್ಧ ಭೇದ ಧಿಕ್ಕಾರವಾದವಾಗಲಿ ಕೆಲಸಕ್ಕೆ ಬರುವುದಿಲ್ಲ. ಆತ್ಮಸಂತೋಷಕ್ಕಾಗಿಯೇ ಕೃತಿಗಳನ್ನು ರಚಿಸುವ ಯೋಗಿಸಾಹಿತಿ ಸಾಮಾಜಿಕ ಸಂಬಂಧದ ಕಲ್ಪನೆಯಿಂದ ದೂರ. ಕೇವಲ ಗಿರಾಕಿಯ ತಾಳಕ್ಕೆ ಹೆಜ್ಜೆ ಹಾಕುವ ವ್ಯಾಪಾರಿಸಾಹಿತಿ ವಿಮರ್ಶಕರ ಬಹಿಷ್ಕಾರಕ್ಕೆ ಅರ್ಹ. ಈ ಧ್ರುವತಾರೆಗಳ ದೃಷ್ಟಿಯನ್ನು ದೂರವಿಟ್ಟರೆ ಸಾಮಾನ್ಯ ವ್ಯವಹಾರದ ದೃಷ್ಟಿ ಅರ್ಥವಾಗುತ್ತದೆ.

ಕಾದಂಬರಿಯುಗ

ಕನ್ನಡ ಸಾಹಿತ್ಯದಲ್ಲಿಂದು ಕಾದಂಬರಿಯ ಯುಗ ಕಾಲಿಟ್ಟಿದೆ. ಅದಕ್ಕೇ ಜನ ಅಗ್ರಪೂಜೆ ಸಲ್ಲಿಸುತ್ತದೆ-ಕತೆಗಲ್ಲ, ಕವಿತೆಗಲ್ಲ, ನಾಟಕಕ್ಕಲ್ಲ, ಜೀವನ ಚರಿತ್ರೆಗಲ್ಲ, ವಿಚಾರಪ್ರಬಂಧಕ್ಕಲ್ಲ ಎಂದು ಕೆಲವರೆನ್ನುತ್ತಾರೆ. ಅದರ ನಿಜವಾದ ಅರ್ಥವೆಂದರೆ ನಮ್ಮ ಇಂದಿನ ಓದುಗರು ಹೆಚ್ಚಾಗಿ ಕಥಾಪ್ರಿಯರು ಎಂದು. ಗ್ರಂಥಕರ್ತ ಅಥವಾ ಪ್ರಕಾಶಕ ಕಾದಂಬರಿ ಎಂದು ಹೆಸರಿಸಿ ಹೊರಡಿಸಿದ ಪುಸ್ತಕಗಳೆಲ್ಲ ಕಾದಂಬರಿಗಳೆಂಬುದು ಅಜ್ಞರ ಭ್ರಮೆ. ಅವುಗಳಲ್ಲಿ ಹಲವು ವಸ್ತುತಃ ಕಿರುಗತೆ-ಹಿರಿಗತೆಗಳು. ನಾಟಕ-ಸಿನೆಮಗಳಲ್ಲಿ ಹೇಗೋ ಹಾಗೇ ಈ ಕಥಾಸರಿತ್ಸಾಗರದಲ್ಲೂ ಪ್ರೇಮಬೀಜವೇ ಪ್ರಧಾನವಾಗಿರುವುದು ಸ್ಪಷ್ಟವಿದೆ. ಜೀವನದಲ್ಲಿ ಪ್ರೇಮದಾರಿದ್ರ್ಯ ಹೆಚ್ಚುತ್ತ ಹೋದ ಹಾಗೆ ಇಂಥ ಸಾಮಾನ್ಯ ಪ್ರೇಮಕಥೆಯ ಪೇಟೆ ಬೆಳೆಯುತ್ತ ಹೋಗುವುದು ಸಹಜವೇನೋ! ಅಂತೂ ಚಂದಮಾಮನ ರಸಿಕರ ಜೊತೆಗೇ ಈ ಪ್ರೇಮಕಥಾ ರಸಿಕರ ಬಳಗವೂ ಬೆಳೆಯುತ್ತಿರುವುದು ಸಮಾಧಾನಕರ.

Necessity is the first stimulus to, industry-ಅವಶ್ಯಕತೆಯು ಉದ್ಯಮದ ಮೊದಲ ಪ್ರಚೋದಕವಲ್ಲವೆ? ಜನರಲ್ಲಿ ಅವಶ್ಯಕತೆಯನ್ನು ಉಂಟು ಮಾಡುವುದು ಅದಕ್ಕೂ ಮೊದಲಿನ ಉದ್ಯಮವೆಂಬುದೂ ಸಹಜ. ಓದುಗರನ್ನೇ ಅವಲಂಬಿಸಿದ ನಮ್ಮ ಪ್ರಕಟನೋದ್ಯಮ ಓದಿನ ಹಸಿವೆಯನ್ನು ಅವರಲ್ಲಿ ಹೆಚ್ಚಿಸುವ ಕ್ರಮವನ್ನು ಕೈಕೊಳ್ಳಬೇಕಾಯ್ತು.

ಕೈಹೊತ್ತಿಗೆಯ ತಂತ್ರಕ್ಕೆ ಯಶ

ಓದುವ ಸಾರ್ವಜನಿಕ ಶೀಲ ಭಾರತಕ್ಕೇ ಅಸನಾತನ. ನಾವು ಶ್ರುತಿಸಂಸ್ಕೃತಿಯವರು; ಕೇಳುವುದಲ್ಲದೆ ನೋಡುವುದು ವಿರಳ. ನೋಡಿದರೂ ಓದಿ ನೋಡುವದು ದುರ್ಲಭ. ಓದಿದರೂ ಕೊಂಡು ಓದುವದು ಅಸಾಂಪ್ರದಾಯಕ. ಕೊಂಡು ಓದುವುದಾದರೂ ಪ್ರಾಯದ ಕಾಲದಲ್ಲಿ ಕೆಲವೊಮ್ಮೆ—ಅಷ್ಟೆ. ಹೀಗೆ ಹಿಮಾಲಯೋಪಮವಾದ ಮನೋಮಾಂದ್ಯ ಮೆತ್ತಿಕೊಂಡಿರುವ ವ್ಯವಹಾರಬುದ್ಧಿಯ ಲಕ್ಷ್ಯವನ್ನು ಪುಸ್ತಕವಿಕ್ರಯದತ್ತ ಸೆಳೆಯುವ ಪ್ರಯತ್ನದಲ್ಲಿ ಕೆಲಮಟ್ಟಿಗೆ ಯಶಸ್ಸನ್ನು ಸಂಪಾದಿಸಿದ್ದೆಂದರೆ ಕೈಹೊತ್ತಿಗೆಯ ತಂತ್ರ. ಸುಲಭದರವನ್ನು ಆಶಿಸಿದ ಭಾರತೀಯ (ಸ್ವತಃ ಅವನು ಕುಬೇರನೇ ಆಗಿದ್ದರೂ) ಎಲ್ಲಿಯಾದರೂ ಸಿಕ್ಕಬಹುದೆಂಬ ಭರವಸೆ ನಿಮಗಿದೆಯೆ? ನನಗಂತೂ ಇಲ್ಲ. ಮಾಲಿನ ಉಪಯುಕ್ತತೆಗಿಂತಲೂ ದರಿದ್ರಸೌಲಭ್ಯವೇ ನಮ್ಮಲ್ಲಿ ಗಣ್ಯ. ಅಗ್ಗಕ್ಕೆ ಸಿಕ್ಕುವುದಾದರೆ ಮುಗ್ಗಿದ ಜೋಳವನ್ನಾದರೂ ಮೂಟೆಗಟ್ಟಲೆ ಕೊಂಡು ಮನೆಯಲ್ಲಿ ಚೀಸಿ ಹಾಕುವ ಲಾಭಪಂಡಿತರೇ ಜಾಸ್ತಿ. ಈ ಮಾನಸಿಕ ಭೂಮಿಕೆಯನ್ನು ಚೆನ್ನಾಗಿ ಅರಿತುಕೊಂಡ ಹೊರತು ಕೈಹೊತ್ತಿಗೆಗಳಲ್ಲಿಯ ದೋಷಗಳನ್ನು ಹೇಳಹೊರಡುವುದು ನ್ಯಾಯವಲ್ಲ.

ಇಂದಿನ ಕೈಹೊತ್ತಿಗೆಗಳ ಪ್ರಕಾಶನದಿಂದ ಇತರ ಪ್ರಕಾಶನೋದ್ಯಮಕ್ಕೆ ಧಕ್ಕೆಯುಂಟಾದ ಸುದ್ದಿ ಅಲ್ಲಲ್ಲಿ ಎದ್ದಿದೆ. ಸಹಜ, ಒಂದು ಉದ್ಯಮ

ಇನ್ನೊಂದಕ್ಕೆ ಅಪರಿಚಿತವಾಗಿ ಅಡ್ಡಬರುವುದು ಸ್ಪರ್ಧಾತತ್ವವನ್ನವಲಂಬಿಸಿದ ಬೂರ್ಜ್ವಾ ಪದ್ಧತಿಯ ವ್ಯವಹಾರದಲ್ಲಿ ಅನಿವಾರ್ಯ. "ಕೋಶಮೂಲಾಃ ಸರ್ವಾರಂಭಾಃ'' ಎಂಬುದು ವ್ಯಾಪಾರದಲ್ಲಿ ಅಲ್ಲದೆ ಮತ್ತೆಲ್ಲಿ ಮನ್ನಣೆ ಪಡೆಯಬೇಕು? ಅನ್ಯಾಯವೆನಿಸುವ ಒಂದು ವ್ಯಕ್ತಿ ಸ್ಪರ್ಧೆಯನ್ನು ಎದುರಿಸಲು ನ್ಯಾಯವಂತರು ಸಂಘ ಕಟ್ಟಿಕೊಂಡು ಎದುರಾಗಬೇಕು. ಅಂಥ ಸಂಘಟನ ಶಕ್ತಿಯಿಲ್ಲದಲ್ಲಿ ಒಳ್ಳೆಯದೆಂಬ ಪ್ರಕಾಶನಕೆ ಆಗದಿದ್ದರೂ ಅದರಿಂದ ಸಮಾಜ ಬಹಳ ಹಾನಿಯಾಯಿತೆಂದು ತಿಳಿದುಕೊಳ್ಳದು. ಅದಕ್ಕೆ ತಕ್ಕ ಸಾಹಿತ್ಯ ಅದಕ್ಕೆ ಸಿಗುತ್ತದೆ. ಅಷ್ಟೇ ಅಲ್ಲದೆ ಮತ್ತೇನನ್ನು ಹೇಳಲಾದೀತು? ಇಂದಿನ ಕೈಹೊತ್ತಿಗೆಗಳ ಕತೆಗಳಿಗಿಂತ ಉತ್ತಮವಾದದನ್ನು ಹೆಚ್ಚು ಖರ್ಚಿನಿಂದ ಪ್ರಕಟಿಸಬೇಕೆಂಬ ಸುಸಂಸ್ಕೃತರಲ್ಲಿ ಒಟ್ಟಿಗೆ ಸೇರುವ ಗುಣವಿಲ್ಲದಿದ್ದರೆ ಅವರ ಸಂಸ್ಕಾರಸಂಪನ್ನತೆಗೆ ವ್ಯಾವಹಾರಿಕ ಬೆಲೆ ಎಂದಿಗೂ ಬರುವುದಿಲ್ಲ.

ಇಂದಿನ ವಿದ್ಯಾವಂತಿಕೆಯಲ್ಲಿಯ ಮಾರ್ಮಿಕ ದೋಷವೆಂದರೆ ಐಕ್ಯ-ಸಹಕಾರಗಳನ್ನು ಜನರಲ್ಲಿ ಬೆಳೆಯಿಸಿದರೆ ಇದ್ದಷ್ಟನ್ನೂ ತೊಳೆದು ಹೋಳಿಗೆಸೆಯುವುದೇ ಆಗಿದೆ. ಸಾಹಿತಿಗಳೂ ಪ್ರಕಾಶಕರೂ ಹೆಚ್ಚಾಗಿ ಈ ವರ್ಗಕ್ಕೆ ಸೇರುತ್ತಾರೆ. ಕವಿ-ಕವಿಗೆ, ಗಾಯಕ-ಗಾಯಕರಿಗೆ ಈರ್ಷ್ಯೆ ಇರುವಂತೆ ಸಾಹಿತಿ-ಸಾಹಿತಿಗೆ, ಪ್ರಕಾಶಕ-ಪ್ರಕಾಶಕರಿಗೆ ಅನಾರೋಗ್ಯಕರವಾದ ವೈಮನಸ್ಯವಿರುವುದು ಸಾಮಾನ್ಯವಾಗಿ ಬಿಟ್ಟಿದೆ ಇಂದು. ಏಕೆಂದರೆ ಒಟ್ಟಿನಲ್ಲಿ ಈ ಎಲ್ಲರೂ ತಮ್ಮನ್ನು ತಾವೇ ಸುಸಂಸ್ಕೃತರೆಂದು ಕೊಂಡರೂ ಅವರು ತಮ್ಮ ಚಿಲ್ಲರೆ ಬುದ್ಧಿಯನ್ನು ಸಾರ್ವಜನಿಕವಾಗಿ ಹೊರಗೆಡಹಿದಾಗ ಜನ ಅವರ ಸ್ವವರ್ಣನೆಯೆದುರು ಪ್ರಶ್ನಾರ್ಥಕ ಚಿಹ್ನವನ್ನಿಡುತ್ತದೆ. ಪಂಡಿತ-ಪಂಡಿತರು ಚಿಲ್ಲರೆ ದರ್ಜೆಗಿಳಿದಂತೆ ಪ್ರಕಾಶಕ-ಪ್ರಕಾಶಕರ ಮಾತಾಗುತ್ತದೆ. ಆದುದರಿಂದ ಸೋತ ಪ್ರಕಾಶಕರು ಆ ಉದ್ಯಮವನ್ನು ಬಿಟ್ಟುಕೊಡುವುದೊಂದೇ ವ್ಯವಹಾರ್ಯ, ಇಂದಿನ ಜೀವನ ಪದ್ಧತಿಯಲ್ಲಿ! ಹೀಗೆ ಹೇಳದೆ ಹೋದರೆ ಅವರು ಬಡ ಸಾಹಿತಿಗಳನ್ನೇ ಶೋಷಿಸಲು ಬರುತ್ತಾರೆ ಪುಕ್ಕಟೇ ಬರೆದುಕೊಡಿರೆಂದು, ಕೇಳಿ!

ಕೈಹೊತ್ತಿಗೆಗಳ ಮಾತುಕತೆ

ಇಂದಿನ ಕೈಹೊತ್ತಿಗೆಗಳಲ್ಲಿ ಪ್ರಕಟವಾದ ಕತೆಗಳು ಉತ್ತಮವವೋ ಅಧಮವೋ ಎಂಬ ಪ್ರಶ್ನೆ ಇಲ್ಲಿ ಅಸಂಬದ್ಧ. ಏಕೆಂದರೆ ಕೈಹೊತ್ತಿಗೆಗಳಾಗಿ ಹೊರಡದ ಪ್ರಕಟನೆಗಳಲ್ಲೂ ಒಳ್ಳೆಯವೂ ಇವೆ, ಹಾಳುಗತೆಗಳೂ ಇವೆ. ಕೈಹೊತ್ತಿಗೆಯ ತಂತ್ರವನ್ನ ಕಾವ್ಯದ ತಂತ್ರದಂತೆ ಬರಿ ಯಂತ್ರ, ಆ ಯಂತ್ರ ಬಲದಿಂದ ಕಾವ್ಯಗುಣದ ಸಿರಿಕೆಯೂ ಆಗದು, ಇಳಿತಾಯವೂ ಆಗದು (ನೋಡಿ: "ನವ್ಯಧ್ವನಿ'' - ಪುಟ ೧೪) ಇನ್ನು ಕೈಹೊತ್ತಿಗೆಯ ತಂತ್ರದಲ್ಲೇ ಒಂದು ಬಗೆಯ ಆಕರ್ಷಕತೆ ಇದೆ ಎನ್ನುವುದಕ್ಕೂ ನವ್ಯಶೈಲಿಯ ಹುರುಳ್ನುಡಿಯ ಪ್ರತಿಮೆಗಳ ಮಿಶ್ರಣದಲ್ಲಿ ಹೊಸ ರಸಾನುಭವವಿದೆ ಎಂಬುದಕ್ಕೂ ಹೋಲಿಕೆಯಿದೆ (ನೋಡಿ: "ನವ್ಯಧ್ವನಿ'' — ಪುಟ ೮) ಆದುದರಿಂದ ಕೈಹೊತ್ತಿಗೆ ಹೊರಡಿಸುವ ಪ್ರಯತ್ನವನ್ನು ನಿಂದಿಸದೆ, ಆ ಮೂಲಕ ಉತ್ತಮ ಕತೆಗಳನ್ನೂ ಜೀವನ ಚರಿತ್ರಗಳನ್ನೂ ನಾಟಕಗಳನ್ನೂ ಪ್ರಬಂಧಗಳನ್ನೂ ಬೇಕಾದರೆ ಕವಿತೆಗಳನ್ನೂ ಹೊರಡಿಸುವ ಸುಧಾರಣೆಯಾಗಲಿ. ಕಥೆಗಳ (ಅಥವಾ ಇತರ ಮಾದರಿಯ ಕೃತಿಗಳ) ಕಥಾಗುಣಕ್ಕೇನೂ ಅದರಿಂದ ಲಾಭ-ನಷ್ಟವಾಗದು.

ಇನ್ನು ಓದುಗರ ಮನೋಮಾಂದ್ಯ, ಉತ್ತಮವನ್ನು ನಿರ್ಣಯಿಸುವ ವಿವೇಕ-ಇವು ಶಿಕ್ಷಣಾಧೀನ. ಶಿಕ್ಷಣವು ಸರಕಾರಾಧೀನ, ಸರಕಾರ ಜನಮತಾಧೀನ, ಜನಮತ ಜನಾರ್ದನಾಧೀನ! ಸಹಕಾರಿ ಪ್ರಯತ್ನಗಳ ಇಂದಿನ ಯುಗದಲ್ಲಿ ಲೇಖಕರೂ ಪ್ರಕಾಶಕರೂ ಸಂಘಶಕ್ತಿಯಿಂದ ಸಂಘಟಿತರಾದಲ್ಲಿ ಕೈಹೊತ್ತಿಗೆಗಳ ಭವಿಷ್ಯವು ಉಜ್ವಲವಾಗುವುದರಲ್ಲಿ ಸಂದೇಹವಿಲ್ಲ. ಕೈಹೊತ್ತಿಗೆಗಳಲ್ಲಿ ಜಗತ್ತಿನ ಉತ್ತಮ ಸಾಹಿತ್ಯಕೃತಿಗಳ ಭಾಷಾಂತರಗಳನ್ನು ಕೂಡ ಕೊಡಬಹುದು. ಸಮರ್ಥ ಲೇಖಕರನ್ನು ಪ್ರೋತ್ಸಾಹಿಸುವ ಬುದ್ಧಿ ಮಾತ್ರ ಪ್ರಕಾಶಕರಲ್ಲಿರಬೇಕು. ಅಲ್ಲಿಯೂ ಬಂಧುವ್ಯಾಮೋಹಕ್ಕೆಡೆಗೊಟ್ಟರೆ, ಜಾತೀಯತೆ ತಲೆಮಿಕ್ಕಿದರೆ, ಸಂಕುಚಿತ ಪ್ರಾದೇಶಿಕತೆ ಬಂದರೆ, 'ಎಲ್ಲಾ ಬಣ್ಣ ಮಸಿನುಂಗಿತು' ಎಂಬಂತಾಗದಿರದು. ವ್ಯಾಪಾರ ವ್ಯವಹಾರಗಳಲ್ಲಿ ಕೇವಲ ಹೆಸರು-ಪ್ರಚಾರ-ಜಾಹೀರಾತು--ಅಗ್ಗದರಗಳಷ್ಟೇ ಅಲ್ಲ, ಮಾಲೂ ತಪ್ಪದೆ ಪ್ರತಿಸಲವೂ ಚೆನ್ನಾಗಿರಬೇಕಾದುದು ವ್ಯಾಪಾರ ಬಹಳಕಾಲ ಬಾಳಬೇಕಾದರೆ ಅಗತ್ಯ ಎಂಬುದನ್ನು ನಮ್ಮ ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳೂ ತಿಳಿದುಕೊಳ್ಳಬೇಕಾಗಿದೆ. ಓದುಗರ ಸಂಖ್ಯಾಬಲ ಹಾಗೂ ನಿಯತವಿಕ್ರಯ ಕಡಿಮೆಯಾಗಿರಲು ಮಾಲಿನ ನ್ಯೂನತೆ ಇಂದು ಬಹಳಮಟ್ಟಿಗೆ ಕಾರಣವಾಗಿದೆ. ಮಾಲಿನ ಉತ್ತಮಿಕೆಯನ್ನು ಅಳೆಯಬಲ್ಲ ಸುಸಂಸ್ಕೃತಾಭಿರುಚಿ ಇಂದು ಹೆಸರಾಂತವರಲ್ಲೂ ದುರ್ಲಭವಾಗಿರುವುದು ಶೋಚನೀಯ. ಎಲೆಮರೆಯ ಕಾಯಿಗಳಂತಿರುವ ಅಂಥವರನ್ನು ಪ್ರಕಾಶಕರು ಹುಡುಕಿಕೊಂಡು ತಮ್ಮ ಸಹಾಯಕ್ಕಿಟ್ಟು ಕೊಳ್ಳುವುದು ಅತ್ಯಗತ್ಯ Critics are sentinels in the grand army of letters ವಿಮರ್ಶಕರು ವೈಭವಪೂರ್ಣವಾದ ಸಾಹಿತ್ಯಸೈನ್ಯದ ರಕ್ಷಕರು ಎಂಬ ಮಾತನ್ನಿಲ್ಲಿ ನೆನೆದುಕೊಳ್ಳಬಹುದು.

ಪೂರ್ವಯೋಜನೆ ಅವಶ್ಯ

ವಿದ್ಯಾವಂತರಲ್ಲಿಯ ಪೂರ್ವಗ್ರಹ ಹಾಗೂ ಪ್ರಕಾಶಕರ ಅರೆವಿದ್ಯಾವಂತಿಕೆಗಳು ದೂರವಾದ ಹೊರತು ಕನ್ನಡ ಸಾಹಿತ್ಯವು ನಿರರ್ಗಳವಾಗಿ ಸುಫಲಗಳನ್ನು ಕೊಡದು. ಬಲ್ಲಿದರಿಗೆ ಹೇಳಿ ಬರೆಯಿಸುವ ರೂಢಿ ಇನ್ನೂ ನಮ್ಮಲ್ಲಿ ಬಂದಿಲ್ಲ. ಕೆಲ ಪತ್ರಿಕೆಗಳ ವಿಶೇಷ ಸಂಚಿಕೆಗಳಿಗೆ ಲೇಖನಗಳನ್ನು ಪಡೆಯುವಾಗ ಮಾತ್ರ ಈ ಪದ್ಧತಿಯನ್ನು ಬಳಸಲಾಗುತ್ತಿದೆ. ಅಂದರೆ ಪುಸ್ತಕಪ್ರಕಾಶಕರು ಯೋಜನಾಬದ್ಧರಾಗಿ ಕೆಲಸ ಮಾಡುತ್ತಿಲ್ಲ ಎಂದರ್ಥ. ಮೊನ್ನೆ ಮೊನ್ನೆ ದಕ್ಷಿಣ ಭಾರತ ಪ್ರಕಾಶಕರ ಸಂಘವನ್ನು ಕಟ್ಟಿದ ಸುದ್ದಿ ಹೊರಬಿದ್ದಿರುವುದು ಸ್ವಾಗತಾರ್ಹ. ಅಂಥ ಸಂಘಗಳು ಪ್ರತಿಯೊಂದು ಚಿಕ್ಕ ಪ್ರದೇಶದಲ್ಲೂ ಹುಟ್ಟಬೇಕು. ಆಗ ವಿಶ್ವಸ್ತನಿಧಿಗಳನ್ನು ಸ್ಥಾಪಿಸಿಕೊಂಡು ಮುಕ್ಕಳ,

ಪ್ರೌಢರ, ಹಳ್ಳಿಗಳ ಜನರ ಹಾಗೂ ರಾಜಕೀಯ, ಸಾಮಾಜಿಕ, ರಸಾತ್ಮಕ ಕೃತಿವರ್ಗಗಳನ್ನು ಪ್ರತ್ಯೇಕ ವೈಶಿಷ್ಟ್ಯವನ್ನಾಗಿ ಮಾಡಿಕೊಂಡು ಪ್ರಕಾಶಕ ಸಂಸ್ಥೆಗಳು ಕೈಹೊತ್ತಿಗೆಗಳನ್ನು ಹೊರಡಿಸಿದರೆ ಯಶಸ್ವಿಯಾಗಿ ವಾಙ್ಮಯ ಸೇವೆ ಮಾಡಲು ಬಹಳ ಕಾಲ ಸಮರ್ಥವಾದಾವು. ಪೆಂಗ್ವಿನ್, ಪೆಲಿಕನ್ ಹಾಗೂ ಥಿಂಕರ್ಸ್ ಲೈಬ್ರರಿ ಗ್ರಂಥಮಾಲೆಗಳು ಜಯಶಾಲಿಗಳಾದಂತೆಯೇ ಕೈಹೊತ್ತಿಗೆಗಳಾದರೂ ಆಗ ನವಕರ್ನಾಟಕದ ಎಂಟೂ ಮೂಲೆಗಳಲ್ಲಿ ಜನಪ್ರಿಯವಾದಾವು. Barkis is willing ಎಂಬಂತೆ ಉದ್ಯಮಿಗಳು ಇದಕ್ಕೆ ಮನಸ್ಸು ಮಾಡುವುದಷ್ಟೇ ಉಳಿದಿದೆ. ಸದ್ಯಃ ಫಲದಲ್ಲಷ್ಟೇ ದೃಷ್ಟಿಯಿಡದೆ ಕಾಲಾಂತರ ಫಲದ, ಚಿರಂಜೀವಿತ್ವದ ದೃಷ್ಟಿಯಿಟ್ಟುಕೊಂಡು ಸಹಕೃತ ಉದ್ಯಮವನ್ನು ಆರಂಭಿಸುವುದು ಕೈ ಹೊತ್ತಿಗೆಗಳ ಉದ್ಧಾರಕ್ಕೂ ಸಾಹಿತ್ಯದ ಉತ್ಕರ್ಷಕ್ಕೂ ಲೇಖಕ-ವಾಚಕರ ಉಪಕಾರಕ್ಕೂ ಕಾರಣವಾದೀತು. ಈ ಸಂದರ್ಭದಲ್ಲಿ ಮುದ್ರಣದ ಶುಚಿತ್ವವನ್ನು ಎತ್ತಿಹೇಳಬೇಕಾಗಿದೆ. ವಿಶ್ವವಿದ್ಯಾನಿಲಯಗಳು ಪ್ರಕಾಶಿಸಿದ ಪುಸ್ತಕಗಳಲ್ಲೂ ಹಲವು ಸ್ಖಾಲಿತ್ಯಗಳುಳಿದಿರುವುದು ಮುದ್ರಣ ಕಲೆಗಿಂದು ಲಾಂಛನಾಸ್ಪದ. ಜೊತೆಗೆ ಲೇಖಕಸ್ಖಾಲಿತ್ಯಗಳನ್ನು ತಿದ್ದಲು ತಕ್ಕ ವ್ಯವಸ್ಥೆಯನ್ನು ಪ್ರಕಾಶಕರು ಇಟ್ಟುಕೊಳ್ಳುವುದು ಕೆಲವೊಮ್ಮೆ ಆಗತ್ಯವೆನ್ನಬಹುದು. ಸ್ಫೂರ್ತಿನಿಷ್ಠೆಮಾತ್ರಉಳ್ಳ ಲೇಖಕರ ಬರೆಹಗಳನ್ನು ಪ್ರಕಾಶಿಸುವಾಗ ಈ ಆವಶ್ಯಕತೆ ತಲೆದೋರುತ್ತದೆ, ಅವುಗಳ ಸಂಪಾದನದಲ್ಲಿ.

Honesty is the measure of life—ಪ್ರಾಮಾಣಿಕತೆಯು ಜೀವನದ ಅಳತೆಯಾಗಿರುವಾಗ ಉದ್ಯಮದ ಅಳತೆಯಾಗದೆ ಉಳಿದೀತೇ? ಅಳತೆಯಷ್ಟೇ ಅಲ್ಲ, ಆತ್ಮ ಎಂದೆನ್ನಬಹುದು. ಕಾಲನಿಯಮ ವ್ಯಯನಿಯಮ, ಪರಿಶ್ರಮನಿಯಮ, ಪರಸ್ಪರ ಸಂಬಂಧ ನಿಯಮಗಳ ಅಭಾವವೇ ಇಂದೇನಾದರೂ ಕೈಹೊತ್ತಿಗೆಗಳ ಉದ್ಯಮ ಅಪದಶೆಗಿಳಿದಿದ್ದರೆ ಆದರ ಕಾರಣ ಪ್ರಾಮಾಣಿಕತೆಯಿಲ್ಲದಲ್ಲಿ ಯಾರಿಗೂ ಯಾವ ಕಾರ್ಯಫಲದಲ್ಲೂ ಗ್ಯಾರಂಟಿಯಿಲ್ಲ. ವಚನಭಂಗವು ಸಮಾಜದಲ್ಲಿಂದು ಕ್ಷಮ್ಯವಾಗುತ್ತಹೋಗಿರುವುದು ಅಕ್ಷಮ್ಯ. ಕಾಲನಿಯಮಮೀರುವುದು ಅತ್ಯಂತ ಹಾನಿಕರ. ಇವೆರಡೂ ಪರಸ್ಪರ ವಿಶ್ವಾಸವನ್ನು ಶಿಥಿಲಗೊಳಿಸಲು ಕಾರಣ. ವಿಶ್ವಾಸವಿಲ್ಲದಲ್ಲಿ ಸಂಘ ನಿಲ್ಲದು, ಸಂಸ್ಥೆ ನಿಲ್ಲದು. ಚಾಡಿ - ಛಿದ್ರಗಳು ಮಾಡು - ಗೋಡೆಗಳಾದಾಗ ಎಂಥ ಬೃಹದಾಕಾರದ ಕಟ್ಟಡದಲ್ಲಿ ನೆಲೆನಿಂತಸಂಸ್ಥೆಯಾದರೂ ಉರುಳದಿರದು. ಪರಹಿತಕ್ಕೆ ಪ್ರಾಧಾನ್ಯವಿಲ್ಲದಲ್ಲಿ ಜನರಿಂದ ಬಹಳ ಕಾಲ ಕೆಲಸ ಮಾಡಿಸಿಕೊಳ್ಳುವುದು ಅಸಾಧ್ಯ. ಪ್ರಜಾಪ್ರಭುತ್ವದ ಮುಖವೆನಿಸಿರುವ ಪ್ರಕಟನೋದ್ಯಮ ಯಶಸ್ವಿಯಾಗಿ ಸಾಗಬೇಕಾದರೆ ಪ್ರಕಾಶಕರ ದೃಷ್ಟಿಯು ಪ್ರಜೆಗಳ ಸದಭಿರುಚಿಯನ್ನು ತೃಪ್ತಿಪಡಿಸಿ, ಸಂವರ್ಧಿಸುವುದೇ ಆಗಿರಬೇಕು. ತತ್ಕಾಲದ ಅಪಜಯಕ್ಕಂಜದ ಸಂಸ್ಥಾಧೈರ್ಯವೊಂದೇ ಸುಕೃತಿಗಳ ಬೆಳೆಗೆ ಕಾರಣವಾದೀತು.

ಬರೆಹಗಾರರಿಗೆ ಧ್ಯೇಯಾರಾಧನೆ

ಇನ್ನು ಕೈಹೊತ್ತಿಗೆಯ ಬರೆಹಗಾರರಿಗಾದರೂ ಧ್ಯೇಯಾರಾಧನೆಯೊಂದೇ ಬಹಳ ಕಾಲ ಉತ್ತಮ ಲೇಖನಗಳನ್ನು ಬರೆಯುವ ಶಕ್ತಿಯನ್ನು ಕೊಡಬಲ್ಲುದು; ಉತ್ತಮ ಭಾಷಾಂತರ ವಸ್ತುಸಂಗ್ರಹಗಳನ್ನು ಆಕರ್ಷಕವಾಗಿ ಮಾಡಬಲ್ಲ ಕೌಶಲ-ಚೈತನ್ಯಗಳನ್ನುಕೊಟ್ಟೀತು; ಉತ್ತಮ ಕಥೆಗಳನ್ನು ಕಾದಂಬರಿಗಳನ್ನು ರಚಿಸುವ ಸ್ಫೂರ್ತಿಯನ್ನು ಒದಗಿಸೀತು. ಹೇಗೇ ಆಗಲಿ, ಪ್ರಕಾಶನವೊಂದು ಉದ್ಯಮವಾಗಿರುವಂತೆ ಲೇಖನವೂ ಒಂದು ಉದ್ಯಮವಾಗಿ ನಿಲ್ಲಲು ಕೈಹೊತ್ತಿಗೆಯ ಪ್ರಕಾಶಕರ ಸಹಕಾರ ಅನಿವಾರ್ಯ. ಅಂಥ ಉದ್ಯಮ ತನ್ನ ಕಲೆಗಾರಿಕೆಯನ್ನು ಉಳಿಸಿಕೊಳ್ಳಬೇಕಾದರೆ ಶಬ್ದಶುದ್ಧಿಯಿಂದ ಹಿಡಿದು ಅಭಿಪ್ರಾಯ ಕಲ್ಪನಾಶುದ್ಧಿಯವರೆಗೆ ಎಲ್ಲ ಹಂತದಲ್ಲೂ ಸಾಹಿತ್ಯ ಶುಚಿಯಾಗಿರಬೇಕೆಂಬ ರುಚಿದೃಷ್ಟಿ ಲೇಖಕರಲ್ಲಿ ಸ್ಥಾಯಿಯಾಗಿ ನಿಲ್ಲಬೇಕು. ಒಂದುಸಾರಿ ಓದಿ ಒಗೆಯುವಷ್ಟು ಚೆನ್ನಾದರೆ ಸಾಲದು; ಪದೇ ಪದೇ ಓದಿ ವಿಚಾರ-ವಿಮರ್ಶೆ-ಆಹ್ಲಾದಗಳನ್ನು ಪಡೆಯುವಂತಿ

ರಬೇಕು ನಮ್ಮ ಬರಹ-ಎಂಬ ದೃಷ್ಟಿಯಿಂದ ಬರೆದ ಬರೆಹಗಳನ್ನು ಕೊಳ್ಳದವರು ವಿರಳ "Literature is the immortality of speech—ಸಾಹಿತ್ಯವೆಂದರೆ ಮಾತಿನ ಅಮೃತ ಸ್ವರೂಪ" ಎಂಬ ಉಕ್ತಿಯನ್ನು ಜನ ಹೇಳಬೇಕು ಬರಹದ ಶೈಲಿಯನ್ನು ಕಂಡು ! ಅಂಥ ಶೈಲಿಯಲ್ಲದೆ ಕೇವಲ ಕಥಾಸ್ವಾರಸ್ಯವು ಎಂದಿಗೂ ಓದಿದ್ದನ್ನು ಮತ್ತೆ ಓದಬೇಕೆನ್ನಿಸದು. ಕೈಹೊತ್ತಿಗೆಯ ಪ್ರಕಾಶಕರಲ್ಲದೆ ಇತರ ಪ್ರಕಾಶಕರೂ ಈ ಅಂಶವನ್ನು ನೆನೆದೇ ಬರೆಹಗಳನ್ನು ಆಯ್ದುಕೊಂಡರೆ ಮಾತ್ರ ಅವರಿಗೆ ಒಮ್ಮೆಯಾದರೂ ಪುಸ್ತಕದ ಪುನರ್ಮುದ್ರಣ ಮಾಡಿಸುವ ಸಂತೋಷದ ಸಂದರ್ಭ ಸಿಕ್ಕೀತು. ಕನ್ನಡದ ಓದುಗರಿಗೂ ಒಮ್ಮೆ ಓದಿದ ಪುಸ್ತಕವನ್ನು ಮತ್ತೆ ಓದುವ ಅಭಿಲಾಷೆಯುಂಟಾಗುವುದೂ ಸಾಧ್ಯ.

ಪ್ರಕಾಶಕ ಲೇಖಕರ ಸಂಘಟನೆ

ದಕ್ಷಿಣ ಭಾರತದ ಪ್ರಕಾಶಕರ ಸಂಘ ಸಂಘಟಿಸಿದ್ದು ಸ್ವಾಗತಾರ್ಹ ಎಂದು ಹಿಂದೆ ಹೇಳಲಾಯಿತಷ್ಟೇ. ಲೇಖಕ ಸಂಘಗಳನ್ನು ಕಟ್ಟುವ ಪ್ರಯತ್ನಗಳೂ ಆಗಿವೆ, ಅವುಗಳಿಂದ ಏನೂ ಆಗದಿರುವದೂ ಕಂಡು ಬಂದಿದೆ. ಈ ಸಂದರ್ಭದಲ್ಲಿ ಲೇಖಕರೂ ಪ್ರಕಾಶಕರೂ ಒಟ್ಟಾಗಿ ಕಟ್ಟುವ ಸಂಘಗಳಿದ್ದರೆ ಒಳ್ಳೆಯದಾಗದೇ ? ಎನಿಸುತ್ತದೆ. ಸಿರಿ-ಸರಸ್ವತಿಯರ ಇಂಥ ಸಂಗತಿಯಿಂದ ಸಂಸ್ಥೆಗೆ ದೃಢವಾಗಿ ಕೀರ್ತಿಕರವಾದ ಸಾಹಿತ್ಯಸೇವೆಯನ್ನು ಬಹಳಕಾಲ ಮಾಡಲಾದೀತೆಂದು ಸಂಭಾವಿಸುವುದು ಸಹಜವಾಗದೇ ? ಪ್ರಕಾಶಕತ್ವಕ್ಕೆ ಲೇಖಕರೂ ವಿಮರ್ಶಕರೂ ಎರಡು ಕೈಗಳಿದ್ದಹಾಗೆ. ವಿಮರ್ಶಕರ ಸಂಪಾದಕತ್ವ, ಕಾವ್ಯಪರಿಚಯದ ಲೇಖನ, ಭಾಷಣಗಳು ಜನರಲ್ಲಿ ಕೃತಿಯಬಗ್ಗೆ ರತಿಯನ್ನುಂಟು ಮಾಡಬಲ್ಲವು. ಅವರೇ ಇಂದಿನ ಗಮಕಿಗಳು, ವ್ಯಾಖ್ಯಾತರು, ರಸ ಪ್ರಸಾರಕರು, ಜೀವಂತ ಜಾಹೀರಾತುಗಳು. "ರಾಷ್ಟ್ರಜೀವನವನ್ನು ರೂಪಿಸುವಲ್ಲಿ ಸಾಹಿತಿಯ ಮಹತ್ವದ ಪಾತ್ರವನ್ನು ಜನತೆಯು ಸರಿಯಾಗಿ ಮನಗಂಡಿಲ್ಲ" ಎಂದ ಬೇಂದ್ರೆಯವರ ವಸ್ತುಸತ್ಯೋದ್ಗಾರಕ್ಕೆ ಉಕ್ತರೀತಿಯ ಕಾವ್ಯಪ್ರಚಾರಕ ವರ್ಗದ ಸಹಾಯವನ್ನು ಪ್ರಕಾಶಕರು ಸಾಕಷ್ಟು ಪಡೆಯದಿರುವುದೇ ಕಾರಣ. ಆದರೆ ಪ್ರಕಾಶಕರು ಸದಸದ್ವಿವೇಕವಿಲ್ಲದ, ಪಕ್ಷವ್ಯಾಮೋಹವುಳ್ಳ ವಶೀಲಿಯ ವಕೀಲರನ್ನು ವಿಮರ್ಶಕರೆಂದು ತಿಳಿದು ಮೋಸಹೋದರೆ ತಮ್ಮ ಹಾಗೂ ಓದುಗರ ಕಾಲಮೇಲೆ ಕಲ್ಲುಹೊತ್ತು ಹಾಕಿಕೊಂಡ ಹಾಗೇ. ಪ್ರಕಾಶಕರು ಪ್ರಕಟಿಸಿದ ಪುಸ್ತಕಗಳ ವಿಮರ್ಶೆಗೆಂದೇ ಮೀಸಲಾದ ಪತ್ರಿಕೆಯೊಂದನ್ನು ನಡೆಸುವುದೂ ಇಂದು ಸ್ವಾಗತಾರ್ಹ. ಅಂಥ ಪತ್ರಿಕೆ ಕೇವಲ ಸ್ತೋತ್ರರತ್ನಾಕರವಾಗದಂತೆ ನೋಡಿಕೊಳ್ಳಲು ವಿಮರ್ಶಕರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿರಬೇಕು. ಸರಕಾರವು ನ್ಯಾಯ ಶಾಖೆಗೆ ಸಂಪೂರ್ಣ ಸ್ವಾತಂತ್ರ್ಯಕೊಟ್ಟಹಾಗೆ ! ಕೈಹೊತ್ತಿಗೆಗಾರರೂ ಈ ಅಂಶವನ್ನು ವ್ಯವಹಾರ್ಯವನ್ನಾಗಿ ಮಾಡಲು ಪ್ರಯತ್ನಪಡಬಹುದು. ದರಿದ್ರನಾರಾಯಣರ ನಾಡಾದ ಭಾರತವಿಂದು ಅಗ್ಗವಾಗಿ ಲಭಿಸುವ ಕೈಹೊತ್ತಿಗೆಗಳ ಹೊಸ ಹೊಸ ಪ್ರಕಾರಗಳನ್ನೇ ಸ್ವಾಗತಿಸುವುದು ಸಹಜವಾಗಿರುವಾಗ, ಆ ವಿಧಾನದಲ್ಲಿ ಹೆಚ್ಚಿನ ಶ್ರಮವಹಿಸಿ, ಯುಕ್ತ ಸುಧಾರಣೆ ಮಾಡಿ, ಜನರಲ್ಲಿ ಸದಭಿರುಚಿ-ಸದ್ಗುಣಪೂಜಕತೆಗಳನ್ನು ಬೆಳೆಯಿಸುವುದು ದೊಡ್ಡ ಸಮಾಜಸೇವೆ ಎನಿಸುತ್ತದೆ. ಪ್ರಜಾಪ್ರಭುತ್ವದ ಆರೋಗ್ಯಸಂವರ್ಧನೆಗೆ ಅಗತ್ಯವಾದ ವಿಚಾರಪ್ರಚೋದನೆಯನ್ನು ಅಂಥ ಹಸ್ತಪುಸ್ತಕಪರಂಪರೆ ಬಹಳ ಚೆನ್ನಾಗಿ ಮಾಡಬಲ್ಲುದು. ನವಕರ್ನಾಟಕ ಉದಯವಾಗುತ್ತಿರುವ ಈ ಅಮೃತಗಳಿಗೆಯಲ್ಲಿ ಕರ್ನಾಟಕದ ನಾನಾ ಭಾಗಗಳಲ್ಲಿಯ ಸಮಾಜ ಹಿತೈಷಿಗಳೂ ಸಾಹಿತ್ಯ ಪ್ರೇಮಿಗಳೂ ಸಾಹಿತ್ಯಕರ್ನಾಟಕವನ್ನು ದೃಢವಾದ ತಳಹದಿಯಮೇಲೆ ಕಟ್ಟಿ ನಿಲ್ಲಿಸಲು ಕಂಕಣ ತೊಟ್ಟಾರೆಂದು ಪ್ರಸ್ತುತ ಲೇಖಕನ ಆಸೆ. ಈ ಸನ್ನಿವೇಶದಲ್ಲಿ ಕೈಹೊತ್ತಿಗೆಗಾರರು ಇತೋಪ್ಯತಿಶಯ ಪ್ರಯತ್ನ ಮಾಡಿ Socialistic pattern of Society ಗೆ ಸಮವಾದ ತಮ್ಮ ಏಕೀಕರಣವನ್ನು ಸಮೀಕರಿಸಿಕೊಂಡು ಬಡ ಕನ್ನಡಿಗರ ಜ್ಞಾನ-ರಸ ಪಿಪಾಸೆಯನ್ನು ಹಿಂಗಿಸಿಯಾರೆಂದು ನಂಬುತ್ತೇನೆ.

ಹೊಸ ವಾರಸಾ-ವಿವಾಹ ಕಾಯ್ದೆಗಳು

ಹಿಂದೂ ಸ್ತ್ರೀಯರಿಗೆ, ಆಸ್ತಿಯಲ್ಲಿ ಹಕ್ಕು ಇರಲಿಲ್ಲ; ವಿವಾಹ ವಿಚ್ಛೇದನ ಸೌಕರ್ಯ ಇರಲಿಲ್ಲ. ಈ ವಿಷಮತೆಯನ್ನು ನಿವಾರಿಸಲು, ಬದಲಾದ ಪರಿಸ್ಥಿತಿಗನುಸರಿಸಿ ಸಮಾಜದಲ್ಲಿ ಸುಧಾರಣೆಮಾಡಿ ಅವರಿಗೆ ಹಕ್ಕಿನ ಸ್ಥಾನ ದೊರಕಿಸಿಕೊಡಲು, ಮಗಳಿಗೆ ಆಸ್ತಿಯಲ್ಲಿ ಪಾಲು ಕೊಡುವ, ಹೆಂಡತಿಗೆ ವಿವಾಹ ವಿಚ್ಛೇದನಕ್ಕೆ ಆಸ್ಪದ ಕೊಡುವ ಕಾಯ್ದೆಗಳನ್ನು ಮಾಡಲಾಗಿದೆ. ಅವುಗಳ ಉಪಯೋಗ ಮಾಡಿಕೊಳ್ಳುವದು ಮಹಿಳೆಯರನ್ನು ಅವಲಂಬಿಸಿದೆಯೆಂದು ಲೇಖಕಿ ಹೇಳುತ್ತಾರೆ:

★



ಲೇ : ಪ್ರೊ. ಸರೋಜಿನಿ ಮಹಿಷಿ,
ಎಂ.ಎ., ಎಲ್‌ಎಲ್. ಬಿ.,
ಜನತಾ ಕಾಲೇಜ. ಧಾರವಾಡ.

★

ಪ್ರಚಲಿತವಿದ್ದ ವಾರಸಾ ಹಾಗೂ ವಿವಾಹ ಕಾಯದೆಗಳ ಉಪಯೋಗವನ್ನು ತನಗನುಕೂಲವಾಗುವಂತೆ ಬಳಕೆಯಲ್ಲಿ ತಂದುಕೊಂಡು ಜೀವಿಸಿದ್ದ ವರ್ಗಕ್ಕೆ, ಹೊಸ ವಾರಸಾ ಹಾಗೂ ವಿವಾಹ ಕಾಯದೆಗಳು ಆಘಾತವನ್ನುಂಟುಮಾಡುತ್ತಿವೆಯೇನೋ ನಿಜ! ಆದರೆ ಈ ಕಾಯದೆಗಳು ಪಾಸಾಗುವ ಮೊದಲು ಸನಾತನಿಗಳಲ್ಲಿದ್ದ ಅಶಾಂತಿ, ಚಳವಳಿ, ಪಾಸಾದ ಮೇಲೆ ಕಂಡುಬರುತ್ತಿಲ್ಲ! ಉಂಟಾಗುವ ಕ್ರಮಾಗತ ವ್ಯತ್ಯಾಸಕ್ಕೆ ಈ ವರ್ಗಗಳು ಹೊಂದಿಕೊಂಡು ಹೋಗಲೂಬಹುದು.

ಹೊಸದಾಗಿ ಕ್ರೋಡೀಕರಿಸಲ್ಪಡುತ್ತಿರುವ ಹಿಂದೂ ಕಾಯದೆಯಲ್ಲಿ, ಹಳೆಯದರಿಂದ ಸಂಪೂರ್ಣ ಭಿನ್ನವಾದುದು ಕ್ರಾಂತಿಕಾರಿಯಾದುದು ಯಾವುದೂ ಇಲ್ಲ; ಆದರೆ ಬಹಳವಾಗಿ ವ್ಯತ್ಯಾಸ ಹೊಂದಿರುವ ಇಂದಿನ ಸಮಾಜಕ್ಕೆ ಅದು ಹೊಸದಾಗಿ ಕಾಣುತ್ತಿದೆ ಅಷ್ಟೇ ! ಕಾಯದೆಗಾಗಿ ಮನುಷ್ಯರು ಬದುಕಿಲ್ಲ, ಮನುಷ್ಯರಿಗಾಗಿ ಕಾಯದೆಗಳಿವೆ ಎಂಬುದನ್ನು ನೆನೆದಾಗ ಸಜೀವ ಸಮಾಜದಲ್ಲಿ, ಕಾಯದೆಯೂ ಅದರ ಪ್ರಗತಿಗೆ ಅನುಕೂಲವಾಗುವಂತೆ ವ್ಯತ್ಯಾಸ ಹೊಂದಬೇಕಾದುದು ಅನಿವಾರ್ಯವಾಗಿದೆ. ಯಜಮಾನನ ಆಸ್ತಿಯಾದ ಮನೆ, ಹೊಲ, ಮೋಟಾರು ಕಾರುಗಳೊಡನೆ ತಾನೂ ಆಸ್ತಿಯ ಒಂದು ಭಾಗವಾಗಿದ್ದ ಕಾಲದಿಂದ, ತಾನೇ ಆಸ್ತಿಯ ಒಡತಿಯಾಗುವ ಕಾಲದ ವರೆಗೂ ಇಂದಿನ ಸ್ತ್ರೀ ಸಾಮಾಜಿಕ—ಕಾನೂನುಗಳ ಇತಿಹಾಸದಲ್ಲಿ ಪುಟಗಳನ್ನು ಮಗುಚಿಹಾಕಿದ್ದಾಳೆ. ರಾಜ್ಯಘಟನೆಯಲ್ಲಿ ಅವಳೂ ಪುರುಷರೊಡನೆ ಸಮಾನಾಧಿಕಾರವನ್ನು ಪಡೆದಿದ್ದಾಳೆ. ಆದರೆ ಪುರುಷನಿಗೆ ದೇವನಿಂದ ಮುಕ್ತಿ ದೊರೆತರೆ, ಸ್ತ್ರೀಗೆ ಪುರುಷನಿಂದಲೇ ಮುಕ್ತಿ ಎಂದು ಹೇಳುವಂತೆ, ಪುರುಷನೊಡನೆ ಸಮಾನಾಧಿಕಾರವೆಂದರೇ ಸ್ತ್ರೀಯ ಮುಕ್ತಿಯಲ್ಲ. ಆದರೆ ಈ ವಿಷಯ ಗ್ರಂಥಸ್ಥವಾದರೂ ಪ್ರಯೋಗಕ್ಕಿಳಿಯಬೇಕಾದಲ್ಲಿ ಕ್ರಾಂತಿಯಿಲ್ಲದೆ ಗತ್ಯಂತರವಿಲ್ಲ. ೧೯೪೧ರಲ್ಲಿಯೇ ಕೇಂದ್ರವಿಧಿ ಮಂಡಳದಲ್ಲಿ ಬಂದ ಹಿಂದೂ ಕಾಯದೆಯ ಕ್ರೋಡೀಕರಣದ ಮಸೂದೆಯು ಬಹುಮತದಿಂದ ಪಾಸಾಗಿ ಹೊರಬರಬೇಕಾದರೆ ೧೯೫೬ರ ವರೆಗೂ ಕಾಯಬೇಕಾಯ್ತು ! ಸನಾತನಿಗಳನ್ನು ಮೆಚ್ಚಿಸಿ, ಚುನಾವಣೆಗಳಲ್ಲಿ ಮತ ಪಡೆಯಬೇಕೆಂಬ ಒಂದೇ ಗುರಿಯನ್ನು ಬಿಟ್ಟಿದ್ದರೆ, ಈ ಸಾಮಾಜಿಕ ಕಾನೂನು ಎಂದೋ ಪ್ರಚಾರದಲ್ಲಿ ಬರಬಹುದಿತ್ತು!

ವಾರಸಾ ಹಕ್ಕನ್ನು ಕುರಿತು ಮಹಿಳಾ ಪ್ರಪಂಚದಲ್ಲಿ ಪ್ರಾಧಾನ್ಯ ದೊರೆತದ್ದು ಪ್ರಥಮತಃ ವಿಧವೆಗೇ! ಮಗಳು, ತಾಯಿ ಇವರ ಪ್ರಶ್ನೆ ಆ ತರುವಾಯವೇ ! ವಿಧವೆಗೆ ಕಾನೂನಿನ ಮೇರೆಗೆ ಪ್ರಾರಂಭದಲ್ಲಿ ಕೊಡಲ್ಪಡಬೇಕಾದುದು ಅನ್ನ—ವಸ್ತ್ರ ಮಾತ್ರ : ಅದೂ ಒಟ್ಟು ಕುಟುಂಬದಲ್ಲಿ ದಾಯಾದರನ್ನೇ ಅವಲಂಬಿಸಿದ್ದು. ಅವಳ ಗಂಡನ ಆಸ್ತಿಯನ್ನು ಗಂಡುಮಕ್ಕಳು, ಅವರ ಅಭಾವದಲ್ಲಿ ಅವನ ಅಣ್ಣ—ತಮ್ಮಂದಿರು—ಅವರ ಮಕ್ಕಳು ಹಕ್ಕಿನಿಂದ ಉಪಭೋಗಿಸುತ್ತಿದ್ದರು. ವಿಧವೆಯ ಹೀನ ಸ್ಥಿತಿಯನ್ನು ನೋಡಲಾಗದೆ ೧೯೩೭ರಲ್ಲಿ ಕೇವಲ ಇಪ್ಪತ್ತು ವರ್ಷಗಳ ಹಿಂದೆ ಡಾ. ದೇಶಮುಖ ಅವರು ಈ ವಾರಸಾ ಹಕ್ಕಿನಲ್ಲಿ ಒಂದು ತಿದ್ದುಪಡಿಯನ್ನು ತಂದರು. ಅದಕ್ಕೆ ಈಗಲೂ ಡಾ. ದೇಶಮುಖ ಕಾಯದೆ, ಅಥವಾ ಹಿಂದೂ ಸ್ತ್ರೀಯರ ಆಸ್ತಿ ಹಕ್ಕಿನ ಕಾಯದೆ (Hindu Women's Right to property Act)ಎಂದು ಹೇಳುವರು. ಆದರೆ ಹೀಗೆ ಹೇಳುವದು ಎಷ್ಟು ಮಟ್ಟಿಗೆ ಯೋಗ್ಯವಾದೀತು ಎಂಬ ಸಂಶಯ ಅರ್ಥಪೂರ್ಣವಾಗಿದೆ. “ ಸ್ತ್ರೀಯರ ”ಎಂಬ ಶಬ್ದ ಇಲ್ಲಿದ್ದುದಾದರೂ ವಿಧವೆಯರನ್ನು ಮಾತ್ರ ಇಲ್ಲಿ ಲಕ್ಷ್ಯದಲ್ಲಿಡಲಾಗಿದೆ. ವಿಧವೆ, ಸ್ತ್ರೀ ನಿಜ! ಆದರೆ ಪ್ರತಿಯೊಬ್ಬ ಸ್ತ್ರೀಯೂ ವಿಧವೆಯಲ್ಲ, ಎಂಬುದನ್ನು ಮರೆಯುವಂತಿಲ್ಲ. ಅದೇ ಮೇರೆಗೆ “ಆಸ್ತಿಯ ಒಡೆತನ ” ವೆಂದಿದ್ದರೂ ಈ ಒಡೆತನ ಅವಳ ಜೀವಾವಧಿ ನಿಯಂತ್ರಿತ ಉಪಭೋಗದಲ್ಲಿ ಮಾತ್ರ ಸೀಮಿತವಾಗಿದೆ. ಜೀವಿಸಿದ್ದರೆ ಅವಳು ಗಂಡನಪಾಲಿಗೆ ಬರಬಹುದಾದ ಆಸ್ತಿಯನ್ನು, ಅವಳು ತನ್ನ ಜೀವವಿರುವವರೆಗೆ, ಅವಿಭಕ್ತ ಕುಟುಂಬದ ಒಟ್ಟು ಆಸ್ತಿಯಿಂದ ಪಡೆದು, ಇಲ್ಲವೆ ಮಗನೊಂದಿಗೆ ಸರಿಸಮಾನ ಪಾಲನ್ನು ಪಡೆದು, ಉಪಭೋಗಿಸಬಹುದು. ಅದರಂತೆ ವಿಧವೆಯಾದ ಸೊಸೆ, ಇಲ್ಲವೆ ವಿಧವೆಯಾದ ಮಗನ ಮಗನ ಹೆಂಡತಿ, ಇವರಿಗೂ ಈ ರೀತಿ ಪಾಲು ಪಡೆಯುವ ಅಧಿಕಾರವಿದೆ. ಆದರೆ ಪಡೆದ ಪಾಲನ್ನು ಈ ವಿಧವೆ ಮಾರುವಂತಿಲ್ಲ-ತನ್ನ ಮನಬಂದಂತೆ ವೆಚ್ಚ ಮಾಡುವಂತಿಲ್ಲ: ಮಕ್ಕಳು, ದಾಯಾದರು ಒಪ್ಪುವ ರೀತಿಯಲ್ಲಿ ಅವಳು ಅದನ್ನು ಉಪಭೋಗಿಸಬೇಕು. ಅವಳ ಮರಣದ ನಂತರ ಈ ಆಸ್ತಿ ಪುರುಷದಾಯಾದಿಗೆ ಸಲ್ಲಬೇಕಾದದ್ದು ! ಇದರ ಪರಿಣಾಮವಾಗಿ ಸತ್ತವನ ಮಗಳು, ತಾಯಿ, ಸಹೋದರಿ, ಮೊಮ್ಮಗಳು ಇವರಿಗೆಲ್ಲ ನ್ಯಾಯ ದೊರೆಯದೆ ಹೋಯಿತು !

ಹೊಸ ವಾರಸಾ ಕಾಯದೆಯ ಮೇರೆಗೆ ಒಟ್ಟು ಕುಟುಂಬದಲ್ಲಿ ಯಜಮಾನನ ಪಾಲಿಗೆ ಬಂದ ಆಸ್ತಿ, ಇಲ್ಲವೆ ಅವನೇ ಗಳಿಸಿದ್ದು, ಅವನ ಮರಣದ ನಂತರ ಕೆಳಗಿನ ವಾರಸದಾರರಲ್ಲಿ ಸರಿಯಾಗಿ

ಹಂಚಲ್ಪಡುವದು. ೧) ಮಗ ೨) ಸತ್ತಮಗನ ಮಗ ೩) ಸತ್ತಮಗನ ಸತ್ತಮಗನ ಮಗ ೪) ಮಗಳು ೫)ವಿಧವೆ ೬) ತಾಯಿ ೭) ಸತ್ತಮಗನ ಮಗಳು ೮) ಸತ್ತಮಗಳ ಮಗ ೯) ಸತ್ತಮಗಳ ಮಗಳು ೧೦) ಸತ್ತಮಗನ ವಿಧವೆ ಹೆಂಡತಿ ೧೧) ಸತ್ತಮಗನ, ಸತ್ತಮಗನ ಮಗಳು ೧೨) ಸತ್ತಮಗನ, ವಿಧವೆ ಸೊಸೆ—ಇವರಲ್ಲಿ ಜೀವಿಸಿದ್ದ ವಾರಸದಾರರಿಗೆ ಅವರ ಅಭಾವದಲ್ಲಿ ಅವರ ಮಕ್ಕಳು, ವಿಧವೆಯರಿಗೆ ಆಸ್ತಿ ದೊರೆಯಬೇಕಾದದು. ಮಗಳು ಅಥವಾ ಮಗನು ಜೀವಿಸಿದ್ದಲ್ಲಿ ಅವರ ಮಕ್ಕಳಿಗೆ ಪಾಲು ಸಿಗುವಂತಿಲ್ಲ. ಹನ್ನೆರಡು ಜನ ವಾರಸದಾರರಿಗೆ ಹಂಚಿಕೊಟ್ಟ ಮೇಲೆ ಆಸ್ತಿ ಏನು ಉಳಿದೀತು ? ಎಂಬ ಅಂಜಿಕೆಗೆ ಕಾರಣವಿಲ್ಲ: ಹಾಗೆ ನೋಡಿದರೆ ಮಗ, ಮಗಳು, ವಿಧವೆ, ತಾಯಿ ಇವರಿಷ್ಟೇ ವಾರಸದಾರರು. ಇವರ ಅಭಾವದಲ್ಲಿ ಉಳಿದವರ ಪ್ರಶ್ನೆ! ಇದರಲ್ಲಿರುವ ವ್ಯತ್ಯಾಸವೆಂದರೆ ಅಂದು ಮಗ, ಮಗನ ಮಗ, ಜೀವಿಸಿದ್ದಾಗ ಮಗಳಿಗೆ ಆಸ್ತಿ ದೊರೆಯುತ್ತಿರಲಿಲ್ಲ. ಇಂದು ಅವಳಿಗೂ ಪಾಲು ದೊರೆಯುತ್ತಿದೆ, ಅಣ್ಣ-ತಮ್ಮಂದಿರ ಜೊತೆಗೆ ಸರಿಯಾಗಿ ದೊರೆಯುತ್ತಿದೆ ಅಷ್ಟೇ! ಸತ್ತವನ ಮಗಳು ವಿವಾಹಿತಳಿರಲಿ, ಅವಿವಾಹಿತಳಿರಲಿ, ಹೇಗಿದ್ದರೂ ೧೯೫೬ ರ ಮೇ ತಿಂಗಳ ನಂತರ ಅವಳ ತಂದೆ ತೀರಿದ್ದಾದರೆ, ಅವನ ಆಸ್ತಿಯಲ್ಲಿ ಅವಳಿಗೂ ಸಮಾನ ಪಾಲು ದೊರೆಯುತ್ತದೆ. ಅದರಂತೆ ತಾಯಿ—ತಂದೆಗಳಿಲ್ಲದ ಮೊಮ್ಮಗಳು, ಮರಿಮಗಳಿಗೂ ಅಜ್ಜ-ಮುತ್ತಜ್ಜರ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಹಾಗೆ ಸತ್ತವನ ತಾಯಿ—ವಿಧವೆಯಿರಲಿ, ಸಧವೆಯಿರಲಿ, ಪುನರ್ವಿವಾಹಿತಳಿರಲಿ ಮಗನ ಆಸ್ತಿಯಲ್ಲಿ ಅವಳಿಗೂ ಒಂದು ಪಾಲು ದೊರೆಯಲೇ ಬೇಕು.

ನವೀನ ಯೋಜನೆಯ ಮೇರೆಗೆ ಮಗಳು ಹಾಗೂ ತಾಯಿಗೆ ಪಾಲು ದೊರೆತರೂ ಅವಿಭಕ್ತ ಕುಟುಂಬದಲ್ಲಿ ಅದು ಮಗನ ಪಾಲಿಗಿಂತ ಕಡಿಮೆಯೇ ! ಸ್ವತಃ ವಿಧವೆಗೇ ದೇಶಮುಖ ಕಾಯ್ದೆಯ ಮೇರೆಗೆ ದೊರೆಯುವ ಪಾಲಿಗಿಂತ ಕಡಿಮೆ ದೊರೆಯುತ್ತದೆ. ಅವಿಭಕ್ತ ಕುಟುಂಬ ಪದ್ಧತಿ ಸಮೂಲ ನಷ್ಟವಾಗದಿರುವದೇ ಇದಕ್ಕೆ ಕಾರಣ. ಚಿಕ್ಕ ಸಂಸ್ಥೆಯಂತೆ ಪರಂಪರಾಗತ ವ್ಯಾಪಾರೋದ್ಯಮಗಳನ್ನು ಬೆಳೆಸಿಕೊಂಡು ಬರಲು ಅನುಕೂಲ ಕಲ್ಪಿಸಿದ ಒಟ್ಟು ಕುಟುಂಬ ಇಂದಿನ ವಾತಾವರಣಕ್ಕೆ ಹಿಡಿಸುತ್ತಿಲ್ಲ. ಅವಿಭಕ್ತ ಕುಟುಂಬದ ಒಟ್ಟು ಆಸ್ತಿಗೆ ಪುರುಷರು ಮಾತ್ರ ವಾರಸದಾರರು ಎಂಬುದಕ್ಕೆ ೧೯೩೭ ಹಾಗೂ ೧೯೫೬ ಹೊಸ ವಾರಸಾ ಕಾಯ್ದೆಯಿಂದ ಬಲವಾದ ಆಘಾತವಾಗಿದೆ. ಅವಿಭಕ್ತ ಆಸ್ತಿಯನ್ನು ಮೃತ್ಯುಪತ್ರದ ಮುಖಾಂತರ ಯಾರಿಗೂ ಕೊಡಲಾಗದೆಂದಿದ್ದ ಕಾರಣದಿಂದ ಯಜಮಾನನ ಮರಣದ ತರುವಾಯ, ಅವನ ಪಾಲಿನ ವಾರಸದಾರನು ತಾನೇ ಯಜಮಾನನಾಗುತ್ತಿದ್ದನು. ಆದರೆ ಹೊಸ ವಾರಸಾ ಕಾಯ್ದೆ, ಪಾಲು ಪಡೆದ ಒಡೆಯನಿಗೆ ಅದನ್ನು ಮೃತ್ಯುಪತ್ರದಿಂದ ಬೇಕಾದವರಿಗೆ ಕೊಟ್ಟುಬಿಡುವ ಅಧಿಕಾರವನ್ನೂ ಕೊಟ್ಟಿದೆ.

ಮಗನೊಡನೆ ಮಗಳಿಗೆ ಸಮಾನ ಹಕ್ಕನ್ನು ದಯಪಾಲಿಸಿದ ಈ ವಾರಸಾ ಕಾಯದೆ, ಅವಿಭಕ್ತ ಕುಟುಂಬದ ಆಸ್ತಿಯಲ್ಲಿಯ ಪುತ್ರನ ಹಿರಿಮೆಯನ್ನು ಇದ್ದಕ್ಕಿದ್ದಂತೆ ಇಟ್ಟು ಹೊಸದನ್ನು ಜಾರಿಯಲ್ಲಿ ತರುವದು ಯಾವ ಉದ್ದೇಶದಿಂದಲೋ ! ಈ ಕುಟುಂಬದಲ್ಲಿ ಪರಂಪರೆಯಾಗಿ ಬಂದ ಒಟ್ಟು ಆಸ್ತಿಯಲ್ಲಿ ತಂದೆ ಜೀವಿಸಿದ್ದಾಗಲೇ ಮಗನು ತಂದೆಯೊಡನೆ ಸರಿಪಾಲಿಗೆ ಒಡೆಯನಾಗುತ್ತಾನೆ. ಅಂದರೆ ಎಂಟಾಣೆ ಪಾಲು ಆಗಲೇ ದೊರೆಯುತ್ತದೆ. ಬಳಿಕ ತಂದೆಯ ಮರಣದ ನಂತರ ಅವನ ಎಂಟಾಣೆ ಪಾಲಿನಲ್ಲಿ ಮತ್ತೆ ಮಗ, ಮಗಳು, ವಿಧವೆ, ತಾಯಿ ಎಲ್ಲರೂ ಸೇರಿ ಎರಡೆರಡಾಣೆ ಪಾಲು ಪಡೆಯುತ್ತಾರೆ. ಅಂದರೆ ಮಗನಿಗೆ ಹತ್ತಾಣೆ, ಮಗಳಿಗೆ ಎರಡಾಣೆ, ತಾಯಿಗೂ ದೊರೆಯುವದು ಎರಡಾಣೆ. ಆದರೆ ೧೯೩೭ರ ಕಾಯ್ದೆಯ ಮೇರೆಗೆ ತಾಯಿಗೆ ಎಂಟಾಣೆ ಪಾಲಿನ ಉಪಭೋಗ ಮೊದಲೇ ಸಿಕ್ಕಿದರೆ ೧೯೫೬ ಕಾಯದೆಯಲ್ಲಿ ಅವಳಿಗೂ ಮಗನ ಪಾಲಿನಲ್ಲಿ ಮತ್ತೆ ಒಂದಾಣೆ ದೊರೆಯುವದು.

ದೊರೆತ ಆಸ್ತಿಯ ಮರ್ಯಾದಿತ ಉಪಭೋಗಕ್ಕೆ ಮಾತ್ರ ಅಧಿಕಾರಿಯಾಗಿದ್ದ ಸ್ತ್ರೀ ಈಗ ತನಗೆ ಸಿಕ್ಕಿರುವ ಅಥವಾ ಸಿಗಲಿರುವ ಆಸ್ತಿಯ ಪೂರ್ಣ ಒಡೆತನಕ್ಕೆ ಬಾಧ್ಯಸ್ಥಳಾಗುವಳೆಂಬುವದೇ ಹೊಸ ವಾರಸಾ ಕಾಯ್ದೆಯ ಮುಖ್ಯ ಅಂಶ. ಇಂತಹ ಅವಳ ಆಸ್ತಿಗೆ ಯಾರು ವಾರಸದಾರರೆಂಬುದು ಮಹತ್ವದ ಪ್ರಶ್ನೆ ! ಅವಳ ಮೃತ್ಯುವಿನ ನಂತರ ಅವಳ ಒಡೆತನದಲ್ಲಿದ್ದ ಆಸ್ತಿ (೧) ಮಗ, ಮಗಳು ಹಾಗೂ ಪತಿ ಸೇರಿ—ಅವರ ಅಭಾವದಲ್ಲಿ (೨) ಪತಿಯಕಡೆಯ ವಾರಸದಾರರು—ಅವರ ಅಭಾವದಲ್ಲಿ (೩) ಅವಳ ತಾಯ್ತಂದೆಗಳು—ಅವರ ಅಭಾವದಲ್ಲಿ (೪) ತಂದೆಯ ವಾರಸದಾರರು—ಅವರ ಅಭಾವದಲ್ಲಿ (೫) ತಾಯಿಯ ವಾರಸದಾರರು-ಇವರಿಗೆ ಕ್ರಮವಾಗಿ ಉತ್ತರೋತ್ತರವಾಗಿ ಹೋಗುವದು. ತಂದೆಯಿಂದ ದೊರೆತ ಆಸ್ತಿಗೆ ಮಗ, ಮಗಳು, ಪತಿ ಇವರಿಲ್ಲದೆ ಹೋದರೆ ತಂದೆಯ ವಾರಸದಾರರು, ಪತಿಯಿಂದ ದೊರೆತ ಆಸ್ತಿಗೆ ಪತಿಯ ವಾರಸದಾರರು ಬಾಧ್ಯಸ್ಥರಾಗುತ್ತಾರೆ. ವಾರಸದಾರರಲ್ಲಿಯೂ ರಕ್ತಸಾಮೀಪ್ಯಕ್ಕೆ ಹೆಚ್ಚು ಪ್ರಾಧಾನ್ಯ ಕೊಡಲಾಗಿದೆ. ಯಜಮಾನನ ಮರಣಕಾಲದಲ್ಲಿ ಪತ್ನಿಯ ಗರ್ಭದಲ್ಲಿದ್ದ ಮಗುವಿಗೂ ಜನಿಸಿದೊಡನೆ ಸಮಾನ ಹಕ್ಕು ದೊರೆಯುತ್ತದೆ. ಯಜಮಾನನ ಮರಣಸಮಯದಲ್ಲಿ ಅವನ ಹೆಂಡತಿಯಾಗಿದ್ದವಳಿಗೆ ಮಾತ್ರ ವಿಧವೆಯೆಂದು ಹಕ್ಕು ದೊರೆಯುವದಲ್ಲದೆ, ಪುನರ್ವಿವಾಹಿತಳಿಗೆ ದೊರೆಯುವದಿಲ್ಲ. ಮಗಳು, ಅಕ್ಕ-ತಂಗಿಯರ ವಿಷಯದಲ್ಲಿ ಈ ಮಾತು ಅನ್ವಯಿಸದು : ಮಗಳು ಎಂದಿಗೂ ಮಗಳಾಗಿಯೇ ಉಳಿಯುವದರಿಂದ.

ವಿಭಜನೆ ಮಾಡಿಸಲು, ತನ್ನ ಪಾಲಿನ ಆಸ್ತಿಯನ್ನು ಬೇಡಲು ಮಹಿಳೆಗೆ ಹಕ್ಕಿದೆ. ಸ್ಥಾವರ ಅಥವಾ ವ್ಯಾಪಾರೋದ್ಯಮದಲ್ಲಿ ತನ್ನ ಪಾಲಿಗೆ ಬಂದದ್ದನ್ನು ಒಬ್ಬ ವಾರಸದಾರನು ಮಾರಿದರೆ ಇನ್ನೊಬ್ಬ ವಾರಸದಾರನಿಗೆ ಕೊಳ್ಳುವ ಹಕ್ಕಿದೆ.

ಇರುವ ಮನೆ ಹಕ್ಕಿನಲ್ಲಿ ಪಾಲಿಗೆ ಬಂದಿದ್ದರೆ, ಅದರಲ್ಲಿ ಕುಟುಂಬದ ಜನ ವಾಸವಾಗಿದ್ದರೆ, ಪುರುಷವಾರಸದಾರರು, ಅದನ್ನು ವಿಭಾಗ ಮಾಡಿದಾಗಲೇ ಸ್ತ್ರೀ ವಾರಸದಾರಳಿಗೆ ಪಾಲು ದೊರೆಯುವದು, ಹೊರತು, ಪಾಲು ಮಾಡಿಸಲು ಬಾರದು.

ಅವಳಿಗೆ ಆ ಮನೆಯಲ್ಲಿರಲು ಅಧಿಕಾರವಿದೆ. ಆದರೆ ಅವಳು ಈ ಮನೆತನಕ್ಕೆ ಮಗಳಾಗಿದ್ದರೆ, ಅವಿವಾಹಿತೆ, ಪರಿತ್ಯಕ್ತೆ, ವಿಧವೆಯಾಗಿದ್ದು ಇರಲು ಮನೆಯಿಲ್ಲದಿದ್ದರೆ ಮಾತ್ರ ಅವಳಿಗೆ ಇಲ್ಲಿರಲು ಹಕ್ಕಿದೆ.

೧೯೫೬ ರ ವರೆಗೆ ಮಹಿಳೆಯ ಆಸ್ತಿಯ ಒಡೆತನ ಯಾವ ರೂಪದಲ್ಲಿ ಬಂದಿದ್ದರೂ ಅದು ಸೀಮಿತವಾಗಿತ್ತು. ೧೯೩೭ ಕ್ಕಿಂತ ಮೊದಲು ಅನ್ನ ವಸ್ತ್ರಗಳಿಗೆ ಮಾತ್ರ ಅವಳು ಬಾಧ್ಯಸ್ಥಳಾಗಿದ್ದಳು. ೧೯೩೭ ರ ನಂತರ ಪತಿಯ ಆಸ್ತಿಯನ್ನು ಮಗನೊಡನೆ ಸಮಾನವಾಗಿ ಪಡೆದರೂ ಅದನ್ನು ಮನಬಂದಂತೆ ದಾನ, ಧರ್ಮ, ಯಾತ್ರೆ-ತೀರ್ಥಗಳಿಗೆ ಇಲ್ಲವೆ ಬಕ್ಷೀಸು ಕೊಡಲು, ಇಲ್ಲವೆ ಮಾರಲು ಅವಳಿಗೆ ಹಕ್ಕಿರಲಿಲ್ಲ. ಹೊಟ್ಟೆಗೆ ತೊಂದರೆಯಾದಾಗಲೂ ಅವಳು ಮಾರಹೋದರೆ ಜನ ಅವಳಿಂದ ಆಸ್ತಿಯನ್ನು ಕೊಂಡುಕೊಳ್ಳಲು ಅಂಜುತ್ತಿದ್ದರು. ಅವಳ ಕಡೆಗಿದ್ದ ಯಾವದೇ ಬಗೆಯ ಆಸ್ತಿ – ಬಕ್ಷೀಸ ದೊರೆತದ್ದಿರಬಹುದು, ಸ್ವತಃ ಗಳಿಸಿದ್ದಿರಬಹುದು ಆದರೆ ಅದರ ಮೇಲೆಯೂ ಅವಳಿಗೆ ಒಡೆತನವಿರಲಿಲ್ಲ.

ಆದರೆ ಇಂದು ವಾರಸಾದಿಂದ, ಮೃತ್ಯುಪತ್ರದ ಬಲದಿಂದ, ಇನಾಮಾಗಿ, ಇಲ್ಲವೆ ಪೋಟಗಿದಾಗಿ, ಇಲ್ಲವೆ ಸ್ವಂತ ಗಳಿಸಿದ್ದೆಂದು—ಯಾವದೇ ಬಗೆಯಲ್ಲಿ ಸ್ತ್ರೀಯ ಬಳಿಯಲ್ಲಿ ವಿವಾಹಕ್ಕೆ ಮೊದಲು ಅಥವಾ ನಂತರ ದೊರೆತ ಆಸ್ತಿಯಿದ್ದರೆ – ಅದಕ್ಕೆ ಕೋರ್ಟು ಯಾವುದೇ ಬಗೆಯಿಂದ ಬೇಕೆಂದು ನಿರ್ಬಂಧ ಹಾಕದಿದ್ದರೆ— ಆ ಆಸ್ತಿಗೆ ಅವಳೇ ಸಂಪೂರ್ಣ ಒಡತಿ!

೧೯೩೭ ರ ಕಾಯದೆಯ ಮೇರೆಗೆ ಸಿರಿವಂತ ಮುದುಕನ ತರುಣ ವಿಧವೆ-ವಿಧವೆಯೆಂದಿರುವವರೆಗೆ ಮಾತ್ರ ಮಗನೊಡನೆ ಸಮಾನ ಆಸ್ತಿಯ ಸೀಮಿತ ಉಪಭೋಗಕ್ಕೆ ಸ್ವಾಮಿನಿ. ಅವಳು ಪುನರ್ವಿವಾಹಿತಳಾದದ್ದೇ ಆದರೆ, ಅವಳಿಗೆ ಆಸ್ತಿಯ ಮೇಲೆ ಯಾವ ಹಕ್ಕೂ ಇಲ್ಲ. ಆದರೆ ಇಂದು ಅವಳು ಆ ಆಸ್ತಿಯನ್ನು ಮಾರಬಹುದು, ತನಗೆ ಬೇಕಾದವರಿಗೆ ಕೊಟ್ಟುಬಿಟ್ಟು, ಬೇಕಾದವರನ್ನು ಮತ್ತೆ ಮದುವೆಯಾಗಬಹುದು. ವಿಧವಾ ವಿವಾಹಕ್ಕೆ ಕಾಯ್ದೆಯಿಂದ ತಡೆಯಿಲ್ಲದಿದ್ದರೂ ಆಸ್ತಿಯ ಸೀಮಿತ ಒಡೆತನ ವಿಧವೆಯನ್ನು ಪುನರ್ವಿವಾಹಕ್ಕೆ ಇದುವರೆಗೆ ಪ್ರೇರೇಪಿಸಲಿಲ್ಲ.

ಸ್ತ್ರೀ – ಪುರುಷ ಸಮಾನತೆಯನ್ನು ಒಪ್ಪಿಕೊಂಡರೂ ವಾಸ್ತವದಲ್ಲಿ ಈ ಸಮಾನತೆ ಕಂಡು ಬರುತ್ತಿಲ್ಲ; ಸಂಯುಕ್ತ ಕುಟುಂಬದ ಅಸ್ತಿತ್ವ ಪೂರ್ಣ ಅಳಿಸಿ ಹೋಗಿಲ್ಲ-ಜೊತೆಗೆ ಮಗನ ಹಿರಿಮೆಯೂ! ಆದರೆ ೧೯೫೬ ರಿಂದ, ಇದ್ದ ಆಸ್ತಿಯ ಸೀಮಿತ ಒಡೆತನವನ್ನು ಪೂರ್ಣವಾಗಿರಿಸುವಲ್ಲಿ ಈ ಕಾಯಿದೆ ಒಂದು ಹೆಜ್ಜೆಯನ್ನು ಮುಂದಿರಿಸಿದೆ.

ಸ್ತ್ರೀ ಅಜ್ಞಾನಿ, ಮಗಳಿಗೆ ವಾರಸಾ ಹಕು ಕೊಟ್ಟರೆ ಸಹೋದರ-ಸಹೋದರಿಯರಲ್ಲಿ ಪ್ರೀತಿ ಕಡಿಮೆಯಾಗುತ್ತದೆ, ಆಸ್ತಿ ಹರಿದು ಹಂಚಿದಂತಾಗುತ್ತದೆ ಇತ್ಯಾದಿ ಕಾರಣಗಳನ್ನು ಕೊಟ್ಟು ಹಿಂದೂ ಕೋಡ ಬಿಲ್ಲನ್ನು ವಿರೋಧಿಸಿದ ಸ್ತ್ರೀ-ಪುರುಷ ಸನಾತನಿಗಳ ಮತವನ್ನು ಲಕ್ಷಿಸದೆ, ಕಾಯ್ದೆ ಮುಂದುವರಿದುದು ಸಾಮಾಜಿಕ ಕಾನೂನಿನ ಇತಿಹಾಸದಲ್ಲಿ ಮಹತ್ವದ ಪುಟವಾಗಿದೆ. ನ್ಯಾ. ಗಜೇಂದ್ರಗಡಕರರು ಹೇಳುವಂತೆ ಎಷ್ಟು ಜನ ಅಜ್ಞಾನಿಗಳಾದ ಪುರುಷರು ದೊಡ್ಡ-ದೊಡ್ಡ ಆಸ್ತಿಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿಲ್ಲ? ಆಸ್ತಿಯಿಲ್ಲವೆಂದ ಮಾತ್ರಕ್ಕೆ ತಮ್ಮ-ತಂಗಿಯರಲ್ಲಿ ಪ್ರೀತಿಯಿದ್ದೇ ಇದೆಯೇ? – ಸ್ತ್ರೀ ಎಚ್ಚತ್ತು ಸಾಮಾಜಿಕ ಪ್ರಜ್ಞೆಯನ್ನು ಪಡೆದದ್ದಾದರೆ, ವಾಸ್ತವದಲ್ಲಿಯೇ ಸಮಾನ ಹಕ್ಕು ಅವಳಿಗೆ ದೊರೆತೀತು!

ವಾರಸಾ ಕಾಯದೆಯಂತೆ ಮಹಿಳಾ ಪ್ರಪಂಚದಲ್ಲಿ ವಿವಾಹದ ಕಾಯ್ದೆ ಅದಕ್ಕಿಂತ ಹೆಚ್ಚಾಗಿ ಅದರ ಜೊತೆಗೆ ಬರುವ ವಿಚ್ಛೇದದ ಅನುಕೂಲ– ಒಂದು ಕ್ರಾಂತಿಯನ್ನೇ ಸಮಾಜದಲ್ಲಿ ಎಬ್ಬಿಸಿದೆ. ಹಿಂದೂ ಧರ್ಮಶಾಸ್ತ್ರದ ಮೇರೆಗೆ, 'ವಿವಾಹ' ಒಂದು ಸಂಸ್ಕಾರ–ಸ್ತ್ರೀಯ ಜೀವನದಲ್ಲಿ ಒಂದೇ ಒಂದಾದ ಸಂಸ್ಕಾರ! ವ್ಯಾವಹಾರಿಕ ಅನುಕೂಲತೆಗಾಗಿ ಮಾಡಿಕೊಂಡ ಕರಾರಲ್ಲ! ವಿವಾಹದ ನಂತರ ಸತಿಯು ಪತಿಯ ಗೋತ್ರದಲ್ಲಿ ಒಂದಾಗಿ ಬಿಡುತ್ತಾಳೆ-ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ ವಿಧಿಗಳಲ್ಲಿ ವಿವಾಹವಾಗಿದ್ದರೆ! ಹೀಗಿದ್ದು ಕೂಡ ಸ್ಮೃತಿಕಾರರು ಕೆಲವು ಸಂದರ್ಭಗಳಲ್ಲಿ ವಿಚ್ಛೇದವನ್ನೂ ಅವಳ ಪುನರ್ವಿವಾಹವನ್ನೂ ಒಪ್ಪಿಕೊಂಡಿದ್ದಾರೆ.

"ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇಚ ಪತಿತೇ ಪತೌ" . . . . ಈ ಪ್ರಸಂಗದಲ್ಲಿ ಆ ಸ್ತ್ರೀ ಬೇರೆಯವನನ್ನು ಮದುವೆಯಾಗಬಹುದು ಎಂಬುದನ್ನು ಮನುವೇ ಒಪ್ಪಿದ್ದಾನೆ. ಆದರೂ ರೂಢವಾಗಿದ್ದುದು ಬೇರೆಯೇ. ಪತಿಗೆ, ಸತಿಯು ಅನೀತಿಯವಳಾಗಿದ್ದರೆ, ಮಕ್ಕಳಿಗೆ ಜನ್ಮಕೊಡಲು ಅಸಮರ್ಥಳಾಗಿದ್ದರೆ, ರೋಗಿಯಾಗಿದ್ದರೆ, ಅವಳನ್ನು ತ್ಯಜಿಸುವ ಅಧಿಕಾರವುಂಟು. ಆದರೆ ಸತಿಯಾದವಳಿಗೆ, ಪತಿ ಎಂತಹ ಪೀಡೆಕೊಟ್ಟರೂ ಅವನ ಮನೆಯಲ್ಲಿದ್ದು ಆಜ್ಞೆ ಪಾಲಿಸುವದೇ ಕರ್ತವ್ಯ. ಮಹಮ್ಮದೀಯರಲ್ಲಾಗಲಿ, ಬೇರೆ ಧರ್ಮದಲ್ಲೇ ಆಗಲಿ ಈ ಬಗೆಯ ಅಸಮಾನತೆ ಕಾಣದು. ಹಿಂದುಗಳಲ್ಲಿಯೇ ಒಂದು ಭಾಗವಾದ ಶೂದ್ರರಲ್ಲಿ ಈ ವಿಚ್ಛೇದದ ಅವಕಾಶ ಸತಿಗೂ ಪತಿಗೂ ಸಮಾನವಾಗಿಯೇ ಇದೆ.

ಸ್ಮೃತಿಕಾರರು ಅಂದಿನ ಸಮಾಜಕ್ಕೆ ಅನುಕೂಲವಾಗುವಂತೆ ಕಾನೂನುಗಳನ್ನು ಮಾಡಿ, ಇದ್ದ ಕಾನೂನುಗಳಲ್ಲಿ ಇಷ್ಟವಾದ ವ್ಯತ್ಯಾಸವನ್ನು ತಂದರೆಂಬ ಅಂಶವನ್ನೇ ನಾವು ಮರೆಯುತ್ತೇವೆ. ವಿಧವೆಯಾದ ಅತ್ತಿಗೆಯನ್ನು ಕುಲದ ಪ್ರಜಾತಂತುವನ್ನು ಕಾಯಲು, 'ನಿಯೋಗ' ದ ಮೂಲಕವಾಗಿ ಒಪ್ಪಿಸುವದು ಸ್ಮೃತಿಕಾರರು ಒಪ್ಪಿದ ಮಾತು: ಸಮಾಜದ ಬಲವನ್ನು ಕಾಯಲು ಮಹಮ್ಮದೀಯರಿಂದ ಅಪಹೃತರಾದ ಸ್ತ್ರೀಯರನ್ನೂ ಶುದ್ಧೀಕರಿಸಿ ಪುನಃ ಸಮಾಜದಲ್ಲಿ ಸೇರಿಸಿಕೊಳ್ಳಬೇಕೆಂಬುದಕ್ಕೆ ೧೩ನೆಯ ಶತಮಾನದ ದೇವಲ ಸ್ಮೃತಿಯಲ್ಲಿ ಕಾನೂನಿನ ವ್ಯತ್ಯಾಸವನ್ನು ಕಾಣಬಹುದು.

ಬಾಲವಿವಾಹಕ್ಕೆ ಅನುಮತಿಯಿತ್ತ ಸಮಾಜ ಅದರ ಫಲವಾದ, 'ವಿಧವಾವಿವಾಹ'ವನ್ನು ಒಪ್ಪಿಕೊಳ್ಳದೆ ಹೋದರೆ ಸಮಾಜದ ಗತಿ ಏನಾಗಬೇಕು? ಈ ಸಂಖ್ಯೆಯನ್ನು ಕಡಿಮೆ ಮಾಡಲೆಂದು ೧೯೨೯ರಲ್ಲಿ ಸರಕಾರವು 'ಬಾಲವಿವಾಹ ನಿರ್ಬಂಧಕ' ಕಾಯ್ದೆಯನ್ನು ಮಾಡಿತು. "ವಿಧವಾ ಪುನರ್ವಿವಾಹ ಕಾಯ್ದೆ'' ೧೮೫೬ರಲ್ಲಿಯೇ ಪಾಸಾಗಿದ್ದರೂ, ಅದರ ಪ್ರಚಾರ ಬಳಕೆಯಲ್ಲಿ ಬಂದಿರಲಿಲ್ಲ. ವಿಧವೆಯನ್ನು ವಿಧವೆಯಾಗಿಯೇ ಇಡುವದು ಹಿಂದೂ ಸಮಾಜದಲ್ಲಿ ಗೌರವದ ವಿಷಯ! ಆದರೆ ಸರಕಾರವು ವಿಧವಾ ವಿವಾಹದಿಂದುಂಟಾಗಬಹುದಾದ ಕಾನೂನಿನ ದೌರ್ಬಲ್ಯವನ್ನು ಕಿತ್ತೊಗೆದು ಅಭಯವನ್ನಿತ್ತಿತು—ಹಿಂದುಗಳ ಪುನರ್ವಿವಾಹ, ಅದರಿಂದಾಗಬಹುದಾದ ಸಂತತಿ ಕಾಯದೆ ಬದ್ಧವೆಂದು ಸಾರಿತು: ಸತಿ ಹೋಗುವದನ್ನು ಕಾಯದೆಯಿಂದ ನಿಲ್ಲಿಸಿ ಅಪ್ರತ್ಯಕ್ಷವಾಗಿ ವಿಧವಾ ವಿವಾಹಕ್ಕೆ ಪ್ರೋತ್ಸಾಹವನ್ನಿತ್ತಿತು.

೧೮೬೯ರ "ಭಾರತೀಯ ವಿವಾಹ ವಿಚ್ಛೇದನ ಕಾಯ್ದೆ'' ಬಳಕೆಯಲ್ಲಿ ಬಂದರೂ ಅಲ್ಲಿ ಅರ್ಜದಾರನು ಈಸಾಯಿ ಮತದವನೇ ಆಗಿರಬೇಕೆಂಬ ನಿರ್ಬಂಧವಿತ್ತು. ಅದರಂತೆ ೧೮೭೨ರ 'ವಿಶೇಷ ವಿವಾಹ ಕಾನೂನು,' ಬ್ರಾಹ್ಮೊ ಸಮಾಜದ ಸುಧಾರಕರಿಗೆ ಮಾತ್ರ ಅನ್ವಯಿಸಿತು—ಬ್ರಾಹ್ಮೊ ಸಮಾಜಕ್ಕೆ ಸೇರಿದ ವಿಧವೆಯರು, ಪರಿತ್ಯಕ್ತೆಯರು ಎಲ್ಲರೂ ಅದರಲ್ಲಿ ಸಮಾವಿಷ್ಟರಾದರು. ೧೯೨೩ರಲ್ಲಿ ಈ "ವಿಶೇಷ ವಿವಾಹ ಕಾನೂನಿನ'' ಸೌಕರ್ಯ ಹಿಂದೂ, ಬೌದ್ಧ, ಸೀಖ, ಜೈನರಿಗೂ ಕೊಡಲ್ಪಟ್ಟಿತು—ಯಾವುದೇ ಜಾತಿ—ಗೋತ್ರಗಳ ನಿರ್ಬಂಧವಿಲ್ಲದೆ ನೋಂದಣಿ ಮಾಡಿಸಿ ವಿವಾಹವಾಗಬಹುದೆಂಬುದು—ಆದರೆ ಅದನ್ನು ಬಳಕೆಯಲ್ಲಿ ತರುವದು ಅಷ್ಟೊಂದು ಗೌರವದ ಮಾತಾಗಿಲ್ಲ.

ವಾರಸಾ ಕಾಯದೆಯಂತೆ ವಿವಾಹಕಾಯದೆಯೂ ಹಲವು ವ್ಯತ್ಯಾಸಗಳನ್ನು ಕ್ರೋಡೀಕೃತ ಹಿಂದೂ ಕಾಯದೆಯಲ್ಲಿ ಕಾಣಿಸಿದೆ. ಸ್ಮೃತಿಕಾರರು ಒಂದು ಕಾಲಕ್ಕೆ ಅವುಗಳನ್ನೊಪ್ಪಿಕೊಂಡಿದ್ದರೂ ಇಂದಿನ ವಾತಾವರಣ ನಮ್ಮ ಸಂಕುಚಿತ ವೃತ್ತಿಗಳಿಗನುಗುಣವಾಗಿ, ಅವು ಕ್ರಾಂತಿಕಾರಿಗಳೆಂದು ಕಂಡು ಬರುತ್ತಿವೆ.

'ಹಿಂಧೂ ವಿವಾಹ ಬಿಡಿಸಲಾರದ ಧಾರ್ಮಿಕ ಗಂಟು;...ಒಂದು ಸಂಸ್ಕಾರ! ವಿಚ್ಛೇದ ಪುನರ್ವಿವಾಹಗಳಿಂದ ಸಮಾಜದ ನೀತಿ ಹಾರಿಹೋಗುತ್ತದೆ ಅಲ್ಲದೆ ಹಿಂದೂ ಮಹಿಳೆ ವಿಚ್ಛೇದಕ್ಕೆ ಪುನರ್ವಿವಾಹಕ್ಕೆ ಒಪ್ಪುವದು ಸಾಧ್ಯವೇ ಇಲ್ಲ'—ಇವೇ ಮೊದಲಾದವು ಹಿಂದೂ ಕೋಡ ಬಿಲ್ಲಿನ ವಿರೋಧಕರು ಕೊಡುವ ಕಾರಣಗಳು: ಹಿಂದೂ ಮಹಿಳೆ ಆರ್ಥಿಕ ಬೆಂಬಲವಿಲ್ಲದೆ, ಧೈರ್ಯಸಾಲದೆ ಮೂಕಳಾಗಿದ್ದರೆ, ಅದು ಸಮ್ಮತಿಯೆಂದು ತಿಳಿಯಬಹುದೇ? ಪುರುಷ ಬೇಕಾದಷ್ಟು ಜನರನ್ನು ಮದುವೆಯಾಗಿ, ಮನೆಯನ್ನು ಮೊಗಲರ ಅಂತಃಪುರವನ್ನಾಗಿ ಮಾಡಬಹುದು; ಸ್ತ್ರೀ ಮಾತ್ರ ಅವನು ಸತ್ತಮೇಲೆಯೂ ಅವನ ಹೆಂಡತಿಯಾಗಿಯೇ ಬದುಕಬೇಕು! ಸದ್ಯಕ್ಕೆ ದ್ವಿಭಾರ್ಯಾ ಪ್ರತಿಬಂಧಕ ಕಾಯ್ದೆ ಮುಂಬಯಿ ಪ್ರಾಂತದ ಮಟ್ಟಿಗೆ ಪ್ರಚಾರದಲ್ಲಿದ್ದರೂ ಪಾಸಾಗಿರುವ 'ಹಿಂದೂ ಕಾಯ್ದೆ'ಯ ಕ್ರೋಡೀಕೃತ ಸ್ವರೂಪದಲ್ಲಿ, ಈ ಕಾಯದೆ ಕೆಲವೊಂದು ಅಪವಾದಗಳನ್ನು ಬಿಟ್ಟು, ಭಾರತದಲ್ಲಿ ಸಾರ್ವತ್ರಿಕವಾಗಿ ಅನ್ವಯಿಸಲ್ಪಡುತ್ತದೆ.

ಹೊಸ 'ಹಿಂದೂ ಕಾಯ್ದೆ' ಪ್ರಚಾರದಲ್ಲಿ ಬರುವದಕ್ಕೆ ಮೊದಲು, ಇರುವ ನ್ಯಾಯಾಲಯಗಳಲ್ಲಿ ವಿವಾಹ ವಿಷಯಕ ಪ್ರಮಾಣ ಗ್ರಂಥವಾಗಿರುವದು ಯಾಜ್ಞ್ಯವಲ್ಕ್ಯಸ್ಮೃತಿಯೇ!

ಅವಿಲುಪ್ತ ಬ್ರಹ್ಮಚರ್ಯಾಂ ಲಕ್ಷಣ್ಯಾಂ
ಸ್ತ್ರೀಯಮುದ್ವಹೇತ್ ।
ಅನನ್ಯಪೂರ್ವಿಕಾಂ ಕಾಂತಾಮಸಪಿಂಡಾಂ
ಯವೀಯಸೀಂ ॥
ಅರೋಗಿಣೀಂ ಭ್ರಾತೃಮತೀಮಸಮಾನಾರ್ಷ
ಗೋತ್ರಜಾಂ ।
ಪಂಚಮಾತ್ ಸಪ್ತಮಾದೂರ್ಧ್ವಂ ಮಾತೃತಃ
ಪಿತೃತಸ್ತಥಾ ॥

ಸಮಾನಗೋತ್ರಜರಲ್ಲಿ ಮದುವೆ ಹೇಗೆ ನಿಷಿದ್ಧವೋ ಹಾಗೆ ಸೋದರರಿಲ್ಲದವಳೊಡನೆ ಮದುವೆಯೂ ನಿಷಿದ್ಧವಾದೀತು. ಇದು ಕೇವಲ ರೂಢಿ ಮಾಧವರಾವ: ವ್ಹಿ: ರಾಘವೇಂದ್ರರಾವ್ ಪ್ರಕರಣದಲ್ಲಿ ಸಮಾನ ಗೋತ್ರಜರ ವಿವಾಹವೂ ರೂಢಿಯಿಂದ ಸ್ವೀಕೃತವಾದದ್ದನ್ನು ಕಾಣಬಹುದು.

ಅಂತರ್ಜಾತೀಯ ವಿವಾಹವನ್ನು ಮುಂಬಯಿ ಪ್ರಾಂತವೊಂದರಲ್ಲಿ ಬಿಟ್ಟು ಉಳಿದೆಡೆಗಳಲ್ಲಿ ನ್ಯಾಯ ಒಪ್ಪುವದಿಲ್ಲ. ಮುಂಬಯಿಯಲ್ಲಿಯೂ ಶೂದ್ರನೊಡನೆ ಬ್ರಾಹ್ಮಣಸ್ತ್ರೀಯ ವಿವಾಹ ಸಮ್ಮತವಿರಲಿಲ್ಲ! ಆದರೆ ಸದ್ಯದ ಹಿಂದೂ ಕಾಯ್ದೆ, ಹಿಂದುಗಳಿಗೆಲ್ಲ ಸಮಾನವಾಗಿ ಅನ್ವಯಿಸುವದು—ಶೈವ, ಜೈನ, ಬೌದ್ಧ, ಆರ್ಯ ಸಮಾಜ, ಬ್ರಾಹ್ಮೊ ಎಲ್ಲರಿಗೂ!

ಈ ಕಾಯ್ದೆಯ ಎರಡನೆಯ ಭಾಗದ ಮೊದಲನೆಯ ಪ್ರಕರಣ (೧) ಧಾರ್ಮಿಕ ವಿವಾಹ (೨) ನಾಗರಿಕ ವಿವಾಹ ಎಂದೆರಡು ಬಗೆಯಾಗಿ ವಿವಾಹದಲ್ಲಿ ವ್ಯತ್ಯಾಸವನ್ನು ಕಲ್ಪಿಸಿದೆ. ಮೊದಲನೆಯದರಲ್ಲಿ - ಒಬ್ಬನಿಗೆ ಒಬ್ಬಳೇ ಪತ್ನಿ, ಒಬ್ಬಳಿಗೆ ಒಬ್ಬನೇ ಪತಿ ಇರಬೇಕು (೨) ವಿವಾಹ ಮಾಡಿಕೊಳ್ಳುವವರು ವಿವಾಹ ಕಾಲಕ್ಕೆ ಹುಚ್ಚರಾಗಲಿ, ಚಿಕ್ಕವರಾಗಲಿ (ವಯೋಮಿತಿಯನ್ನು ಮುಟ್ಟದವರು) ಇರಕೂಡದು. (೩) ವರನಿಗೆ ೧೮ ವರ್ಷ, ವಧುವಿಗೆ ೧೫ ವರ್ಷ ಆಗಿರಲೇಬೇಕು.

ನಾಗರಿಕ ವಿವಾಹದಲ್ಲಿ ಇಚ್ಛಿತ ವಿವಾಹಕ್ಕೆ ಸಾಮಾಜಿಕರಿಂದ ಏನಾದರೂ ತಡೆಯಿದೆಯೇ? ಈ ವ್ಯಾವಹಾರಿಕ ವೈವಾಹಿಕ ಕರಾರನ್ನು ತಮ್ಮದೇ ಬುದ್ಧಿಯಿಂದ ಸ್ವಸಂತೋಷದಿಂದ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ವಧೂವರರಿದ್ದಾರೆಯೇ? - ಇತ್ಯಾದಿ ವಿಷಯಗಳನ್ನೆಲ್ಲ ತಿಳಿದುಕೊಳ್ಳುವುದುಂಟು. ಇಲ್ಲಿ 'ವಿವಾಹ'ವಾದ ಬಗ್ಗೆ ನೋಂದಣಿ ಮಾಡಿಸಿ ಸರ್ಟಿಫಿಕೇಟ ಪಡೆಯುವದು ಮಾತ್ರ ಅವಶ್ಯ. ಧಾರ್ಮಿಕ ವಿವಾಹದಲ್ಲಿಯೂ ನೋಂದಣಿ ಮಾಡಿಸಿ ಸರ್ಟಿಫಿಕೇಟು ಪಡೆಯುವದು ಅವಶ್ಯವಿದೆ. ಹೀಗೆ ನೋಂದಣಿ ಮಾಡಿಸುವದರಿಂದ ಮುಚ್ಚು, ಮರೆ ಮೋಸಗಳಿಗೆ ಅವಕಾಶ ದೊರೆಯದು.

ಈ ವಿವಾಹಸೌಕರ್ಯದ ಜೊತೆಗೆ ವಿಚ್ಛೇದದ ಅನುಕೂಲತೆಯೂ ಇದೆ. ಅನುಕೂಲತೆಯಿದೆ

ಯಿಂದಮಾತ್ರಕ್ಕೆ ವಿಚ್ಛೇದವಾಗಲೇ ಬೇಕೆಂದು ಅರ್ಥವಲ್ಲ. ವಿಚ್ಛೇದವಿಲ್ಲವೆಂಬ ಕಾರಣಕ್ಕಾಗಿ ತೊಳಲಾಡುವ ಜನರಿಗೆ ಇದೊಂದು ಅನುಕೂಲ, ಅಷ್ಟೇ! - ಹಿಂದೂ ಕೋಡ ಬಳಕೆಯಲ್ಲಿ ಬಂದ ಮೇಲಾದ ವಿವಾಹನಿರಬಹುದು, ಅಥವಾ ಮೊದಲಿನದಿರಬಹುದು. ಕೆಳಗಿನ ಕಾರಣಗಳಿದ್ದರೆ ವಿಚ್ಛೇದ ದೊರೆಯುವದು (೧) ಇಬ್ಬರಲ್ಲೊಬ್ಬರು ವಿವಾಹ ಸಮಯದಲ್ಲಿ ನಪುಂಸಕರಾಗಿದ್ದು, ವಿಚ್ಛೇದದ ದಾವೆ ನಡೆಯುವರೆಗೂ ಹಾಗೇ ಇದ್ದರೆ (೨) ಪತಿಯು ವೇಶ್ಯೆಯನ್ನಿಟ್ಟರೆ ಅಥವಾ ಪತ್ನಿ ವೇಶ್ಯೆಯಾದರೆ (೩) ಇಬ್ಬರಲ್ಲೊಬ್ಬರು ಹಿಂದೂ ಧರ್ಮವನ್ನು ಬಿಟ್ಟು ಧರ್ಮಾಂತರ ಹೊಂದಿದರೆ (೪) ಇಬ್ಬರಲ್ಲೊಬ್ಬರು ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದ್ದು, ಇದಕ್ಕೆ ಪೂರ್ವದಲ್ಲಿ ಐದು ವರುಷಗಳ ಸತತ ಉಪಚಾರ ಪಡೆಯುತ್ತಿದ್ದರೆ (೫) ಯಾರೊಬ್ಬರಿಗೆ ಹುಚ್ಚು ಹಿಡಿದಿದ್ದರೆ :

ಕೆಲವೊಂದು ಪ್ರಸಂಗಗಳಲ್ಲಿ ನ್ಯಾಯಾಲಯವು ಪತಿ-ಪತ್ನಿಯರಿಗೆ ಬೇರೆಯಾಗಿರಲು ವಿಧಿಸುತ್ತದೆ. (೧) ಅರ್ಜದಾರ ವ್ಯಕ್ತಿಯು ಎರಡು ವರ್ಷಕ್ಕೆ ಹೆಚ್ಚಾಗಿ ಬಿಡಲ್ಪಟ್ಟಿದ್ದರೆ (೨) ಒಂದೇ ಮನೆಯಲ್ಲಿರಲಾಗದಂತೆ ಕ್ರೂರವಾಗಿ ವರ್ತಿಸುತ್ತಿದ್ದರೆ (೩) ಅರ್ಜದಾರನಿಂದ ಅಂಟಕೊಂಡಿರದ, ಯಾವುದೇ ಘನವಾದ ಸಾಂಸರ್ಗಿಕ ರೋಗದಿಂದ ಯಾರೊಬ್ಬರು ಬಳಲುತ್ತಿದ್ದರೆ (೪) ಮಾನಸಿಕ ಆರೋಗ್ಯವಿಲ್ಲದಿದ್ದರೆ (೫) ದಾಂಪತ್ಯ ಜೀವನದಲ್ಲಿ ವ್ಯಭಿಚಾರಕ್ಕೆಡೆಗೊಟ್ಟಿದ್ದರೆ— ಇವೇ ಮೊದಲಾದ ಪ್ರಸಂಗಗಳಲ್ಲಿ!

ಮೇಲಿನ ಯಾವುದೇ ಕಾರಣಕ್ಕಾಗಿ ವಿಚ್ಛೇದವನ್ನು ಪಡೆಯಬಹುದಾದರೂ ಹಿಂದೂ ಮಹಿಳೆ ಆರ್ಥಿಕ ಸ್ವಾತಂತ್ರ್ಯವಿಲ್ಲದ್ದರಿಂದ ಆ ಧೈರ್ಯವನ್ನು ಮಾಡಳು. ಒಂದು ವೇಳೆ ಪತಿಯು ಬಲವಂತದಿಂದ ವಿಚ್ಛೇದಕ್ಕೆ ಒಪ್ಪಿದರೂ ಮುಂದೆ ಗತಿ ಏನು? ಇಂದಿನ ವಾರಸಾ ಹಕ್ಕು ಈ ದಿಶೆಯಲ್ಲಿ ಅವಳಿಗೆ ಕೆಲ ಮಟ್ಟಿಗೆ ಅವಕಾಶವನ್ನು ಒದಗಿಸಿಕೊಡುತ್ತದೆ; ಸ್ವಾವಲಂಬನದ ಶಿಕ್ಷಣವೂ ಉಪಯುಕ್ತವಾಗಿದೆ!

ಚಾತುರ್ವರ್ಣಗಳು ಸರಿದು ಹೋಗಿ, ಅವಿಭಕ್ತ ಕುಟುಂಬ ಮಾಯವಾಗುತ್ತಿರುವಾಗ, ಏಕ ಪತಿ-ಪತ್ನಿ ಕಾಯ್ದೆ ತೀರ ಆವಶ್ಯಕ; ಅಂಧಶ್ರದ್ಧೆಯಿಂದ ಸ್ಮೃತಿಗಳಿಗೆ ಕೊಟ್ಟ ತಪ್ಪು ವಿವರಣೆಯಿಂದ, ಆದ ವಿಷಮತೆಯನ್ನು ತೊಡೆದು, ಹೊಸ ಕಾಲಕ್ಕನ್ವಯಿಸುವಂತೆ ಸಜೀವ ಸಮಾಜದಲ್ಲಿ ಸಮಾನತೆಯನ್ನು ತರುವದು ಅನಿವಾರ್ಯವಾಗಿದೆ. ದೇವತ್ವ ಪತಿಗಷ್ಟೇ ಮೀಸಲಾಗಿದ್ದ ಕಾಲ ಹೋಯಿತು! ಸತಿಯೂ ಅಧಿಕಾರದಿಂದ ದೇವತೆಯಾಗಬಹುದಾಗಿದೆ ; ಆದರೆ ಅಧಿಕಾರದಿಂದ ಗಳಿಸಿದ್ದನ್ನು ಆಚರಣೆಯಿಂದ ಉಳಿಸಿಕೊಳ್ಳುವದು ಅವಳಿಗೇ ಸೇರಿದ್ದು !!

—∞※∞—

ಇಂಥವರೂ ಇದ್ದಾರೆ

ಇಂಗ್ಲಂಡದ ಡರಹ್ಯಾಮದಲ್ಲಿ ಸ್ಮಿಥ್ ಎಂಬಾತ ಕಲ್ಲಿದ್ದಲಿ ಕಣಿ ಕೂಲಿಕಾರನಿದ್ದ. ಆತನಿಗೆ ತನ್ನ ಮಾಲಕನ ಮೇಲೆ ಬಹಳ ಸಿಟ್ಟಿತ್ತು. ಒಮ್ಮೆ ಆತನ ಕೊಲೆ ಮಾಡಲು ಸ್ಮಿಥ್ ನಿರ್ಧರಿಸಿದ. ಆದರೆ ಆತನ ವಿಚಾರ ಸಫಲವಾಗಲಿಲ್ಲ. ಎರಡು ತಿಂಗಳಗಳ ನಂತರ ಸ್ಮಿಥ್‌ನಿಗೆ ತನ್ನ ಅವಿಚಾರಕ್ಕಾಗಿ ಪಶ್ಚಾತ್ತಾಪವಾಯಿತು. ಅದರ ಪ್ರಾಯಶ್ಚಿತ್ತವೆಂದು ಆತ ಒಂದು ವರ್ಷದ ವರೆಗೆ ಸಂಬಳವಿಲ್ಲದೆ ದುಡಿದನು.

***

ಇಂಥ ಇನ್ನೂ ಎಷ್ಟೋ ಉದಾಹರಣೆಗಳು ಒಂದು ಇಂಗ್ಲಿಷ ಲೇಖದಲ್ಲಿ ಪ್ರಕಟವಾಗಿವೆ.

ನಮ್ಮಲ್ಲಿಯೂ ಇಂಥವರನೇಕರು ಇರಬಹುದು. ಏಕಂದರೆ ಮನುಷ್ಯ ಸ್ವಭಾವ ಎಲ್ಲಿ ಹೋದರೂ ಮೂಲತಃ ಒಂದೇ ಬಗೆಯದಾಗಿರುತ್ತದೆ.

ನಿರುದ್ಯೋಗ ಮತ್ತು ಆರ್ಥಿಕ ಅಭಿವೃದ್ಧಿ

★

ನಿರುದ್ಯೋಗ ಸಮಸ್ಯೆ ದಿನದಿನಕ್ಕೆ ಬೃಹದಾಕಾರವನ್ನು ತಳೆಯುತ್ತಿರುವದು. ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆಯೇ ೫ ಲಕ್ಷದಷ್ಟಿರುವದು. ದ್ವಿತೀಯ ಯೋಜನೆಯ ಕಾಲದಲ್ಲಿ ಸುಮಾರು ೧೫೩ ಲಕ್ಷ ಜನರಿಗೆ ಉದ್ಯೋಗ ಒದಗಿಸಬೇಕಾಗುವದು. ಇಂತಹ ಈ ಸಮಸ್ಯೆಯ ಚಿತ್ರವನ್ನು ಲೇಖಕರು ಇಲ್ಲಿ ಬಹು ವ್ಯಾಪಕವಾಗಿ ರೂಪಿಸಿರುವರು.

"That society is rich in which material goods are cheap and human beings dear" ಎಂದು ಪ್ರೊ. ಟಾಯನಬೀಯವರು ಮಾರ್ಮಿಕವಾಗಿ ಹೇಳಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಂತೂ ಈ ಮಾತು ಶಬ್ದಶಃ ನಿಜವಿದೆಯೆಂದು ಹೇಳಬಹುದು. ಭಾರತದಂಥ ಅಪೂರ್ಣ ಅಭಿವೃದ್ಧಿಹೊಂದದ (Under-developed) ದೇಶದಲ್ಲಿಯ ಮೂಲಭೂತ ಸಮಸ್ಯೆಯೆಂದರೆ ಅಲ್ಲಿಯ ಬಹುದೊಡ್ಡ ಜನಸಂಖ್ಯೆ. ಈ ರೀತಿ ಶ್ರಮಿಕರುಸಂಖ್ಯೆಯಲ್ಲಿ ಬಹಳವಾಗಿರುವದರಿಂದ ಸಹಜವಾಗಿಯೇ ಅವರ 'ಬೆಲೆ' ಕಡಿಮೆಯಾಗುತ್ತಲೇ ನಡೆದಿದೆ. ಅಷ್ಟೇ ಅಲ್ಲದೆ, ಕನಿಷ್ಠ ಪಕ್ಷಕ್ಕೆ ಜೀವನಾವಶ್ಯಕ ವೇತನವು ಸಿಕ್ಕುವಂಥ ಉದ್ಯೋಗಗಳೂ ಸಹ ಎಲ್ಲರಿಗೂ ದೊರೆಯದೆ, ನಿರುದ್ಯೋಗದ ಸಮಸ್ಯೆಯು ಬೃಹದಾಕಾರವನ್ನು ತಳೆಯುತ್ತ ನಡೆದಿದೆ.

ತಾತ್ವಿಕ ಹಿನ್ನೆಲೆ :

ನಮ್ಮ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉದ್ಯೋಗ ಸಮಸ್ಯೆಯು ಅಷ್ಟೊಂದು ಮಹತ್ವವನ್ನು ಪಡೆದಿದ್ದಿಲ್ಲವೆಂಬದನ್ನು ನಾವು ಕಾಣಬಹುದು. ಯೋಜನೆಯ ಕೊನೆಗೆ ಎಂಟು ಪುಟಗಳ ಒಂದು ಚಿಕ್ಕ ಪ್ರಕರಣದಲ್ಲಿ ಇಡಿಯ ಉದ್ಯೋಗ ಸಮಸ್ಯೆಯ ಚರ್ಚೆಯನ್ನು ಮುಕ್ತಾಯಗೊಳಿಸಿ ಬಿಡಲಾಗಿತ್ತು. ಅದರಲ್ಲೂ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಮುಖಾಂತರ ಸಂಭವಿಸಬಹುವಾದ ಉದ್ಯೋಗಗಳ ಹೆಚ್ಚಳವನ್ನು ಅಂದಾಜು ಮಾಡಲಾಗಿತ್ತಷ್ಟೇ ವಿನಾ ಬೇರಾವ ಮುಖ್ಯ ಮಾತೂ ಅಲ್ಲಿರಲಿಲ್ಲ. ಇದರ ಕಾರಣವನ್ನು ಊಹಿಸಲು ನಾವು ಬಹಳ ವಿಚಾರಿಸಬೇಕಿಲ್ಲ. ಉದ್ಯೋಗವು ಆರ್ಥಿಕ ಅಭಿವೃದ್ಧಿಯ ಒಂದು ಉಪವಸ್ತು. ಒಮ್ಮೆ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಿ ಬಿಟ್ಟರೆ, ಉದ್ಯೋಗಗಳೂ ತಮ್ಮಷ್ಟಕ್ಕೆ ತಾವೇ ಹೆಚ್ಚಾಗುತ್ತ ಹೋಗುವವೆಂಬ ಸ್ವಾಭಾವಿಕ ನಂಬಿಕೆ. ಅದರ ಹಿನ್ನೆಲೆಯಲ್ಲಿದ್ದಿರಬೇಕು. ಆರ್ಥಿಕ ಬೆಳವಣಿಗೆಯನ್ನು ದೀರ್ಘಕಾಲೀನ ದೃಷ್ಟಿಯಲ್ಲಿ ನೋಡಿದರೆ, ಈ ನಂಬಿಕೆಯ ಸತ್ಯತೆಯನ್ನು ಯಾರೂ ಅಲ್ಲಗಳೆಯಲಾರರು. ಆದರೆ ಬೆಳವಣಿಗೆಯ ಬಿದಿಗೆಯ ಕಾಲದಲ್ಲಿ ಇವೆರಡೂ ಧ್ಯೇಯಗಳು ಪರಸ್ಪರ ಹೊಂದಿಕೊಂಡು ಸಾಗದೆ ವಿರುದ್ಧದಿಕ್ಕಿನಲ್ಲೂ ಸಾಗುವ ಸಂಭವ



ವಿದೆ. ಆದುದರಿಂದಲೇ ಮೊದಲ ಯೋಜನೆಯು ಕೊನೆಗೊಳ್ಳುವಾಗ ನಾವು ಕಂಡುದೇನಂದರೆ, ಅರ್ಥವ್ಯವಸ್ಥೆಯು ಅಭಿವೃದ್ಧಿ ಹೊಂದುತ್ತ ನಡೆದಂತೆಯೇ ನಿರುದ್ಯೋಗವೂ ಬೆಳೆಯುತ್ತಾ ನಡೆಯಿತು. ಬಹುಶಃ ಜನಸಂಖ್ಯೆಯ ಹೆಚ್ಚಳವಲ್ಲದೆ, ಈ ವರೆಗೆ ಅಪೂರ್ಣ ಉದ್ಯೋಗಿಗಳಾಗಿದ್ದ ಜನರು ಪೂರ್ಣೋದ್ಯೋಗವನ್ನು ಅರಸುತ್ತಿರುವದರ ಮೂಲಕ ಈ ರೀತಿ ನಿರುದ್ಯೋಗದ ಗಾತ್ರ ಹೆಚ್ಚುತ್ತ ನಡೆದಿರಬೇಕು.

ಅದೇನೇ ಇರಲಿ. ಪೂರ್ಣೋದ್ಯೋಗದೆಡೆಗೆ ಸಾಗಬೇಕಾದ ಅವಶ್ಯಕತೆಯನ್ನು ಮನಗಂಡು, ಎರಡನೆಯ ಯೋಜನೆಯಲ್ಲಿ ಉದ್ಯೋಗ ನಿರ್ಮಾಣದ ಮೇಲೆ ವಿಶೇಷ ಲಕ್ಷವೀಯಲಾಗಿದೆಯೆಂಬುದು ಸುಪರಿಚಿತ ವಿಷಯ. ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡು ಮೂಲ ಧ್ಯೇಯಗಳಲ್ಲಿ ಉದ್ಯೋಗವೂ ಒಂದಾಗಿದೆ. ಕರ್ವೇ ಸಮಿತಿಯ ವರದಿಯಂತೂ, ಅಭಿವೃದ್ಧಿಯ ವೇಗವು ಕೊಂಚ ಮಂದವಾದರೂ ಅಡ್ಡಿಯಿಲ್ಲ ; ಉದ್ಯೋಗವು ಹೆಚ್ಚಾಗುವದು ಅತೀವ ಅವಶ್ಯವಿದೆಯೆಂಬ ಅಭಿಪ್ರಾಯದ ನಿದರ್ಶನ. ಆದರೆ ಉದ್ಯೋಗದ ವಿಷಯದ ಚರ್ಚೆಗಳಲ್ಲಿ ಒಂದು ಮಹತ್ವದ ಮಾತನ್ನು ಒತ್ತಿ ಹೇಳಬೇಕಾಗಿದೆ. ಉದ್ಯೋಗವು ಅಂತಿಮ ಗುರಿಯಲ್ಲ ; ಬರಿ ಒಂದು ಸಾಧನ. ಅಂತಿಮ ಗುರಿಯೆಂದರೆ ಆದಾಯ ಅಥವಾ ವೇತನ. ಆದ್ದರಿಂದ ಕೊನೆಯ ವಿಶ್ಲೇಷಣೆಯಲ್ಲಿ, ನಿರುದ್ಯೋಗ ಸಮಸ್ಯೆಯೆಂದರೆ ಹೇಗಾದರೂ ಮಾಡಿ, ಯಾವದೇ ತರಹದ ಒಂದು ಉದ್ಯೋಗವನ್ನು ಎಲ್ಲರಿಗೆ ಒದಗಿಸುವದಲ್ಲ. ಆದಷ್ಟು ಮಟ್ಟಿಗೆ ಹೆಚ್ಚು ಉತ್ಪಾದನೆಯುಳ್ಳ ಉದ್ದಿಮೆಗಳಲ್ಲಿ ಎಲ್ಲ ಶ್ರಮಿಕರಿಗೂ ಆಶ್ರಯ ಸಿಕ್ಕುವಂತೆ ನಮ್ಮ ಉದ್ಯೋಗದ ಕಾರ್ಯಕ್ರಮಗಳನ್ನು ನಿರೂಪಿಸಬೇಕಾಗುವದು. ಅಂತೆಯೇ, ಬಂಡವಾಳದ ಕೊರತೆಯಿರುವ ನಮ್ಮ ದೇಶದಲ್ಲಿ ಇಂಥ ಉದ್ದಿಮೆಗಳನ್ನು ಆರಂಭಿಸುವದು ಹಾಗೂ ನಂತರ ಅವುಗಳನ್ನು ವಿಸ್ತರಿಸುವದು, ಇದಕ್ಕೆಲ್ಲ ಅವಕಾಶ ಬೇಕಾಗುತ್ತದೆ. ಈ ಪರಿವರ್ತನ ಕಾಲದಲ್ಲಿ ನಿರುದ್ಯೋಗವನ್ನು ಸಂಪೂರ್ಣ ನಿವಾರಿಸುವದು ಶಕ್ಯವಾಗದೇ ಹೋಗಬಹುದು. ನಿರುದ್ಯೋಗ ಸಮಸ್ಯೆಯನ್ನು ನಾವೆಲ್ಲ ಈ ತಾತ್ವಿಕ ಹಿನ್ನೆಲೆಯಲ್ಲಿ ನೋಡಿದಾಗಲೇನೆ, ಅದರಲ್ಲಡಗಿದ ಜಟಿಲ ವಿಷಯಗಳು ಕಂಡು ಬರುವವು.

ಸಮಸ್ಯೆಯ ಮೂರು ಮುಖಗಳು :

ನಿರುದ್ಯೋಗದ ಸಮಸ್ಯೆಗಳನ್ನು ಅಭ್ಯಸಿಸುವಾಗಲಾಗಲೀ, ಅದರ ನಿವಾರಣೆಗಾಗಿ ಉಪಾಯಗಳನ್ನು ನಿಯೋಜಿಸುವಾಗಲಾಗಲೀ, ಸಮಸ್ಯೆಯ ಒಟ್ಟು ಗಾತ್ರಕ್ಕಿಂತ ಅದರ ವಿವಿಧ ವಿಭಾಗಗಳು ಮಹತ್ವವನ್ನು ತಾಳುವವು. ನಮ್ಮ ದೇಶದಲ್ಲಿ ಈ ಸಮಸ್ಯೆಯ ಮೂರು ಮುಖಗಳನ್ನು ಬೇರೆ ಬೇರೆಯಾಗಿಯೇ ವಿಶ್ಲೇಷಿಸುವದು ಅವಶ್ಯವಿದೆ. ಗ್ರಾಮೀಣ ಹಾಗು ನಗರಗಳಲ್ಲಿಯ ನಿರುದ್ಯೋಗಗಳು ಸಮಸ್ಯೆಯ ಎರಡು ಮುಖಗಳು; ಹಾಗೆಯೇ ಸುಶಿಕ್ಷಿತರಲ್ಲಿಯ ನಿರುದ್ಯೋಗವೂ ಇತ್ತೀಚೆಗೆ ವಿಶೇಷವಾಗಿ ಬೆಳೆಯುತ್ತಿದ್ದುದರಿಂದ, ಅದರ ವಿಶಿಷ್ಟಾಭ್ಯಾಸವು ಅವಶ್ಯಕವಾಗಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯು ಆರಂಭವಾಗುವಾಗ ಅಸ್ತಿತ್ವದಲ್ಲಿದ್ದ ನಿರುದ್ಯೋ

ಲೇ : ಶ್ರೀ. ಎನ್. ವಿ. ಮುಜುಮುದಾರ,
ಎಂ. ಎ., ಮುಂಬಯಿ.

ಗದ ಗಾತ್ರದ ಅಂಕಿಸಂಖ್ಯೆಗಳು ಲಭ್ಯವಿವೆ. ಈ ರೀತಿ ಸದ್ಯಕ್ಕೆ ಇದ್ದ ನಿರುದ್ಯೋಗಕ್ಕೆ, ಐದು ವರ್ಷಗಳ ಅವಧಿಯಲ್ಲಿ ಜನಸಂಖ್ಯೆಯು ಹೆಚ್ಚಳದಿಂದ ಶ್ರಮಿಕರ ಸಂಖ್ಯೆಯೂ ಬೆಳೆಯುತ್ತದೆಂಬುದನ್ನೂ ನಾವು ಮರೆಯಬಾರದು. ಉದ್ಯೋಗಗಳ ನಿರ್ಮಾಣದ ಕುರಿತು ಯೋಜನೆಯನ್ನು ಮಾಡಬೇಕಾದರೆ, ಇವೆರಡೂ ಸಂಗತಿಗಳನ್ನು ಲಕ್ಷ್ಯದಲ್ಲಿಡಲೇಬೇಕಾದುದು ಸ್ವತಃಸಿದ್ಧಸಂಗತಿಯಾಗಿದೆ. ಈ ದೃಷ್ಟಿಯಿಂದ ಯೋಜನೆಯ ಅವಧಿಯಲ್ಲಿ ಸಮಸ್ಯೆಯ ಗಾತ್ರವನ್ನು ಕೆಳಗಿನ ಅಂಕಿಸಂಖ್ಯೆಗಳಿಂದ ಅಂದಾಜು ಮಾಡಲಡ್ಡಿಯಿಲ್ಲ.

ನಿರುದ್ಯೋಗದ ಗಾತ್ರ

	ನಗರಗಳಲ್ಲಿ	ಗ್ರಾಮಗಳಲ್ಲಿ	ಒಟ್ಟು
	[ಸಂಖ್ಯೆಗಳು ಲಕ್ಷದಲ್ಲಿ]		
೧. ಆರಂಭಕ್ಕಿರುವ ನಿರುದ್ಯೋಗ :	೨೫	೨೮	೫೩
೨. ೫ ವರ್ಷಗಳಲ್ಲಿ ಹೆಚ್ಚಾಗುವ ಶ್ರಮಿಕರು :	೩೮	೬೨	೧೦೦
ಒಟ್ಟು	೬೩	೯೦	೧೫೩

ಈ ರೀತಿ ಯೋಜನೆಯ ಅವಧಿಯಲ್ಲಿ ನಿರುದ್ಯೋಗವು ಸಂಪೂರ್ಣವಾಗಿ ನಿವಾರಣೆಯಾಗಬೇಕಾದರೆ ೧॥ ಕೋಟಿಯಷ್ಟು ಹೊಸ ಉದ್ಯೋಗವನ್ನು ಒದಗಿಸಬೇಕಾಗುವದು. ಆದರೆ ನಮ್ಮ ಎರಡನೆಯ ಯೋಜನೆಯಲ್ಲಿಯ ವಿವಿಧ ಅಭಿವೃದ್ಧಿ ಯೋಜನೆಗಳಿಂದ ಇಷ್ಟು ಜನರಿಗೆ ಉದ್ಯೋಗಗಳು ಲಭ್ಯವಾಗಬಲ್ಲವೆ? ಎಂಬದು ನಮ್ಮ ಮುಂದಿನ ಪ್ರಶ್ನೆ.

ಯೋಜನೆಯಲ್ಲಿ ಉದ್ಯೋಗ ನಿರ್ಮಾಣ

ಯೋಜನೆಯಲ್ಲಿ ಒಟ್ಟು ಸುಮಾರು ೮೦ ಲಕ್ಷದಷ್ಟು ಹೊಸ ಉದ್ಯೋಗಗಳು ದೊರೆಯಬಹುದೆಂದು ಅಂದಾಜು ಮಾಡಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಅದರ ವಿವರ ಹೀಗಿದೆ:

ಅಂದಾಜ ಮಾಡಲಾದ ಅಧಿಕ ಉದ್ಯೋಗ

ವಿಭಾಗ	ಅಧಿಕ ಉದ್ಯೋಗ [ಸಂಖ್ಯೆಗಳು ಲಕ್ಷದಲ್ಲಿ]
೧. ರಚನೆ (ಕಟ್ಟಡ ಹಾಗೂ ಇನ್ನಿತರ)	೨೧ . ೦೦
೨. ನೀರಾವರಿ ಹಾಗೂ ವಿದ್ಯುಚ್ಛಕ್ತಿ	೦ . ೫೧
೩. ರೇಲ್ವೆಗಳು	೨ . ೫೩
೪. ಇನ್ನಿತರ ಸಾರಿಗೆ ಹಾಗೂ ಸಂಪರ್ಕ	೧ . ೮೦
೫ ಉದ್ದಿಮೆಗಳು ಹಾಗೂ ಖನಿಜಗಳು	೬ . ೫೦
೬. ಗೃಹ ಹಾಗೂ ಚಿಕ್ಕ ಉದ್ದಿಮೆಗಳು	೭ . ೫೦
೭. ಅರಣ್ಯ, ಮೀನದ ಉದ್ಯೋಗಗಳು, ವಿಸ್ತರಣ ಯೋಜನೆ ಇತ್ಯಾದಿ	೭ . ೧೩
೮. ಶಿಕ್ಷಣ	೩ . ೧೦
೯. ಆರೋಗ್ಯ	೧ . ೧೬
೧೦. ಸರಕಾರದ ನೌಕರಿಗಳು	೪ . ೩೪
೧೧. ವ್ಯಾಪಾರ, ವಾಣಿಜ್ಯ ಹಾಗೂ ಇನ್ನಿತರ	೨೬ . ೦೪
ಒಟ್ಟು	೬೯ . ೦೩

ಈ ಅಂದಾಜುಗಳನ್ನು ಮಾಡುವಾಗ ಸಾರ್ವಜನಿಕ ರೀತಿಯಿಂದ ಬಳಸುವದರಲ್ಲಿ ಬರುವ ೪೮೦೦ ಕೋಟಿ ರೂಪಾಯಿಗಳಲ್ಲದೆ, ಖಾಸಗೀ ಕ್ಷೇತ್ರದಲ್ಲಿಯ ೨೪೦೦ ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳನ್ನೂ ಅನುಲಕ್ಷಿಸಲಾಗಿದೆ. ಹೀಗಿದ್ದರೂ ನಮ್ಮ ಅವಶ್ಯಕತೆಗಿಂತ ಬಹಳಷ್ಟು ಕಡಿಮೆ ಹೊಸ ಉದ್ಯೋಗಗಳು ಲಭ್ಯವಾಗುವವೆಂಬ ಮಾತು ಈ ಅಂಕಿ ಸಂಖ್ಯೆಗಳಿಂದ ಸಿದ್ಧವಾಗುವದು. ಏಕೆಂದರೆ ೧೫೦ ಲಕ್ಷದಷ್ಟು ಜನರಿಗೆ ಉದ್ಯೋಗದ ಅವಶ್ಯಕತೆಯಿದ್ದಾಗ, ಯೋಜನೆಯಲ್ಲಿ ಕೇವಲ ೮೦ ಲಕ್ಷದಷ್ಟು ಜನರಿಗೆ ಮಾತ್ರ ಉದ್ಯೋಗ ಸಿಗಬಹುದೆಂದು ಊಹಿಸಲಾಗಿದೆ. ಅಂದರೆ, ಎರಡನೆಯ ಯೋಜನೆಯು ಕೊನೆಗೊಳ್ಳುವ ಕಾಲದಲ್ಲೂ, ಅದು ಆರಂಭವಾಗುವ ಕಾಲದಲ್ಲಿದ್ದಷ್ಟೇ ಪ್ರಮಾಣದ ನಿರುದ್ಯೋಗವು ಅಸ್ತಿತ್ವದಲ್ಲಿರುವದೆಂದು ಹೇಳಿದಂತಾಯಿತು. ಅಥವಾ, ಯೋಜನೆಯು ಜನಸಂಖ್ಯೆಯು ಹೆಚ್ಚಳದಿಂದ ಹೆಚ್ಚಾಗುವ ಶ್ರಮಿಕರಿಗಷ್ಟೇ ಉದ್ಯೋಗವನ್ನು ಕಲ್ಪಿಸಿ ಕೊಡಬಲ್ಲದೇ ವಿನಾ ಸದ್ಯಕ್ಕೆ ನಿರುದ್ಯೋಗಿಗಳಾಗಿದ್ದವರಿಗೆ ಅಲ್ಲ—ಎಂದೂ ಹೇಳಬಹುದು. ಈ ವಿಶ್ಲೇಷಣೆಯಿಂದ ಸಮಸ್ಯೆಯ ಭೀಕರತೆಯು ಸ್ಪಷ್ಟವಾಗುವದು.

ಇದಕ್ಕೆ ಮುಖ್ಯವಾಗಿ ಮೇಲೆ ಹೇಳಿದಂತೆ ಎರಡು ಕಾರಣಗಳಿವೆ. ಎರಡನೆಯ ಯೋಜನೆಯಲ್ಲಿ ಮೂಲ ಉದ್ದಿಮೆಗಳ ಬೆಳವಣಿಗೆಗೆ ಹೆಚ್ಚು ಮಹತ್ವವನ್ನೀಯಲಾಗಿದೆ. ಆದರೆ ಇಂಥ ಉದ್ಯೋಗಗಳು ಕೂಡಲೇ ಶ್ರಮಿಕರನ್ನು ಹೆಚ್ಚು ಸಂಖ್ಯೆಯಲ್ಲಿ ಸೇರಿಸಿಕೊಳ್ಳಲು ಶಕ್ತವಾಗುವದಿಲ್ಲ. ಆದರೆ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಈ ರೀತಿಯ ಉದ್ದಿಮೆಗಳನ್ನು ಈಗಿನಿಂದ ಬೆಳೆಯಿಸಿಕೊಳ್ಳುವದು ಅನಿವಾರ್ಯವೇ ಆಗಿದೆ. ಇನ್ನೊಂದು ಅಷ್ಟೇ ಮಹತ್ವದ ಸಂಗತಿಯೆಂದರೆ, ಜನಸಂಖ್ಯೆಯ ಹೆಚ್ಚಿನ ಬೆಳವಣಿಗೆ ಗ್ರಾಮ ಪ್ರದೇಶಗಳಲ್ಲಿಯೂ ಆಗುವದರಿಂದ, ನಿರುದ್ಯೋಗದ ಪ್ರಮಾಣವು ಮೇಲಿನ ಅಂದಾಜಿನಲ್ಲಿ ತೋರಿಸಿದಷ್ಟು ಆಗಲಿಕ್ಕೂ ಇಲ್ಲ. ಏಕೆಂದರೆ ನೀರಾವರಿ, ಟ್ರಾಕ್ಟರುಗಳ ಮೂಲಕ ಹೊಸ ಭೂಮಿಯನ್ನು ಸಾಗುಮಾಡುವದು, ಚಿಕ್ಕ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ ಇವೇ ಮೊದಲಾದ ಯೋಜನೆ

ಗಳಿಂದ ಹಳ್ಳಿಯ ಜನರಿಗೆ ಉದ್ಯೋಗವು ಹೆಚ್ಚಾಗುತ್ತ ಹೋಗುವದೂ ಸ್ವಾಭಾವಿಕವೇ ಆಗಿದೆ.

ಸುಶಿಕ್ಷಿತರಲ್ಲಿ ನಿರುದ್ಯೋಗ:

ಸುಶಿಕ್ಷಿತರಲ್ಲಿ ನಿರುದ್ಯೋಗವು ಇತ್ತೀಚೆಗೆ ಬಹಳ ಪ್ರಮಾಣದಲ್ಲಿ ಬೆಳೆಯುತ್ತಿದ್ದುದರಿಂದ ಯೋಜನಾ ಆಯೋಗದವರು ಈ ಸಮಸ್ಯೆಯನ್ನು ಅಭ್ಯಸಿಸಿ, ಉಪಾಯಗಳನ್ನು ಸೂಚಿಸಲು ಒಂದು ಚಿಕ್ಕ ಅಭ್ಯಾಸ ಸಮಿತಿಯನ್ನು ನಿಯಮಿಸಿದ್ದರು. ಈ ಸಮಿತಿಯ ವರದಿಯಲ್ಲಿ ಕೆಲ ಮಹತ್ವದ ಸೂಚನೆಗಳಿವೆ.

೧೯೫೫ ರಲ್ಲಿ ಸುಮಾರು ೫ ಲಕ್ಷದಷ್ಟು ಸುಶಿಕ್ಷಿತರು ನಿರುದ್ಯೋಗಿಗಳಾಗಿದ್ದರೆಂದು, ಈ ಸಮಿತಿಯು ಅಂದಾಜು ಮಾಡಿದೆ. ಅದರ ವಿವರಗಳು ಹೀಗಿವೆ :

	ಸಂಖ್ಯೆ
೧. ಮೆಟ್ರಿಕ್ಯುಲೇಶನ್ ಪಾಸಾದವರು.	೩.೨೮ ಲಕ್ಷ
೨. ಇಂಟರ ಮಿಡಿಯೇಟರು	೦.೫೫ ,,
೩. ಪದವೀಧರರು	೧.೧೮ ,,
ಒಟ್ಟು ಸುಶಿಕ್ಷಿತ ನಿರುದ್ಯೋಗಿಗಳು.	೫.೦೫ ಲಕ್ಷ

ಸದ್ಯಕ್ಕಿರುವ ೫ ಲಕ್ಷ ನಿರುದ್ಯೋಗಿಗಳ ಸಂಖ್ಯೆಗೆ ಮುಂಬರುವ ಐದು ವರ್ಷಗಳಲ್ಲಿ ಹೆಚ್ಚಾಗುವ ೧೪·೫ ಲಕ್ಷದಷ್ಟು ಸುಶಿಕ್ಷಿತರನ್ನು ಕೂಡಿಸಬೇಕು. ಹೀಗಾಗಿ ಒಟ್ಟು ಎರಡನೆಯ ಯೋಜನೆಯ ಅವಧಿಯಲ್ಲಿ ೨೦ ಲಕ್ಷದಷ್ಟು ನೌಕರಿಗಳನ್ನು ಒದಗಿಸುವದು ನಮ್ಮ ಸಮಸ್ಯೆಯಾಗಿದೆ. ಇದರಲ್ಲಿ ೨·೪ ಲಕ್ಷದಷ್ಟು ನೌಕರರು ನಿವೃತ್ತಿಯಾಗುವದರ ಮೂಲಕ ಅಷ್ಟು ಹೊಸ ಜನರಿಗೆ ಅವೇ ಉದ್ಯೋಗಗಳು ಲಭಿಸುವವು. ಆದರೂ ೧೬ ಲಕ್ಷದಷ್ಟು ಸುಶಿಕ್ಷಿತರಿಗೆ ಉದ್ಯೋಗ ಒದಗಿಸುವ ಹೊಣೆ ಯೋಜನೆಯ ಮೇಲೆ ಉಳಿಯುವದು. ಇದರಲ್ಲಿ ಯೋಜನೆಯ ಮೂಲಕ ಸಾರ್ವಜನಿಕ ಹಾಗೂ ಖಾಸಗೀ ಕ್ಷೇತ್ರದಲ್ಲಿ ಸುಶಿಕ್ಷಿತರಿಗೆ ಒಟ್ಟು ೧೨ ಲಕ್ಷದಷ್ಟು ನೌಕರಿಗಳು ಸಿಕ್ಕಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಕೊನೆಯ ವಿಶ್ಲೇಷಣೆಯಲ್ಲಿ ೫·೬ ಲಕ್ಷ ಸುಶಿಕ್ಷಿತರು ಮಾತ್ರ ಉದ್ಯೋಗ ರಹಿತರಾಗಿ ಉಳಿಯಬೇಕಾಗುವದು.

ಆದ್ದರಿಂದ ಅಭ್ಯಾಸ ಸಮಿತಿಯು ಈ ಸಮಸ್ಯೆಯ ನಿವಾರಣೆಗಾಗಿ ಕೆಲ ನಿಶಿಷ್ಟ ಕಾರ್ಯಕ್ರಮಗಳನ್ನು ಸೂಚಿಸಿದೆ. ಅವುಗಳಲ್ಲಿ ಮುಖ್ಯವಾಗಿ ಸಹಕಾರೀ ಸಂಸ್ಥೆಗಳಲ್ಲಿ ಸುಶಿಕ್ಷಿತರನ್ನು ಅಧಿಕ ಪ್ರಮಾಣದಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳಲಾಗಿದೆ. ಅಲ್ಲದೇ ಸುಶಿಕ್ಷಿತರು ಸಹಕಾರಿ ಸರಕುಗಳ ಸಾಗಾಟ ಸಂಸ್ಥೆಗಳನ್ನು (Co-operative Goods Transport) ಬೆಳೆಯಿಸಿಕೊಳ್ಳಬೇಕೆಂಬ ಸೂಚನೆಯು ವ್ಯವಹಾರಿಕವಾಗಿದ್ದರಿಂದ ಗಮನಾರ್ಹವಾಗಿದೆ. ಅಲ್ಲದೆ, ಇನ್ನೂ ಕೆಲ ಉದ್ದಿಮೆಗಳನ್ನು ಚಿಕ್ಕ ಪ್ರಮಾಣದ ಮೇಲೆ ಸುಶಿಕ್ಷಿತರು ಸಾಗಿಸಿಕೊಂಡು ಹೋಗುವದರತ್ತ ಅದು ಲಕ್ಷವನ್ನು ಸೆಳೆದಿದೆ. ಸುಶಿಕ್ಷಿತರ ಬರಿ "ಕಚೇರಿ ನೌಕರಿಗಳ" ಮೇಲಿನ ಮೋಹವನ್ನು ಬಿಟ್ಟು, ಶ್ರಮಯುಕ್ತ ಕೆಲಸಗಳನ್ನೂ ಕೈಕೊಳ್ಳಲು ಉದ್ಯುಕ್ತರಾಗಬೇಕೆಂದು ಸೂಚಿಸಲಾಗಿದೆ. ಅದೇ ರೀತಿ ವಿಶ್ವವಿದ್ಯಾಲಯಗಳು ನೌಕರಿಗಳ ಬಗ್ಗೆ ಮಾಹಿತಿಯನ್ನೂ ವಿದ್ಯಾರ್ಥಿಗಳಿಗೂ ಹಾಗು ಉದ್ದಿಮೆದಾರರಿಗೂ ಒದಗಿಸುವ ಏರ್ಪಾಡು ಮಾಡಬೇಕೆಂಬದು ಉಪಯುಕ್ತ ಸೂಚನೆಯಾಗಿದೆ.

ಸಮಿತಿಯು ಸೂಚಿಸಿದ ಕಾರ್ಯಕ್ರಮಗಳಿಗೆ ೧೩೦ ಕೋಟಿ ರೂಪಾಯಿಗಳ ಬಂಡವಾಳವು ಅವಶ್ಯವಿದ್ದು, ಒಟ್ಟು ಸುಮಾರು ೨ ಲಕ್ಷ ೩೫ ಸಾವಿರ ಸುಶಿಕ್ಷಿತರಿಗೆ ಅವು ಉದ್ಯೋಗವನ್ನು ಕಲ್ಪಿಸಿಕೊಡಬಲ್ಲವಾಗಿವೆ.

ಒಟ್ಟಿನ ಮೇಲೆ :

ಬರಿ ಉದ್ಯೋಗದ ದೃಷ್ಟಿಯಿಂದ ನೋಡಿದರೆ, ಎರಡನೆಯ ಯೋಜನೆಯ ಕಾರ್ಯಕ್ರಮಗಳು ಅಷ್ಟೊಂದು ಉತ್ತೇಜನಕಾರಿಯಾಗಿಲ್ಲವೆಂಬುದು ಈಗ ಸುಸ್ಪಷ್ಟವಾಗಿದೆ. ಆದರೆ ಯೋಜನೆಯನ್ನು ತಾತ್ಕಾಲಿಕ ಸಮಸ್ಯೆಗಳ ಮುಖಾಂತರವಾಗಿಯೇ ನಾವು ನೋಡಬಾರದು. ಐದು ವರ್ಷಗಳ ಯೋಜನೆಯು ಅಭಿವೃದ್ಧಿಯ ದಾರಿಯಲ್ಲಿಯ ಒಂದು ಮೈಲುಗಲ್ಲು ಮಾತ್ರವಾಗಿದೆ. ಇಂಥ ಯೋಜನೆಗಳ ಯಶಸ್ಸು, ಆರ್ಥಿಕ ವ್ಯವಸ್ಥೆಯ ಸರ್ವಾಂಗೀಣ ಉನ್ನತಿಯನ್ನು ಎಷ್ಟು ಶೀಘ್ರಗತಿಯಲ್ಲಿ ತರಲು ನೆರವಾಗುವವೋ ಅದರ ಮೇಲೆ ಅವಲಂಬಿಸಿದೆ. ಏಕೆಂದರೆ ಕೊನೆಯ ವಿಶ್ಲೇಷಣೆಯಲ್ಲಿ ಹಿಂದುಳಿದ ರಾಷ್ಟ್ರಗಳ ಅಂತಿಮ ಗುರಿಯು ಅಭಿವೃದ್ಧಿಯೇ ಆಗಿದೆ.

ಅಲ್ಲದೆ ಯಾವದೇ ರೀತಿಯ ಉದ್ಯೋಗವನ್ನು ಒದಗಿಸುವದೊಂದೇ ಯೋಜನೆಯ ಧ್ಯೇಯವಾಗಿರಬಾರದು. ಹೆಚ್ಚು ಉತ್ಪಾದನೆಯುಳ್ಳ ಉದ್ಯೋಗಗಳು ಬೆಳೆಯುತ್ತ ಹೋಗುವ ಅವಶ್ಯಕತೆಯನ್ನು ಪುನರಪಿ ಒತ್ತಿ ಹೇಳಬೇಕಾಗಿದೆ. ನಮ್ಮ ಹಳ್ಳಿಗಳಲ್ಲಿಯ ಬಹಳಷ್ಟು ಒಕ್ಕಲಿಗರ ಆದಾಯವು ತೀರ ಕಡಿಮೆಯ ಪ್ರಮಾಣದ್ದಿದೆಯೆಂದು ಇತ್ತೀಚಿನ ರಿಜರ್ವ ಬ್ಯಾಂಕಿನ ವರದಿಯ ಅಂಕಿಸಂಖ್ಯೆಗಳು ವ್ಯಕ್ತಪಡಿಸಿವೆ. ಆದ್ದರಿಂದ ಯೋಜನೆಯನ್ನು ನಿರೂಪಿಸುವವರ ಮುಂದೆ ಉದ್ಯೋಗ ಸಮಸ್ಯೆಯು ದ್ವಿವಿಧವಾಗಿ ತಲೆದೋರುತ್ತದೆ. ಮೊದಲನೆಯದಂತೂ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸುವದು. ಎರಡನೆಯದೆಂದರೆ, ತೀರ ಕಡಿಮೆ ಉತ್ಪಾದನೆಯುಳ್ಳ, ಅದ್ದರಿಂದಲೇ ತೀರ ಕಡಿಮೆ ಆದಾಯವನ್ನೀಯುತ್ತಿರುವ, ಉದ್ಯೋಗಗಳಲ್ಲಿಯ ಜನರಿಗೆ ಹೆಚ್ಚಿನ ಉದ್ಯೋಗವನ್ನಾದರೂ ಒದಗಿಸಬೇಕು; ಅದು ಸಾಧ್ಯವಿಲ್ಲದಿದ್ದಲ್ಲಿ ಅವರನ್ನು ಅಧಿಕ ಉತ್ಪಾದನಾ ಉದ್ದಿಮೆಗಳ ಕಕ್ಷೆಯಲ್ಲಿ ತರಲೆತ್ನಿಸಬೇಕು. ಹೀಗೆ ದೂರ ದೃಷ್ಟಿಯಿಂದ ನೋಡಿದರೆ ಸಮಸ್ಯೆ ಇನ್ನೂ ಜಟಿಲವಿದೆ.

ನಿರುದ್ಯೋಗವು ಬರಿ ಆರ್ಥಿಕ ಸಮಸ್ಯೆಯಷ್ಟೇ ಅಲ್ಲ; ಅದು ಸಾಮಾಜಿಕ ಸಮಸ್ಯೆಯೂ ಅಹುದು. ಆರ್ಥಿಕ ವ್ಯವಸ್ಥೆಯು ಅಭಿವೃದ್ಧಿಯಾಗುವವರೆಗೂ, ನಿರುದ್ಯೋಗಿಗಳ ಹೊಟ್ಟೆಯ ಹಸಿವು ತಾಳಲಾರದು. ಅಂತೆಯೇ ತಾತ್ಕಾಲೀನ ಯೋಜನೆಗಳ ಮೂಲಕ ಈ ಸಮಸ್ಯೆಯನ್ನು ಬಗೆಹರಿಯಿಸಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಖಾದಿ ಹಾಗೂ ಗ್ರಾಮೋದ್ಯೋಗಗಳು, ಅವುಗಳ ಉತ್ಪಾದನೆಯು ಕಡಿಮೆಯಿದ್ದರೂ, ಅಧಿಕ ಮಹತ್ವವನ್ನು ತಾಳುವವು. ಆದ್ದರಿಂದಲೇ ಯೋಜನೆಯಲ್ಲಿ ಅವುಗಳ ಆಭಿವೃದ್ಧಿಗಾಗಿ ವಿಶೇಷ ಪ್ರಾಮುಖ್ಯವನ್ನೀಯಲಾಗಿದೆ.

ಇದಲ್ಲದೆ, ಉದ್ಯೋಗದ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪುನರ್ವಿಮರ್ಶಿಸಿ, ಅವಶ್ಯವಿದ್ದ ಮಾರ್ಪಾಟನ್ನೂ ಮಾಡಿಕೊಳ್ಳಬೇಕೆಂದು ಯೋಜನೆಯಲ್ಲಿಯೇ ಹೇಳಲಾಗಿದೆ.

::—卐—::


ಮಕ್ಕಳು ಸತ್ತರು-ತಾಯಿ ಬದುಕಿದಳು!

[ಸಣ್ಣ ಕಥೆ]

★

ಗಂಡ ಸತ್ತರೂ ಎದೆಗೆಡದೆ ಮಕ್ಕಳನ್ನು ಜೋಪಾನವಾಗಿ ಬೆಳೆಸಿದಳು. ಆದರೆ ಹಿರಿಮಗ ಶಿವಲಿಂಗ ಷೋಕಿಗೆ ಜೋತುಬಿದ್ದು ತಾಯಿಯನ್ನು ಮರೆತ. ಆಸ್ತಿಯಲ್ಲಿ ಹಕ್ಕು ದೊರೆಯದೆಂದಾಗ ರೋಷಗೊಂಡು ತಾಯಿಯ ವಿರುದ್ಧ ಅಪಪ್ರಚಾರ ಮಾಡಲೂ ಸಿದ್ಧನಾದ. ಅಂತೆಯೇ ತಾನ್ಬ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಸಿತು ಎಂಬ ಗಾದೆಯ ಮಾತು ನಮ್ಮಲ್ಲಿ ರೂಢಿಯಲ್ಲಿ ಬಂದಿದೆ.

★



ಹೊತ್ತು ಮುಳುಗಿ ಒಂದು ತಾಸಾದರೂ ಗಂಡನು ಮನೆಗೆ ಬರಲಿಲ್ಲವೆಂದು ಸುಂದರವ್ವನಿಗೆ ಮನಸ್ಸಿನಲ್ಲಿ ದುಗುಡ ; ಮುಂಬಾಗಿಲದಲ್ಲಿ ನಿರೀಕ್ಷಿಸುತ್ತ ಅವನು ಬರಬೇಕಾದ ದಾರಿಯತ್ತ ದೃಷ್ಟಿಯನ್ನಿರಿಸಿ ಮುಚ್ಚಂಜೆಯಿಂದ ನಿಂತಿದ್ದಳು. ಮುಂಜಾವಿನಲ್ಲಿ ತಲೆಸುತ್ತುತ್ತದೆಂದು ಹೇಳಿದ್ದನವನು. ಸುಂದರವ್ವನು, ಬೇಕಾದರೆ ಆಳನ್ನು ಕಳಿಸಿದರಾಯಿತು ಹೊಲಕ್ಕೆ ಹೋಗುವದು ಬೇಡವೆಂದು ಹೇಳಿದರೂ ಅದೇನು ಮಾಡುತ್ತದೆಂದು ಹೋಗಿದ್ದನು. ಎತ್ತುಗಳನ್ನು ಮುಂದೆ ಬಿಟ್ಟುಕೊಂಡು, ಹೆಗಲ ಮೇಲೆ ಕುಡ, ಕಣ್ಣೆ ಹಗ್ಗಗಳನ್ನು ಹೊತ್ತುಗದ್ಗದ ನಡುಗುತ್ತಲೇ, ಗಂಡನು ಮನೆಗೆ ಬಂದನು. ಸುಂದರವ್ವನು ನಡುಗಿದಳು. ನೊಗಕ್ಕೆ ಹೂಡಿದ ಎತ್ತುಗಳ ಕೊರಳು ಕೂಡ ಹರಿಯಲಿಲ್ಲ. ಹಾಗೆಯೇ ಸುಂದರವ್ವನ ಆಸರೆಯಲ್ಲಿ ಒಳಗೆ ಹೋಗಿ ಹಾಸಿಗೆ ಹಿಡಿದವನು ಮೂರೇ ಮೂರು ದಿನಗಳಲ್ಲಿ ಸತ್ತೇ ಹೋದನು. ಯಾವ ಬೇನೆಯೋ ಯಾರಿಗೂ ತಿಳಿಯಲಿಲ್ಲ.

ಸುಂದರವ್ವನು ತನ್ನ ಮೂರು ವರುಷದ ಮಗು ಶಿವಲಿಂಗನೊಂದಿಗೆ ಅನಾಥೆಯಾದಳು. ಗಂಡನ ಮರಣದಿಂದ ಹೌಹಾರಿದ ಆಕೆಗೆ ದಿಕ್ಕೇ ತೋಚದಾಯಿತು. ಬಗಲಲ್ಲಿ ಮಗನನ್ನಿಟ್ಟುಕೊಂಡು ಗಂಡನ ಶವವನ್ನು ತಬ್ಬಿ ಗೋಳಾಡಿದಳು. ಅತ್ತು ಕರೆದು ರಂಭಾಟಮಾಡಿದಳು. ಇನ್ನೂ ೨೦ ವರುಷದ ತಾರುಣ್ಯದಲ್ಲಿಯೇ ವಿಧಿಯು ಅಣಕಾಟ ನಡೆಯಿಸಿತು. ಬಳಗದವರು ಬಂದು, ನಾಲ್ಕು ಸಾಂತ್ವನ ಮಾತುಹೇಳಿ, ನಾಲ್ಕು ದಿವಸ ಇದ್ದು, ಹೋದರು.

ಮನೆಯಲ್ಲಿ ಮತ್ತಾರೂ ಇರಲಿಲ್ಲ ; ಸುಂದರವ್ವ ಹಾಗೂ ಶಿವಲಿಂಗ ಇಬ್ಬರೇ. ಗಂಡನ ಮನೆಗೆ ಬಂದು ಐದು ವರುಷವಾದರೂ ಸುಂದರವ್ವ ಒಂದಿನವೂ ಹೊರಗೆ ಹೋದವಳಲ್ಲ. ಗಂಡನು ಎಲ್ಲ ಹೊರಗಿನ ಕೆಲಸಮಾಡಿ ಕೊಡುತ್ತಿದ್ದನು; ಗಂಡನ ಮರಣದ ನಂತರ ಸುಂದರವ್ವನು ಹೊಸ್ತಿಲು ದಾಟಲೇ ಬೇಕಾಯಿತು. ಮನೆಯಲ್ಲಿ ಕುಳಿತು ತಿನ್ನಲಿಕ್ಕೇನು ನಗ ನಾಣ್ಯಗಳ ಸಂಗ್ರಹನೇ ? ಭೂಮಿತಾಯಿ ಕೊಡಬೇಕು ; ಒಕ್ಕಲು ಮಕ್ಕಳು ಬದುಕಬೇಕು ! ಆಳುಗಳನ್ನು ಅವಲಂಬಿಸಿ ಒಕ್ಕಲುತನ ಮುಂದುವರಿಯಿಸದೆ ನಿರ್ವಾಹನೇ ಇರಲಿಲ್ಲ. ಹೆಣ್ಣಿನ ಮೃದುತನ, ಕೋಮಲತೆಗಳನ್ನು ಬದಿಗಿರಿಸಿ ಗಂಡಿಸಿಗಿಂತ ಗಂಡುಸಾಗಿ ಟೊಂಕ ಕಟ್ಟಿ ನಿಂತಳು. ಮಳೆ-ಗಾಳಿ, ಛಳಿ-ಬಿಸಿಲು, ಬೇಗು - ಬೆಳಗುಗಳನ್ನು ಲೆಕ್ಕಿಸದೆ ಭೂಮಿಯಲ್ಲಿ ನಿಲ್ಲಬೇಕಾಗಿತ್ತು. ಎಷ್ಟೆಂದರೂ ಆಳು ಮಕ್ಕಳವರು ; ಎದೆಯ ಮೇಲೆ ನಿಂತಾಗಲೇ ದುಡಿದಾರು ! ಗಂಡನಂತೆಯೇ ಸುಂದರವ್ವನು ಭೂಮಿತಾಯಿಯನ್ನು ಒಲಿಸಿದಳು. ಹೊಲಗಳೆಲ್ಲ ಬೆಳೆದು ನಿಂತು ತೆನೆಗಳಿಂದ ತೂಗಾಡಿದವು.

ಮನೆಗೆಲಸಗಳೆಲ್ಲವನ್ನು ನಸುಕಿನಲ್ಲಿ ಮುಗಿಸಿ, ಒಂದು ತಾಸು ಹೊತ್ತು ಏರುವದರೊಳಗಾಗಿಯೇ ಸುಂದರವ್ವನು ಮಗನೊಂದಿಗೆ ಹೊಲದಲ್ಲಿರಹತ್ತಿದಳು. ಮೊದಮೊದಲು ಗಂಡನ ನೆನಹುಮಾಡಿ ದಿನಕ್ಕೆ ಹತ್ತಾರು ಸಲ ಕಣ್ಣೀರು ಹಾಕದಿರಲಿಲ್ಲ. ಆಗ ಮಗನೂ ಖಿನ್ನವದನನಾಗಿ ಆಕೆಯನ್ನೇ ನೋಡಿ ಅಳಲು ಪ್ರಾರಂಭಿಸುತ್ತಿದ್ದನು. ಇದನ್ನರಿತ ಸುಂದರವ್ವನು ದುಃಖವನ್ನು ನುಂಗಿಕೊಂಡು ಬಹಿರಂಗದಲ್ಲಿ ಕಣ್ಣೀರಿಡುವದನ್ನು ನಿಲ್ಲಿಸಿದಳು. ಕ್ರಮೇಣ ಮಗುವಿನ ಮುಖನೋಡುತ್ತ ಮನೆಗೆಲಸಗಳಲ್ಲಿ ಮಗ್ನಳಾಗಿ ದುಃಖ ಕಡಿಮೆ ಮಾಡಿಕೊಂಡಳು.

ದಿನಗಳುರುಳಿದಂತೆ ಆಕೆಯಲ್ಲಿ ಬದಲಾವಣೆ ನಡೆಯಿತು. ಮೈ ತುಂಬುತ್ತ ನಡೆಯಿತು. ಅನೇಕ ಸಲ ತನ್ನನ್ನೇ ತಾನು ಶಪಿಸಿಕೊಂಡಳು. “ ಒಳಗೆ ಇದ್ದು ಗಾಳಿ ಬೆಳಕಿಗೆ ಹೊರ ಬಿದ್ದುದರಿಂದ ಹೀಗಾಗಿರಲೂ ಬೇಕು ” ಈ ರೀತಿ ಅನಿಸದೆಯೂ ಇರಲಿಲ್ಲ. ಆದರೆ ವಸ್ತುಸ್ಥಿತಿ ಬೇರೆಯೇ ಆಗಿತ್ತು. ಹೊಟ್ಟೆಕೂಡ ಬೆಳೆಯುತ್ತ ನಡೆದಾಗ ಸುಂದರವ್ವನು ಗಾಬರಿಯಾದಳು. ಗಂಡ ತೀರಿದಾಗ ಬಸುರಿರಬೇಕೆಂಬುದರ ಅರಿವಾಗಹತ್ತಿತು. ಸುಮಾರು ಒಂದು ತಿಂಗಳಾದರೂ ಇದ್ದಿರಬೇಕು. ಬೆಳೆಯುತ್ತಿರುವ ಬಸುರಿನ ಪ್ರದರ್ಶನವು ಹೊರಗೆ ಹೋದಾಗ ನಡೆಯುವದೆಂದು, ಆಕೆಗೆ ಜೀವದ ಸುತ್ತ ಬಂತು. ಆದರೂ ನಿರ್ವಾಹವೇ ಇರಲಿಲ್ಲ.

ಲೇ : — ವೀ. ಚ. ಹಿತ್ತಲಮನಿ
ಧಾರವಾಡ.

ಸುಗ್ಗಿ ಬೇರೆ ಬಂದಿತ್ತು. ಕೊಯಿಲು ಮಾಡಿ, ಗೂಡು ಬಡಿದು, ತೆನೆ ಬಡಿಸಿ, ರಾಶಿ ಮಾಡುವಾಗ್ಗೆ ಮನೆಯುವರಿಲ್ಲದಿದ್ದರೇನಾಗಬಹುದು ? ಗಟ್ಟಿ ಮನಸ್ಸು ಮಾಡಿ, ನೆಲದಲ್ಲಿಯೇ ದೃಷ್ಟಿಯಿರಿಸಿ ಹೊರಗೆ ಹೊರಡುತ್ತಿದ್ದಳು. ಗರ್ಭ ಬೆಳೆದಂತೆ ಮೈಯಲ್ಲಿ ಆಲಸಿಕೆಯೂ ಹೆಚ್ಚಿತು. ಬದುವಿನ ಮೇಲಿರುವ ಗಿಡದ ನೆರಳಿನಲ್ಲಿ ಕುಳಿತು ಮೇಲ್ವಿಚಾರಣೆ ನಡೆಯಿಸುತ್ತಿದ್ದಳು. ಸದಾ, ಮತ್ತೆ ತೀರಿ ಹೋದ ಗಂಡನ ಚಿಂತೆ ಹೆಚ್ಚಿತು. "ಗಂಡ ತೀರಿದ ಸೌಭಾಗ್ಯಕ್ಕೆ ಗರ್ಭ ಬೇರೆ ಬೆಳೆಯುತ್ತದೆ'' ಒಮ್ಮೆ ಅನಿಸುತ್ತಿತ್ತು. " ಗಂಡನೇ ತನ್ನ ಉದರದಲ್ಲಿ ಹುಟ್ಟಿ ಬರುತ್ತಿದ್ದಾನೆ'' ಮತ್ತೆ ಅನಿಸುತ್ತಿತ್ತು. ಆ ಅನಿಸಿಕೆ ಆಕೆಗೊಂದು ಅಭೂತಪೂರ್ವ ಆನಂದವನ್ನೆಸಗುತ್ತಿತ್ತು. ಮಗು ಶಿವಲಿಂಗನನ್ನು ಮುಂದಿಟ್ಟುಕೊಂಡು ಮನದ ಬೇಸರಿಕೆ ಕಳೆಯಲು ಯತ್ನಿಸುತ್ತಿದ್ದಳು.

ಸುಂದರವ್ವನ ಅನಿಸಿಕೆ ಬರಿದೆ ಹೋಗಲಿಲ್ಲ ; ಗಂಡು ಮಗುವೇ ಹುಟ್ಟಿತು. ಗಂಡನದೇ ತದ್ರೂಪ ! ಅದೇ ಮಂಡ ಮೂಗು ; ಹೊಳೆವ ಕಣ್ಣುಗಳು; ಗೋದೀ ವರ್ಣದ ಮೈಬಣ್ಣ; ನಿಡಿದಾದ ತೋಳುಗಳು ! ಒಂದಿನಿತೂ ಖೇದ ಬೇಸರ ಪಟ್ಟುಕೊಳ್ಳದೆ ಸುಂದರವ್ವನು ಮಗುವನ್ನು ಬೆಳೆಯಿಸಿದಳು. ತಂದೆ ಇರುವಾಗ ಬೆಳೆಯಿಸುವಂತೆಯೇ ಒಂದಕ್ಕೂ ಕೊರತೆ ಮಾಡದೆ ಮಗುವನ್ನು ಜೋಪಾನ ಮಾಡಿದಳು. 'ನಿಂಗಜ್ಜ' ಎಂದು ಅಜ್ಜನ ಹೆಸರನ್ನೇ ಇಟ್ಟಳು. ದೇವರು ತಾಯಿ ಮಕ್ಕಳನ್ನು ಚಂದದಿಂದ ಬೆಳೆಯಿಸಿದನು.

ಮರುವರುಷ ಭೂದೇವಿ ಕೃಪೆಮಾಡಿದಳು. ಬಂಡಿತುಂಬಿ ಸುಂದರವ್ವ ಕಾಳುತುಂಬಿ ಮನೆಗೆ ತಂದಳು. ಅವರ ಹೊಲ ಬರಿಯ ನಾಲ್ಕೇಕೂರಿಗೆ. ಹತ್ತಿಹೊಂದಿದ ಐದು ಕೂರಿಗೆ ಪಿಂಡ ಭೂಮಿಯು ಮಾರಾಟಕ್ಕೆ ಬಂತು. ಒಳ್ಳೆಯ ಫಲಭರಿತ ನೆಲವದು. ಸುಂದರವ್ವ ಸಾಹಸಮಾಡಿದಳು. ಅದನ್ನೂ ಕೊಂಡಳು. ಆ ವರುಷ ಕಾಳಿಗೂ ವಿಪರೀತ ಧಾರಣೆ ಸಿಕ್ಕಿತ್ತು. ಒಂದು ಸಾವಿರ ರೂಪಾಯಿ ಕಡಿಮೆಯಾಯಿತು. ಅವರಿವರನ್ನು ಕೇಳುವದೇಕೆಂದು ದಾಗೀನು ಮಾರಿ ಹಣ ಕೂಡಿಸಿದಳು. ಹದಿನೈದು ನೂರು ರೂಪಾಯಿಗೆ ಒಂದು ನಗಹತ್ತಿಯಾದಾಗ ಒಕ್ಕಲಿಗರನ್ನೆಂತು ಕೇಳುವದು! 'ಲಕ್ಷ್ಮೀ' ಹತ್ತಿಬೆಳೆದವರು ಲಕ್ಷ್ಮೀದೇವಿಯನ್ನೇ ಮನೆತುಂಬಿಸಿಕೊಂಡರು. ಮಕ್ಕಳ ಭಾಗ್ಯದ ಕಾಲ ಶನಿಯುದರಲ್ಲಿದೆಯೆಂದು ಸುಂದರವ್ವನುಹಿರಿಹಿರಿ ಹಿಗ್ಗಿದಳು. ಒಂದೇ ವರುಷದಲ್ಲಿ ಮಾರಿದ ಆಭರಣ ಮಾಡಿಸಿಕೊಂಡು ಕೈಯಲ್ಲಿ ಎರಡು ಮೂರು ಸಾವಿರ ನಗದು ಹಣ ಮಾಡಿಕೊಂಡಳು.

ದೇವರು ಕೊಟ್ಟು ಮರೆಯುತ್ತಾನಂತೆ ! ನಾಲ್ಕಾರು ವರುಷಗಳಲ್ಲಿ ಸುಂದರವ್ವನು ಹಳೆಯ ಮನೆಯನ್ನು ತಿರುವಿ ಹಾಕಿಸಿದಳು. ಪಡಜಂತಿಯ ಆಟವಾಳಿಗೆಯನ್ನು ಹಾರಿಸಿ, ಗಚ್ಚಿನ ಕಂಬ ಕಟ್ಟಿಸಿದಳು. ನಾಲ್ಕೈದು ಹಿಂಡುವ ದನಗಳು ಹಕ್ಕೆಗೆ ಮಂಗಲವನ್ನುಂಟು ಮಾಡಿದವು. ದಿನ ಹೋದವೆಂದು ಎತ್ತುಗಳನ್ನು ಬದಲು ಮಾಡಿ ಒಳ್ಳೇ ಮೂಡಲ ಹೋರಿ ತಂದಳು. ಹೊಲ ಮನೆಗೆಲಸವು ತುಂಬಾ ಹೆಚ್ಚಿತು.

ಶಿವಲಿಂಗನನ್ನು ಶಾಲೆಗೇನೋ ಕಳಿಸಲಾಯಿತು. ಸುಂದರವ್ವನಿಗೆ ಅವನ ಅಭ್ಯಾಸದತ್ತ ಲಕ್ಷ ಹಾಕುವದಾಗಲಿಲ್ಲ. ಶಿವಲಿಂಗನೂ ಕಲಿಯಲಿಲ್ಲ. ಗುರುಗಳೂ ಕಳಕಳಿಯಿಂದ ಕಲಿಸಲಿಲ್ಲ. ಸ್ಥಿತಿವಂತರ ಮಗನೆಂದು ವರುಷ ವರುಷವೂ ಮೇಲಿನ ವರ್ಗಕ್ಕೆ ಹೋಗುತ್ತಲೇ ಇದ್ದ. ಆದಕ್ಕೆ ಅಪ್ರತ್ಯಕ್ಷ ರೀತಿಯಲ್ಲಿ ಪ್ರತಿಫಲವೂ ಸಿಕ್ಕುತ್ತಿತ್ತು. ನಾಲ್ಕಾರು ಈಯತ್ತೆ ಪಾಸಾದಂತಾದನು. ತಂದೆಯಿಲ್ಲದ ಮಗನೆಂದು ಸುಂದರವ್ವನು ತಾನೇ ತಂದೆತಾಯಿಗಳಿಬ್ಬರೂ ಆಗಿ ಮಕ್ಕಳನ್ನು ಅಚ್ಚೆಯಿಂದ ಸಾಕಿ ಸಲುಹಿದಳು. ಯಾವುದಕ್ಕೂ ಕೊರತೆ ಮಾಡಲಿಲ್ಲ. ಶಿವಲಿಂಗನಿಗೆ ಮುಂದೆ ಕಲಿಯುವ ಇಚ್ಛೆಯೇ ಉಳಿಯಲಿಲ್ಲ. ಸುಂದರವ್ವನಿಗೂ ಅವನು ಕಲಿಯುವದು ಇಷ್ಟವಿರಲಿಲ್ಲ. ಇಷ್ಟು ದಿನಗಳ ವರೆಗೆ ತಾನು ನೋಡುತ್ತಿದ್ದ ಒಕ್ಕಲುತನವನ್ನು ಮುಂದೆ ಅವನ

ಕೊರಳಿಗೆ ಕಟ್ಟಲು ಆತುರ ವ್ಯಕ್ತಪಡಿಸಿದಳು. ಅಂತೆಯೆ ಶಿವಲಿಂಗನು ಶಾಲೆಯನ್ನು ಬಿಡುವ ವಿಚಾರದ ಪ್ರಸ್ತಾಪ ಎತ್ತಿದಾಗ ಸುಂದರವ್ವನು ಅದಕ್ಕೆ ಪ್ರೋತ್ಸಾಹನೆಯನ್ನು ನೀಡಿದಳು. ಶಾಲೆಯೇ ಬೇಸರವಾದ ಶಿವಲಿಂಗನಿಗೆ ಒಕ್ಕಲುತನವಂತೂ ಹಿಡಿಸಲಿಲ್ಲ. ಅದರ ಕಡೆಗೆ ಅವನ ಮನಸ್ಸು ಹರಿಯಲಿಲ್ಲ.

ಶಾಲೆ ಬಿಟ್ಟ ಶಿವಲಿಂಗನಿಗೆ ಮೂವರು ಗೆಳೆಯರು ದೊರೆತರು. ಹೊರಗಿನ ಓಣಿಯ ಚಂದ್ರು, ಎರಡು ಸಲ ಮ್ಯಾಟ್ರಿಕ್ ಪರೀಕ್ಷೆ ನಾಪಾಸಾಗಿ ಊರನ್ನು ಗಟ್ಟಿಯಾಗಿ ಹಿಡಿದಿದ್ದನು. ಅಗಸೆ ಬಾಗಿಲ ವಿರೂಪ, ಹಳ್ಳಿಯ ನಾಟಕ-ಕಂಪನಿಗಳಲ್ಲಿ ಓಡಾಡಿ, ತಲೆ ತುಂಬ ಕೂದಲು ಬೆಳೆಯಿಸಿಕೊಂಡು ತಿರುಗಾಡುತ್ತಿದ್ದನು. ಭಾವೀಕಟ್ಟಿ ಶೀನಪ್ಪನು ಸಪ್ಲಾಯ ಖಾತೆಯಲ್ಲಿ ಗೋಡಾವುನ ಕೀಪರ ಎಂದು ಕೆಲಸ ಮಾಡಿದ್ದನು. ಸಪ್ಲಾಯ ಮುಗಿದನಂತರ ಮನೆಗೆ ಮೂಲಾಗಿ ಊರು ಸೇರಿದ್ದನು. ಚಂದ್ರುವಿನ ತಲೆಯಮೇಲಿನ ಕ್ರಾಪು, ಮೈಯೊಳಗಿನ ಬುಶ್‌ಶರ್ಟ, ಪ್ಯಾಂಟುಗಳು ಮೊದಲು ಶಿವಲಿಂಗನನ್ನು ಆಕರ್ಷಿಸಿದವು. ತಿಂಗಳೊಪ್ಪತ್ತಿನಲ್ಲಿ ತಾನೂ ಚಂದ್ರುವಿನಂತೆಯೇ ಆಗಿಬಿಟ್ಟನು. ಮಧ್ಯಾನ್ಹವಾಗುತ್ತಲೆ ಹಳ್ಳದ ದಂಡೆ ಹಿಡಿದು, ಒಗೆಯಲು ಸೇರಿದ ಹೆಣ್ಣುಮಕ್ಕಳನ್ನು ನೋಡುತ್ತ ವಿರೂಪನಂತೆ ತಿರುಗಾಡಹತ್ತಿದನು. ಸಂಜೆಯ ಮುಂದೆ ಭಾವಿಯ ಸಮೀಪದಲ್ಲಿ ಕುಳಿತು ನೀರು ತಕ್ಕೊಂಡು ಹೋಗುವ ಹುಡಿಗೆಯರನ್ನು ನೋಡಿ ಶಿಳ್ಳು ಹಾಕುವದನ್ನು ಕಲಿತನು. ಶೀನಪ್ಪನ ಬಿಳಿಯ ಬತ್ತಿಯು ಬಾಯಲ್ಲಿ ಬಂತು. ನಾಲ್ಕಾರು ತಿಂಗಳುಗಳಲ್ಲಿ ಶಿವಲಿಂಗನು ತಯಾರಾಗಿಯೇ ಬಿಟ್ಟನು. ಚಂದ್ರು, ವಿರೂಪ, ಶೀನಪ್ಪರು ೭-೮ ವರುಷಗಳಿಂದ ಸತತ ಯತ್ನಿಸಿ ಸಾಧಿಸಿದವುಗಳೆಲ್ಲವನ್ನೂ ಶಿವಲಿಂಗನು ಅರ್ಧವರುಷದಲ್ಲಿ ಕರಗತಮಾಡಿಕೊಂಡನು.

ಮೂವರೂ ಗಾಢ ಕುಸ್ನೇಹಿತರಾದರು. ಶಿವಲಿಂಗನು ಮನೆಯನ್ನೇ ಮರೆತನು. ಊಟಕ್ಕೆ ಯಾವಾಗ್ಗೆ ಹೋಗುತ್ತಿದ್ದನೋ ಅದೂ ತಿಳಿಯದು. ಅದರ ಅಗತ್ಯವೂ ಇರಲಿಲ್ಲ. ಊರಲ್ಲಿಯ ಮೂರೂ ಚಹದ ಅಂಗಡಿಗಳಲ್ಲಿ ಅವನ ಉದ್ದರಿ ಇತ್ತು. ಉಳಿದ ಗೆಳೆಯರು ಇದ್ದವರೇನಲ್ಲ.

ಅವರು, ಶಿವಲಿಂಗನು ಜೊತೆಯಲ್ಲಿ ಇಲ್ಲದಾಗಲೂ ಅವನ ಲೆಕ್ಕಕ್ಕೇ ಔದಾರ್ಯದಿಂದ ತಾವು ತಿಂದುದನ್ನೂ ಹಚ್ಚಿಬಿಡುತ್ತಿದ್ದರು. ಸ್ಥಿತಿವಂತರ ಉದ್ದರಿ ಧಾರಾಳವಾಗಿ ಬೆಳೆಯುತ್ತಿದ್ದರೆ ಚಹದಂಗಡಿಯವರಿಗೆ ಬಲು ಹಿಗ್ಗು ! ಶಿವಲಿಂಗನು ಎಲ್ಲರ ಅಚ್ಚುಮೆಚ್ಚಿನ ಗಿರಾಕಿಯಾದನು.

ಸುಂದರವ್ವನಿಗೆ ಶಿವಲಿಂಗನ ಪ್ರಗತಿ ತಿಳಿಯದಿದ್ದರೂ, ಅವನಲ್ಲಿಯ ಬದಲಾವಣೆಯನ್ನು ಗುರುತಿಸಿದ್ದಳು. ಒಕ್ಕಲುತನಕ್ಕೆ ಹಚ್ಚಲು ಪ್ರಯತ್ನಿಸಿ ನಿರಾಶಳಾದ ಆಕೆಯು, ವ್ಯಾಪಾರ ಮಾಡಿಸಬೇಕೆಂದು ಕೇಳಿ ನೋಡಿದಳು. ಒಕ್ಕಲುತನದಲ್ಲಿ ಲಾಭಾಂಶ ಇಲ್ಲವೇ ಇಲ್ಲ; ಇದ್ದರೂ ತೀರ ಕಡಿಮೆ. ಅದರಿಂದ ದುಡ್ಡು ಬೇಗ ಬೇಗ ಕೂಡಿ ಬೀಳುವದಿಲ್ಲ. ವ್ಯಾಪಾರದಿಂದಲೇ ಧನವಂತರಾಗುವದಕ್ಕೆ ಅವಕಾಶ. ತನ್ನ ಹಳ್ಳಿಯ ದೃಷ್ಟಾಂತವೇ ಸಾಕು. ಶೆಟ್ಟರ ಶರಣಪ್ಪ ಚಿಕ್ಕ ವ್ಯಾಪಾರಿಯಾದರೂ ಎಲ್ಲರಿಗಿಂತಲೂ ಸ್ಥಿತಿವಂತನಾಗಿದ್ದನು. ವ್ಯಾಪಾರವೆಂದೊಡನೆ, ಒಂದು ಚಿಕ್ಕ ಕಿರಾಣಿ ಅಂಗಡಿ ಇಡುವದಕ್ಕಿಂತ ಹೆಚ್ಚಿನದು ಆಕೆಗೆ ತೋಚಲಿಲ್ಲ. ಐದುನೂರು ರೂಪಾಯಿ ನಗದು ಕೊಟ್ಟು ಅಂಗಡಿಯ ಏರ್ಪಾಡು ಮಾಡೆಂದಳು.

ತೂಕಡಿಸುತ್ತಿರುವವನಿಗೆ ಹಾಸಿಗೆ ಬಿಚ್ಚಿಕೊಟ್ಟಂತಾಯಿತು, ವ್ಯಾಪಾರದ ಸೂಚನೆ ಶಿವಲಿಂಗನಿಗೆ ! ಸುಂದರವ್ವನು ಆಗೀಗ ಕೊಡುತ್ತಿದ್ದ ಪುಡಿಕಾಸು ಅವನ ಮುಖಕ್ಷೌರ, ಚಹ, ಚುಟ್ಟಗಳಿಗೂ ಸಾಕಾಗುತ್ತಿರಲ್ಲಿಲ್ಲ. ತಾಯಿಯ ಕಣ್ಣು ತಪ್ಪಿಸಿ ಹಲವಾರು ಸಲ ಕಳವನ್ನೂ ಮಾಡಿದ್ದನು. ಕಾಳುಕಡಿ, ಹೊಟ್ಟುಮೇವುಗಳನ್ನು ಹಿತ್ತಲು ಮುಂಚೆ, ಕಣಕಟ್ಟ, ಹೊಲತೋಟಗಳಿಂದ ನೇರವಾಗಿ ಪಾದಗಟ್ಟಗೆ ಸಾಗಿಸಿದ್ದನು. ಈಗ ಶೆಟ್ಟಿಯಾಗುವ ವಿಚಾರ ಹುಟ್ಟಿದಾಗ ಹಿಗ್ಗಿ ಹೀರೆಕಾಯಿಯಾದನು. ನಿತ್ಯವೂ ಸಾಕಷ್ಟು ದುಡ್ಡು ಕೈಯಲ್ಲಿ ಕೂಡಿಬೀಳುವದು. ಅದರ ಹಂಚಿಕೆಗೆ ಮಿತ್ರತ್ರಯರೂ ಇದ್ದೇ ಇದ್ದರು.

ದೀವಳಿಗೆಯ ಶುಭ ಮುಹೂರ್ತದಲ್ಲಿ ಅಂಗಡಿಯು ಪ್ರಾರಂಭವಾಯ್ತು. ಹೊರಗಡೆ ಮಳಿಗೆಯಲ್ಲಿ ಅಂಗಡಿ; ಒಳಗಡೆ ಕೋಣೆಯಲ್ಲಿ ಇಸ್ಪೇಟನ ಚಾವಡಿ ! ಯಾರೋ ಗಲ್ಲೆಯ ಮೇಲೆ ಕುಳಿತರು. ಯಾರೋ ಸಾಮಾನು ಕೊಟ್ಟರು. ಸಂಜೆಯಲ್ಲಿ ಉಳಿದ, ಗಲ್ಲೆಯಲ್ಲಿ ಸೇರಿ ಬಿದ್ದ ಹಣವನ್ನು ಶಿವಲಿಂಗನು ಕಿಸೆಗೆ ಸೇರಿಸಿ ನಡೆಯುತ್ತಿದ್ದನು. ಅಂಗಡಿಗೆ ಸಾಮಾನು ತರಲಿಕ್ಕೆ ಶಿವಲಿಂಗನಿಗೆ ಆಗಾಗ ಪಟ್ಟಣಕ್ಕೆ ಹೋಗಿ ಬರಬೇಕಾಗುತ್ತಿತ್ತು. ಅಲ್ಲಿಯ ಅನೇಕ ದೊಡ್ಡ ವ್ಯಕ್ತಿಗಳ ಸಂಬಂಧ ಅನಿವಾರ್ಯವಾಗಿ ಬಂತು. ಅವರಲ್ಲಿ ಇಬ್ಬರು ಮುಖ್ಯರು—ಒಬ್ಬನು ಬೀಡಿಯ ಅಂಗಡಿ ಹಸನಮಿಯಾ ; ಇನ್ನೊಬ್ಬನು ಹೂವಿನ ಅಂಗಡಿ ಹಾಲಪ್ಪ. ಹಸನಮಿಯಾ ಓ. ಸಿ. ಆಟದಲ್ಲಿಯ ಚಾಣಾಕ್ಷತೆ, ಆಸಕ್ತಿಗಳ ಪರಿಚಯ ಮಾಡಿಕೊಟ್ಟರೆ ಹಾಲಪ್ಪ ಒಂದೆರಡು ಹೆಣ್ಣುಗಳ ಸಂಗದ ಸೌಕರ ಏರ್ಪಡಿಸಿಕೊಟ್ಟರು.

ಶಿವಲಿಂಗನು ಸ್ವಲ್ಪೇ ಕಾಲದಲ್ಲಿ ಶಿವಲಿಂಗಣನಾಗಿ ಬಿಟ್ಟನು. ಹಲವರು ಸಾವುಕಾರನೆಂದೂ ಕರೆದರು. ರಬ್ಬು ಬಣ್ಣದ ಪಟ್ಟಪಟ್ಟಿಯ ಅಂಡರವೇರ ತೊಟ್ಟು ಮೇಲೆ ಸುಪರಫಾಯಿನ ಮುಸರಾಯಿಜ ಧೋತರವುಟ್ಟು, ರೇಶ್ಮೆಯ ಡಬ್ಬಲ ಕಪ್ಪಿನ ಅಂಗೀತೊಟ್ಟು ಉಲನ್‌ಕೋಟನ್ನು ಎಡಭುಜದ ಮೇಲೆ ತೂಗಾಡಿಸುತ್ತ ಬೆರಳುಗಳಲ್ಲಿಯ ಉಂಗುರ ಹಾಗೂ ಮುಂಗೈಯಲ್ಲಿಯ ರೋಲ್ಡಗೋಲ್ಡ ಪಟ್ಟಿಯ ವಾಚನ್ನು ಪ್ರದರ್ಶಿಸುತ್ತ, ಬರಿತಲೆಯ ಸೊಗಸುಗಾರನಾಗಿ ನಡೆದಾಗ ಅನೇಕರು ನಿಂತು

ನೋಡುತ್ತಿದ್ದರು. ತಾಯಿ ಸುಂದರವ್ವನಿಗೂ ಹಲವಾರು ಸಲ ಮಗನ ಉತ್ಕರ್ಷ ಕಂಡು ಹೆಮ್ಮೆ ಆನಿಸಿತ್ತು.

ಶಿವಲಿಂಗಣ್ಣನವರ ‘ ನಾಮೆ ’ ನಾನಾ ಮುಖವಾಗಿ ಸುತ್ತಲಿನ ಹಳ್ಳಿ ಪಟ್ಟಣಗಳಲ್ಲೆಲ್ಲ ಹರಡಿತು. ತಕ್ಕಂತೆ ಷೋಕಿಯೂ ಬೆಳೆಯುವದು ಇಷ್ಟವಲ್ಲವೆ ? ಚಂದ್ರೂ, ವಿರೂಪ, ಶೀನಪ್ಪರು ಅವನವೇ ಸ್ಲೀಪರ-ಚಪ್ಪಲ, ಪೈಜಮ-ಪ್ಯಾಂಟು, ಶರ್ಟು-ಧೋತರ, ಹೇರಆಯಿಲ-ಹಣಿಗೆ, ಬೀಡಿ ಶಿಗರೇಟು ಉಪಯೋಗಿಸಿ ಚೈನಿ ಮಾಡಿದರು.

ಒಂದಿನ ಸಾಯಂಕಾಲ - ತುಂಬಾ ಪ್ರಶಾಂತವಾದ ಕಾಲವದು. ಸೂರ್ಯ ಕ್ಷಿತಿಜದಂಚಿನಲ್ಲಿ ಇಳಿದು ಹೋಗಿದ್ದನು. ಪಡುವಣವೆಲ್ಲ ರಂಗು ರಂಗೇರಿತ್ತು. ಗಾಳಿ ಮೆಲ್ಲಗೆ ಬೀಸುತ್ತಿತ್ತು. ದನಕರುಗಳು ಕೊರಳ ಗಂಟೆಗಳ ಸದ್ದುಗೈಯುತ್ತ ಮನೆಗೆ ಮರುಳುತ್ತಿದ್ದವು. ಅವುಗಳ ನಡಿಗೆಯಿಂದ ಎದ್ದ ಬೀದಿಯ ಧೂಳು ಆಗಸಕ್ಕೇರಿ ಅಂದವಾಗಿ ನಿಂತಿತ್ತು. ಹೊಲಗಳಿಗೆ ಹೋದವರು ಮನೆಗೆ ಮರಳುತ್ತಿದ್ದರು. ಹುಬ್ಬಳ್ಳಿಯ ಕಡೆಯಿಂದ ಹರಿಹರದ ಕಡೆಗೆ ನಡೆದ ಮೇಲುಗಾಡಿ ಹೋಗಿ ಅರ್ಧ ಘಂಟೆಯಾಗಿತ್ತು. ಪ್ರಯಾಣಿಕರು ಒಬ್ಬೊಬ್ಬರಾಗಿ ಊರ ಕಡೆಗೆ ಬರುತ್ತಿದ್ದರು. ಮೂವರೂ ಸ್ನೇಹಿತರು ವಾಯುಸೇವನೆಗೆಂದು ಬಂದವರು ಮಾರ್ಗದ ಪಕ್ಕದಲ್ಲಿ ಕುಳಿತು ಹೆಂಗಳೆಯರ ಪುರಾಣ ತೆಗೆದು ಒಳ್ಳೇ ಮೋಜಿನಲ್ಲಿ ಕುಳಿತಿದ್ದರು.

ಒಂದು ಹುಡಿಗೆ, ನಡುವಯುಸ್ಸಿನ ಒಬ್ಬ ಗಂಡಸಿನೊಂದಿಗೆ ರೇಲ್ವೆ ನಿಲ್ದಾಣದ ಕಡೆಯಿಂದ ಊರ ಕಡೆಗೆ ಬರುತ್ತಿದ್ದುದು ದೂರದಿಂದ ಗೆಳೆಯರ ಕಣ್ಣಿಗೆ ಬಿತ್ತು. ಗಂಡಸಿನ ತಲೆಯ ಮೇಲೆ ಭಾರವೆನಿಸಬಹುದಾದ ಒಂದು ಟ್ರಂಕ ಇತ್ತು. ಹುಡಿಗೆಯು ಒಂದು ಕೈಯಲ್ಲಿ ಕಸೂತಿ ಹಾಕಿದ ಫ್ಯಾಶನ್ನಿನ ಕೈಚೀಲವನ್ನೂ ಇನ್ನೊಂದು ಮಡಚಿದ ಕೈಯಲ್ಲಿ ಮುಚ್ಚಿದ ‘ ಲೇಡಿ ಅಂಬ್ರೇಲಾ ’ ಹಿಡಿದು ಬಳಕುತ್ತ ಬರುತ್ತಿದ್ದಳು. ಪ್ರಿಂಟಿನ ಪತ್ತಲ, ನೇತಾಡುತ್ತಿದ್ದ ಹೂ ಸಿಕ್ಕಿಸಿದ ಜಡೆ ಹೆಂಗಸಿನ ಕಾಲಲ್ಲಿಯ ಚಪ್ಪಲಿ, ಕೈಚೀಲ, ಕೊಡೆಗಳು ಆ ಹಳ್ಳಿಗೆ ಮೊದಲುಸಲ ಪ್ರವೇಶ ಮಾಡಿದವು. ಗೆಳೆಯರೆಲ್ಲ ಅವರತ್ತ ಮೈಗಳೆಲ್ಲ ಕಣ್ಣುಗಳನ್ನಾಗಿಸಿ ದಿಟ್ಟಿಸಿದರು- ಕುಳಿತ ಸ್ಥಳದಿಂದೆದ್ದು ಮಾರ್ಗದ ಸಮೀಪಕ್ಕೆ ಎದ್ದು ಬಂದರು ; ಹಳ್ಳಿಗೆ ಹೊಸಬರಾದ ಅವರು ಊರ ಅಗಸಿಯಲ್ಲಿ ವಿಚಾರಣೆ ನಡೆಯಿಸಬೇಕಾಗಿಯೇ ಇತ್ತು. ಹುಡಿಗೆಯರ ಸಂದರ್ಶನದಲ್ಲಿ ಪಳುಗಿದ ಚಂದ್ರು ಮಾತಿಗೆ ಮೊದಲು ಮಾಡಿದನು: ಆ ಹುಡಿಗೆಯು, ಅವರೂರಿಗೆ ಸದ್ಯದ ವಯಸ್ಸಾದ ಶಿಕ್ಷಕಿಯ ಬದಲು ನೇಮಣೂಕಾಗಿ ಬಂದ ಶಾಲಾ ಶಿಕ್ಷಕಿಯಾಗಿದ್ದಳು. ಹುಡಿಗೆ ಸುಮ್ಮನೇ ನಿಂತಿದ್ದಳು. ಅವಳೊಂದಿಗಿದ್ದ ಅವಳ ತಂದೆಯೇ ಎಲ್ಲ ಹೇಳಿದನು. ಶಿವಲಿಂಗಪ್ಪನು ಮಹಾಧೂರ್ತ-ಚಾಣಾಕ್ಷ ! ಒಂದು ನಿಮಿಷವನ್ನೂ ಬರಿದೆ ಹೋಗಗೊಡದೆ ಅವಳನ್ನೇ ದಿಟ್ಟಿಸುತ್ತಿದ್ದನು. ನಾಲ್ವರನ್ನೂ ಒಮ್ಮೆ ಈಕ್ಷಿಸಿ ಎಲ್ಲರಲ್ಲಿ ಅತಿ ಡೌಲು ಕಾಣುತ್ತಿದ್ದ ಶಿವಲಿಂಗಪ್ಪನನ್ನೇ ವದನಾರವಿಂದೆಯಾಗಿ, ಕಡೆಗಣ್ಣಿನಲ್ಲಿ ಆಶಾದೃಷ್ಟಿಯಿಂದ ನೋಡಿದಳು. ಆ ನೋಟದಲ್ಲಿ ಹೊಸಬಳಾದ ಆಕೆಗೆ ಆಶ್ರಯ ಬೇಕೆಂಬ ಸಂಕೇತವಿತ್ತು. ಇಂಥ ಅನೇಕ ಸಂದರ್ಭಗಳಲ್ಲಿ ಪರಿಪರಿಯಾಗಿ ತರಬೇತಿ ಪಡೆದು ಪಳುಗಿದ ಶೀನಪ್ಪನು ಮುಂದೆ ಬಂದು, ಎಲ್ಲ ಹೊಣೆ ಹೊತ್ತವನಂತೆ ಭರವಸೆ ಕೊಟ್ಟು, ಶಿವಲಿಂಗಪ್ಪನ ಅಂಗಡಿಮನೆಯ ಎರಡು ಕೋಣೆಗಳನ್ನು ಖಾಲೀ ಮಾಡಿಸಿ ಕೊಡುವದಾಗಿ ಹೇಳಿದನು. ತನ್ನ ಹೆಸರು ನೀರು ಕುಡಿಸೊ ನೀಲಗಂಗಾ ಎಂದು ಆ ಹುಡಿಗೆಯು ಹೇಳಿದಾಗ ಗೆಳೆಯರಿಗೆ ಅದ್ಭುತ ಅಚ್ಚರಿಯಾಯಿತು. ಶಿವಲಿಂಗಪ್ಪನು ಆಕೆಯ ಹೆಸರನ್ನು ಅನೇಕ ಸಲ ಬಾಯಿ-ಪಾಠ ಕಲಿಯುವ ಮಕ್ಕಳು ಹೇಳಿ ಕೊಳ್ಳುವಂತೆ ಮನಸ್ಸಿನಲ್ಲಿ ಹೇಳಿ ಕೊಂಡನು. ವಿರೂಪ ಬಾಯಿ ತೆರೆದು ಸೊಗಸಾದ ಹೆಸರೆಂದು ಮೆಚ್ಚಿಗೆ ವ್ಯಕ್ತಪಡಿಸಿದನು.

ಶಿಕ್ಷಕಿಯಾಗಿ ಬಂದ ನೀಲಗಂಗೆ ಈ ಗೆಳೆಯ

ವೃಂದ ಸರಸ್ಸಿನ ಅಂತರ ಗಂಗೆಯಾಗಲು ಬಹಳ ದಿನ ಹಿಡಿಯಲಿಲ್ಲ. ಶಿವಲಿಂಗನ ಜೇಬಿಗೆ ತೂತೇ ಬಿತ್ತು. ಅಂಗಡಿ ಹೆಸರಿಗೆ ಉಳಿಯಿತು. ಯಾವಾಗ ಕೇಳಿದರೂ ಒಂದು ಸಾಮಾನು ದೊರೆಯುತ್ತಿರಲಿಲ್ಲ. ಮುಗಿದ ಸಾಮಾನು ತಂದಿಡುವದೂ ಮರೆತ್ಹೋಯ್ತು ! ಆದರೆ ಪಟ್ಟಣದಿಂದ ತಿಂಡಿ ತಿನಸು, ಅಂಬಾಡಿ ಎಲೆ, ಹೂವಿನ ಕುಚ್ಚ ಇನ್ನೂ ಏನೇನೋ ಬರುವದು ಮಾತ್ರ ತಪ್ಪದೇ ಸಾಗಿತು.

ಸಾಲಗಾರರೆಲ್ಲ ಬಂದು ಮನೆತನಕ ಎಡತಾಗಿದಾಗ ಸುಂದರವ್ವ ಸರಿಯಾಗಿ ಕಣ್ಣು ತೆರೆದಳು. ಮಗನ ದರ್ಬಾರದ ಕೂಲಂಕಷ ಅರಿವಾಯಿತು. ಶಿವಲಿಂಗನಿಗೆ ಬಗೆಬಗೆಯ ಬುದ್ಧಿವಾದ ಹೇಳಿದಳು. ಅವಳಿಗೆ ಕಿವಿಗೊಡುವ ಕಾಲ ಸರಿದು ಬಹಳ ಸಮಯವಾಗಿತ್ತು. ಅವಳ ಹಿತನುಡಿ ಬೋರ್ಗಲ್ಲ ಮೇಲಿನ ಮಳೆಯಾಯಿತು. ಪ್ರತಿಯಾಗಿ ತಾಯಿಗೂ ಎಟ್ಟೆ ಮಾತುಗಳನ್ನು ಕೇಳಬೇಕಾಗಿ ಬಂತು. ತನ್ನ ತಂಟೆಗೆ ಯಾರೂ ಬರಬಾರದೆಂದು ಖಡಾಖಡಿಯಾಗಿ ಹೇಳಿದನು. ಕೈಬಿಟ್ಟು ಹೋಗುತ್ತಿರುವ ಮಗನ ಪ್ರಥಮ ಪರಿಚಯ ಅಂದೇ ಸುಂದರವ್ವನಿಗಾದುದು. ಸುಂದರವ್ವ ರಮಿಸಿ ಹೇಳಿದಳು ; ಬೆದರಿಸಿ ಹೇಳಿದಳು; ಸೆಡವುಗೊಂಡು ಹೇಳಿದಳು. ತಾನು ಕೂಡಿಟ್ಟುದು, ಗಳಿಸಿ ಬೆಳೆಯಿಸಿದುದು ತನ್ನ ಕಣ್ಣೆದುರಿಗೇನೇ ತೂರಿ ಹಾಳಾಗುವದನ್ನು ಆಕೆ ಸಹಿಸದಾದಳು. ಮೇಲಾಗಿ, ಮಗನು ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗುವದನ್ನು ಯಾವತಾಯಿ ನೋಡಿ ಸುಮ್ಮನೆ ನಿಂತಾಳು !

ಅಂದು ಸಂಜೆಗೆ ಸ್ವಲ್ಪ ತಡ ಮಾಡಿಯೇ ಶಿವಲಿಂಗಪ್ಪನು ಮನೆಗೆ ಬಂದನು. ಮತ್ತೂ ಒಂದು ಸಲ ಹೇಳೋಣವೆಂದು ಅವನು ಕುಳಿತೆಡೆಗೆಸುಂದರವ್ವನು ಹೋದಳು. ತನ್ನ ಬೆಳೆದ ಮಗು ಇನ್ನೂ ಎಳೆಯ ಕಂದಮ್ಮನೇ ಎಂದು ಮೊಲೆಯುಣಿಸುವಾಗ ಬರ ಸೆಳೆಯುವಂತೆ, ತೀರ ಸನಿಯಕ್ಕೆ ಹೋಗಿ ಮೈದಡವಿ ಬುದ್ಧಿಯ ಮಾತುಗಳನ್ನು ಹೇಳಬೇಕೆಂದು ಹತ್ತಿರಕ್ಕೆ ಹೋದಳು. ಸಹಿಸಲಸಾಧ್ಯವಾದ ಉಗ್ರ ವಾಸನೆ. ಕಣ್ಣು ಕೆಂಪಾಗಿವೆ; ಮುಖ ಉರಿಯುತ್ತಿದೆ. ಸುಂದರವ್ವನು ಇಳಿದೇ ಹೋದಳು. ಮೈಮೇಲೆ ಎಚ್ಚರವೇ ಉಳಿಯಲಿಲ್ಲ. ಬಾಯಿಗೆ ಬಂದುದು ಒಂದೂ ಹಿಂದಿರುಗಲಿಲ್ಲ. "ನೀಚ ! ಲಫಂಗ ! ಕುಡುಕ ! !...." ಇನ್ನೂ ಏನೇನೋ ರಾಣಿಗ ಕರೆದಂತೆ ಕರೆದಳು. ಶಿವಲಿಂಗಪ್ಪನಿಗಾದರೂ ಎಲ್ಲಿ ಎಚ್ಚರವಿತ್ತು ? ತಾಯಿಯೆಂಬುದೂ ಅವನ ಮನಸ್ಸಿನಿಂದ ಹಾರಿ ಹೋಗಿತ್ತು. "ನಾನು ಸರ್ವ ಗುಣ ಸಂಪನ್ನ ! .... ನನ್ನೊಂದಿಗೆ ನೀವಾರೂ ಇರಬೇಕಾಗಿಲ್ಲ- ಎಲ್ಲರನ್ನು ಒದ್ದು ಹೊರಗೆ ಹಾಕುತ್ತೇನೆ" ಬೆದರಿಸಿ ಗರ್ಜಿಸಿದನು. ಅವಳ ಮೈ ಮೇಲೆ ಕೈ ಮಾಡಿ, ಸಂದುಕದ ಬೀಗ ಕಿತ್ತುಕೊಂಡನು. ಒಬ್ಬ ನಡುವಯಸ್ಸಿನ ಹೆಂಗಸು ಪಶುವಿನಂತಹ ತರುಣನ ಎದುರಿನಲ್ಲಿ ಹೇಗೆ ತಡೆದಾಳು ? ನೆಲಕ್ಕೆ ಬಿದ್ದುಬಿಟ್ಟಳು. ಇಡೀಯ ರಾತ್ರಿ ಅತ್ತುಕರೆದು ಅಲ್ಲಿಯೇ ಮಲಗಿ ನಿದ್ರೆ ಹೋದಳು. ಚಿಕ್ಕ ಮಗ- ನಿಂಗಜ್ಜ ಅತ್ತು ಅತ್ತು ಕಣ್ಣು ಉಬ್ಬಿಸಿಕೊಂಡು ಊಟ ಮಾಡದೆ ಆಕೆಯ ಪಕ್ಕದಲ್ಲಿಯೇ ಮಲಗಿದನು. ಅಣ್ಣನ ಈ ತೆರನಾದ ವರ್ತನದ ಸರಿಯಾದ ಅರ್ಥವಾಗದಿದ್ದರೂ ಅವನಿಗೆ ಹೇಸಿಕೆಯಾಯಿತು. ಪಾಪ ! ಚಿಕ್ಕವನು. ಅವನೇನು ಮಾಡಲು ಸಾಧ್ಯವಿತ್ತು ? ಶಿವಲಿಂಗಪ್ಪ ಯಾವಾಗಲೊ ಮನೆ ಬಿಟ್ಟು ನಡೆದಿದ್ದನು.

ನಿಚ್ಚಳ ಬೆಳಕಾಗಿ ಹೊರಗೆ ಹೂಬಿಸಿಲೂ ಬಿದ್ದಿತ್ತು. ಬೆಳ್ಳಿ ಮೂಡಿದಾಗಲೇ ದಿನವೂ ಏಳುತ್ತಿದ್ದ ಸುಂದರವ್ವನು ಇನ್ನೂ ಏಳಲಿಲ್ಲ, ದನಕರುಗಳು ಹಕ್ಕೆಯಲ್ಲಿ ಸದ್ದು ಮಾಡುತ್ತ ನಿಂತಿದ್ದವು; ಗೋದಲಿಯಲ್ಲಿ ಮೇವು ಇರಲಿಲ್ಲ. ಚಾಣಾಕ್ಷ ಒಕ್ಕಲಿಗರು ದನಗಳ ಕಾಲ ಕೆಳಗಿನ ಕಸವನ್ನು ತೀರ ನಸುಕಿನಲ್ಲಿಯೇ ಹೆಕ್ಕಿ ತಿಪ್ಪೆಗೆ ಸೇರಿಸಿ ಬಿಡುತ್ತಾರೆ. ಸುಂದರವ್ವ ಆ ಕೆಲಸವನ್ನು ಆಳುಕಾಳುಗಳಿದ್ದರೂ ತಾನೇ ಮಾಡುತ್ತಿದ್ದಳು, ಇಂದು ಅದೂ ಮರೆಯುತ್ತ ನಿಂತಿದ್ದಿತು. ನಿಂಗಜ್ಜ ತಾಯಿಯನ್ನು ಅಲುಗಾಡಿಸಿ ಎಬ್ಬಿಸಿದನು. ಆಕೆ ಕಿಡಿಕಿಡಿಯಾಗಿಯೇ ಎದ್ದಳು. ಸುತ್ತಲೂ ನೋಡಿದಳು ಏನೋ ದೃಢ ನಿರ್ಧಾರಕ್ಕೆ ಆಕೆ ಬಂದಂತಿತ್ತು.

ಮುಖಕ್ಕೆ ನುಕ್ಕುನೀರು ಹಾಕಿಕೊಂಡು, ಮನೆ ಕೆಲಸಗಳನ್ನೆಲ್ಲ ಇದ್ದಲ್ಲಿಯೇ ಬಿಟ್ಟು ಊರಲ್ಲಿ ನಡೆದಳು. ಸ್ವಲ್ಪ ಸಮಯದಲ್ಲಿಯೇ ನಾಲ್ಕಾರು ಹಿರಿಯರನ್ನು ಕರೆದುಕೊಂಡು ಅಂಗಡಿಯ ಮಳಿಗೆಯ ಮುಂದೆ ಬಂದುನಿಂತಳು-

ಮಳಿಗೆಯ ಹಲಿಗೆ ಇನ್ನೂ ತೆಗೆದಿರಲಿಲ್ಲ. ಬಡಿದು ಸದ್ದುಮಾಡಿದಳು ; ಒಳಗಿನಿಂದ ಉತ್ತರವೇ ಬರಲಿಲ್ಲ. ಹಿರಿಯರಲ್ಲಿ ಕೆಲವರು ಶಿವಲಿಂಗಪ್ಪನ ಹೆಸರು ಹಿಡಿದು ಕೂಗಿದರು ನಾಲ್ಕಾರು ಸಲ ಕೂಗಿದ ನಂತರ ಬಾಗಿಲು ತೆರೆಯಿತು. ಸುಂದರವ್ವನು ಒಳಹೊಕ್ಕಳು. ಸಿಂಹಿಣಿಯಾಗಿದ್ದಳಾಕೆ. ರೌದ್ರಾವತಾರ ತಾಳಿದ್ದಳು. ನೀಲಗಂಗಾ ಒಂದು ಮೂಲೆಯಲ್ಲಿ ನಡುಗುತ್ತ ನಿಂತಿದ್ದಳು. ಅವಳ ಬಿಡಿಮುಡಿಯನ್ನು ಹಿಡಿದು ತನ್ನ ಮಗನನ್ನು ಕೆಡಿಸಿದ ರಂಡೆಯೆಂದು ಎಳೆದಾಡಿ ನಾಲ್ಕು ಹೊಡೆದಳು. ಶಿವಲಿಂಗನೇ ಮುಂದೆ ಬಂದು ಅವಳನ್ನು ಬಿಡಿಸಬೇಕಾಯಿತು. ಅಲ್ಲಿಂದ ಜಾರಿ ಹೋಗುತ್ತಿದ್ದ ನೀಲಗಂಗೆಯ ಕೈಹಿಡಿದು ಶಿವಲಿಂಗನು ಆಕೆಯನ್ನು ಲಗ್ನವಾಗುವೆನೆಂದು ಸಾರಿದನು. ತಾಯಿಯ ಪ್ರತಿಕ್ರಿಯೆಯನ್ನು ಎದುರಿಸುವ ಎದೆಯಿರುವದಾಗಿ ಕೂಗಾಡಿದನು. ಮಗನಿಗೆ ಬುದ್ಧಿ ಹೇಳಿರೆಂದು ಕರೆತಂದ ಹಿರಿಯರು ಏನೂ ಹೇಳಲಾರದೆ ದಂಗಾಗಿ ನಿಂತುಬಿಟ್ಟರು. ಅರ್ಧ ಊರೇ ಸೇರಿತು ಈ ಗದ್ದಲಕ್ಕೆ. ಸುಂದರವ್ವನು ಸಿಟ್ಟಿನ ಭರದಲ್ಲಿ ಎಲ್ಲರನ್ನೂ ಉದ್ದೇಶಿಸಿ ಹೇಳಿದಳು.

" ಇವನು ನನ್ನ ಮಗನಲ್ಲ. ನನ್ನ ಆಸ್ತಿಗೆ ಬಾಧ್ಯನಾಗನು. ಯಾರೂ ಒಂದು ಬಿಡಿಕಾಸು ಕೊಡಬಾರದು. ಅವನು ಮಾಡಿದ ಸಾಲ ನನ್ನಮೇಲೆಂದೂ ಬಂಧನಕಾರಿಯಾಗಲಾರದು. ಇಂದೇ ಮನೆಯಿಂದ ಹೊರಗೆ ಹಾಕಿದ್ದೇನೆ . . . . "

ಸುಂದರವ್ವನು ಬಿರಬಿರನೆ ನಡೆದು ಮನೆಗೆ ಹೋಗಿ ಬಿಟ್ಟಳು.

ಹತ್ತು ಹದಿನೈದು ದಿನ ಶಿವಲಿಂಗನು ಮನೆಗೆ ಹೋಗಲಿಲ್ಲ. ನಂತರ ಒಂದಿನ ಮನೆಗೆ ಬಂದನು. ಸುಂದರವ್ವನು ಅವನನ್ನು ಮುಂಚೆಯ ಬಾಗಿಲಲ್ಲಿಯೇ ಅಡ್ಡಗಟ್ಟಿದಳು. ಆಕೆಯ ಮೈಮೇಲೆ ಕೈ ಮಾಡಲುದ್ಯುಕ್ತನಾದಾಗ ನಿಂಗಜ್ಜ ಏರಿ ಬರಬೇಕಾಯಿತು. ಎಲ್ಲಿಂದ ಶಕ್ತಿ ಬಂತೋ ಆ ತರುಳೆಗೆ ? ಎತ್ತಿಹಾಕಿ ಎದೆಯಮೇಲೆ ಕುಳಿತು ನಾಲ್ಕು ಜಜ್ಜಿದನು. ತಾಯಿಯೇ ಮಕ್ಕಳ ಮಲ್ಲಯುದ್ಧ ನಿಲ್ಲಿಸಿದಳು.

ಮೂರು ಹಗಲು ರಾತ್ರಿ ದೀರ್ಘ ಚರ್ಚೆ ನಡೆಯಿತು. ಮೂವರು ಸಲಹೆಗಾರರೂ, ಬೆಡಗಿನ ಸಂಗಾತಿ, ಎಲ್ಲರೂ ಸೇರಿ ವಿಚಾರವಿನಿಮಯ ನಡೆಯಿಸಿದರು. ಶೀಘ್ರದಲ್ಲಿ ಇತ್ಯರ್ಥವಾಗಬೇಕಾಗಿತ್ತು. ಶಿವಲಿಂಗಪ್ಪನಲ್ಲಿ ಒಂದು ಬಿಡಿಕಾಸೂ ಇರಲಿಲ್ಲ. ಯಾರೂ ಸಾಲ, ಕೈಗಡ ಕೊಡಲು ಮುಂದೆ ಬರಲಿಲ್ಲ.

ವಿಚಾರಣೆ ನಡೆದು ಒಂದು ನಿರ್ಣಯಕ್ಕೆಎಲ್ಲರೂ ಬಂದರು. ಗೆಳೆಯರೆಲ್ಲರು ಒತ್ತಿ ಹೇಳಿದರು.

"ಅದೊಂದೇ ಮಾರ್ಗ! ಅದೊಂದೇಮಾರ್ಗ!!"

ಒಂದಿನಿತು ಹಿಂದು ಮುಂದೆ ನೋಡುತ್ತಿದ್ದ ಶಿವಲಿಂಗಪ್ಪನ ಮನಸ್ಸನ್ನು ಆ ನಿರ್ಣಯಕ್ಕೆ ಒಪ್ಪುವಂತೆ ಮಾಡಿದವಳು ನೀಲಗಂಗೆಯೇ ! ಕುಡಿದು ಮತ್ತನಾಗಿದ್ದಾಗ ಮೆತ್ತನೆಯ ಮಾತುಗಳಲ್ಲಿ ಮೆಚ್ಚಿಸಿದಳು.

' ನನ್ನ ಹಿರಿಯ ಮಗನು ವಿಷಯ ಲೋಲುಪನಾಗಿದ್ದಾನೆ ; ದುರ್ವ್ಯಸನಿಯಾಗಿದ್ದಾನೆ. ದುಷ್ಟ ಜನರ ಸಹವಾಸಕ್ಕೆ ಬಿದ್ದು ಆಸ್ತಿಯ ತೂರಾಟ ಮಾರಾಟ ನಡೆಯಿಸಲೂಬಹುದು. ಆಸ್ತಿಯ ಬಹುಭಾಗವು ಸ್ವಾರ್ಜಿತವಿದ್ದು ಅದರಲ್ಲಿ ಅವನ ಹಕ್ಕೂ ಖಂಡಿತವಾಗಿಯೂ ಇರಲಾರದು. ನನ್ನ ಪಶ್ಚಾತ್ ಅದು ನನ್ನ ಕಿರಿಯ ಮಗ ನಿಂಗಜ್ಜನಿಗೇ ಹೋಗಬೇಕು . . . . . ಯಾರೂ ಯಾವ ರೀತಿಯ ಖರೀದಿ ವಗೈರೆ ತಕ್ಕೊಳ್ಳಬಾರದು . . . . '

ಸುಂದರವ್ವನು ವರ್ತಮಾನ ಪತ್ರದಲ್ಲಿ ನೋಟೀಸು ಕೊಟ್ಟಿದ್ದಳು. ಅದರ ಒಂದು ಪ್ರತಿ ಅಂದೆಯೇ ಶಿವಲಿಂಗಪ್ಪನ ಕೈಸೇರಿತು. ಅವನ ಹೋಯ್ದಾಡುತ್ತಿದ್ದ ಮನಸ್ಸು ಕಲ್ಲಿನಂತೆ ಸ್ಥಿರವಾಯಿತು. ಅವನೇ ಗೆಳೆಯರಿಗೆ ಖಂಡುತುಂಡಾಗಿ ಹೇಳಿಬಿಟ್ಟನು.

" ಹೌದು ! ಹಾಗೆಯೇ ಮಾಡಬೇಕು. ಅದೊಂದೇ ಮಾರ್ಗ ! ಅದನ್ನುಳಿದರೆ ಬದುಕೆ ಸಾಧ್ಯವಿಲ್ಲ "

ಮನಸ್ಸಿನಲ್ಲಿ ಕೋಲಾಹಲ ನಡೆದಿತ್ತು.

" ನಿಂಗಜ್ಜನು ಇವರೆಲ್ಲ ಹೇಳುವಂತೆ ನನ್ನ ತಮ್ಮನೂ ಆಗಿರಲಿಕ್ಕಿಲ್ಲ. ತಂದೆ ತೀರಿದ ನಂತರ ಹುಟ್ಟಿದ್ದಾನೆ. ಆ ಪಾಪಿಯ ಮೇಲೆ ಆಕೆಗೆ ಅಂತೆಯೇ ಕನಿಕರ ಹುಟ್ಟಿ ಆಸ್ತಿಯನ್ನೆಲ್ಲ ಕೊಡುತ್ತಿದ್ದಾಳೆ. ಇದೊಂದು ಒಳಸಂಚು. ತಮ್ಮನಾಗಿದ್ದರೆ ನನ್ನನ್ನು ಮನೆಯಿಂದ ಹೊರದೂಡುವ ಕಾರ್ಯ ಮಾಡುತ್ತಿದ್ದನೇ ? "

ಅನೇಕ ಸಲ ಸುಂದರವ್ವನು ಶಿವಲಿಂಗನ ಎದುರಿನಲ್ಲಿ ಗಂಡ ಸತ್ತಾಗ ತಾನು ಒಂದು ತಿಂಗಳ ಬಸುರಿದ್ದುದನ್ನೂ ನಿಂಗಜ್ಜನು ತಂದೆಯ ಮರಣದ ನಂತರ ಎಂಟೇ ತಿಂಗಳುಗಳಲ್ಲಿ ಹುಟ್ಟಿದ್ದನ್ನೂ ಹೇಳಿದ್ದಳು. ಆ ಬಗ್ಗೆ ಶಿವಲಿಂಗನಿಗೆ ಯಾವ ಸಂಶಯವು ಇರದಿದ್ದರೂ ಇಂದು ಅದೇ ಹೇಳಿಕೆಯನ್ನು ತಾಯಿಯನ್ನು ಎದುರಿಸುವ ಅಸ್ತ್ರವನ್ನಾಗಿ ಮಾಡಿಕೊಳ್ಳಲು ಹಿಂಜರಿಯಲಿಲ್ಲ. " ಅನೇಕ ಹೆಂಗಸರು ೭ ತಿಂಗಳಲ್ಲಿ ೮ ತಿಂಗಳಲ್ಲಿ ಹಡೆಯುತ್ತಾರೆ. ಹಾಗೆಯೇ ನನ್ನ ತಾಯಿಯೂ ಹಡೆದಿರಬೇಕು. ಯಾರಿಗೂ ಸಂಶಯ ಬರಬಾರದೆಂದು ಎಂಟು ತಿಂಗಳ ಕತೆ ಕಟ್ಟಿದ್ದಾಳೆ. ಹಾದರ ಮುಚ್ಚಿಕೊಳ್ಳಲು ಗಂಡನು ಸಾಯುವಾಗ್ಗೆ ಒಂದು ತಿಂಗಳು ಗರ್ಭಿಣಿಯಿದ್ದುದಾಗಿ ಹೇಳುತ್ತಿದ್ದಾಳೆ " ಇದೇ ರೀತಿ ಸಾರಬೇಕು.

" ಅಯ್ಯೊ ! ಎಂಥ ಘೋರ ಪಾಪ ! ಹೆತ್ತ ತಾಯಿಗೆ ಹಾದರದ ಅಪವಾದ ಕೊಡುವದೇ ? ಆಕೆಯು ನಿನ್ನನ್ನು ಬೆಳೆಯಿಸಲಿಕ್ಕೆ ಪಟ್ಟ ಕಷ್ಟವೆಷ್ಟು ? ಮನೆಯನ್ನು ಬೆಳೆಯಿಸಲು ಶ್ರಮಿಸಿದ ತಾಪವೆಷ್ಟು !! ಆಕೆಯೂ ಇತರ ಹೆಂಗಸರಂತೆ ಧೃತಿಗೆಟ್ಟಿದ್ದರೆ, ಅಂಜಿ ಹಿಂಜರಿದಿದ್ದರೆ ನಿಮ್ಮ ಪಾಡೇನಾಗಬಹುದಿತ್ತು ? ಬೇಡ ! ಬಿಕ್ಕೆಬೇಡಿದರೂ ಚಿಂತೆಯಿಲ್ಲ ; ತಾಯಿಗೆ ಅಪವಾದ ಕೊಡುವದು ಬೇಡ ! ಒಂದು ಸಮಯ ಅನೀತಿವಂತಳಾಗಿ ಹಡೆದಿದ್ದರೂ ನೀನೇಕೆ ಎತ್ತಿ ಆಡಬೇಕು ? ಎಷ್ಟೆಂದರೂ ಆಕೆ ನಿನ್ನ ತಾಯಿ ! ಜನ್ಮದಾತೆ !! ಮಾತೆಗೆ ದ್ರೋಹ ಬಗೆದವರಿಗೆ ಆಸರೆಯೆಲ್ಲಿ ? ಬಾಳಿನಲ್ಲಿ ಜಯ ದೊರೆತೀತೆ ? ಅಯ್ಯೋ ! ಇಂಥ ನೀಚಕೆಲಸ ಮಾಡುವದು ಬೇಡ — ಬೇಡವೇ ಬೇಡ ! "

ವಿವೇಕ ಗರ್ಜಿಸುತ್ತಿತ್ತು.

" ಇದಕ್ಕಳುಕಿದರೆ ನೀಲಗಂಗೆಯೊಂದಿಗೆ ನಿನ್ನ ಲಗ್ನವಿಲ್ಲ. ಗೆಳೆಯರೆಲ್ಲರೂ ಕೈ ಬಿಡುತ್ತಾರೆ. ನಿನ್ನಲ್ಲಿ ಒಂದು ಬಿಡಿಕಾಸೂ ಇಲ್ಲ. . . . ಬೀಡಿಯಿಲ್ಲ. . . . ಸಿಗರೇಟು ಇಲ್ಲ. . . . ಸೆರೆಯಿಲ್ಲ. . . . ನಿನ್ನಪಾಲಿಗೆ ಜಗತ್ತೇ ಇಲ್ಲ. . . . ನೀನು ಬದುಕಬೇಕಾಗಿದೆ. ಜೀವನ ಅನುಭವಿಸಬೇಕಾಗಿದೆ. ನೀಲಗಂಗೆಯೊಡನೆ ಕೂಡಿರಬೇಕಾಗಿದೆ. ಅವಳ ಸಂಗಕ್ಕಾಗಿ ಎಲ್ಲ, ಏನೆಲ್ಲ ಮಾಡಲೇಬೇಕು. . . . ತಾಯಿ! . . ಎಲ್ಲಿಯ ತಾಯಿ ? ಮಾತಾಯಿ !! ಹದಿನೈದು ದಿನಗಳಿಂದ

ನಿನ್ನ ಪಾಡು ನಾಯಿಯ ಪಾಡಾಗಿದೆ. ಆಕೆಯ ಹೃದಯ ಕರಗಲಿಲ್ಲ.... ಆಕೆಯೆಂಥ ತಾಯಿ! ಮೇಲಾಗಿ ಆಕೆ ಹಾ.... ಗಿತ್ತಿ!''

ನೀಚ ಮನಸ್ಸು ಒಳಸಂಚು ನಡೆಯಿಸಿತ್ತು.

ವಿವೇಕ ಸೋಲನ್ನೊಪ್ಪಲೇಬೇಕಾಯಿತು.

ಶಿವಲಿಂಗನ ಮಾತುಗಳನ್ನು ಕೇಳಿ ಸುಂದರವ್ವನು ಭಯಂಕರ ಬಿರುಗಾಳಿಗೆ ಬೇರುಸಹಿತ ಉರುಳುವ ಮರದಂತೆ ನೆಲಕ್ಕೆ ಬಿದ್ದಳು.

"ಭೂಮಿಯೇಕೆ ಬಾಯ್ದೆರೆದು ನನ್ನನ್ನು ನುಂಗಬಾರದು?'' ಭೂಮ್ಯಾಕಾಶಗಳನ್ನು ಒಂದು ಮಾಡಿ ಹಲುಬಿದಳು.

"ಮಕ್ಕಳನ್ನು ಇದಕ್ಕೇ ಹೆತ್ತೆನೇ? ಹೊತ್ತು ಬೆಳೆಯಿಸಿದೆನೇ? ಹೊಟ್ಟೆಯ ಮಗನೇ ಹೊತ್ತು ಸಾರುವಾಗ ಲೋಕ ಸುಮ್ಮನಿದ್ದೀತೇ?.... ನನ್ನನ್ನು ಎಲ್ಲರೂ ಹಾ....ಗಿತ್ತಿ ಎನ್ನುವರು.... ನನ್ನ ಕಂದಮ್ಮನನ್ನು ಪಾಪದಪಿಂಡವೆಂದು ಹೀಯಾಳಿಸುವರು.....

ಸುಂದರವ್ವನು ಮೇಲೇಳಲಿಲ್ಲ. ಒಂದು ಅಗಳು ಅನ್ನ ಬಾಯಲ್ಲಿ ಹಾಕಲಿಲ್ಲ. ಒಂದು ಗುಟುಕು ನೀರು ಕುಡಿಯಲಿಲ್ಲ. ತಿಂಗಳೊಪ್ಪತ್ತಿನಲ್ಲಿ ಆಕೆಯದು ಮುಗಿದೇ ಹೋಯಿತು.

ಸುಂದರವ್ವ ಸತ್ತು ಮೂರು ತಿಂಗಳು ಮುಗಿದಿರಲಿಲ್ಲ. ಶಿವಲಿಂಗ ಮನೆಯನ್ನೆಲ್ಲ ಬರಿದು ಮಾಡಿಬಿಟ್ಟನು.

ಯಾವದೋ ಸಿನಿಮಾ ಕಂಪನಿಯಲ್ಲಿ ಕೆಲಸ ಕೊಡಿಸಿ ದೊಡ್ಡ ನಟಿಯನ್ನಾಗಿ ಮಾಡುವ ಭರವಸೆ ಕೊಟ್ಟು ವಿರೂಪ ನೀಲಗಂಗೆಯನ್ನು ಓಡಿಸಿಕೊಂಡು ಹೋಗಿಬಿಟ್ಟನು. ಹಣವಿಲ್ಲದೆ ದಿಕ್ಕೆಟ್ಟು ದರಿದ್ರನಾದ ಶಿವಲಿಂಗನ ಸಹವಾಸವೂ ನೀಲಗಂಗೆಗೆ ತೀರ ಅಸಹ್ಯವೆನಿಸಿತ್ತು. ಅವಳ ದುಡಿಮೆಯಲ್ಲಿಯೇ ಅನೇಕ ದಿನ ಅವನು ಕಳೆದಿದ್ದನು. ಚಂದ್ರು, ಶೀನಪ್ಪರೂ ಕಾಸಿಲ್ಲದ ಶಿವಲಿಂಗನನ್ನು ದೂರವಿರಿಸಲು ಬಹಳ ಸಮಯ ಹಿಡಿಯಲಿಲ್ಲ.

"ಗೆಳೆಯರು ದೂರ ಸರಿದರು— ಗೆಳೆಯರು ಮೋಸ ಮಾಡಿದರು— ಗೆಳೆಯರು ದ್ರೋಹ ಬಗೆದರು. ಜೀವನ ಸಂಗಾತಿಯಾಗಬೇಕಾದವಳು ಓಡಿಹೋದಳು ಇನ್ನೊಬ್ಬನೊಂದಿಗೆ. ಯಾರೂ ನನ್ನವರಿಲ್ಲ. ತಾಯಿ ಸತ್ತಳು...... ತಮ್ಮ ಎಲ್ಲಿ ಹೋದನೋ? ಅವನೂ ತಾಯಿಯನ್ನು ಹೀಬಾಳಿಸಿರಬೇಕು. ಯಾರಲ್ಲಿಯೂ ಒಂದು ಕಾಸು ಹುಟ್ಟುವಂತಿಲ್ಲ. ಒಬ್ಬರೂ ಕರೆದು ಒಂದು ಹಿಡಿ ಅನ್ನ ಹಾಕುವವರಿಲ್ಲ. ತುಂಬಿದ ಮನೆ ಬರಿದಾಯಿತು. ತೆನೆ ತೂಗಿನಿಲ್ಲುವ ಹೊಲ ಬರಡಾಗಿವೆ. ಯಾವ ಶಾಪವೋ! ಯಾರ ನಿಟ್ಟುಸುರಿನ ಫಲವೋ!! ನನ್ನ ಪಾಲಿಗೆ ಎಲ್ಲ ಶೂನ್ಯ...... ಗೋಳು! ತಾಯಿಯನ್ನು ತಿರಸ್ಕರಿಸಿದವರು ನೆಮ್ಮದಿಯಿಂದ ಬದುಕಲು ಸಾಧ್ಯವೆ? ತಾಯಿಯನ್ನು ಅವಮಾನಿಸಿದವರದೂ ಒಂದು ಬಾಳೇ! ತಾಯಿಗೆ ಅಪಮಾದ ಕೊಟ್ಟವರಿಗೆ ಜಯವುಂಟೇ? ತಾಯೇ! ಅವ್ವಾS!!....ಅಯ್ಯೋ! ಹಾಗೆ ಕರೆಯಲೂ ನಾನು ಅರ್ಹನಿಲ್ಲ.... ಇಂಥ ದ್ರೋಹಿ, ನೀಚ ಮಗನನ್ನು ಯಾವ ತಾಯಿಯು ಗರ್ಭ ಧರಿಸಬಲ್ಲದು? ತಾಯೇ! ಕ್ಷಮಿಸು! ಮಾತೇ! ಕ್ಷಮಿಸು! ಅವ್ವಾ! ಕ್ಷಮಿಸು!.... ಕೋಟಕೋಟಿ ಜನ ತಾಳಿ ಪಶ್ಚಾತ್ತಾಪದಿಂದ ಬೆಂದು ಬೇಡಿದರೂ ಕ್ಷಮೆ ದೊರೆಯಲಾರದು. ಆ ಮಹಾತಾಯಿ ಇದೊಂದು ಸಲ ಜನ್ಮ ಕೊಟ್ಟು ಇಷ್ಟು ಕೆಟ್ಟ ಹೆಸರು ಪಡೆದುದಾಯ್ತು! ಕೋಟಿಕೋಟಿ ಜನ್ಮವೆತ್ತಲು ಯಾವ ತಾಯಿ ನನಗೆ ಗರ್ಭ ಕೊಟ್ಟಾಳು?.. ಮನಸ್ಸು ಮಾಡಿಯಾಳು?.... ದುಷ್ಟಮಗನು ಹುಟ್ಟಲಾರನು . . . ಮಹಾತಾಯಿಗೆ ದ್ರೋಹಿ ಮಕ್ಕಳನ್ನು ಹಡೆಯುವ ಹಂಬಲ ಉಳಿಯುವದು ಸಾಧ್ಯವಿಲ್ಲ . . . . ಕೆಟ್ಟ ಮಕ್ಕಳು ಮಣ್ಣಿನಲ್ಲಿ ಮಣ್ಣಾಗಿ ಬಿಡುವರು. ಮಹಾ ತಾಯಿಗಳು ಅಮರರಾಗುವರು . . . ಮಕ್ಕಳು ಸತ್ತರು! ತಾಯಿ ಬದುಕಿದಳು!!

ತಲೆಗೆ ಹೊಡೆವವರಿಗೆ:

ವಿದ್ಯಾರ್ಥಿಗಳ ತಲೆಯ ಮೇಲೆ ಹೊಡೆಯುವ ಅಭ್ಯಾಸವು ಗಾಂಧಿಜೀಯವರಿಗೆ ಕಲಿಸುತ್ತಿದ್ದ ಒಬ್ಬ ಅಧ್ಯಾಪಕರಿಗೂ ಇದ್ದಿತು. ಅವರು ಒಂದು ದಿನ ಗಾಂಧಿಜೀಯವರ ತಲೆಗೆ ಹೊಡೆಯಲು ಬಂದಾಗ ಗಾಂಧಿಜೀಯವರು ಆ ಅಧ್ಯಾಪಕರ ಕೈಯನ್ನು ಗಟ್ಟಿಯಾಗಿ ಹಿಡಿದು ಹೇಳಿದರು: "ಇದಕ್ಕೆ ಮೊದಲು ನಿಮ್ಮ ಏಟು ತಿಂದ ವಿದ್ಯಾರ್ಥಿಯ ತಲೆಯಲ್ಲಿ ಕಜ್ಜಿ ಇತ್ತು; ಅದಕ್ಕೆ ಮೊದಲು ನಿಮ್ಮ ಕೈ ತೊಳೆದುಕೊಂಡು ಬನ್ನಿರಿ; ಅನಂತರ ನಿಮ್ಮ ಪೆಟ್ಟು ತಿನ್ನುತ್ತೇನೆ'' ಈ ಮಾತುಗಳನ್ನು ಕೇಳಿ ಅಧ್ಯಾಪಕರು ತಣ್ಣಗಾದರು.

— ಕಾಕಾ ಕಾಲೇಲಕರ

ವರಶೋಧನೆ - ಒಂದು ಸಮಸ್ಯೆ

● ಲೇಖಕರು: ಶ್ರೀ. ದ. ಬಾ. ಕುಲಕರ್ಣಿ, ಧಾರವಾಡ ●

ಮದುವೆ ಗಂಡಿಗಿಂತ ಹೆಣ್ಣಿಗೆ ಹೆಚ್ಚು ಅವಶ್ಯವೆನಿಸಿದೆ.

ಹೆಣ್ಣು ನೈಸರ್ಗಿಕ ಕಾರಣಗಳಿಂದ ಪರಾಧೀನ ಪ್ರವೃತ್ತಿಯನ್ನು ಮೈಗೂಡಿಸಿಕೊಂಡು ಬಂದಿದ್ದು ಪ್ರಾಪ್ತವಯಸ್ಕಳಾದಾಗ ತಂದೆಯ ಮನೆಯ ಅವಲಂಬನೆಯನ್ನು ತೊರೆದು ತನ್ನದಾದ ಒಂದು ಮನೆಯನ್ನು ಸೇರಬೇಕಾದದ್ದು ಅನಿವಾರ್ಯವಾಗಿದೆ.

ಹಾಗೆ ಕೇಳಿದರೆ ಅವಳಿಗೆ ತನ್ನದೆಂಬ ಮನೆಯೇ ಇಲ್ಲ. ಅತ್ತೆಯ ಮನೆ ಎನ್ನಬಹುದು ಅವಳ ಗಂಡನ ಮನೆಗೆ. ಇವಳು ಅತ್ತೆಯಾದಾಗ ಮಾತ್ರ ಆ ಮನೆ ತನ್ನ ಸ್ವಾಧೀನತೆಗೆ ಬರುತ್ತದೆ. ತನ್ನ ಅಜ್ಞಾಧಾರಕ ಜೀವವೊಂದು ತನ್ನ ಮಗನ ಮಡದಿಯಾಗಿ ಬರುವಾಗ ಆ ಮನೆ ಅವಳಿಗೆ ತನ್ನದಾಗುತ್ತದೆ

ಇದು ಕುಟುಂಬಜೀವನದ ಪರಂಪರೆಯ ಅರ್ಥವಿಶೇಷ.

ಇಂದು ಸಮಾಜದ ಅಸ್ತಿವಾರ ಬದಲಾಗಿದೆ. ಮಗ ತಂದೆಯ ಆಸ್ತಿಗೇ ಜೋತುಬಿದ್ದು, ಅವನ ಕೈಂಕರ್ಯಕ್ಕೇ ಕೈಯೊಡ್ಡಿ, ಅವನ ಮುಪ್ಪನ್ನೇ ಎದುರುನೋಡುತ್ತ ಕೂಡುವ ಸಂದರ್ಭ ಸಾರ್ವತ್ರಿಕವಾಗಿಲ್ಲ. ಗಂಡು ತನ್ನ ಸ್ವಾರ್ಜಿತ ವಿತ್ತದಿಂದ ಬದುಕಬೇಕಾಗಿದೆ. ಮಗನ ದುಡಿಮೆಯಿಂದ ತಂದೆ - ತಾಯಿ ತಮ್ಮ ನಿವೃತ್ತಜೀವನ ನಡೆಸಬೇಕಾಗಿದೆ. ಪೂರ್ವಾರ್ಜಿತ, ಸ್ವಾರ್ಜಿತ ಆಸ್ತಿ ಇದ್ದವರು ಸ್ವಾವಲಂಬಿಗಳಾಗಿದ್ದು ಮಗನನ್ನು ಹಂಗಿನಲ್ಲಿಡದೆ ಹೋದರೂ ಅವನ ಹಂಗಿಗೆ ಕೈಯೊಡ್ಡದೆ ಇರಬಲ್ಲರು. ಇಂಥವರ ಪ್ರಮಾಣವೂ ಅರ್ಧದಷ್ಟಿಲ್ಲ. ಬಹುಮಟ್ಟಿಗೆ ಇಂದು ಮಡದಿಯಾಗಿ ಹೋಗುವ ಹೆಣ್ಣು ಅತ್ತೆಯ ಮನೆಗೆ ಎಂದಿದ್ದರೂ ಗಂಡನ ಮನೆಗೇ ಹೋಗುತ್ತಾಳೆ. ಅದು ಅವಳ ಮನೆಯೇ ಆಗಿರುತ್ತದೆ.

ಹೀಗೆ ಅತ್ತೆಯ ಮನೆ, ಗಂಡನ ಮನೆಗಳ ಅವಸ್ಥಾಂತರದಿಂದ ಅವಳು ಮನೆಯನ್ನು ತನ್ನದಾಗಿಸಿಕೊಳ್ಳಲು ಅತ್ತೆಯಾಗುವವರೆಗೆ ಕಾಯಬೇಕಾಗುವದಿಲ್ಲ. ಒಡೆತನ ಬಹುಬೇಗ ಬಂದುಬಿಡುತ್ತದೆ.

ಒಡೆತನದ ಈ ಒಳದಾರಿಯ ಕಾರಣವೇ ಇರಬೇಕು, ಇಂದು ಹೆಣ್ಣಿನ ಮದುವೆ ಮುಂಚಿಗಿಂತ ಕಷ್ಟಕರವಾಗಿದೆ. ಹೆಣ್ಣು ಹುಟ್ಟಿದಾಗ ಹಿಂದಿನ ಕಾಲದಿಂದಲೂ ಗಂಡು ಹುಟ್ಟಿದಾಗಿನ ಸಂತೋಷ ಪ್ರಕಟವಾಗಿಲ್ಲ. 'ಹುಣ್ಣು ಹುಟ್ಟಿದಂತೆ' ಎಂದು ಹಿಂದಿನವರು ಕರೆದಿದ್ದಾರೆ. ಹೊನ್ನಮ್ಮ ತನ್ನ ಕಾವ್ಯದಲ್ಲಿ ಮಾತ್ರ ಈ ಮಾತನ್ನು ಎದುರಿಸಿದಳು. ಆ ಕಾವ್ಯ ಓದಿ ಮೆಚ್ಚಿದವರು ಇಂದಿಗೂ ಜೀವನದಲ್ಲಿ ಹೆಣ್ಣಿನ ಜನನವನ್ನು ಸಂತೋಷದಿಂದ [illegible]ಗತಿಸುವ ಔದಾರ್ಯ ತೋರಲಿಲ್ಲ. ಅಂದೇ

> ಮದುವೆಯ ಬಗ್ಗೆ, ಕನ್ಯಾ ಆಯ್ಕೆಯ ಬಗ್ಗೆ ವರ ತಾಳಿದ-ತಾಳುವ ಧೋರಣದ ಪರಿಣಾಮವಾಗಿ ವರಶೋಧನೆ ಇಂದು ಒಂದು ಸಮಸ್ಯೆಯಾಗಿ ಪರಿಣಮಿಸಿರುವದು. ಹೆಣ್ಣಿನ ತಂದೆ ತನ್ನ ಮಗಳ ಮದುವೆ ಹೇಗೆ ಆದೀತು ಎಂದು ಕಾತರಗೊಳ್ಳುವಂತಾಗಿದೆ. ಆದರೆ ಈ ಪರಿಸ್ಥಿತಿ ಬಹುದಿನ ಉಳಿಯಲಾರದು; ಉಳಿಯಲಾಗದು. ಮದುವೆ ಒಂದು ಕರ್ತವ್ಯವಾಗಿ ಹೆಣ್ಣು ಗಂಡು ಸಮಸ್ಯೆಯಾಗದೆ ಹೊಂದಿಕೊಂಡು ಹೋಗುವಂತಾಗುವದೆಂದು ನಿರೀಕ್ಷಿಸಬಹುದಾಗಿದೆ.

'ವರ' ಶೋಧಿಸುವ ವಸ್ತುವಿಶೇಷವಾಯಿತು. ಅಂತೇ ಅದು ಸಮಸ್ಯೆಯಾಯಿತು.

ನಿಜದಲ್ಲಿ ವರ ಸಮಸ್ಯೆಯಲ್ಲ. ಅದನ್ನು ಹುಡುಕುವುದು ಸಮಸ್ಯೆ. ಆದರೆ ಹೆಣ್ಣು ಹುಟ್ಟಾ ಒಂದು ಜಟಿಲವಾದ ಸಮಸ್ಯೆ.

ಕುಟುಂಬಜೀವನ ಸಮಾಜಜೀವನದ ಮಹತ್ವದ ಘಟಕ. ಗಂಡಿಗೆ ಹೆಣ್ಣು ಜೀವನ ಯಾತ್ರೆಯ ಬಹುಮುಖ್ಯವಾದ ಸಹಯಾತ್ರಿ, ಒಂಟಿ ಬಾಳು ಗಂಡಿಗೆ ಅಸಾಧ್ಯ. ಸಹಜೀವನ ಹೆಣ್ಣಿಗೆ ಅನಿವಾರ್ಯ. ಜಗತ್ತಿನ ಮುನ್ನಡೆಗೆ ಈ ಆವಶ್ಯಕ ಆಕರ್ಷಣೆಗಳಿದ್ದೂ ಇವುಗಳ ಹೊಂದಾಣಿಕೆ ಬಹುದೊಡ್ಡ ಸಮಸ್ಯೆಯಾದದ್ದೊಂದು ಸೋಜಿಗದ ಸಂಗತಿ.

ಯುದ್ಧದಂಥ ವಿಪರೀತ ಕಾರಣಗಳಲ್ಲದೆ ಗಂಡು - ಹೆಣ್ಣಿನ ಪ್ರಮಾಣವೂ ಅಂಥ ವ್ಯತ್ಯಸ್ತವಾಗುವದಿಲ್ಲ. ಇನ್ನೂ ಬಹುಮಟ್ಟಿಗೆ ಹೆಣ್ಣಿನ ಸಂಖ್ಯೆ ಕಡಿಮೆಯೇ ಇದ್ದೀತು. ಹೀಗಿದ್ದೂ ಒಂದು ಹೆಣ್ಣಿಗೆ ಒಂದು ಗಂಡನ್ನು ಗಂಟು ಹಾಕುವುದು ಯಾಕೆ ಸಮಸ್ಯೆಯಾಗಬೇಕು ?

ಹೆಣ್ಣು ಆರ್ಥಿಕ ಸ್ವಾವಲಂಬಿಯಾದ ದೇಶಗಳಲ್ಲಿ ಸಮಸ್ಯೆ ಬೇರೆಯಾಗಿರಬಹುದು. ನಮ್ಮಲ್ಲೂ ಆ ಯತ್ನ ನಡೆದಿದ್ದು ಆ ಮಟ್ಟಿಗೆ ಉದ್ಭವಿಸಿದ ಕೆಲ ಸಮಸ್ಯೆಗಳನ್ನು ಆ ಪ್ರಮಾಣದಲ್ಲಿ ನಾವು ಎದುರಿಸಬೇಕಾಗಿದೆ. ಆದರೆ ಭಾರತದ ಬಹ್ವಂಶ ಜನಾಂಗಗಳಲ್ಲಿ ಸಮಾಜಜೀವನ ಎಷ್ಟೇ ಬದಲಾಗಿರಲಿ, ಹೆಣ್ಣು ಸ್ವಾವಲಂಬಿಯಾಗಿರುವ ಸಂದರ್ಭದಲ್ಲೂ ಈ ವರಶೋಧನೆ ಸಮಸ್ಯೆಯಾಗಿಯೇ ಇದೆ.

ಇದಕ್ಕೆ ಕಾರಣಗಳಿಲ್ಲದೆ ಇಲ್ಲ. ಎಂಥ ಸುಧಾರಣೆಯ ಕಾಲ ಬಂದರೂ ಗಂಡು ದುಡಿಯಲೇಬೇಕಾಗಿದೆ. ಅವನ ದುಡಿಮೆಯೇ ಕುಟುಂಬ ಪೋಷಣೆಗೆ ಮೀಸಲಾಗಿದೆ. ಅವನಲ್ಲಿ ಸುಧಾರಣೆಯ ಗಾಳಿ ಸುಳಿದರೂ ಅವನ ಜೀವನ ಕ್ರಮದಲ್ಲಿ ಅಂಥ ವ್ಯತ್ಯಾಸ ಕಂಡು ಬಂದಿಲ್ಲ. ಹೆಣ್ಣು ಸ್ವತಂತ್ರಳಾಗಬೇಕು - ಎಂಬ ವಿಚಾರವನ್ನೂ



ಏನೂ ಮುಂದಾಲೋಚನೆಯಿಲ್ಲದೆ ಗಂಡೇ ಮುಂದಿಸಿರಬೇಕು. ಈ ಸ್ವಾತಂತ್ರ್ಯದ ನಿಶ್ಚಿತ ಸ್ವರೂಪವನ್ನು ಯಾರೂ ಕಂಡಿರಲಾರರು. ವಿಧಾನದಲ್ಲಿದು ಎಂಥ ದಾರಿ ಹಿಡಿದೀತೆಂದೂ ಯಾರೂ ಕಲ್ಪಿಸಿರಲಾರರು. ಏನೋ ಬದಲಾವಣೆ ಕಾಣುವಾಗ ಗಂಡಿಗೆ ಭಯವಾಗಿದೆ - ಎಂಬುದು ಸ್ಪಷ್ಟ. ಗಂಡಿನ ಗಳಿಕೆಯಿಂದ ಬದುಕಬೇಕಾದ ಹೆಣ್ಣು ಸ್ವತಂತ್ರಳಾದರೆ ಗಂಡಿಗೆ ವಿಧೇಯಳಾಗಿರದೆ ಹೋದಾಳು-ಎಂಬುದೇ ಆ ಭಯ. ಅದಕ್ಕೆ ನಿದರ್ಶನಗಳೂ ಇಲ್ಲದಿಲ್ಲ. ಬಹುಕಾಲದಿಂದ ಹೆಣ್ಣನ್ನು ಆಳುತ್ತ ಬಂದ ಗಂಡು ಇಂದದನ್ನು ವೇದಿಕೆಯ ಭಾಷಣಗಳಲ್ಲಿ ಬಿಡಬಹುದು. ಲೇಖನಗಳಲ್ಲಿ ಸಡಲಿಸಬಹುದು-ವಿನಾ ಸ್ವಂತ ಜೀವನದಲ್ಲಿ ತನ್ನ ಆಳಿಕೆಯನ್ನು ಅಲ್ಲಗಳೆಯಲು ಸ್ವಭಾವತಃ ಸಿದ್ಧನಿಲ್ಲ. ಹೆಣ್ಣಿನ ಒಡೆತನ ತನ್ನದು ಎಂದಾನಲ್ಲದೆ ಹೆಣ್ಣಿಗೆ ತನ್ನ ಒಡತಿ ಎಂದೆನ್ನಲಾರ. ಒಮ್ಮೆ ವಿನೋದಕ್ಕೆ ಹಾಗಂದರೂ ಹಾಗೆ ನಡೆದುಕೊಳ್ಳಲಾರ. ಇದು ರೂಢಮೂಲವಾದ ಸ್ವಭಾವ. ಇದಕ್ಕೆ ಭರವಸೆ ಕಾಣದಂಥ ಒಂದು ಸಣ್ಣ ಮಾತಿಗೂ ಅವನು ಭಯಗೊಳ್ಳುತ್ತಾನೆ. ಗಂಡು ಭಯಗೊಳ್ಳಬಾರದೆಂಬುದೊಂದು ರೂಢಮೂಲವಾದ ಭಾವನೆಯಿದೆ. ಆದ್ದರಿಂದ ಹೆದರಿದರೂ ಧೈರ್ಯ ನಟಿಸಿ ತನ್ನ ಅಧಿಕಾರದ ಜಾಲವನ್ನು ಹರಡುತ್ತಾನೆ. ಅದಕ್ಕೆ ಸಮಯ ಕಾಯುತ್ತಾನೆ. ಈ ಕಾಲಯಾಪನೆಯೇ ವರಶೋಧದ ಸಮಸ್ಯೆಗೆ ಕಾರಣವಾಗಿದೆ. ಹೀಗೆ ಕಾಯುವದು-ಅದರಿಂದ ತನ್ನ ಒಡೆತನ ಭದ್ರ ಪಡಿಸುವದು,-ಇದು ಯಾವುದೂ ಸಾಧಿಸದೆಯೂ ಒಮ್ಮೆ ತನ್ನ ಜಾಲದಲ್ಲಿ ತಾನೇ ಬಂಧಿತನಾಗುತ್ತಾನೆ. ಇಲ್ಲವೆ ಹೆಣ್ಣು ಅದೇ ಜಾಲವನ್ನು ಇವನಿಗೆಸೆದು ತಿರುಮಂತ್ರಸಾಧಿಸುತ್ತಾಳೆ. ಆದ್ದರಿಂದ ಹುಟ್ಟಿದ ಯಾವ ಹೆಣ್ಣೂ ಗಂಡನನ್ನು ಕಾಣದೆ ಉಳಿಯುವುದು ಕ್ವಚಿತ. ಅಂತೆಯೇ ಯಾವ ದುರ್ಬಲಪ್ರವೃತ್ತಿಯ ಗಂಡೂ ಹೆಂಡತಿಯನ್ನು ಹೊಂದದೆ ಇರಲಾರದು. ಆದರೆ ಪ್ರಾಯ ಸಂದಮೇಲೆ ಮದುವೆ ನಡೆದೀತಲ್ಲಾ-ಎಂಬುದೇ ಚಿಂತೆ.

ಮನೆಯ ಬಾಗಿಲಿಗೆ ಬಂದ ಸಾಮಾನು ಕೊಂಡುಕೊಳ್ಳುವುದು ಹಲವರ ಸ್ವಭಾವಕ್ಕೆ ವಿರುದ್ಧವಾದದ್ದು. ಪೇಟೆಯಲ್ಲಿ ನಾಲ್ಕುಕಡೆ ನೋಡಿ ಪಡೆಯುವ ಚಿಕಿತ್ಸೆ-ಸ್ವಾರ್ಥ ಮೂಲವಾಗಿಯಾದರೂ-ಇರುತ್ತದೆ. ಪೇಟೆಯಲ್ಲಿ ಮೋಸಹೋಗುವುದೂ ಇಲ್ಲದಿಲ್ಲ. ಆಯ್ಕೆಯ ಜಾಣತನ ಎಲ್ಲರಿಗೂ ಯಾವ ಕಾಲಕ್ಕೂ ಸಾಧಿಸುವಂಥದಲ್ಲ.

ಹಾಗೆಯೇ ಕನ್ಯೆಯರನ್ನು ಆರಿಸುವ ವರಗಳು 'ನಾಲ್ಕೂ ಕಡೆ ನೋಡುವ' ಚಿಕಿತ್ಸಕ ಬುದ್ಧಿಯನ್ನು ಬೆಳಸಿಕೊಂಡದ್ದರಿಂದ ಕನ್ಯೆಯರಿಗೆ ಸಮಸ್ಯೆಯಾಗಿದ್ದಾರೆ. ಆಯ್ಕೆ ಫಲಿಸದಿದ್ದಾಗ ಪ್ರಯತ್ನದ ಸಮಾಧಾನವಿರುತ್ತದೆ. ಮುಂದೆ "ಪಾಲಿಗೆ ಬಂದದ್ದು ಪಂಚಾಮೃತ" ವಾಗುತ್ತದೆ. ಆದ್ದರಿಂದ ಗಂಡು-ಹೆಣ್ಣು ಗಂಡ-ಹೆಂಡತಿಯಾಗುವುದು ಯಾರ ಕೈಯಲ್ಲಿಯ ಮಾತೂ ಅಲ್ಲ. ಕಾಲ ಬರಬೇಕು-ಎಂಬ ರೂಢಮೂಲವಾದ ಪರಿಣಾಮವನ್ನು ಇಂದೂ ಎಂದೂ ಹೊಂದಿಕೊಂಡಿರಬೇಕಾಗಿದೆ.

೨

ಇಂದಿನ ಸ್ವಾತಂತ್ರ್ಯಪ್ರವೃತ್ತಿ ಹೆಣ್ಣಿಗೆ ಬಂದಿದೆಯಾದರೂ ಅದನ್ನು ವಿವಾಹದ ಮೊದಲೇ ಚಲಾಯಿಸಲು ಅವಳು ಸ್ವತಂತ್ರಳಾಗಿಲ್ಲ. ನೈಸರ್ಗಿಕ ಕಾರಣಗಳಿಂದ ಅವಳು ಸಮಾಜವನ್ನು ಎದುರಿಸಲಾರಳು. ತಂದೆಯ ಮನೆಯಲ್ಲಿ ಸ್ವಾತಂತ್ರ್ಯವನ್ನು ಪ್ರಕಟಸಲರಿಯಳು. ಅವಳ ಸ್ವಾತಂತ್ರ್ಯದ ಸುಪ್ತಭಾವನೆಗಳು ಮದುವೆಯ ನಂತರ ಜಾಗ್ರತವಾಗುತ್ತವೆ. ಅದಕ್ಕೆ ಮೊದಲು ಈಡಾಗುವವನು ಕೈಹಿಡಿದ ಗಂಡ. ಹರೆಯದ ಉಬ್ಬಿನಲ್ಲಿ ಅದು ಒಲವು- ಎಂಬ ಉನ್ಮಾದದಲ್ಲಿ ಹುಟ್ಟಿ ಬೆಳೆಯುತ್ತದೆ. ಒಮ್ಮೆ ಮಡದಿಯಾಗಿ ಬಂದ ಹೆಣ್ಣಿನಲ್ಲಿ ಆ ಕೂಡಲೆ ಗಂಡು ತನ್ನ ಸ್ವಾತಂತ್ರ್ಯವನ್ನು ಹೇರಲಾರದು. ಅವಳು ತನ್ನ ಸ್ವಾಮಿತ್ವವನ್ನು ಒಪ್ಪಿರುವಳೆಂಬ ಕಾರಣದಿಂದ ಅವಳ ಅತಿಕ್ರಮಣವನ್ನವನು ಆಕ್ಷೇಪಿಸುವದಿಲ್ಲ. ಅದು ಅತಿಕ್ರಮಣವೆಂದೂ ಆಗವನಿಗೆ ತಿಳಿಯುವದೇ ಇಲ್ಲ. ಮುಂದೆ ಪರಿಣಾಮ ವಿಪರೀತಕ್ಕಿಟ್ಟುಕೊಳ್ಳದೆ ಹೋದರೆ ಆ ದಾಂಪತ್ಯ ಸುಖಮಯವಾಗಿಯೇ ಇರುತ್ತದೆ. ಹೆಣ್ಣು ಮುಂದಾಲೋಚನೆಯಿಂದದನ್ನು ರೂಪಿಸಬಲ್ಲಳು. ತನ್ನ ಗಂಡನ ಗಳಿಸುವ ಶಕ್ತಿ, ಮಾನಸಿಕ ಪ್ರವೃತ್ತಿ, ಅವನು ತನಗೆ ಕೊಡಮಾಡುವ ಸ್ವಾತಂತ್ರ್ಯದ ಪರಿಮಿತಿ-ಇವುಗಳನ್ನರಿತ ಅವಳು ಅವನನ್ನೂ ಸರಿಯಾದ ದಾರಿಯಲ್ಲಿ ನಡೆಯಿಸಿ, ಅದೇ ದಾರಿಯಲ್ಲಿ ತಾನು ಹಿಂಬಾಲಿಸುವಂತಾದರೆ ಗಂಡು ತನ್ನ ಸ್ವಾರ್ಥ ಮರೆತು ಅವಳ ಸುಖವೇ ತನ್ನ ಕರ್ತವ್ಯವೆಂದು ತಿಳಿಯುತ್ತಾನೆ. ಆದರೆ ಈ ಮುಂದಾಲೋಚನೆ ಕಳೆದುಕೊಂಡೇ ಸಂಸಾರಜೀವನ ಆರಂಭವಾಗುವುದರಿಂದ ಆಗಿನ ಮಬ್ಬಿನಲ್ಲಿ, ಉನ್ಮತ್ತತೆಯಲ್ಲಿ, ಸುಖವೇ ಕಂಡು, ನಂತರ ಅದನ್ನು ನಿಸ್ತರಿಸಲಾರದೇ ಗೋಳಾಡಬೇಕಾದಾಗ ಪರಸ್ಪರ ದೋಷಾರೋಪಣೆಗೆ ಆರಂಭವಾಗುತ್ತದೆ.

ಮದುವೆಯ ಮೊದಲು ಇಂದಿನ ಗಂಡಿಗೆ ಅಲ್ಲಲ್ಲಿ ಕಂಡ ಇಂಥ ಸಂದರ್ಭಗಳ ಭಯ. ತನಗೆಂಥ ಮಡದಿ ಬೇಕೆಂಬುದೇ ಎಣಿಕೆಗೊಳಪಡದ ಆನಿಶ್ಚಿತ ಬಯಕೆ. ಬಂದವಳನ್ನು ತನ್ನ ರುಚಿಗೆ ತಿದ್ದೇನೆಂಬ ಆತ್ಮವಿಶ್ವಾಸದ ಅಭಾವ. ಅಲ್ಲದೆ ತನ್ನ ಆಟಕ್ಕೆ ಮನೆಯವರು, ಹಿರಿಯರು ಅಡ್ಡಿಯಾಗುತ್ತಾರೆಂಬ ಶಂಕೆ. ಆದ್ದರಿಂದ ಅವನು ತನ್ನ ಮದುವೆಯ ನಂತರ ಮನೆಯವರಿಂದ ದೂರವಿರುವುದನ್ನು ಬಯಸುತ್ತಾನೆ. ತಾವಿಬ್ಬರೇ ದೂರವಿರುವಾಗ ಒದಗಬಹುದಾದ ತೊಂದರೆಗಳನ್ನು ಕಲ್ಪಿಸಿ ಭಯಗೊಳ್ಳುತ್ತಾನೆ. ಅಪರಿಚಿತಳಾದ ಹೆಂಡತಿಯನ್ನು ಒಂಟಿಯಾಗಿ ಹೇಗೆ ಎದುರಿಸುವದೆಂಬುದೂ ಒಂದು ಆಂತರಿಕ ಭಯವಿದೆ ಅವನಿಗೆ. ಈ ವಿಚಾರಗಳನ್ನು ತನಗರಿಯದೇ ಜಟಿಲಗೊಳಿಸಿಕೊಂಡು ಮದುವೆಗೆ ತಾನೇ ಒತ್ತಡದಿಂದ ಸಾಗುವಂತಾಗುವವರೆಗೆ ಸುಖದ ಆಸೆ-ಆಕಾಂಕ್ಷೆಗಳೇನಿದ್ದರೂ ಅದನ್ನು ಅದುಮಿಕೊಂಡಿರುತ್ತಾನೆ.

ಹೆಂಡತಿ ಸುಂದರಳಾಗಿರಬೇಕು ; ಸುಸಂಸ್ಕೃತಳಿರಬೇಕು ; ಮಿತವ್ಯಯಿ ಇರಬೇಕು ; ಆದರೆ ಜಿಪುಣಳೆನ್ನಿಸಿಕೊಳ್ಳಲಾಗದು. ರಸಿಕಳಿರಬೇಕು; ಸಶಕ್ತಳಿರಬೇಕು; ಮನೆಯವರೊಡನೆ ಹೊಂದಿಕೊಂಡಿರಬೇಕು ; ತನಗೆ ಬೇಕಾದಾಗ ತನ್ನೊಡನೆ ಕುಣಿದು ಅದಕ್ಕೆ ಮನೆಯವರ ಆಕ್ಷೇಪಣೆ ಬರದಿರುವಂತೆ ನೋಡಿಕೊಳ್ಳಬೇಕು. ಮನೆಯವರಿಗೆ ವಿಧೇಯಳಾಗಿದ್ದೂ ತನಗೆ ಅದರಿಂದ ಯಾವ ಕೊರತೆಯೂ ಅನ್ನಿಸಬಾರದು - ಎಂಬ ಇವನ ಕರಾರುಪತ್ರವನ್ನು ಇಂಥವಳು ಪಾಲಿಸುವಳು-ಎಂದು ಯಾವ ಹೆಣ್ಣನ್ನು ನೋಡಿದರೂ ಭರವಸೆಯಾಗುವದಿಲ್ಲ. ನಿಲವು ಜಾಸ್ತಿ, ಇಲ್ಲವೆ ಕಿರಿದು. ಕಣ್ಣಿನಲ್ಲಿ ಕಾಂತಿಯೇ ಇಲ್ಲ. ಕೂದಲು ಕೃತ್ರಿಮವಿದ್ದಂತಿದೆ. ಬಣ್ಣ ಪೌಡರಿನದೇ ಇರಬೇಕು, ಉಲ್ಲಾಸವೇ ಕಾಣದು-ಎಂದೋ, ವಾಚಾಳಿಯಾಗಿ ಕಾಣುತ್ತಾಳೆ, ಡೌಲಿನವಳಿರಬೇಕು. ಇವಳ ಈ ಫ್ಯಾಶನ್ನಿಗೆ ನಾನೇನು ಈಡಾದೇನು ?- ಮನೆಯ ಕೆಲಸ ಇವಳಿಂದಾದೀತೆ ?- ಹೀಗೆ ಹಲವು ಶಂಕೆಗಳು ಅವನನ್ನು ಕಾಡುತ್ತವೆ.

ಬಹು ಮುಖ್ಯವಾದ ಆತಂಕವೆಂದರೆ ಹಿರಿಯರು ಬಯಸುವ ಹಣವನ್ನು ಅರ್ಥಾತ್ ತನಗೇ ಸೇರುವ ಸಂಪತ್ತನ್ನು ತರುವವರ ಕನ್ಯೆ ಇವನ ಮನಸ್ಸಿಗೆ ಬರುವ ಏವಂಗುಣವಿಶೇಷಣ – ವೈಶಿಷ್ಟ್ಯಗಳಿಂದ ಕೂಡಿದವಳಾಗಿರಬೇಕು.

ಇಂದಿನ ಹಿರಿಯರೂ ಸುಧಾರಿಸಿದ್ದಾರೆ. ಅವರಾದರೂ ಗೊಡ್ಡುಸಂಪ್ರದಾಯದ ಕನ್ಯೆಯರನ್ನೇ ತರಬಯಸುವರೆಂದಿಲ್ಲ. ತಮ್ಮ ಆಯ್ಕೆಯನ್ನು ಮಗ ಸಂತೋಷದಿಂದ ಒಪ್ಪಬೇಕೆಂದು ಅವರೂ ಬಯಸುತ್ತಾರೆ. ಆದರೆ ಈ ಆಯ್ಕೆಯ ಚರ್ಚೆಯಲ್ಲಿ ಅವರು ಆಡುವಂತೆ ಅವರೆದುರು ವರನಾದವನು ಆಡುವಂತಿಲ್ಲ, ಇವನ ಸುಖ – ಸಮಾಧಾನಗಳ ಹೊಣೆ ಈ ವರೆಗೆ ಹೊತ್ತವರು ಈಗ ಈ ಮದುವೆ ಮಾಡಿ ಇಳಿಸಿಕೊಳ್ಳಬೇಕಾಗಿದೆಯಲ್ಲದೆ ತಮ್ಮ ಶೇಷಾಯುಷ್ಯದ ಹೊಣೆಯನ್ನು ಮಗ – ಸೊಸೆಯರ ಮೇಲೆ ಹೇರಬೇಕಾಗಿದೆ. ತಾವು ಒಪ್ಪುವ ಸದ್ಗೃಹ ಹುಡುಗಿಯನ್ನು ಗೌರಿ – ಎಂದು ವರ್ಣಿಸಲೂ ಅವರು ಸಮರ್ಥರು. ಆದರೆ ವರದಕ್ಷಿಣೆಯನ್ನು ತಮ್ಮ ದರ್ಜೆಗೆತಕ್ಕಂತೆ ತರಲಾಗದ ಕನ್ಯೆಯರಲ್ಲಿ ದೋಷ ಕಂಡು, ಇಲ್ಲವೆ ಆರೋಪಿಸಿ ತಮ್ಮ ಗಾಳಕ್ಕೆ ಮೀನು ಬಿದ್ದೀತೋ ಎಂದು ಸಮಯ ಕಾಯುತ್ತಾರೆ. ಅದಲ್ಲ – ಇನ್ನೊಂದು ಮೀನು ಬಂದು ಬೀಳುವಂತಾದರೂ ಅವರ ಅಡ್ಡಿ ಇಲ್ಲ. ಕನ್ಯೆ ತರುವ ಹಣದಿಂದ ಇವರ ದೌಲತ್ತೂ ಹೆಚ್ಚಬೇಕು; ದರ್ಜೆಯೂ ಏರಬೇಕು. ಅವಳ ವಿಧೇಯತೆಯ ಅಂಶ ಅವರಿಗೆ ಸೇರಿದ್ದು. ಇತರ ಮಾತು ಮಗನಿಗೆ ಮೀಸಲು.

ಈ ಚಕ್ರವ್ಯೂಹದಲ್ಲಿ ಪಾರಾಗಿ ಬಂದ ಹೆಣ್ಣು ಮನೆಗೆ ಗೆಲುವನ್ನು ತರಬೇಕು; ಶುಭವನ್ನು ತರಬೇಕು, ಗಂಡನ ವರಮಾನ ತಂತಾನೆ ಹೆಚ್ಚಬೇಕು ಮನೆ ಮಂಗಲಕರವಾಗಬೇಕು, ಬೇನೆ – ಬೇಸರ ಸೋಕ ಕೂಡದು. ಇದೆಲ್ಲ ಅವಳ ಕಾಲ್ಗುಣವೆಂದು ಗಣಿಸಲಾಗುತ್ತದೆ.

೩

ಇವೆಲ್ಲ ಯಾವ ಕಾಲಕ್ಕೂ ಇದ್ದ – ಇರುವ ನಂಬಿಕೆಗಳು. ಆದರೆ ಹಿಂದಿಗಿಂತ ಇಂದು ವರಶೋಧನೆ ಯಾಕೆ ಜಟಿಲವಾಗಿದೆ – ಎಂಬುದೇ ಪ್ರಸ್ತುತ ವಿಷಯ. ಮದುವೆಯನ್ನು ನಿರಾಕರಿಸದೆಯೂ ಬೆಳೆದು ನಿಂತ ಕನ್ಯೆಯರ ಸಂಖ್ಯಾಬಲವೇ ಇದಕ್ಕೆ ನಿದರ್ಶನವಾಗಿದೆ.

ಮುಂಚೆ ಮದುವೆ ಮಾಡುವುದು ಹಿರಿಯರ ಸೊತ್ತಾಗಿತ್ತು. ಬುದ್ಧಿ ಬೆಳೆವ ಮುನ್ನವೇ ಬಾಸಿಂಗ ಬಲ ಒದಗಿ ಬಂದಿರುತ್ತಿತ್ತು. ಇಂದು ಮದುವೆ ಮಾಡುವುದೂ ನಡೆಯಬೇಕು – ಹಿರಿಯರಿಂದ ಮದುವೆಯಾಗುವುದೂ ನಡೆಯಬೇಕು – ವರ ಮದುವೆಯಾಗುವವ; ಅವನು ಕನ್ಯೆಯನ್ನು ನೋಡಿ ಒಪ್ಪಬೇಕು. ಈ ನೋಡುವ ನಾಟಕ ಹಿರಿಯರ ಮೂಲಕ – ಅವರ ಸಮಕ್ಷಮ ನಡೆಯಬೇಕು. ಜನ್ಮಕುಂಡಲಿಯಿಂದ ವ್ಯವಹಾರ ಜಾತಕದ ವರೆಗೆ ಮಾತುಗಳು ಹೊಂದಿಕೆಯಾಗಬೇಕು. ಹಿರಿಯರು ಒಪ್ಪಿ ಮುಂದಾಗಬೇಕು; ಇದು ಕ್ರಮ.

ಈ ಮಾರ್ಗಕ್ರಮಣ ಸುತ್ತಿನದು – ಹೌದು, ಆದರೆ ಇದು ಹೀಗೇ ಬಳಸಿಕೊಂಡು ಬರಬೇಕಾಗಿದೆ.

ಜೀವನಕ್ಕೆ ಅರ್ಥ ಮಾರ್ಗ ಮಾಡಿಕೊಂಡನೆಂದರೆ ಗಂಡು ಮದುವೆಯ ಹುರಿಯಾಳಾಗುತ್ತಾನೆ. ಆ ವರೆಗೆ ಅವನನ್ನು ಕೈಹಿಡಿದು ನಡಸಿದ ಶ್ರೇಯ ಹಿರಿಯರದು, ಅವರ ಅವಲಂಬನೆಯನ್ನು ಸಡಲಿಸಿಕೊಳ್ಳುವ ಪ್ರವೃತ್ತಿ ಅವನಿಗೆ ಆಗ ಉದಿಸುತ್ತದೆ. ತನ್ನ ಸ್ವಾತಂತ್ರ್ಯದ ಹಸಿವನ್ನು ಅವನು ಹಂತ ಹಂತವಾಗಿ ಹಿಂಗಿಸಿಕೊಳ್ಳಬೇಕಾಗಿದೆ. ತನ್ನ ಸ್ನೇಹಿತರನ್ನು ಮನೆಗೆ ಬರಮಾಡಿಕೊಂಡು ಸತ್ಕರಿಸುವುದರಿಂದ, ತನ್ನ ಗಳಿಕೆಯ ಹಣ ಹಿರಿಯರ ಕೈಸೇರುವಾಗ ಅಂಶ – ಅಂಶವಾಗಿ ಹೆಚ್ಚು ಹೆಚ್ಚು ತನ್ನ ಸ್ವಂತಕ್ಕೆ ಬಳಸಿಕೊಳ್ಳುವದರಿಂದ, ತನಗಾಗಿಯೇ ಉಳಿಸಿಕೊಳ್ಳುವದರಿಂದ, – ಇದೆಲ್ಲದಕ್ಕೂ ಹಿರಿಯರಾದವರು ಸಂತೋಷದಿಂದ, – ಕನಿಷ್ಠ ತಕರಾರನ್ನಾದರೂ ಮಾಡದಿರುವದರಿಂದ ತನ್ನತನವನ್ನು ಬೆಳೆಸಿಕೊಳ್ಳಬಯಸುತ್ತಾನೆ. ಇದೇ ಹೊತ್ತಿಗೆ ವರಾರ್ಥಿಗಳ ಕಟಾಕ್ಷಕ್ಕೆ ಗುರಿಯಾಗುತ್ತಾನೆ. ಆಗ ಇವನ ಸ್ವಾತಂತ್ರ್ಯದ ವಾರ್ಷಿಕ ಪರೀಕ್ಷೆಯೇ ನಡೆಯುತ್ತದೆ.

ವಯೋಧರ್ಮದಿಂದ ಏರಿಬರುವ ಬಯಕೆ —ಕಾಮನೆಗಳನ್ನು ಭಯದಿಂದ, ಮುಂದಾಲೋಚನೆಯಿಂದ ಸಂಯಮಿಸಿಕೊಂಡು ಮನೆಗೆದ್ದು ಮಾರುಗೆಲ್ಲುವ ವಿವೇಕದ ಭ್ರಮೆಯಾಗಿ, ಹಿರಿಯರ ಮೂಲಕ ಬಂದ ಸಂಬಂಧವನ್ನು ಒಪ್ಪುವುದಕ್ಕಿಂತ ಒಪ್ಪದಿರುವುದೇ ಹೆಚ್ಚಿನ ಸ್ವಾತಂತ್ರ್ಯವೆಂಬ ಶಂಕೆಗೊಳಗಾಗುತ್ತಾನೆ– ಆ ಕನಸಿನಲ್ಲೇ, ಏನವಸರ? ನನಗೆ ಈಗಲೇ ಮದುವೆಯಾಗುವ ವಿಚಾರವಿಲ್ಲ. ನನಗಿನ್ನೂ ಗ್ರೇಡು ಸಿಕ್ಕಿಲ್ಲ. ಇನ್ನೂ ಒಂದು ಪರೀಕ್ಷೆಯಾಗಬೇಕು– ಎಂದೆಲ್ಲ ನಾಟಕ ಹೂಡುತ್ತಾನೆ. ಒಳಗೊಳಗೆ ಇದನ್ನು ಹಿರಿಯರಾದವರು ಅಲ್ಲಗಳೆದು ಮದುವೆಗೆ ಮುಂದಾಗಬೇಕು–ಎಂಬ ಅಭಿಪ್ರಾಯವೇ ಇರುತ್ತದೆ. ಕನ್ಯಾ ಪ್ರದರ್ಶನ ನಡೆದಾದ ಮೇಲೆ ಥಕ್ಕನೆ ಒಪ್ಪಬಾರದು ಎಂದೋ, ಒಪ್ಪಿದಂತೆ ಆಗಿರಬಾರದು ಎಂದೋ ಅನಿಶ್ಚಿತ ಅಭಿಪ್ರಾಯ ಪ್ರಕಟಿಸುತ್ತಾನೆ. ತಾಯಿಯಾದವಳು "ಅವನನ್ನೇನು ಕೇಳುವುದು? ಮಾತು ಮುಂದುವರಿಸಿರಿ" ಎಂದು ಗಂಡನಿಗೆ ಹೇಳುತ್ತಾಳೆ. ಅವಳಿಗೆ ಮಗನ ಮೇಲಿನ ಸಥಿಯಿಂದ, ಪ್ರೀತಿಯಿಂದ ಈ ಮಾತು ಬರುತ್ತದೆ. ನಿಮಗೆ – ಹೆಂಗಸರಿಗೆ ವ್ಯವಹಾರ ಬುದ್ಧಿಯಿಲ್ಲ. ನಾಳೆ ನಾವು ಮಾತು ಹೊರಬೇಕಾಗುತ್ತದೆ. ಅವನು ಒಪ್ಪಿ ಹೇಳಲಿ. ನಾನು ಮುಂದಿನದನ್ನು ನೋಡಿಕೊಳ್ಳುತ್ತೇನೆ – ಎನ್ನುತ್ತಾನೆ ವರಪಿತ. ಈ ಮಾತು ಬರುವುದು ಕನ್ಯೆಯ ಮನೆತನ, ಅಂತಸ್ತು, ಕನ್ಯೆಯ ವಯಸ್ಸು–ರೂಪು ಹಿರಿಯರಿಗೆ ಒಪ್ಪಿಗೆ ಬಂದಾಗ ನಡೆದ ಚರ್ಚೆ. ಅವರೂ ಕೆಲವು ಕನ್ಯೆಯರನ್ನು ನೋಡದೆ, ಕೇಳಿಕೆಯಿಂದಲೇ ಮೊದಲು ಸಾಗು ಹಾಕಿರುತ್ತಾರೆ. ಕನ್ಯಾಪಕ್ಷದವರು ದುಂಬಾಲು ಬಿದ್ದಂತಾಗಿ, ತಮ್ಮ ಗೌರವ ಹೆಚ್ಚಿಸಿಕೊಂಡು ಮಗನ ಮುಂದೆ ಕನ್ಯೆಯ ಮಾತು ಬರಬೇಕಾದರೆ ಒಂದಿಷ್ಟು ಕಾಲಯಾಪನೆಯಾಗುತ್ತದೆ.

ಇಂದಿನ ಕನ್ಯೆಗೂ ಒಂದಿಷ್ಟು ಸ್ವಂತ ವಿಚಾರ ಬಂದಿದೆ. ಕನ್ಯಾಪಿತನಿಗೂ ತನ್ನ ಮಗಳಿಗೆ ತಕ್ಕ ಮನೆತನ ನೋಡಬೇಕೆಂದಿದೆ. ತಾಯಿಗೆ ಚಲುವನಾದ ಅಳಿಯನನ್ನೇ ಆರಿಸಬೇಕೆಂದಿದೆ. ವರಾರ್ಥಿಗಳು ಒಂದಿಷ್ಟು ಹಣ ಹೆಚ್ಚು ಕೊಡುವಷ್ಟು ಶಕ್ತಿವಂತರಿದ್ದರೆ ಅವರೂ ನಾಲ್ಕುಕಡೆ ನೋಡಿ, ಅಳೆದು ಹೇಗೋ – ಏನೋ ಎಂದು ಹಿಂದು-ಮುಂದು ನೋಡುತ್ತಾರೆ. ವರನ ಮನೆಯವರ ನಡವಳಿಕೆ ಅಂತಸ್ತುಗಳ ಬಗ್ಗೆ ಚರ್ಚೆ ಮಾಡುತ್ತಾರೆ. ವರನ ರೂಪು – ಚರ್ಯೆಗಳನ್ನೂ ಒಂದಲ್ಲ ನಾಲ್ಕುಕಡೆ ಕೇಳಿ ನೋಡುತ್ತಾರೆ. ಕನ್ಯೆ ನಾಲ್ಕಕ್ಷರ ಕಲಿತವಳಾದರೆ ಅವಳ ಅಭಿರುಚಿ, ಅಭಿಪ್ರಾಯ ಗಣಿಸಲಾಗುತ್ತದೆ. ಅವಳು ಮಾತಾಡದೆ ಮುಖದಲ್ಲೇ ಭಾವನೆಗಳನ್ನು ತೋರ್ಪಡಿಸಿ ಬೇಕು–ಬೇಡಗಳನ್ನು ವ್ಯಕ್ತಗೊಳಿಸುತ್ತಾಳೆ. ಕೇಳಿದರೆ ನನ್ನನ್ನೇನು ಕೇಳುವುದು–ಎನ್ನುತ್ತಾಳೆ. ಧ್ವನಿಯಲ್ಲೇ ಇಂಥ ಮನೆ ತನಗೆ ಆದೀತೇ ಎಂಬ ಶಂಕೆಯನ್ನು ಸೂಚಿಸುತ್ತಾಳೆ. ಆಗ ತಂದೆ – ತಾಯಿ ಒಂದಿಷ್ಟು ಒತ್ತಾಯ ಮಾಡಿ, ತಿಳಿ ಹೇಳಿ ಒಪ್ಪಿಸಬೇಕಾಗುತ್ತದೆ. ಆಗ 'ನಿಮ್ಮ ಇಷ್ಟ' ಎಂದು ಪ್ರದರ್ಶನಕ್ಕೆ ಸಿದ್ಧಳಾಗುತ್ತಾಳೆ.

ಕನ್ಯೆ ಒಪ್ಪದಿರುವುದು ನೋಡಿದ ಮಾತ್ರಕ್ಕೇ ಘೋಷಿಸಲ್ಪಡುವದಿಲ್ಲ. ಮಾತಿನಲ್ಲಿ ಮುಂದುವರಿದೂ ಸಂಬಂಧ ಕೂಡದಿರುವುದೂ ಉಂಟು. ಆಗ 'ನನಗೆ ಗೊತ್ತಿತ್ತು' ಎಂಬಂತೆ ಮೂಗು ಮುರಿಯಲೂ ಇಂದಿನ ಕನ್ಯೆ ಹಿಂದುಮುಂದು ನೋಡುವದಿಲ್ಲ.

ಅವಳಿಗೆ ಇದು ಅಳುಕಾಗಿ, ಉದಿಸಿದ ಸ್ವಾಭಿಮಾನ ಕುದಿದು ಮತ್ತೆ ನೋಡಿದ, ತಾನೂ ನೋಡಿಕೊಂಡು ಒಪ್ಪಿತವಾದ ಸಂಬಂಧವನ್ನು ಹಟಕ್ಕೆ ನಿರಾಕರಿಸಲೂಬಹುದು – ಇಂದಿನ ಕನ್ಯೆ. ವರಶ್ರೇಷ್ಠನಾದವ, ಎಂದೂ ನಿರಾಕರಿಸಲ್ಪಡಲಾಗದು– ಎಂಬುದೂ ಒಂದು ಸಂಪ್ರದಾಯ. ಮೊದಲೇ ನೋಡಿ ಕೈ ಬಿಡಬಹುದು. ಹುಡುಗಿ ನೋಡಿ ಒಪ್ಪಬೇಕು. ಅವಳು ಒಪ್ಪಬಹುದು ಎಂದು ಹಿರಿಯರು ತಿಳಿದೂ ಕನ್ಯೆಯಿಂದ ನಿರಾಕೃತನಾದರೆ —ಹಾಗಾಗಬಾರದೆಂದೇ ಇಂದಿಗೂ ಭಾವನೆ ಇದೆ. ವರಸಮಸ್ಯೆಯಾಗಲೂ ಇದೂ ಒಂದು ಅಂಶ– ಆಗ ವರಪಕ್ಷದವರು ಕೆರಳಿ ಕನ್ಯೆಯ ಬಗ್ಗೆ ಅಪಪ್ರಚಾರ ಮಾಡಿ, ಮೂಕಿ ಕಾಗದ ಬರೆದು ಸಂಬಂಧಗಳೇ ಬರದಂತೆ ಮಾಡಲೂ ಹೇಸುವದಿಲ್ಲ. ಆದರೆ ನಿರಾಕೃತನಾದ ಗಂಡಿಗೆ ಮತ್ತೆ ಕನ್ಯೆಯರು ಬಂದೇ ಬರುತ್ತಾರೆ. ಅವನ ಕಣ್ಣಾಪಾರಣೆ ನಡೆದೇ ನಡೆಯುತ್ತದೆ.

ಇಂದಿನ ಕನ್ಯಾರ್ಥಿಗೆ ತನ್ನ ಅಸ್ಥಿರ ಮನಃಸ್ಥಿತಿಯಿಂದ ಮದುವೆಯ ಮಾತು ಅನಿರ್ದಿಷ್ಟವಾಗಿ

ಮುಂದುವರಿಯುತ್ತಿದೆ. ಮದುವೆಯಾಗದಿರಲೂ ಅವನಿಗೆ ಧೈರ್ಯವಿಲ್ಲ. ಅಲ್ಲಿ ತನ್ನ ಬಗೆಗೇ ಅಪನಂಬಿಕೆ. ಅದಾನೇ-ಹೇಗೆ ಆಗುವುದು ? ಹೇಗೆ ಆಗುವುದು ? ವರದಕ್ಷಿಣೆಗೆ ಸೋಲಬೇಕೇ—ಬೇಡವೆ? ಕೊಡುವವರಿರುವಾಗ ಯಾಕೆ ಬೇಡವೆನ್ನಬೇಕು? ವರದಕ್ಷಿಣೆ ಕೊಡದವರ ಕನ್ಯೆಯಿಂದಾದರೂ ಯಾವ ಪ್ರಯೋಜನವಿದೆ? ಅಂಥವಳಾದರೂ ಒಳ್ಳೆಯವಳೇ ಆಗಿರುವ ಭರವಸೆಯೆಲ್ಲಿದೆ? ಹಣ ತರುವವಳೂ ಯಾಕೆ ಒಳ್ಳೆಯವಳಾಗಿರಬಾರದು? ಬರುವ ಹಣ ಅವಳ-ತನ್ನ ಭವಿಷ್ಯದ ಭಾರವನ್ನು ಹಗುರುಗೊಳಿಸಬಹುದಲ್ಲ ! ಅಗ ಹಿರಿಯರಾದವರ ಮಾತನ್ನೂ ನಡೆಸಿದಂತಾಗುತ್ತದೆ. ಅವರಾದರೂ ನನ್ನ ಕ್ಷೇಮಕ್ಕೇ ಹಣ ಬಯಸುತ್ತಾರಲ್ಲ!

ಹೀಗೆ ಬರುವ-ಬರದಿರುವ, ಬಿಡಿಸಬಲ್ಲ-ಬಿಡಿಸಲಾಗದ, ಅವಶ್ಯಕ-ಅನವಶ್ಯಕ ಪ್ರಶ್ನೆಗಳಿಂದ ತತ್ತರಿಸಿದ ಕನ್ಯಾರ್ಥಿ ಆತ್ಮಗ್ಲಾನಿಯಿಂದ ಬಳಲುವಂತಾಗುತ್ತದೆ. ಸುಖಬೇಕು; ಅದು ಬರುವ ದಾರಿಯಲ್ಲಿಯ ಆಯಾಸದ ಚಿಂತೆ; ಅದನ್ನು ಎದುರಿಸೇನೆಂಬ ಆತ್ಮವಿಶ್ವಾಸದ ಅಭಾವ, ಸ್ವಂತ ಬುದ್ಧಿಯ, ಸ್ವಯಂನಿರ್ಣಯದ ಅಸಮರ್ಥನೆ; ಕನ್ಯೆಯ ಬಗ್ಗೆ ಸಂಶಯ, ಅವಳ ಬಗ್ಗೆ ಅತ್ಯಾಸೆ-ಇವುಗಳಿಂದ ಬಳಲುತ್ತಿದ್ದು ಪ್ರಾಪ್ತವಯಸ್ಸಿನಲ್ಲಿ ಕೊಡಬಹುದಾದ, ಪಡೆಯಬಹುದಾದ ಸುಖ-ಸಮಾಧಾನಗಳಿಂದ ವಂಚಿತನಾಗಿ-ಅದು ತನ್ನ ಮುನ್ನೆಚ್ಚರದ ನಿಲುವು-ಎಂಬ ಆತ್ಮವಂಚನೆಯ ಸೆಳವಿಗೆ ತನಗರಿಯದೆ ಬಿದ್ದು ಈಸಲಾಗದೆ, ಮುಳುಗಲಾಗದೆ ತೇಲುತ್ತ ಸಿಕ್ಕ ಬೆಂಡನ್ನೇ ಆಧಾರವೆಂದು ನಂಬುವ ಸ್ಥಿತಿಗೆ ಬಂದು ಹೆಣ್ಣು ಎಂಥದಾದರಾಗಲಿ, ಮದುವೆಯಾದರೆ ಸಾಕು ಎಂಬ ಸ್ಥಿತಿಗೆ ಬರುತ್ತಾನೆ.

ಮಕ್ಕಳ ಮದುವೆಯ ಮಾತಿನಲ್ಲಿ ಹಿರಿಯರಾದವರ ಹಿಡಿತವೂ ಇನ್ನೂ ಬದಲಾಗಿಯೇ ಇದೆ. ಮಕ್ಕಳ ಆತ್ಮವಿಶ್ವಾಸದ ಅಭಾವಕ್ಕೆ ಅವರೂ ಬಹುಮಟ್ಟಿಗೆ ಕಾರಣರಾಗಿದ್ದಾರೆ. ಒಂದು ಹೆಣ್ಣು ಒಂದು ಗಂಡು ಮಗುವಿರುವ ತಂದೆ ಮಗಳ ಮದುವೆಗಾಗಿ ವಹಿಸುವ ಪಾತ್ರವೇ ಬೇರೆ. ಮಗನ ಮದುವೆಗಾಗಿ ಆಡುವ ಆಟವೇ ಬೇರೆ. ಮಗಳ ಮದುವೆಯ ಸಮಯ ಗಂಡಿನವರಿಂದ ತಾನು ಬಯಸುವ ಸಹಾನುಭೂತಿಯನ್ನು, ಮಾನವೀಯತೆಯನ್ನು ಮಗನ ಮದುವೆಯ ಕಾಲದಲ್ಲಿ ಪೂರ್ಣ ಮರೆತು ನಡೆಯುತ್ತಾನೆ. ಆಗಿನ ದೈನ್ಯ ಈಗ ಅಹಂಕಾರವಾಗಿ, ಸ್ವಾರ್ಥವಾಗಿ ಮೆರೆಯುತ್ತದೆ. ಸಂದರ್ಭದಿಂದ ಸೇಡಿನಬುದ್ಧಿಯೇ ವ್ಯಕ್ತವಾಗುತ್ತದೆ. ಅದಕ್ಕೆ ಲೌಕಿಕ, ವ್ಯವಹಾರವೆಂದು ಸಮಾಧಾನ ಹೇಳುತ್ತಾನೆ.

ಕುಟುಂಬ ಜೀವನಕ್ಕೆ ಬಹು ಮುಖ್ಯವಾದ, ಸಮಾಜಸ್ವಾಸ್ಥ್ಯಕ್ಕೆ ಅನಿವಾರ್ಯವಾದ, ಮಾನವನ ನೈಸರ್ಗಿಕ ಕ್ರಿಯಾಶೀಲತೆಗೆ ಪ್ರೇಕ್ಷಕವಾದ, ಭಗವತ್ಸಂಕಲ್ಪವಾಗಿ, ಜಗತ್ತಿನ ಮುನ್ನಡೆಗೆ ಸತ್ಸಂತಾನವನ್ನು ಒದಗಿಸಲು ಬದ್ಧಕಂಕಣರಾಗಿರಬೇಕಾದ ಹೆಣ್ಣು - ಗಂಡುಗಳ ಹೃದಯಮಿಲನದ ಧರ್ಮಪರಂಪರೆ ನಡೆಯಬೇಕಾದ ಅಧಿಕೃತವಾದ-ಮಾನವೀಯ ಶಾಸನವಾದ ಮದುವೆಯಂಥ ಒಂದು ಪವಿತ್ರದೀಕ್ಷೆಗೆ ವರಶೋಧನೆ ಒಂದು ಸಮಸ್ಯೆಯಾಗಬಾರದು; ನಿಜ. ಆದರೆ ಹಳೆಯ ರೂಢಿಗಳು ಸಡಲಿ, ಹೊಸವಿನ್ನೂ ಪ್ರಸ್ಥಾಪಿತವಾಗಬೇಕಾದ ಈ ಸಂಧಿಕಾಲದಲ್ಲಿ ಎಲ್ಲಾ ವಿಪರೀತಗಳೊಡನೆ ಮದುವೆಯೂ ಒಂದು ವಿಪರೀತ ತೊಡಕಿನದಾಗಿದೆ. ಶಾಸನಗಳಿಂದ ಈ ತೊಡಕನ್ನು ಬಿಡಿಸಲಾಗಿಲ್ಲ. ಭಾಷಣ-ಲೇಖನಗಳಿಂದ ಇದಕ್ಕೆ ಪರಿಹಾರ ಕಂಡಿಲ್ಲ. ಸ್ವಾನುಭವದಿಂದಲೂ ಈ ವಿಷಚಕ್ರದಿಂದ ಮುಕ್ತಿಯಾಗಲಿಲ್ಲ. ಈ ಸಮಸ್ಯೆಯ ವಿರುದ್ಧ ಸಂಘಟಿತ ಚಳವಳಿಯೊಂದು ನಡೆಯ



ಬೇಕು. ಆಗ ಶಾಸನಗಳ ರಕ್ಷೆ ಪ್ರಯೋಜನಕ್ಕೆ ಬಂದೀತು. ಬರುವ ಆಣೆ-ತತೆಗಳಿಗೆ ಸಾಮಾಜಿಕ ಬಹಿಷ್ಕಾರದ ಬೆದರಿಕೆ ಹಾಕಬೇಕು. ಈ ಅವಸ್ಥೆ ಯಲ್ಲಿ ಮದುವೆಯ ಸಮಸ್ಯೆ—ವರ ಶೋಧದ ಸಮಸ್ಯೆ, ಕನ್ನೆಯರ ಭವಿಷ್ಯಗಳು ಇನ್ನೂ ತೊಡ ಕಿನವಾಗಬಹುದು. ಆದರೆ ಇಂಥ ಒಂದು ವಾತಾ ವರಣ ನಿರ್ಮಿತವಾಯಿತೆಂದರೆ ಮುಂದೆ ಸಹಜ ವಾದ ಜೀವನ ರೂಪುಗೊಂಡು ಇಂದಿನ ಸಮಸ್ಯೆ ಗಳು ತಮ್ಮ ತೀವ್ರತೆಯನ್ನು ಕಳೆದುಕೊಂಡು ಸಮಾಜದಲ್ಲಿ ಮದುವೆ ಒಂದು ಕರ್ತವ್ಯವಾಗಿ, ವರ — ಕನ್ನೆಯರು ಸಮಸ್ಯೆಯಾಗದೆ ಹೊಂದಿ ಕೊಂಡಾರು—ಎಂದು ನಿರೀಕ್ಷಿಸಬೇಕಾಗಿದೆ.

ಏಳು ತರದ ಪತ್ನಿಯರು

ತಮ್ಮ ಸೊಸೆ ಗಂಡನನ್ನಾಗಲಿ ಅತ್ತೆಯನ್ನಾ ಗಲಿ ಮನೆಯ ಇತರ ಹಿರಿಯರನ್ನಾಗಲಿ ಆದರಿಸ ದಿರುವುದರಿಂದ ಸಂಸಾರ ಜೀವನವೇ ಹಾಳಾಗಿದೆ ಯೆಂದು ಅನಾಥ ಪಿಂಡಿಕಾ ಎಂಬ ಸೆಟ್ಟರು ಬುದ್ಧ ದೇವನಿಗೆ ತಿಳಿಸಿ ಆಕೆಗೆ ಉಪದೇಶ ಕೊಡುವಂತೆ ಕೇಳಿಕೊಂಡರು.

ಬುದ್ಧ ದೇವನು ಸೊಸೆಯೊಡನೆ ಕೇಳಿದನು: " ಈ ಲೋಕದಲ್ಲಿ ಏಳು ತರದ ಪತ್ನಿಯರಿದ್ದಾರೆ ಗೊತ್ತೇ ಮಗಳೇ ?''

ಸೊಸೆ ಕೇಳಿದಳು: ಎಂಥೆಂಥವರು ದೇವ ?''

ಬುದ್ಧ ದೇವ ಹೇಳಿದ:

" ಮೊದಲನೆಯವಳನ್ನು ಘಾತಕಳೆಂದು ಕರೆ ಯುತ್ತಾರೆ. ಪ್ರತಿ ದಿನವೂ ಹೊಸ ಗೆಳೆಯನನ್ನು ಹುಡುಕುತ್ತ ಪತಿಯ ವಿಶ್ವಾಸವನ್ನು ಕೆಡಿಸು ವವರು ಅಂಥವರಾಗಿದ್ದಾರೆ.

ಎರಡನೆಯವಳನ್ನು ಕಳ್ಳಿಯೆಂದು ಹೇಳುತ್ತಾರೆ. ಇವಳು ಯಾವಾಗಲೂ ತನ್ನ ಅವಶ್ಯಕತೆಗಳ ನ್ನಷ್ಟೇ ಗಮನಿಸುತ್ತಾಳೆ. ಇವಳು ಪತಿಯು ಎಂಥ ಕಷ್ಟದಲ್ಲಿದ್ದರೂ ತನ್ನ ಇಷ್ಟ ಪೂರ್ತಿಯಿಂದ ತೃಪ್ತಳಾಗುವಳು.

ಮೂರನೆಯವಳನ್ನು ಯಜಮಾನತಿಯೆಂದು ಕರೆಯಲಾಗಿದೆ. ಇವಳು ತಾನು ಒಡತಿಯೆಂದೂ ಗಂಡನು ತನ್ನ ನೌಕರನೆಂದೂ ತಿಳಿಯುತ್ತಾಳೆ.

ನಾಲ್ಕನೆಯವಳು ಗಂಡನೊಡನೆ ಮಕ್ಕಳೊ ಡನೆ ವ್ಯವಹರಿಸುವಂತೆ ವರ್ತಿಸುತ್ತಾಳೆ. ಅವಳು ಅವನ ಎಲ್ಲ ಅವಶ್ಯಕತೆಗಳನ್ನು ತಾಯಿಯಂತೆ ಪೂರಯಿಸುತ್ತಾಳೆ.

ಐದನೆಯವಳು ತಂಗಿಯಂತೆ ಪತಿಸೇ ಮಾಡುತ್ತಾಳೆ. ಆದರೆ ಪ್ರೇಮ ಮೂರ್ತಿಯಾ ಅವಳು ನಾಚಿಕೆಯ ಗೊಂಬೆಯೂ ಆಗಿರುತ್ತಾಳೆ

ಆರನೆಯವಳು ಗಂಡನೊಡನೆ ಮಿತ್ರನಂ ವರ್ತಿಸುತ್ತಾಳೆ. ಅವಳು ಗಂಡನನ್ನು ಅದ ತ್ತಿದ್ದು ಸಂತೋಷ ಪಡಿಸುತ್ತಿರುತ್ತಾಳೆ. ಸು ದುಃಖಗಳಲ್ಲಿ ಅವನೊಡನೆ ಭಾಗಿಯಾಗುತ್ತಾಳೆ

ಏಳನೆಯವಳು ನೌಕರನಂತೆ ಕೊನೆಯ ತನ ಪತಿಯ ಸೇವೆ ಮಾಡುತ್ತಾಳೆ. ಅವಳು ಪತಿಗೆಂದ ಎದುರಾಡುವದಿಲ್ಲ; ಅಷ್ಟೇ ಅಲ್ಲದೆ ಎಂದ ದುಃಖ ಉಂಟು ಮಾಡುವದಿಲ್ಲ. ತಾಳ್ಮೆಯಿಂ ಪತಿಸೇವೆ ಮಾಡುವುದು ತನ್ನ ಧರ್ಮನೆಂದ ಅವಳು ತಿಳಿಯುತ್ತಾಳೆ.

ಇವರಲ್ಲಿ ನೀನು ಯಾವ ಬಗೆಯವಳಾಗಲ ಬಯಸುವೆ ? ಕೊನೆಗೆ ಬುದ್ಧದೇವ ಆಕೆಯನ್ನು ಪ್ರಶ್ನಿಸಿದ.

ಆಗ ಆಕೆಯು ಎಚ್ಚತ್ತಳು: "ದೇವ ಈ ತನ ನಾನು ಅಜ್ಞಾನದಲ್ಲಿದ್ದೆ. ಇನ್ನು ಮುಂದೆ ನಾನ ಪತಿಗೆ ಮತ್ತು ಹಿರಿಯರಿಗೆ ದುಃಖ ಕೊಡದ ಅವರ ಸೇವೆಯನ್ನು ಮಾಡುವೆನು. '' ಎಂದ ಪ್ರತಿಜ್ಞೆ ಮಾಡಿದಳು.

★

ಜ್ಯೋತಿಷಿ ಶ್ರೀ. ಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯಕಥನ ಕಾರ್ಯಾಲಯ, ಕಾರ್ಲೇಕರ ಬಿಲ್ಡಿಂಗ,
ಖಡೇಬಜಾರ–ಬೆಳಗಾಂವಿ

ವರ್ಷ ಭವಿಷ್ಯ

ಶಾಲಿವಾಹನ ಶಕೆ ೧೮೭೮ ಕಾರ್ತಿಕ ಶುದ್ಧ ೧ ಶನಿವಾರದಿಂದ
ಶಕೆ ೧೮೭೯ ಅಶ್ವಿನ ಬಹುಳ ೩೦ ಬುಧವಾರ ವರೆಗೆ
ಅಂದರೆ

೧೯೫೬ ನೇ ಇಸ್ವಿಯ ನವಂಬರ ೩ ರಿಂದ
೧೯೫೭ ನೇ ಇಸ್ವಿಯ ಅಕ್ಟೋಬರ ೨೩ ರ ವರೆಗೆ

(ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ)

ಸೂಚನೆ :— ಈ ವರ್ಷ ಆಯಾ ರಾಶಿಯವರಿಗೆ ಆಯಾ ಗ್ರಹಗಳ ಪರಿಣಾಮ ಯಾವ ಬಗೆಯಿಂದ ಆಗುವದೆಂಬದನ್ನು ಸಾಕಲ್ಯವಾಗಿ ವಿಚಾರಮಾಡಿ ಈ ಭವಿಷ್ಯವನ್ನು ಬರೆದದ್ದಾಗಿದೆ. ಇದರಿಂದ ಆಯಾ ರಾಶಿಯವರಿಗೆ ತಮಗಾಗಬಹುದಾದ ಇಷ್ಟಾನಿಷ್ಟ ಪರಿಣಾಮಗಳು ಸಾಧಾರಣವಾಗಿ ಗೊತ್ತಾಗುವವು.

ಆಯಾ ವ್ಯಕ್ತಿಗಳ ಜನ್ಮಕುಂಡಲಿಯ ಮೇಲಿಂದ ಭವಿಷ್ಯವನ್ನು ಬರೆದದ್ದಾದರೆ ಪೂರ್ಣವಾಗಿ ನಿಜವಾಗಿ ಪರಿಣಮಿಸುವದು. ಆದರೂ ಈ ವರ್ಷ ಪ್ರತಿಯೊಬ್ಬರಿಗೆ ಆಯಾ ಗ್ರಹಗಳ ಪರಿಣಾಮವಾಗಿ ಸುಖದುಃಖದ ವಾತಾವರಣವನ್ನು ಎಂತು ಕಳೆಯಬೇಕಾಗುವದೆಂಬುದು ಈ ಭವಿಷ್ಯದಿಂದ ಗೊತ್ತಾಗುವದು. ಆದರ ಕಲ್ಪನೆ ಸ್ಪಷ್ಟವಾಗಿ ಆಗುವದು.

ಜನ್ಮರಾಶಿಗನುಸಾರ ಮತ್ತು ಜನ್ಮಲಗ್ನದ ಮೇಲಿಂದ ಈ ಭವಿಷ್ಯವನ್ನು ಪೂರ್ಣವಾಗಿ ಮನನಮಾಡಿಕೊಂಡು ಅದರಂತೆ ವರ್ತಿಸಿದ್ದಾದರೆ ಶುಭಾಶುಭಗಳ ವಿಷಯದಲ್ಲಿ ಬಹಳ ಜಾಗ್ರತ ಉಳಿಯಲು ಬರುವದು.

ಪುರುಷರಂತೆ ಹೆಣ್ಣುಮಕ್ಕಳಿಗೂ ಶುಭಾಶುಭ ಫಲಗಳು ದೊರೆಯುವವು. ಆದರೆ ದೈಹಿಕ ಭೇದ ತಾರತಮ್ಯವನ್ನು ಮಾತ್ರ ನೆನಪಿನಲ್ಲಿಡಬೇಕು.

ಮೇಷ

ಒಟ್ಟಾರೆ ಈ ವರ್ಷ ಈ ರಾಶಿಯವರಿಗೆ ಪ್ರತಿಯೊಂದು ವಿಷಯವು ಕಷ್ಟದಿಂದಲೇ ಸಾಧ್ಯವಾಗುವದು ಎಂದು ತಿಳಿದುಕೊಂಡು ಮುನ್ನಡೆಯಬೇಕು.

ಈ ರಾಶಿಯವರು ಕಳೆದ ವರ್ಷದಂತೆ ಪ್ರಕೃತಿಯನ್ನು ಜಪ್ಪಿಸಿಕೊಂಡೇ ನಡೆಯಬೇಕು. ಏಕೆಂದರೆ ಇದಿ ವರ್ಷ ಇರುವ ೮ನೇ ಶನಿ ಮತ್ತು ೬ನೇ ಗುರು ಇವರು ವಾತಜನ್ಯ ಮತ್ತು ಅಪಚನದ ವಿಕಾರವನ್ನುಂಟುಮಾಡಬಲ್ಲರು. ಆದರೆ ಮಾರ್ಚ ೭ ರಿಂದ ಶನಿಯು ಜೊತೆಯಲ್ಲಿ ೮ನೇ ಸ್ಥಾನದಲ್ಲಿದ್ದ ರಾಹುವು ಅದನ್ನು ಬಿಟ್ಟು ೭ನೇ ಸ್ಥಾನಕ್ಕೆ ಬರುವದರಿಂದ ಅಂದಿನಿಂದ ದುರ್ಧರ ಕ್ಲೇಶವಾಗಬಹುದೆಂಬ ಭೀತಿಯನ್ನು ತಾಳುವ ಕಾರಣವಿಲ್ಲ. ಶನಿ, ರಾಹು ಮತ್ತು ಗುರುವಿನ ಸಂಪೂರ್ಣ ಜಪ ಮಾಡಬೇಕು ಅಂದರೆ ಕ್ಲೇಶ ಕೆಲಮಟ್ಟಿಗೆ ಕಡಿಮೆಯಾಗುವದು. ವಿಶೇಷವಾಗಿ ನವ್ಹಂಬರ ೨೧ ರಿಂದ ಜನೇವರಿ ೧೭, ಜೂನ ೧೨ ರಿಂದ ಜುಲೈ ೩೦ ಮತ್ತು ಸಪ್ಟಂಬರ ೧೫ ರಿಂದ ಅಕ್ಟೋಬರ ೪ ರ ವರೆಗಿನ ಅವಧಿಯಲ್ಲಿ ಆಹಾರವಿಹಾರಗಳಲ್ಲಿ ಅತ್ಯಂತ ನಿಯಮಿತವಾಗಿರಬೇಕು.

ಉಳಿದ ವಿಷಯಗಳಲ್ಲಿ ದೇಹ ಸುಖ ಸಾಧಾರಣವಿರುವದು. ಮಾರ್ಚ ೭ ರ ವರೆಗೆ ಸ್ವಲ್ಪ ಗೃಹಕಲಹ ನಡೆಯುವದು. ಆದರೆ ಮುಂದೆ ಅದು ಬೇಗ ಮುಗಿಯುವದು. ನಿಮ್ಮ ಮಾತು ಅನೇಕರಿಗೆ ಸರಿಯೆನಿಸುವದು. ಕುಟುಂಬದಲ್ಲಿ ಇದ್ದ ನಿಮ್ಮ ವರ್ಚಸ್ಸು ಕಡಿಮೆಯಾಗುವದಿಲ್ಲ. ಇಷ್ಟೇ ಅಲ್ಲ ಮತ್ತಷ್ಟು ಹೆಚ್ಚುವದು. ಕಣ್ಣಿನ ವಿಕಾರವಿದ್ದರೆ ಅದು ಕಡಿಮೆಯಾಗುವದು ಮತ್ತು ದೃಷ್ಟಿ ಚೆನ್ನಾಗಿ ಉಳಿಯುವದು ಆದರೆ ಬಾಯಿಯ ರುಚಿ ಮಾತ್ರ ಮೇಲಿಂದ ಮೇಲೆ ಕೆಡುತ್ತ ಹೋಗುವದು. ಮನೆಯಲ್ಲಿಯ ಪುರುಷರಷ್ಟು ಸ್ತ್ರೀಯರ ಪ್ರೇಮ ತೋರಿಬರುವದಿಲ್ಲ. ನೌಕರರು ಪ್ರಾಮಾಣಿಕರಾಗಿದ್ದರೂ ಕೆಲಮಟ್ಟಿಗೆ ಕೆಲಸ ತಪ್ಪಿಸುವರು ಆದರೆ ದೂರಿನ ಆಪ್ತರು ಮತ್ತು ಇತರರು ಹೆಚ್ಚು ಕಳಕಳಿಯಿಂದ ಮತ್ತು ಸೌಜನ್ಯದಿಂದ ವರ್ತಿಸುವರು.

ಸ್ತ್ರೀಸುಖಕ್ಕೆ ಈ ವರ್ಷ ಮಧ್ಯಮವಿದೆ. ಮಾರ್ಚ ೭ ರಿಂದ ಅವಳ ಪ್ರಕೃತಿ ಅಷ್ಟೊಂದು ಚೆನ್ನಾಗಿ ಉಳಿಯುವದಿಲ್ಲ. ತಲೆತಿರುಗುವದು, ಚಕ್ರಬರುವದು, ಕಣ್ಣೋವು ಬರುವದು. ಕೆಲ ಸಲ ಸ್ವಪ್ನದಲ್ಲಿ ಇಲ್ಲವೆ ಜಾಗ್ರತಾವಸ್ಥೆಯಲ್ಲಿಯೇ ಭಯಾನಕ ಚಿತ್ರಗಳು ಕಣ್ಣಿಗೆ ಬೀಳುವವು. ಒಂದಿಲ್ಲೊಂದು ಬಗೆಯ ಕ್ಲೇಶವಾಗುವದು. ಉಭಯತರಲ್ಲಿಯ ಪ್ರೇಮ ಕೂಡ ಮೊದಲಿಗಿಂತ ಕಡಿಮೆಯಾಗುವದು. ನವಂಬರ ೧೯ ರ ವರೆಗೆ ಮತ್ತು ಅನಂತರ ಡಿಸೆಂಬರ ೧೪ ರಿಂದ ಜನೇವರಿ ೭ ರ ವರೆಗೆ ಮಾರ್ಚ ೧೦ ರಿಂದ ಎಪ್ರಿಲ ೧೨ ರ ವರೆಗೆ ಮತ್ತು ಆಗಷ್ಟ ೧೪ ರಿಂದ ಸಪ್ಟಂಬರ ೮ರ ಅವಧಿಯಲ್ಲಿ ನೀವು ಇಲ್ಲವೆ ಅವಳು ನಿರರ್ಥಕವಾಗಿ ಸ್ಥಳಾಂತರವಾಗುವದರಿಂದ ಸಹವಾಸ ಸುಖಕ್ಕೆ ವ್ಯತ್ಯಯ ಬರುವದು. ಆದರೆ ನಿಮ್ಮ ಲಗ್ನವಿನ್ನೂ ಆಗಿರದಿದ್ದರೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಆಗುವ ಸಂಭವ ತೀರ ಕಡಿಮೆ. ಆದರೆ ಒಂದು ವೇಳೆ ಬಾಸಿಂಗಬಲ ಬಹಳ ಪ್ರಬಲವಿದ್ದರೆ ನವಂಬರ ೧೯ರಿಂದ ಡಿಸೆಂಬರ ೧೪, ಜನೆವರಿ ೭ ರಿಂದ ಫೆಬ್ರವರಿ ೧, ಏಪ್ರಿಲ ೧೨ರಿಂದ ಮೇ ೯, ಜೂನ ೧ ರಿಂದ ೨೫ ಮತ್ತು ಸಪ್ಟಂಬರ ೮ ರಿಂದ ಅಕ್ಟೋಬರ ೪ರ ಅವಧಿಯಲ್ಲಿ ಆಗಬಹುದು. ಆದರೂ ಪತಿ-ಪತ್ನಿಯರು ಅನುರೂಪ ಇರುವದಿಲ್ಲ. ಲಗ್ನ ಗೊತ್ತಾದಂದಿನಿಂದ ಮುಗಿಯುವ ವರೆಗೆ ಅನೇಕ ಅಡಚಣೆಗಳು ಬರುವವು.

ಅದರಂತೆ ನಿಮ್ಮ ಮಕ್ಕಳಲ್ಲಿ ಯಾರದಾದರೂ ಲಗ್ನಮಾಡುವದಿದ್ದರೆ ಅದು ಕೂಡ ಬಹಳ ಪ್ರಯಾಸದಿಂದ ಆಗುವದು. ಗೊತ್ತಾದ ಲಗ್ನವನ್ನು ಮುರಿಸುವ ದುಷ್ಟ ಪ್ರಯತ್ನಗಳನ್ನು ವಿಘ್ನಸಂತೋಷಿ ಜನರು ನಡೆಸುವರು. ಅನೇಕ ಸಂದರ್ಭಗಳಲ್ಲಿ ಅದು ಮುರಿದ ಅನುಭವವೂ ಉಂಟಾಗುವದು. ಮಗಳಿಗಾಗಿ ವಿಪರೀತ ವರದಕ್ಷಿಣೆ ಕೊಡಬೇಕಾಗುವದು. ಆದರೆ ನೀವು ಮಾತ್ರ ಮಗನಿಗಾಗಿ ಬಹಳ ಕಡಮೆ ವರದಕ್ಷಿಣೆ ತೆಗೆದುಕೊಳ್ಳಬೇಕಾಗುವದು. ಆದರೆ ಸೊಸೆ ಇಲ್ಲವೆ ಅಳಿಯ ಎಣಿಸಿದ್ದಕ್ಕಿಂತ ಹೆಚ್ಚು ಒಳ್ಳೆಯವರು ದೊರೆಯುವರು. ಮಕ್ಕಳಿಗೆ ಈ ವರ್ಷ ಬಹಳ ಉತ್ಕರ್ಷಕಾರಕ. ನಿಮ್ಮ ನಿಮ್ಮಲ್ಲಿ ಮತ್ಯೈಕ್ಯ. ಹೊಲಮನೆಯ ಉತ್ಪನ್ನ ಅಂದಾಜಿಗಿಂತ ಸ್ವಲ್ಪ ಕಡಮೆಯೆ. ಆದರೆ ಮುಂದೆ ಉತ್ಪನ್ನ ಹೆಚ್ಚುವಂಥ ಕೆಲ ಸಂಗತಿಗಳು ಅಲ್ಪಾಯಾಸದಿಂದ ಸಾಧ್ಯವಾಗುವವು. ವಾಹನ ಸುಖ ಬಹಳ ಕಡಮೆ.

ಹಳೆಯದನ್ನು ಬಿಡಿರಿ, ಹೊಸ ಮೋಟರು ಸಾಯಂಕಲ್ಲು ಮೊದಲಾದವುಗಳು ಕೂಡ ಮುರಿಯುವವು, ಇಲ್ಲವೆ ಅಪಘಾತಕ್ಕೆ ಈಡಾಗುವವು. ಸಮೀಪದ ಆಪ್ತರು ಮತ್ತು ನೆರೆಯುವರು ಬಹಳ ದ್ವೇಷ ಮಾಡುವರು. ಹಿಂಡುವ ದನಗಳಿಗೆ ರೋಗದ ಅಂಜಿಕೆ ಇತರ ಉಪಯುಕ್ತ ದನಗಳಿಗಿಂತ ಹೆಚ್ಚು.

ಧಂದೆ-ಕೂಲಿಕಾರರಿಗೂ ಈ ವರ್ಷ ಅಷ್ಟೊಂದು ಲಾಭದಾಯಕ ಮತ್ತು ಉತ್ಸಾಹದ್ದಲ್ಲ. ತೇಜಿ ಮಂದಿ ಅಂದಾಜು ತಪ್ಪುವದರಿಂದ ಧಂದೆಯುವರಿಗೆ ಬಹಳ ತೊಂದರೆಯಾಗುವದು. ಮತ್ತು ಪತ್ತು ಉಳಿಸಿಕೊಳ್ಳಲು ಸಾಕುಬೇಕಾಗಿ ಹೋಗುವದು. ಆದರೆ ವರ್ಷಾರಂಭದಲ್ಲಿ ರಾಶಿ ಸ್ವಾಮಿ ಮಂಗಳ ಲಾಭದಲ್ಲಿರುವದರಿಂದ ಆಯತ್ತ ಸಮಯದಲ್ಲಿ ಯಾರದಾದರೂ ಸಹಾಯ ದೊರೆತು ಅದು ಕೊನೆಯ ವರೆಗೆ ಉಳಿಯುವ ದೈವೀ ಕೃಪೆಯು ಯೋಗವಿದೆ. ಆದ್ದರಿಂದ ಅಷ್ಟೊಂದು ಹತಾಶರಾಗುವ ಕಾರಣವಿಲ್ಲ. ಅದರಲ್ಲಿಯೂ ನವಂಬರ ೨೧ರ ವರೆಗೆ, ಅನಂತರ ಜನೆವರಿ ೧೭ ರಿಂದ ಮಾರ್ಚ ೭, ಎಪ್ರಿಲ ೨೬ರಿಂದ ಜೂನ ೧೨ ಮತ್ತು ಸಪ್ಟಂಬರ ೧೫ರ ನಂತರದ ಕಾಲವು ಲಾಭದಾಯಕ. ಧಂದೆಯುವರಿಗಿಂತ ನೌಕರದಾರರಿಗೆ ಈ ವರ್ಷ ಬಹಳ ಸುಖ. ವರಿಷ್ಠರ ಮರ್ಜಿ ಬಹಳ, ಅವರ ದಯೆಯಿಂದ ಕಾಯಂವಾಗದಿದ್ದರೂ ತಾತ್ಪೂರ್ತಿಕವಾಗಿಯಾದರೂ ಮೇಲಿನ ಗ್ರೇಡು ದೊರೆತ ಅನುಭವ ಬಹುಶಃ ಅನೇಕರಿಗೆ ಬರುವದು. ಬದಲಿಯಾಗುವದಿದ್ದರೆ ಸುಖಕರವಾದ ಸ್ಥಳಕ್ಕೇ ಆಗುವದು. ಸಮೀಪದ ಪ್ರವಾಸ ಹೆಚ್ಚು ಸುಖಕರ. ಯಾತ್ರಾದಿ ದೇವಧರ್ಮ ಕೃತ್ಯಗಳು ಕಡಮೆಯೇ. ಮಿತ್ರಸುಖ ಸಾಧಾರಣ, ನಿಮ್ಮ ತಂದೆತಾಯಿಗಳ ಪ್ರಕೃತಿ ಮಾತ್ರ ಕೆಡುವದು. ಆದರೆ ವಿಯೋಗದ ಅಂಜಿಕೆ ಮಾತ್ರ ಇಲ್ಲ. ಶುಭಾಶುಭ ಸ್ವಪ್ನ ಅನೇಕ ಬೀಳುವವು.

ದಾವೆ ಖಟ್ಲೆ ಮುಂತಾದವುಗಳಿಗೆ ಈ ವರ್ಷ ಅನುಕೂಲವಿಲ್ಲ. ಪ್ರತಿಪಕ್ಷಿಯೇ ಹೆಚ್ಚು ಜೋರಿನಲ್ಲಿ. ಏನೋ ಕೆಲಮಟ್ಟಿಗೆ ಯಶಸ್ಸು ದೊರೆತರೆ ಲಾಭದ ಹವ್ಯಾಸದಿಂದ ವೆಚ್ಚ ವಿಪರೀತವಾಗುವದು. ಆದರೂ ನವಂಬರ ೨೧ರ ವರೆಗೆ ಮತ್ತು ಅನಂತರ ಎಪ್ರಿಲ ೨೪ರಿಂದ ಜೂನ ೧೨ ಮತ್ತು ಸಪ್ಟಂಬರ ೧೫ರಿಂದ ಮುಂದೆ ವಿರೋಧಿಗಳ ವಿರುದ್ಧ ಸ್ವಲ್ಪಾದರೂ ಯಶಸ್ಸು ಪಡೆಯುವಿರಿ.

ಈ ವರ್ಷ ಹಡೆಯುವ ಸ್ತ್ರೀಯರು ಈ ರಾಶಿಯವರು ಯಾರಾದರೂ ಇದ್ದರೆ ಪ್ರತಿಯೊಬ್ಬರಿಗೆ ಕನ್ಯಾದ ಯೋಗ ಪ್ರಬಲವಿದೆ. ಆದರೆ ನವಂಬರ ೨೧ ರ ವರೆಗೆ ಮತ್ತು ಅನಂತರ ಮಾರ್ಚ ೭ರಿಂದ ಎಪ್ರಿಲ ೨೪, ಜುಲೈ ೩೦ರಿಂದ ಸಪ್ಟೆಂಬರ ೧೫ ರ ವರೆಗಿನ ಕಾಲದಲ್ಲಿ ಪ್ರಸೂತಿಯು ಬಹಳ ಕಷ್ಟದ್ದಾಗುವದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೭ ರ ನಂತರ ಆಗುವದಾದರೆ ಅವರು ಬಹುಶಃ ಯಶಸ್ವಿಯಾಗುವರು. ಅದರಲ್ಲಿಯೂ ಎಪ್ರಿಲ ೧೪ ರಿಂದ ಮೇ ೧೪, ಜೂನ ೧೪ರಿಂದ ಜುಲೈ ೧೬ ಮತ್ತು ಅಗಸ್ಟ ೧೬ ರಿಂದ ಸಪ್ಟೆಂಬರ ೧೬ ರ ಮಧ್ಯದ ಅವಧಿಯಲ್ಲಿ ಯಾರ ಪರೀಕ್ಷೆಯಾಗುವದೋ ಅವರಿಗೆ ವರ್ಗ ಸಹಿತ ದೊರೆಯಬಹುದು.

ವೃಷಭ

ಈ ರಾಶಿಯುವರಿಗೆ ಈ ವರ್ಷ ಒಟ್ಟಿಗೆ ಪ್ರಾಪಂಚಿಕ ಸುಖಕ್ಕೆ ಮತ್ತು ಅದರ ನಂತರ ಸ್ತ್ರೀ ಸುಖಕ್ಕೆ ಅನುಕೂಲವಿಲ್ಲದಿದ್ದರೂ ಧಂದೆ ಕೂಲಿಯುವರಿಗೆ ಅಪೇಕ್ಷೆಗಿಂತ ಹೆಚ್ಚು ಮತ್ತು ಮನಸ್ಸಿಗೆ ತಕ್ಕಂತೆ ಪ್ರಗತಿ ಮತ್ತು ಪ್ರತಿಷ್ಠೆ ಹೆಚ್ಚುವವು. ಈ ಬಗ್ಗೆ ಖಾತ್ರಿ ಹಿಡಿಯಿರಿ.

ಮಾರ್ಚ ೭ ರ ವರೆಗೆ ನಿಮ್ಮ ಆರೋಗ್ಯ ಅಷ್ಟಕ್ಕಷ್ಟೆ ಉಳಿಯುವದು. ಅನಂತರ ಮಾತ್ರನೀವು ಪೂರ್ಣ ನಿರೋಗಿಗಳಾಗುವಿರಿ. ಥಂಡಿ, ಕೆಮ್ಮು ಮೊದಲಾದ ಕಿರಕಳ ರೋಗಗಳು ಕೂಡ ನಿಮಗೆ ಬರುವದಿಲ್ಲ. ಆದರೂ ಒಂದಿಲ್ಲೊಂದು ಕಾರಣದಿಂದ ಮಾನಸಿಕ ತೊಂದರೆ ಬಹಳ. ನವಂಬರ ೧೯ರಿಂದ ಡಿಸೆಂಬರ ೧೪, ಜನೆವರಿ ೭ ರಿಂದ ಫೆಬ್ರುವರಿ ೧, ಎಪ್ರಿಲ ೧೨ ರಿಂದ ಮೇ ೮ ಸಪ್ಟಂಬರ ೮ ರಿಂದ ಅಕ್ಟೋಬರ ೪ ಈ ಅವಧಿಯಲ್ಲಿ ಈ ಬಗೆಯ ಮಾನಸಿಕ ತೊಂದರೆ ಹೆಚ್ಚಿಗೆನಿಸುವದು. ಒಟ್ಟಾರೆ ಪರಿಸ್ಥಿತಿ ಚೆನ್ನಾಗಿ ಇದ್ದವರಿಗೆ ಕೂಡ ಅದು ಹಾಗಿಲ್ಲೆಂದೆನಿಸಿ ಮನಸ್ಸು ಹತಾಶಗೊಳ್ಳುವದು. ಇದೆಲ್ಲಕ್ಕೂ ಇಡಿ ವರ್ಷ ಇರುವ ೭ ನೇ ಶನಿಯ ದೃಷ್ಟಿಫಲವೇ ಕಾರಣ ಎಂದು ತಿಳಿದುಕೊಳ್ಳಬೇಕು.

ಹೆಂಡತಿಯು ಆರೋಗ್ಯಕ್ಕೆ ಮಾತ್ರ ಈ ಸಲ ಅಷ್ಟೊಂದು ಹಿತಕರವಿಲ್ಲ ಮಾರ್ಚ ೭ರ ವರೆಗಂತೂ ಬಹಳ ತೊಂದರೆಯಾಗುವದು. ಎಪ್ರಿಲ ೨೪ ರಿಂದ ಜೂನ ೧೨ ಮತ್ತು ಸಪ್ಟಂಬರ ೧೫ರಿಂದ ಮುಂದಿನ ಕಾಲವೂ ಅಷ್ಟೊಂದು ಅನುಕೂಲವಿಲ್ಲ ಪಿತ್ತ ಮತ್ತು ಮೂತ್ರಾಶಯದ ವಿಕಾರ ವಿಶೇಷವೆನಿಸುವದು. ಅಲ್ಲದೆ ಉಭಯತರಲ್ಲಿ ಅಷ್ಟಿಷ್ಟು ಕಾರಣದ ಸಲುವಾಗಿ ಮತಭೇದವಾಗಿ ಪ್ರತಿಯೊಬ್ಬನು ಎರಡನೆಯುವರ ತಪ್ಪು ಹುಡುಕುವದರಲ್ಲಿ ಒಂದು ಬಗೆಯ ಈರ್ಷೆ ತಾಳುವನು ಅದರಂತೆ ಪ್ರಾಪಂಚಿಕ ಉಳಿದ ಸುಖವೂ ಅಷ್ಟೊಂದು ಚೆನ್ನಾಗಿ ಸಿಕ್ಕುವದಿಲ್ಲ. ಗೃಹಕಲಹ ಬಹಳ ಹೆಚ್ಚುವದು ಮತ್ತು ಎಪ್ರಿಲ ೨೪ ರಿಂದ ಜುಲೈ ೩೦ ರ ವರೆಗೆ ಇದು ಬಹಳ ಹೆಚ್ಚುವದು. ಅಣ್ಣ ತಮ್ಮಂದಿರು ಕೂಡಿ ಇದ್ದರೆ ವಿಭಕ್ತರಾಗುವಿರಿ. ಉಳಿದ ವಿಷಯುಗಳಲ್ಲಿಯೂ ದೇಹಸುಖ ಸಿಕ್ಕುವದಿಲ್ಲ. ಒಂದು ವೇಳೆ ಇನ್ನೂ ನಿಮ್ಮ ಮದುವೆಯಾಗಿರದಿದ್ದರೆ ಅದು ಕೂಡಲೇ ಒದಗಿ ಬರುವದು. ಪತಿಪತ್ನಿಯರು ಗುಣ ರೂಪಾದಿಗಳಿಂದ ಸಮಾನರಾಗಿದ್ದರೂ ದಾಂಪಂತ್ಯಜೀವನದ ಮೊದಲನೆ ಮೆಟ್ಟಲು ಹತ್ತುವಾಗ ಪರಸ್ಪರ ಸ್ವಲ್ಪ ಸಾಶಂಕವಾಗಿಯೇ ಉಳಿಯುವಿರಿ.

ನಿಮ್ಮ ಮಕ್ಕಳ ವಿವಾಹ ಈ ವರ್ಷ ಮಾಡುವದಿದ್ದರೆ ಅದನ್ನು ಮಾಡಲು ಅಲ್ಪಸ್ವಲ್ಪ ಪ್ರಯಾಸ ಪಡಬೇಕಾದರೂ ನಿಶ್ಚಯವಾಗಿ ಅದು ಸಾಧ್ಯವಾಗುವದು ಮತ್ತು ವಧೂವರರು ನಿಮಗಿಂತ ಹೆಚ್ಚು ಅನುರೂಪ ದೊರೆಯುವರು. ಅಳಿಯ ಇಲ್ಲವೆ ಸೊಸೆ ಅಪೇಕ್ಷೆಗಿಂತ ಹೆಚ್ಚು ಗುಣಸಂಪನ್ನರಾಗಿದ್ದುದು ಕಂಡು ಬರುವದು. ಈ ವರ್ಷ ಎಲ್ಲ ಹುಡುಗ ಹುಡಿಗೆಯುರಿಗೆ ಅನುಕೂಲದ್ದಿರುವದರಿಂದ ವಿದ್ಯೆಗೆನ್ನಿರಿ ಇಲ್ಲವೆ ಧಂದೆ ನೋಕರಿಯುಲ್ಲಿ ಎನ್ನಿರಿ ಯುಶಸ್ಸು ದೊರೆತು ಉತ್ಸಾಹದಿಂದ ಇರುವರು. ವಿಶೇಷವಾಗಿ ನವಂಬರ ೧೪ರಿಂದ ಡಿಸೆಂಬರ ೬ ಡಿಸೆಂಬರ ೨೫ ರಿಂದ ಜನೆವರಿ ೮, ಜೂನ ೫

ರಿಂದ ಜುಲೈ ೨೩ ಮತ್ತು ಸಪ್ಟಂಬರ ೧ ರಿಂದ ೨೦ ಈ ಕಾಲವು ಯಶಸ್ಸಿಗೆ ಅನುಕೂಲವಾಗಿರುವದು. ಧಂದೆ ಕೂಲಿಯುವರಿಗೆ ಕೂಡ ಈ ವರ್ಷ ಹೆಚ್ಚು ಅನುಕೂಲ. ಇದಕ್ಕೆ ಮುಖ್ಯ ಕಾರಣವೆಂದರೆ ಭಾಗ್ಯೇಶ ೭ ನೇ ಶನಿ ಭಾಗ್ಯ ಸ್ಥಾನವನ್ನು ನೋಡುವನು ಮತ್ತು ೫ ನೇ ಗುರು ಲಾಭಸ್ಥಾನವನ್ನು ನೋಡುವನು ಈ ಯೋಗವು ಬಹಳ ಅಪೂರ್ವ, ಇದರಿಂದ ಭಾಗ್ಯ ಮತ್ತು ಲಾಭ ವಿಪುಲವಾಗುವದು. ಸ್ವತಂತ್ರ ಧಂದೆ ಮಾಡುವವರಂತೂ ಬಹಳ ಉತ್ಕರ್ಷ ಹೊಂದುವರು. ಠೋಕ ವ್ಯಾಪಾರಸ್ಥರಿಗಿಂತ ಕಿರಕಳ ವ್ಯಾಪಾರಸ್ಥರಿಗೆ ಹೆಚ್ಚು ಯಶಸ್ಸು ಮತ್ತು ಲಾಭ. ಅದರಲ್ಲಿಯೂ ನವಂಬರ ೧೯ ರ ವರೆಗೆ ಮತ್ತು ಅನಂತರ ಫೆಬ್ರುವರಿ ೧ ರಿಂದ ಎಪ್ರೆಲ ೧೨ ಮೇ ೮ ರಿಂದ ಜುಲೈ ೨೦ ಮತ್ತು ಅಕ್ಟೋಬರ ೪ ರ ನಂತರದ ಅವಧಿಯು ಬಹಳ ಪ್ರಗತಿಕರವಾಗಿದೆ.

ನೌಕರಿಯುವರಿಗೆ ಕೂಡ ಮಾರ್ಚ ೭ ರ ನಂತರ ಹೆಚ್ಚು ಕಿರಿಕಿರಿ ಇಲ್ಲವೆ ತಕರಾರು ಮಾಡುವ ಅವಕಾಶ ಉಳಿಯುವದಿಲ್ಲ. ಮೇಲಧಿಕಾರಿಗಳ ಬದಲಿಯಾಗಿ ನಿಮಗೆ ಅನುಕೂಲ ಇರುವ ಅಧಿಕಾರಿಗಳು ಇದ್ದಲ್ಲಿಯೇ ನಿಮ್ಮ ವರ್ಗವಾಗುವದು; ಇಲ್ಲವೆ ಅಂಥವರೇ ನೀವಿದ್ದಲ್ಲಿಗೆ ವರ್ಗವಾಗಿ ಬರುವರು. ಬಡತಿಯಾಗುವದಿದ್ದರೆ ಆಗಿಯೇ ಬಿಡುವದು. ಕೆಳಗಿನವರು ಸರಳ ರೀತಿಯಿಂದ, ನಮ್ರತೆಯಿಂದ ಮತ್ತು ಆದರದಿಂದ ವರ್ತಿಸುವರು. ಕೆಲಸ ಮೈಮೇಲೆ ಬರುವಂತಹದು ಮತ್ತು ಬುದ್ಧಿ ಪರೀಕ್ಷೆಯಾಗುವಂತಹದು ಇದ್ದರೂ ಈ ವರ್ಷವೆಲ್ಲ ಬೌದ್ಧಿಕ ಗ್ರಹವಾದ ಗುರುವಿನ ಬುದ್ಧಿಸ್ಥಾನದಲ್ಲಿ ಅಂದರೆ ೫ ನೆಯದರಲ್ಲಿ ಇರುವದರಿಂದ ಎಲ್ಲದರಲ್ಲಿಯೂ ಅವನು ನಿಮ್ಮನ್ನು ಉತ್ತೀರ್ಣ ಮಾಡುವನು. ಖಾಸಗಿ ನೌಕರರಿಗೆ ಈ ವರ್ಷ ಸಂಬಳದಲ್ಲಿ ಹೆಚ್ಚಳವಾಗುವದು. ಮನೆಮಾರು ಹೊಲ ತೋಟಪಟ್ಟಿಗಳ ಸಂಗ್ರಹ ಈ ವರ್ಷ ವಿಶೇಷವಾಗದಿದ್ದರೂ ರೋಖ ಸಂಗ್ರಹವನ್ನು ಅಮೂಲ್ಯ ವಸ್ತ್ರಾಲಂಕಾರಗಳನ್ನು ಧರಿಸಲಿಕ್ಕೆ ಇದೊಳ್ಳೆ ಅನುಕೂಲ ಕಾಲ. ಮಿತ್ರರು ಪ್ರೇಮದಿಂದ ವರ್ತಿಸುವರು. ಒಬ್ಬನಂತೂ ನಿಮ್ಮ ಸುಖ ಮತ್ತು ಉತ್ಕರ್ಷಕ್ಕಾಗಿ ಒಳ್ಳೇ ಸಹಾಯ ಮಾಡುವನು. ಆದರೆ ಆಪ್ತೇಷ್ಟರು ಮಾತ್ರ ಸ್ವಲ್ಪ ಮುಗದೂರಿಯಿಂದ ವರ್ತಿಸುವರು. ಮನೆಯಲ್ಲಿ ಒಂದೆರಡು ಮಂಗಲ ಕೃತ್ಯಗಳು ಖಾತ್ರಿಯಿಂದ ಆಗುವವು. ಸಮೀಪದ ಯಾತ್ರೆಗಳನ್ನು ಮಾಡುವಿರಿ. ವಾಹನ ಸುಖ ಇಲ್ಲವೆ ಮನೆಯಲ್ಲಿಯ ದನಕರುಗಳ ಸುಖ ಸಾಕಷ್ಟು ದೊರೆಯುವದಿಲ್ಲ.

ಸರಕಾರಿ ಇಲ್ಲವೆ ಖಾಸಗಿ ವಾದ ವಿವಾದಗಳ ಕೆಲಸಗಳಲ್ಲಿ ಅರ್ಧ ಕೆಲಸ ನಿಮ್ಮಂತೆ ಅರ್ಧ ಪ್ರತಿಸ್ಪರ್ಧಿಗಳಂತೆ ಆಗುವವು. ಆದರೆ ನಿಮ್ಮ ಖಾತ್ರಿಯಿದ್ದುದು ಶತ್ರುಗಳಿಗೆ, ಅವರಿಗೆ ಖಾತ್ರಿ ಇದ್ದದ್ದು ನಿಮಗೆ ಅನುಕೂಲ ಹೀಗೆ ತಿರುವು-ಮುರುವಾಗುವದು.

ಗರ್ಭವತಿ ಸ್ತ್ರೀಯರ ಪ್ರಸೂತಿ ಬಹಳ ಸುಲಭವಾಗುವದು ಕನ್ಯಾ ಮತ್ತು ಪುತ್ರ ಪ್ರಮಾಣ ಅಷ್ಟೇ ಉಳಿಯುವದು. ಅಂದರೆ ಜನ್ಮ ಕಾಲದಲ್ಲಿ ಯಾರ ಗುರು ಸ್ತ್ರೀ ರಾಶಿಯಲ್ಲಿ ಇರುವನೋ ಅವರಿಗೆ ಬಹುಶಃ ಪುತ್ರ, ಮತ್ತು ಯಾರ ಗುರು ಪುರುಷ ರಾಶಿಯಲ್ಲಿ (ಮೇಷ, ಮಿಥುನ, ಸಿಂಹ, ತುಲಾ, ಧನು ಮತ್ತು ಕುಂಭ) ಇದ್ದರೆ ಅವರಿಗೆ ಕನ್ಯಾ ಹುಟ್ಟುವ ಸಂಭವ ಹೆಚ್ಚು. ಕೂಸು ಬಾಣಂತಿಯ ಆರೋಗ್ಯ ಮೊದಲೆರಡು ತಿಂಗಳು ಕೆಟ್ಟರೂ ಮುಂದೆ ಅದು ಬಹಳ ಚನ್ನಾಗಿ ಉಳಿಯುವದು.

ಯಾರ ಪರೀಕ್ಷೆ ಮಾರ್ಚ ೭ ರ ನಂತರ ಆಗುವದೋ ಆ ವಿದ್ಯಾರ್ಥಿ ನಿಶ್ಚಯವಾಗಿ ಪಾಸಾಗುವನು. ಮತ್ತು ಯಾರ ಪರೀಕ್ಷೆ ಮಾರ್ಚ ೧೭ ರಿಂದ ಎಪ್ರಿಲ್ ೧, ಜೂನ ೫ ರಿಂದ ಜುಲೈ ೨೩ ಮತ್ತು ಅಕ್ಟೋಬರ ೧ ರ ನಂತರ ಇರುವದೊ ಅವರಿಗೆ ವರ್ಗ ಕೂಡ ಸಿಕ್ಕ ಬಹುದು.

ಮಿಥುನ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಶಾರೀರಿಕ ಪ್ರಾಪಂಚಿಕ ಮಾನಸಿಕ ಸ್ವಾಸ್ಥ್ಯ ಮಧ್ಯಮ. ಅದರಂತೆ ಧಂದೆ ಕೂಲಿಕಾರರ ಪತ್ತು ಮತ್ತು ಅಧಿಕಾರಗಳಿಗೆ ಯಾವ ರೀತಿಯಿಂದಲೂ ಧಕ್ಕೆ ಬರುವದಿಲ್ಲ.

ಈ ರಾಶಿಯುವರು ಈ ವರ್ಷವೆಲ್ಲ ಬಹುಶಃ ನಿರೋಗಿಯಾಗಿ ಉಳಿಯುವರು. ಆದರೆ ನವಂಬರ ೧೪ ರಿಂದ ಡಿಸೆಂಬರ ೬, ಜೂನ ೫ ರಿಂದ ೨೩, ಜುಲೈ ೯ ರಿಂದ ೨೬ ಈ ಅವಧಿಯಲ್ಲಿ ಮೈ ನೋಯುವದು ಇಲ್ಲವೆ ಯಾವದೊಂದು ಚರ್ಮ ರೋಗದಿಂದ ಅದು ಕೆಡುವ ಸಂಭವವಿದೆ. ಅದರಂತೆ ವರ್ಷವಿಡೀ ಇರುವ ೪ ನೇ ಗುರು ಆಪ್ತರೊಡನೆ ವಿರೋಧ ಹುಟ್ಟಿಸಿ ಮಾನಸಿಕ ತ್ರಾಸ ಕೊಡುವನು.

ಸ್ತ್ರೀ ಸಹವಾಸಸುಖಕ್ಕೆ ಈ ವರ್ಷ ಅನುಕೂಲವಾಗಿದ್ದರೂ ಪರಸ್ಪರರಲ್ಲಿ ಹೆಚ್ಚು ಪ್ರೀತಿ ಉಳಿಯುವ ಖಾತ್ರಿಯಿರುವದಿಲ್ಲ. ಬಹುತರ ವಿಷಯಗಳಲ್ಲಿ ಮತಭೇದವಾಗುತ್ತ ನಡೆಯುವದು, ವಿತಂಡವಾದವೂ ಹೆಚ್ಚಿಗೆ ನಡೆಯುವದು. ಇನ್ನೂ ನಿಮ್ಮ ಲಗ್ನವಾಗುವದಿದ್ದರೆ ಅದು ಅಲ್ಪಾಯಾಸದಿಂದ ಒದಗಿ ಬರುವದು. ಪತಿ-ಪತ್ನಿಯರು ಅನುರೂಪ ಇರುವರು. ಆದರೆ ಲಗ್ನದಲ್ಲಿ ಕೊಡ-ತಕ್ಕೊಳ್ಳುವದರ ವಿಷಯದಲ್ಲಿ ಮತಭೇದವಾಗಿ ಅದು ಬಹಳ ದಿನ ಹಾಗೆಯೇ ಉಳಿಯುವದು. ತಪ್ಪು ತಿಳಿವಳಿಕೆಯೂ ಅದರಿಂದಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಲವೊಮ್ಮೆ ಅತಿ ಉತ್ತಮವಿದ್ದರೆ ಕೆಲ ಸಲ ಬಹಳ ತ್ರಾಸದಾಯಕವಾಗುವದು. ಇದರ ಅನುಭವ ಕ್ಷಣ ಕ್ಷಣಕ್ಕೆ ಬರುವದು. ಹೆಂಡತಿಯ ಆರೋಗ್ಯ ಜೂನ ೧೨ ರಿಂದ ಜುಲೈ ೩೦ ರ ಅವಧಿಯಲ್ಲಿ, ಅಲ್ಪ ಸ್ವಲ್ಪ ಕೆಟ್ಟರೂ ಉಳಿದ ಸಮಯದಲ್ಲಿ ಅದು ಉತ್ತಮ ಉಳಿಯುವದು. ಆದರೆ ಮಾರ್ಚ ೭ ರಿಂದ ಮಕ್ಕಳುಮರಿ

ಗಳ ಆರೋಗ್ಯ ಚೆನ್ನಾಗಿ ಉಳಿಯುವದಿಲ್ಲ. ಇಂದು ಒಂದು ರೋಗವಿದ್ದರೆ ನಾಳೆ ಮತ್ತೊಂದು ರೋಗ ಹೀಗೆ ತೊಂದರೆಯಾಗುವದು. ಯಾರೊಬ್ಬರಿಗೆ ಅಪಘಾತದ, ಪಿಶಾಚ ಬಾಧೆಯ ಮತ್ತು ಮಾಟ-ಮದ್ದಿನ ಬಾಹ್ಯ ಉಪಸರ್ಗಗಳ ತೊಂದರೆಯು ಆಗುವ ಸಂಭವವಿದೆ. ಮನೆಯಲ್ಲಿಯ ಉಪಯುಕ್ತ ದನಗಳ ಸುಖ ವ್ಯವಸ್ಥಿತ ದೊರೆಯುವದು. ಮನೆಯಲ್ಲಿಯ ನೌಕರಚಾಕರರು ಪ್ರಾಮಾಣಿಕರಾಗಿ ಉಳಿಯುವರು. ನೆರೆಮನೆಯವರು ಕೂಡ ಮನೆಯವರಂತೆ ವರ್ತಿಸುವರು. ಸ್ಥಾವರ ಉತ್ಪನ್ನವಿದ್ದರೆ ಅದು ಅಪೇಕ್ಷೆಯಷ್ಟು ದೊರೆಯುವದು ಸಣ್ಣ ದೊಡ್ಡ ಭೂಮಿಯನ್ನು ಕೊಳ್ಳುವಿರಿ. ಆದರೆ ಆಪ್ತರಲ್ಲಿಯ ಒಬ್ಬ ಹೆಣ್ಣು ಮಗಳು ನಿಮಗೆ ಬಹಳ ತೊಂದರೆ ಕೊಡುವಳು.

ಈ ವರ್ಷ ನಿಮ್ಮ ಮಕ್ಕಳ ಮದುವೆಯನ್ನು ಮಾಡುವದಿದ್ದರೆ ಅದು ಕೂಡಿಬರಬೇಕಾದರೆ ಮತ್ತು ಲಗ್ನ ಸಮಾರಂಭ ಸಾಂಗವಾಗಬೇಕಾದರೆ ಹದಿನೆಂಟು ಅಡಚಣಿಗಳು ಬರುವವು. ಲಗ್ನ ಪತ್ರಿಕೆ ಸಿದ್ಧವಾಗಿಯೂ ಅನೇಕ ಕ್ಷುಲ್ಲಕ ಕಾರಣಗಳಿಗಾಗಿ ಅದು ಮುರಿಯುವದು ಅನುಭವಕ್ಕೆ ಬರಬಹುದು. ಪ್ರತ್ಯಕ್ಷ ಕೆಲಸದಲ್ಲಿಯೂ ಒಂದೆರಡು ಸಲವಾದರೂ ಬಡೆದಾಟವಾಗಬಹುದು, ಕನಿಷ್ಠ ಒಂದು ಪಕ್ಷವು ಮತ್ತೊಂದರ ಮೇಲೆ ಸಿಟ್ಟಿಗಂತೂ ಎದ್ದೇ ತೀರುವದು. ಆದರೆ ಗೊತ್ತಾದಂತೆ ಲಗ್ನವಾಗಿ ಹೋಗುವದು. ಅಳಿಯ ಇಲ್ಲವೆ ಸೊಸೆ ಮನಸ್ಸಿಗೆ ಬರುವಂಥವರು ಸಿಕ್ಕುವದರಿಂದ ಅನುಭವಿಸಿದ ತೊಂದರೆಯನ್ನೆಲ್ಲ ಮರೆತುಬಿಡುವಿರಿ. ಮಕ್ಕಳ ಉನ್ನತಿಗೆ ಈ ವರ್ಷ ಅಹಿತಕಾರಕವಿಲ್ಲದಿದ್ದರೂ ಅಷ್ಟೊಂದು ಹಿತದಾಯಕವೂ ಇರುವದಿಲ್ಲ. ಆಯತ್ತ ಸಮಯಕ್ಕೆ ಅಪೇಕ್ಷಾಭಂಗವಾಗುವ ಸಂಭವವಿದೆ. ಮಗಳು ಅಥವಾ ಮಗನೊಬ್ಬ ದೂರ ಪ್ರಾಂತಕ್ಕೆ ಹೋಗುವದರಿಂದ ವಿರಹವ್ಯಥೆಯನ್ನು ಅನುಭವಿಸಬೇಕಾಗಿ ಬರುವದು.

ಧಂದೆ ಕೂಲಿಯವರಿಗೆ ಈ ವರ್ಷ ಅಷ್ಟೊಂದು, ಉತ್ತಮವಿಲ್ಲದಿದ್ದರೂ ಪ್ರತಿಕೂಲವಂತೂ ನಿಶ್ಚಯವಾಗಿ ಇಲ್ಲ. ವ್ಯವಹಾರಸ್ಥರು ಒಮ್ಮೆಲೆ ಸಟ್ಟಾ ಬಾಜಿಯ ವ್ಯವಹಾರವನ್ನು ಮಾಡದೆ ಸರಳರೀತಿಯಿಂದ ಪೇಟೆಯ ಪರಿಸ್ಥಿತಿಯನ್ನೆಲ್ಲ ತಿಳಿದುಕೊಂಡು ವ್ಯಾಪಾರ ಮಾಡಬೇಕು. ಎಷ್ಟು ಒಗ್ಗುವದೊ ಅಷ್ಟೇ ವ್ಯವಹಾರ ಮಾಡಬೇಕು. ಆದರಿಂದ ಯಶಸ್ಸು ಮತ್ತು ಲಾಭ ನಿಶ್ಚಿತವಾಗಿ ಸಿಕ್ಕುವದು. ವಿಶೇಷವಾಗಿ ನವಂಬರ ೨೧ ರಿಂದ ಮಾರ್ಚ ೭, ಎಪ್ರಿಲ ೨೩ ರಿಂದ ಜೂನ ೧೨ ಮತ್ತು ಜುಲೈ ೩೦ ರಿಂದ ಸಪ್ಟಂಬರ ೧೫ ರ ಅವಧಿಯು ಹೆಚ್ಚು ಅನುಕೂಲ. ಮತ್ತು ಸ್ಥೂಲಮಾನದಿಂದ ನೋಡಿದರೆ ಮಾರ್ಚ ೭ ರಿಂದ ಬರುವ ೧೧ನೇ ಕೇತುವಿನಿಂದ ಲಾಭವೆಷ್ಟೇ ಆದರೂ ಹಾನಿಯಂತೂ ಆಗುವದೇ ಇಲ್ಲ. ಠೋಕ ವ್ಯಾಪಾರಿಗಳಿಗಿಂತ ಕಿರಕಳ ವ್ಯಾಪಾರಸ್ಥರಿಗೇ ಹೆಚ್ಚು ಸುಖ ಸಮಾಧಾನಕರವಾಗಿದೆ.

ನೌಕರರಿಗೆ ದ್ರವ್ಯಲಾಭ ಸಾಕಷ್ಟಾಗುವದು, ವರಿಷ್ಠರಿಂದ ಬಹಳ ತ್ರಾಸ ಅನುಭವಿಸಬೇಕಾಗುವದು, ಕಟುಶಬ್ದಗಳನ್ನು ಅನಿಸಿಕೊಳ್ಳಬೇಕಾಗುವದು ಮತ್ತು ನಿಮಗೆ ಅಸಾಧ್ಯವಾದ ಕೆಲಸಗಳನ್ನು ಅವರು ಕೊಡುವರು. ಸಹಸಾ ನಿಮಗೆ ಬದಲಿಯಾಗುವದಿಲ್ಲ. ಒಂದು ವೇಳೆ ಪ್ರಯತ್ನಮಾಡಿ ಬದಲಿ ಮಾಡಿಸಿಕೊಂಡರೆ ಅತಿ ಗೈರಸೋಯಿ ಸ್ಥಳಕ್ಕೆ ವರ್ಗವಾಗುವದು. ಅದಕ್ಕಾಗಿ ಪಶ್ಚಾತ್ತಾಪ ಕೂಡ ಪಡಬೇಕಾಗುವದು. ಮೇಲಿನ ಗ್ರೇಡ ಸಿಕ್ಕುವ ಯೋಗವು ನೂರಕ್ಕೆ ೭೫ ರಷ್ಟು ಜನರಿಗಿರುವದು. ಜನರಲ್ಲಿ ಆದರ ಪತ್ತು ಪ್ರತಿಷ್ಠೆ ಹೆಚ್ಚುವವು. ಅದರಲ್ಲಿಯೂ ನವಂಬರ ೨೧ ರಿಂದ ಜನೇವರಿ ೧೭, ಎಪ್ರಿಲ ೨೩ ರಿಂದ ಜುಲೈ ೩೦ ಮತ್ತು ಸಪ್ಟಂಬರ ೧೫ ರಿಂದ ಮುಂದೆ ಬಹಳ ಸಮಾಧಾನದಿಂದ ಇರುವಿರಿ. ಸ್ವಜಾತಿಯವರಿಗಿಂತ ಪರಜಾತಿಯವರಿಂದ ಹೆಚ್ಚಿಗೆ ಸುಖ ಸಿಕ್ಕುವದು. ದೂರದ ಪ್ರವಾಸ ಬಹಳ ತೊಂದರೆಯಿಂದ ಆಗುವದು. ಆದರೆ ಸಮೀಪದ ಪ್ರವಾಸ ಸುಖಕರವಾಗುವದು. ಧರ್ಮ ಕೃತ್ಯಗಳು ಬಹಳವಾಗುವವು. ಆದರೆ ಅದರಿಂದ ಅಪೇಕ್ಷಿಸಿದಷ್ಟು ಸಮಾಧಾನ ಮಾತ್ರ ಆಗುವದಿಲ್ಲ. ಆದರೆ ಕೆಲ ಮಹತ್ವದ ಲೇಖನಕೆಲಸಗಳು ಮಾತ್ರ ಮನಸ್ಸಿನಂತೆ ಸಂಭವಿಸುವವು.

ದಾವೆ ಖಟ್ಲೆ ಖಾಸಗಿ ಸ್ಪರ್ಧೆಗಳಲ್ಲಿ ಮಾತ್ರ, ಈ ವರ್ಷ ಬಹಳ ಯಶಸ್ಸು ದೊರೆಯುವದು. ಪ್ರತಿಪಕ್ಷಿಗಳ ಮೋರೆ ಇಳಿದುಹೋಗುವದು. ಮಾರ್ಚ ೭ ವರೆಗೆ ಒಬ್ಬ ದೊಡ್ಡ ಶತ್ರುವಿನ ಪೂರ್ಣ ಫಜೀತಿಯಾಗುವದು. ಖಾಸಗಿ ಶತ್ರುಗಳಲ್ಲಿ ಅನೇಕರು ಸವಿಮಾತುಗಳನ್ನಾಡಿ ಮತ್ತೆ ನಿಮ್ಮನ್ನು ಬಂದು ಕೂಡುವ ಯೋಗವಿದೆ. ಗರ್ಭಿಣಿ ಸ್ತ್ರೀಯರಿಗೆ ಬಯಕೆಯಿಂದ ಬಹಳ ತೊಂದರೆ. ಆದರೆ ಹಡೆಯುವಾಗ ಅಷ್ಟೊಂದು ತೊಂದರೆಯಾಗುವದಿಲ್ಲ. ಆದರೆ ಮಾರ್ಚ ೭ ರ ನಂತರ ಆಗುವ ಮಕ್ಕಳು ಸ್ವಲ್ಪ ಅಶಕ್ತರಾಗುವರು. ಒಂದುವೇಳೆ ಸಶಕ್ತರಿದ್ದರೂ ೧॥ ವರ್ಷ ವಯಸ್ಸಿನವರೆಗೂ ಅವರ ಜೀವಿತದ ಬಗ್ಗೆ ಸಾಶಂಕರಾಗಿ ಉಳಿಯಬೇಕಾಗುವದು. ಕನ್ಯೆಗಳಿಗಿಂತ ಗಂಡುಹುಡುಗರಿಗೆ ಇದರ ಅಂಜಿಕೆ ಹೆಚ್ಚು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೭ ಕ್ಕಿಂತ ಮೊದಲಾಗುವದೋ ಅವರು ಪಾಸಾಗುವದು ನಿಶ್ಚಿತ. ಆದರೆ ಅನಂತರ ಮಾರ್ಚ ೨೦ ರ ವರೆಗೆ ಎಪ್ರಿಲ ೧೨ ರಿಂದ ಮೇ ೮ ರ ವರೆಗೆ ಅನಂತರ ಮೇ ೩೧ ರಿಂದ ಅಗಸ್ಟ ೧೮ ರ ವರೆಗೆ ಮತ್ತು ಸಪ್ಟಂಬರ ೮ ರಿಂದ ಅಕ್ಟೋಬರ ೮ ರೊಳಗಾಗಿ ಪರೀಕ್ಷೆಯಾದರೆ ಪಾಸಾಗುವಷ್ಟಾದರೂ ಗುಣಗಳು ಬಿದ್ದು ಯಶಸ್ವಿಯಾಗುವರು.

ಕರ್ಕ

ಒಟ್ಟಿಗೆ ಈ ರಾಶಿಯವರಿಗೆ ಸ್ವಂತದ ಮತ್ತು ಮಕ್ಕಳ ಆರೋಗ್ಯವೊಂದನ್ನು ಬಿಟ್ಟರೆ ಉಳಿದೆಲ್ಲ ರೀತಿಯಿಂದ ಈ ವರ್ಷ ಬಹಳ ಯಶಸ್ಸಿನದಾಗಿದೆ.

ಈ ರಾಶಿಯವರ ಪ್ರಕೃತಿ ಮೊದಲೇ ಅಷ್ಟಕಷ್ಟೆ ಅದರಲ್ಲಿ ಮಾರ್ಚ ೭ ರಿಂದ ಬಹಳ ತೊಂದರೆಯಾಗುವದು. ಎದೆನೋವು, ಹೊಟ್ಟೆನೋವು, ಮಾನಸಿಕ ಕ್ಷೋಭ, ಮೇಲಿಂದ ಮೇಲೆ ದುಃಸ್ವಪ್ನ ಬೀಳುವದು ಮೊದಲಾದವುಗಳಿಂದ ಮನಸ್ಸಿನಲ್ಲಿ ಹುರುಹುರು ಎನಿಸುವದು. ಅದರಿಂದ ಪ್ರಕೃತಿ ಮತ್ತಷ್ಟು ಕೆಡುವದು ವಿಶೇಷವಾಗಿ ನವ್ಹಂಬರ ೨೧ ರ ವರೆಗೆ ಮತ್ತು ಅನಂತರ ಎಪ್ರಿಲ ೨೩ ರಿಂದ ಜೂನ ೧೨ರ ವರೆಗೆ ಅದು ಹೆಚ್ಚು ಕೆಡುವ ಸಂಭವವಿದೆ ಅದರಂತೆ ತಾಯಿ ಇದ್ದರೆ ಅವಳಿಗೂ ಈ ವರ್ಷ ಕ್ಲೇಶವಾಗುವದು ಕದಾಚಿತ್ ಅರಿಷ್ಟ ಸಂಭವಿಸಲೂ ಬಹುದು.

ಸ್ತ್ರೀ ಸುಖ ಚೆನ್ನಾಗಿ ದೊರೆಯುವದು. ಮಾರ್ಚ ೭ರಿಂದ ಅವಳ ಪ್ರಕೃತಿ ಚೆನ್ನಾಗಿ ಉಳಿಯುವದು. ಮಾರ್ಚ ೭ರಿಂದ ಎಪ್ರಿಲ ೨೩ರ ವರೆಗೆ ಉಭಯತರಲ್ಲಿ ಸ್ವಲ್ಪವಿಷಮ ವಾತಾವರಣ ವುಂಟಾಗುವ ಯೋಗವಿದ್ದರೂ ಉಳಿದೆಲ್ಲ ಸಮಯದಲ್ಲಿ ಒಳ್ಳೆ ಕೂಡಿ ನಡೆಯುವದು. ಇನ್ನು ನಿಮ್ಮ ಮದುವೆಯಾಗಿರದಿದ್ದರೆ, ಈ ವರ್ಷಮಾಡಿ

ಕೊಳ್ಳುವದಿದ್ದರೆ ಸಹಜವಾಗಿ ಕೂಡಿಬಂದು ಒಳ್ಳೆ ಉತ್ಸಾಹದಿಂದ ಸಾಂಗವಾಗುವದು. ಪತ್ನಿ ಇಲ್ಲವೆ ಪತಿ ರೂಪದಿಂದ ಮಧ್ಯಮ ಇರುವರು. ಆದರೆ ಗುಣಗಳಿಂದ ಮಾತ್ರ ಬಹಳ ಶ್ರೇಷ್ಠ ಇರುವರು. ಉಳಿದ ವಿಷಯುಗಳಲ್ಲಿಯೂ ದೇಹಸುಖ ಅನುಕೂಲ. ಮನೆಯುಲ್ಲಿಯು ಎಲ್ಲ ಜನ ಒಮ್ಮನಸ್ಸಿನಿಂದ ವರ್ತಿಸುವರು. ವಾಹನ ಸುಖ ಸಿಕ್ಕುವ ಯೋಗ ಕಡಿಮೆ ಇದ್ದರೂ ಮನೆಯುಲ್ಲಿಯು ನೌಕರರಿಂದ ಮುತ್ತು ದನಕರುಗಳಿಂದ ಒಳ್ಳೇ ಸೌಖ್ಯ ಸಿಕ್ಕುವದು. ಹೊಸದಾಗಿ ಸ್ಥಾವರಸಂಗ್ರಹಯೋಗ ಕಡಿಮೆ ಇದ್ದರೂ ಇದ್ದವುಗಳು ಮಾತ್ರ ಸ್ವಲ್ಪೂ ಕಡಮೆಯಾಗುವದಿಲ್ಲ. ಸಮೀಪದ ಇಲ್ಲವೆ ದೂರದ ಆಪ್ತರು ಬಹಳ ಸ್ನೇಹದಿಂದ ವರ್ತಿಸುವರು ಆದರೆ ಮಾರ್ಚ ೭ ರಿಂದ ನೆರೆಯುವರು ನಿಷ್ಕಾರಣವಾಗಿ ಕೆಟ್ಟ ರೀತಿಯಿಂದ ನಡೆಯುವರು ಕ್ಷುಲ್ಲಕ ಕಾರಣಗಳಿಗಾಗಿ ಬಡೆದಾಟ ತೆಗೆಯುವ ಅಂಜಿಕೆ ಇದೆ. ಮಕ್ಕಳ ಆರೋಗ್ಯಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ. ಆದರೆ ಬಹಳ ನೋವಾಗಲಿ ಜೀವಕ್ಕೆ ಅಪಾಯುವಾಗಲಿ ಇರುವದಿಲ್ಲ ಅದರಲ್ಲಿಯೂ ಆರೋಗ್ಯವನ್ನು ಎಪ್ರಿಲ ೨೩ ರಿಂದ ಜೂನ ೧೨ ವರೆಗೆ ಹೆಚ್ಚು ಜಪ್ಪಿಸಬೇಕು.

ಆದರಂತೆ ಮಕ್ಕಳ ವಿವಾಹ ಈ ವರ್ಷ ಮಾಡುವದಿದ್ದರೆ ಅದು ಕೂಡಿ ಬರಬೇಕಾದರೆ ಮೊದಲು ಬಹಳ ಅಡಚಣೆಗಳು ಬರುವವು ಆದರೆ ಕೊನೆಗೆ ಒಳ್ಳೆ ಸ್ಥಳ ದೊರೆಯುವದು. ಒಮ್ಮೆ ನಿಶ್ಚಯುವಾದರೆ ಮುಂದೆ ಯಾವ ಅಡಚಣೆಗಳು ಬರದೆ ವ್ಯವಸ್ಥಿತವಾಗಿ ಎಲ್ಲವೂ ಸಾಂಗವಾಗುವದು ವಧೂವರರು ಶರೀರ ಸೌಷ್ಠವದಿಂದ ಸ್ವಲ್ಪ ಇಜ್ಜೋಡೆನಿಸಿದರೂ ಗುಣದಿಂದ ಇದೆಲ್ಲ ತುಂಬಿ ಹೋಗುವದು ಮಕ್ಕಳ ಉನ್ನತಿಗೂ ಈ ವರ್ಷ ಬಹಳ ಉತ್ತಮವಿದೆ.

ಧಂದೆ ಕೂಲಿಯುವರಿಗೂ ಈ ವರ್ಷ ಬಹಳ ಅನುಕೂಲವಿದೆ. ಎಂಥ ಸಣ್ಣ ದೊಡ್ಡ ಧಂದೆಯಿದ್ದರೂ ಅಂದಾಜು ಮಾಡಿದಷ್ಟು ಲಾಭ ಅದರಲ್ಲಿ ಆಗುವದು. ಆದರೆ ಕೆಲ ಜನರ ಧಂದೆ ಇಲ್ಲವೆ ಊರು ಬದಲಾಗುವ ಸಂಭವವಿದೆ. ಕೆಲ ಜನರಿಗೆ ಮೊದಲಿನ ಆಶ್ರಯದಾತರು ಕೈ ಬಿಡುವದರಿಂದ ಮನಸ್ಸಿನಲ್ಲಿ ಚೈನಿ ಉಳಿಯುವದಿಲ್ಲ. ಆದರೆ ಕೂಡಲೆ ಹೊಸ ಆಶ್ರಯದಾತರು ದೊರೆಯುವರು. ಅವರು ಮೊದಲಿನವರಿಗಿಂತ ಹೆಚ್ಚು ಸರಳರೂ ಸುಸ್ವಭಾವದವರಿರುವರು. ವಿಶೇಷವಾಗಿ ಜನೆವರಿ ೭ರ ವರೆಗೆ ಮುತ್ತು ಅನಂತರ ಫೆಬ್ರುವರಿ ೧ ರಿಂದ ೨೪, ನಂತರ ಮಾರ್ಚ ೨೦ ರಿಂದ ಮೇ ೩೧, ಅನಂತರ ಜೂನ ೨೫ ರಿಂದ ಅಗಸ್ಟ ೧೪, ಅನಂತರ ಅಕ್ಟೋಬರ ೪ ರಿಂದ ಮುಂದಿನ ಕಾಲವೆಲ್ಲ ಲಾಭಕ್ಕೆ ಮುತ್ತು ಮಹತ್ವದ ಚಟುವಟಿಕೆಗಳಿಗೆ ಬಹಳ ಅನುಕೂಲವಾಗಿರುವದು.

ನೋಕರಿಯುವರಿಗೆ ಮೇಲಿನ ಗ್ರೇಡು ಸಿಕ್ಕುವದು ನಿಶ್ಚಿತ. ಆದರೆ ಬದಲಿ ಮಾತ್ರ ಅನನುಕೂಲ ಮುತ್ತು ಕಠಿಣ ಕೆಲಸಗಳಿರುವ ಸ್ಥಾನಕ್ಕೆ ಆಗುವ ಸಂಭವವಿದೆ. ಆದರೂ ವರಿಷ್ಠರ ಮರ್ಜಿ ಉಳಿಯುವದು ಮುತ್ತು ಕೈಕೆಳಗಿನವರು ವ್ಯವಸ್ಥಿತ ರೀತಿಯಿಂದ ವರ್ತಿಸುವರು. ಲೋಕಮತವೂ ಅನುಕೂಲವಿರುವದು. ಮೇಲಿನ ಗ್ರೇಡು ಬಹುಶಃ ಜನೇವರಿ ೧೭ ರಿಂದ ಮಾರ್ಚ ೭ರವರೆಗೆ ಇಲ್ಲವೆ ಜುಲೈ ೩೦ ರಿಂದ ಸಪ್ಟಂಬರ ೧೫ರ ವರೆಗೆ ನಿಶ್ಚಯುವಾಗಿ ದೊರೆಯುವದು. ಮಿತ್ರಸುಖ ಉತ್ತಮ ದೊರೆಯುವದು. ಸ್ವತಃ ನಿಮ್ಮ ಮನೆಯುಲ್ಲಿ ಇಲ್ಲವೆ ಆಪ್ತರ ಮನೆಯುಲ್ಲಿ ಮಂಗಲ ಮುತ್ತು ಧಾರ್ಮಿಕ ಕಾರ್ಯಗಳು ನಿಮ್ಮ ಮನಸ್ಸಿನಂತೆ ನಡೆಯುವವು. ಆ ಕಾಲಕ್ಕೆ ನೀವು ಸ್ವತಃ ಅಲ್ಲಿಗೆ ಹೋಗುವಿರಿ. ದೂರದ ಪ್ರವಾಸವೊದಗಿಬಂದು ಅದರ ಉದ್ದೇಶ ಸಫಲವಾಗುವದು. ದಾವೆ ಖಟ್ಲೆ ಇದ್ದರೆ ಅದರಲ್ಲಿ ವೆಚ್ಚ ಮುತ್ತು ತೊಂದರೆ ಬಹಳಾದರೂ ಅರ್ಥಕ್ಕಿಂತ ಹೆಚ್ಚು ನಿಮ್ಮಂತೆಯೆ ಆಗುವವು. ಆದರೂ ಕೆಲವು ರಾಜಿಯಾಗುವವು.

ಗರ್ಭಿಣಿ ಸ್ತ್ರೀಯುರಿಗೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ. ಪ್ರಸೂತಿಯು ದಿನ ಹಿಂದೆ ಮುಂದೆ ಆಗುವವು. ಬಾಳಂತಿಯುರ ಜೀವಿತಕ್ಕೆ ಭೀತಿಯಿಲ್ಲದಿದ್ದರೂ ಉಭಯುತರ ಪ್ರಕೃತಿ ಬಹಳ ದಿನ ರೋಗಗ್ರಸ್ತವೇ ಉಳಿಯುವದು. ಬಹುತರ ಜನರಿಗೆ ಹೆಣ್ಣು ಹುಟ್ಟುವವು. ಒಂದುವೇಳೆ ಗಂಡು ಹುಟ್ಟಿದರೆ ಮೇಲಿಂದ ಮೇಲೆ ಅವಕ್ಕೆ ಕ್ಲೇಶವಾಗಿ ಬಹಳ ತೊಂದರೆಯಾಗುವದು.

ನವಂಬರ ೨೧ ರಿಂದ ಎಪ್ರಿಲ ೨೩ ಮುತ್ತು ಜುಲೈ ೩೦ ರಿಂದ ಮುಂದೆ ಪರೀಕ್ಷೆಯಾಗುವ ವಿದ್ಯಾರ್ಥಿಗಳು ಖಾತ್ರಿಯಿಂದ ಪಾಸಾಗುವರು. ಅದರಲ್ಲಿಯೂ ಮಾರ್ಚ ೭ ರಿಂದ ಎಪ್ರಿಲ ೨೩ ಮುತ್ತು ಜುಲೈ ೩೦ರಿಂದ ಸಪ್ಟಂಬರ ವರೆಗೆ ಪರೀಕ್ಷೆಯಾದರೆ ಬಹುಶಃ ಮೇಲಿನ ವರ್ಗವೂ ಸಿಕ್ಕಬಹುದು.

ಸಿಂಹ

ಒಟ್ಟಿಗೆ ಈ ರಾಶಿಯುವರಿಗೆ ಮೊದಲಿನ ಆರು ತಿಂಗಳು ಅನುಕೂಲವಿಲ್ಲದಿದ್ದರೂ ದ್ವಿತೀಯು ಷಾಣ್ಮಾಸಿಕದಲ್ಲಿ ಬಹಳ ಉತ್ಕರ್ಷವಾಗುವದು.

ಈ ರಾಶಿಯು ಜನರು ಮಾರ್ಚ ೭ ರಿಂದ ಸ್ವಲ್ಪ ಜಪ್ಪಿಸಿಕೊಂಡು ಇರಬೇಕು. ಅದರಲ್ಲಿಯೂ ಜನೆವರಿ ೧೭ ರಿಂದ ಮೇಲಿನ ತಾರೀಖಿನವರೆಗೆ ಉಷ್ಣ ಪದಾರ್ಥ ತಿನ್ನುವದು, ಜಾಗರಣೆ ಮಾಡುವದು, ಬಿಸಿಲಿನಲ್ಲಿ ಹೆಚ್ಚು ಕೆಲಸ ಮಾಡುವದು, ಮೊದಲಾದ್ದರ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಳ್ಳಬೇಕು. ಉಳಿದ ದಿನಗಳಲ್ಲಿ ಹೆಚ್ಚು ಅನುಕೂಲ. ಜೀವಕ್ಕೆ ಗಂಡಾಂತರ ಭಯು ಸ್ವಲ್ಪೂ ಇಲ್ಲ.

ಅದರಂತೆ ಹೆಂಡತಿಯು ಆರೋಗ್ಯ ನವಂಬರ ೨೧ ರ ವರೆಗೆ ಮುತ್ತು ಮಾರ್ಚ ೭ ರಿಂದ ಎಪ್ರಿಲ ೨೩ ಮುತ್ತು ಜುಲೈ ೩೦ ರಿಂದ ಸಪ್ಟಂಬರ ೧೫ ರ ವರೆಗಿನ ಕಾಲ ಅಷ್ಟೊಂದು ಅನುಕೂಲವಿಲ್ಲ. ಮಾರ್ಚ ೭ ರಿಂದ ಎಪ್ರಿಲ ೨೩ ರ ವರೆಗೆ ಅಗ್ನಿ, ಸ್ಟೋ, ವಿದ್ಯುತ್ತು, ಸ್ಫೋಟಕದ್ರವ್ಯ ಮೊದಲಾದವುಗಳ ಬಗ್ಗೆ ಹೆಚ್ಚು ಜಾಗ್ರತೆಯಿಂದ ಇರಬೇಕು. ಏಕೆಂದರೆ ಆ ಕಾಲದಲ್ಲಿ ಇವುಗಳಿಂದ ಅಪಘಾತವಾಗುವ ಗ್ರಹಮಾನ ಇರುವದು. ಆದರೆ ಹೆಂಡತಿಯು ಸಹವಾಸ ಸುಖ ಒಳ್ಳೆ ಅನುಕೂಲ ಮುತ್ತು ಇಡಿ ವರ್ಷ ದೊರೆಯುವದು. ಮಾರ್ಚ ೭ ರಿಂದ ಮುಂದೆಯುಂತೂ ಪರಸ್ಪರರಲ್ಲಿ ಹೆಚ್ಚು ಪ್ರೇಮವುಂಟಾಗುವದು. ಇನ್ನೂ ನಿಮ್ಮ ಮದುವೆಯಾಗಿರದಿದ್ದರೆ, ಈ ವರ್ಷ ಮಾಡುವ ವಿಚಾರವಿದ್ದರೆ ನಿಶ್ಚಯುವಾಗಿ ಒದಗಿ ಬರುವದು. ಆದರೆ ವಧೂ-ವರ ಪರೀಕ್ಷೆ ಮೊದಲು ಹತ್ತೆಂಟು ಕಡೆ ಆಗುವದು ಕೊನೆಗೆ ಮನಸ್ಸಿಗೆ ಬರುವಂತಹ ಸ್ಥಳವೇ ಗೊತ್ತಾಗುವದು ಮುತ್ತು ಒಂದು ತಿಂಗಳೊಳಗಾಗಿಯೇ ಲಗ್ನವಾಗಿ ಹೋಗುವದು. ವಧು-ವರರು ಪರಸ್ಪರ ಅನುರೂಪ ದೊರೆಯುವರು. ಮುಂದೆ ಸ್ವಭಾವ ಪರಿಚಯು ಹೆಚ್ಚಿಗೆ ಆಗುತ್ತ ನಡೆದಂತೆ ಹೆಚ್ಚು ಸಾಮ್ಯವಿದ್ದದ್ದು ಕಂಡು ಬರುವದು. ಅನೇಕರ ವಿವಾಹ ಎಪ್ರಿಲ್ ೨೩ ರ ನಂತರವೇ ಆಗುವದು. ಉಳಿದ ವಿಷಯುಗಳಲ್ಲಿ ಹಿಂದಿನ ವರ್ಷಕ್ಕಿಂತ ಈ ವರ್ಷ ಹೆಚ್ಚು ಅನುಕೂಲ. ನೆರೆಹೊರೆಯುವರು ಮುತ್ತು ಆಪ್ತರು ಮಾತ್ರ ಬಹಳ ಕಪಟದಿಂದ ವರ್ತಿಸುವರು. ಮಾರ್ಚ ೭ರ ವರೆಗೆ ಮನೆಯುಲ್ಲಿಯು ನೌಕರಚಾಕರರು ಸಹ ತಮ್ಮ ತಮ್ಮ ಕೆಲಸಗಳನ್ನು ವ್ಯವಸ್ಥಿತ ರೀತಿಯಿಂದ ಮಾಡುವದಿಲ್ಲ ಮುತ್ತು ಸಕಾಲದಲ್ಲಿಯೂ ಮಾಡುವದಿಲ್ಲ. ಈ ಅವಧಿಯುಲ್ಲಿ ಯಾರ ಮನೆಗಳಲ್ಲಿ

ದನಕರುಗಳು, ವಾಹನಗಳು ಇವೆಯೋ ಅವರಲ್ಲಿ ಅವುಗಳಿಗೆ ರೋಗರುಜಿ ಮತ್ತು ಮುರಿಯುವ ಅಂಜಿಕೆ ಇದೆ. ಆದರೆ ಮುಂದೆ ಮಾತ್ರ ಎಲ್ಲವೂ ಸುರಕ್ಷಿತ ನಡೆಯುವದು. ಜಮೀನದಾರರ ಕಿಸೆಯಲ್ಲಿ ಗೊತ್ತುಮಾಡಿದಷ್ಟು ಹಣ ಬೀಳುವದು. ಆದರೆ ಬೆಳೆ ಮಾತ್ರ ಅಂದಾಜು ಮಾಡಿದಷ್ಟು ಬರುವದಿಲ್ಲ. ಬಹಳ ಕಡಮೆ ಬರುವದು ಆದರೆ ಯಾವ ಬೆಳೆ ಕಡಮೆ ಬರುವದೆಂದು ಅಂದಾಜು ಮಾಡಿರುವಿರೋ ಅದು ಬಹಳ ಹೆಚ್ಚು ಬರುವದು. ಈ ರೀತಿ ವಿಪರೀತ ಗ್ರಹಮಾನ ಈ ವರ್ಷ ಇರುವದು. ಮನೆಯುವರೆಲ್ಲ ಆದರದಿಂದ ಮತ್ತು ಬಿಚ್ಚು ಮನಸ್ಸಿನಿಂದ ನಡೆಯುವರು. ತಂದೆ ತಾಯಿಗಳ ಆರೋಗ್ಯಕ್ಕೆ ಈ ವರ್ಷ ಮಾರ್ಚ ೭ರ ವರೆಗೆ ಬಹಳ ಕ್ಲೇಶವಿದೆ. ಅವರ ವಿಯೋಗವಾಗುವ ಸಂಭವವೂ ಇದೆ. ಆದರೆ ಅನಂತರ ಮಾತ್ರ ಅಂಥ ಅಂಜಿಕೆಯೇನೂ ಇರುವದಿಲ್ಲ. ಕುಟುಂಬದಲ್ಲಿಯ ಅನೇಕ ಜನರ ಉತ್ಕರ್ಷವಾಗಿ ಮನಸ್ಸಿನಂತೆ ಕೆಲಸ ಕಾರ್ಯ ನಡೆಯುವವು ಮತ್ತು ಮನೆಯಲ್ಲಿ ಶುಭ ಕಾರ್ಯಗಳೂ ಜರಗುವವು.

ಮಕ್ಕಳ ಮದುವೆ ಮಾಡುವದಿದ್ದರೆ ಅಲ್ಪಾಯಾಸದಿಂದ ಕೂಡಿಬರುವದು ಮತ್ತು ಒಳ್ಳೆ ವರ್ಚಸ್ವೀ ಮನೆ ಸಿಕ್ಕುವದು. ಆದರೆ ಲಗ್ನ ಕಾರ್ಯದಲ್ಲಿ ಸ್ವಲ್ಪ ತುರಸು ಆಗಿ ವಿರಸವಾಗುವ ಸಂಭವವಿದೆ. ಆದರೆ ಮುಹೂರ್ತವನ್ನು ಮುಂದಕ್ಕೆ ಹಾಕಬೇಕಾಗಿ ಬರುವ ಅಂಜಿಕೆಯೇನಿಲ್ಲ. ಅಳಿಯ ಇಲ್ಲವೆ ಸೊಸೆ ಪೂರ್ಣ ಮನಸ್ಸಿಗೆ ಬರುವರು. ಮಕ್ಕಳ ಉತ್ಕರ್ಷ ಹೆಚ್ಚುವಂಥ ಪ್ರಬಲ ಯೋಗವಿದೆ. ಕೆಲ ಜನರು ಲೋಕದೃಷ್ಟಿಯಿಂದ ಮಹತ್ವದ ಕಾರ್ಯಗಳನ್ನು ಸಾಧಿಸುವರು. ಆದರೆ ಮನೆಯಲ್ಲಿ ಅವರ ಮಾತುಗಳು ಮಾತ್ರ ಬಹಳ ಅಸಹ್ಯ ಮತ್ತು ಹಿರಿಯರಿಗೆ ಅಪಮಾನಕಾರಕವಾದವುಗಳು.

ಧಂದೆ-ಕೂಲಿಯುವರಿಗೆ ಈ ವರ್ಷ ಮಾರ್ಚ ೭ರ ವರೆಗೆ ಸ್ವಲ್ಪ ಹಾನಿ ಸಂಭವಿಸುವದು. ಆದರೆ ಅನಂತರ ಮಾತ್ರ ಕೆಟ್ಟ ಪರಿಸ್ಥಿತಿ ಚೆನ್ನಾಗಿ ಸುಧಾರಿಸುವದು ಮತ್ತು ವರ್ಷದ ಕೊನೆಯಲ್ಲಿ ಅಥಾವೆ ತೆಗೆದರೆ ಅಂದಾಜಿಗಿಂತ ಸ್ವಲ್ಪ ಹೆಚ್ಚೆ ಲಾಭ ಮತ್ತು ಯಶಸ್ಸು ದೊರೆತದ್ದು ಕಂಡುಬರುವದು. ಮಾರ್ಚ ೬ ರಿಂದ ಮುಂದೆ ಮಾಡಿದ ಸಾಹಸ ಕಾರ್ಯಗಳೆಲ್ಲ ಯಶಸ್ವಿಯಾಗುವವು. ಕೆಲ ಕೆಲಸಗಳಲ್ಲಿ ದೊರೆಯುವ ಯಶಸ್ಸು ಜನರನ್ನು ಆಶ್ಚರ್ಯಗೊಳಿಸುವದು. ಕಿರಕಳ ಧಂದೆಯುವರಿಗಿಂತ ಠೋಕ ಧಂದೆ ಮಾಡುವವರಿಗೆ ಈ ವರ್ಷ ಹೆಚ್ಚು ಲಾಭವಿದೆ. ಕೊಂಡ ಸರಕುಗಳಿಗೆಲ್ಲ ಒಳ್ಳೆ ಬೆಲೆ ಬರುವದು. ಮಾರ್ಚ ೭ ರಿಂದ ಜೂನ ೧೨ ರ ವರೆಗೆ ಮಹತ್ವದ ಘಟನೆ ಮಾಡುವ ಅವಕಾಶ ತಾನಾಗಿಯೆ ಒದಗಿಬರುವದು. ಪತ್ತು ಮತ್ತು ಪ್ರತಿಷ್ಠೆ ಬಹಳ ಮಟ್ಟಿಗೆ ಹೆಚ್ಚುವದು. ಧನಿಕರಂತೆ ಕೆಲ ಅಧಿಕಾರಿಗಳೂ ನಿಮ್ಮ ಧಂದೆಗೆ ಸಹಾಯ ಮಾಡುವರು. ಕೊಡಕಕೊಳ್ಳುವ, ಕೊಳ್ಳುವ ಮಾರುವ ಸಂಬಂಧವು ಮೊದಲಿಗಿಂತ ಬಹು ದೂರದ ಊರೊಡನೆ, ಪ್ರಾಂತದೊಡನೆ ಇಲ್ಲವೆ ಪರರಾಷ್ಟ್ರದೊಡನೆ ಆಗುವ ಪ್ರಬಲ ಯೋಗವಿದೆ. ಕೈಕೆಳಗಿನ ನೋಕರಚಾಕರರು ಸಂಬಳ ಹೆಚ್ಚು ಮಾಡುವ ಬೇಡಿಕೆಯನ್ನು ಬಹಳ ಜೋರಿನಿಂದ ಮಾಡಹತ್ತುವರು. ಆದರೆ ಬಿದ್ದ ಕೆಲಸವನ್ನೆಲ್ಲ ಒಳ್ಳೆ ಪ್ರಾಮಾಣಿಕ ರೀತಿಯಿಂದ ಮತ್ತು ಪ್ರೇಮದಿಂದ ಮಾಡುವರು.

ನೋಕರರಿಗೆ ಮಾರ್ಚ ೭ ರ ವರೆಗೆ ವರಿಷ್ಠರ ತೊಂದರೆ ಬಹಳ ಹೆಚ್ಚಿಗೆ ಆಗುವದು ಮತ್ತು ಅನಂತರ ಬುದ್ಧಿಗೆ ಬಹಳ ತ್ರಾಸಾಗುವಂತಹ ಕೆಲಸಗಳನ್ನು ಮಾಡಬೇಕಾದ ಪ್ರಸಂಗ ಬರುವದು ಅದರಿಂದ ತಲೆ ಗುಂಗಾಗಿ ಹೋಗುವದು. ಆದರೆ ತೊಂದರೆ ಕೊಡುವ ವರಿಷ್ಠರೇ ಮೇಲಿನವರಿಗೆ ನಿಮ್ಮ ಕೆಲಸದ ಬಗ್ಗೆ ಮನಃಪೂರ್ವಕವಾಗಿ ಶಿಫಾರಸ ಮಾಡುವರು. ಅದರ ಉಪಯೋಗದಿಂದ ಮೇಲಿನ ಗ್ರೇಡು ದೊರೆಯಲು ಅನುಕೂಲ ಆಗುವದು ಕನಿಷ್ಠ ಇದೇ ವರ್ಷದಲ್ಲಿ ಪಗಾರವಾದರೂ ಹೆಚ್ಚುವದು. ಜುಲೈ ೩೦ ರಿಂದ ಸಪ್ಟೆಂಬರ ೧೫, ಮುಂದೆ ಬಹುಶಃ ಈ ವರ್ಷ ಮುಗಿಯುವದರೊಳಗಾಗಿ ಮೇಲಿನ ಎರಡರಲ್ಲಿ ಒಂದಾದರೂ ಆಗಿಯೇ ತೀರುವದು ಮತ್ತು ಆ ಕಾಲಕ್ಕೆ ಬಹುಶಃ ಎರಡನೇ ಕಡೆಗೆ ಬದಲಿ ಆಗುವದು. ಆದರೆ ಅದು ಅಷ್ಟೊಂದು ಅನುಕೂಲ ಸ್ಥಳಕ್ಕೆ ಆಗುವ ನಿಯಮವಿಲ್ಲ. ಧಂದೆಯುವರಿಗೇನು, ನೋಕರರಿಗೇನು ಲಾಭದ ದೃಷ್ಟಿಯಿಂದ ನವಂಬರ ೧೪ ರ ವರೆಗೆ ಮತ್ತು ಮುಂದೆ ಡಿಸೆಂಬರ ೬ ರಿಂದ ೨೫, ಜನೆವರಿ ೯ ರಿಂದ ಫೆಬ್ರುವರಿ ೭, ಫೆಬ್ರುವರಿ ೨೬ ರಿಂದ ಮಾರ್ಚ ೧೭, ಎಪ್ರಿಲ ೧ ರಿಂದ ಜುಲೈ ೯ ಮತ್ತು ಅಕ್ಟೋಬರ ೧ ರಿಂದ ಮುಂದಿನ ಕಾಲ ಬಹಳ ಅನುಕೂಲವಾಗಿ ಪರಿಣಮಿಸುವದು. ಮೊದಲಿನ ಸಾಲವಿದ್ದರೆ ಕೂಡಲೆ ಹರಿಯುವಿರಿ. ಸಾಲವಿಲ್ಲದಿದ್ದರೆ ಹೆಚ್ಚು ಹಣ ಸಂಗ್ರಹಿಸುವಿರಿ.

ಮಿತ್ರಸುಖ ಬಹಳ ಉತ್ತಮ. ಆದರೆ ಒಬ್ಬ ಸ್ತ್ರೀ ಬಗ್ಗೆ ಮಾತ್ರ ನಿಮ್ಮ ಮನಸ್ಸು ಗುಂಗಾಗಿ ಹೋಗುವದು. ಪ್ರವಾಸಸುಖಕರವಾಗುವದು. ಆದರಲ್ಲಿಯ ಉದ್ದೇಶವೂ ಚನ್ನಾಗಿ ಸಾಧಿಸುವದು ಆದರೆ ಕೆಲ ಪ್ರವಾಸದ ಯೋಗ ಸ್ವಲ್ಪ ಕಡಿಮೆಯೇ ಇದೆ. ಪ್ರತ್ಯಕ್ಷ ಭೆಟ್ಟಿಗಿಂತ ಲೇಖನ ಕೆಲಸ ಹೆಚ್ಚು ಅನುಕೂಲವಾಗುವವು.

ದಾವೆ ಖಟ್ಲೆ ಇದ್ದರೆ ಅವುಗಳ ಪ್ರತ್ಯಕ್ಷ ತೀರ್ಪು ಸಹಸಾ ಆಗುವದಿಲ್ಲ. ಮುದತಿನ ಮೇಲೆ ಮುದತು ಬಿದ್ದು ನಿರರ್ಥಕ ಹಣ ವೆಚ್ಚವಾಗುವದು. ಮತ್ತು ತೊಂದರೆಯನ್ನೂ ಅನುಭವಿಸಬೇಕಾಗುವದು. ಯಾವದಾದರೊಂದು ಖಟ್ಲೆಯ ತೀರ್ಪು ಕದಾಚಿತ ಆದರೆ ಅದು ನಿಮ್ಮಂತೆ ಹೊರಬೀಳಬಹುದು. ಮತ್ತೊಂದು ನಿಮ್ಮ ವಿರುದ್ಧ ಹೋಗಬಹುದು. ಈ ರೀತಿ ಪರಿಸ್ಥಿತಿ ಇರುವದು. ಖಾಸಗಿ ಸ್ಪರ್ಧೆಯ ಕೆಲಸಗಳೂ ಹೀಗೆಯೇ ವಿಲಂಬಿಸುತ್ತ ಹೋಗುವವು.

ಸ್ತ್ರೀಯರು ಹಡೆಯುವವರಿದ್ದರೆ ಅಂದಾಜಿಗಿಂತ ಹಿಂದೆಮುಂದೆ ೧೫-೨೦ ದಿನ ಹೋಗುವವು. ದಿನ ಹಿಂದೆಮುಂದೆಯಾದರೂ ಪ್ರಸವ ಮಾತ್ರ ಸುಲಭವಾಗುವದು. ಮಾರ್ಚ ೭ ಕ್ಕಿಂತ ಮೊದಲು ಹಡೆದರೆ ಗಂಡು ಮಗು ಅನಂತರ ಹೆಣ್ಣು ಮಗು ಹುಟ್ಟುವವು. ಆದರೆ ಹುಟ್ಟುವ ಕೂಸು ಬಾಣಂತಿಗಿಂತ ಹೆಚ್ಚು ನಿರೋಗಿ ಮತ್ತು ಸುಂದರವಿರುವದು.

ಮಾರ್ಚ ೭ರ ನಂತರ ಪರೀಕ್ಷೆಯಾದರೆ ನಿಶ್ಚಯವಾಗಿ ಯಶಸ್ಸು ಸಿಕ್ಕುವದು ಮತ್ತು ಅಕ್ಟೋಬರ ೧ರ ನಂತರ ಪರೀಕ್ಷೆಯಾದರೆ ಅವರೂ ವರ್ಗವನ್ನು ಪಡೆಯುವರು. ಈ ರೀತಿ ಯೋಗವಿದೆ. ಮೆಕ್ಯಾನಿಕಲ್, ಕಾಯದೆ ಮತ್ತು ಎಸ್.ಎಸ್.ಸಿ ಪರೀಕ್ಷೆಗೆ ಕುಳಿತವರು ನಿಶ್ಚಯವಾಗಿ ಯಶಸ್ವಿಯಾಗುವರು.

ಕನ್ಯಾ

ಈ ರಾಶಿಯುವರಿಗೆ ಆರೋಗ್ಯವೊಂದನ್ನು ಬಿಟ್ಟು ಉಳಿದೆಲ್ಲ ವಿಷಯುಗಳಲ್ಲಿ ಹದಿನಾಲ್ಕಾಣೆ ನೋಡದರೂ ಯಶಸ್ಸು, ಶಿಕ್ಕು ಉತ್ಕರ್ಷವಾಗುವ ನಿಯಮು ನಿಸಂಶಯುವಾಗಿದೆ.

ಈ ರಾಶಿಯುವರ ಆರೋಗ್ಯ ಮಾರ್ಚ ೭ ರ ವರೆಗೆ ಉತ್ತಮ ಉಳಿಯುವದು. ಅನಂತರ ಮಾತ್ರ ಇರಬೇಕಾದಂತೆ ಇರದೆ ದಿನವೂ ಒಂದಿಲ್ಲೊಂದು ತಕರಾರು ಇದ್ದದ್ದೇ. ಅನೇಕರಿಗೆ ಪಿಶಾಚ ಬಾಧೆಯಿಂದ ಇಲ್ಲವೆ ಭ್ರಮ ಬಾಧೆಯಿಂದ ತೊಂದರೆಯಾಗುವದು. ಇನ್ನು ಹಲವರಿಗೆ ಮೂಲವ್ಯಾಧಿ ಅಂತರ್ಗಳ ಇಲ್ಲವೆ ಪಿತ್ತಾತಿರೇಕವಾಗಬಹುದು. ಅದರಲ್ಲಿಯೂ ಮಾರ್ಚ ೭ ರಿಂದ ಎಪ್ರಿಲ ೨೩ ಮತ್ತು ಜುಲೈ ೩೦ರಿಂದ ಸಪ್ಟಂಬರ ೧೫ ಈ ಅವಧಿಯಲ್ಲಿ ಹೆಚ್ಚು ಸಂಬಾಳಿಸಬೇಕಾಗುವದು ಮತ್ತು ಕೇತುವಿನ ಸಂಪೂರ್ಣ ಅಂದರೆ ೧೭ ಸಾವಿರ ಜಪ ಮತ್ತು ಶಿವ, ವಿಷ್ಣು ಮತ್ತು ಗಣಪತಿ ಈ ದೇವತೆಗಳ ಪೂಜಾ ಅರ್ಚನಾದಿಗಳಿಂದ ಆರಾಧನೆ ಮಾಡಬೇಕು. ಅಂದರೆ ಖಾತ್ರಿಯಿಂದ ಕಷ್ಟೋಪಶಮನವಾಗುವದು.

ಉಳಿದ ವಿಷಯುಗಳಲ್ಲಿ ಅವಶ್ಯಕ ಬೇಕಾಗುವ ದೇಹಸುಖ ಬಹಳ ಉತ್ತಮ ದೊರೆಯುವದು. ಮಾರ್ಚ ೭ ರಿಂದ ಅನೇಕರಿಗೆ ಪ್ರತ್ಯಕ್ಷವಾಗಿ ಕಂಡುಬರುವಂತೆ ಗೃಹಕಲಹವುಂಟಾಗುವದು ವ್ಯತ್ತು ಆಯಾ ಜನರು ಸ್ವಾರ್ಥ ಸಾಧಿಸಿಕೊಳ್ಳುವುದಕ್ಕಾಗಿ ಪ್ರಯುತ್ನಿಸುವರು. ಫೆಬ್ರುವರಿ ೨೪ ರಿಂದ ಮಾರ್ಚ ೨೦, ಮೇ ೮ ರಿಂದ ೩೧ ಮತ್ತು ಜುಲೈ ೨೦ ರಿಂದ ಅಗಷ್ಟ ೧೪ ಈ ಅವಧಿಯಲ್ಲಿ ಅದು ಕೆಲಮಟ್ಟಿಗೆ ಹೆಚ್ಚುವದು. ಆದರೂ ಈ ವರ್ಷ ವಿಡೀ ಇದ್ದ ೧ ನೇ ಗುರು ಮತ್ತು ೩ ನೇ ಶನಿ ಪ್ರಬಲಯೋಗದಲ್ಲಿರುವದರಿಂದ ಏಕತ್ರವಿದ್ದ ಕುಟುಂಬ ಸಹಸಾ ವಿಭಕ್ತವಾಗಬೇಕಾಗಿ ಬರುವದಿಲ್ಲ. ಪ್ರೀತಿಪಾತ್ರ ಜನರ ಭೆಟ್ಟಿ, ಸಹವಾಸ ಘಟಿಸುವದರಿಂದ ಮನಸ್ಸು ಬಹಳ ಆನಂದ ಹೊಂದಿ ಹಾಹಾ ಅನ್ನುವದರೊಳಗಾಗಿ ವರ್ಷವೆಲ್ಲ ಗತಿಸಿ ಹೋಗುವದು. ಮನೆಯುವರಿಗಿಂತ ಹೊರಗಿನ ಆಪ್ತರು ಹೆಚ್ಚು ಸಹಾನುಭೂತಿಯಿಂದ ವರ್ತಿಸುವರು. ವಾಹನಗಳು ಹಳೆಯುವಿದ್ದರೂ ಸಹಸಾ ಕೆಡುವದಿಲ್ಲ. ಕೆಲಸ ಕೊಡುವವು. ಮನೆಯಲ್ಲಿಯ ದನಕರುಗಳೂ ಚನ್ನಾಗಿ ಉಳಿಯುವವು. ಹಾಲು ಮುಂತಾದ್ದು ಸಾಕಷ್ಟು ಕೊಡುವವು. ಉಳಿದ ದನಗಳಾದರೂ ಆಯಾ ಕೆಲಸಗಳಲ್ಲಿ ವ್ಯವಸ್ಥಿತವಾಗಿ ಉಪಯೋಗಕ್ಕೆ ಬೀಳುವವು. ಮನೆಯ ನೋಕರರು ವಿಶ್ವಾಸದಿಂದ ಮತ್ತು ಕಾರ್ಯತತ್ಪರರಾಗಿ ಉಳಿಯುವರು. ಮತ್ತು ಸ್ಥಾವರ ಜಂಗಮ ಉತ್ಪನ್ನ ಕೂಡ ಏನೂ ತಕರಾರು ಇಲ್ಲದೆ ಗೊತ್ತಾದಷ್ಟು ದೊರೆಯುವದು. ಈ ರಾಶಿಯ ಜನರು ಈ ವರ್ಷ ಸ್ವಲ್ಪ ಹೊಸ ಆಸ್ತಿಯನ್ನು ನಿಶ್ಚಯುವಾಗಿ ಮಾಡುವರು. ಕಳೆದ ಅನೇಕ ವರ್ಷಗಳಿಗಿಂತ ಈ ವರ್ಷ ಸ್ತ್ರೀಸುಖ ಬಹಳ ಅನುಕೂಲ. ಮತ್ತು ಹಲ ಕೆಲ ಸಲ ಕ್ಷುಲ್ಲಕ ಕಾರಣಗಳ ಸಲುವಾಗಿ ಪರಸ್ಪರ ವಾಗ್ವಾದವಾದರೂ ಪ್ರೇಮ ಮತ್ತು ಗೌರವಾದರಗಳಿಗೆ ವ್ಯತ್ಯಯ ಬರುವದಿಲ್ಲ. ಇಷ್ಟೇ ಅಲ್ಲ ಅವು ಮತ್ತಷ್ಟು ಹೆಚ್ಚುವವು. ಅವಳ ಪ್ರಕೃತಿಗೆ ಈ ವರ್ಷ ಅನುಕೂಲವೇ ಇದೆ. ಆದರೆ ನವಂಬರ ೨೧ ರ ವರೆಗೆ ಮತ್ತು ಸಪ್ಟಂಬರ ೧೫ ರ ನಂತರ ಸ್ವಲ್ಪ ಕಿರಿಕಿರಿಯೆನಿಸುವದು ಇಷ್ಟೇ. ನಿಮ್ಮ ಮದುವೆಯಿನ್ನೂ ಆಗಿರದಿದ್ದರೆ, ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಅಲ್ಪಾಯಾಸದಿಂದ ಒದಗುವದು. ವಧೂವರರು ರೂಪಲಾವಣ್ಯಗಳಲ್ಲಿ ಲೋಕ ದೃಷ್ಟಿಯಿಂದ ಸ್ವಲ್ಪ ಇಚ್ಛೋಡೆನಿಸಿದರೂ ಇಬ್ಬರ ಶಿಕ್ಷಣ, ಸ್ವಭಾವ ಒಂದೇ ಬಗೆಯದೆನಿಸುವದು. ವಿವಾಹೋತ್ತರ ಜೀವನವು ಏಕ ಜೀವವಾಗುವದು.

ಮಕ್ಕಳ ಮದುವೆ ಮಾಡುವದಿದ್ದರೆ ಈ ವರ್ಷ ಅನುಕೂಲವಿದೆ. ಎಲ್ಲ ವಿಷಯುಗಳೂ ಸುಲಭವಾಗಿ ಪಾರಾಗುವವು. ಉಭಯ ಪಕ್ಷಗಳು ಪರಸ್ಪರ ಚೆನ್ನಾಗಿ ಪರಿಚಯಮಾಡಿಕೊಳ್ಳುವವು ಮತ್ತು ಬಹುಶಃ ಮೊದಲಿನಿಂದಲೂ ಪರಸ್ಪರ ಪರಿಚಯದವರಿರಬಹುದು. ಅಳಿಯ ಇಲ್ಲವೆ ಸೊಸೆ ಮನಸ್ಸಿಗೆ ಬರುವರು ಮತ್ತು ಅವರಲ್ಲಿ ವಿಶಿಷ್ಟವಾದ ಆಕರ್ಷಕ ಗುಣವೊಂದು ನಿಶ್ಚಯುವಾಗಿ ಇರುವ ಸಂಭವವಿದೆ. ಎಲ್ಲ ಮಕ್ಕಳ ಉತ್ಕರ್ಷಕ್ಕೂ ಈ ವರ್ಷ ಪೂರಕವಿರುವದು ಮತ್ತು ಇದೆಲ್ಲ ಲೋಕ ದೃಷ್ಟಿಯಿಂದ ಒಳ್ಳೆ ಕೌತುಕಾಸ್ಪದವೆನಿಸುವದು ಅವರೆಲ್ಲ ನಿಮ್ಮೊಡನೆ ಚೆನ್ನಾಗಿ ನಡೆದುಕೊಳ್ಳುವರು.

ಧಂದೆ ಕಲಿಯುವರಿಗೆ ಈ ವರ್ಷ ಬಹಳ ಅನುಕೂಲವಿದೆ. ಮೊದಲಿನ ಸಾಲ ಇಲ್ಲವೆ ಕೊಡ ತಕ್ಕೊಳ್ಳುವದೇನಾದರೂ ಇದ್ದರೆ ಅದೆಲ್ಲ ಸರಳವಾಗಿ ಪೂರ್ಣ ನಿಕಾಲಿಯಾಗುವದು. ಸ್ವತಂತ್ರ ಧಂದೆಯುವರು ಬಹಳ ಲಾಭಪಡೆಯುವರು. ಕಿರುಕಳ ಇಲ್ಲವೆ ಠೋಕ ಯಾವದೇ ಧಂದೆ ಇದ್ದರೂ ಆಯಾ ಪ್ರಮಾಣಕ್ಕನುಸರಿಸಿ ಒಳ್ಳೆ ಲಾಭವಾಗುವದು. ಸಹಾಯುಕ್ಕಾಗಿ ಎರಡನೆಯುವರು ಅಂತಃಕರಣಪೂರ್ವಕವಾಗಿ ವಿಚಾರ ಮಾಡುವರು. ರೊಕ್ಕದ ಜೊತೆ ಪರಿಶ್ರಮದ ಸಹಾಯುವೂ ಅನೇಕರಿಂದ ದೊರೆಯುವದು. ಪತ್ತು ಮತ್ತು ಪ್ರತಿಷ್ಠೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಹೆಚ್ಚುವವು ಅಧಿಕಾರಿಗಳ ಸಹಾನುಭೂತಿ ಮತ್ತು ಪರಿಚಯುದ ಮೂಲಕವೂ ಎಂಥ ಬಿಕ್ಕಟ್ಟಿನ ಕೆಲಸಗಳೂ ಅಲ್ಪ ಹಣದಲ್ಲಿ ಮತ್ತು ಅಲ್ಪ ಸಮಯುದಲ್ಲಿ ಪೂರ್ಣವಾಗುವವು. ಅನೇಕರು ಒಂದೇ ಧಂದೆಯನ್ನು ಎರಡೂ ಕಡೆ ನಡೆಸುವ ಇಲ್ಲವೆ ಎರಡು ಬೇರೆ ಊರುಗಳಲ್ಲಿಯೇ ಸಾಗಿಸುವ ಅವಕಾಶ ದೊರೆಯುವದು. ದೊರೆತ ಹಣದ ವಿನಿಯೋಗ ಮತ್ತು ಸಂಗ್ರಹ ಮಾಡುವಲ್ಲಿಯೂ ಒಂದು ಬಗೆಯ ಚಾತುರ್ಯ ಕಂಡು ಬರುವದು.

ನೋಕರಿ ಮಾಡುವವರಿಗೂ ಈ ವರ್ಷ ಒಳ್ಳೇ ಲಾಭದಾಯಕ. ಯಾವದೇ ರೀತಿಯಿಂದ ಕುರಕುರಿ ಮಾಡಲಿಕ್ಕೆ ಅವಕಾಶವುಳಿಯುವದಿಲ್ಲ. ವರಿಷ್ಠರು ಒಳ್ಳೇ ರೀತಿಯಿಂದ ನಡೆಯುವರು ಮತ್ತು ನಿಮ್ಮ ಕೆಲಸದ ಬಗ್ಗೆ ಮೇಲಿಂದ ಮೇಲೆ ಪ್ರಶಂಸೋದ್ಗಾರ ತೆಗೆಯುವರು ಮತ್ತು ಯೋಗ್ಯ ಪ್ರಸಂಗದಲ್ಲಿ ಶ್ರೇಷ್ಠ ಅಧಿಕಾರಿಗಳಿಗೆ ಶಿಫಾರಸು ಮಾಡಿ ನಿಮ್ಮ ಯೋಗ್ಯತೆಗಿಂತ ಒಂದು ತೂಕ ಹೆಚ್ಚೇ ಲಾಭ ಮಾಡಿ ಕೊಡುವರು. ಮೇಲಿನ ಗ್ರೇಡು ಸಿಕ್ಕುವದಿದ್ದರೆ ಅವರಿಗೆ ಅದು ಖಾತ್ರಿಯಿಂದ

ದೊರೆಯುವದು. ಅಂಥ ಗ್ರೇಡು ಸಿಕ್ಕುವ ಸಮಯ ಇಲ್ಲದಿದ್ದವರಿಗೆ ಕೂಡ ಸಿಕ್ಕುವ ಸಂಭವ ಖಾತ್ರಿಯಿಂದ ಇದೆ. ಗ್ರೇಡು ಸಿಗುವದರ ಜೊತೆ ಬಹಳ ದೂರ ಸ್ಥಳಕ್ಕೆ ವರ್ಗವಾಗುವ ಸಂಭವವೂ ಇದೆ. ಮತ್ತು ಆ ಸ್ಥಾನವು ಬಹಳ ಮನಸ್ಸಿಗೆ ಬರುವದರಿಂದ ಇಮ್ಮಡಿ ಆನಂದವಾಗುವದು. ಕೈಕೆಳಗಿನ ನೌಕರರು ಕೂಡ ಮರ್ಯಾದೆಯಿಂದ ಮತ್ತು ನಿಷ್ಠೆಯಿಂದ ವರ್ತಿಸುವರು. ಲಾಭಕ್ಕೆ ವಿಶೇಷ ಅನುಕೂಲ ಕಾಲ ನವೆಂಬರ ೧೯ ರಿಂದ ಜನೆವರಿ ೭, ಫೆಬ್ರುವರಿ ೧ ರಿಂದ ೨೪, ಮಾರ್ಚ ೨೦ ರಿಂದ ಎಪ್ರಿಲ ೧೨, ಮೇ ೪ ರಿಂದ ಜುಲೈ ೨೦ ಮತ್ತು ಸಪ್ಟಂಬರ ೮ ರ ನಂತರ ಬಹಳ ಉತ್ತಮವಿದೆ. ಧಾರ್ಮಿಕ ಕೃತ್ಯಗಳು ಮತ್ತು ಮಂಗಲ ಕಾರ್ಯಗಳು ಬಹಳ ಸಂಭವಿಸುವವು. ಯಾತ್ರೆಗೆ ಹೋಗುವ ಸಂಭವವಿಲ್ಲ. ಆದರೆ ಅನೇಕ ಪಾರಮಾರ್ಥಿಕ ಜನರ ಸಹವಾಸ ಮೇಲಿಂದ ಮೇಲೆ ಉಂಟಾಗುವದು. ಮಿತ್ರಸುಖ ಬಹಳ ಅನುಕೂಲ.

ದಾವೆ ಖಟ್ಲೆ ನಡೆದಿದ್ದರೆ ಅವುಗಳಲ್ಲಿ ಅನೇಕರಿಗೆ ಬಹಳ ಯಶಸ್ಸು ದೊರೆಯುವದು ಮತ್ತು ಶತ್ರುಗಳು ಮತ್ತೊಮ್ಮೆ ತಲೆ ಮೇಲೆತ್ತಲಿಕ್ಕಿಲ್ಲ. ಖಾಸಗಿ ಸ್ಪರ್ಧೆಯಲ್ಲಿಯೂ ಇದೇ ಬಗೆಯ ಮೇಲ್ಗೈ.

ಈ ರಾಶಿಯ ಸ್ತ್ರೀಯರ ಪ್ರಸೂತಿ ಜೂನ ೧೨ ರಿಂದ ಜುಲೈ ೩೦ರ ಹೊರತು ಬೇರೆ ಯಾವ ಸಮಯದಲ್ಲಿ ಆದರೂ ಅತ್ಯಂತ ಸುಲಭವಾಗುವದು. ಅನೇಕರಿಗೆ ಕನ್ಯಾದ ಯೋಗವಿದ್ದರೂ ಬೇರೆ ಯಾವದೇ ಬಗೆಯ ತೊಂದರೆಯಾಗದೆ ಬಾಣಂತಿತನ ಬಹಳ ಚೆನ್ನಾಗಿ ಆಗುವದು.

ಮಾರ್ಚ ೭ ರೊಳಗಾಗಿ ಪರೀಕ್ಷೆಯಾದ ವಿದ್ಯಾರ್ಥಿ ಬಹುಶಃ ಕ್ಲಾಸ ಪಡೆಯುವರು. ಅನಂತರ ಕುಳಿತವರಲ್ಲಿ ನೂರಕ್ಕೆ ೭೫ ರಷ್ಟು ಹೇಗಾದರೂ ಪಾಸಾಗುವರು.

ತುಲಾ

ಈ ರಾಶಿಯವರು ಸುಮಾರು ೨॥ ವರ್ಷ ಸಾಡೇಸಾತಿಯನ್ನು ಅನುಭವಿಸಿರುವರು. ಆದರೆ ಶನಿ ಈ ರಾಶಿಯ ಮಿತ್ರನಾಗಿರುವದರಿಂದ ಪ್ರಾಪಂಚಿಕ ತೊಂದರೆಯನ್ನು ಹೊರತು ಪಡಿಸಿ ಉಳಿದ ವಿಷಯಗಳಲ್ಲಿ ಬಹಳಷ್ಟು ಬೇಸರವನ್ನುಂಟು ಮಾಡಲಾರನು ಎಂದು ತಿಳಿಯತಕ್ಕದ್ದು.

ಈ ರಾಶಿಯ ಜನರ ಆರೋಗ್ಯ ಮಾರ್ಚ ೭ ರ ನಂತರ ರೋಗರಹಿತ ಉಳಿದರೂ ತಲೆನೋವು, ಗ್ಯಾಸಾಗುವದು ಮತ್ತು ವಿಪರೀತ ಕುತರ್ಕಗಳಿಂದ ಹೃದಯಸ್ಪಂದನವಾಗುವದು ಮೊದಲಾದವು ಯಾವಾಗಾದರೊಮ್ಮೆ ಬಾಧಿಸುವವು. ವಿಶೇಷವಾಗಿ ಡಿಸೆಂಬರ ೬ ರಿಂದ ೨೫, ಮಾರ್ಚ ೧೭ ರಿಂದ ಎಪ್ರಿಲ ೧, ಮತ್ತು ಅಕ್ಟೋಬರ ೧ ರಿಂದ ೨೦ ಈ ಅವಧಿಯಲ್ಲಿ ಮೇಲಿನ ವಿಕಾರ ಕೆಲಮಟ್ಟಿಗೆ ತೋರುವವು. ಅನೇಕರಿಗೆ ಪೈಶಾಚಿಕ ಉಪದ್ರವವು, ನಿದಾನ ಹಾಗಾಗಿದೆಂದು ಭಾಸವಾಗುವ ಸಂಭವವಿದೆ.

ಉಳಿದ ವಿಷಯಗಳಲ್ಲಿ ದೇಹಸುಖ ಅನುಕೂಲ ದೊರೆಯುವದಿಲ್ಲ. ಅದರಂತೆ ಈ ವರ್ಷ ಧ್ವನಿತವಾಗುವದು. ಮಾರ್ಚ ೭ ರ ವರೆಗೆ ಗೃಹಕಲಹ ಬಹಳ ಜೋರಿನಲ್ಲಿ ನಡೆಯುವದು. ಮತ್ತು ಕುಟುಂಬ ಸ್ಥಾನದಲ್ಲಿ ಅಂದರೆ ಈ ರಾಶಿಗೆ ೨ ನೇ ಶನಿ ಮತ್ತು ರಾಹೂ ಇರುವರು. ಅದರಂತೆ ವರ್ಷವಿಡೀ ಗುರು ವ್ಯಯಸ್ಥಾನದಲ್ಲಿ ಅಂದರೆ ೧೨ನೇ ಸ್ಥಾನದಲ್ಲಿ ಇರುವನು. ಆದ್ದರಿಂದ ಏಕತ್ರ ಕುಟುಂಬವಿದ್ದರೆ ಅದು ಒಡೆದು ಪಾಲಾಗುವದು. ಹಾಗಾದಲ್ಲಿ ನಿಮ್ಮ ಪಾಲಿಗೆ ಬರುವ ಆಸ್ತಿ ಬಹಳ ಗೈರಸೋಯಿಯದು ಮತ್ತು ಸತ್ವಹೀನವಾದುದು ಇರುವದು. ಮಾರ್ಚ ೭ ರ ನಂತರ ಅಣ್ಣತಮ್ಮಂದಿರ ನ್ಯಾಯ ಕದಾಚಿತ್ ಕೋರ್ಟುಕಚೇರಿಯನ್ನು ಹತ್ತಬಹುದು. ಒಬ್ಬರಮೇಲೊಬ್ಬರು ದಾವೆ ಕೂಡ ಮಾಡಬಹುದು. ಪ್ರತಿಯೊಂದು ವಿಷಯದಲ್ಲಿ ಹೆಚ್ಚು ಹಣ ವೆಚ್ಚವಾಗಿಯೂ ಮನಸ್ಸಿನಂತೆ ಆಗುವ ನಿಯಮವಿಲ್ಲ. ಅನೇಕ ಜನರು ಸಹಾಯ ಮಾಡುವೆವೆಂದು ಹೇಳಿ ಹಣ ಮತ್ತು ವಸ್ತುಗಳನ್ನು ಅಪಹರಿಸಿಕೊಂಡು ಹೋಗುವರು. ಉಳಿದ ಅಪ್ತರೂ ಮೋರೆಯ ಮುಂದೆ ಒಳ್ಳೇ ಮಾತಾಡಿದರೂ ಒಳಗೊಳಗೆ ನಿಮಗೆ ಕೇಡನ್ನು ಬಯಸುವರು ಮತ್ತು ಅದರಂತೆ ಪ್ರಯತ್ನಿಸುವರು. ವಾಹನಗಳಿದ್ದರೆ ಮತ್ತು ಸಮಯಕ್ಕೆ ಅವುಗಳ ಉಪಯೋಗವಾಗದೆ ಅವು ಕೆಡುವವು ಮುರಿಯುವವು ಇಲ್ಲವೆ ಎರಡನೆಯವರು ಅವನ್ನು ಮೊದಲೆ ಒಯ್ಯುವದರಿಂದ ನಿಮಗೆ ಸಕಾಲದಲ್ಲಿ ಸಿಕ್ಕಲಾರವು. ಅದರಿಂದ ತೊಂದರೆಯೇ ಆಗುವದು. ನೌಕರಚಾಕರರಿದ್ದರೆ ಅವರು ಕಾಯಿಲೆಗಾಗಿ ಇಲ್ಲವೆ ಬೇರೆ ಕಾರಣಕ್ಕಾಗಿ ರಜೆ ಮೇಲೆ ಹೋಗಿರುವದರಿಂದ ನಿಮ್ಮ ಕೆಲಸಕ್ಕೆ ಅವರು ಉಪಯೋಗ ಬೀಳುವದಿಲ್ಲ. ಹಿಂಡುವ ಇಲ್ಲವೆ ಹೊಲಗಳಿಗೆ ಉಪಯೋಗವಾಗುವ ದನಗಳು ಕೂಡ ಮೇಲಿಂದಮೇಲೆ ಕಾಯಿಲೆಬೀಳುವದರಿಂದ ಅವುಗಳ ಉಪಯೋಗವೂ ಆಗುವದಿಲ್ಲ. ತದ್ವಿರುದ್ಧ ಅವುಗಳ ವ್ಯಾಪವೇ ಹೆಚ್ಚುವದು. ಸ್ಥಾವರ ಜಂಗಮ ಈರಾವಿಕ ಉತ್ಪನ್ನವನ್ನು ಉಡಿಯಲ್ಲಿ ಹಾಕಿಕೊಳ್ಳುವುದಕ್ಕಾಗಿ ಸುಮಾರು ಅಷ್ಟೇ ವೆಚ್ಚವನ್ನು ಮೊದಲೇ ಮಾಡಬೇಕಾಗುವದು. ಸ್ತ್ರೀ ಸಹವಾಸ ಮತ್ತು ಉಭಯತರಲ್ಲಿಯೂ ಪ್ರೇಮಕ್ಕೆ ಈ ವರ್ಷ ಅನುಕೂಲವಾಗಿದ್ದರೂ ನವೆಂಬರ ೨೧ ರಿಂದ ಜನೆವರಿ ೧೭, ಜೂನ ೧೨ ರಿಂದ ಜುಲೈ ೩೦ ಮತ್ತು ಸಪ್ಟಂಬರ ೧೫ ರಿಂದ ಮುಂದಿನ ಕಾಲ ಅವಳ ಪ್ರಕೃತಿಗೆ ತೊಂದರೆ ಕೊಡುವಂತಹದು. ಅದಕ್ಕಾಗಿ ಹಣದ ವೆಚ್ಚವನ್ನು ಹೆಚ್ಚಿಗೆ ಮಾಡಬೇಕಾಗುವದು. ಮಾರ್ಚ ೭ ರ ನಂತರ ಅನೇಕ ಹೆಂಡಂದಿರಿಗೆ ಹಿಸ್ಟೀರಿಯಾ ಇಲ್ಲವೆ ಸಣ್ಣ ದೊಡ್ಡ ಅಪವಾದದ ಅಂಜಿಕೆ ಇದೆ. ಆದರೆ ನಿಮಗಾಗಲಿ ಕುಟುಂಬದ ಬೇರೆ ಯಾರಿಗಾಗಲಿ ಈ ವರ್ಷ ಗಂಡಾಂತರದ ಅಂಜಿಕೆ ಸ್ವಲ್ಪೂ ಇರುವದಿಲ್ಲವೆಂಬುದು ನಿಶ್ಚಿತ. ನಿಮ್ಮ ಮದುವೆಯಿನ್ನೂ ಆಗಿರದಿದ್ದರೆ ನಿಮಗೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಆದಷ್ಟು ಈ ವರ್ಷ ಆ ವಿಚಾರ ಬಿಟ್ಟುಕೊಡಬೇಕು. ಏಕೆಂದರೆ ಮೊದಲು ಲಗ್ನ ಕೂಡುವದೇ ಕಠಿಣ ಒಂದು ವೇಳೆ ಕೂಡಿದರೆ ಅದು ಮುರಿಯುವ ಇಲ್ಲವೆ ಒಂದಿಲ್ಲೊಂದು ಅಡಚಣೆಯಿಂದ ಮುಂದೆ ಬೀಳುವ ಅಂಜಿಕೆ ಬಹಳವಿದೆ. ಒಂದೊಮ್ಮೆ ವಿಶೇಷ ಬಾಸಿಂಗ ಬಲದ ಮೂಲಕ ಲಗ್ನವಾದರೆ ಅದರಿಂದ ಸುಖ ಸಿಕ್ಕಲಾರದು; ಯಾವದೊಂದು ವ್ಯಂಗ ಇಲ್ಲವೆ ಅವಗುಣಗಳಿಂದ ತೊಂದರೆಯೇ ಹೆಚ್ಚಾಗುವದು. ಒಟ್ಟಾರೆ ಈ ವರ್ಷ ಪ್ರಾಪಂಚಿಕ ಸುಖ ಅಷ್ಟೊಂದು ಅನುಕೂಲವಿರುವದಿಲ್ಲ.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲದಿದ್ದರೂ ಕೆಟ್ಟ ಇರುವದಿಲ್ಲ. ಅಂದರೆ ಅದು ಒದಗಿ ಬರಬೇಕಾದರೆ, ಬಹಳ ಯಾತಾಯಾತಪಡಬೇಕಾಗುವದು. ಮಗನ ಮದುವೆಯಿದ್ದರೆ ಯಾವದೇ ಕಾರಣದಿಂದ ವರದಕ್ಷಿಣೆ ಕಡಿಮೆ ತಕ್ಕೊಳ್ಳಬೇಕಾಗಿ ಬರುವದು. ಮಗಳ ಮದುವೆಯಾಗುವದಿದ್ದರೆ ವರ ಕೈಬಿಟ್ಟು ಹೋಗುವದೆಂದು ಇಮ್ಮಡಿ

ಮುಮ್ಮಡಿ ವರದಕ್ಷಿಣೆ ಕೊಡುವ ಪ್ರಸಂಗ ಬರುವದು. ಇಷ್ಟು ಹಣ ಕೊಟ್ಟರೂ ಲಗ್ನದ ಕಾಲಕ್ಕೆ ಬೀಗಬೀಗರಲ್ಲಿ ಒಂದಿಲ್ಲೊಂದು ಬಗೆಯಿಂದ ಬಡಿದಾಟವಾಗುವದು. ಆ ಮಾತು ಬೇರೆ. ಅಳಿಯ ಇಲ್ಲವೆ ಸೊಸೆ ಮಾತ್ರ ಮನಸ್ಸಿನಂತೆ ದೊರೆಯುವರು. ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಕೆಟ್ಟದ್ದು ಇಲ್ಲ ಒಳಿತವೂ ಇಲ್ಲ. ಮಧ್ಯಮವಿರುವದು. ಆದರೆ ಅವರು ನಿಮ್ಮೊಡನೆ ನಿಷ್ಠೆಯಿಂದ ವರ್ತಿಸುವರು.

ಧಂದೆ ಕೂಲಿಕಾರರಿಗೆ ಈ ವರ್ಷ ಪ್ರಗತಿ ಪ್ರತಿಷ್ಠೆ ಮತ್ತು ಲಾಭದ ದೃಷ್ಟಿಯಿಂದ ಬಹಳ ಉತ್ತಮವಿದೆ. ಆದರೆ ವೆಚ್ಚ ಒಂದೇ ಸವನೆ ಆಗಹತ್ತುವದರಿಂದ ಸಂಗ್ರಹ ಮಾಡುವ ಅವಕಾಶವೇ ದೊರೆಯುವದಿಲ್ಲ. ಮತ್ತು ಹಣ ವೆಚ್ಚವಾಗುವದು ಒಂದೇಸವನೆ ನಡೆಯುವದು. ದೊಡ್ಡ ಪ್ರಮಾಣದಲ್ಲಿ ಧಂದೆ ನಡೆಸುವವರಿಗಿಂತ ಸಣ್ಣ ಪ್ರಮಾಣದಲ್ಲಿ ಧಂದೆ ಮಾಡುವವರಿಗೆ ಅದೇ ರೀತಿ ಬುದ್ಧಿಜೀವಿ ಮತ್ತು ಕಲಾಜೀವಿಗಳಿಗೆ ವ್ಯವಸಾಯಗಾರರಿಗೆ ಈ ವರ್ಷ ಪ್ರತಿಷ್ಠೆ ಮತ್ತು ದ್ರವ್ಯಲಾಭ ಅನುಕೂಲ. ಅನೇಕರಿಗೆ ನಾಮಾಂಕಿತ ವ್ಯಕ್ತಿಗಳಿಂದ ಸತ್ಕ್ರಿಯು ಗುಣ ಗೌರವದ ಯೋಗವಿದೆ. ನಡೆದ ಧಂದೆಗೆ ಪೂರಕವಾಗುವಂಥ ಒಂದು ಉಪಧಂದೆಯು ಜೋಡು ಅನಾಯಾಸವಾಗಿ ಲಭಿಸುವ ಸಂಭವವಿದೆ. ಧಂದೆಯುಲ್ಲಿಯ ಸರಳತನ ಮತ್ತು ಪ್ರಾವೀಣ್ಯದ ಬಗ್ಗೆ ಬಹಳ ಕೀರ್ತಿ ಹಬ್ಬುವದು. ಅಲ್ಪಸ್ವಲ್ಪ ಗುಪ್ತ ಇಲ್ಲವೆ ಅಕಲ್ಪಿತ ಲಾಭವೂ ಆಗುವ ಯೋಗವಿದೆ.

ನೋಕರರಿಗೆ ಕೂಡ ಬಹಳ ಮಟ್ಟಿಗೆ ಮೇಲಿನ ಅನುಭವವೇ ಬರುವದು. ವರಿಷ್ಠರು ಸದಾ ಸುಪ್ರಸನ್ನವುಳಿದು ನಿಮಗೆ ಒಗ್ಗುವಷ್ಟು ಕೆಲಸವನ್ನೇ ಕೊಡುವರು. ಮತ್ತು ಆ ಕೆಲಸದಲ್ಲಿ ಏನಾದರೂ ತಪ್ಪುತಡಿಗಳಾದರೆ ಅದನ್ನು ಮನಸ್ಸಿನಲ್ಲಿ ತರದೆ ತಾವೇ ಪೂರ್ತಿ ಮಾಡುವರು. ಖಾಸಗಿ ನೋಕರರಿಗೆ ಕೂಡ ಒಡೆಯರು ಹೀಗೆ ಮಾಡುವ ಅನುಭವವುಂಟಾಗುವದು. ಹೆಚ್ಚು ಪ್ರಯತ್ನ ಮಾಡದೆ ಮೇಲಿನ ಗ್ರೇಡು ಸಿಕ್ಕುವದು. ಆದರೆ ಅದು ದೊರೆತ ಬಳಿಕ ಅಪೇಕ್ಷಿಸಿದಷ್ಟು ಸುಖವೆನಿಸುವದಿಲ್ಲ. ಭವಿಷ್ಯತ್ತಿನಲ್ಲಿ ಭಾಗ್ಯವರ್ಧಕ ಘಟನೆಗಳು ನಡೆಯುವವು. ಆದರೆ ನಡುವೇ ಎಲ್ಲ ತಿರುವು ಮುರುವು ಆಗುವದು. ಆದರಿಂದ ಮನಸ್ಸಿನಲ್ಲಿ ಅಷ್ಟೊಂದು ಸ್ಥೈರ್ಯವುಳಿಯುವದಿಲ್ಲ. ಕೈತುಂಬ ಸಂಬಳವಿದ್ದವರಿಗೆ ಕೂಡ ನಾಲ್ಕು ದುಡ್ಡು ಕೂಡಿ ಹಾಕಲು ಸಾಧ್ಯವಾಗದಷ್ಟು ಹಣ ವೆಚ್ಚವಾಗುವದು. ಈ ಪರಿಸ್ಥಿತಿಯಲ್ಲಿ ಸಾಧಾರಣ ಸಂಬಳವಿದ್ದವರ ಗತಿಯೇನಾಗುವದೆಂಬುದನ್ನು ಬೇರೆ ಹೇಳಬೇಕಿಲ್ಲ. ವಿಶೇಷವಾಗಿ ಡಿಶೆಂಬರ ೧೫ ರಿಂದ ಜನೆವರಿ ೧೪, ಫೆಬ್ರುವರಿ ೧೨ ರಿಂದ ಮಾರ್ಚ ೧೪ ಏಪ್ರಿಲ ೧೪ ರಿಂದ ಜುಲೈ ೧೬, ಅಗಸ್ಟ ೧೬ ರಿಂದ ಸಪ್ಟಂಬರ ೧೬, ಮತ್ತು ಅಕ್ಟೋಬರ ೧೭ ರ ನಂತರದ ಕಾಲ ಲಾಭಕ್ಕೆ ಬಹಳ ಅನುಕೂಲವಿದೆ. ದೂರದ ಪ್ರವಾಸ ವೆಚ್ಚದ್ದೆನಿಸಿದರೂ ಸುಖಪ್ರದ ಮತ್ತು ಹೇತು ಸಾಧ್ಯವೆನಿಸುವದು. ಪ್ರತ್ಯಕ್ಷ ಭೆಟ್ಟಿ ಮತ್ತು ಲೇಖೀಕೆಲಸಗಳೂ ಒಳ್ಳೆಯವಾಗುವವು. ಮಿತ್ರಸುಖ ಅಷ್ಟಕ್ಕಷ್ಟೆ.

ದಾವೆ ಖಟ್ಲೆ ಇದ್ದರೆ ಅದರಲ್ಲಿ ನಿಮಗಿಂತ ಪ್ರತಿಪಕ್ಷಿಗಳಿಗೇ ಹೆಚ್ಚು ಯಶಸ್ಸು ಈ ವರ್ಷ ದೊರೆಯುವದು. ಖಾಸಗಿ ಸ್ಪರ್ಧೆಯಲ್ಲಿ ಮಾತ್ರ ಉಭಯ ಪಕ್ಷಗಳಿಗೆ ಅಷ್ಟೇ ಯಶಸ್ಸು.

ಮಾರ್ಚ ೭ ರ ನಂತರ ಹಡೆಯುವ ಸ್ತ್ರೀಯರಿಗೆ ಅಷ್ಟೊಂದು ಕ್ಲೇಶವಾಗುವದಿಲ್ಲ. ಕೂಸು ಬಾಣಂತಿ ಸುರಕ್ಷಿತ ಉಳಿಯುವರು. ಆದರೆ ಅನೇಕರಿಗೆ ಕನ್ಯಾ ಹುಟ್ಟುವವು. ಒಂದೊಮ್ಮೆ ಗಂಡುಮಗು ಹುಟ್ಟಿದರೆ ಇಡೀ ವರ್ಷ ಅದರ ಆರೋಗ್ಯದ ಬಗ್ಗೆ ಕಾಳಜಿ ಮಾಡಬೇಕಾಗುವದು.

ಮಾರ್ಚ ೭ ರ ನಂತರ ಪರೀಕ್ಷೆಯಾಗುವ ವಿದ್ಯಾರ್ಥಿಗಳಿಗೆ ಪಾಸಾಗುವಷ್ಟು ಗುಣ ಬೀಳುವಲ್ಲಿ ಅಷ್ಟೊಂದು ತೊಂದರೆಯಾಗಲಾರದು.

ವೃಶ್ಚಿಕ

ಒಟ್ಟಾರೆ ಈ ರಾಶಿಯವರಿಗೆ ಹೆಚ್ಚು ವೆಚ್ಚ. ಇದರ ಹೊರತು ಉಳಿದ ವಿಷಯಗಳಲ್ಲಿ ಮಂದ ಗತಿಯಿಂದಲಾದರೂ ಧ್ಯೇಯಸಾಧ್ಯವಾಗುವತ್ತ ಈ ವರ್ಷ ಒಯ್ಯುವದು.

ಈ ರಾಶಿಯವರು ಇನ್ನೂ ನಾಲ್ಕೂವರೆ ವರ್ಷ ಸಾಡೇಸಾತಿಯನ್ನು ಅನುಭವಿಸಬೇಕಾಗುವದು ಮತ್ತು ಜನ್ಮಸ್ಥ ಶನಿ ಇರುವದರಿಂದ ಪ್ರಕೃತಿ ಅಷ್ಟೊಂದು ಸಮಾಧಾನಕಾರಕ ಇರುವದಿಲ್ಲ ಆದರೆ ಈ ಜನ್ಮಸ್ಥ ಶನಿಯ ಜೊತೆಯಲ್ಲಿ ಇರುವ ರಾಹು ಮಾರ್ಚ ೭ ಕ್ಕೆ ಬದಲಾಗುವನು ಅದರಿಂದ ಪ್ರಕೃತಿ ದಿನದಿನಕ್ಕೆ ಸುಧಾರಿಸುತ್ತ ಹೋಗುವದು. ವಾತ ಪ್ರಕೃತಿಯವರು ಅಲ್ಲಿಯವರೆಗೆ ಆಹಾರವಿಹಾರಗಳಲ್ಲಿ ಮಿತವಾಗಿದ್ದು ಪಥ್ಯದಿಂದಿರಬೇಕು ಮತ್ತು ಕ್ಲೇಶ ಪರಿಹಾರಾರ್ಥ ಶನಿಯ ೨೩ ಸಾವಿರ ಮತ್ತು ರಾಹುವಿನ ೧೮ ಸಾವಿರ ಜಪ ಮಾಡಬೇಕು, ಇಲ್ಲವಾದರೆ ಮಹಾಮೃತ್ಯುಂಜಯ ೧೧ ಸಾವಿರ ಜಪ ಮಾಡಬೇಕು. ಅಂದರೆ ನಿಶ್ಚಯವಾಗಿ ದೀರ್ಘಾಯುಷಿಗಳಾಗುವಿರಿ. ಅದರಲ್ಲಿಯೂ ನವಂಬರ ೨೧ ರ ವರೆಗೆ ಮತ್ತು ಮುಂದೆ ಎಪ್ರಿಲ ೨೩ ರಿಂದ ಜೂನ ೧೨ ರವರೆಗೆ ವಿಶೇಷವಾಗಿ ಜಪಿಸಬೇಕು.

ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಮಾತ್ರ ಈ ವರ್ಷ ಬಹಳ ಉತ್ತಮವಿದೆ. ಪ್ರಾಪಂಚಿಕ ಸುಖ ಬಹಳ ಅನುಕೂಲ ಮತ್ತು ಸ್ವಲ್ಪ ವೆಚ್ಚ ಹೆಚ್ಚಿಗೆ ಆದರೂ ಅದರಲ್ಲಿಯ ಹೇತು ಅಂದಾಜಿಗಿಂತ ಹೆಚ್ಚು ಸಾಧಿಸುವದು. ವರ್ಷವಿಡೀ ಇರುವ ೧೧ ನೇ ಗುರುವಿನಿಂದ ಆಪ್ತೇಷ್ಟರು ಬೀಗಬಿಜ್ಜರು ಕುಟುಂಬದಲ್ಲಿಯ ಎಲ್ಲ ಜನರು ನಿಮ್ಮ ಹೇಳಿಕೆಯಂತೆ ನಡೆಯುವರು. ಸಹಾನುಭೂತಿಯಿಂದ ವರ್ತಿಸುವರು. ಮನೆಯಲ್ಲಿ ಧಾರ್ಮಿಕ ಮತ್ತು ಮಂಗಲ ಕೃತ್ಯಗಳು ಅನೇಕಸಲ ಸಂಭವಿಸುವವು. ಬಹಳ ವರ್ಷಗಳಿಂದ ಭೆಟ್ಟಿಯಾಗದಿದ್ದ ಮತ್ತು ಅತ್ಯಂತ ಪ್ರೀತಿಯ ಜನರ ಭೆಟ್ಟಿ ಸಹವಾಸವಾಗುವದು. ಇದರಿಂದ ಪರಸ್ಪರ ಹೃದಯ ಬಿಚ್ಚಿ ಮಾತಾಡುವದರಿಂದ ಒಂದುಬಗೆಯ ಆನಂದವಾಗುವದು. ನೋಕರಚಾಕರರನ್ನು ಇಟ್ಟುಕೊಳ್ಳುವಿರಿ. ಶಕ್ಯವಿದ್ದ ಮನೆಗಳಲ್ಲಿ ಮೊದಲಿನ ಕೆಲ ನೋಕರರು ಬೇಕಂತಲೆ ಇಲ್ಲವೆ ನಿರುಪಾಯರಾಗಿ ನೋಕರಿ ಬಿಡುವರು. ಆದರೆ ಅವರ ಸ್ಥಳಕ್ಕೆ ಬರುವ ನೋಕರರು ಅವರಿಗಿಂತ ಒಂದು ತೂಕ ಹೆಚ್ಚು ಅನುಕೂಲರಾಗುವರು. ವಾಹನ ಸುಖ ಅನುಕೂಲ ಆದರೆ ಹೊಸವಿರಲಿ ಹಳೆಯವಿರಲಿ ದುರಸ್ತಿ ವೆಚ್ಚ ಮಾತ್ರ ಬಹಳ ಹೆಚ್ಚು. ಸ್ಥಾವರ ಜಂಗಮ ಉತ್ಪನ್ನ ಸ್ವಲ್ಪ ಕಡಮೆಯಾದರೂ ಏನೂ ಅಡಚಣಿಯಿಲ್ಲದೆ ದೊರೆಯುವದು. ಹೆಂಡತಿಯ ಆರೋಗ್ಯವು ಮಾರ್ಚ ೭ ರಿಂದ ಬಹಳ ಅನುಕೂಲ ಉಳಿಯುವದು. ಮತ್ತು ಉಭಯತರಲ್ಲಿ ಯಾವಾಗಾದರೊಮ್ಮೆ ವಿತಂಡವಾದವೆದ್ದರೂ ಪರಸ್ಪರರ ಮನಸ್ಸು ಶುದ್ಧ ಉಳಿದು ಪ್ರೇಮ ಯಥಾಪ್ರಕಾರ ಇರುವದು. ಒಂದೆರಡು ತಿಂಗಳು ಅವಳು ಹೊರಗೆ ಹೋಗು

ವದರಿಂದ ಸಹವಾಸ ಸುಖ ಸಿಕ್ಕಲಾರದು. ಒಂದು ವೇಳೆ ಇನ್ನೂ ನಿಮ್ಮ ಮದುವೆಯಾಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಮಾತು ಮಾತಾಡುವಷ್ಟರಲ್ಲಿ ಅದು ಕೂಡಿ ಬರುವದು. ಮತ್ತು ಲಗ್ನ ಆಗಿಯೇ ಬಿಡುವದು. ವಧೂವರರಲ್ಲಿ ವಯಸ್ಸಿನ ಅಂತರ ಸ್ವಲ್ಪ ಹೆಚ್ಚಿಗೆ ಇರುವದು. ಆದರೆ ರೂಪ, ಸ್ವಭಾವ ಒಂದೇ ಬಗೆಯದು. ಸಾಮಾನ್ಯವಾಗಿ ಅನೇಕ ವಧುಗಳಿಗೆ ಇಮ್ಮನೆ ವರ ಸಿಕ್ಕುವ ಸಂಭವವಿದೆ.

ಮಕ್ಕಳ ಮದುವೆ ಮಾಡುವದಿದ್ದರೆ ಅದಾದರೂ ಅಷ್ಟೊಂದು ತೊಂದರೆಯಿಲ್ಲದೆ ಕೂಡಿ ಬರಬಹುದು. ಆದರೆ ಪ್ರತ್ಯಕ್ಷ ಕಾರ್ಯದಲ್ಲಿ ಮಾತ್ರ ಸ್ವಲ್ಪ ಸಿಟ್ಟು ಮೊದಲಾದ್ದು ನಡೆಯುವದು. ಅಳಿಯ ಇಲ್ಲವೆ ಸೊಸೆ ಮನಸ್ಸಿಗೆ ಬರುವವರು ದೊರೆಯುವರು. ಹುಷಾರರು ಮತ್ತು ನರ್ತನೆಯಿಂದ ಮೊದಲನೇ ಸಲವೇ ವರ್ಚಸ್ಸು ಕೂಡಿಸುವರು. ಮಕ್ಕಳಲ್ಲಿ ಪ್ರತಿಯೊಬ್ಬರ ಉನ್ನತಿ ಬಹಳಾಗುವ ಯೋಗವಿದ್ದು ಆದರಿಂದ ಸ್ವತಃ ನಿಮಗೆ ಉತ್ತಮ ಸುಖ ದೊರೆಯುವದು.

ಧಂದೆ ಕೂಲಿಯವರಿಗೆ ಈ ವರ್ಷ ಮಾಡುವ ಉದ್ಯೋಗದಲ್ಲಿ ಪರೀಕ್ಷೆಯು, ಧೈರ್ಯ ಮತ್ತು ನಿಶ್ಚಯದ ಇಲ್ಲವೆ ಸಹನಶೀಲತೆಯ ಕೆಲ ಪ್ರಸಂಗಗಳು ಒರೆಗೆ ಹತ್ತುವಂತಹವಾಗುವವು. ಆದರೆ ೧೧ನೇ ಗುರು ಅವನ್ನೆಲ್ಲ ಯಶಸ್ವಿಯಾಗಿಸುವನು ಎಂಬಲ್ಲಿ ಸಂದೇಹವಿಲ್ಲ ಧಂದೆಯವರಿಗೆ ಉತ್ಪತ್ತಿ ಅಂದಾಜು ಸಕೃದ್ದರ್ಶನದಲ್ಲಿ ಸ್ವತ: ತಮ್ಮಂತೆ ಇತರರಿಗೂ ತಪ್ಪಿದಂತೆ ಅನಿಸುವದು. ಅಂಜುಬುರುಕರು ಕೆಲ ಮಟ್ಟಿಗೆ ನಿಟ್ಟುಸುರನ್ನು ಬಿಡುವರು. ಆದರೆ ಕೊನೆಯಲ್ಲಿ ಯಾವದೊಂದು ಚಮತ್ಕಾರಿಕ ರೀತಿಯಿಂದ ಹಿಂದಿನ ಟಿಪ್ಪಣೆ ವಿಶೇಷ ಲಾಭ ಮತ್ತು ಯಶಸ್ಸಿಗೆ ಕಾರಣವಾಗಿ ಪರಿಣಮಿಸುವದು. ಈ ಮಾತು ಪ್ರತ್ಯಯಕ್ಕೆ ಬರುವದು. ಈ ಬಗೆಯ ಅನುಭವವು ಮಾರ್ಚ ೭ ರಿಂದಲೆ ಅನೇಕರಿಗೆ ಬರುವದು, ಇನ್ನು ಹಲವರಿಗೆ ಜೂನ ೧೨ ರಿಂದ ಬರಬಹುದು. ಸಣ್ಣ ದೊಡ್ಡ ಧಂದೆಯವರಿಗೆಲ್ಲ ಇದೇ ಅನುಭವ ಬರುವದು. ಸಾಲವಿದ್ದವರು ಮಾರ್ಚ ೭ ರ ವರೆಗೆ ಅಬ್ರುದ ಬಗ್ಗೆ ಬಹಳ ಕಾಳಜಿ ತೆಗೆದುಕೊಳ್ಳಬೇಕಾಗುವದು. ಆದರೆ ಅನಂತರ ಅದು ಪರಿಹಾರವಾಗುವ ಮಾರ್ಗ ಹಿಡಿದು ವರ್ಷದ ಕೊನೆಯಲ್ಲಿ ಎಷ್ಟೋ ಜನರಿಗೆ ನೀವೇ ಸಾಹುಕಾರರಾಗುವಿರಿ.

ನೋಕರಿ ಇದ್ದವರಿಗೆ ಕೆಲಸದ ತೊಂದರೆ ವಿಪರೀತವಾಗುವದು. ಓಡಿ ಹೋಗಬೇಕೆಂದು ಕೂಡ ಅನಿಸುವದು. ವರಿಷ್ಠರು ಯಾವಾಗಲೂ ಸಿಟ್ಟಿನಲ್ಲಿಯೇ ಇರುವರು. ಗ್ರೇಡು ಕೊಡುವವರ ಸಂಬಂಧದಲ್ಲಿಯಂತೂ ಅಡ್ಡ ಕೊಡ್ಡ ಒಗೆಯುವರು. ಬದಲಿಯಾಗುವದಿದ್ದರೆ ಅತ್ಯಂತ ಅನನುಕೂಲ ಸ್ಥಳಕ್ಕೆ ಬೇಕಂತಲೆ ವರ್ಗ ಮಾಡುವರು. ಆದರೆ ಮುಂದೆ ಯಾರೂ ಏನು ಹೇಳಿಕೊಳ್ಳುವ ಪ್ರಸಂಗ ಬಾರದೆ ಅನುಕೂಲ ಸ್ಥಳಕ್ಕೆ ತಾನಾಗಿಯೆ ವರ್ಗವಾಗುವದು. ಆ ಕಾಲಕ್ಕೆ ಬಹುಶಃ ಮೇಲಿನ ಗ್ರೇಡು ಸಿಕ್ಕುವದು. ಒಂದು ವೇಳೆ ಸಿಕ್ಕದಿದ್ದರೆ ಸಂಬಳವಂತೂ ಹೆಚ್ಚಾಗಿ ಆಗುವುದು. ಭಾವೀ ಉತ್ಕರ್ಷಕ್ಕೆ ಪೂರಕವಾದ ಕೆಲಸ ಕಾರ್ಯಗಳೂ ದೊರೆಯುವವು. ವಿಶೇಷತಃ ನವಂಬರ ೧೪ ರಿಂದ ಡಿಸೆಂಬರ ೬, ಜನೆವರಿ ೮ ರಿಂದ ಫೆಬ್ರುವರಿ ೨೮, ಜೂನ ೫ ರಿಂದ ಜುಲೈ ೯ ಮತ್ತು ಅಕ್ಟೋಬರ ೧ ರಿಂದ ೨೦ ಈ ಅವಧಿಯಲ್ಲಿ ಧಂದೆಯವರಿಗೆ ಬಹಳ ಅನುಕೂಲ. ಆದರೆ ಸಂಬಳ ಹೊರತು ಒಂದು ಪೈ ಕೂಡ ಹೊರಗಿನಿಂದ ಸಿಕ್ಕದಂಥ ಧಂದೆಯಲ್ಲಿ ಕೂಡ ಒಂದಿಲ್ಲೊಂದು ಬಗೆಯಿಂದ ಲಾಭವಾಗುವದು. ಎಲ್ಲರಿಗೂ ವೆಚ್ಚ ವಿಪರೀತ ಬರುವದರಿಂದ ಲಾಭದಮಾನದಿಂದ ಹಣ ಸಿಲ್ಲಕು ಬಹಳ ಕಡಿಮೆ ಉಳಿಯುವದು. ಮಿತ್ರಸುಖ ಅನುಕೂಲ. ಗುಪ್ತ ಇಲ್ಲವೆ ಅಕಸ್ಮಾತ್ ಲಾಭದ ಯೋಗವೂ ಇದೆ. ಬುದ್ಧಿ ಜೀವಿಗಳ ವ್ಯವಹಾರದಲ್ಲಿ ಪ್ರಾಪ್ತಿಯ ದೃಷ್ಟಿಯಿಂದ ಕಡಮೆಯೆನಿಸಿದರೂ ಪ್ರಗತಿ ಮತ್ತು ಲೌಕಿಕ ದೃಷ್ಟಿಯಿಂದ ಬಹಳ ಅನುಕೂಲ. ದೂರದ ಪ್ರವಾಸ ಒಂದೆರಡು ಸಲ ಮಾತ್ರ. ಆದರೆ ಅಷ್ಟು ಒಳ್ಳೆ ಸುಖಕರವಾದ ಉದ್ದೇಶವನ್ನು ಸಾಧಿಸುವಂತಹದು. ಯಾತ್ರೆಯೂ ಸಂಭವಿಸುವದು ಭೆಟ್ಟಿ ಮತ್ತು ಲೇಖನ ಕೆಲಸ ಮೊದಲು ಸ್ವಲ್ಪ ತೊಂದರೆಯೆನಿಸಿದರೂ ಕೊನೆಯಲ್ಲಿ ಬಹಳ ಉತ್ತಮ.

ದಾವೆ ಖಟ್ಲೆ ಮತ್ತು ಖಾಸಗಿ ಸ್ಪರ್ಧೆಯಲ್ಲಿ ಮಾರ್ಚ ೭ ರ ವರೆಗೆ ಪ್ರತಿಪಕ್ಷಗಳಿಗೆ ಅನಂತರ ನಿಮಗೇ ವಿಜಯ ದೊರೆಯುವದು. ಆದರೆ ಈ ಕೆಲಸದಲ್ಲಿ ವೆಚ್ಚವು ಪ್ರಮಾಣಮೀರಿ ಆಗುವದು. ಮುದ್ದತಿನ ಮೇಲೆ ಮುದ್ದತು ಬಿದ್ದು ಬಹಳ ತೊಂದರೆಯಾಗುವದು.

ಸ್ತ್ರೀಯರು ಅತ್ಯಂತ ಸುಲಭವಾಗಿ ಪ್ರಸವರಾಗುವರು. ಮತ್ತು ನೂರಕ್ಕೆ ೮೦ ರಷ್ಟು ಸ್ತ್ರೀಯರಿಗೆ ಕನ್ಯಾ ಹುಟ್ಟುವವು ಆದರೆ ಕೂಸು ಬಾಣಂತಿ ನಿರೋಗಿ ಉಳಿಯುವರು.

ಜನೇವರಿ ೮ ರಿಂದ ಮಾರ್ಚ ೧೭, ಜೂನ ೨೩ ರಿಂದ ಜುಲೈ ೯ ಮತ್ತು ಅಕ್ಟೋಬರ ೧ ರಿಂದ ಮುಂದೆ ಪರೀಕ್ಷೆಯಾಗುವ ವಿದ್ಯಾರ್ಥಿಗಳು ನಿಶ್ಚಿತವಾಗಿ ಪಾಸಾಗುವರು ಮತ್ತು ಮಾರ್ಚ ೧೭ ರಿಂದ ಎಪ್ರಿಲ ೧ ಮತ್ತು ಅಕ್ಟೋಬರ ೧ ರಿಂದ ೨೦ ಈ ಅವಧಿಯಲ್ಲಿ ಯಾರ ಪರೀಕ್ಷೆ ಆಗುವದೋ ಅವರು ವರ್ಗ ಕೂಡ ಪಡೆಯುವರು.

ಧನು

ಈ ವರ್ಷ ಈ ರಾಶಿಯವರಿಗೆ ಆನಂದ ಮತ್ತು ತ್ರಾಸ, ಸುಖ ಮತ್ತು ದುಃಖ ಹಾಗು ಉತ್ಕರ್ಷ ಮತ್ತು ಅಪಕರ್ಷ ಈ ಎರಡೂ ಬಗೆಯ ಅನುಭವ ಅಷ್ಟೇ ಪ್ರಮಾಣದಲ್ಲಿ ಬರುವವೆಂಬುದು ಸಿದ್ಧವಾದುದು

ಕಳೆದ ವರ್ಷ ಸಾಡೇಸಾತಿ ಪ್ರಾರಂಭವಾಗುವದೆಂದು ಸಾರುತ್ತ ಬಂದ ೧೨ ನೇ ಶನಿ ಈ ವರ್ಷವೂ ಅದೇ ಸ್ಥಾನದಲ್ಲಿರುವನು. ಆದುದರಿಂದ ಆರೋಗ್ಯವು ಎಷ್ಟು ಚೆನ್ನಾಗಿ ಇರಬೇಕೋ ಅಷ್ಟು ಇರುವದಿಲ್ಲ. ಆದರೆ ಈ ರಾಶಿಯ ಸ್ವಾಮಿ ಗುರು ಇಡೀ ವರ್ಷ ಶ್ರಮ ಅಂದರೆ ಬಲಿಷ್ಠ ಸ್ಥಾನದಲ್ಲಿರುವದರಿಂದ ಹಾಸಿಗೆ ಹಿಡಿದು ಮಲಗುವಷ್ಟು ತೊಂದರೆ ಮಾತ್ರ ಆಗುವದಿಲ್ಲ ಯಾವದೇ ವಿಷಯದಲ್ಲಿ ಶ್ರಮ ಇಲ್ಲವೆ ವಿಚಾರದ ಅತಿರೇಕ ಮಾಡದೆ ಜೂನ ೧೨ ರಿಂದ ಜುಲೈ ೩೦ರ ವರೆಗೆ ಆಹಾರವಿಹಾರಗಳಲ್ಲಿ ಹೆಚ್ಚು ಜಪ್ಪಿಸಿಕೊಂಡು ಇರಬೇಕು. ಕ್ಲೇಶಪರಿಹಾರಾರ್ಥ ಶನಿಯ ೨೩ ಸಾವಿರ ಮತ್ತು ಮಂಗಳನ ೧೦ ಸಾಹಿರ ಜಪ ಅವಶ್ಯ ಮಾಡಬೇಕು ಉಳಿದ ವಿಷಯಗಳಲ್ಲಿ ಈ ವರ್ಷ ಸುಖಕ್ಕೆ ಕಷ್ಟಸಾಧ್ಯ ಯಶಸ್ಸು ಕೊಡುವಂತಹದಿದೆ. ಕುಟುಂಬದಲ್ಲಿಯು ಜನರ ಆರೋಗ್ಯ ಅನುಕೂಲವಿದ್ದರೂ ಮತ್ತೈಕ್ಯ ಉಳಿಯುವದಿಲ್ಲ. ಮಾರ್ಚ೭ರಿಂದ ಕಲಹದ ಕಲಿ ನಿಮ್ಮನ್ನು ಮುತ್ತುವನು. ಪ್ರತಿಯೊಬ್ಬ ದುರಾಗ್ರಹಕ್ಕೆ ಬಲಿಬಿದ್ದು ಅದು ಮತ್ತಷ್ಟು ಹೆಚ್ಚುವದು ಪ್ರತಿಯೊಬ್ಬನ ಧ್ಯೇಯವೊಂದೇ ಆದರೆ ಸಾಧನೆಯ ಮಾರ್ಗ ಮಾತ್ರ ಬಹಳ ಭಿನ್ನಭಿನ್ನವುಳಿಯುವದು. ಆದರೂ ಒಂದು ಕುಟುಂಬವೂ ವಿಭಕ್ತವಾಗಿ ಒಡೆದು ಹೋದದ್ದು ಸಹಸಾ ಕಂಡುಬರುವದಿಲ್ಲ. ಮನೆಯಲ್ಲಿ ಹೊರಗಿನ ಆಪ್ತರು ಮೇಲಿಂದಮೇಲೆ ಬರುವರಲ್ಲದೆ ಕೆಲಸವಿಲ್ಲದಿದ್ದರೂ ಬಹಳ ದಿನ ಇಲ್ಲಿಯೇ ತಳವೂರುವರು. ಮನೆಯಲ್ಲಿಯ ಪ್ರತಿಯೊಬ್ಬರು ದೊಡ್ಡತನ ತೋರಿಸುವದಕ್ಕಾಗಿ ಮನಸ್ಸಿಗೆ ಬಂದಷ್ಟು ವೆಚ್ಚ ಮಾಡುವರು ಸ್ಥಾವರ ಜಂಗಮ ಉತ್ಪನ್ನ ಮಾತ್ರ ವಿಶೇಷ ಯಾತಾಯತವಾಗದೆ ಅಂದಾಜಿನಷ್ಟು ದೊರೆಯುವದು. ಮನೆಯಲ್ಲಿಯ ನೋಕರರು ಹೆಚ್ಚು ಪ್ರೇಮದಿಂದ ವಿಶ್ವಾಸದಿಂದ ವರ್ತಿಸುವರು. ಅನೇಕರು ಜನ್ಮವಿಡೀ ನೆನಪಿನಲ್ಲಿ ಉಳಿಯುವಷ್ಟು ಸ್ವಾಮಿನಿಷ್ಠೆಯಿಂದ ಇರುವಂಥ ಘಟನೆಗಳು ಸಂಭವಿಸುವವು. ವಾಹನಗಳು ಒಳ್ಳೆ ಕೆಲಸ ಕೊಡುವವು ದನಕರುಗಳು ನಿರೋಗಿ ಉಳಿದು ಗೊತ್ತು ಪಡಿಸಿದ ಕೆಲಸದಲ್ಲಿ ಉಪಯೋಗ ಬೀಳುವವು ಅದರಲ್ಲಿಯೂ ನವಂಬರ ೧೪ ರ ವರೆಗೆ ಅನಂತರ ಡಿಸೆಂಬರ ೬ ರಿಂದ ಜನೆವರಿ ೯ ಫೆಬ್ರುವರಿ ೭ ರಿಂದ ೨೮ ಮಾರ್ಚ ೧೭ ರಿಂದ ಎಪ್ರಿಲ ೧೧, ಜೂನ ೨೩ ರಿಂದ ಜುಲೈ ೯ ಮತ್ತು ಅಕ್ಟೋಬರ ೧ ರಿಂದ ಮುಂದಿನ ಕಾಲ ಪ್ರಾಪಂಚಿಕ ದೃಷ್ಟಿಯಿಂದ ಬಹಳ ಸಮಾಧಾನವೆನಿಸುವದು ಈ ವರ್ಷ ಸ್ತ್ರೀ ಸುಖ ಕೂಡ ನವಂಬರ ೧೪ ರಿಂದ ದಿಸೆಂಬರ ೬ ಜೂನ ೫ ರಿಂದ ೨೩ ಮತ್ತು ಜುಲೈ ೯ ರಿಂದ ೨೬ ಈ ಕಾಲವನ್ನು ಬಿಟ್ಟು ಉಳಿದ ವೇಳೆಯಲ್ಲಿ ಮನಸ್ಸಿನಂತೆ ದೊರೆಯುವದು. ಏಕೆಂದರೆ ಮೇಲೆ ಹೇಳಿದ ಕಾಲವು ಅವಳ ಆರೋಗ್ಯಕ್ಕೆ ಅಷ್ಟೊಂದು ಅನುಕೂಲವಿಲ್ಲ. ನಿಮ್ಮ ವಿವಾಹವಿನ್ನೂ ಆಗಿರದಿದ್ದರೆ ಈ ವರ್ಷ ಮಾಡಿಕೊಳ್ಳುವ ಇಚ್ಛೆ ಇದ್ದರೆ ಅನೇಕ ಅಡಚಣೆಗಳು ಮೊದಲು ಬರುವವು ಮತ್ತು ಅನೇಕ ಹಿತಶತ್ರುಗಳು ಅಡ್ಡಗಾಲು ಹೊಡೆಯುವ ಪ್ರಯತ್ನ ಮಾಡುವರು. ಇಷ್ಟಾಗಿಯೂ ಒಂದೊಮ್ಮೆ ಕೂಡಿ ಬಂದರೂ ಈ ವರ್ಷ ಲಗ್ನ ಆಗಿಯೇ ಬಿಡುವದೊ ಇಲ್ಲವೊ ಎಂದು ಸ್ಪಷ್ಟವಾಗಿ ಹೇಳಲಿಕ್ಕೆ ಬರುವದಿಲ್ಲ. ಈ ಸಂಬಂಧದಲ್ಲಿ ಅನುಕೂಲ ಪ್ರತಿಕೂಲ ಗ್ರಹಗಳಿರುವವು. ದೇವದಯೆಯಿಂದ ಒದಗಿ ಬಂದರೆ ವರವಿದ್ದರೆ ವಧು ವಧುವಿದ್ದರೆ ವರ ಸ್ವತಃಕ್ಕಿಂತ ರೂಪ ಮತ್ತು ಗುಣದಿಂದ ಹೆಚ್ಚು ಸರಸ ಇರುವದು.

ಈ ವರ್ಷ ಮಕ್ಕಳ ವಿವಾಹ ಮಾಡುವದಿದ್ದರೆ ಆದರಲ್ಲಿಯೂ ಮೇಲಿನ ಅನುಭವವೇ ಬರುವದು ಆದರೆ ಅಂತರವಿಷ್ಟೇ. ಒಮ್ಮೆ ಲಗ್ನ ಗೊತ್ತಾಯಿತೆಂದರೆ ಸುಸೂತ್ರ ಆಗಿಯೇ ಬಿಡುವದು. ನವಂಬರ ೨೧ರಿಂದ ಜನೆವರಿ ೧೭, ಮಾರ್ಚ ೭ರಿಂದ ಎಪ್ರಿಲ ೨೩ ಮತ್ತು ಸಪ್ಟಂಬರ ೧೫ರಿಂದ ಮುಂದೆ ಈ ಅವಧಿಯಲ್ಲಿ ಅದು ಒದಗಿ ಬರುವ ಯೋಗ ಹೆಚ್ಚು ಬಲಿಷ್ಠವಿದೆ. ಅಳಿಯ ಇಲ್ಲವೆ ಸೊಸೆ ಒಟ್ಟಾರೆ ಅನುಕೂಲ ದೊರೆಯುವರು. ಮಕ್ಕಳ ಉನ್ನತಿಗೆ ಈ ವರ್ಷ ಅಷ್ಟು ಅನುಕೂಲಕಾಲ ಇರುವದಿಲ್ಲ. ಸರ್ವಸಾಧಾರಣ ಅನುಕೂಲವಿರುತ್ತದೆ. ಆದರೆ ಮಾರ್ಚ ೭ರ ನಂತರ ಮತ್ತು ವಿಶೇಷತಃ ಜೂನ ೧೨ರಿಂದ ಜುಲೈ ೩೦ ಈ ಅವಧಿಯಲ್ಲಿ ಅವಳ ಪ್ರಕೃತಿಗೆ ಅಲ್ಪಸ್ವಲ್ಪ ತೊಂದರೆಯೆನಿಸಿ, ನಿಮ್ಮಿಬ್ಬರಲ್ಲಿ ಕೂಡುವದೂ ಅಷ್ಟಕ್ಕಷ್ಟೆ.

ಧಂದೆ ಕೂಲಿಯವರಿಗೆ ಈ ವರ್ಷ ಒಳ್ಳೆಲಾಭದಾಯಕವಿದೆ ಆಕಸ್ಮಿಕ ಹಾನಿ ಮತ್ತು ಭಯಂಕರ ವೆಚ್ಚದ ಯೋಗವಿದೆ. ಧಂದೆಯುವರಿಗೆ ಒಳ್ಳೇ ತೇಜಿ ಇರುವದು. ಅಂದಾಜಿಗಿಂತ ಹೆಚ್ಚು ಉತ್ಪನ್ನ ಬರುವದು. ಸಣ್ಣ ದೊಡ್ಡ ಯಾವದೇ ಧಂದೆ ಇರಲಿ, ಅದರಲ್ಲಿ ಪ್ರಾವೀಣ್ಯ ಮತ್ತು ಸರಳತನದ ಬಗ್ಗೆ ಲೌಕಿಕ ಸಂಪಾದಿಸುವಿರಿ. ಸಹಾಯಕರಾರೂ ಸಾಕಷ್ಟು ದೊರೆಯುರು. ಆದರೆ ವಿಪರೀತ ವೆಚ್ಚವಾಗುವದು: ಇಲ್ಲವೆ ದೈವೀಪ್ರಕೋಪದಿಂದಲೂ ಆಕಸ್ಮಿಕಹಾನಿಯಾಗುವದು. ಅದರಿಂದ ಸಂಪಾದಿಸಿದ್ದೆಲ್ಲ ಹೊರಟು ಹೋಗುವದು ಇಷ್ಟೇ ಅಲ್ಲದೆ ದುರ್ದೈವಿಗಳೂ ಕೆಲವರಿದ್ದಾರೆ. ಅವರು ತಮ್ಮ ಸಂಗ್ರಹವನ್ನೂ ವ್ಯಯಿಸಬೇಕಾಗುವದು. ಮಾರ್ಚ ೭ ರಿಂದ ಎಪ್ರಿಲ ೨೩ ರ ಅವಧಿಯಲ್ಲಿ ಪ್ರತಿಯೊಬ್ಬನು ಅತ್ಯಂತ ಜಾಗ್ರತೆಯಿಂದ ಇರಬೇಕು. ಕೇವಲ ಲಾಭದ ದೃಷ್ಟಿಯಿಂದ ನವಂಬರ ೧೯ರಿಂದ ಡಿಶೆಂಬರ ೧೪, ಜನೆವರಿ ೭ರಿಂದ ಮಾರ್ಚ ೨೦ ಮತ್ತು ಜುಲೈ ೨೦ ರ ನಂತರ ಕಾಲ ಬಹಳ ಉತ್ತಮವಿದೆ.

ನೋಕರರು ಸಹ ತಮ್ಮ ತಮ್ಮ ಕೆಲಸ ಬಹಳ ದಕ್ಷತೆಯಿಂದ ಮಾಡಬೇಕು ಮತ್ತು ಮಾಡಿದ್ದನ್ನು ಚನ್ನಾಗಿ ರಕ್ಷಿಸಿಕೊಂಡಿರಬೇಕು. ಏಕೆಂದರೆ ತಪ್ಪಾಗುವ ಇಲ್ಲವೆ ಇಟ್ಟದ್ದು ಇಟ್ಟಲ್ಲಿಯೇ ನಾಶವಾಗುವ ಸಂಭವ ಬಹಳ ಇದೆ. ಅಲ್ಲದೆ ಅಷ್ಟಿಷ್ಟಕ್ಕಾಗಿ ವರಿಷ್ಠರು ಸಿಟ್ಟುಮಾಡುವ ಸಂಭವವಿದೆ. ಈ ಬಗೆಯ ಅಂಜಿಕೆಯೂ ಮೇಲಿಂದ ಮೇಲೆ ಇರುವದು. ಯಾವದೇ ಒಂದು ಕೆಲಸದಲ್ಲಿ ನಿಮ್ಮ ಸಂಬಂಧವೇನೂ ಇಲ್ಲದಿದ್ದರೂ ಅದು ಕೆಟ್ಟದ್ದರ ಬಗ್ಗೆ ನಿಮ್ಮನ್ನು ಜವಾಬದಾರರನ್ನಾಗಿ ಹಿಡಿಯುವರು. ಆದರೆ ಅಷ್ಟೇ ಶುಭ ಗ್ರಹಯೋಗದಿಂದ ನೋಕರಿಗೆ ಸ್ವಲ್ಪೂ ಧಕ್ಕೆ ಇಲ್ಲ. ಮೇಲಿನ ಗ್ರೇಡು ಸಿಕ್ಕದಿದ್ದರೂ ಇದ್ದ ಆಸನ ಮಾತ್ರ ಕಾಯಂ ಉಳಿಯುವದು. ಬಲಿಷ್ಠ ಯೋಗವಿದ್ದವರಿಗೆ ಜೂನ ೨೩ ರಿಂದ ಜುಲೈ ೯ ಇಲ್ಲವೆ ಅಕ್ಟೋಬರ ೧ ರಿಂದ ೨೦, ಈ ಅವಧಿಯಲ್ಲಿ ಮೇಲಿನ ಗ್ರೇಡು ದೊರೆಯುವದು, ಬದಲಿಯಾಗುವದಿದ್ದರೆ ಅತ್ಯಂತ ಅನುಕೂಲ ಸ್ಥಳಕ್ಕೆ ಬೇಕೆಂತಲೆ ವರ್ಗ ಮಾಡುವರು. ಏನೂ ಪ್ರಯತ್ನಮಾಡದೆ ದೇವರ ಮೇಲೆ ವಿಶ್ವಾಸವಿಟ್ಟು ಸ್ವಸ್ಥ ಕುಳಿತರೂ ಅನುಕೂಲ ಸ್ಥಳಕ್ಕೆ ತಾನಾಗಿಯೇ ವರ್ಗವಾಗುವದು. ಈ ರೀತಿ ಲಹರಿ ದೈವ ಯೋಗವಿದೆ. ಕೈಕೆಳಗಿನವರು ಒಳ್ಳೇರೀತಿಯಿಂದ ವರ್ತಿಸುವರು. ಈ ವರ್ಷ ಆಭರಣಾದಿಗಳನ್ನು ಸಂಗ್ರಹಿಸುವ ಭರಕ್ಕೆ ಬೀಳದೆ ಸ್ಥಾವರ ಸಂಗ್ರಹ ಮಾಡಬಹುದು. ದೂರದ ಪ್ರವಾಸ

ಸ್ವಲ್ಪ ಸಂಭವಿಸುವದು ಆದೂ ಅಷ್ಟೊಂದು ಸುಖದ್ದಲ್ಲ. ಆದರೆ ಭೆಟ್ಟಿಮತ್ತು ಎಲ್ಲಬಗೆಯ ಲೇಖನ ಕೆಲಸ ಬಹಳ ಉತ್ತಮ. ಮಿತ್ರಸುಖ ಅನುಕೂಲ. ಯಾವದೇ ಬಗೆಯ ಅತಿ ಸಾಹಸದ ಕೆಲಸಗಳನ್ನು ಪ್ರಾರಂಭ ಮಾಡಬಾರದು.

ದಾವೆ ಖಟ್ಲೆ ಇದ್ದರೆ ಅವುಗಳಲ್ಲಿ ಸ್ವಲ್ಪ ಯಶಸ್ಸು ದೊರೆಯುವದು. ಆದರೆ ಬೆಲೆ ಇಲ್ಲವೆ ಅದಕ್ಕಾಗಿ ಮಾಡಿದ, ಸಹಿಸಿದ ತೊಂದರೆ ಇವುಗಳ ದೃಷ್ಟಿಯಿಂದ ಬಹಳ ಕಡಮೆ. ನಿಮಗಿಂತ ಪ್ರತಿಪಕ್ಷಿಗಳ ಜೋರು ಮತ್ತು ಉತ್ಕರ್ಷ ಈ ವರ್ಷ ಮಾರ್ಚ ೭ರ ನಂತರ ಹೆಚ್ಚಾದದ್ದು ಕಂಡು ಬರುವದು. ನಿಮ್ಮಲ್ಲಿ ಒಡಂಬಡಿಕೆ ಆಗಲು ಮಾತ್ರ ಗ್ರಹಮಾನ ಬಹಳ ಅನುಕೂಲವಿದೆ.

ಈ ರಾಶಿಯ ಗರ್ಭಿಣಿ ಸ್ತ್ರೀಯರು ಮಾರ್ಚ ೭ ರೊಳಗಾಗಿ ಅತ್ಯಂತ ಸುಲಭವಾಗಿ ಹಡೆಯುವರು. ಆದರೆ ಮುಂದೆ ಮಾತ್ರ ಅಲ್ಪ ಸ್ವಲ್ಪ ಕಷ್ಟವಾಗುವ ಸಂಭವವಿದೆ. ಆದರೆ ಕೂಸು ಬಾಣಂತಿಯರ ಜೀವಕ್ಕೆ ಅಪಾಯದ ಯೋಗ ಸ್ವಲ್ಪವೂ ಇರುವದಿಲ್ಲ. ಪುತ್ರನಾದರೆ ಆಗುವ ಕಷ್ಟ ಕನ್ಯೆ ಹುಟ್ಟಿದರೆ ಆಗುವದಿಲ್ಲ. ಆದರೆ ಬಹುಶಃ ಎಲ್ಲರಿಗೆ ಗಂಡು ಹುಟ್ಟುವ ಯೋಗವೇ ಬಹಳವಿದೆ.

ಮಾರ್ಚ ೭ ರೊಳಗಾಗಿ ಪರೀಕ್ಷೆ ಆದವರು ನಿಶ್ಚಯವಾಗಿ ತೇರ್ಗಡೆ ಹೊಂದುವರು. ಅಲ್ಲದೆ ಎಪ್ರಿಲ ೧ರಿಂದ ಜೂನ ೫, ಜೂನ ೨೩ರಿಂದ ಜುಲೈ ೯ ಮತ್ತು ಜುಲೈ ೨೬ರಿಂದ ಅಕ್ಟೋಬರ ೧, ಈ ಅವಧಿಯಲ್ಲಿ ಪರೀಕ್ಷೆ ಆದವರಿಗೆ ಪಾಸಾಗುನಷ್ಟೇ ಗುಣಗಳು ಬಿದ್ದು ಪಾಸಾಗುವರು.

ಮಕರ

ಒಟ್ಟಾರೆ ಈ ವರ್ಷ ಕೆಲ ಕಿರಕಳ ವಿಷಯಗಳೆನ್ನು ಬಿಟ್ಟರೆ ಉಳಿದ ಎಲ್ಲ ವಿಷಯಗಳಲ್ಲಿ ಬಹಳ ಸುಖಕರ ಮತ್ತು ಉತ್ಕರ್ಷದ್ದಾಗಿದೆಂಬುದು ನಿಶ್ಚಿತ.

ಈ ರಾಶಿಯ ಸ್ವಾಮಿಯಾದ ಶನಿ ೧೧ನೆಯವ, ಮತ್ತು ಈ ರಾಶಿಯನ್ನು ಪೂರ್ಣವಾಗಿ ನೋಡುವ ೯ನೇ ಗುರು ಇವರಿಂದ ಪ್ರಕೃತಿ ಸದಾ ಆರೋಗ್ಯದಿಂದ ಇರುವದು. ಆದರೆ ಮೂಲತಃ ಯಾರ ಪ್ರಕೃತಿ ಅಷ್ಟಕ್ಕಷ್ಟೇ ಇರುವದೋ ಅವರ ಆರೋಗ್ಯ ಮಾತ್ರ ನವಂಬರ ೨೧ರ ವರೆಗೆ ಮತ್ತು ಜುಲೈ ೩೦ ರಿಂದ ಸಪ್ಟಂಬರ ೧೫ ರ ವರೆಗಿನ ಕಾಲದಲ್ಲಿ ಅಲ್ಪ ಸ್ವಲ್ಪ ಕೆಡುವದು ಹೀಗೆ ಎನಿಸುವದು.

ಉಳಿದ ದೃಷ್ಟಿಯಿಂದ ಈ ವರ್ಷ ಸುಖಸಮಾಧಾನವುಳಿಯುವದು. ಕುಟುಂಬದಲ್ಲಿ ಎಲ್ಲ ಜನರು ನವಂಬರ ೨೧ ರಿಂದ ಒಮ್ಮನಸ್ಸಿನಿಂದ ನಡೆಯುವರು. ಪ್ರಿಯ ಆಪ್ತರ ಮತ್ತು ಮಿತ್ರರ ಸಹವಾಸ ಮೇಲಿಂದ ಮೇಲೆ ಉಂಟಾಗುವದು. ಮನೆಯಲ್ಲಿ ಮಹತ್ವದ ಮತ್ತು ಜನರಲ್ಲಿ ಕುತೂಹಲ ಹುಟ್ಟಿಸುವಂಥ ಕೆಲ ಧಾರ್ಮಿಕ ಕೃತ್ಯಗಳು ಮಾಡಲ್ಪಡುವವು. ಅನೇಕರಿಗೆ ಸ್ವಗ್ರಾಮದಲ್ಲಿ ಪ್ರಾಂತದಲ್ಲಿ ಬಹು ಮರ್ಯಾದೆಯಾಗುವದು ಅದರಂತೆ ಅನೇಕರು ಸಣ್ಣ ದೊಡ್ಡ ಸ್ಥಾವರ ಇಲ್ಲವೆ ಬಹಳ ಬೆಲೆಯ ಜಂಗಮ ಸಂಗ್ರಹವನ್ನು ಸಹಸಾ ಮಾಡಬಲ್ಲರು. ನೋಕರರೆಲ್ಲ ಏಕನಿಷ್ಠ ಉಳಿಯುವರು ಪ್ರತಿಯೊಂದು ಕೆಲಸದಲ್ಲಿ ಮನಃಪೂರ್ವಕ ಪ್ರಯತ್ನಮಾಡುವರು, ಮನೆ ತಮ್ಮದೇಯೆಂದು ತಿಳಿದು ಹೆಚ್ಚು ಕಾಳಜಿಯಿಂದ ಕೆಲಸಮಾಡುವರು. ಮತ್ತು ನೀವಾದರೂ ಮುಖ್ಯ ವಿಷಯಗಳಲ್ಲಿ ಹಿತಮಾಡುವಿರಿ. ವಾಹನಗಳು ವ್ಯವಸ್ಥಿತ ಉಳಿದು ಯಾವದೇ ಬಗೆಯ ಅಪಘಾತ ಇಲ್ಲವೆ ಹಾನಿಯಾಗಲಾರದು. ಸ್ಥಾವರ ಜಂಗಮ ಆಸ್ತಿಯಲ್ಲಿ ಬಹಳ ಸುಧಾರಣೆಯನ್ನು ಮಾಡುವಿರಿ. ಮತ್ತು ಹಿಂದಿನಕಿಂತ ಅವುಗಳ ಉತ್ಪನ್ನವೂ ಕೆಲಮಟ್ಟಿಗೆ ಹೆಚ್ಚುವದು ಊರಲ್ಲಿ ನಿಮ್ಮ ವರ್ಚಸ್ಸು ಚೆನ್ನಾಗಿ ಉಳಿಯುವದು ಮತ್ತು ಅನೇಕ ಸಂದರ್ಭಗಳಲ್ಲಿ ನೀವು ಧುರೀಣತ್ವವನ್ನು ವಹಿಸಬೇಕಾಗುವದು. ಬಹುಮತ ನಿಮಗೆ ಅನುಕೂಲವಾಗುವದು. ಎಷ್ಟೊಂದು ಕಠಿನ ಕೆಲಸವಿದ್ದರೂ ಅಲ್ಪಾಯಾಸದಿಂದ ಪೂರ್ತಿಯಾಗುವಂತೆ ಲೋಕಸಹಾಯ ಸಿಕ್ಕುವದು. ದನಕರುಗಳು ನಿರೋಗಿ ಉಳಿದು ಅವುಗಳ ಉಪಯುಕ್ತಸುಖ ಸಿಕ್ಕುವದು. ವಿಶೇಷವಾಗಿ ಜನೇವರಿ ೧೭ ರಿಂದ ಜೂನ ೧೨ ಮತ್ತು ಸಪ್ಟಂಬರ ೧೫ರಿಂದ ಮುಂದೆ ಈ ಸುಖ ಮತ್ತಷ್ಟು ಹೆಚ್ಚುವದು. ಉತ್ಪಾದನೆಯೂ ಹೆಚ್ಚಾಗುವದು. ಸ್ತ್ರೀಸುಖಕ್ಕೆ ಈ ವರ್ಷ ಒಳ್ಳೆ ಅನುಕೂಲವಿದೆ. ಆದರೆ ಕೆಲ ವಿಷಯಗಳಲ್ಲಿ ಕೇವಲ ಅವಳ ಆಗ್ರಹಕ್ಕಾಗಿ ನಿಮ್ಮ ಮನಸ್ಸಿನ ವಿರುದ್ಧ ವರ್ತಿಸುವ ಮತ್ತು ವೆಚ್ಚಮಾಡುವ ಪ್ರಸಂಗ ಬರುವದು. ಅವಳ ಆರೋಗ್ಯ ಜೂನ ೧೨ ರಿಂದ ಜುಲೈ ೩೦ ರ ಒಳಗಾಗಿ ಸಣ್ಣದೊಂದು ಅಪಘಾತ ಇಲ್ಲವೆ ಸೂಜಿ ಟಾಚಣಿಯಂಥ ಸಣ್ಣದೊಂದು ವಸ್ತು ಚುಚ್ಚಿ ಸ್ವಲ್ಪ ಕೆಡುವ ಸಂಭವವಿದೆ. ಆದರೆ ಉಳಿದ ಸಮಯದಲ್ಲಿ ಅದು ಅನುಕೂಲವೇ ಉಳಿಯುವದು. ಇನ್ನೂ ನಿಮ್ಮ ಮದುವೆಯಾಗಿರದಿದ್ದರೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಖಾತ್ರಿಯಿಂದ ಆಗುವದು. ವಧೂವರರು ರೂಪ ಗುಣಗಳಿಂದ ಪೂರ್ಣ ಅನುರೂಪವಿರುವರು. ಒಂದು ವೇಳೆ ನಿಮಗಿಂತಲೂ ಗುಣವಂತೆಯಾಗಿರುವಳು.

ಅದರಂತೆ ಮಕ್ಕಳ ಮದುವೆ ಮಾಡುವದಿದ್ದರೆ ಆದಾದರೂ ಕೂಡಲೆ ನಿಶ್ಚಯವಾಗುವದು ಮತ್ತು ಗೊತ್ತುಪಡಿಸಿದ ತಿಥಿಗೆ ನಿರ್ವಿಘ್ನದಿಂದ ಆಗುವದು. ಮಾರ್ಚ ೭ ರ ನಂತರ ಯಾರ ಮದುವೆ ಆಗುವದೋ ಅವರಿಗೆ ಕೊಡತಕ್ಕೊಳ್ಳುವದೂ ಮನಸ್ಸಿನಂತೆ ಮಾಡಲಿಕ್ಕೆ ಬರುವದು. ಸೊಸೆ ಇಲ್ಲವೆ ಅಳಿಯ ಪ್ರಕೃತಿಯಿಂದ ಸ್ವಲ್ಪ ಸೂಕ್ಷ್ಮ ಆದರೆ ಗುಣದಿಂದ ಅಪೇಕ್ಷೆಗಿಂತ ಹೆಚ್ಚು ಚನ್ನಾಗಿ ಇರುವರು. ಮಕ್ಕಳ ಉತ್ಕರ್ಷಕ್ಕೆ ಮಾರ್ಚ ೭ ರ ನಂತರ ಬಹಳ ಅನುಕೂಲವಿದೆ. ಕಠಿಣವೆಂದು ತೋರುವ ವಿಷಯಗಳು, ಸುದೈವವೆನ್ನಿರಿ ದೈವ ಕೃಪೆಯೆನ್ನಿರಿ, ಯಾತರಿಂದಲಾದರೂ ಬಹುಬೇಗ ಸಾಧ್ಯವಾಗುವವು. ನಿಮ್ಮವರಲ್ಲಿ ಮತ್ತೈಕ್ಯವೂ ಆಗುವದು. ಆದರೆ ಎಪ್ರಿಲ ೨೩ ರವರೆಗೆ ಅವರಲ್ಲಿ ಯಾರೊಬ್ಬರಿಗೆ ಸ್ವಲ್ಪ ಕಾಯಿಲೆಯ ಅಂಜಿಕೆ ಇದೆ. ಅದರಂತೆ ಮಾರ್ಚ ೭ ರ ನಂತರ ನಿಮ್ಮ ತಾಯಿ ತಂದೆಗಳ ಪ್ರಕೃತಿ ಸ್ವಲ್ಪ ಕೆಡುವ ಸಂಭವವಿದೆ. ಅಂದಿನಿಂದ ನೆರೆಯವರು ಅಂತಃಸ್ಥ ದ್ವೇಷದಿಂದ ಮೊದಲಿನಷ್ಟು ಸಹೃದಯದಿಂದ ವರ್ತಿಸುವದಿಲ್ಲ. ಅನೇಕರ ಮನೆಗಳಲ್ಲಿ ಪಿಶಾಚ ಬಾಧೆಯ ಅಂಜಿಕೆಯೂ ಇದೆ.

ಧಂದೆ ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲವಿದೆ. ಸ್ವತಂತ್ರ ಧಂದೆಯವರಿಗಂತೂ ಯಕ್ಷ ಪ್ರಸನ್ನನಾದಂತಾಗುವದು. ಧಂದೆ ಎಂಥದೇ ಇರಲಿ, ಎಷ್ಟು ಸಣ್ಣ ಅಥವಾ ದೊಡ್ಡದೆ ಇರಲಿ ಮೊದಲಿಗಿಂತ ಇಮ್ಮಡಿ ಮುಮ್ಮಡಿ ಹೆಚ್ಚುವದು. ಕೆಲಕಡೆ ಅದರ ಉಪಶಾಖೆಗಳನ್ನು ತೆರೆಯುವ ಸಂಭವವಿದೆ. ಬುದ್ಧಿಜೀವಿ ಧಂದೆಯಿದ್ದರೆ ಕೆಲಸದಲ್ಲಿ ಕ್ಷಣಹೊತ್ತು ಕೂಡ ಸವಡು ಸಿಕ್ಕುವುದಿಲ್ಲ. ವ್ಯಾಪಾರವಿರಲಿ, ಬೌದ್ಧಿಕ ಧಂದೆ ಇರಲಿ ಅದರಲ್ಲಿಯ ಪ್ರಾವೀಣ್ಯದ ಜಾಹೀರಾತು ಸರಳತನಕ್ಕಿಂತ ಹೆಚ್ಚು ಆದುದು ಕಂಡುಬರುವದು. ಧಂದೆಯಲ್ಲಿ ತನುಮನದಿಂದ ಸಹಾಯ ಮಾಡಲು ಅನೇಕ ಜನರು ಮುಂದೆ ಬರುವರು.

ನೋಕರರಿಗೆ ಕೂಡ ಈ ವರ್ಷ ಅತ್ಯಂತ ಅನುಕೂಲವಿದೆ. ವರಿಷ್ಠರು ನಿಮಗೆ ನಿಮ್ಮ ಯೋಗ್ಯತೆ ಮೀರಿ ಹೆಚ್ಚಿನ ಮಹತ್ವದ ಕೆಲಸ ಕೊಡುವರು. ಮತ್ತು ಅದರಿಂದ ಕೈಕೆಳಗಿನವರು ಚಾಚೂ

ಎನ್ನದೆ ವಿನಮ್ರರಾಗುವರು. ಮೇಲಿನ ಗ್ರೇಡು ಯಾರಿಗೆ ಸಿಗಬೇಕಾಗಿದೆಯೋ ಅವರಿಗಂತೂ ಸಿಕ್ಕೇಸಿಕ್ಕುವದು. ಹಾಗಿಲ್ಲದಿದ್ದವರಿಗೆ ಕೂಡ ಕಾಯಂವಾಗದಿದ್ದರೂ ತಾತ್ಪೂರ್ತಿಕವಾದರೂ ಮೇಲಿನ ಗ್ರೇಡು ಸಿಕ್ಕುವದು. ಸಂಬಳದ ಹೊರತು ಇತರ ದೃಷ್ಟಿಯಿಂದಲೂ ತುಂಬ ಹಣ ಸಿಕ್ಕುವದು. ಬದಲಿಯಾಗುವ ಶಾಖೆಯಲ್ಲಿ ನೀವು ಇದ್ದರೆ ಸ್ವಲ್ಪ ಅನನುಕೂಲ ಸ್ಥಳಕ್ಕಾದರೂ ನಿಮ್ಮ ಅಧಿಕಾರ ಹೆಚ್ಚುವ ಸ್ಥಳಕ್ಕೆ ವರ್ಗವಾಗುವದು. ವಿಶೇಷತಃ ನವಂಬರ ೨೧ ರಿಂದ ಮಾರ್ಚ ೭ ಮತ್ತು ಮುಂದೆ ಜೂನ ೧೨ ರ ನಂತರದ ಕಾಲವು ಲಾಭಕ್ಕೆ ವಿಶೇಷ ಅನುಕೂಲವಾಗುವದು. ಒಂದೆರಡು ಕೆಲಸಗಳಿಂದ ನಿಮ್ಮ ಕೀರ್ತಿ ಹಬ್ಬುವದು. ಯಾತ್ರೆಯನ್ನು ಮಾಡುವಿರಿ. ಮನೆಯಲ್ಲಿ ಮುಂಜಿವೆ ಇಲ್ಲವೆ ಮದುವೆಯಂಥ ಮಂಗಲ ಕಾರ್ಯಗಳು ಜರಗುವವು. ಅನೇಕ ಸಲ ದೂರದ ಪ್ರವಾಸವಾಗುವದು. ಅದರ ಉದ್ದೇಶವು ಚೆನ್ನಾಗಿ ಸಾಧಿಸುವದು. ಪ್ರತ್ಯಕ್ಷ ಭೆಟ್ಟಿಯ ಕೆಲಸಗಳಿಗಿಂತ ಲೇಖನ ಕೆಲಸ ಹೆಚ್ಚು ಅನುಕೂಲ.

ದಾವೆ ಖಟ್ಲೆ ಸುರು ಇದ್ದರೆ ಅದರಲ್ಲಿ ಮಾರ್ಚ ೭ ರ ವರೆಗೆ ಯಶಸ್ಸು ಸಿಕ್ಕುವ ಖಾತ್ರಿಯಿದ್ದಷ್ಟು ಮುಂದೆ ಇರುವದಿಲ್ಲ. ಖಾಸಗಿ ಸ್ಪರ್ಧೆ ಮಾತ್ರ ಮೊದಲಿನಂತೆಯೇ ಮುಂದೆ ನಡೆಯುವದು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರು ಮಾರ್ಚ ೭ ರೊಳಗಾಗಿ ಹಡೆದರೆ ಸ್ವಲ್ಪ ಕಷ್ಟವಾಗುವದು. ಆದರೆ ಸ್ವತಃ ಅವರಿಗೆ ಇಲ್ಲವೆ ಹುಟ್ಟುವಮಗುವಿಗೆ ಜೀವದ ಭಯ ಸ್ವಲ್ಪೂ ಇಲ್ಲ. ಅದರ ಮುಂದೆ ಹಡೆಯುವ ಸ್ತ್ರೀಯರ ಭಾಗ್ಯ ತೆರೆಯುವದು. ಅವರು ಸುಲಭವಾಗಿ ಹಡೆಯುವರಲ್ಲದೆ ಗಂಡು ಹಡೆಯುವರು. ಈ ರೀತಿ ಇಮ್ಮಡಿ ಆನಂದವಾಗುವದು. ಮಾರ್ಚ ೭ ರ ವರೆಗೆ ಪರೀಕ್ಷೆ ಆಗುವವರು ಸ್ವಲ್ಪ ಕಷ್ಟದಿಂದ ಪಾಸಾಗುವರು. ಆದರೆ ಅನಂತರ ಪರೀಕ್ಷೆಗೆ ಕೂಡ್ರುವವರು ಅನಾಯಾಸದಿಂದ ಪಾಸಾಗುವರು. ಕದಾಚಿತ್ ವರ್ಗವನ್ನೂ ಸಂಪಾದಿಸುವರು.

ಕುಂಭ

ಒಟ್ಟಿಗೆ ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ಮತ್ತು ಔದ್ಯೋಗಿಕ ಎರಡೂ ದೃಷ್ಟಿಯಿಂದ ತೊಂದರೆ ಕೊಡುವಂತಹದಿದ್ದರೂ ಮಾರ್ಚ ೭ ರ ನಂತರ ಬಹುತರ ವಿಷಯಗಳಲ್ಲಿ ಕಷ್ಟದಿಂದಲಾದರೂ ಯಶಸ್ಸು ಸಿಕ್ಕುತ್ತ ಹೋಗುವದು ಎಂದು ಖಾತ್ರಿ ಹಿಡಿದು ಧೈರ್ಯದಿಂದ ವರ್ತಿಸಿರಿ.

ಈ ರಾಶಿಯವರಿಗೆ ವರ್ಷವಿಡೀ ೮ ನೇ ಗುರು ಇರುವದರಿಂದ ನಿಮ್ಮ ಪ್ರಕೃತಿಯನ್ನು ಬಹಳ ಜಪ್ಪಿಸಬೇಕು. ಕ್ಷುಲ್ಲಕ ಅಜೀರ್ಣದಂತಹ ಕಾರಣದಿಂದ ಇಲ್ಲವೆ ಶ್ವಾಸನಿರೋಧವಾಗುವದರಿಂದ ಒಮ್ಮೆಲೆ ಬಹಳ ತೊಂದರೆಯಾಗಬಹುದು. ಅದರಲ್ಲಿಯೂ ಮಾರ್ಚ ೭ ರ ವರೆಗೆ ಆಹಾರ ವಿಹಾರ ಬಹಳ ಮಿತವಾಗಿ ತೆಗೆದುಕೊಳ್ಳಬೇಕು ಮತ್ತು ಮಧುಮೇಹ ಇಲ್ಲವೆ ಮೂತ್ರವಿಕಾರವಿದ್ದವರು ಬಹಳ ಪಥ್ಯದಿಂದ ಇರಬೇಕು. ಕ್ಲೇಶ ಪರಿಹಾರಾರ್ಥ ಗುರುವಿನ ೧೯ ಸಾವಿರ ಮತ್ತು ಕೇತುವಿನ ೧೭ ಸಾವಿರ ಜಪ ಮಾಡಲೇಬೇಕು. ಅಂದರೆ ಅರಿಷ್ಟ ನಿವಾರಣವಾಗುವದು.

ಉಳಿದ ವಿಷಯಗಳಲ್ಲಿ ಈ ವರ್ಷ ಬಹಳ ಸಮಾಧಾನದಿಂದ ಇರುವಿರಿ. ಕೌಟುಂಬಿಕ ಉತ್ಕರ್ಷದ ಅನೇಕ ಸಂಗತಿಗಳು ಸಂಭವಿಸುವವು. ಮನೆಯಲ್ಲಿಯ ಜನರದಾದರೂ ಅವರವರ ಮಟ್ಟಿಗೆ ಉತ್ಕರ್ಷವಾಗುವದು ಮತ್ತು ಪ್ರತಿಯೊಬ್ಬ ನಿಮ್ಮೊಡನೆ ಪ್ರೇಮದಿಂದ ಮತ್ತು ನಿಷ್ಠೆಯಿಂದ ವರ್ತಿಸುವನು. ಮಾರ್ಚ ೭ ರ ವರೆಗೆ ಆಸ್ತಿಯಲ್ಲಿ ಕಿರಿಕಿರಿ ಸುರುವಾಗುವದು. ತಾಯಿಯ ಆರೋಗ್ಯವೂ ಚೆನ್ನಾಗಿರುವದಿಲ್ಲ. ನೆರೆಯುವರೊಡನೆ ಸ್ವಲ್ಪ ವಿರೋಧ. ವಾಹನಗಳಿಂದ ಅನಪೇಕ್ಷಿತವಾಗಿ ತೊಂದರೆಯಾಗುವದು. ದನಕರುಗಳು ಕೂಡ ಉಪಯೋಗಕ್ಕೆ ಚೆನ್ನಾಗಿ ಬರುವದಿಲ್ಲ. ಆದರೆ ಮೇಲಿನ ತಾರೀಖಿನ ನಂತರ ತಿಂಗಳೆರಡು ತಿಂಗಳಗಳಲ್ಲಿ ಎಲ್ಲ ಬಗೆಯ ತೊಂದರೆಯ ನಿವಾರಣೆಯಾಗುವದು ಮತ್ತು ಆಯಾ ವಿಷಯಗಳಲ್ಲಿ ಎಲ್ಲ ಬಗೆಯ ಉಪಯೋಗವಾಗುವದು. ಆದರೆ ಅಂದಿನಿಂದ ಬಂಧು ವರ್ಗದವರಿಗೆ ಸ್ವಲ್ಪ ಕಾಯಿಲೆಯಾಗುವ ಸಂಭವವಿದೆ. ಎಪ್ರಿಲ ೨೪ ರಿಂದ ಗ್ರಾಮದಲ್ಲಿ ನಿಮ್ಮ ವರ್ಚಸ್ಸು ಬೆಳೆವಂಥ ಅನೇಕ ಸಂಗತಿಗಳು ಸಂಭವಿಸುವವು. ಸ್ಥಾವರ ಜಂಗಮ ಆಸ್ತಿಯ ಉತ್ಪನ್ನ ಪ್ರತಿ ವರ್ಷದಂತೆ ಉತ್ಪಾದಿತವಾಗುವದು. ಆದರೆ ಅದೆಲ್ಲ ನಿಮ್ಮ ಉಡಿಯಲ್ಲಿ ಬೀಳಬೇಕಾದರೆ ಅನೇಕ ಅಡಚಣಿಗಳು ಮತ್ತು ತಕರಾರು ಬರುವವು. ಮತ್ತುಯಾರಿಂದ ಅದು ಬರಬೇಕಾಗಿದೆಯೋ ಅವರಿಗೆ ಬಹಳ ಸೂಟು ಬಿಡಬೇಕಾಗುವದು. ಕಳಕಳಿಯಿಂದ ಕೆಲಸಮಾಡುವ ನೌಕರರು ಕಾಯಿಲೆ ಬೀಳುವರು ಇಲ್ಲವೆ ಬೇರೆ ಕಾರಣಕ್ಕಾಗಿ ನೌಕರಿ ಬಿಟ್ಟು ಹೋಗುವರು ಮತ್ತು ಉಳಿದರೂ ಕೆಲಸ ತಪ್ಪಿಸಿ ಮನ ಬಂದಂತೆ ವರ್ತಿಸುವರು. ಆದರೂ ಮಾರ್ಚ ೭ ರ ನಂತರ ಬಹಳ ತೊಂದರೆಯಾಗಲಾರದು. ಹೆಂಡತಿಯ ಆರೋಗ್ಯ ಒಟ್ಟಾರೆ ಅನುಕೂಲ ಉಳಿಯುವದು. ನಿಜ, ಆದರೆ ಹೊಟ್ಟೆಯಲ್ಲ ಗ್ಯಾಸಾಗುವದು, ಟೊಂಕ ಶೂಲಿ, ಗಂಟಲ ಉರಿಯುವದು ಇಂಥ ಕಿರುಕಳ ತಕರಾರು ಇದ್ದದ್ದೆ ಅನೇಕ ದಿನಗಳ ವರೆಗೆ ಸಹವಾಸ ಉಳಿಯುವರು. ಆದರೆ ನಿಮ್ಮ ನಿಮ್ಮಲ್ಲಿ ಮೇಲಿಂದ ಮೇಲೆ ತಪ್ಪು ತಿಳಿವಳಿಕೆಯುಂಟಾಗುವ ಪ್ರಸಂಗಗಳು ಬರುವವು. ಒಂದು ವೇಳೆ ಮದುವೆಯೇ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವವರಿದ್ದರೆ, ಅದು ಬಹುಶಃ ಆಗಲಿಕ್ಕಿಲ್ಲ, ಸಹಸಾ ಕೂಡಿ ಬರುವದಿಲ್ಲ. ಒಂದುವೇಳೆ ಕೂಡಿದರೆ, ಲಗ್ನ ಸಾಂಗವಾಗಬೇಕಾದರೆ ಒಂದಿಲ್ಲೊಂದು ಅಡಚಣೆ ಬರುವದು. ಅದರಲ್ಲಿಯೂ ಬಾಶಿಂಗ ಬಲ ಜೋರಾಗಿದ್ದು ಲಗ್ನವಾದರೆ ವಧೂವರರು ರೂಪ ಸ್ವಭಾವಗಳಿಂದ ತೀರ ವಿರುದ್ಧ ಬಗೆಯವರಿರುವರು. ಅದರಂತೆ ಮಕ್ಕಳ ಮದುವೆ ಮಾಡುವದಿದ್ದರೆ ಅದು ಕೂಡಿ ಬರಲಿಕ್ಕೆ ಬಹಳ ತೊಂದರೆಯಾಗುವದು. ನೋಡಿದ ಸ್ಥಳ ಪರಿಸ್ಥಿತಿಯ ದೃಷ್ಟಿಯಿಂದ ಮನಸ್ಸಿಗೆ ಬರಬಹುದು. ಆದರೆ ಆ ಜನರು ಸಂತಾಪ ಹುಟ್ಟುವಂತಹ ಚಮತ್ಕಾರಿಕ ಸ್ವಭಾವದವರಿರುವರು. ಈಗೊಂದು ಮಾತಾಡುವರು ಮರುಕ್ಷಣದಲ್ಲಿ ಅದಕ್ಕೆ ತೀರ ವಿರುದ್ಧ ಮಾತಾಡುವರು. ಅದರಲ್ಲಿಯೂ ಲಗ್ನ ಕೂಡಿದರೆ ಅದು ಸಾಂಗವಾಗಬೇಕಾದರೆ ಮನಸ್ಸಿಗೆ ಬಂದಂತೆ ವರ್ತಿಸುವರು. ಹಾಗೂ ತೊಂದರೆ ಕೊಡುವರು. ನಿಮ್ಮದು ವರಪಕ್ಷವೇ ಇರಲಿ ವಧೂಪಕ್ಷವೇ ಇರಲಿ ಪರಿಸ್ಥಿತಿ ಹೀಗಾಗುವದು. ಆದರೆ ಸೊಸೆ ಇಲ್ಲವೆ ಅಳಿಯ ರೂಪ ಗುಣಗಳಿಂದ ಬಹಳ ಮನಸ್ಸಿಗೆ ಬರುವಂತಹರು ಇರುವರು. ಮಕ್ಕಳ ಉನ್ನತಿಗೆ ಮಾತ್ರ ಈ ವರುಷ ಬಹಳ ಉತ್ತಮವಿದೆ. ಅನೇಕರ ಉತ್ಕರ್ಷವು ತೀರ ಅಭಿನವವೆನಿಸುವದು. ನವಂಬರ ೧೪ ರ ವರೆಗೆ ಮತ್ತು ಅನಂತರ ಡಿಸೆಂಬರ ೬ ರಿಂದ ೨೫, ಜನೇವರಿ ೯ ರಿಂದ ಫೆಬ್ರುವರಿ ೭, ಫೆಬ್ರುವರಿ ೨೮ ರಿಂದ ಮಾರ್ಚ ೧೭, ಎಪ್ರಿಲ ೧ ರಿಂದ ಜೂನ ೫, ಜೂನ ೨೪ ರಿಂದ ಜುಲೈ ೯ ಮತ್ತು ಅಕ್ಟೋಬರ ೧ ರ ನಂತರ ಈ ಅವಧಿಯಲ್ಲಿ ಯಾವನೊಬ್ಬನು ಉನ್ನತಿಯ ಪಥವನ್ನು ಏರುವನು.

ಧಂದೆ ಕೂಲಿಯವರಿಗೆ ಈ ವರ್ಷ ಒಮ್ಮೆ ನಗುವಂತಹದಾಗಿದ್ದರೆ ಕೆಲಸಲ ಬಹಳ ತೊಂದರೆಯನ್ನು ಕೊಡುವದು. ಧಂದೆಯವರಿಗೆ ಮಾರ್ಚ ೭ ರ ವರೆಗೆ ಅನುಕೂಲವಿದ್ದಷ್ಟು ಮುಂದೆ ಇರುವದಿಲ್ಲ. ತದ್ವಿರುದ್ಧ ನೋಕರಿಯವರಿಗೆ ಮಾರ್ಚ ೭ ರ ವರೆಗೆ ಆ ತೊಂದರೆಯಿದ್ದಷ್ಟು ಮುಂದೆ ಇರುವದಿಲ್ಲ. ಧಂದೆಯವರ ಉಲಾಢಾಲಿ ಮಿತಿಮೀರಿಯಾಗಿಯೂ ಅದರಲ್ಲಿ ಯಶಸ್ಸು ಮತ್ತು ಲಾಭ ಆಗಬೇಕಷ್ಟು ಆಗುವದಿಲ್ಲ. ಕೀಳು ಮೇಲಿನ ಸ್ಥಿತಿ ಗೊತ್ತಾಗುವದೇ ಇಲ್ಲ. ಇಂಥ ಅನಿಶ್ಚಿತ ಪರಿಸ್ಥಿತಿಯಲ್ಲಿರಬೇಕಾಗುವದು. ಅದರಲ್ಲಿಯೂ ಸಣ್ಣ ಪ್ರಮಾಣದಲ್ಲಿ ವ್ಯಾಪಾರ ಮಾಡುವವರು ಹೆಚ್ಚು ತಳವೂರಿ ನಿಲ್ಲುವರು.

ನೋಕರರಿಗೆ ವರಿಷ್ಠರ ತ್ರಾಸ ಬಹಳ ಸಹಿಸಬೇಕಾಗುವದು. ಮೇಲಿನ ಗ್ರೇಡ ನಿಶ್ಚಯವಾಗಿ ಸಿಗುವವರು ಕೂಡ ಇಂದು ಸಿಗಬಹುದು, ನಾಳೆ ಸಿಗಬಹುದು ಹೀಗೆ ಕೇವಲ ಆಸೆ ಹಿಡಿದು ಕೊಂಡೇ ಇರಬೇಕಾಗುವದು. ಇಷ್ಟಾಗಿಯೂ ಒಂದು ವೇಳೆ ದೊರೆತರೂ ಆ ಸ್ಥಳದ ಭಾರ ಬಹಳ ಹೆಚ್ಚಿಗೆ ಬಿದ್ದು ಜೀವ ತೀರ ಬೇಸತ್ತು ಹೋಗುವದು. ಬದಲಿಯಾದರೆ ಅದೂ ಅನನುಕೂಲ ಸ್ಥಳಕ್ಕೆ ಆಗುವದು. ಅನವಶ್ಯಕ ಕೆಲಸಗಳು ಹೆಚ್ಚಿ ಅವಶ್ಯ ಕೆಲಸಗಳನ್ನು ಕೈಗೊಳ್ಳಲು ಕೂಡ ಅವಕಾಶ ದೊರೆಯುವದಿಲ್ಲ. ಆದರೆ ನೋಕರಿಗೆ ಯಾವದೇ ಬಗೆಯ ಆಕ್ಷೇಪ ಬರದೆ ಸಂಬಳವು ಏನೂ ಜೊಬ್ಬಾಟವಿಲ್ಲದೆ ಸಕಾಲಕ್ಕೆ ದೊರೆಯುತ್ತ

ಹೋಗುವದು. ಅಲ್ಲದೆ ಅನೇಕರಿಗೆ ಹಲವು ಸಲ ಆಕಸ್ಮಿಕ ಇಲ್ಲವೆ ಗುಪ್ತ ಧನ ಲಾಭವಾಗುವ ಸಂಭವವೂ ಇದೇ. ಅಂಥ ಬಲಿಷ್ಠ ಯೋಗವಿದೆ. ಅದರಲ್ಲಿಯೂ ನವಂಬರ ೧೯ ರಿಂದ ಡಿಸೆಂಬರ ೧೪, ಜನೆವರಿ ೭ ರಿಂದ ಫೆಬ್ರುವರಿ ೧, ಫೆಬ್ರುವರಿ ೨೪ ರಿಂದ ಎಪ್ರಿಲ ೧೨, ಮೇ ೮ ರಿಂದ ೩೧ ಮತ್ತು ಜುಲೈ ೨೦ ರಿಂದ ಆಗಸ್ಟ ೧೪ ಈ ಕಾಲವು ಉಳಿದ ದೃಷ್ಟಿಯಿಂದ ಬಹಳ ಅನುಕೂಲವೆನಿಸುವದು. ಆದರೆ ಏನೇ ಆದರೂ ನಾಲ್ಕು ದುಡ್ಡು ಶಿಲ್ಲಕು ಬೀಳುವದು ಕಠಿನವಾಗುವದು. ಯಾರ ಕುಂಡಲಿಯಲ್ಲಿ ದತ್ತಕಹೋಗುವ ಯೋಗವಿದೆಯೋ ಅವರಿಗೆ ಈ ವರ್ಷ ಅದರಲ್ಲಿಯೂ ಮಾರ್ಚ ೭ ರೊಳಗಾಗಿ ಅದು ಒದಗುವ ಯೋಗ ಹೆಚ್ಚಿಗೆ ಇದೆ. ಮಿತ್ರ ಸುಖ ಮಧ್ಯಮ. ಆದರೆ ಅದರ ಉಪಯೋಗ ನಿಮಗೆ ಆಗದಿದ್ದಂಥ ಪರಿಸ್ಥಿತಿಯಲ್ಲಿಯೇ ಅದರಲ್ಲಿಯ ಬಹುತರ ಜನ ಇರುವರು. ದೂರದ ಪ್ರವಾಸ ಕಡಿಮೆಯೆ ಮತ್ತು ಅಂಥ ಪ್ರವಾಸ ಒದಗಿ ಬಂದರೂ ಅದರಿಂದ ಸುಖವೇನೂ ದೊರೆಯಲಾರದು. ಪ್ರತ್ಯಕ್ಷ ಭೆಟ್ಟಿಯ ಕೆಲಸಗಳನ್ನು ಸ್ವಲ್ಪ ಕೀಳ್ತನವನ್ನು ಸಹಿಸಿಯೂ ಕೈಕೊಂಡದ್ದಾದರೆ ಅವು ಚನ್ನಾಗಿ ಆಗುವವು. ಲೇಖನ ಕೆಲಸ ಮಾತ್ರ ಮನಸ್ಸಿನಂತೆ.

ದಾವೆ ಫಿರ್ಯಾದಿಯ ಕೆಲಸಗಳಿದ್ದರೆ ಅವುಗಳ ತೀರ್ಪು ಬಹುಶಃ ಹತ್ತುವದಿಲ್ಲ. ಹಾಗೆಯೇ ಮುಂದುವರಿಯುತ್ತ ಹೋಗುವವು. ಆದರೂ ಮಾರ್ಚ ೭ ರ ನಂತರ ಯಾವದೊಂದು ತೀರ್ಪು ಹೊರಬಿದ್ದರೆ ಅದರಲ್ಲಿ ಮಾತ್ರ ಯಶಸ್ಸು ಸಿಕ್ಕುವದು. ಖಾಸಗಿ ಸ್ಪರ್ಧೆಯ ಕೆಲಸಗಳು ಹಾಗೆಯೇ ಮುಂದುವರಿಯುತ್ತ ನಡೆದರೂ ಒಟ್ಟಾರೆ ವಾತಾವರಣ ಮಾತ್ರ ಭವಿಷ್ಯತ್ತಿನಲ್ಲಿ ಯಶಸ್ಸು ಕೊಡುವಂತಹದು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರು ಸುಲಭವಾಗಿ ಹಡೆಯುವರು. ಅದರಲ್ಲಿಯೂ ಮಾರ್ಚ ೭ ರ ನಂತರ ಬಹಳ ಸುಲಭವಾಗಿ ಹಡೆಯುವರು. ಆದರೆ ಇದಕ್ಕೂ ಮೊದಲು ಹಡೆಯುವವರು ಗಂಡು ಹಡೆದರೆ ಅನಂತರ ಮಾತ್ರ ಹೆಣ್ಣು ಹುಟ್ಟುವವು.

ನವಂಬರ ೧೪ ರ ವರೆಗೆ ಅನಂತರ ಡಿಸೆಂಬರ ೭ ರಿಂದ ೨೫, ಮಾರ್ಚ ೧ ರಿಂದ ೧೭, ಎಪ್ರಿಲ ೧ ರಿಂದ ಜೂನ ೫, ಜೂನ ೨೩ ರಿಂದ ಜುಲೈ ೯, ಜುಲೈ ೨೬ ರಿಂದ ಅಕ್ಟೋಬರ ೧ ಮತ್ತು ಅಕ್ಟೋಬರ ೧೫ರ ನಂತರದ ಅವಧಿಯಲ್ಲಿ ಪರೀಕ್ಷೆಯಾದರೆ ಈ ರಾಶಿಯ ವಿದ್ಯಾರ್ಥಿಗಳು ಪಾಸಾಗುವದು ನಿಶ್ಚಿತ.

ಮೀನ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ಆದರಂತೆ ಔದ್ಯೋಗಿಕ ಎರಡೂ ವಿಷಯಗಳಲ್ಲಿ ಹಿಂದಿನ ವರ್ಷಕ್ಕಿಂತ ಎಷ್ಟೋ ಪಟ್ಟು ಉತ್ತಮವಿರುವದೆಂಬುದು ನಿಶ್ಚಿತ.

ಈ ರಾಶಿಯವರು ತಮ್ಮ ಆರೋಗ್ಯವನ್ನು ಕೇವಲ ಸಪ್ಟಂಬರ ೧೫ ರ ನಂತರ ಕೆಲಮಟ್ಟಿಗೆ ಜಪ್ಪಿಸಬೇಕು ಏಕೆಂದರೆ ಉಳಿದ ವೇಳೆಯಲ್ಲಿ ಅದೊಳ್ಳೆ ನಿರೋಗಿ ಉಳಿಯುವದು. ಆದರೆ ಮಾರ್ಚ ೭ರ ನಂತರ ಯಾವದೊಂದು ಭಯಾನಕ ಸ್ಥಳದಲ್ಲಿ ಇಲ್ಲವೆ ಸಾಯಂಕಾಲದ ಕಾತರ ಸಮಯದಲ್ಲಿ, ಮಧ್ಯಾಹ್ನದಲ್ಲಿ ಒಬ್ಬರೇ ಅತ್ತಿತ್ತ ತಿರುಗಾಡಬಾರದು. ಏಕೆಂದರೆ ಮೇಲಿನ ದಿನಾಂಕದಿಂದ ಬರುವ ೮ ನೇ ರಾಹು ಪಿಶಾಚಬಾಧೆಯಂಥ ಅದೃಶ್ಯ ಪೀಡೆಯನ್ನು ಮಾಡಹತ್ತುವನು. ಇದೆಲ್ಲ ಕ್ಲೇಶಪರಿಹಾರಕ್ಕಾಗಿ ರಾಹುವಿನ ೧೮ ಸಾವಿರ ಜಪ ಮಾಡಬೇಕು. ೮ ನೇ ರಾಹು ಬಂದ ಕೂಡಲೆ ಜಪ ಮಾಡಬೇಕು. ಇದರಿಂದ ಬಹಳ ಹಿತವಾಗುವದು.

ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ ದೊರೆಯುವದು. ವೆಚ್ಚ ಸ್ವಲ್ಪ ಹೆಚ್ಚಿಗೆ ಆದರೂ ಮನೆಯಲ್ಲಿಯ ಪ್ರತಿಯೊಬ್ಬರು ಬಹಳ ವ್ಯವಸ್ಥಿತ ಮತ್ತು ಮನಸ್ಸಿನಂತೆ ವರ್ತಿಸುವರು. ಬಂಧುಗಳು ಪ್ರೇಮದಿಂದ ವರ್ತಿಸುವರು. ಮತ್ತು ಅವರ ಉನ್ನತಿಯಾಗುವಂಥ ಅನೇಕ ಘಟನೆಗಳು ಸಂಭವಿಸುವವು. ಆದರೆ ಅವರಲ್ಲಿ ಒಬ್ಬರಿಗೆ ಮಾರ್ಚ ೭ ಕ್ಕಿಂತ ಮೊದಲು ಸ್ವಲ್ಪ ಕಾಯಿಲೆಯ ಆಂಜಿಕೆ ಇದೆ. ಆದರಂತೆ ಆ ತಾರೀಖಿನ ನಂತರ ಮನೆಯಲ್ಲಿಯ ನೋಕರರಲ್ಲಿ ಒಬ್ಬನಿಗೆ ಅದೇ ಬಗೆಯ ಅಂಜಿಕೆ ಇದೆ. ಉಳಿದ ನೋಕರರು, ಆಳುಗಳಿಗೆ ಮಾತ್ರ ಆರೋಗ್ಯ ಅನುಕೂಲವುಳಿದು ತಮ್ಮ ತಮ್ಮ ಕೆಲಸಕಾರ್ಯಗಳನ್ನು ಮನಸ್ಸಿನಿಂದ ಮತ್ತು ಸಕಾಲದಲ್ಲಿ ಮಾಡುವರು. ಜನೆವರಿ ೧೭ ರಿಂದ ಜೂನ ೧೨ ರ ಅವಧಿಯಲ್ಲಿ ಸ್ವಲ್ಪಾದರೂ ಸ್ಥಾವರ ಇಲ್ಲವೆ ಜಂಗಮ ಸಂಗ್ರಹವಾಗುವದು. ಮತ್ತು ಬೆಲೆಯ ಮಾನದಿಂದ ಅವು ಬಹಳ ಸೋಯಿ ಸಿಕ್ಕುವವು. ಒಟ್ಟಾರೆ ಆಪ್ತರು ಮತ್ತು ನೆರೆಹೊರೆಯವರು ಬಿಚ್ಚು ಮನಸ್ಸಿನಿಂದ ನಡೆಯುವರು. ಆದರೆ ಮಾರ್ಚ ೭ ರ ನಂತರ ಮಾವನ ಮನೆಯವರಲ್ಲಿ ಸ್ವಲ್ಪ ಕಲಹ ಸುರುವಾಗುವದು. ಮತ್ತು ಅತ್ತೆ ಇಲ್ಲವೆ ಮಾವ ಅಂಥ ವ್ಯಕ್ತಿಗಳಿಗೆ ಸ್ವಲ್ಪ ಕಾಯಿಲೆಯಾಗುವದು. ವಾಹನಸುಖ ಮಧ್ಯಮವೇ. ದನಕರಗಳ ಸುಖವು ಒಟ್ಟಾರೆ ಅನುಕೂಲ. ವಾಹನಗಳು ಮತ್ತು ದನಗಳನ್ನು ಹೊಸದಾಗಿಯೂ ಕೊಳ್ಳುವಿರಿ. ಪ್ರತಿಯೊಂದು ವಿಷಯದಲ್ಲಿ ಎಲ್ಲರೂ ನಿಮಗೆ ಬಹಳ ಮಹತ್ವ ಕೊಡುವರು. ಹೆಂಡತಿಯ ಆರೋಗ್ಯ ದೃಷ್ಟಿಯಿಂದ ಎಪ್ರಿಲ ೨೩ ರಿಂದ ಜೂನ ೧೨ ರ ಮಧ್ಯಂತರ ಅವಧಿಯಲ್ಲಿ ಸ್ವಲ್ಪ ತೊಂದರೆಯಾಗುವದು. ಆದರೆ ಉಳಿದ ವೇಳೆಯಲ್ಲಿ ಅದು ನಿರೋಗಿಯೇ ಉಳಿಯುವದು. ಮತ್ತು ಉಭಯತರಲ್ಲಿ ಮೊದಲಿಗಿಂತ ಹೆಚ್ಚು ಪ್ರೇಮ ಮತ್ತು ಮತ್ಯೈಕ್ಯ ಉಳಿಯುವದು. ಆದರೆ ಇನ್ನೂ ನಿಮ್ಮ ಲಗ್ನವೇ ಆಗಿರದಿದ್ದರೆ ಈ ವರ್ಷ ಮಾಡಿಕೊಳ್ಳುವದಿದ್ದರೆ ಅಲ್ಪಾಯಾಸದಿಂದ ಮತ್ತು ಕೂತಮೆಟ್ಟಿಗೆ ಕೂಡಿಬಂದು ವ್ಯವಸ್ಥಿತ ರೀತಿಯಿಂದ ಸಾಂಗವಾಗುವದು. ಮತ್ತು ವಧು ಇಲ್ಲವೆ ವರ ಪರಸ್ಪರ ಅನುರೂಪ ಇರುವರು.

ಮಕ್ಕಳ ಮದುವೆ ಮಾಡುವದಿದ್ದರೆ ಅವರ ಬಾಸಿಂಗಬಲವೂ ಬಹಳ ಜೋರಿನಲ್ಲಿ ಇದ್ದರೆ ಅದಾದರೂ ಸಹಜವಾಗಿ ಕೂಡಿಬಂದು ಗೊತ್ತುಪಡಿಸಿದ ಮುಹೂರ್ತಕ್ಕೆ ನಿರ್ವಿಘ್ನವಾಗಿ ಸಾಂಗವಾಗುವದು. ಅಳಿಯ ಇಲ್ಲವೆ ಸೊಸೆ ಸ್ವಭಾವ ಮತ್ತು ರೂಪ ಲಕ್ಷಣಗಳಿಂದ ಬಹಳ ಉತ್ತಮ ಇರುವರು ಮತ್ತು ಅವಳು ಪೂರ್ವಪರಿಚಿತ ಮನೆತನದವಳಿರುವ ಸಂಭವವೂ ಇರುವದು. ಮಕ್ಕಳ ಉನ್ನತಿಗೆ ಈ ವರ್ಷ ಜೂನ ೧೨ ರಿಂದ ಜುಲೈ ೩೦ ರ ಮಧ್ಯಂತರ ಅವಧಿಯಲ್ಲಿ ಸ್ವಲ್ಪ ತ್ರಾಸದಾಯಕವೆನಿಸಿದರೂ ಉಳಿದ ಸಮಯದಲ್ಲಿ ಅದು ಉತ್ತಮವೂ ಇದೆ. ಅವರಲ್ಲಿ ಒಬ್ಬನು ಮಾತ್ರ ಬಹಳ ಭಾಗ್ಯವಂತನಾಗುವನು ಮತ್ತು ಎಲ್ಲರ ಆರೋಗ್ಯ ಅನುಕೂಲ ಉಳಿಯುವದು.

ಧಂದೆ ಕೂಲಿಯವರಿಗೆ ಕೂಡ ಈ ವರ್ಷವಿಡೀ ೯ ನೇ ಶನಿ ಮತ್ತು ೭ ನೇ ರಾಹು ಇರುವದರಿಂದ ಬಹಳ ಉತ್ತಮವಿದೆ. ದೇಹಶ್ರಮದ ಧಂದೆಯವರಿಗಿಂತ ವ್ಯಾಪಾರ ಮಾಡುವವರು ಹೆಚ್ಚು ಹಣ ಸಂಪಾದಿಸುವರು. ಬೌದ್ಧಿಕ ಧಂದೆಯವರೂ ಈ ವರ್ಷ ಬಹಳ ಉನ್ನತಿ ಹೊಂದುವರು ಅವರ ಪತ್ತು ಮತ್ತು ಪ್ರತಿಷ್ಠೆ ಉತ್ತಮ ಉಳಿಯುವದು ಮತ್ತು ನಿಮ್ಮ ನಿಮ್ಮ ಧಂದೆಯಲ್ಲಿ ಹೊಸ ಸುಧಾರಣೆ ಮಾಡುವ ಅವಕಾಶ ದೊರೆಯುವದು.

ನೋಕರರು ಕೂಡ ಒಳ್ಳೇ ಆನಂದದಲ್ಲಿ ಇರುವರು. ವರಿಷ್ಠರ ಮರ್ಜಿ; ಕೈಕೆಳಗಿನ ಜನರಿಂದ ಆದರ ಉತ್ತಮ ದೊರೆತು ಕೈಕೊಂಡಕೆಲಸ ಬಹಳ ಹುರುಪಿನಿಂದ ಪೂರ್ಣ ಮಾಡುವಿರಿ. ಎಲ್ಲಿ ನೋಡಿದರೂ ನಿಮ್ಮ ಗೌರವ ಪೂರ್ಣ ಉದ್ಗಾರಗಳು ಕೇಳ ಬರುವವು ಆದರೆ ಒಬ್ಬರು ನವಂಬರ ೨೦ ಕ್ಕಿಂತ ಮೊದಲು ಇಲ್ಲವೆ ಮಾರ್ಚ ೭ ರಿಂದ ಎಪ್ರಿಲ ೨೩ ಈ ಮಧ್ಯದ ಅವಧಿಯಲ್ಲಿ ಕೇವಲ ಮತ್ಸರದಿಂದ ಅಲ್ಪ ಸ್ವಲ್ಪ ತೊಂದರೆಯನ್ನು ಕೊಡುವನು. ಬದಲಿಯಾಗುವ ಖಾತೆಯಲ್ಲಿದ್ದರೆ ಸಹಸಾ ಬದಲಿಯಾಗುವದಿಲ್ಲ. ಒಂದು ವೇಳೆ ಆದರೆ ಮನಸ್ಸಿಗೆ ಬರುವಂಥ ಸ್ಥಳಕ್ಕೆ ಆಗುವದು. ಅನೇಕರಿಗೆ ಮೇಲಿನ ಗ್ರೇಡು ಸಿಕ್ಕುವದು. ಕನಿಷ್ಠ ಬಡತಿಯಂತೂ ಸಿಕ್ಕೇ ತೀರುವದು. ವಿಶೇಷವಾಗಿ ನವಂಬರ ೨೧ ರಿಂದ ಮಾರ್ಚ ೭ ಮತ್ತು ಜೂನ ೧೨ ರಿಂದ ಸಪ್ಟಂಬರ ೧೫ ಈ ಅವಧಿಯು ಲಾಭಕ್ಕೆ ಬಹಳ ಅನುಕೂಲವಿರುವದು. ದೂರದ ಪ್ರವಾಸ ಕೆಲ ಮಟ್ಟಿಗೆ ಆಗುವದು. ಆದರೂ ಅಷ್ಟೇ ಸುಖಕರ ಮತ್ತು ಧ್ಯೇಯಸಾಧಕವಾಗುವದು.

ಭೆಟ್ಟಿಯ ಕೆಲಸಗಳು ಮನಸ್ಸಿನಂತೆ ಆಗುವವು. ಆದರೆ ಲೇಖನ ಕೆಲಸಗಳಲ್ಲಿ ಸ್ವಲ್ಪ ತೊಂದರೆಯಾಗುವ ಸಂಭವವಿದೆ. ವಿಶೇಷತಃ ಯಾರ ಜನ್ಮ ಕುಂಡಲಿಯಲ್ಲಿ ಬುಧ ಅಷ್ಟಮ ಇಲ್ಲವೆ ದ್ವಾದಶ ಸ್ಥಾನದಲ್ಲಿ ಇರುವನೋ ಅವರು ಪತ್ರ ವ್ಯವಹಾರ ಇಲ್ಲವೆ ಎರಡನೇ ಯಾವದೇ ಲೇಖೀ ವ್ಯವಹಾರವನ್ನು ಪೂರ್ಣ ಲಕ್ಷವಿಟ್ಟು ದಕ್ಷತೆಯಿಂದ ಮಾಡಬೇಕು. ಮಿತ್ರಸುಖ ಅನುಕೂಲವಾಗುವದು. ಆದರೆ ಅವರಲ್ಲಿ ಒಬ್ಬನ ಬಗ್ಗೆ ಬಹಳ ತೊಂದರೆ ಸೋಸಬೇಕಾಗುವದು. ಅನೇಕರಿಗೆ ಈ ವರ್ಷ ಮಾರ್ಚ ೭ ರ ನಂತರ ಅಲ್ಪಸ್ವಲ್ಪ ಆಕಸ್ಮಿಕ ಅಂದರೆ ಗುಪ್ತ ಧನ ಲಾಭವಾಗುವ ಸಂಭವವಿದೆ.

ದಾವೆ ಖಟ್ಲೆ ಇದ್ದರೆ ಅವುಗಳಲ್ಲಿ ಯಾವ ತೀರ್ಪು ನವಂಬರ ೨೧ ರ ಪೂರ್ವದಲ್ಲಿ ಮತ್ತು ಜೂನ ೧೨ ರಿಂದ ಜುಲೈ ೩೦ ರ ಮಧ್ಯದಲ್ಲಿ ಹೇಳಲ್ಪಡುವವೊ ಅವು ಬಹುಶಃ ನಿಮ್ಮ ವಿರುದ್ಧ ಆಗುವವು. ಆದರೆ ಉಳಿದ ಸಮಯದಲ್ಲಿ ತೀರ್ಪು ಹೊರಬಿದ್ದರೆ ಅವೆಲ್ಲ ನಿಮಗೆ ಅನುಕೂಲವಾಗುವವು. ಖಾಸಗಿ ಸ್ಪರ್ಧೆಯಲ್ಲಿಯೂ ಮನಸ್ಸಿನಂತೆ ಒಡಂಬಡಿಕೆಯಾಗುವ ಗ್ರಹಮಾನಗಳಿವೆ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಸುಲಭವಾಗಿ ಹಡೆಯುವ ಯೋಗವಿದೆ. ಆದರೂ ಮಾರ್ಚ ೭ ಕ್ಕಿಂತ ಮೊದಲು ಹಡೆದರೆ ಬಹಳ ಸುಲಭ ಪ್ರಸವವಾಗುವದು. ಮತ್ತು ಬಹಳ ಜನರಿಗೆ ಕನ್ಯಾ ಆಗುವವು ಬಾಣಂತಿತನ ಮಾತ್ರ ಚೆನ್ನಾಗಿ ಜಗ್ಗುವದು.

ಯಾರ ಪರೀಕ್ಷೆ ಜನೆವರಿ ೧೭ ರಿಂದ ಎಪ್ರಿಲ ೨೩ ಮತ್ತು ಜುಲೈ ೩೦ ರ ನಂತರ ಇರುವದೋ ಆ ವಿದ್ಯಾರ್ಥಿಯು ನಿಃಸಂಶಯವಾಗಿ ಪಾಸಾಗುವ ಯೋಗವಿದೆ.

— ಶುಭಂ ಭವತು —

ಚಿಕ್ಕ ಕತೆ



ಹಾಲು-ನೀರು

ಕರ್ತವ್ಯದ ಮೂರ್ತಿ ಪಂತ ಮಾಸ್ತರರು ಮಗ-ಸೊಸೆಯರ ಆಗ್ರಹಕ್ಕೆ ಮುಂಬಯಿಗೆ ಹೋಗುತ್ತಾರೆ. ಆದರೆ ಮಕ್ಕಳ ದನಿ ಅವರನ್ನು ಅಲ್ಲಿಯೂ ಕರ್ತವ್ಯದ ಕಡೆ ಎಳೆಯುತ್ತದೆ.

ಗೋಡೆಗೆ ಅಂಟ ನಿಂತ ಗಡಿಯಾರದ ಕೈ ಐದೂವರೆ ಗಂಟೆಯಾದದ್ದು ತೋರಿಸಿ ಒಂದು ಗಂಟೆ ಬಾರಿಸಿತು. ಪಂತಮಾಸ್ತರರು ಗಡಿಯಾರದ ಕಡೆಗೊಮ್ಮೆ ದೃಷ್ಟಿಕ್ಷೇಪಮಾಡಿ ಎದ್ದು ನಿಂತರು; ಕೈಮುಗಿದರು. ವರ್ಗದಲ್ಲಿಯ ಹತ್ತೂ ಹುಡುಗರು ಅವರನ್ನು ಅನುಸರಿಸಿದರು. ಪಂತಮಾಸ್ತ-ರರು, ಹತ್ತು ಹುಡುಗರು ಏಕಕಂಠದಲ್ಲಿ, ಅಪಸ್ವರವಿಲ್ಲದೆ ನಿಧಾನವಾಗಿ ಸಂಧ್ಯಾಮಂತ್ರ ಹೇಳಿದರು.

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ
ವೇದಾನ್ತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ
ನೈಯ್ಯಾಯಿಕಾಃ ॥
ಅರ್ಹನ್ ಇತ್ಯಥ ಜೈನಶಾಸನರತಾಃ ಕರ್ಮೇತಿ
ಮೀಮಾಂಸಕಾಃ ।
ಸೋಯಂ ವೋ ವಿದಧಾತು ವಾಂಛಿತಫಲಂ
ಶ್ರೀಕೇಶವಸ್ಸರ್ವದಾ ॥

*

ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ
ಸಾಗರಮ್ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥

ಕೈಮುಗಿದು ಹುಡುಗರು ಓರಣವಾಗಿ ಹೊರಗೆ ನಡೆದರು. ಪಂತಮಾಸ್ತರರು ಶಾಲೆಯ ಬಾಗಿಲಿಗೆ ಕೀಲಿಹಾಕಿ, ಇನ್ನೊಮ್ಮೆ ಜಗ್ಗಿ ನೋಡಿ, ಕೀಲಿ ಬಂದಿಸ್ತವಾಗಿ ಕುಳಿತ ಖಾತ್ರಿ ಮಾಡಿಕೊಂಡು ಬೀದಿಗಿಳಿದರು.

ಶನಿವಾರ ಉಳಿದೆಲ್ಲ ವರ್ಗಗಳಿಗೂ ಒಪ್ಪತ್ತಿನ ಶಾಲೆಯಾದರೂ, ಪಂತರ ಮುಲ್ಕೀ ಪರೀಕ್ಷೆಯ ಖಾಸ್ ವರ್ಗಕ್ಕೆ ಈ ನಿಯಮ ಅಪವಾದ. ರವಿವಾರ ಒಂದೇ ದಿನ ಪೂರ್ಣ ಬಿಡುವು. ದೊಡ್ಡ ಹಬ್ಬ-ಹುಣ್ಣಿವೆ, ಊರಿನ ಜಾತ್ರೆಯ ಸಮಯದಲ್ಲಿ ಒಂದೆರಡು ದಿನ ಮಾತ್ರ ಸೂಟಿ. ಬಿಡುವಿನ ಅಗತ್ಯ ಪಂತಮಾಸ್ತರರಿಗೆ ಇಲ್ಲ. ಹುಡುಗರ ಆಶೆಗೆ, ನೀರು-ಬೂದಿ ಎರಚಿ ನಿರುತ್ಸಾಹಿಯಾಗಿ ಮಾಡಬಾರದೆಂದು ಸೂಟಿಯನ್ನು ಕೊಡುತ್ತಾರೆ ಅಷ್ಟೇ. ಪಂತಮಾಸ್ತರರಿಗೆ ಸೂಟಿಯ ರಜೆಯ ಅಗತ್ಯ-ಅವಶ್ಯಕತೆ, ಕಳೆದ ಇಪ್ಪತ್ತು ಇಪ್ಪತ್ತೈದು ವರುಷದಲ್ಲಿಯೂ ಕಂಡಿಲ್ಲ. ತಮ್ಮ ಮಗ ಬಾಳನ ಮದುವೆಯಲ್ಲಿ ನಾಕು ದಿನ ಅಷ್ಟೇ ಅವರು ಕಿರುಕಳ ರಜೆ ತೆಗೆಸಿದ್ದು. ಆನಂತರ ಎಂದೂ ಇಲ್ಲ. ನಮ್ಮ ಮಾತಿನಲ್ಲಿ, ಹೇಳಿಕೆಯಲ್ಲಿ ಅಪನಂಬಿಕೆ ಎನಿಸಿದರೆ ಸಾಲೆಯಿಂದ ಮನೆಗೆ, ಮನೆಯಿಂದ ಸಾಲೆಗೆ ದಿನಾಲು, ಅವರು ನಾಕು ಸಲ ಎಡತಾಕಿದ ಈ ರಸ್ತೆಯ ಸಾಕ್ಷಿಬೇಕಾದರೆ ಕೇಳಿರಿ. ಮನೆಯಿಂದ ಶಾಲೆಗೆ ಬರುವಾಗ ಈ ಬದಿ, ಶಾಲೆಯಿಂದ ಮನೆಗೆ ಹೋಗುವಾಗ ಆ ಬದಿ, ಬೀದಿಯ ಎರಡೂ ದಂಡೆಯಲ್ಲಿ ಅವರು ಕಳೆದ ೨೦-೨೫ ವರುಷ ಅಡ್ಡಾಡಿದ್ದಾರೆ.

ಮುಂಜಾನೆ ಏಳು ಗಂಟೆಗೆ ಇನ್ನೂ ಹತ್ತು ನಿಮಿಷವಿದ್ದಾಗ ಮನೆ ಬಿಟ್ಟರೆ, ಠಾಕೋಠಾಕ, ಶಾಲೆಯಲ್ಲಿ, ಏಳಕ್ಕೆ ಹಾಜರ್. ಹನ್ನೊಂದು ಗಂಟೆಗೆ ಮನೆ. ಮತ್ತೆ ಎರಡು ಗಂಟೆಗೆ ಹತು ನಿಮಿಷವಿದ್ದಾಗ ಶಾಲೆಗೆ ಪುನರಾಗಮನ, ಆರು ಗಂಟೆಗೆ ಮನೆಯ ಕಡೆಗೆ ನಿರ್ಗಮನ.

ಮಳೆಯ ದಿನಗಳಲ್ಲಿ ಮೋಡ ಕವಿದು ಹೊತ್ತಿರುವಾಗಲೇ ಕತ್ತಲಾಗಿದ್ದರೆ, ಬೀದಿಯ ಬದಿಗೇ ಇದ್ದ ಕಲ್ಲಪ್ಪನ ಕಿರಾಣಿಯ ಅಂಗಡಿಯಲ್ಲಿಯ ಗಿರಾಕಿ "ಶೆಟ್ರೇ, ಕತ್ಲಿ ಕಮಕಾಳಾತು, ದೀಪಾನರೇ ಬೆಳಗಸೋಪಾ" ಎಂದರೆ, ಶೆಟ್ಟಿ ಹೇಳುತ್ತಾನೆ, "ಮಳ್ಯs, ಪಂತಮಾಸ್ತರ ಇನಾ ಮನೀ ಕಡೆ ಹೊಂಟಿಲ್ಲಾ, ಕತ್ಲಿ ಅತ ಅಂತಾನ" ಪಂತರು ಅವನಿಗೆ ಕತ್ತಲೆ-ಬೆಳಕಿನ ಕಾಲಮಾಪಕ ಯಂತ್ರ. ಕಪ್ಪಡದಂಗಡಿಯ ರತನ್ ಶೇಡಜಿಯ ಹಳೆಯ Zಯ ಟಾಯಿಂಪೀಸ್, ಹಿಂದು-ಮುಂದಾಗಿದ್ದರೆ, ಶೇಡಜಿ, ಪಂತರ ಅಗಮನ-ನಿರ್ಗಮನದ ದಾರಿಕಾಯುತ್ತ ಕುಳಿತಿರುತ್ತಾನೆ. ಅವರು ಎರಡಕ್ಕೆ ಸಾಲೆಗೆ ಹೊರಟದ್ದರೆ, ಎರಡಕ್ಕೆ ಮೂರು ನಿಮಿಷ, ನಾಲ್ಕು ನಿಮಿಷ, ಗಡಿಯಾರದ ಮುಳ್ಳು ಹಿಂದೆ ಸರಿಸಿ, ರೇಡಿಯೋ ಟಾಯಿಮು ಹಚ್ಚಿಕೊಂಡು ಸಮಾಧಾನ ಪಡೆಯುತ್ತಾನೆ. ಶೇಡಜೀ ಗಡಿಯಾರ ಒಂದೆರಡು ಸಲ ಕೆಟ್ಟಿದೆ. ಆದರೆ ಪಂತಮಾಸ್ತರರ ಕಾಲಮಾಪಕ ಯಂತ್ರನತ್ ಜೀವನ ಬಿನ್ ತಕರಾರಿನಿಂದ, ಈ ಇಪ್ಪತ್ತೈದು ವರುಷ ಸರಾಗವಾಗಿ ನಡೆದಿದೆ.

ಆ ಖಾದೀ ಮುಂಡಾಸ, ಕೆಂಪು ಗೀರು ನಾಮ, ಸೆಟ್ ಕಾಲರಿನ ಖಾದಿಯ ಕೋಟು, ಕತ್ತಿನ ಸುತ್ತು ಒಂದು ಪ್ರದಕ್ಷಿಣೆ ಹಾಕಿ ಹೆಗಲಿನ ಒಂದು ಬದಿಯಿಂದ ಏರಿ, ಇನ್ನೊಂದು ಬದಿಯಿಂದ ಇಳಿದ ಖಾದಿಯ ದಪ್ಪ ಶಲ್ಲೆ, ಬಿನ್ ಕಾಟೇ

ಶ್ರೀ ರಾಮಚಂದ್ರ ಕೊಟ್ಟಲಗಿ ಧಾರವಾಡ

ಖಾದೀ ಧೋತರ, ಮುಧೋಳ ಮಾದರಿಯ ನವುರಾದ ಚಪ್ಪಲಿ, ಈ ಎಲ್ಲ ವಸ್ತ್ರ ವಸ್ತು-ಭೂಷಣ ಕೂಡ ಅವರ ದೇಹಕ್ಕಂಟಿ ಇಪ್ಪತ್ತೈದು ವರುಷದ ಮೇಲಾಯಿತು. ಎರಡು ಮಹಾ ಸಂಗ್ರಾಮ ನಡೆದುಹೋದವು. ವಿಶ್ವ ಪ್ರಳಯ ಮುಖದಿಂದ ನಿರ್ವಿಣ್ಣವಾಗಿ ಬದ್ದು ಸತ್ತು ಬದುಕಿತು. ಬಹಳ ಬದಲಾವಣೆಯಾಯಿತು. ಮುಖ ಪರಿಚಯ ಮರೆಯುವಷ್ಟು ಕದಲು ಬದಲಾಯಿತು. ಆದರೆ ಪಂತಮಾಸ್ತರರು ಹೇಗಿದ್ದರೋ ಹಾಗೇ ಇದ್ದಾರೆ. ಅದೇ ನಾಮ, ಅದೇ ವಸ್ತ್ರ ವಿನ್ಯಾಸ. ಅದೇ "ಯಂ ಶೈವಾಃ ಸಮುಪಾಸತೇ ಶಿವ ಇತಿ" ಪ್ರಾರ್ಥನೆ. ಅದೇ ಸ್ವರ್ಣ ವರ್ಣ. ಅದೇ ಆರು ಫೂಟನ ಎತ್ತರ. ಅದೇ ಭೂಮಿಗೆ ಅಭಿಮುಖವಾಗಿ ತಲೆಯೆತ್ತದೆ ನಡೆಯುವ ಗಂಭೀರ ಶೀವಿ. ಏನೂ ಏನೂ ಬದಲಾವಣೆ ಇಲ್ಲ. ಮುಖದ ಮೇಲೆ ಒಂದು ನೆರೆಯಿಲ್ಲ. ಒಂದು ಸುಕ್ಕಿನ ಗೆರೆಯಿಲ್ಲ. ಪಂತರನ್ನು ಮುಪ್ಪಿನ ಶಾಪ ತಟ್ಟಿಲ್ಲ. ಹರೆಯ ಹಂಣಾಗುವ ದಾರಿಯಲ್ಲಿದ್ದರೂ ಕಳಿತು ಕೊತಕೊತವಾಗಿಲ್ಲ. ಯಾರಾದರೂ ದಾರಿಯಲ್ಲಿ ಭೆಟ್ಟಿಯಾಗಿ "ನಮಸ್ಕಾರ್ರೀ ಮಾಸ್ತರs" "ನಮಸ್ಕಾರ ಪಂತ ಮಾಸ್ತsರ" ಎಂದರೆ, ಪಂತ ಮಾಸ್ತರರ ಜೋಡಿಸಿದ ಕೈ ನತಶಿರಕ್ಕೆ ತಂತಾನೇ ತಗಲುತ್ತಿದೆ. ಅವ್ಯಾಜ ಅಂತಃಕರಣದ ಮೀಸಲು ಮುರಿಯದ ಮಂದಹಾಸ ಮುಖದಲ್ಲಿ ರಾರಾಜಿಸುತ್ತಿದೆ. ಇಪ್ಪತ್ತೈದು ವರುಷದ ಹಿಂದೆಯೂ ಇದೇ ಪಾಂಗು. ಇಂದೂ ಇದೇ ಶೀವಿ. ಜಗತ್ತು ಬದಲಾಗಿದೆ, ಆದರೆ ಪಂತಮಾಸ್ತರರಲ್ಲಿ ಏನೂ ಬದಲಾವಣೆಯಾಗಿಲ್ಲ.

ಪಂತರ ಮಾನದಿಂದ ನೋಡುತ್ತಿರಲಾಗಿ, ಶ್ರೀಮತಿ ಪಂತರು--ನರ್ಮದಾಕಾಕೂ ಮುಪ್ಪಾದವರಂತೆ ಕಾಣಿಸುತ್ತಾರೆ. ಹಾಗೆ ಆಗುವ ಕಾರಣವಿರಲಿಲ್ಲ. ಒಂದೇ ಒಂದು ಮುತ್ತಿನಂತಹ ಕೂಸು ಹೆತ್ತು, ಅವಳು ಬಸಿರು-ಬಯಕೆ ಬಾಣಂತಿತನಕ್ಕೆ ಕೊನೆಯ ಶರಣಾರ್ಥಿ ಹೇಳಿದ್ದರು. ಅನ್ನ ಚಿಂತೆಯ ಝಳವೂ ತಾಕುವಂತಿರಲಿಲ್ಲ; ತಾಕಿಲ್ಲ. ಸಂಣಂದಿನವರಿರುವಾಗಲೇ, ಒಂದಿಷ್ಟು ದಮ್ಮು ಸೇರಿಕೊಂಡಿತ್ತು. ಅದೇ ಅವರನ್ನು ಆಗೀಗ ಹಂಣು ಮಾಡುತ್ತಿತ್ತು. ಋತುಮಾನ ಬದಲಿಸಿದಾಗ, ಅದರ ಕಾಟ ಹೆಚ್ಚಾಗಿ, ಅವರನ್ನು ಅಕಾಲಿಕ ವಾರ್ಧಕ್ಯದೆಡೆಗೆ ಎಳೆಯುತ್ತಿತ್ತು. ಇಲ್ಲದಿದ್ದರೆ ಅವರೂ ಪಂತರ ಬೆಲ್ಲದಚ್ಚಿನ ಗೊಂಬೆಯೇ !

ತುಂಬಿದ ಮುತ್ತೈದೆ. ಹಣೆಯ ತುಂಬ ಗೋದೀಗೀರು ಮಾಂಗಲ್ಯ ಚಿಹ್ನ. ಗಲ್ಲದಲ್ಲಿ ಅರಿಷಿಣ ಬೊಟ್ಟು, ತಲೆ ತುಂಬ ಎಳೆದುಕೊಂಡ ಸೆರಗು, ಕೇದಿಗೆಯ ವರ್ಣ. ಅಷ್ಟು ಕುಳ್ಳವಲ್ಲ, ಅಷ್ಟು ಬೀಸಲ್ಲ. ಮಾಟಾದ ತುಂಬಿದ ಮುತ್ತೈದೆ.

ಪಂತ ಮಾಸ್ತರರ ಹಿರಿಯರು, ರಾಮದಾಸ ಸ್ವಾಮಿಗಳ ಜಾಫಳದಿಂದ ಇತ್ತಕಡೆ ವಲಸೆ ಬಂದರೆಂದು ಹೇಳುತ್ತಾರೆ. ಪಂತರು ಜಾಫಳದಿಂದ ಬಂದದ್ದನ್ನು ಮರೆತಿದ್ದಾರೆ. ರಾಮದಾಸ ಸ್ವಾಮಿಗಳನ್ನು ಅಷ್ಟೇ, ಆರಾಧ್ಯ ದೈವತವನ್ನಾಗಿ ಮಾಡಿಕೊಂಡಿದ್ದಾರೆ. ಖಟ್ಟಿಗೆ ಹಚ್ಚಿ, ಐತಿಹಾಸಿಕ ಸಂಶೋಧನೆಯ ಆಸ್ಥೆ ಕೆರಳಿ ಯಾರೂ ಪಂತರನ್ನು ಕುಲವೃತ್ತಾಂತ ತಿಳಿಸಲು ಕೇಳಿಲ್ಲ. ಪಂತರೂ ಅದನ್ನು ಯಾರಿಗೂ ಹೇಳಿಲ್ಲ.

ಇಪ್ಪತ್ತು ವರ್ಷವಾಯಿತು. ಪಂತರು ಮುಲ್ಕೀ ಪರೀಕ್ಷೆಯ ವರ್ಗವನ್ನು ನಡೆಸಹತ್ತಿ. ಅವರು ಲೋ. ಬೋ. ಶಾಳಾಖಾತೆಯನ್ನು ಸೇರಿ ಐದು ವರುಷವಾದ ನಂತರ ಒಮ್ಮೆ ಹೆಡ್‌ಮಾಸ್ತರ, ಲಿಂಗಪ್ಪನವರು, ಪಂತರಿಗೆ ಮುಲ್ಕೀ ಪರೀಕ್ಷೆಯ ವರ್ಗದ ಚಾಲಕತ್ವ ವಹಿಸುವ ಸಂಧಿಯನ್ನು ಕಲ್ಪಿಸಿಕೊಟ್ಟರು. ಆ ವರ್ಷ ಪರೀಕ್ಷೆಗೆ ಹೋದ ಐದೂ ಹುಡುಗರು ಪಾಸಾದರು. ಶೇಕಡ ಪರಿಣಾಮನಾಯಿತು. ಮುಲ್ಕೀ ಪರೀಕ್ಷೆಯ ವರ್ಗ ಅಂದಿನಿಂದ ಪಂತರ ಕೊರಳಿಗೇ ಬಿತ್ತು. ಅಂದಿನಿಂದ ಇಂದಿನ ವರೆಗೆ, ಶಾಲೆಯ ರೆಕಾರ್ಡು ಹೇಳುತ್ತಿದೆ ಐದಕ್ಕೆ ಕಡಿಮೆ ಇಲ್ಲ, ಹತ್ತಕ್ಕೆ ಹೆಚ್ಚಿಲ್ಲ. ಅಷ್ಟು ಹುಡುಗರು ಪರೀಕ್ಷೆಗೆ ಕಟ್ಟುತ್ತಾರೆ; ಎಲ್ಲರೂ ಪಾಸಾಗುತ್ತಾರೆ. ನಮ್ಮೂರ ಶಾಲೆಯ ರೆಕಾರ್ಡು ಜಿಲ್ಹೆಯಲ್ಲಿಯೇ ಪ್ರಥಮಶ್ರೇಣಿಯದಾಗಿದೆ. ಪಂತರಿಗೆ ಶಾಲೆ, ಅದರಲ್ಲಿಯೂ ಮುಲ್ಕೀ ಪರೀಕ್ಷೆಯ ವರ್ಗ ಒಂದೇ ಧ್ಯಾಸಯಾವ ಅನ್ನ ಆಶೆ ಆಮಿಷ ಅವರನ್ನು ತುಡುಕಿಲ್ಲ. ಅವರ ಸಾಧನೆ, ನಿಷ್ಕಾಮ ನಿಷ್ಕಾಂಚನವಾಗಿ, ಕಳೆದ ಅಖಂಡ ಎರಡು ದಶಕದಿಂದ ಸಾಗಿದೆ. ಎಲ್ಲಿಯೂ ಖಂಡಬಿದ್ದಿಲ್ಲ.

ಆದರೆ ಲೋ ಬೋ. ಶಾಳಾ ಅಧಿಕಾರಿಗಳ ಗಮನಕ್ಕೆ ಪಂತರ ಸಾಧನೆಯು ದಿವ್ಯ ಬಂದಿಲ್ಲ. ಅವರ ಸಂಬಳದಲ್ಲಿ ಏರಿಳಿತವಾಗಿಲ್ಲ. ನಿರ್ದಿಷ್ಟ ಅವಧಿಗೆ ಸಿಗಬೇಕಾದ 'ಇಂಕ್ರಿಮೆಂಟ', ಅವಧಿಮೀರಿ ನಾಲ್ಕು ತಿಂಗಳ ನಂತರ ಸಿಗುತ್ತಿದೆ, ಮುಣುಗುವದಿಲ್ಲ. ಉಳಿದ ಶಿಕ್ಷಕರು 'ಇಂಕ್ರಿಮೆಂಟ' ಬರುತ್ತಿದೆ ಎಂದರೆ, ನಾಕು ರೂಪಾಯಿ ಖರ್ಚುಮಾಡಿ, ಡಿ. ಎಲ್. ಬಿ. ಆಫೀಸಿನ ಕಾರಕೂನ ಸಾಹೇಬರಿಗೆ, ಬೆಂಣೆ-ಬಾಳೆಯೆಲೆಯ ಅಲ್ಪ ನಜರಾಣೆಯನ್ನು ಅರ್ಪಿಸಿ, ಅವರನ್ನು ಖುಷ್‌ರನ್ನಾಗಿ ಮಾಡಿ, ಅದೇ ತಿಂಗಳೇ "ಇಂಕ್ರಿಮೆಂಟನ" ಹೆಚ್ಚಿನ ಸಂಬಳ ಪಡೆಯುತ್ತಾರೆ. ಪಂತರಿಗೆ ಅವರಷ್ಟು ಧಾವತಿ ಇಲ್ಲ. ಉಳಿದ ಶಿಕ್ಷಕರು, ಪಾಪ, ಮನೆತುಂಬ ಮಕ್ಕಳು ಮರಿ, ಜೀನೆ ಬೇಸರಿಕೆ, ಸಾಂಸಾರಿಕ ತಾಪತ್ರಯದಿಂದ ನುಗ್ಗಾದವರು. ಈ ಹೆಚ್ಚಿನ ಸಂಬಳದ ಎರಡೋ, ನಾಕೋ ರೂಪಾಯಿಯೇ ಅವರಿಗೆ ಎಷ್ಟೋ ಆಧಾರ. ಅದನ್ನು ಪಡೆಯಲು ನಾಕಾರು ಈಗ ಕೈಬಿಟ್ಟರೂ ಅನ್ಯಾಯವಲ್ಲ. ಪಂತ ಮಾಸ್ತರರಿಗೆ ಅಂಥ ತಾಪತ್ರಯವೂ ಇಲ್ಲ, ತಗಾದೆಯೂ ಇಲ್ಲ.

"ಪಂತರೇ, ನಿಮ್ಮ ಇಂಕ್ರೀಮೆಂಟ, ನಾಕ ತಿಂಗಳದ್ದು ಬರಬೇಕು. ಒಂದು ಅರ್ಜೀನರs ಮಾಡರೀ" ಎಂದು ಸಹ ಶಿಕ್ಷಕರು ಪಂತರನ್ನು ಪುಸಲಾಯಿಸುತ್ತಾರೆ. ಪಂತರು ತಮ್ಮ ಅವ್ಯಾಜ ಮೃದುಹಾಸ ಸೂಸಿ, ಕೈಮುಗಿದು ವಂದಿಸುತ್ತಾರೆ.

"ಮಾಸ್ತರs ಡಿ. ಎಲ್. ಬಿ. ಅಂಥಾ ಮಹಾ ಸಂಸ್ಥಾ s ಬಡ ಶ್ಯಾ. ಮಾ. ನ ಋಣದಾಗ ಅದs ಅಷ್ಟ s ಅಭಿಮಾನ ನಮಗ ನಿಮಗ. ಬರಲಿ, ಬರಲಿ ಇಂಕ್ರಿಮೆಂಟು ಎಲ್ಲಿ ಓಡಿ ಹೋಗತದ. ಸರಕಾರದ ಮ್ಯಾಲಿನ ಸಾಲಾ ಎಂದೂ ಮುಣುಗೂ ಹಾಂಗಿಲ್ಲಾ."

ಇದು ಇಂಕ್ರಿಮೆಂಟ ಬಂದಾಗಲೆಲ್ಲ ನಡೆಯುವ ಠರಾವಿಕ ಮಾತು. ಇಂಕ್ರಿಮೆಂಟನ ಒಟ್ಟು ಹಣ ಕೂಡಿ ಬಂದರೆ, ಪಂತರು ಅದನ್ನು ಪೋಸ್ಟಿನಲ್ಲಿ ಬಾಳನ ಹೆಸರಿಗೆ ಜಮಾ ಮಾಡಿಬಿಡುತ್ತಾರೆ.

ಪಂತರು ಮೂವತ್ತು ರೂಪಾಯಿ ಸಂಬಳ ಸಿಗುವಾಗಲೂ ಐದು ರೂಪಾಯಿ ಪ್ರಾವ್ಹಿಡೆಂಟ ಫಂಡು ತೆಗೆದಿಡುತ್ತಿದ್ದರು. ಈಗ ಎಂಭತ್ತು ಸಿಗುತ್ತಿದ್ದರೂ ಐದೇ ರೂಪಾಯಿ ತೆಗೆದಿಡುತ್ತಾರೆ. ಪೋಸ್ಟಿನಲ್ಲಿ ಐದು ರೂಪಾಯಿ ಜಮಾ ಮಾಡುತ್ತಾರೆ. ಬಾಳ ಕಲಿಯುವದು ಮುಗಿದಿದೆ. ಇದೇ ವರ್ಷ ನವಕರಿಗೂ ಹತ್ತಿದ್ದಾನೆ. ಅವನಿಗೆ ಹಣ ಕಳಿಸುವ ಅಗತ್ಯ ಉಳಿದಿಲ್ಲ. ಪೋಸ್ಟಿನಲ್ಲಿ ಪ್ರತಿ ತಿಂಗಳೂ ಮೂವತ್ತು ರೂಪಾಯಿ ಜಮಾ ಮಾಡಿದರೂ ನಡೆಯುತ್ತಿದೆ. ಅದರಿಂದ ಅವರಿಗೆ ತೊಂದರೆ ಎನಿಸುವದಿಲ್ಲ. ಗಾಡಿ ಏನಾದರೂ ರೂಳು ಬಿಟ್ಟು ಸರಿದರೆ, ಅಡಿಅಡಚಣೆಯ ವೆಚ್ಚದ ಬಾಬು ಕಾಣಬೇಕು. ಅದು ಶಕ್ಯವೇ ಇಲ್ಲ. ಪಂತರ ಗಾಡಿ, ಬ್ರೆಕ್‌ಡೌನ ಆಯಿತು, ಫೇಲ ಆಯಿತು ಎಂದದ್ದನ್ನು ಯಾರೂ ಕಂಡಿಲ್ಲ, ಯಾರೂ ಕೇಳಿಲ್ಲ.

ಪಂತರ ಹಿರಿಯರಿಂದ ಬಂದ ಒಂದು ಮನೆಯಿದೆ. ಮನೆಯ ಮೂರು ಪಟ್ಟು ದೊಡ್ಡ ಹಿತ್ತಲವಿದೆ. ಒಂದು ಹತ್ತು ಎಕರೆಯ ಬೆಂಣೆಯಂತಹ ಮಂಣಿನ ಭೂಮಿಯಿದೆ. ಪಂತರ ಹೊಲವನ್ನು ಅರ್ಧಪಾಲಿನಿಂದ ಗೌಡರು ಸಾಗುಮಾಡುತ್ತಿದ್ದಾರೆ ಎಂದೂ ಲಾವಣಿ ತಪ್ಪಿಲ್ಲ. ಕಾಳುಕಡಿಯನ್ನು ಕೊಡುವದನ್ನು ತಪ್ಪಿಸಿಲ್ಲ. ತಗಲಿಗೆ ಅವಕಾಶವೇ ಇಲ್ಲ ಇಬ್ಬರಲ್ಲೂ. ಪಂತರ ಹೊಲ ಬೆಳೆಯಲಿಲ್ಲ ಪಡ ಬಿತ್ತು, ಕೈ ಕೊಟ್ಟಿತು ಈ ವರ್ಷ, ಎನ್ನುವ ಮಾತು ಎಂದೂ ಕೇಳಿ ಬಂದಿಲ್ಲ.

ಪಂತರ ದೊಡ್ಡ ಹಿತ್ತಲಲ್ಲಿ ಅಪಲಾಂಡ ಹತ್ತಿಯ ಹತ್ತಿಪ್ಪತ್ತು ಗಿಡ ಇವೆ. ಎರಡು ಮೂರು ವರುಷ ಕ್ಕೊಮ್ಮೆ ಕಟಾವಾಗಿ, ಮತ್ತೆ ಬೇರೆ ಅಗಿ ಚಿಗಿತು ಗಿಡವಾಗುತ್ತಿವೆ. ಇದರ ಹತ್ತಿಯನ್ನೆಲ್ಲ ಬಿಡಿಸುವದು, ಹಿಂಜುವದು, ಅರಳೆ ಮಾಡುವದು, ನೂಲುವದು, ನೂತ ಕುಕ್ಕಡಿಯನ್ನು ನೆಯ್ಗಾರನಿಗೆ ಕೊಟ್ಟು ತಮಗೆ ಬೇಕಾದ ಅರಿವೆ ಮಾಡಿಸಿ ಪಡೆಯುವರು. ಚಚ್ಚೌಕ ಮಡಿಯಲ್ಲಿ, ಕೋತಂಬರಿ, ಮೆಂತೇಪಲ್ಲೆ, ರಾಜಗಿರಿ, ಮೆಣಸಿನ ಅಗಿ ಮಲಮಲಿಸುತ್ತಿವೆ. ಬಚ್ಚಲ ನೀರಿನ ಸೆಲೆಗೆ ಆಸರೆ ಹಿಡಿದ ಬಾಳೆ, ಶಾಂವಿಯ ಪಲ್ಲೆ ಯಾವಾಗಲೂ ಹಸಿರು ಮುರಿಯುತ್ತಿವೆ. ಶಾಲೆ ಬಿಟ್ಟಮೇಲೆ ಪಂತರಿಗೆ ಅನ್ಯ ಉದ್ಯೋಗವೇ ಇಲ್ಲ. ತಾಸು, ಅರ್ಧತಾಸು ನೂಲುವದು, ಹಿತ್ತಲಲ್ಲಿ ಹರಿ ಕಡಿದೆ, ಬೂದಿ ಶಗಣಿ ಬೆರೆಸಿದ ಗೊಬ್ಬರ ಚೆಲ್ಲಿದೆ, ಪಡವಲ ಅವರೆಯ ಬಳ್ಳಿಗೆ ಹಂದರ ಹಾಕಿದೆ, ಇದೇ ಪಂತರ ಕೆಲಸ. ಚೊಗಚೆಯ ಗಿಡ, ತುಳಸಿ, ಅಷ್ಟೇ. ದೇವರ ಪೂಜೆಯ ಅಗತ್ಯದ ಪತ್ರಪುಷ್ಪದ ಯೋಜನೆಯನ್ನು ಪಂತರು ಮಾಡಿದ್ದರು. ಬಾಳ ಅದರಲ್ಲಿ ಭರತೀ ಹಾಕಿದ. ಕಾಲೇಜಿನಿಂದ ತಿರುಗಿ ಬರುವಾಗೊಮ್ಮೆ ಗುಲಾಬಿ, ಮಲ್ಲಿಗೆ, ಮೋಗರಾ ಅಗಿ ತಂದು ಹಚ್ಚಿದ. ಅವೂ ಚಿಗಿತು ಮಲಮಲಿಸಿವೆ. ವಸಂತ ಶ್ರೀಯನ್ನು ಧರಿಸಿ ಪುಷ್ಪಿತೆಯಾಗುತ್ತಿವೆ. ಪಂತರು ಹೆಚ್ಚಿನ ಹೂವನ್ನು, ನಿತ್ಯ, ಬಾಳೆಯ ಎಲೆಯ ದೊಡ್ಡ ದೊನ್ನೆಯಲ್ಲಿ ಹಾಕಿ, ವಿಠ್ಠಲರಕುಮಾಯಿಯ ಗುಡಿಗೆ ಪೂಜೆಗೆಂದು ಕೊಟ್ಟು ಬರುತ್ತಾರೆ. ಗುಡಿಯ ಅರ್ಚಕ ನಾರಾಯಣಭಟ್ಟ ಎಂದೂ ತಾನಾಗಿಯೇ ಹೂ-ತುಳಸಿ ತರುವ ಶ್ರಮವನ್ನೇಲ್ಲ ತೆಗೆದುಕೊಂಡಿಲ್ಲ. ಪಂತರ ಅಲ್ಪ ದೇವತಾಸೇವೆಗೆ ಅನುವು ಮಾಡಿಕೊಡುತ್ತಿದ್ದಾನೆ.

ಮೊದಲನೇ ಅಸಹಕಾರದ ಕಾಲದಲ್ಲೇ ಪಂತರು ಖಾದೀ-ಸ್ವದೇಶಿ ವ್ರತಧಾರಣೆ ಮಾಡಿದರು. ಸ್ಥೂಲ ವ್ಯಾಪಕಾರ್ಥದಲ್ಲಿ ಅದನ್ನು ಸ್ವೀಕರಿಸಿದರು. ಪಂತರು ಆಣೆಮಾಡಲಿಲ್ಲ, ಪ್ರತಿಜ್ಞೆ ಪಣ ಕೊಡಲಿಲ್ಲ. ದರಿದ್ರನಾರಾಯಣ ಆದೇಶ ಕೊಟ್ಟಿದ್ದಾನೆ. ಕಾಲಲ್ಲಿ-ಕೈಯಲ್ಲಿ-ಜೀವದಲ್ಲಿ ಶಕ್ತಿ ಇರುವತನಕ ನಡೆಸುತ್ತೇನೆ. ಅದನ್ನು ನಡೆಸುವ ಭಾರವೂ ಅವನದೇ, ನಾನು ಕೇವಲ ಸಾಧಕ ಎಂದು ವ್ರತವನ್ನು ಅಂಗೀಕರಿಸಿದರು. ಇಂದಿನ ತನಕವೂ ಪಾಲಿಸುತ್ತ ಬಂದಿದ್ದಾರೆ. ಅವರಲ್ಲಿ ಒಂದೇ ಒಂದು ವಿದೇಶಿ ಚಟವಿದೆ. ಅದು ತಪ್ಪದೆ ಎರಡುಹೊತ್ತು ಮಾತ್ರ ಸೇವಿಸುವ ಎರಡು ಕಪ್ಪ ಚಹ. ಉಂಡ ಊಟ, ಕುಡಿದ ನೀರು, ಮುಂಜಾನೆ ಶಾಲೆಗೆ ಹೋಗುವಾಗ, ಸಂಜೆ ಶಾಲೆಯಿಂದ ಬಂದಮೇಲೆ ಕುಡಿಯುವ ಒಂದೊಂದು ಕಪ್ಪ ಚಹ. ಅಡಿಕೆಯ ಹೋಳು-ಅರ್ಧಎಲೆ ಕೂಡ ಎಂದೂ ಅವರು ಮುಟ್ಟಿಲ್ಲ.

ಪಂತ ಮಾಸ್ತರರು ದೈವದಲ್ಲಿದ್ದೂ ಸುಖ ಅನುಭೋಗಿಸದ ನಿರ್ಭಾಗ್ಯರೆಂದು ಜನರ ತಕರಾರು. "ಇರುವವರು ಮೂವರು. ಗಂಡ - ಹೆಂಡತಿ - ಒಂದು ಹುಡುಗ; ರಾಜನಂತೆ ಇರಬೇಕು, ಅದನ್ನು ಬಿಟ್ಟು ಸುಮ್ಮನೇ ಹೊಟ್ಟೆ ಸುಟ್ಟುಕೊಳ್ಳುತ್ತಾರೆ, ಇಷ್ಟು ಯಾರಿಗಾಗಿ ಮಾಡಿಟ್ಟು ಹೋಗುತ್ತಾರೆ" ಎಂದು ಜನ ಕೇಳುತ್ತಾರೆ. ತಮ್ಮ ತಮ್ಮಲ್ಲಿಯೇ ಚರ್ಚಿಸುತ್ತಾರೆ. ಯಾರಿಗೂ ಪಂತರ ಅರ್ಥವಾಗಿಲ್ಲ. ಹೊರನೋಟಕ್ಕೆ ಪಂತರು ಸುಖಿಯಾಗಿ-ಸಮಾಧಾನಿಯಾಗಿ ಕಾಣುತ್ತಾರೆ. ನಾಕು ಜನರೆದುರು ತಮ್ಮ ಸುಖ-ದುಃಖ ಹೇಳಿಕೊಳ್ಳುವದಿಲ್ಲ. ಜಗತ್ತಿಗೆ ತನ್ನ ಭಾರ ತನಗೇ ಹೊರಲಾರದಾಗಿರುವಷ್ಟರ ಕಲ್ಪನೆ ಅವರಿಗಿದೆ. ತಮ್ಮ ಒಂದು ಮರದ ಭಾರವನ್ನೂ ಅವರು ಆ ಒಜ್ಜೆಯಲ್ಲಿ ಹಾಕಲಾರರು.

ಮೂವರೂ ರಾಜನಂತೆ ಇದ್ದರೆ, ಬಾಳನ ಶಿಕ್ಷಣವಾಗುತ್ತಿರಲಿಲ್ಲ. ಅವನನ್ನು ಕಲಿಸಿ ಮುಂದೆ ತಂದು, ಮನುಷ್ಯನನ್ನಾಗಿ ಮಾಡಲು ಎರೆದ ತುಟಿ-ಪುಂಜೀ ಬಂಡವಲವನ್ನು, ತಮ್ಮ ರಾಜೋಪಭೋಗಕ್ಕೆ ವಿನಿಯೋಗಿಸಿದ್ದರೆ, ಬಾಳ ಮನುಷ್ಯನಾಗುತ್ತಿದ್ದಿಲ್ಲ. ಸಾಲ-ಸೋಲು ಮಾಡಿ ಅವನಿಗೆ ಕಲಿಸಿದ್ದರೆ ವಿದ್ಯೆಯೊಡನೆ ಸಾಲ ಮಾಡುವ, ಅಂದಾಧುಂದೀ ವೆಚ್ಚ ಮಾಡುವ ವಿದ್ಯೆಯನ್ನೂ ಅವನಿಗೆ ಕಲಿಸಿದಂತಾಗುತ್ತಿತ್ತು. ಹಡೆದ ತಂದೆಯಾದ್ದರಿಂದ, ಅವನನ್ನು ತಿದ್ದಿ ತೀಡುವ ಕರ್ತವ್ಯಕರ್ಮ ತಮಗೆ ದೇವರ ಆದೇಶ. ಅದನ್ನು ತಪ್ಪಬಾರದು ; ತಪ್ಪಿದರೆ ಹುಟ್ಟಿಸಿದ ತಂದೆಗೆ ತಾವು ಕೃತಘ್ನರಾದಂತೆ; ಮಗನಿಗೆ ಅನ್ಯಾಯ ಬಗೆದಂತೆ. ಪಂತರು ಈ ರೀತಿ ಭಾವಿಸಿದ್ದಾರೆ.

ಜನರೆನ್ನುವ ರಾಜೋಪಭೋಗದ ಅರ್ಥವೂ ಅವರಿಗಾಗಿಲ್ಲ. ಪಂತರು ತಮ್ಮ ಮಟ್ಟಿಗೆ ರಾಜವೈಭವವನ್ನೆಲ್ಲ ಅನುಭವಿಸುತ್ತಾರೆ. ಮನೆಯಲ್ಲಿ ಆಕಳಿದೆ. ಅದರ ಸೇವೆಯನ್ನು ಮನಸಾ ಮಾಡುತ್ತಾರೆ. ಅದು ಒಲಿದು ಕೊಟ್ಟ ಹಾಲು-ಹೈನದಲ್ಲಿ ಸುಖ ಹಚ್ಚಿಕೊಂಡು ಉಣುತ್ತಾರೆ. ಹಿತ್ತಲಲ್ಲಿ ಪಲ್ಲೆ ಕಾಯಿಯ ಸಂಪತ್ತಿದೆ. ತಮ್ಮ ಹೊಲದ ಕಾಳು-ಕಡಿ ಬರುತ್ತಿದೆ. ತಾನೇ ಹಚ್ಚಿ ಬೆಳೆಸಿದ ಹತ್ತಿಯನ್ನು ಹಿಂಜಿ ನೂತು ಅಂಗವಸ್ತ್ರ ಮಾಡಿಕೊಳ್ಳುತ್ತಾರೆ. ಎಲ್ಲಾ ಶ್ರಮದ, ಬೆವರು ಹರಿಸಿ ದುಡಿದ ಸಾಧನೆಯ ಅಮೃತಫಲ. ಇದಕ್ಕಿಂತ ಅವರು ಇನ್ನಾವ ಹಿರಿಯ ರಾಜವೈಭವಕ್ಕೆ ಕೈ-ಚಾಚಬೇಕಾಗಿದೆ ?

ಜನರ ಅಂಬೋಣ ಬೇರೆ. ಪಂತರು ತಮ್ಮಂತೆ ಸಾಲ ಮಾಡಿಲ್ಲ. ಅದರ ನೆರಳಾಟದಲ್ಲಿ ನವೆದು ಕಿರಿಕಿರಿ ಮಾಡುವದಿಲ್ಲ. ಹತ್ತು ಜನರಲ್ಲಿ ಆ ನೋವಿನ ಸಂಕಟ ತಾಳದೆ ಅಕ್ರಂದನ ಮಾಡುವದಿಲ್ಲ. ಹೊಟ್ಟೆಕಡಿತವೂ ಅನೇಕ ಮುಖವಾಗಿದೆ. ಪಂತರನ್ನು ಕಂಡು ಆಡಿಕೊಳ್ಳುವ ಜನರ ಹೊಟ್ಟೆ ಕಡಿತ ಈ ಮಾದರಿಯದು. ಜನರು ಪಂತರಿಗೆ ಇದನ್ನು ಹೇಳಿದ್ದಾರೆ. ಪಂತರು ಕೈಮುಗಿದು, ಮುಗುಳುನಗೆ ನಕ್ಕಿದ್ದಾರೆ. ಅಷ್ಟೇ ಅವರ ಮಾತಿಗೆ ಪಂತರ ಉತ್ತರ. ರಾಜವೈಭವದ ಜೀವನವನ್ನು ನಡೆಸುತ್ತಿರುವ ಜೀವನದ ಪಲ್ಲವಿ.

ಬಾಳನಿಗೆ ಹನ್ನೆರಡು ಹದಿಮೂರು ವರುಷ ಶಹರಿನಲ್ಲಿ ಇಟ್ಟು ವಿದ್ಯೆ ಕಲಿಸಿದರು. ಊರಲ್ಲಿದ್ದಾಗ ಬಾಳ, ಅವರ ನರ್ಮದಾಕಾಕೂನ ಅಂಗೈಯಲ್ಲಿ ಬೆಳೆದಿದ್ದ. ಅವನು ಶಹರಿಗೆ ಹೋದ ಮೇಲೆ ಖಾನಾವಳಿಯ ಊಟ, ಅಭ್ಯಾಸದ ಸಾಧನೆಗೆ ತೊಡಕಾಗಬಾರದೆಂದು, ನಿತ್ಯ ಮೋಟಾರಿಗೆ ಡಬ್ಬಿ ಕಳಿಸುತ್ತಿದ್ದರು. ಬಾಳ ಮ್ಯಾಟ್ರಿಕ್ ಮುಗಿಸಿ ಪುಣೆಗೆ ಹೋದ. ಎಮ್. ಎಸ್ ಸಿ. ಆಗುವ ತನಕ ಆರೆಂಟು ವರುಷ ಗತಿಯೇ ಇರಲಿಲ್ಲ. ಅವನೂ ಪಂತರ ಗರಡಿಯಲ್ಲಿ ಸಾಧನೆ ಮಾಡಿದವ. ಸ್ಕಾಲರಶಿಪ್, ಫ್ರೀಶಿಪ್, ಶಿಕೋಣಿ ಎಲ್ಲಾ ದಾರಿಯಲ್ಲೂ ಶ್ರಮಿಸಿ, ಪಂತರಿಗೆ ಹೊರದ ಭಾರವಾಗಿ ಕೀರ್ತಿ ಬರುವ ರೀತಿಯಲ್ಲಿ ಪಾಸಾಗಿದ್ದ.

ಮ್ಯಾಟ್ರಿಕ್ ಆಗುವ ತನಕ, ನಂತರ ಎಮ್. ಎಸ್ ಸೀ. ಮುಗಿಯುವ ತನಕ, ಬಾಳ, ಈ ಹದಿಮೂರು ಹದಿನಾಲ್ಕು ವರುಷ ಅಖಂಡ, ವನವಾಸ-ಉಪವಾಸ ಭೋಗಿಸಿದ್ದಾನೆ. ಮ್ಯಾಟ್ರಿಕ್ ಆಗುವ ತನಕ, ಊಟಕ್ಕೆ, ಊರಿನಿಂದ ನಿತ್ಯ

ಒಂದು ಹೊತ್ತು ಡಬ್ಬಿ ಬರುತ್ತಿತ್ತು. ನರ್ಮದಾ ಕಾಕೂನ ಕೈಯ, ಅಂತಃಕರಣದ ಚಟ್ನಿಣಿ ಭಕ್ಕರಿ ಬಂದರೆ, ಅದನ್ನೇ ಅಮೃತಸಮವಾಗಿ ಭಾವಿಸಿ, ಬಾಳ, ಎರಡೂ ಹೊತ್ತಿಗೂ ಮಿಗುವಂತೆ ಉಳಿಸಿ, ಉಂಡು ಶಾಲೆ ಕಲಿತ. ನೀರು ಕಾಸಿಕೊಳ್ಳುವ ಭಾನಗಡಿಯಲ್ಲಿ ಎಂದೂ ಬೀಳಲಿಲ್ಲ. ಮಳೆ-ಗಾಳಿ ಬಿಸಿಲು ಯಾವ ಋತುಮಾನ ಬಂದು ಸರಿದು ಹೋದರೂ, ಬಾಳನಿಗೆ ನಳದ ತಣ್ಣೀರಿನ ಸ್ನಾನವೇ. ಮೂರು ರೂಪಾಯಿಯ ಒಂದು ಗುಬ್ಬಿಯ ಗೂಡಿನಷ್ಟು ಸಣ್ಣದಾದ ಕೋಣೆ, ಮಿಣಮಿಣಕು ಕಂದೀಲು. ಇಲ್ಲಿ ಏಳು ವರುಷ ತೆಗೆದ. ಗರಡೀ ಸಾಧನೆಯಲ್ಲಿ ಮೈ-ಮನ ಎರಡೂ ನುರಿಗೊಂಡವು. ಕಾಲೇಜಿಗೆ ಹೋದ ಮೇಲೆ ಪುಣೆಯಲ್ಲಿಯೂ ಇದೇ ವ್ರತತೊಟ್ಟ. ಊರು ಎರಡುನೂರುಮೈಲಿನ ಅಂತರದಲ್ಲಿದೆ. ಡಬ್ಬಿಊಟಕ್ಕೆ ಹೇಗೆ ಬಂದೀತು? ಬಾಳ, ಒಂದು ಇದ್ದಲೆಒಲೆ ಮಾಡಿದ. ಮುಂಜಾನೆ ನಾಲ್ಕು ಚಪಾತಿ, ಏನು ಸಿಕ್ಕಿತು ಅದರ ಪಲ್ಯ ಮಾಡಿದನೆಂದರೆ ತೀರಿತು. ಮತ್ತೆ ಮರುದಿನವೇ ಒಲೆ ಹೊತ್ತುವದು.

ಪಂತರು ಕಳಿಸುವ ಹಣ ಅವನ ಸ್ಕಾಲರಶಿಪ್ ಶಿಕೋಣಿಯ ಹಣ ಕೂಡಿ ಅವನಿಗೆ ಖಾನಾವಳಿಯಲ್ಲಿ ಉಂಡು ತಿಂದು ಇರುವಷ್ಟಕ್ಕೆ ಸಾಕಾಗಬಹುದಾಗಿತ್ತು. ಆದರೆ ಬಾಳನಿಗೆ, ಊರಲ್ಲಿಯ, ಪಂತರ-ನರ್ಮದಾಕಾಕೂನ ಒಂದೇ ಧ್ಯಾನ. ಅವರು ಹೊಟ್ಟೆ ಸುಟ್ಟುಕೊಂಡು, ಮೈ-ಮಾನ ಮುಚ್ಚಲಿಕ್ಕೆ, ಅಷ್ಟು, ಎಂಥದೆಂದರೆ ಅಂಥ ಅರಿವೆ ತೊಟ್ಟುಕೊಂಡು ಇದ್ದು ಬಿದ್ದುದನ್ನು ತನಗೆ ಕಳಿಸುತ್ತಾರೆ. ಆ ಋಣ ತೀರಿಸಬರದು. ಅದನ್ನು ತೀರಿಸುವ ಒಂದೇ ಮಾರ್ಗವೆಂದರೆ ತಾನು ಓದಬೇಕು—ಅಭ್ಯಾಸ ಮಾಡಬೇಕು-ಪಾಸಾಗಬೇಕು-ಕೀರ್ತಿತರುವಂತೆ ಪಾಸಾಗಬೇಕು. ಎಷ್ಟು ಸಾಧ್ಯ ಅಷ್ಟು ಶ್ರಮಿಸಿ ಬಡತನದಲ್ಲಿ ಜೀವನ ಕಂಠಿಸಬೇಕು. ಪಂತರಿಗೆ ಹೊರದ ಭಾರವಾದ ಎನಿಸಿರಬಾರದು–ಇದೇ ಒಂದು ಧ್ಯಾಸ ಬಾಳನಿಗೆ.

ಪಂತರು ಅವನಿಗೆ, ಹೀಗಲ್ಲ ಹೀಗೆ, ಎಂದು ಎಂದೂ ಹೇಳಿರಲಿಲ್ಲ. ಅವರ, ನರ್ಮದಾಕಾಕೂನ ಜೀವನರೀತಿಯೇ ಸ್ವಯಂ ವೇದ್ಯವಾಗಿತ್ತು. ಬಾಳ ಅದನ್ನು ನೋಡಿಯೇ ತನ್ನ ಜೀವನವನ್ನು ತಿದ್ದುತ್ತಿದ್ದ–ತೀಡುತ್ತಿದ್ದ,–ಬಾಳ. ಕಚ್ಚಾ ಗುರುವಿನ ಚೇಲಾ ಅಲ್ಲ.

ಬಾಳ ಈಗ ಮುಂಬೈಯಲ್ಲಿ ಪ್ರಖ್ಯಾತ ಔಷಧ ಕಂಪನಿಯಲ್ಲಿ ನಾಕಾರುನೂರು ರೂಪಾಯಿಯ ಸಂಬಳದ ಹುದ್ದೆಯಲ್ಲಿದ್ದಾನೆ. ಹಿಂದೆ ಪಂತರು ಕಳುಸುತ್ತಿದ್ದ ತಿಟಮಿಟ ಹಣದಲ್ಲಿಯೇ ಕಾಲು ತಲೆಕಡಿದು, ರೂಪಾಯಿ ಎಂಟಾಣೆ ಉಳಿಸಿ-ಉಳಿಸಿ ಅದನ್ನು ಪೋಸ್ಟಿನಲ್ಲಿ ಜಮಾ ಮಾಡಿ, ನೂರಿನ್ನೂರರ ಅಂಕಿಯ ವರೆಗೂ ಒಯ್ದಿದ್ದ. ಪಂತರು ಯಾವಾಗಲೋ ಒಮ್ಮೆ ಅವನ ಪಾಸ ಬುಕ್ಕ ನೋಡಿದರು. ತಟತಟ ನಾಕುಹನಿ ಕಂಣೀರುದುರಿಸಿದರು. ಅದು ಧನ್ಯತೆ ಎನಿಸಿದ ಜೀವನದ ಆನಂದಾಶ್ರು. ಅಂತಃಕರಣ ದಿಂದ ಚಿಮ್ಮಿದ ಆ ಅಭಿಮಾನ ಅವರ್ಣನೀಯ.

ಬಾಳ ಮೊದಲನೇ ಸಂಬಳವಾದ ಮೇಲೆ, ತಾನು ಕೂಡಿಸಿಟ್ಟ ಹಣಕ್ಕೆ ಇನ್ನಿಷ್ಟು ಭರತಿ ಹಾಕಿ, ತಾಯಿಗೆ — ನರ್ಮದಾಕಾಕೂನಿಗೆ ಬಂಗಾರದ ಎರಡೆರಡು ಬಳೆ ಮಾಡಿಸಿದ. ಅದನ್ನು ಅವನು ತಾಯಿಗೆ ಅರ್ಪಿಸಿದ ದಿನ ಪಂತರು ಉಕ್ಕಿ ಬಂದ ದುಃಖವನ್ನು — ಆನಂದವನ್ನು ವ್ಯಕ್ತಪಡಿಸಲು ಒಂದೇ ಪವಿತ್ರಸ್ಥಾನವನ್ನು ಹುಡುಕಿಕೊಂಡು ಹೋದರು. ಅಡುಗೆಯ ಮನೆಯಲ್ಲಿಯ ದೇವರ ಕಟ್ಟೆಯ ಎದುರು ನಿಂತು, ನತಶಿರರಾಗಿ — ಕೈ ಜೋಡಿಸಿ ಮೂಕರಾಗಿ, ಅಶ್ರುನಯನರಾಗಿ ದೇವರಿಗೆ ನಿವೇದಿಸುತ್ತಿದ್ದರು. ಪಂತರ ನಿವೇದನೆ-ಪರಮಾತ್ಮನ ಸಾಂತ್ವನ ಅವರಿಬ್ಬರಿಗೇ ಅರ್ಥವಾಗಬೇಕು ; ನಮಗಲ್ಲ.

ಪಂತರ ಶಿಷ್ಯಸಮೂಹ ದೊಡ್ಡದಿದೆ. ಯಾರೂ ಅವರನ್ನು ಮರೆತಿಲ್ಲ. ಮರೆಯುವಂತೆಯೂ ಇಲ್ಲ. ಪಂತರಿಗೆ ಪ್ರತಿ ಶಿಷ್ಯನಲ್ಲಿ 'ಬಾಳ' ಕಾಣಿಸಿದ್ದಾನೆ. ಅವರಲ್ಲಿ ಯಾವನೋ ಒಬ್ಬ ಡಾಕ್ಟರನಾದ,

ಇನ್ನೊಬ್ಬ ವಕೀಲನಾದ, ಮಗದೊಬ್ಬ ಮಾಮಲೇದಾರನಾದ. ಇಂಥ ಸುದ್ದಿಯನ್ನು ಪಂತರು ಕೇಳಿದ ದಿನ, ದೇವರೆದುರು ತುಪ್ಪದ ದೀಪ ಹಚ್ಚುತ್ತಾರೆ. ನತಶಿರರಾಗಿ, ಕೈಜೋಡಿಸಿ ಆ ಶಿಷ್ಯನ ಉದ್ದಂಡ ಆಯುಷ್ಯದ ಕ್ಷೇಮಚಿಂತನೆಯನ್ನು ಶ್ರೀಹರಿಗೆ ನಿವೇದಿಸುತ್ತಾರೆ.

ಮುಲ್ಕೀಪರೀಕ್ಷೆಯ ಪರಿಣಾಮ ಶೇಕಡ ಪ್ರಮಾಣದಲ್ಲಿ ಆಗುವದರ ಕಾರಣ ಇದೇ – ಅವರ "ಚಾಳನ" ಸರ್ವವ್ಯಾಪಕತ್ವ.

ಕನ್ನಡ ಶಾಲೆಯಲ್ಲಿಯ ಈ ಪಂತೋಜಿಯವರ ಮಗ ಚಾಳನಿಗೆ, ಕಾಲೇಜಿನಲ್ಲಿಯ ಇನ್ನೊಬ್ಬ ದೊಡ್ಡ ಪಂತೋಜಿ, ತಮ್ಮ ಕನ್ಯೆಯನ್ನು ಧಾರೆ ಎರೆದುಕೊಟ್ಟರು. ಪಂತ ಮಾಸ್ತರರ ಸೊಸೆ "ಸೋನಾ" ರತ್ನದಂತಹ ಹುಡುಗಿ. ಅವಳನ್ನು ತೋರಿಸಲಿಕ್ಕೆ ಬಂದಾಗಲೇ ನರ್ಮದಾಕಾಕೂ ಹೇಳಿದರು. ಸೋನಾ ಚಾಳನಿಗೆ ಅನುರೂಪ ಕನ್ಯೆ ಎಂದು. ಪಂತರು ಅಸ್ತು ಎಂದರು. ಕಾಲೇಜಿನಲ್ಲಿಯ ಪ್ರೊಫೆಸರರು, ಪಂತರ ವರದಕ್ಷಿಣೆಯ ಅಂಕಿ ತಮ್ಮ ಗಂಟಲಲ್ಲಿ ಇಳಿಯದ ತುತ್ತಾದೀತೆಂದು ಭಾವಿಸಿದ್ದರು. ಎಮ್. ಎಸ್‌ಸೀ. ಪ್ರಥಮ ವರ್ಗದಲ್ಲಿ ಪಾಸಾದ, ಸುರೂಪ ಹುಡುಗ· ಏನಿಲ್ಲೆಂದರೂ ಐದು ಸಾವಿರದ ಮೇಲೆ ಅಂಕಿ ಹಾರೀತೆಂದು ಅವರು ಅಳುಕಿದ್ದರು. ಧಾರವಾಡದ ವಕೀಲರೊಬ್ಬರು ತಮ್ಮ ತಿಜೋರಿಯ ಬಾಗಿಲು ತೆರೆದು ವರದಕ್ಷಿಣೆಯ ವೈಭವ ಪ್ರದರ್ಶನ ನಡೆಸಿದ್ದರು.

ಪಂತರು ಅಗದಿ ಸುದಾಮನ ಒಕ್ಕಲು. ಕೊಡುವ ದಾನಿ ಕೃಷ್ಣ ವರದ ಹಸ್ತವೆತ್ತಿ "ಕಾಮಧೇನು ಕಲ್ಪವೃಕ್ಷ ಏನು ಬೇಕು ಬೇಡಿಕೋ" ಎಂದು ಅಂಗಲಾಚುತ್ತಿದ್ದರೂ "ಶ್ರೀಹರೀ ಒಂದೇ ಒಂದು ತುಳಸೀ ದಳ ಸಾಕು" ಎಂದು ತಮ್ಮ ನಾಮರ್ದತನವನ್ನು ತೋರಿಸಿದರು. ಇದು ಜನರಾಡಿಕೊಂಡು ನಕ್ಕ ಮಾತು. ನಮ್ಮದಲ್ಲ.

ಪಂತರು, ಪ್ರೊಫೆಸರ ಸಾಹೇಬರಿಗೆ, ತಮ್ಮ ನೇಹಮೀ ಶೀಖಿಯಲ್ಲಿ, ನತಶಿರರಾಗಿ, ಕೈಜೋಡಿಸಿ ಹೇಳಿದರು. "ಕೊಡುವ ಯೋಗ್ಯತೆಯನ್ನು ದೇವರು ತಮಗೆ ಕೊಟ್ಟಿದ್ದಾನೆ. ಆನಂದ. ಆದರೆ ಪಡೆಯುವ ಯೋಗ್ಯತೆ – ಶಕ್ತಿ ನನ್ನಲ್ಲಿಲ್ಲ. ನಾನು ಬಡಶಾಲಾಮಾಸ್ತರ. ಕಾಯೀಕನ್ನೆ ಅಷ್ಟೇ ನನ್ನ ಯೋಗ್ಯತೆ. ತಾವು ಅನುಗ್ರಹಿಸಿದರೆ ಆಯಿತು. ನಾನು ಧನ್ಯ."

ಪ್ರೊಫೆಸರ ಸಾಹೇಬರು ತಾವು ಬಹಳ ಕಲಿತದ್ದು ವ್ಯರ್ಥವಾಯಿತೆಂದು ಹಳಹಳಿಸಿದರು.

ಸೋನಾ ವಿಜೃಂಭಣೆಯಿಂದಲೇ ಪಂತ ಮಾಸ್ತರರ ಸೊಸೆಯಾಗಿ ಮನೆ ತುಂಬಿಸಿಕೊಳ್ಳಲೆಂದು ಮುಂದೆ ಎಂಟೇ ದಿನಗಳಲ್ಲಿ ಪಂತರ ಮನೆಯನ್ನು ಬೆಳಗಬಂದಳು.

ಪಂತರು ರಾಜವೈಭವವನ್ನು ಅನುಭೋಗಿಸುವ ಅಮೋಘ ಸಂಧಿಯನ್ನು ತಮ್ಮ ಭೋಳೇತನದಿಂದ ಮೂರ್ಖತನದಿಂದ ಕಳೆದುಕೊಂಡರೆಂದು ಊರವರು ಹಳಹಳಿಸಿದರು. ಪಂತರಿಗೆ, ತಮ್ಮ ಹೆಂಡತಿ-ಮಗ ಮನೆವಾರೆ ಒಪ್ಪಿದ ಲಕ್ಷ್ಮಿ ಮನೆಗೆ ಬಂದಳು. ಅಷ್ಟೇ, ಅದೇ ಧನ್ಯತೆ. ಆ ಲಕ್ಷ್ಮಿ ಬಂದಿದ್ದರೆ, ಈ ಬಡವನ ಮನೆಯಲ್ಲಿ ಅವಳನ್ನು ಆದರಿಸಿ ಕೂಡಿಸಲಿಕ್ಕೆ ಒಂದು ಮುರುಕು ಮಣೆಯೂ ಹೊತ್ತಿಗೆ ಕೈಗೆ ಹತ್ತುತ್ತಿರಲಿಲ್ಲ. ಅಸ್ಥಾನದಲ್ಲಿ ಅವಳು ಆಗಮಿಸಲಿಲ್ಲ. ಯೋಗ್ಯ ಸನ್ಮಾನವಾಗಲಿಲ್ಲವೆಂದು ಪರಿತಪಿಸುವ ಪಾಳಿ ತಪ್ಪಿತು, ಅಷ್ಟೇ ಧನ್ಯತೆ ತಮಗೆ, ಎಂದರು ಪಂತರು.

ಇಂಥವರು ನಮ್ಮ ಪಂತ ಮಾಸ್ತರರು ಥೇಟ ಸಂತ ತುಕೋಬಾ.

ಮೊನ್ನೆ ಚಾಳನ ಕಾಗದ ಬಂತು ಪಂತರಿಗೆ. ಆಣೆ ಸೂರೆ ಹಾಕಿ ಆಗ್ರಹಪಡಿಸಿ ಬರೆದಿದ್ದ. ಹತ್ತೆಂಟು ದಿನ ಮುಂಬೈಗೆ ಬಂದು ಹೋಗಬೇಕೆಂದು. ನರ್ಮದಾಕಾಕೂ ಎಷ್ಟಾದರೂ ಹೆಣ್ಣು-ಹೆಂಗಸು. ಸೊಸೆ-ಮಗನ ತುಂಬಿದ ಸಂಸಾರ ನೋಡುವ ಅಮಿತ ಆಶೆ-ಹಂಬಲ ಅವರಿಗಿರುವದು ಸಹಜ. ಅವರೂ ಪಂತರನ್ನು ಆಗ್ರಹಪಡಿಸಿದರು. ಸೊಸೆಯೂ ಬರೆದಿದ್ದಳು. ಪಂತರು ಎರಡು ದಿನ ವಿಚಾರ ಮಾಡಿದರು. ಮುಲ್ಕೀ ಪರೀಕ್ಷೆಯ ಕ್ಲಾಸಿನ ಜವಾಬುದಾರಿಯನ್ನು ಎದುರು ನಿಲ್ಲಿಸಿಕೊಂಡರು. ಈ ಸಾರೆ ಹದಿನೈದು ಹುಡುಗರು ಪರೀಕ್ಷೆಗೆ ಹೋಗುವವರು. ತಾವು ಹತ್ತೆಂಟು ದಿನ ಊರಿಗೆ ಹೋದರೆ ಹುಡುಗರ ಅಭ್ಯಾಸದ ಗತಿ ಏನು? ಶಾಲೆಯ ರೆಕಾರ್ಡಿನ ಗತಿಯೇನು? ಹದಿನೈದು ಹುಡುಗರಲ್ಲಿ ಒಬ್ಬನೇ ನಪಾಸಾಗಲಿ ತಮಗೆ ಎಂಥ ದಾರುಣ ವ್ಯಥೆಯೆಂದು ಚಿಂತಿಸಿದರು. ಮೇ ತಿಂಗಳ ಬೇಸಿಗೆಯ ಬಿಡುವೇನೋ ಇದೆ. ಅದು ನಿಜ. ಆದರೆ ಸೂಟಿಯಲ್ಲೇ ಖರೆ ಅಭ್ಯಾಸವಾಗುತ್ತಿದೆ. ಹಿಂದಿನ ಉಜಳಣೆ ಮುಂದಿನ ತಯಾರಿ. ತಾಸು ಹೆಚ್ಚು-ತಾಸು ಕಡಿಮೆ ಕುಳಿತು ಹುಡುಗರನ್ನು ತಿದ್ದಿತೀಡಲಿಕ್ಕೆ ಬರುತ್ತದೆ. ಇನ್ನೆಷ್ಟು ದಿನ ಈ ತಿದ್ದಿತೀಡುವ ಸಾಧನೆ? ಕೇವಲ ಎರಡೇ ವರ್ಷ. ಪೆನ್‌ಶನ್ ಆದ ಮೇಲೆ ತಮಗೆ ಶಾಲೆಗೆ ಸಂಬಂಧ ಉಳಿಯುವದಿಲ್ಲ ನಿಜ. ಆದರೂ ಕಡೆಯ ಈ ಎರಡು ವರ್ಷ ರೆಕಾರ್ಡ ಶುಭ್ರವಾಗಿ ಉಳಿದುಬಿಟ್ಟರೆ, ಮೂರು ದಶಕದ ತಪಸ್ಸಿಗೆ ವರದಾನವಾದ ಧನ್ಯತೆ ಇರುತ್ತಿದೆ. ಈ ಧನ್ಯತೆ, ಈ ಸಂತಸ – ಈ ಸಮಾಧಾನ ಅಖಂಡ ಜೀವಮಾನದುದ್ದಕ್ಕೂ ತಮಗೆ ದಾರಿದೀಪವಾದಂತಾಗುತ್ತದೆ.

ಪಂತರು ಹೊಯ್ದಾಟದಲ್ಲಿರುವಾಗಲೇ ಚಾಳನಿಂದ, ಸೋನಾನಿಂದ ಮತ್ತೆ ಕಾಗದ ಬಂದವು. ನರ್ಮದಾಕಾಕೂ ಹಾಸಿಗೆಯನ್ನೇ ಕಟ್ಟಿದರು. ಪಂತರು, ಮಗನ, ಸೊಸೆಯ-ಹೆಂಡತಿಯ ಬಯಕೆಗೆ ನಕಾರ ಹೇಳಲು ಹಿಂಜರಿದರು. "ಆಯಿತು, ಎಂಟು ದಿನ ಹೋಗಿ ಬರೋಣ, ಅವರಿಗೂ ಅಷ್ಟೇ ಸಮಾಧಾನ. ನಾನು ಬರೇ ನನ್ನ ಸಮಾಧಾನವನ್ನು ನೋಡುವದೂ ತಪ್ಪು" ಎಂದು ತಾವು ತಪ್ಪು ಮಾಡಿದ್ದೇವೆಂದು ಭಾವಿಸಿದ್ದ ತಪ್ಪನ್ನು ತಿದ್ದಿಕೊಂಡರು.

ಪಂತರು ಎಂಟು ದಿನ ಮುಂಬೈಗೆ ಹೋಗುತ್ತಾರೆ ಮಗನ ಕಡೆಗೆ, ಈ ನ ಭೂತೋ ನ ಭವಿಷ್ಯತಿ ವಾರ್ತೆಯ ಹೊಸಗಾಳಿ ಊರಲ್ಲಿ ಬೀಸಿತು. ಎಲ್ಲರೂ ವಿಸ್ಮಯಚಕಿತರೇ! "ಇದೇನ ಪಂತ ಮಾಸ್ತರ, ಆಂ" ಕರಪಲ್ಲವಿ. ನೇತ್ರಪಲ್ಲವಿಯ ಚಮತ್ಕಾರ ಹುಡುಗರಿಂದ ಮುದುಕರ ವರೆಗೆ ನಡೆಯಿತು.

ಕಾದ ಹಾರಿಯ ಬಾಯಿಗೆ ನೀರುಣಿಸುವದನ್ನು ಮರೆತು, ಕಮ್ಮಾರ ರಾಚನೂ ಕೇಳುವವನೆ; ಗಾಡಿಯ ಚಾಕು ಕೊಡಿಸುವದನ್ನು ಮರೆತು ಬಡಿಗರ ಘೂಳಪ್ಪನೂ ಕೇಳುವವನೇ; ಕಿರಾಣೀ ಅಂಗಡಿಯ ಕಲ್ಲಪ್ಪ, ಎಂಣೆ ಅಳೆದು ಸೀಸೆಗೆ ಸುರುವುವದನ್ನು ಬಿಟ್ಟು "ಆಂ" ಎಂದು ಬಾಯ್ತೆರೆದನೇ! ಆದೇಕೆ ಬಾಗವನರ ಕುಲಸೂಮಾ, ಉಳ್ಳಾಗಡ್ಡೆ ತೂಗುತ್ತಿದ್ದಾಕೆ ತಕ್ಕಡಿಯನ್ನು ತ್ರಿಶಂಕುವಾಗಿ ಹಿಡಿದು ಸ್ತಂಭಿತಳಾದಂತೆ ದಂಗು ಬಡಿದಳೇ! "ಪಂತ ಮಾಸ್ತರ, ಎಂಟದಿನಾ ಊರಿಗೆ ಹೋಕ್ಕಾರಂತs"

ಈ ವಾರ್ತೆಯನ್ನು ಖಚಿತಮಾಡಿಕೊಂಡಂತೆಯೂ ಆಯಿತು. ಏನೋ ಅಡಚಣೆ ಇದ್ದರೆ ಅಷ್ಟು ಲಾವಣೀ ರೂಪಾಯಿ ಅಗಾವು

ಕೊಟ್ಟಂತೆಯೂ ಆಯಿತು ಎಂದು ಖುದ್ದ ರಾಮನಗೌಡರೇ ಪಂತರ ಮನೆಗೆ ಬಂದು ಕೇಳಿದರು "ಮಾಸ್ತರs, ಎಂಟದಿನಾ ಮುಂಬೈಗೆ ಹೋಗಾವ್ರಂತs, ಬಾಳನಕಡೇ, ಶೀಕಾತು. ಅಂವಗೂ ಆಟ ಸಮಾಧಾನಾ. ಹೋಗಿ ಬರ್ರಿ. ಏನರ ಅಡಚಣೀ ಪಿಡಚಣೀ ಐತೇನ ಮತ್ತ ಹಾಂಗಿದ್ದರ ಹೇಳ್ರಿ."

"ಛೇ ಛೇ ಗೌಡರ, ಅದೇನ ಇಲ್ಲಾ. ಹೋಗಲ್ಯೋ ಬ್ಯಾಡೋ ಅನ್ನೊ ವಿಚಾರದಾಗ ಇದ್ದೆ ಅಷ್ಟೇ!" ಪಂತರು ಸಾಲೆ ಮುಳುಗೀತೆಂಬ ವಿಚಾರವನ್ನು ಮರೆಮಾಡುತ್ತ ಹೇಳಿದರು.

"ಅದೇನ ಮೀನಾಮೇಷಾ ಮಾಡಕೋತ ಕುಂಡರಬ್ಯಾಡ್ರೀ. ಝಟ್ಟನs ಹೋಗಿ ಬರ್ರಿ. ಘಳಸೂ-ಘುಸ್ತರಸೂಮಗಾ. ಅಂಗಲಾಚಿ ಕರೀತಾನ. ಇಲ್ಲ ಅನಬಾರದು. ಕಲಿಸಿದಿರಿ, ಮುಂದ ತಂದ್ರೀ, ಬಾಳಗೂ ಆಟ ಆಶಾ ಇರೂದೇನಲಾ, ತನ್ನ ಅವ್ವಾ-ಅಪ್ಪಾ, ತನ್ನ ಸುಖಾ ನೋಡಲೀ ಅನ್ನೊದು. ಪಂತ ಮಾಸ್ತ s ರಿಗೆ, ನಾವ್ ತಿಳಿಸಿ ಹೇಳೂದೇನು ಇಂಥಾ ಮಾತಾ."

ಅಂತೂ ಪಂತಮಾಸ್ತರರು ಗೌಡರ ಮಾತು ಮನ್ನಿಸಿದರು. ತಮ್ಮ ಬಾಳನಿಗೆ ತಿಳಿಸಿದರು. ಇಂಥ ದಿನ ಬರುತ್ತೇವೆ, ಸ್ಟೇಶನ್ನಿಗೆ ಬಂದಿರು ಎಂದು.

ಇಪ್ಪತ್ತೈದು ವರುಷದ ಕಾಲಖಂಡದಲ್ಲಿ ಊರು ಬಿಟ್ಟು ಅಗಲದ ಪಂತರು ಎಂಟುದಿನ ಊರು ಬಿಡುವ ನಿರ್ಧಾರ ಮಾಡಿದರು. ಇಪ್ಪತ್ತೈದು ವರುಷದ ನಂತರ ಮತ್ತೆ ಮೋಟಾರು ಉಗೆಬಂಡಿ ಹತ್ತಲಿದ್ದರು—ವಿಶಾಲವಿಶ್ವವನ್ನು ನೋಡಲಿದ್ದರು. ಅವರ ಬಾಳ, ಪಂತರಿಗೆ ಪ್ರಾಂತದ ರಾಜಧಾನಿ ತೋರಿಸಲಿದ್ದ. ಮುಂಬೈಯು ವಿರಾಟ್ ನಗರ. ಅದರಲ್ಲಿಯ ವೈಚಿತ್ರ್ಯ-ಸಿನೇಮಾ ನಾಟಕ-ಟ್ರಾಮು-ವಿಮಾನ ತೋರಿಸಲಿದ್ದ. ಪಂತರು ಕಡಕ್ ಇಸ್ತ್ರಿಯ-ಪರೀಟ ಘಡಿಯ ವಸ್ತ್ರ-ವಿಭೂಷಿತರಾಗಿ ಎಂಟು ದಿನ ಮುಂಬೈಯಲ್ಲಿ, ಮೋಟಾರೆಂದರೆ ಮೋಟಾರು, ಬಗಿಯಂದರೆ ಬಗಿ, ಟ್ರಾಮ್ ಎಂದರೆ ಟ್ರಾಮ್ ವಾಹನ ರಥಿಕರಾಗಿ ಅಡ್ಡಾಡಲಿದ್ದರು. ಊದುಕೊಳವಿಯಲ್ಲಿ ಕಡ್ಡಿ ಆರು-ಪಾರಾಗಿ ಹೋಗುವಂತೆ ಬೋಗದೆಯಲ್ಲಿ ಅಗ್ಗಿನಗಾಡಿ ಹೋಗುವದನು ಬರೇ ನೋಡಲಿದ್ದರಲ್ಲ, ಅದರಲ್ಲಿ ಕುಳಿತು ಅನುಭವಿಸಲಿದ್ದರು. ಬೋರೀಬಂದರ ಸ್ಟೇಶನ್ ರಾಣೀ ಬಗೀಚಾ, ಚೌಪಾಟಯ ಮೇಲಿನ ದಿ. ಲೋ. ಮಾ. ಬಾ. ಗಂ. ಟಿಳಕರ ಶಿಲಾಪ್ರತಿಮೆ-ಎಲ್ಲಕ್ಕೂ ಅದ್ಭುತವೆಂದರೆ ಭೂಗೋಲ ಪಾಠಕಲಿಸುವಾಗ ಹಿಂದುಸ್ತಾನ ಮೇರೆಯನ್ನು ವೇಷ್ಟಿಸಿದ ಅರಬೀಸಮುದ್ರದ ಬಗ್ಗೆ ಹುಡುಗರಿಗೆ ಹೇಳಿ ಗೊತ್ತಿತ್ತು ತಮಗೆ, ಅದನ್ನು ಇಂದು ಪ್ರತ್ಯಕ್ಷವಾಗಿ ನೋಡಲಿದ್ದಾರೆ. ರತ್ನಾಕರನ ವೈಭವವನ್ನು ಕಂಣಾರೆ ಕಾಣಲಿದ್ದಾರೆ.

ಧನ್ಯ ಪಂತ ಮಾಸ್ತರರ ದೈವ. ಊರಿಗೆ ಹೊರಡುವಾಗ ದೇವರೆದುರು ಕೈಮುಗಿದು, ನತಶಿರರಾದಾಗ, ಅವರೂ ಇದೇ ಮಾತನ್ನೇ ಅಂದಿದ್ದಾರೆ.

***

ಪಂತ ಮಾಸ್ತರರು ಮುಂಬೈಗೆ ಮೊನ್ನೆಯೇ ಹೋದರು. ಆದರೂ ಊರಲ್ಲಿಯ ಚರ್ಚೆ ನಿಂತಿಲ್ಲ.

"ಮಾಸ್ತರ ನಿನ್ನೆ ಹೋದರಲ್ಲs?"

"ಮಾಸ್ತರ ಮಂಗಳಾರ ದಿನಾ ಹೋದ್ರು ಹೌಂದಲ್ಲs?"

"ಮಾಸ್ತರ ಹೋಗಿ ನಾಕದಿನಾ ಆಗತs ಬಂತಲ್ಲs?"

ರತನ್ ಶೇಡಜಿಯ ಗಡಿಯಾರ ಮೊನ್ನೆಯೇ ಬಂದು ಬಿದ್ದಿದೆ. ರೇಡಿಯೋ ಟಾಯಿಮ್ ನೋಡದೆ ಅದನ್ನು ಸರಿಪಡಿಸುವಂತಿಲ್ಲವೆಂದು ಅವನು ಅದನ್ನು ಬಂದೇ ಇಟ್ಟಿದ್ದಾನೆ.

ಊರಲ್ಲಿಯ ಅತ್ಯಂತ ನಿರುಪದ್ರವಿ - ನಿರ್ಲಿಪ್ತ ಪ್ರಾಣಿ ಪಂತಮಾಸ್ತರರು ನಾಕುದಿನ ಊರಬಿಟ್ಟರೆ ಇಷ್ಟು ಗೊಂದಲ-ಇಷ್ಟು ಚರ್ಚೆ. ಎಲ್ಲಾ ರಿಕಾಮು ಚೋಟರ ವ್ಯವಹಾರ.

***

ಪಂತರು ಚುಮು ಚುಮು ನಸುಕಿರುವಾಗಲೇ ದಾದರ ಸ್ಟೇಶನ್ನಿನಲ್ಲಿ ಇಳಿದಿದ್ದರು. ಟ್ಯಾಕ್ಸಿಯಲ್ಲಿ ಕುಳಿತು ಮನೆಗೆ ಹೋಗ ಹೋಗುತ್ತ ಮುಂಬಯಿಯ ಮಹಾವಿಭವ ನೋಡಿದ್ದರು. ಬೀದಿ ಇನ್ನೂ ಅಷ್ಟು ಗಜಿಬಿಜಿಸಿರಲಿಲ್ಲ. ಮಗ್ಗದಲ್ಲಿಯ ಲಾಳಿಯಂತೆ ಸರಸರನೆ ಹರಿದಾಡುವ, ಮೋಟಾರು ಟ್ರಾಮು-ಬಸ್ಸಿನ ಗದ್ದಲ ಇನ್ನೂ ಅಷ್ಟಾಗಿ ಕಂಡು ಬರುತ್ತಿರಲಿಲ್ಲ. ತಲೆಯ ಮೇಲಿನ ಮುಂಡಾಸವನ್ನು ಒಂದು ಕೈಯಿಂದ ಹಿಡಿದುಕೊಂಡು, ಅದು ಬೀಳದಂತೆ ದಕ್ಷತೆವಹಿಸಿ, ಮೂರು-ನಾಕು ಮಜಲಿನ ಭವ್ಯ ಇಮಾರತು ನೋಡಿದ್ದರು. ಸಂದಿ-ಗೊಂದಿಯಲ್ಲಿ, ಬೀದಿಯ ಅಡ್ಡ-ಉದ್ದದಲ್ಲಿ ಇಂಥ ಬೃಹದ್-ವಾಡೆಗಳು ನಾಯಿಯ ಛತ್ತರಿಕೆಯಂತೆ ಎದ್ದಿದ್ದರೂ ತಮ್ಮ ಬಾಳ ಮೂರೇ ಕೋಣೆಯ ಒಂದು ಗೂಡಿನಲ್ಲಿರುವದನ್ನು-ಅದಕ್ಕೆ ಎಪ್ಪತ್ತು ರೂಪಾಯಿಯ ಬಾಡಿಗೆಯನ್ನು ಕೊಡಬೇಕಾಗುತ್ತದೆ ಎನ್ನುವದನ್ನು ಕೇಳಿದಾಗ ಪಂತರಿಗೆ ಬವಳಿ ಬರಲಿಲ್ಲ, ಅಷ್ಟೇ ಪುಣ್ಯ. ಎಪ್ಪತ್ತು ರೂಪಾಯಿಯಲ್ಲಿ ತಾವು ಮೂವರೂ ಜೀವನವನ್ನು ಮಂಗಲಮಯ ಮಾಡಿದ್ದರು. ಬೆಳ್ಳಿಯ ರೂಪಾಯಿಗೆ ಹುಣಸೇಪಕ್ಕದ ಬೆಲೆಯೂ ಇಲ್ಲ ಮುಂಬೈಯಲ್ಲಿ ಎಂದೆನಿಸಿತು ಪಂತರಿಗೆ. ಆಡಿ ತೋರಿಸಲಿಲ್ಲ.

ಹೊತ್ತು ಸರಿದಂತೆ, ಮುಂಬೈ ವಿರಾಟ್‌ಸ್ವರೂಪ ತಾಳತೊಡಗಿತು. ಘಟೋತ್ಕಚನ ಮಾಯಾಬಾಜಾರ ಏಳತೊಡಗಿತು. ಮೂರನೇ ಮಜಲಿನಿಂದ, ಕೆಳಗೆ ದೃಷ್ಟಿ ಚಾಚಿ ನೋಡುವ ತ್ರಾಣ ಪಂತರಲ್ಲಿ ಸಂಪುಷ್ಟಕ್ಕೆ ಬಂದಿತ್ತು. ಜೋಲಿ ಹೋಗದಿರಲೆಂದು ಪಂತರು ಗ್ಯಾಲರಿಯಲ್ಲಿ ಬಾಳನ ಖುರ್ಚಿಯನ್ನು ಹಾಕಿಕೊಂಡು, ಗಟ್ಟಿಯಾಗಿ ಕಟಾಂಜನದ ಕಬ್ಬಿಣ ಸಲಾಕೆ ಹಿಡಿದುಕೊಂಡು, ವಿರಾಟ್

ವೈಭವ ನೋಡಿ ನೋಡಿ, ಕಣ್ಣಾರಣೆ ಮಾಡಿ ಕೊಂಡರು.

ಬಾಳ ಅವರಿಗೆ ಹೇಳಿದ್ದ "ಕಾಕಾ. ಇನಾ ಹದ ನೈದ ದಿನಾ ಇರಾವ್ರಿದ್ದೀರಿ. ಎಷ್ಟ ನೋಡೀರೀ ಮುಂಬೈ ನಿಮಗs ಬ್ಯಾಸರ ಬರತs ದ."

ಪಂತರಿಗೆ ಜನಸಾಗರದ, ವಾಹನ ಸಾಗರದ ತೆರೆಯಮೇಲೆ ತೆರೆಯೆದ್ದು ಬಂದು, ಎಲ್ಲಿಯೋ ಲೀನವಾಗುವ ದೃಶ್ಯದ - ಮಹಾ ಗಭೀರತೆಯ ಬೇಸರ ಬರುವ ಶಕ್ಯತೆ ಇರಲಿಲ್ಲ. ತಮ್ಮ ಸಂಣ ಹಳ್ಳಿ - ಅದರಲ್ಲಿಯೂ ಸಾಸಿವೆ ಕಾಳಿನಷ್ಟು ಕ್ಷುದ್ರ ತಮ್ಮ ಜೀವ, ಮುಂಬೈ ಮಹಾಸಾಗರದಲ್ಲಿ "ದರಿಯಾಮೇ ಖಸ್ ಖಸ್" ಎಂದುಕೊಂಡರು. ಹಳ್ಳಿಯಲ್ಲಿಯೂ ಅವನದೇ ಲೀಲೆ. ಇಲ್ಲಿಯೂ ಅವನದೇ ಲೀಲೆ. ಅರಳೆಲೆಯ ಅಂಗೈ ರಂಗದಲ್ಲಿ ಪವಡಿಸಿದ ಬಾಲಲೀಲಾ ಮನೋಹರಿಯಾದ ಪರಮಾತ್ಮ - ಬರೇ ಅಂಗುಲ ಆಳತೆಯ ಬಾಯಿತೆರೆದು ವಿಶ್ವರೂಪ ದರ್ಶನ ಮಾಡಿಸಿದ. ಭಗವಾನ್ ಶ್ರೀಹರೀ . . . ಇಬ್ಬರೂ ಒಂದೇ ಆದರೆ ಲೀಲೆ ಎಂಥಾ ವಿಚಿತ್ರ.! ಎಂಥ ವೈಭವಪೂರ್ಣ ಮುಂಬೈ "ಮೂಕಂಕರೋತಿ ವಾಚಾಲಂ" ಆದರೂ, ಪಂತರು ಮಾತ್ರ ಇಲ್ಲಿ ಬಂದು ತೀರ ಮೂಕರಾದರು. ವಾಚಾಸಾಮರ್ಥ್ಯವನ್ನೇ ಕಳೆದು ಕೊಂಡು ಬಿಟ್ಟರು. ಮಾತಾಡಿ ಪರಮಾತ್ಮನ ಭವ್ಯತೆಯ ಅಗಾಧ ಲೀಲೆಯ, ಅನ್ಯತಕ್ಷಣವನ್ನು ಲಘುವಾಗಿಸಬಾರದೆಂದು ತೆಪ್ಪಗಿದ್ದರು.

ಸಂಜೆಯವರೆಗೆ ಹೇಗೋ ವೇಳೆ ಕಳೆದರು. ಕೇಸರೀ ಓದಿದರು. ನವಾಕಾಳ ಓದಿದರು. ಬಾಳ ತಂದಿಟ್ಟ ಒಂದೆರಡು ಮಾಸಿಕ ತಿರುವಿ ಹಾಕಿದರು. ಮತ್ತೆ ಗ್ಯಾಲರಿಯಲ್ಲಿ ಕುರ್ಚಿ ಎಳೆದುಕೊಂಡು ಮುಂಬೈ ದರ್ಶನರತರಾದರು.

ಐದು ಗಂಟೆಯಾಗಬಂದಿತ್ತು. ಎದುರು ಕಟ್ಟಡದ ಮೂರನೇ ಅಂತಸ್ತಿನಲ್ಲಿಯ ಕಿಡಕಿಯಿಂದ ಹುಡುಗರ ಕಲಕಲಾಟ ಕೇಳಿಬಂದಿತು. ಪಂತರು ಕಿವಿ ಕಣ್ಣು ಅತ್ತತಿರುಗಿಸಿದರು. ನೋಡಿದರು...ಪಂತರು ಒಂದೇ ನಿಮಿಷದಲ್ಲಿ ಬದಲಾದರು. ಅವರು ಬಾಳನ ತಂದೆಯಾಗಿರಲಿಲ್ಲ. ನರ್ಮದಾಕಾಕೂನ ಯಜಮಾನರಾಗಿರಲಿಲ್ಲ. ಸೋನಾನ ಪ್ರೀತಿಯ ಮಾಮಂಜಿಯಾಗಿರಲಿಲ್ಲ. ಗ್ಯಾಲರಿಯಲ್ಲಿ ಕುರ್ಚಿ ಎಳೆದುಕೊಂಡು ಕುಳಿತಿರಲಿಲ್ಲ.--ಅವರಿಗೆ ಕೆಳಗೆ ಹರಿದಾಡುವ ಜನರ—ವಾಹನದ ಕಿವಿಗಡಿಚಿಕ್ಕುವ ಗದ್ದಲ ಕೇಳಿ ಬರುತ್ತಿರಲಿಲ್ಲ, ಏನೂ ಇಲ್ಲ. ಪಂತರು ಕೇವಲ ಪಂತಮಾಸ್ತರರಾಗಿದ್ದರು. ಮುಲ್ಕೀ ಪರೀಕ್ಷೆಯ ಸಂಜೆಯ ವರ್ಗ ಮುಗಿದ ನಂತರ, ಎದ್ದು ನಿಂತು ನತಶಿರರಾಗಿ, ಕೈ ಜೋಡಿಸಿ "ಯಂ ಶೈವಾಃ ಸಮುಪಾಸತೇ ಶಿವ ಇತಿ." ಎಂದ ಆ ಹದಿನೈದು ಹುಡುಗರ ದನಿಯಲ್ಲಿ ದನಿಗೂಡಿಸಿ, ಸಾಯಂ ಪ್ರಾರ್ಥನೆಯಲ್ಲಿ ಶ್ರೀ ಕೇಶವನಿಗೆ ಅರ್ಪಿಸುವ ಪಂತ ಮಾಸ್ತರರಾಗಿದ್ದರು.

ಕಿಡಕಿಯಿಂದ ಸಾಮೂಹಿಕ ಗೀತ ಗಾಳಿಯಲ್ಲಿ ತೇಲಿ ಬಂದಿತು.

"ಜನಗಣಮನ ಅಧಿನಾಯಕ ಜಯಹೇ ।
ಭಾರತ ಭಾಗ್ಯವಿಧಾತಾ ॥
ಜಯಹೇ ಜಯಹೇ ಜಯ ಜಯ ಜಯ ಜಯಹೇ"॥

ಪಂತ ಮಾಸ್ತರರು ಕುರ್ಚಿ ಬಿಟ್ಟು ಎದ್ದು ನಿಂತರು. ನತಶಿರರಾದರು. ಕೈಜೋಡಿಸಿದರು. ಕಿಡಕಿಗಭಿಮುಖರಾಗಿ ವಂದಿಸಿದರು. ಅವರ ಬಾಲಗೋಪಾಲ ವೃಂದ, ಹಾಡು ಮುಗಿಸಿ, ಪುಸ್ತಕ ಕೈಗೆ ತೆಗೆದುಕೊಂಡು ವರ್ಗದಿಂದ ಹೊರ ಬಿದ್ದು ನಡೆದಿತ್ತು. ಆದರೂ ಪಂತರು ನತಶಿರರಾಗಿ, ಬದ್ಧಕರಾಂಜಲಿಯಾಗಿ ಧ್ಯಾನವಳಿದ ರೀತಿಯಲ್ಲಿ ನಿಂತಿದ್ದರು.

ಅಡುಗೆಯ ಮನೆಯಲ್ಲಿ ಅತ್ತೆ - ಮಾವನಿಗೆ, ಜೋಡಿಸಿ ಎರಡು ಮಣೆ ಹಾಕಿ, ಚಹದ, ತಿನಿಸಿನ ತಟ್ಟೆ ಬಟ್ಟಲವಿಟ್ಟು, ಪಂತರನ್ನು ಕರೆಯಲೆಂದು ಬಂದ ಸೋನಾ - ಪಂತ ಮಾಸ್ತರರ ಪ್ರೀತಿಯ ಸೊಸೆ, ಅವರನ್ನು ನೋಡಿದಳು. ಮಾವನವರು ಆ ರೀತಿ, ಆ ರೀತಿಯಲ್ಲಿ ನಿಂತ ಅರ್ಥ ಅವಳಿಗಾಗಲಿಲ್ಲ. ಅವಳೂ ಹಾಗೇ ನಿಂತು ಬಿಟ್ಟಳು. ಇದು ಸಮಾಧಿಯೋ, ಉನ್ಮಾದವೋ, ಭ್ರಮೆಯೋ, ಒಂದೂ ಅವಳಿಗೆ ಹೊಳೆಯದಾಯಿತು.

ಕೆಲಸದಿಂದ ಅದೇ ತಿರುಗಿ ಬರುತ್ತಿದ್ದ ಬಾಳನನ್ನು ಪಂತರು ನೋಡಿರಲಿಲ್ಲ. ಅವರ ಬೆನ್ನು ಅವನು ಬರುವ ದಾರಿಗಾಗಿತ್ತು. ಅವನು ಬರುವದು ಕಾಣುವಂತಿರಲಿಲ್ಲ. ಬಾಳನಿಗೆ ಒಂದು ನಿಮಿಷ ಪಂತರ ಈ ರೀತಿಯ-ನಿಲುವಿಯ ಅರ್ಥ, ಇತ್ತ ಬಾಗಿಲ ಬಳಿ ತನ್ನ ಸೋನಾ ನಿಂತ ಅರ್ಥ, ತಟ್ಟನೇ ಆಗಲಿಲ್ಲ. ಪಂತರ ದೃಷ್ಟಿ ಕಿಟಕಿಯಲ್ಲಿ ಕೇಂದ್ರೀಕರಿಸಿತ್ತು. ಆ ಕಿಟಕಿ-ಪಾರ್ಸೀ ಹಾಯಸ್ಕೂಲಿನ ಕಟ್ಟಡದ ಕಿಡಕಿ. ಮ್ಯಾಟ್ರಿಕ್ ಸ್ಪೇಶಲ್ ಕ್ಲಾಸು, ಆ ಕಿಡಕಿಯಿದ್ದ ಹಾಲಿನಲ್ಲಿ ನಡೆಯುತ್ತಿತ್ತು ಅದು ಇದೇ ಮುಗಿದಿರಬೇಕು. ಸಾಯಂ ಪ್ರಾರ್ಥನೆ "ಜನಗಣಮನ ಅಧಿನಾಯಕ" ಮುಗಿದಿರಬೇಕು. ಪಂತರಿಗೆ ತಮ್ಮ "ಯಂಶೈವಾಃ ಸಮುಪಾಸತೆ"ಯ ಸ್ಮೃತಿ ಮರುಕಳಿಸಿರಬೇಕು. ಅಂತೇ ಪಂತರು ಕಿಟಕಿಗಭಿಮುಖರಾಗಿ, ನತಶಿರರಾಗಿ-ಬದ್ಧಕಂಕಣರಾಗಿ ನಿಂತಿರಬೇಕು. ಬಾಳ ತಾಡಿಸಿದ. ಮಂಗಲಕ್ಷಣದ ಮಾಂಗಲ್ಯ ಮಸಕದಿರಲೆಂದು, ಮೆಲ್ಲನೆ ಸೋನಾನಿಗೆ ಸನ್ನೆಮಾಡಿ ಒಳಗೆ ಹೋದ.

ಕಿಡಕಿಯನ್ನು ಆಳು ಜೋರಿನಿಂದ ಬಡಿದು ಮುಚ್ಚಿದ. ಪಂತರು ಆ ಸ್ವರ್ಗದಿಂದ ಈ ಭೂಮಿಗೆ ಅವತರಿಸಿದರು. ಮತ್ತೆ ಕುರ್ಚಿಯಲ್ಲಿ ವಿರಾಜಮಾನರಾದರು.

ಚಹ ಮುಗಿದ ಮೇಲೆ ಪಂತರು ತಮ್ಮ ನೇಹಮಿಯ ವಸ್ತ್ರ-ವಸ್ತು ಭೂಷಣರಾಗಿ, ಮೂರನೇ ಮಜಲಿನಿಂದ ಕೆಳಗಿಳಿದರು. ಮನೆಯ ಹಿಂಬದಿಗೆ ಫರ್ಲಾಂಗು-ಒಂದೂವರೇ ಫರ್ಲಾಂಗಿನ ಅಂತರದಲ್ಲಿದ್ದ ದಾದರ ಬೀಚಿಗೆ ಹೋಗಿ, ಜನಸಂಮರ್ದವಿಲ್ಲದ ಒಂದು ತಾವು ನೋಡಿ; ಆ ವಾಲುಕಾಮಯ ಸಾಗರದಡದಲ್ಲಿ ಕುಳಿತರು.

ತೆರೆಯ ಅಂಗೈಯಲ್ಲಿ, ದೂರದಲ್ಲಿ ಹಾಯಿದೆರೆದ ನಾವು ನಲಿಯುತ್ತಿದ್ದವು. ಮಹಾರ್ಣವನ ಪಾತಾಳದರಮನೆಯಲ್ಲಿ ಯಜ್ಞ-ಯಾಗ ನಡೆದಿರಬೇಕು—ಮಂತ್ರ ಘೋಷದ ಗಂಭೀರನಾದ ಎಲ್ಲಿಂದಲೋ ಘೂರ್ಮಿಸಿ ಬರುವಂತೆ ಸಾಗರನ ವೇಲಾವಿತಾನ ನಡೆದಿತ್ತು. ದೂರದಲ್ಲಿ ಅನಂತದಂಚು ಸಾಗರವನ್ನು ಬಾಗಿ ಮುದ್ದಿಡುವಂತೆ ಕಾಣುತ್ತಿತ್ತು. ಅಂತವಿಲ್ಲದ-ಪಾರವಿಲ್ಲದ ರತ್ನಾಕರನ ವಿರಾಟ್ ವೈಭವ ಪಂತರ ಕಣ್ಣೆದುರು ಕಟ್ಟಿತ್ತು.

ಪಂತರಿಗೆ ತಮ್ಮ ಕ್ಷುದ್ರತನದ ಕಲ್ಪನೆಯಾಗತೊಡಗಿತ್ತು. ಸಾಗರ ನಿರ್ಮಾಪಕನ ಭವ್ಯತೆಯ ದಿವ್ಯತೆಯ-ಅನಂತ ಗಭೀರತೆಯ-ವಿಶ್ವವ್ಯಾಪಕ

ತೆಯ ದರ್ಶನ ಮಾಡತೊಡಗಿತ್ತು. ತಟಿತ್‌ಕೋಟಿ ನಿಭಕಾಯ ಜಗನ್ನಾಥನ ಮಹಾದರ್ಶನ ಭಾವ ಮೂಡ ತೊಡಗಿತ್ತು. ಪಂತರು ಪಂತಮಾಸ್ತರ ರಾಗಿರಲಿಲ್ಲ. ಪರಮಾತ್ಮನ ಭಾವನಾ ವ್ಯಾಪ್ತ ಚಿತ ರಾಗಿದ್ದರು. ಅವರ ಕೈ ಮೇಲೆ ಎತ್ತಿದವು. ತಲೆ ನಸು ಬಾಗಿತು. ಸಮುದ್ರರಾಜನಿಗೆ-ಅಸ್ತಮಿಸ ಲಿರುವ ಸವಿತ್ರದೇವನಿಗೆ ಏನೋ ನಿವೇದಿಸಿದರು. ಆ ನಿವೇದನೆಯಲ್ಲಿ ಅರ್ಥವೂ ಇರಲಿಕ್ಕಿಲ್ಲ, ಸ್ವಾರ್ಥವೂ ಇರಲಿಕ್ಕಿಲ್ಲ. ಕೇವಲ ನಿರಾಕಾಂಕ್ಷೆ ಯಾಗಿರಬಹುದು ಆ ನಿವೇದನೆ! ಯಾರುಬಲ್ಲರು?

ಮೂರು-ನಾಲ್ಕು ಹುಡುಗರ ಹಿಂಡೊಂದು ಬಂದು ಪಂತರಿಂದ ಅನತಿದೂರದಲ್ಲಿ ಮಂಡಿತವಾ ಯಿತು. ಹುಡುಗರು ತಮ್ಮ ತಮ್ಮಲ್ಲಿ ಮಾತನಾಡಿ ಕೊಳ್ಳುತ್ತಿದ್ದರು. ಹತ್ತೆಂಟು ದಿನಗಳಲ್ಲಿ ಶಾಲೆ ಸುರುವಾಗುತ್ತಿದೆ. ಈ ಸಾರೆ ಮ್ಯಾಟ್ರಿಕ್. ತಾವು ಎಷ್ಟೇ ಓದಿಕೊಂಡರೂ ಯೋಗ್ಯ ಮಾರ್ಗದರ್ಶನ ಬೇಕು. ಮಾಸ್ತರರು ಕ್ಲಾಸಿನಲ್ಲಿ ಕಲಿಸದೆ ಮನೆಗೆ ಶಿಕೋಣಿಗೆ ಬಾ ಎನ್ನುತ್ತಾರೆ. ಇದು ವಿದ್ಯಾದಾನದ ಲಕ್ಷಣವಲ್ಲ. ಕೊಳ್ಳೆ ಹೊಡೆಯುವ ಹಂಚಿಕೆ. ತಿಂಗಳ ಫೀ ಕೊಡಬೇಕಾದರೆ ಸಾಕು ಬೇಕಾಗು ತ್ತದೆ. ಇನ್ನು ಈ ಮಾಸ್ತರರ ಕಿಸೆ ತುಂಬುವದು ಎಲ್ಲಿಸಾಧ್ಯ. ಸೂಟಿಯೆಂದು ಫೀ ಮಾಫೀ ಮಾಡು ವದಿಲ್ಲ; ಮಾಸ್ತರರು ಸೂಟಿಯಲ್ಲಿ ಕಲಿಸಿಲ್ಲವೆಂದು ಅವರ ಸಂಬಳ ಕೊಡದಿರುವದಿಲ್ಲ. ತಮ್ಮ ಸ್ವಾರ್ಥ ಅಷ್ಟೇ ನೋಡಿಕೊಳ್ಳುತ್ತಾರೆ ಎಲ್ಲರೂ. ನಮ್ಮ ಸಂಕಟ ಅವರಿಗೆ ಗೊತ್ತಾಗುವದಿಲ್ಲ. ಸೂಟಿ ಯಲ್ಲಿ ಮಾಸ್ತರರು ಖಾಲೀಮೈಯ್ಯು ಅಡ್ಡಾಡು ತ್ತಾರೆ. ಯಾಕೆ ಸ್ಪೇಶಲ್ ಕ್ಲಾಸ ಹಾಕಬಾರದು, ಮ್ಯಾಟ್ರಿಕ್ಕಿನವರಿಗೆ, ತಿಂದ ಫೀಯ ಕೂಳಾದರೂ ಮಾಸ್ತರ ಮೈಗೆ ಹತ್ತುತ್ತಿದೆ.''

ಪಂತರಿಗೆ ಯಾರೋ ತಪರಾಕಿ ಹೊಡೆದಂತಾ ಯಿತು. ಬವಳಿ ಬರುವಂತಾಯಿತು. ಸಾವರಿಸಿ ಕೊಂಡರು.

ಪಂತರು ಹುಡುಗರ ಕಡೆಗೆ ನೋಡಿದರು. ಎಲ್ಲಾ ಹದಿನಾರು-ಹದಿನೇಳು ವರುಷದ ಬಾಲ ಗೋಪಾಲರು. ಅಳತೆ-ಆಕಾರದಲ್ಲಿ ವಾಮನರಾ ದರೂ ಬುದ್ಧಿ-ತಿಳುವಳಿಕೆಯಲ್ಲಿ ಬಲಿರಾಜನನ್ನೇ ಬಲಿಕೊಳ್ಳುವ ವಿಶ್ವವ್ಯಾಪಕ ಶಕ್ತಿ-ಸಾಮರ್ಥ್ಯ ವಂತರು. ಅವರು ಆಡಿದ ಮಾತು ಹದಿನಾರಾಣೆ ಸತ್ಯ ಮಾತು. ಮಾಸ್ತರರು ರಣಗೂಳು ತಿನ್ನು ತ್ತಾರೆ. ಪುಕ್ಕಟೆ ಮೈಯ್ಯು ಅಡ್ಡಾಡುತ್ತಾರೆ. ಧರ್ಮರಾಜ, ಬಾಲಕರ ನಾಲಿಗೆಯ ಮೇಲೆ ನಿಂತು ಸತ್ಯ ನುಡಿಸಿದ್ದ. ಆ ಸತ್ಯ ಅನ್ಯರ ಬಗ್ಗೆ ಅವನು ವದಿಸಿರಲಿಕ್ಕಿಲ್ಲ. ಕರ್ತವ್ಯಚ್ಯುತಿಯ ಎಚ್ಚರ ಕೊಡಿಸಿರಬೇಕು. ಊರಲ್ಲಿಯ ತಮ್ಮ ಹದಿನೈದು ಜನ ಶಿಷ್ಯರ ಸಮೂಹ ಕೂಡ ಪಂತರಿಗೆ ತಮಗೆ ಇದೇ ಬಗೆಯ ಆಹೇರಿಯನ್ನು ಅರ್ಪಿಸುತ್ತಿರ ಬೇಕು. ಎಲ್ಲಾ ಯೋಗ್ಯ ಆಹೇರಿ! ನಾಲಾಯ್ಕ ಖರಿಗೆ ಇದೇ ಸನ್ಮಾನ ಯೋಗ್ಯ. ಪಂತರು ಇಪ್ಪ ತ್ತೈದು ವರ್ಷದ ನವಕರಿಯ ಅವಧಿಯಲ್ಲಿ ಇಂಥ ಹೀನ ಸನ್ಮಾನಕ್ಕೆ ಯೋಗ್ಯರಾಗಿದ್ದಿಲ್ಲ. ಯಾರೂ



ದಾದರ ಬೀಚಿನ ವಿದ್ಯಾರ್ಥಿಗಳ ಮಾತು ಪಂತ ಮಾಸ್ತರರಿಗೆ ಕರ್ತವ್ಯದ ಜಾಗ್ರತೆ ಮಾಡಿಕೊಟ್ಟಿತು

ಇಂಥ ಲಘು ಸನ್ಮಾನ ಮಾಡಿರಲಿಲ್ಲ. .ಇಂದು ಈ ನಾಲ್ಕು ಹುಡುಗರು, ತಮ್ಮಂಥ ಯಾರೋ ಇನ್ನೊಬ್ಬ ಪಂತೋಜಿಯವರಿಗೆ ಈ ಮಾತಿನ ಶಲ್ಯ ತಿವಿದಿದ್ದರು. ಅದು ತಮಗೂ ತಾಕಿತ್ತು. ಮರ್ಮಭೇದಿಯಾಗಿ ನಟ್ಟಿತ್ತು. ಅಭಿಮಾನಕ್ಕೆ ಗುರಿಯಿಟ್ಟು ನಾಟಿತ್ತು. ಪಂತರು ಸಕಾಲದಲ್ಲಿ ಅದರ ಮರ್ಮ ಭೇದಿತ್ವವನ್ನು ಅರಿತು ಅರ್ಥ ಮಾಡಿಕೊಂಡರು. ಕರ್ತವ್ಯ ಜಾಗ್ರತವಾದ ಅವ ಸಾನ ಅವರಲ್ಲಿ ಬಂದಂತಾಯಿತು. ತಾವು ಆ ಮೈಯ್ಯುವ- ಉಂಡು ಅಂಡಲಿಯುವ ಪಿಂಡದಲ್ಲಿ ಬರಲಾರರು-ಬರಲಾರರು. ತಮ್ಮ ದಾರಿ, ತಮ್ಮ ಶೀವಿ, ತಮ್ಮ ಸಾಧನೆ ಬೇರೆ- ತೀರ ಬೇರೆ. ಹೆಜ್ಜೆ ತಪ್ಪಿತ್ತು. ಕಂಣು ಮುಚ್ಚಿದಾಗ ಕಾಲು ಅನ್ಯ ಕವ ಲಿನಲ್ಲಿ ತಮ್ಮನ್ನು ಸೆಳೆದಿತ್ತು. ಚೋಟ ಹುಡುಗರ ರೂಪದಲ್ಲಿ ನಿಂತು ಧರ್ಮರಾಜ ಸತ್ಯ ವದಿಸಿದ- ತಮ್ಮನ್ನು ಜಾಗರಕ್ಕೆ ತಿರುಗಿಸಿದ. ಪಂತರು, ಪಂತ ಮಾಸ್ತರರಾದರು. ಕರ್ತವ್ಯಚ್ಯುತಿ ವಿಮುಖ ರಾದರು. ಪಂತರು ಗೆದ್ದರು. ಮುಂಬೈ ವೈಭವ ನೋಡಲು ಹೊರಬಿದ್ದುಹೋದ ಪಂತರು, ಮನೆಗೆ ಬಂದಾಗ ಪಂತ ಮಾಸ್ತರರಾಗಿ ಬಂದಿದ್ದರು.

ಬಾಳನಿಗೆ ಹೇಳಿದರು "ಬಾಳ, ನಿನ್ನ ಕಾಕೂ ಇರಲಿ ಇಲ್ಲೇ ಇನ್ನೊಂದು ತಿಂಗಳೊಪ್ಪತ್ತು. ನಾ, ನಾಳೀನs ಹೊರಡತೇನಿ ಊರಿಗೆ ತಿಳೀತೇನು?''

ಮುಂಬೈಗೆ ಬಂದು ಇನ್ನೂ ನಾಕು ದಿನವಾಗಿಲ್ಲ. ಪಂತರು ತಿರುಗಿ ಹೋಗುವ ಮಾತು ಹೇಳಿದ್ದನ್ನು ಕೇಳಿ, ಮಗ-ಸೊಸೆ ಇಬ್ಬರೂ ಅಚ್ಚರಿಗೊಂಡರು. ನರ್ಮದಾ ಕಾಕೂನಿಗೆ ಯಜಮಾನರ ಸತ್ಯ ಗೊತ್ತು. ಅವರು ಒಂದೂ ಮಾತಾಡಲಿಲ್ಲ. ಪಂತ ರಿಗೆ ಒತ್ತಾಯ ಪಡಿಸಿ ಇಟ್ಟುಕೊಂಡರೆ ನಿಂತಾರು: ಆದರೆ ಅವರು ಸುಖಿಯಾಗಲಾರರು, ಅವರಿಗೆ ಸಮಾಧಾನವೆನಿಸದು, ಎಂಬೀ ಮಾತು ನರ್ಮದಾ ಕಾಕೂ ಅರಿತು ಬಲ್ಲರು. ಅವರನ್ನು ಒತ್ತಾಯ ಪಡಿಸಬೇಡಿರೆಂದು ಮಗ-ಸೊಸೆಗೆ ಹೇಳಿದರು.

ಪಂತರು ಮರುದಿನ ಸಂಜೆಯ ನಾಲ್ಕಕ್ಕೇ ಹೊರಡುವ ಸಿದ್ಧತೆ ನಡೆಸಿದರು. ಕೈಚೀಲದಲ್ಲಿ ತಮ್ಮ ನಾಕಾರು ಅರಿವೆ ತುರುಕಿಕೊಂಡರು. ಏಳು ಹೊಡೆಯುವದರೊಳಗಾಗಿ ಊಟ ಬಗೆಹರಿಸಿದರು ಎಂಟಕ್ಕೆ ಬೋರಿಬಂದರ ಸ್ಟೇಶನ್ ಬಿಡುವ ಸಿದ್ಧತೆ ಯಲ್ಲಿದ್ದ ಗಾಡಿಯಲ್ಲಿ ಜಾಗಮಾಡಿಕೊಂಡು ಕುಳಿ ತರು.

. ಬಾಳ-ಸೋನಾ ಅವರನ್ನು ಕಳಿಸಲಿಕ್ಕೆ ಬಂದಿ ದ್ದರು. ಪಂತರ ಆಕಸ್ಮಿಕ ನಿರ್ಗಮನದ ನಿರ್ಧಾರ ದಿಂದ ಅವರಿಗೆ ಅತಿಯಾದ ನೋವಾಗಿತ್ತು. ಅವರ ಜೀವನದ ಚುಟುಚುಟು ಅರಿತುಬಲ್ಲ ಬಾಳ ಅವರ ಮಾತಿಗೆ ಒಪ್ಪಿಗೆ ಕೊಟ್ಟಿದ್ದ. ಮೊನ್ನೆಯೇ ಅವರು ಶಾಲೆಯ ಕಡೆಗೆ ಕೈ ಮುಗಿದು, ನಮಿಸಿ ನಿಂತ ನಿಲುವನ್ನು ನೋಡಿಯೇ ತಾಡಿಸಿದ್ದ, ಮೀನ ಬದು ಕುವದು ನೀರಲ್ಲಿ-ಎಂಥ ಗಟ್ಟಿ. ಮಧುಸದೃಶ ವಾದ ಹಾಲಲ್ಲಿ ಅಲ್ಲವೆಂದು.

ಪಂತರು ಹೊರಡುತ್ತೇನೆಂದು ಹೇಳಿದಾಗ ಇದೇ ಕಾರಣದಿಂದಾಗಿ ಅವನು ಇರಲು ಆಗ್ರಹ ಪಡಿಸಲಿಲ್ಲ.

ಗಾಡಿ ಸೀಟಿ ಹೊಡೆಯಿತು. ಗಾರ್ಡ ದೀಪ ತೋರಿಸಿದ. ಬಾಳ-ಸೋನಾರಿಗೆ ಆಶೀರ್ವದಿಸು ತ್ತಿರುವಾಗಲೇ ಪಂತರ ಗಾಡಿ ಬಿಟ್ಟಿತು.

ಪಂತರು ಮುಂಬೈ ಬಿಟ್ಟರು.

ಮಾರನೆಯ ದಿನ ಬೆಳಗಿನ ಏಳಕ್ಕೆ ಹತ್ತು ನಿಮಿಷ ಇರುವದು-ಬಿಳಿಯ ಖಾದಿಯ ಮುಂಡಾ

ಭಾರತದಲ್ಲಿ ಮಿತಸಂತಾನ ಯೋಜನೆ

[ಒಂದು ತಾತ್ವಿಕ ವಿವೇಚನೆ]

> ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸುವದು ಅವಶ್ಯವಾಗಿ ಪರಿಣಮಿಸಿದ್ದರಿಂದ ಸರಕಾರವು ಮಿತಸಂತಾನ ಯೋಜನೆಯನ್ನು ಕೈಕೊಂಡಿತು. ಆದರೆ ಅದು ನಮ್ಮ ಧಾರ್ಮಿಕ ಸಾಂಸ್ಕೃತಿಕ ಸಾಮಾಜಿಕ ನೈತಿಕ ಪರಂಪರೆಗಳಿಗೆ ಎಷ್ಟರ ಮಟ್ಟಿಗೆ ಅನುಗುಣವಾಗಿದೆಯೆಂಬುದನ್ನು ವಿಚಾರಿಸಿದಾಗ ಕೆಲವೊಂದು ಬದಲಾವಣೆಗಳು ಅವಶ್ಯಕವೆನಿಸುತ್ತವೆ. ಯಾವ ಬದಲಾವಣೆಗಳು ಆಗಬೇಕೆಂಬುದನ್ನು ಲೇಖಕರು ಇಲ್ಲಿ ವಿವೇಚಿಸಿರುವರು.

ಲೇ: ಪ್ರೊ. ಸಿ. ಎಸ್. ಕುಲಕರ್ಣಿ, ಜನತಾ ಕಾಲೇಜ ಧಾರವಾಡ.

ನಮ್ಮ ದೇಶದಲ್ಲಿ ಇಂದು ಮಿತಸಂತಾನಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರವು ನಡೆದಿದೆ; ಪ್ರಯೋಗಗಳೂ ನಡೆದಿವೆ. ಮತ್ತು ಇಲ್ಲಿ ನಡೆದ ಪ್ರಯೋಗಗಳು ಯಶಸ್ವಿಯಾಗಿರುವವೆಂದು ಸಾರಿ ಮಿತಸಂತಾನ ಯೋಜನೆಯನ್ನು ಸಾರ್ವತ್ರಿಕವಾಗಿ ಮಾಡುವ ಪ್ರಯತ್ನಗಳೂ ನಡೆದಿವೆ. ಆದರೆ ಈ ಮಿತಸಂತಾನ ಯೋಜನೆಯನ್ನು ನಾವು ಸಾರ್ವತ್ರಿಕವಾಗಿ ಒಪ್ಪುವ ಮೊದಲು ಅದು ನಮ್ಮ ಸಂಸ್ಕೃತಿ, ಪರಂಪರೆ, ತತ್ವಜ್ಞಾನ, ಧಾರ್ಮಿಕನಂಬುಗೆ ಮೊದಲಾದವುಗಳಿಗೆ ಅನುಗುಣವಾಗಿದೆಯೇ? ಇಲ್ಲವೇ? ಎಂಬುದನ್ನು ವಿಚಾರಿಸುವದು ಅವಶ್ಯವಾಗಿದೆ. ಒಂದುವೇಳೆ ಈ ಯೋಜನೆ ನಮ್ಮ ಸಂಸ್ಕೃತಿಪರಂಪರೆಗಳಿಗೆ ಅನುಗುಣವಾಗಿಲ್ಲವೆಂದು ಕಂಡು ಬಂದರೂ ಅದು ನಮಗೆ ಅನಿವಾರ್ಯವಾದರೆ ಅದನ್ನು ನಾವು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು? ನಮ್ಮ ಸಂಸ್ಕೃತಿ, ಧರ್ಮ, ಪರಂಪರೆಗಳಿಗೆ ಹೊಂದುವಂತೆ ಆದರಲ್ಲಿ ನಾವು ಯಾವಬದಲಾವಣೆಗಳನ್ನು ಮಾಡಬೇಕು? ಎಂಬ ಸಂಗತಿಗಳೂ ವಿಚಾರಾರ್ಹವಾಗಿವೆ.

ಮಿತಸಂತಾನ ಯೋಜನೆ ನಮ್ಮಲ್ಲಿ ಬರಲು, ಪ್ರಚಾರಗೊಳ್ಳಲು ಒಂದು ಪ್ರಬಲವಾದ ಹಿನ್ನೆಲೆ ಅದಕ್ಕಿದೆ. ನಮಗೆ ಸ್ವಾತಂತ್ರ್ಯ ದೊರೆತ ಮೇಲೆ ನಮ್ಮ ದೇಶವು ಎದುರಿಸಬೇಕಾದ ಹಲವು ಸಮಸ್ಯೆಗಳಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸುವದೂ ಒಂದು ದೊಡ್ಡ ಹಾಗೂ ಅವಶ್ಯಕವಾಗಿ ಎದುರಿಸಲೇಬೇಕಾದ ಸಮಸ್ಯೆಯೆನ್ನಿಸಿತು. ಜನಸಂಖ್ಯೆಯು ಬೆಳವಣಿಗೆಯನ್ನು ತಡಗಟ್ಟದಿದ್ದರೆ ಹೆಚ್ಚು ಆಹಾರವನ್ನು ಬೆಳೆಯುವ ಸಮಸ್ಯೆ, ಹೆಚ್ಚು ನಿರುದ್ಯೋಗಿಗಳನ್ನು ಎದುರಿಸುವ ಸಮಸ್ಯೆ, ಹೆಚ್ಚು ಸ್ಥಳವನ್ನು ಒದಗಿಸುವ ಸಮಸ್ಯೆ ಇವೇ ಮುಂತಾದ ಹಲವು ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆಂದು ಕಂಡು ಬಂದಿತು. ಇದಲ್ಲದೆ ಹೆಚ್ಚು ಮಕ್ಕಳನ್ನು ಹೆರುವದು ಸ್ತ್ರೀಯರ ಆರೋಗ್ಯ ಆಯುಷ್ಯಗಳಿಗೆ ಘಾತಕವೆಂದೂ ಕುಟುಂಬ ಸ್ವಾಸ್ಥ್ಯಕ್ಕೆ ವಿಘ್ನಕಾರಿಯೆಂದೂ ತಿಳಿದು ಬಂದಿತು. ಆದುದರಿಂದ ಜನನ ನಿಯಂತ್ರಣಕ್ಕಾಗಿ ಮಿತಸಂತಾನ ಯೋಜನೆ ನಮ್ಮ ದೇಶದಲ್ಲಿಯೂ ಜನ್ಮ ತಾಳಿ ಪ್ರಚಾರಗೊಳ್ಳತೊಡಗಿದೆ.

ಯೋಜನೆಯ ಮುಖ್ಯಾಂಶಗಳು :

ಈ ಯೋಜನೆಯಲ್ಲಿಯ ಮುಖ್ಯ ಅಂಶವೆಂದರೆ ದಂಪತಿಗಳಿಗೆ ಮಿತಸಂತಾನದ ಆವಶ್ಯಕತೆ ಹಾಗೂ ಲಾಭಗಳನ್ನು ತಿಳುಹಿಸಿ ಜನನ ನಿಯಂತ್ರಣದ ಸಾಧನಗಳನ್ನು ಅವರಿಗೆ ಒದಗಿಸಿಕೊಟ್ಟು ಜನನ ನಿಯಂತ್ರಣದಲ್ಲಿ ಅವರನ್ನು ತರಬೇತುಗೊಳಿಸುವದೇ ಆಗಿದೆ.

ಜನನ ನಿಯಂತ್ರಣದ ಪದ್ಧತಿ ಹಾಗೂ ಸಾಧನಗಳಲ್ಲಿ ಮುಖ್ಯವಾಗಿ ಎರಡು ವರ್ಗಗಳನ್ನು ಮಾಡಲಾಗಿದೆ. ಒಂದು ನೈಸರ್ಗಿಕ ಪದ್ಧತಿ. ಎರಡನೆಯದು ಕೃತ್ರಿಮ ಪದ್ಧತಿ. ಬ್ರಹ್ಮಚರ್ಯ, ಋತುಚಕ್ರಗಳು ನೈಸರ್ಗಿಕ ಪದ್ಧತಿಗಳಾಗಿವೆ. ಹಲವು ಕೃತ್ರಿಮ ಸಾಧನಗಳನ್ನು ಉಪಯೋಗಿಸುವದು ಕೃತ್ರಿಮ ಪದ್ಧತಿಯಾಗಿದೆ. ಪದ್ಧತಿಗಳಂತೆಯೇ ಸಾಧನಗಳಲ್ಲಿಯೂ ಎರಡು ವರ್ಗಗಳನ್ನು ಕಾಣುತ್ತೇವೆ. ಗಂಡಸರು ಉಪಯೋಗಿಸುವ ಸಾಧನಗಳು. ಹೆಂಗಸರು ಉಪಯೋಗಿಸುವಸಾಧನಗಳು.

ಇಂದಿನ ನಮ್ಮ ಮಿತಸಂತಾನ ಯೋಜನೆಯಲ್ಲಿ ಹೆಂಗಸರು ಉಪಯೋಗಿಸುವ ಜನನ ನಿಯಂತ್ರಣದ ಸಾಧನಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದೆ. ಅದಕ್ಕೆ ಕಾರಣವೂ ಇದೆ. ಪ್ರಜೋತ್ಪಾದನೆಯ ದುಷ್ಪರಿಣಾಮಗಳು ಗಂಡಸಿನಕಿಂತಲೂ ಹೆಂಗಸಿನ ಮೇಲೆಯೇ ಹೆಚ್ಚಾಗಿ ಆಗುವದರಿಂದ ಆಕೆಗೆ ರಕ್ಷಣೆ ಸಿಗುವದು ಹೆಚ್ಚು ಅವಶ್ಯಕವಾಗಿದೆ. ಗಂಡಸು ಪ್ರಜೋತ್ಪಾದನೆಯ ದುಷ್ಪರಿಣಾಮಗಳನ್ನು ಹೆಚ್ಚು ಅನುಭವಿಸದವನಾಗಿರುವದರಿಂದ ಮಿತಸಂತಾನ ಯೋಜನೆಯನ್ನು ಅವನು ದಕ್ಷತೆಯಿಂದ ಪಾಲಿಸುವನೆಂದು ನಂಬುವದು ಕಠಿಣವಾಗಿದೆ. ಆದುದರಿಂದ ಇಂದು ಈ ವಿಷಯದಲ್ಲಿ ಸ್ತ್ರೀಯರಿಗೆ ಹೆಚ್ಚು ತಿಳುವಳಿಕೆ ಕೊಡುವದು ತರಬೇತು ಕೊಡುವದು ಆವಶ್ಯಕವೆನಿಸಿದೆ.

ಪರಿಣಾಮಗಳು :

ಇಂದು ನಾವು ಗಂಡಸರಿಗೇ ತರಬೇತು ಕೊಡಲಿ, ಹೆಂಗಸರಿಗೇ ತರಬೇತು ಕೊಡಲಿ, ಆದರ ಪರಿಣಾಮಗಳೇನೆಂಬದನ್ನು ವಿಚಾರಿಸುವದು ಅವಶ್ಯವಲ್ಲವೇ? ನಮ್ಮ ದೇಶದ ದೃಷ್ಟಿಯಿಂದ ಈ ಪರಿಣಾಮಗಳನ್ನು ಕೆಳಗೆ ಹೇಳಿದ ದೃಷ್ಟಿಕೋನಗಳಿಂದ ವಿಚಾರಿಸಿ ನೋಡುವದು ತೀರ ಅವಶ್ಯವಾಗಿದೆ.

೧. ಧಾರ್ಮಿಕ : ನಮ್ಮ ದೇಶವು ಅಧ್ಯಾತ್ಮ ಪ್ರಧಾನವಾದ ದೇಶ. ನಮ್ಮ ಧರ್ಮವೂ ಅಧ್ಯಾತ್ಮಿಕವಾಗಿದೆ. ಧಾರ್ಮಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದಾಗ ಜನನ ನಿಯಂತ್ರಣವನ್ನು ಮಾಡುವದು ಪಾಪವೆನಿಸುತ್ತದೆ; ಅಧರ್ಮವೆನಿಸುತ್ತದೆ.

ಯಾಕಂದರೆ ನಮ್ಮ ಅಧ್ಯಾತ್ಮಿಕ ಹಾಗೂ ಧಾರ್ಮಿಕ ತಿಳುವಳಿಕೆಯ ಪ್ರಕಾರ ಆತ್ಮನು ತನ್ನ ಕರ್ಮವನ್ನು ಅನುಭವಿಸುವದಕ್ಕಾಗಿ ದೇಹ ಧಾರಣವನ್ನು ಮಾಡಿಬರುತ್ತಾನೆ. ಅವನಿಗೆ ಭೌತಿಕ ಶರೀರವನ್ನು ಕೊಡುವವರು ತಾಯಿ-

---

(೬೮ನೇ ಪುಟದಿಂದ)

ಸದ ಕೆಂಪು ಗೀರು ಗಂಧದ - ಸೆಟ್ ಕಾಲರಿನ ಕೋಟನ-ಕುತ್ತಿಗೆಯನ್ನು ಮುಚ್ಚಿ ಇಳಿಬಿದ್ದ ಶೆಲ್ಲೆಯ-ಪಂತ ಮಾಸ್ತರರು, ಹಿಂಬದಿ ಕೈಕಟ್ಟಿ ಕೊಂಡು ಶಾಲೆಯ ದಿಕ್ಕಿನಲ್ಲಿ ನಡೆದಿದ್ದರು.

"ಪಂತ ಮಾಸ್ತರ ಬಂದ್ರs"

"ಪಂತ ಮಾಸ್ತರ, ಅಧ್ಯಾಂಗ ಇಷ್ಟ ಲಗೂ ಬಂದರು"

"ಇನಾ ಹೋಗಿ ನಾಕ ದಿನಾ ಸುದ್ದೇ ಆಗಿಲ್ಲಲ್ಲs"

ನೂರು ನಾಲಿಗೆ ಮಸೆಯುತ್ತಿದ್ದವು. ಎಲ್ಲರಿಗೂ ಪಂತರ ಪುನರಾಗಮನದ ವಿಸ್ಮಯವೇ !

ಸಂಜೆಯ ಐದಕ್ಕೆ, ಶಾಲೆಯ, ಮುಲ್ಕೀ ಪರೀಕ್ಷೆಯ ವರ್ಗದಿಂದ ಮತ್ತೆ, ಹದಿನೈದು ಹುಡುಗರ-ಪಂತ ಮಾಸ್ತರರ ದನಿ ಮೇಳೈಸಿ

"ಯಂ ಶೈವಾಃ ಸಮುಪಾಸತೇ ಶಿವ ಇತಿ"

ಸಾಯಂ ಪ್ರಾರ್ಥನೆ ಕೇಳಿ ಬಂದಿತು.

ಶಾಲಿನಿಂದ, ನೀರಿಗೆ ನುಸುಳಿ ಮೀನ ಬದುಕಿಕೊಂಡಿತು.

— ● —

ಕೆಂಡೆಗಳು. ತನಗೆ ಭೌತಿಕ ಶರೀರವನ್ನು ಕೊಟ್ಟ ಉಪಕಾರಕ್ಕಾಗಿ ಆತ್ಮನು ಇಹದಲ್ಲಿಯೂ ಪರದಲ್ಲಿಯೂ ಇರುವ ಪಿತೃಗಳ ಸೇವೆಯನ್ನು ಮಾಡಿ ಪಿತೃಋಣವನ್ನು ತೀರಿಸುತ್ತಾನೆ. ಆದರೆ ನಾವು ಜನನ ನಿಯಂತ್ರಣದಿಂದ ಜನನವನ್ನೇ ತಡೆಗಟ್ಟಿದರೆ ಆತ್ಮನು ಭೌತಿಕ ಶರೀರವನ್ನು ಹೊಂದಲು ವಿಘ್ನವನ್ನು ಉಂಟುಮಾಡಿದಂತಾಗುತ್ತದೆ. ಹಾಗೂ ಅವನ ಕರ್ಮವನ್ನು ಅವನು ಅನುಭವಿಸಿ ತೀರಿಸಲು ಪ್ರತಿಬಂಧವನ್ನು ಮಾಡಿದಂತಾಗುತ್ತದೆ. ಇದರಿಂದ ಆಧ್ಯಾತ್ಮಿಕ ದುಷ್ಪರಿಣಾಮಗಳು ಉಂಟಾಗಿ ಭೌತಿಕ ಅನರ್ಥಕ್ಕೆ ಎಡೆಗೊಡುತ್ತವೆ. ಅದುದರಿಂದ ಜನನ ನಿಯಂತ್ರಣವು ಕೃತ್ರಿಮವೇ ಇರಲಿ, ನೈಸರ್ಗಿಕವೇ ಇರಲಿ, ಪಾಪಕರವಾಗಿದೆ. ಇಲ್ಲಿ ನೈಸರ್ಗಿಕ ನಿಯಂತ್ರಣವು ಕೂಡ ಪಾಪಕರವೆಂದು ಹೇಳಿದ ಕಾರಣವೆಂದರೆ ಮೇಲಿನ ವಿಧಾನವನ್ನು ನಾವು ನಂಬಿದಾಗ ನೈಸರ್ಗಿಕ ಜನನ ನಿಯಂತ್ರಣವೂ ಪಾಪವೆನಿಸುತ್ತದೆ. ಅದಕ್ಕಾಗಿಯೇ ನಮ್ಮ ಪುರಾಣಗಳಲ್ಲಿ ಬರುವ ಜರತ್ಕಾರು ಹಾಗೂ ವೃದ್ಧಕನ್ಯಾ ಇವರು ತಮ್ಮ ದೀರ್ಘ ಬ್ರಹ್ಮಚರ್ಯವನ್ನು ಮುರಿದು ಸಂತಾನಕ್ಕಾಗಿಯೇ ಮದುವೆಯಾಗಬೇಕಾಯಿತು. ದಂಪತಿಗಳಾಗಿದ್ದ ಸುಧನ್ವ ಪ್ರಭಾವತಿಯರ ಕಥೆಯಾದರೂ ಮೇಲಿನ ನಂಬುಗೆಯನ್ನೇ ಅವಲಂಬಿಸಿ ಬರೆಯಲ್ಪಟ್ಟದ್ದಾಗಿದೆ.

ಈ ಧಾರ್ಮಿಕ ಹಾಗೂ ಆಧ್ಯಾತ್ಮಿಕ ನಂಬುಗೆಯನ್ನು ಮಿತಸಂತಾನ ಯೋಜನೆಯ ಪ್ರವರ್ತಕರು ಹಾಗೂ ಪ್ರಚಾರಕರು ನಂಬಲಿಕ್ಕಿಲ್ಲ. ಆದರೆ ಈ ನಂಬುಗೆಯುಳ್ಳ ಸ್ತ್ರೀ-ಪುರುಷರೂ ಸಾಕಷ್ಟು ಇರುವರೆಂಬುದನ್ನು ನಾವು ಮರೆಯಬಾರದು. ಅಂಥವರ ಮೇಲೆ ಈ ಯೋಜನೆಯನ್ನು ಹೇರುವದು ಸರಿಯಾಗಬಹುದೆ? ಈ ಯೋಜನೆ ನಮ್ಮ ಧಾರ್ಮಿಕ ಹಾಗೂ ಅಧ್ಯಾತ್ಮಿಕ ನಂಬುಗೆಯನ್ನು ಅಲ್ಲಗಳೆಯುವದಿಲ್ಲವೆ? ಅಂದಮೇಲೆ ಇದನ್ನು ಸ್ವೀಕರಿಸುವದು ಯೋಗ್ಯವೇ? ಈ ದೃಷ್ಟಿಯಿಂದ ಯೋಗ್ಯವಲ್ಲವೆಂದೇ ಹೇಳಬೇಕಾಗುತ್ತದೆ.


೨. ನೈತಿಕ: ನೈತಿಕದೃಷ್ಟಿಯಿಂದ ನೋಡಿದಾಗಲೂ ಮಿತಸಂತಾನ ಯೋಜನೆ ಸರಿಯೆನಿಸುವದಿಲ್ಲ. ಯಾಕಂದರೆ ಮಿತಸಂತಾನ ಯೋಜನೆಯು ವ್ಯಭಿಚಾರಕ್ಕೆ ಸಾಕಷ್ಟು ಆಸ್ಪದವನ್ನು ಒದಗಿಸಿ ಕೊಡುತ್ತದೆ. ಜನನ ನಿಯಂತ್ರಣದ ಜ್ಞಾನ ಹಾಗೂ ಪದ್ಧತಿಗಳನ್ನು ಸಾರ್ವತ್ರಿಕವಾಗಿ ಮಾಡಿದಾಗ ಅವಿವಾಹಿತ ಸ್ತ್ರೀ ಪುರುಷರು ಅದರ ದುರ್ಲಾಭವನ್ನು ಪಡೆಯುವದಿಲ್ಲವೆಂಬ ಭರವಸೆಯೇನು? ಈಗಾಗಲೇ ಪರದೇಶಗಳಲ್ಲಿ ವಿವಾಹಿತ ಹಾಗೂ ಅವಿವಾಹಿತ ಸ್ತ್ರೀ ಪುರುಷರಿಬ್ಬರೂ ಜನನ ನಿಯಂತ್ರಣದ ಸಾಧನ ಹಾಗೂ ಪದ್ಧತಿಗಳ ದುರ್ಲಾಭವನ್ನು ಪಡೆದು ನೈತಿಕ ಅಧಃಪತನವನ್ನು ಹೊಂದುವದು ಕಂಡು ಬಂದಿದೆ. ಇಂಥ ನೈತಿಕ ಅಧಃಪತನವು ದೇಶದ ಉತ್ಕರ್ಷೆಗೆ ಸಾಧನವಾಗಬಹುದೇ! ಇಂಥ ನೈತಿಕ ಅಧಃಪತನವನ್ನು ತಪ್ಪಿಸುವದು ಸಾಧ್ಯವಿದೆಯೇ?

೩. ಮಾನಸಿಕ: ಜನನನಿಯಂತ್ರಣದ ಸಾಧನಗಳನ್ನು ಅವು ನೈಸರ್ಗಿಕವೇ ಇರಲಿ, ಕೃತ್ರಿಮವೇ ಇರಲಿ ಉಪಯೋಗಿಸುವದರಿಂದ ಹಲವು ಮಾನಸಿಕ ಪ್ರತಿಕ್ರಿಯೆಗಳು ಉಂಟಾಗುತ್ತವೆಂಬುದನ್ನೂ ಮರೆಯಬಾರದು. ಜನನ ನಿಯಂತ್ರಣದ ಸಾಧನ ಹಾಗೂ ಪದ್ಧತಿಗಳು ಸ್ತ್ರೀ ಪುರುಷರ ನೈಸರ್ಗಿಕ ಕಾಮತೃಪ್ತಿಗೆ, ಅವರ ಶೃಂಗಾರ ಭಾವನೆಗೆ, ಸೂಕ್ಷ್ಮ ಸಂವೇದನೆಗಳಿಗೆ ಅಡ್ಡಿಯಾಗುವದರಿಂದ ಅವರ ಮಾನಸಿಕ ಸ್ವಾಸ್ಥ್ಯವು ಕೆಡಲು ಕಾರಣವಾಗುತ್ತದೆ. ಮಿತಸಂತಾನ ಯೋಜನೆಯು ಧಾರ್ಮಿಕ ನಂಬುಗೆಗೆ ವಿರುದ್ಧವಾದಾಗಲೂ ಹಲವು ಮಾನಸಿಕ ಪ್ರತಿಕ್ರಿಯೆಗಳಿಗೆ ಎಡೆ ಕೊಡುತ್ತದೆ. ಇಂಥ ಮಾನಸಿಕ ಅಸ್ವಾಸ್ಥ್ಯಕ್ಕೆ ಒಳಗಾದ ಹಲವು ಜನರು ಮಾನಸೋಪಚಾರಕ್ಕಾಗಿ ಬಂದುದು ಪರದೇಶಗಳಲ್ಲಿ ಕಂಡು ಬಂದಿದೆ. ನಮ್ಮ ದೇಶದಲ್ಲಿ ಧಾರ್ಮಿಕ ಭಾವನೆ ಸ್ತ್ರೀಪುರುಷರಲ್ಲಿ ಇನ್ನೂ ಪ್ರಬಲವಾಗಿರುವಾಗ ಈ ಯೋಜನೆ ಮಾನಸಿಕ ದುಷ್ಪರಿಣಾಮಗಳಿಗೆ ಎಡೆ ಕೊಡುವದಿಲ್ಲವೇ?

೪. ಆರ್ಥಿಕ: ಮಿತಸಂತಾನ ಯೋಜನೆ ಬಡತನವುಳ್ಳ ನಮ್ಮ ದೇಶಕ್ಕೆ ಸಾಕಷ್ಟು ವೆಚ್ಚದ್ದಾಗುವದೆಂದೂ ಹೇಳಬಹುದು. ಸಾಮಾನ್ಯನಿಗೆ ಬ್ರಹ್ಮಚರ್ಯವು ಅಸಾಧ್ಯವೆನಿಸುವದು. ಇನ್ನೂ ಅಶಿಕ್ಷಿತರಾಗಿರುವ ನಮ್ಮ ಬಹುಸಂಖ್ಯೆ ಮಹಿಳೆಯರಿಗೆ ಋತುಚಕ್ರದ ಲೆಕ್ಕವನ್ನು ಸರಿಯಾಗಿ ಮಾಡಲು ಬಾರದೇ ಅದು ನಿಷ್ಪ್ರಯೋಜಕವಾಗುವದು. ಕೃತ್ರಿಮ ಸಾಧನಗಳು ಬಡವನ ಕೊಳ್ಳುವ ಶಕ್ತಿಯನ್ನು ಮೀರಿರುವವು. ಇನ್ನು ಸರಕಾರದವರೇ ಅವುಗಳನ್ನು ಪುಕ್ಕಟೆಯಾಗಿ ಹಂಚುತ್ತೇವೆಂದರೂ ಅವು ಯಾರಿಗೆ ತಲುಪಬೇಕಾಗಿರುತ್ತವೆಯೋ ಅವರಿಗೇ ತಲುಪುವದು, ಸರಿಯಾಗಿ ಉಪಯೋಗಿಸಲ್ಪಡುವದು ಸಂಶಯಾಸ್ಪದವೇ ಆಗಿದೆ.

೫. ಸಾಮಾಜಿಕ: ಜನನ ನಿಯಂತ್ರಣದ ಜ್ಞಾನ ಹಾಗೂ ಸಾಧನಗಳ ಪ್ರಸಾರದಿಂದ ಹಲವು





ಸಾಮಾಜಿಕ ಪ್ರತಿಕ್ರಿಯೆಗಳೂ ಉಂಟಾಗುತ್ತವೆ. ತರುಣ ತರುಣಿಯರಲ್ಲಿ ಲೋಲುಪತೆ ಬೆಳೆಯಲು ಆಸ್ಪದ ದೊರೆಯುತ್ತದೆ. ದಂಪತಿಗಳಲ್ಲಿ ದೊಡ್ಡ ಪ್ರಮಾಣದಿಂದ ವಿವಾಹ—ವಿಚ್ಛೇದನೆಗಳಾಗಲು ಸಹಾಯಕವಾಗುತ್ತದೆ. ಇದರಿಂದ ದೃಢವಾದ ದಾಂಪತ್ಯಜೀವನಕ್ಕೆ ಧಕ್ಕೆ ತಗಲುತ್ತದೆ. ಸುಖವು ಬೇಕು, ಹೊಣೆಗಾರಿಕೆ ಬೇಡ ಎಂಬ ಪ್ರವೃತ್ತಿ ಬೆಳೆಯಲು ಅನುವು ದೊರೆಯುತ್ತದೆ. ಅಂದಮೇಲೆ ಇಷ್ಟೆಲ್ಲ ಅನಿಷ್ಟಗಳನ್ನು ಜನನನಿಯಂತ್ರಣಕ್ಕಾಗಿ ಬರಮಾಡಿಕೊಳ್ಳುವದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಯೋಗ್ಯವೆ ? ಲಾಭದಾಯಕವೆ ?

೬. ನೈಸರ್ಗಿಕ : ನೈಸರ್ಗಿಕ ದೃಷ್ಟಿಯಿಂದ ಕೂಡ ಜನನ ನಿಯಂತ್ರಣವು ದುಷ್ಪರಿಣಾಮಕಾರಿಯೆನಿಸುತ್ತದೆ. ನಿಸರ್ಗದಲ್ಲಿ ಸಂಭೋಗಕ್ಕೂ ಸಂತಾನಕ್ಕೂ ನಿಕಟವಾದ ಸಂಬಂಧವಿದೆ. ಈ ಸಂಬಂಧವನ್ನು ತಪ್ಪಿಸಲು ಹೋರಾಡುವದು ನಿಸರ್ಗದ ವಿರುದ್ಧ ಹೋರಾಡಿದಂತೆ. ನಿಸರ್ಗವು ತಾನು ಒಂದರಲ್ಲಿ ಸೋತಾಗ ಅದರಿಂದುಂಟಾದ ಹಾನಿಯನ್ನು ಇನ್ನೊಂದರಲ್ಲಿ ತುಂಬಿಕೊಳ್ಳುತ್ತದೆ. ಹಾಗೆ ಮಾಡುವಾಗ ಹಲವು ಅನಿಷ್ಟಗಳು ತಲೆದೋರುತ್ತವೆ. ಆಗ ಅವುಗಳನ್ನು ಅನುಭವಿಸದೆ ಇರುವದು ಸಾಧ್ಯವಾಗುವದೆ ? ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ಹೇಳಬಹುದು. ತನ್ನ ಪೂರ್ವ ಪ್ರಾಯದಲ್ಲಿ ವಿಷಯಸುಖಕ್ಕಾಗಿ ಹಂಬಲಿಸಿ ಜನನ ನಿಯಂತ್ರಣವನ್ನು ಮಾಡಿ ಉತ್ತರ ಪ್ರಾಯದಲ್ಲಿ ಸಂತಾನಕ್ಕಾಗಿ ಹಂಬಲಿಸಿ ತಾಯಿಯಾಗಲು ಬಯಸುವ ಸ್ತ್ರೀ ತನ್ನ ಜೀವವನ್ನೇ ಗಂಡಾಂತರಕ್ಕೆ ನೂಕುತ್ತಾಳೆ. ಮಿತ ಸಂತಾನ ಯೋಜನೆಯಂತೆ ಕೇಲವೇ ಮಕ್ಕಳನ್ನು ಪಡೆದ ತಾಯಿ ತಂದೆಗಳು ತಮ್ಮ ಮಕ್ಕಳು ಅಪಘಾತಕ್ಕೋ ಪಿಡುಗಿಗೋ ಬಳಗಾಗಿ ತೀರಿಕೊಂಡಾಗ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಹೀಗೆ ಹಲವು ದೃಷ್ಟಿಯಿಂದ ವಿಚಾರಿಸಿದಾಗ



ಮಿತಸಂತಾನ ಯೋಜನೆಯು ಸ್ವಾಗತಾರ್ಹವೂ ಲಾಭದಾಯಕವೂ ಎನಿಸುವದಿಲ್ಲ.

ಹಾಗಾದರೆ ಈ ಯೋಜನೆಯನ್ನು ಸಂಪೂರ್ಣವಾಗಿ ತ್ಯಜಿಸಿಬಿಡಬೇಕೆ ?

ಈ ಯೋಜನೆಯನ್ನು ಸಂಪೂರ್ಣವಾಗಿ ತ್ಯಜಿಸಿದರೆ ನಮ್ಮ ಜನಸಂಖ್ಯೆಯು ಅತಿಯಾಗಿ ಬೆಳೆಯುವದಲ್ಲದೆ ಹಲವು ಆರ್ಥಿಕ, ಸಾಮಾಜಿಕ, ರಾಜಕೀಯ ಸಮಸ್ಯೆಗಳು ತಲೆದೋರುತ್ತವೆ. ನಮ್ಮ ಜನರ, ವಿಶೇಷವಾಗಿ ಸ್ತ್ರೀ ಹಾಗೂ ಮಕ್ಕಳ ಆರೋಗ್ಯದ ಮಟ್ಟವು ಕೆಳಗಿಳಿಯುವದಲ್ಲದೆ ಸ್ತ್ರೀಯರ ಹಾಗೂ ಮಕ್ಕಳ ಮರಣಸಂಖ್ಯೆಯೂ ಹೆಚ್ಚಾಗುತ್ತದೆ.

ಇದಲ್ಲದೆ ನಾವು ಯಾವ ಮಗುವಿಗೆ ಅನ್ನ ವಸ್ತ್ರ ವಸತಿಗಳನ್ನು ಒದಗಿಸಲು ಸಮರ್ಥರಿಲ್ಲವೋ ಅಂಥ ಮಗುವನ್ನು ಈ ಭೂಮಿಗೆ ತಂದು ದುಃಖಕ್ಕೆ ಗುರಿಮಾಡಿ ಕೊಲ್ಲುವದು ಯೋಗ್ಯವೇ ? ಮಾನವೀಯವೇ ?

ಹಾಗಾದರೆ ಈ ಇಕ್ಕಟ್ಟಾದ ಸಮಸ್ಯೆಗೆ ಉತ್ತರವೇನು ? ಅಥವಾ ಇದಕ್ಕೆ ಉತ್ತರವೇ ಇಲ್ಲವೇ ?

ಇದಕ್ಕೆ ಉತ್ತರವಿದೆ. ಪರಿಹಾರವಿದೆ. ಈ ಉತ್ತರ ಈ ಪರಿಹಾರ ದ್ವಿಮುಖವಾಗಿದೆ.

ಮೊದಲನೆಯದೆಂದರೆ ಸಶಕ್ತ ಸಂತಾನದಿಂದ, ಇಚ್ಛಿತ ಸಂತಾನದಿಂದ ಉಂಟಾಗುವ ಹಲವು ಪ್ರಕಾರದ ಲಾಭಗಳ ತಿಳುವಳಿಕೆಯನ್ನು ಸರಿಯಾಗಿ ಮಾಡಿಕೊಡುವದೇ ಆಗಿದೆ. ಈ ತಿಳುವಳಿಕೆಯನ್ನು ಮಾಡಿಕೊಡದೆ ಜನನ ನಿಯಂತ್ರಣದ ಪದ್ಧತಿಗಳನ್ನು ಪ್ರಚಾರ ಮಾಡುವದು, ಸಾಧನಗಳನ್ನು ಒದಗಿಸುವದು, ನಿಷ್ಫಲವೂ ಅನರ್ಥಕಾರಿಯೂ ಆಗುತ್ತದೆ. ಆದುದರಿಂದ ಶಿಕ್ಷಣ ಹಾಗೂ ಜ್ಞಾನ ಪ್ರಸಾರಗಳು ಮೊದಲು ನಡೆಯಲಿ.

ಅದನ್ನು ಈ ಕೆಳಗಿನ ಸಂಗತಿಗಳಿಂದ ಮಾಡಬಹುದು :

೧. ನೈಸರ್ಗಿಕ ಸಂಯಮನಕ್ಕಾಗಿ ಮನಸ್ಸನ್ನು ಸುಸಂಸ್ಕೃತಗೊಳಿಸುವದು. ದಾಂಪತ್ಯಜೀವನಕ್ಕೆ ಕಾಮವು ಅಡಿಗಲ್ಲಾಗಿದ್ದರೂ ಕಾಮಜೀವನವೇ ದಾಂಪತ್ಯಜೀವನದ ಪರಮ ಗುರಿಯಲ್ಲ ಎಂಬ ತಿಳುವಳಿಕೆಯನ್ನು ತಂದುಕೊಡುವದು.

೨. ನಮ್ಮಲ್ಲಿ ದಂಪತಿಗಳ ಸಂಭೋಗಕ್ಕಾಗಿ ಹೇಳಲ್ಪಟ್ಟ ಧಾರ್ಮಿಕ ವಿಧಿನಿಯಮಗಳನ್ನು ಆಧುನಿಕ ರೀತಿಯಿಂದ ಅರ್ಥವಾಗುವಂತೆ ವಿವರಿಸಿ ಹೇಳಿ ಪ್ರಚಾರ ಮಾಡುವದು. ನಮ್ಮಲ್ಲಿಯ ಹಲವು ಧಾರ್ಮಿಕ ವಿಧಿನಿಷೇಧಗಳನ್ನು ನಾವು ಪಾಲಿಸುತ್ತ ಹೋದರೆ ಮಿತಸಂತಾನವು ತಾನಾಗಿಯೇ ಒದಗಿ ಬರಲು ಸಾಕಷ್ಟು ಸಹಾಯವಾಗುತ್ತದೆ.

೩. ಸಂತಾನ ಸಂಯಮನದಲ್ಲಿ ಜ್ಯೋತಿಷ್ಯ ಶಾಸ್ತ್ರದ ಸಹಾಯವನ್ನು ಪಡೆಯುವದು. ಈ ಜ್ಯೋತಿಷಶಾಸ್ತ್ರದ ಸಹಾಯವು ಹಲವರಿಗೆ ಹುಚ್ಚು ಕಲ್ಪನೆಯೆನಿಸಬಹುದು. ಆದರೆ ಜ್ಯೋತಿಷ್ಯವು ನಮ್ಮ ವೇದಾಂಗವಾಗಿರುವದರಿಂದಲೂ ನಮ್ಮ ಪ್ರತಿಯೊಂದು ಧಾರ್ಮಿಕ ಕಾರ್ಯದಲ್ಲಿ ನಾವು ಜ್ಯೋತಿಷ್ಯದ ಸಹಾಯವನ್ನು ಪಡೆಯುತ್ತಿರುವದರಿಂದಲೂ ಈ ದಿಸೆಯಲ್ಲಿಯೂ ಪ್ರಯೋಗಗಳನ್ನು ಮಾಡಿ ನೋಡುವದು ಆವಶ್ಯಕವಾಗಿದೆ. ಜ್ಯೋತಿಷ್ಯವು ನಮ್ಮ ಧರ್ಮಬಾಹಿರವಾಗಿದ್ದರೆ ಮದುವೆ ಮುಂಜಿವೆಗಳಲ್ಲಿ, ಶುಭ ಕಾರ್ಯಗಳಲ್ಲಿ ಜಾತಕ ನೋಡುವ ಸುಮುಹೂರ್ತವನ್ನು ಲಕ್ಷಿಸುವ ಕಾರಣವೇನು? ಆದ್ದರಿಂದ ಈ ವಿಷಯವೂ ವಿಚಾರಾರ್ಹವಾಗಿದೆ.

೪. ನಮ್ಮ ಸಂಸ್ಕೃತಿ, ನಮ್ಮ ಕಲಾಭಿರುಚಿ, ಶೃಂಗಾರಪ್ರಿಯತೆ. ನಮ್ಮ ಧಾರ್ಮಿಕ ನಂಬುಗೆ, ಆಧ್ಯಾತ್ಮಿಕ ತಿಳುವಳಿಕೆಗಳಿಗೆ ವಿರೋಧವೆನಿಸದಂತಹ ಜನನನಿಯಂತ್ರಣದ ಪದ್ಧತಿ ಹಾಗೂ ಸಾಧನಗಳನ್ನು ಸಂಶೋಧಿಸುವದು.

ಈ ಹಲವು ರೀತಿಗಳಲ್ಲಿ ನಾವು ಪ್ರಯತ್ನವನ್ನು ಮಾಡಿದರೆ ಜಟಿಲವಾದ ಈ ಸಮಸ್ಯೆಗೆ ಸಮಾಧಾನಕರವಾದ ಪರಿಹಾರವು ದೊರೆತೀತೆಂಬ ನಂಬಿಗೆಯಿದೆ.

ವಸ್ತುಗಳ ಸದುಪಯೋಗ

ರಾಣಿ ಶ್ಯಾಮವತಿಯು ಬುದ್ಧಭಿಕ್ಷುಗಳಿಗಾಗಿ ಆನಂದನೊಡನೆ ೫೦೦ ಬಟ್ಟೆಗಳನ್ನು ದಾನವಾಗಿ ಕೊಟ್ಟಳು. ಈ ಬಟ್ಟೆಯು ಸದುಪಯೋಗವಾಗುವುದೋ ಇಲ್ಲವೋ ಎಂಬ ಸಂಶಯವು ರಾಜ ಉದಯನನಿಗೆ ಇದ್ದೇ ಇತ್ತು.

ಆತ ಆನಂದನೊಡನೆ ಕೇಳಿದ- ಈ ವಸ್ತ್ರವನ್ನು ಹೇಗೆ ಉಪಯೋಗಿಸುವಿರಿ ಎಂದು.

ಆನಂದ ಹೇಳಿದ: ಭಿಕ್ಷುಗಳ ಬಟ್ಟೆ ಹರಿದು ಹೋಗಿವೆಯಾದ್ದರಿಂದ ಇವನ್ನು ಅವರಲ್ಲಿ ಹಂಚುವೆವು.

"ಹಿಂದಿನ ವಸ್ತ್ರಗಳನ್ನು ಏನು ಮಾಡುವಿರಿ? ರಾಜ ಕೇಳಿದ. ನಾವು ಅವನ್ನು ಹಾಸಲು ಬಳಸುವೆವು"

"ಹಿಂದಿನ ಹಾಸುವ ಬಟ್ಟೆಗಳನ್ನು ಹೇಗೆ ಬಳಸುವಿರಿ?"

"ಅದನ್ನು ದಿಂಬಿಗೆ ಸುತ್ತಲು ಬಳಸುವೆವು"

"ಈ ಮೊದಲು ದಿಂಬಿಗೆ ಉಪಯೋಗಿಸಿದ್ದವನ್ನು"

"ನೆಲಕ್ಕೆ ಹಾಸಲು ಉಪಯೋಗಿಸುವೆವು"

"ಹಿಂದೆ ಅದಕ್ಕೆ ಉಪಯೋಗಿಸುತ್ತಿದ್ದುವನ್ನು?"

"ನೆಲ ಉಜ್ಜಲು ಬಳಸುವೆವು"

"ಹಿಂದೆ ನೆಲ ಒರಸುತ್ತಿದ್ದವನ್ನು?"

"ನಾವು ಅವನ್ನೂ ಉಪಯೋಗಿಸದೆ ಬಿಡುವುದಿಲ್ಲ. ಅವನ್ನು ತುಂಡು ತುಂಡು ಮಾಡಿ ಮಣ್ಣಿಗೆ ಸೇರಿಸಿ ಮನೆ ಕಟ್ಟುವೆವು. ಯಾವುದೇ ವಸ್ತುವನ್ನು ಹಾಳುಮಾಡಲಾರೆವೆಂಬುದು ನಮ್ಮ ನಿರ್ಧಾರವಾಗಿದೆ" ಎಂದು ಆನಂದ ಉತ್ತರ ಕೊಟ್ಟನು.

ಪಾದರಕ್ಷೆಯ ಕಥೆ

ಬಹುಹಿಂದೆ ಒಂದೂರಲ್ಲಿ ಒಬ್ಬ ರಾಜನಿದ್ದನು. ಅವನು ಶೂರನಾಗಿದ್ದನು. ಧೈರ್ಯವಂತನಾಗಿದ್ದನು. ಆದರೆ ಸ್ವಲ್ಪ ಸಂಗತಿಗೂ ಅವನಿಗೆ ಸಿಟ್ಟುಬರುತ್ತಿತ್ತು. ಅದು ಬಹಳ ಹಳೆಯ ಕಾಲವಾಗಿತ್ತು. ಹೀಗಾಗಿ ಸುಧಾರಣೆಯೆಂಬುದು ಆಗ ಇರಲೇ ಇಲ್ಲ.

ರಾಜನು ಸಹ ಹೊರಗೆ ಅಡ್ಡಾಡುವಾಗ ಇತರ ಪ್ರಜೆಗಳಂತೆ ತಿರುಗಾಡಬೇಕಾಗುತ್ತಿತ್ತು ರಥ ವಾಹನಾದಿಗಳೇನೂ ಇರಲಿಲ್ಲ. ಇಷ್ಟೆ ಅಲ್ಲ ಬರಿಗಾಲಲ್ಲಿ ಅಡ್ಡಾಡಬೇಕಾಗುತ್ತಿತ್ತು. ಅವನೊಂದಿಗೆ ಮಂತ್ರಿಯೂ ಇರುತ್ತಿದ್ದನು.



ಒಮ್ಮೆ ರಾಜ ಮತ್ತು ಮಂತ್ರಿ ತಿರುಗಾಡಲು ಹೊರಟರು. ಹೀಗೆಹೊರಟ ಸಮಯದಲ್ಲಿ ಅವರ ಕಾಲಿನ ತುಳಿತದಿಂದ ಧೂಳು ಎದ್ದಿತು. ರಾಜನ ಕಾಲು ಧೂಳಿನಿಂದ ಮುಸುಕಿತು. ಬಹಳ ಹೊಲಸಾಗಿ ಕಾಣಹತ್ತಿದವು. ರಾಜನಿಗೆ ಕೂಡಲೇ ಸಿಟ್ಟು ಬಂತು. ಆಗಲೇ ಮಂತ್ರಿಗೆ ಹೇಳಿದ. ಈ ಧೂಳು ಏಳದಂತೆ ಏನಾದರೂ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು.



ಮಂತ್ರಿಗೆ ಬಹಳ ದಿಗಿಲು ಬಿತ್ತು. ರಸ್ತೆಯಲ್ಲಿ ಧೂಳು ಏಳದಂತೆ ಹೇಗೆ ಮಾಡಬೇಕು. ಅವನ ಅಧಿಕಾರಿಗಳಲ್ಲಿ ಒಬ್ಬರು ಬಂದು ರಾಜನು ಅಡ್ಡಾಡುವ ರಸ್ತೆಯನ್ನೆಲ್ಲ ಗೂಡಿಸಿದರೆ ಧೂಳು ಆಗುವದಿಲ್ಲವೆಂದು ಹೇಳಿದರು. ಮಂತ್ರಿ ಹಾಗೆಯೇ ಮಾಡಬೇಕೆಂದು ಕೊಂಡ ಮತ್ತು ಹಾಗೆ ಅಪ್ಪಣೆಯನ್ನು ಕೊಟ್ಟ. ಎಲ್ಲ ರಸ್ತೆಗಳನ್ನು ಗೂಡಿಸಲಾಯಿತು.

ಅರಸ ಅಡ್ಡಾಡಲು ಹೋದಾಗ ರಸ್ತೆಗಳು ಸ್ವಚ್ಛವಾಗಿದ್ದವು. ಆದರೆ ಧೂಳು ಕಡಿಮೆಯಾಗಿರಲಿಲ್ಲ. ಅದು ಕಾಲಿಗೆ ಮತ್ತೆ ಮೆತ್ತಿಕೊಂಡಿತು. ಅವನಿಗೆ ಒಮ್ಮೆಲೇ ಸಿಟ್ಟುಬಂತು. ಮಂತ್ರಿಯನ್ನು ಕರಿಸಿ ಬೇರೆ ಉಪಾಯ ಮಾಡಬೇಕೆಂದ.

ಮಂತ್ರಿಗೆ ಮತ್ತೆ ಯೋಚನೆಗಿಟ್ಟುಕೊಂಡಿತು. ಇನ್ನೊಬ್ಬ ಅಧಿಕಾರಿ ಹೇಳಿದ. ರಸ್ತೆಗೆಲ್ಲ ನೀರು ಹಾಕಿದರೆ ಸರಿಯೆಂದು. ಮಂತ್ರಿ ಹಾಗೇ ಆಗಲಿ ಎಂದ. ಎಲ್ಲ ಬಾವಿ, ಕೆರೆ, ನದಿಯ ನೀರನ್ನು ತಂದು ರಸ್ತೆಗೆ ಹುಯ್ದರು. ಧೂಳು ಏಳುವದಿಲ್ಲವೆಂದು ರಾಜನಿಗೆ ಹೇಳಿದರು.



ರಾಜ ಸರಿಯೆಂದು ಅಡ್ಡಾಡಲು ಹೊರಟ. ಆದರೆ ರಸ್ತೆಯಲ್ಲಿ ಕೆಸರಾಗಿತ್ತು. ಆ ಕೆಸರು ಅರಸನ ಕಾಲಿಗೆ ಮೆತ್ತಿಕೊಂಡಿತು. ಹೆಜ್ಜೆ ಕಿತ್ತಿ ಇಡುವದೇ ಕಠಿಣವಾಯಿತು. ಅವನಿಗೆ ಸಿಟ್ಟು ಬಂತು. ಮಂತ್ರಿಗೆ ಹೀಗೇಕೆಂದು ಕೇಳಿದ. ಮಂತ್ರಿ ಮತ್ತೊಂದು ಉಪಾಯ ಮಾಡುವದಾಗಿ ತಿಳಿಸಿದ.



ರಾಜನಿಗೆ ತಿಳಿಸಿದ್ದೇನೋ ಸರಿ. ಆದರೆ ಯಾವ ಉಪಾಯ ಮಾಡಬೇಕು. ಯಾರೋ ಒಬ್ಬರು ಇಡೀ ರಸ್ತೆಗೆಲ್ಲ ಚರ್ಮ ಹಾಕಬೇಕೆಂದು ಹೇಳಿದರು. ಆದರೆ ಅದು ಹೇಗೆ ಸಾಧ್ಯ? ಇದು ಫಲಿಸಲಾರದ ಸೂಚನೆಯಾಯಿತು. ಮಂತ್ರಿಗೆ ಬಗೆ ಹರಿಯಲಿಲ್ಲ.

ರಸ್ತೆಗೆಲ್ಲ ಚರ್ಮ ಹಾಸುವ ವಿಚಾರ ಕೇಳಿದ ಒಬ್ಬ ಸಮಗಾರನಿಗೆ ಹೀಗೆ ಹೊಳೆಯಿತು. ಇಡೀ ರಸ್ತೆಗೇಕೆ ಚರ್ಮ ಹಾಕಬೇಕು. ಕಾಲಿಗಷ್ಟೇ ಹಾಕಿದರೆ ಸಾಲದೇ ಎಂದುಕೊಂಡ.




ಅವನು ಕಾಲಿಗೆ ಚರ್ಮ ಹಾಕುವಂತೆ ಪಾದರಕ್ಷೆಗಳನ್ನು ತಯಾರಿಸಿಕೊಂಡು ಬಂದ. ಮಂತ್ರಿ ರಾಜನ ಬಳಿಗೆ ಅವನನ್ನು ಕರೆದೊಯ್ದ. ಸಮಗಾರ ಭಕ್ತಿಯಿಂದ ಪಾದರಕ್ಷೆಗಳನ್ನು ರಾಜನಿಗೆ ಅರ್ಪಿಸಿದ. ರಾಜ ಅವನ್ನು ಹಾಕಿಕೊಂಡು ಅಡ್ಡಾಡಿದ.



ಅವನ್ನು ಹಾಕಿಕೊಂಡು ಅಡ್ಡಾಡುವಾಗ ಮೊದಲಿನಂತೆ ಧೂಳು ಏಳುತ್ತಿರಲಿಲ್ಲ. ಇದರಿಂದ ಬಹಳ ಆನಂದವೆನಿಸತೊಡಗಿತು. ಕೆಲಸ ಮಾಡಲು ಉತ್ಸಾಹ ಬಂದಿತು. ಮುಂಚಿನಂತೆ ಧೂಳು ಏಳುವದು, ಕಾಲಿಗೆ ರೊಜ್ಜು ಅಂಟಿಕೊಳ್ಳುವದು ತಪ್ಪಿತು. ಸರಾಗವಾಗಿ ತಿರುಗಾಡಲು ಅವನಿಗೆ ಸಾಧ್ಯವಾಯಿತು.

—ರವೀಂದ್ರನಾಥ ಠಾಕೂರರ
ಕಥೆಯ ಆಧಾರದಿಂದ

★



ದ್ಯಾಮವ್ವ

[ಮಾನವೀಕರಣದ ಒಂದು ದೃಷ್ಟಾಂತ]

★

ಲೇ : ಡಾ. ವರದರಾಜ ಉಮರ್ಜಿ, ಎಂ. ಏ., ಪಿ. ಎಚ್ ಡಿ.
ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.

★

ಊರಿಗೊಬ್ಬ ಹನುಮಪ್ಪನಿರುವಂತೆ ಗ್ರಾಮದೇವತೆಯೂ ಇರುವಳು, ದ್ಯಾಮವ್ವ ಕರ್ನಾಟಕದಲ್ಲಿ ಮಾತ್ರ ಕಂಡು ಬರುವ ಗ್ರಾಮದೇವತೆ— ಗ್ರಾಮನಿವಾಸಿಗಳ ಸಂರಕ್ಷಕಳು. ಅವಳನ್ನು ಹೀನ ಜಾತಿಯವರ ದೇವತೆಯೆಂದು ಸಾಮಾನ್ಯವಾಗಿ ಬಗೆಯಲಾಗುತ್ತಿದೆ. ಹೀಗಾಗಲು ಯಾವ ಕಾರಣ ? ಎಂಬುದನ್ನು ಲೇಖಕರು ಇಲ್ಲಿ ನಿರೂಪಿಸಿರುವರು.

★

ಗ್ರಾಮದೇವತೆಯು ಅಖಿಲ ಹಿಂದುಸ್ಥಾನದಲ್ಲಿ ಕಂಡುಬರುವ ಒಂದು ಸಾಮಾನ್ಯ ಸಂಗತಿಯಾಗಿರುವದು. * ಪ್ರತಿಯೊಂದು ಗ್ರಾಮದಲ್ಲಿ ಪಾರ್ವತಿಯಾಗಲಿ, ದುರ್ಗೆಯಾಗಲಿ, ಚಂಡಿಯಾಗಲಿ, ಕಾಳಿಯಾಗಲಿ, ಒಂದು ದೇವತೆ ಇದ್ದೇ ಇದೆ. ಕೆಲವು ಗ್ರಾಮದೇವತೆಗಳ ವ್ಯಾಪ್ತಿಯು ಅಖಿಲ ಹಿಂದುಸ್ತಾನವಾಗಿರಬಹುದು. ಇನ್ನು ಕೆಲವುಗಳ ವ್ಯಾಪ್ತಿಯು ದ್ವೀಪಕಲ್ಪಕ್ಕೂ ಪರಿಮಿತವಾಗಿರಬಹುದು; ಮತ್ತೆ ಕೆಲವು ಪ್ರಾದೇಶಿಕವಾಗಿರಬಹುದು.

ದ್ಯಾಮವ್ವ ಕರ್ನಾಟಕದ ಪ್ರಾದೇಶಿಕ ಗ್ರಾಮದೇವತೆ ಎಂದು ಹೇಳಿದರೆ ತಪ್ಪಾಗದು. ಭಾರತದ ಉಳಿದ ಪ್ರದೇಶಗಳಲ್ಲಿ ದ್ಯಾಮವ್ವ ಎಂಬ ಗ್ರಾಮದೇವತೆಯ ಹೆಸರು ಕೇಳಬರುವದಿಲ್ಲ. ದ್ಯಾಮವ್ವ ಕರ್ನಾಟಕ ಪ್ರದೇಶದ ಪ್ರಾದೇಶಿಕ ಗ್ರಾಮದೇವತೆಯಲ್ಲದೆ ಪ್ರತಿಯೊಂದು ಗ್ರಾಮದ ಸ್ಥಳೀಕ ಗ್ರಾಮದೇವತೆಯೂ ಅಹುದು.-ದ್ಯಾಮವ್ವ ಹನುಮಪ್ಪನಿದ್ದಂತೆ. ಊರು ಸುಟ್ಟರೂ ಹನುಮಪ್ಪ ಹೊರಗೆ ಅಂದರೆ, ದ್ಯಾಮವ್ವ ಒಳಗೆ. ಅವಳು ಗ್ರಾಮವಾಸಿಗಳ ಹಿತರಕ್ಷಕಳು. ಹನುಮಂತನು ಲಂಕಾಪಟ್ಟಣವನ್ನೇ ಸುಟ್ಟದ್ದರೆ ದ್ಯಾಮವ್ವ ತನ್ನ ಮನೆಯನ್ನೇ ಸುಟ್ಟಳು. ಹನುಮಂತನು ತನ್ನ ಶತ್ರುಗಳನ್ನು ನಾಶಮಾಡಿದರೆ ದ್ಯಾಮವ್ವ ತನ್ನ ಗಂಡ, ಮಕ್ಕಳನ್ನು ಕೊಂದಳು. ಇದೊಂದು ಸಾಮಾಜಿಕ ದೃಷ್ಟಿಯಿಂದ ವಿಕ್ಷಿಪ್ತವಾದ ಘಟನೆಯಾಗಿರುವದು. ಈ ಘಟನೆಯನ್ನು ವಿವರಿಸುವ - ಕರ್ನಾಟಕದಲ್ಲಿ ಮಾತ್ರ ಪ್ರಚಲಿತವಾಗಿರುವ – ಪರಂಪರಾಗತವಾಗಿ ಬಂದ ಕಥೆ ಈ ರೀತಿಯಾಗಿರುವದು.

ದ್ಯಾಮವ್ವನ ಕಥೆ (Episode)

ದ್ಯಾಮವ್ವ ವೇದಶಾಸ್ತ್ರಪಾರಂಗತ ಹಾಗೂ ಶುಚಿರ್ಭೂತ ಬ್ರಾಹ್ಮಣನ ಮಗಳು. ಹೀನ ಜಾತಿಯ ಹೊಲೆಯನೊಬ್ಬನು, ಅವಳನ್ನು ಮೋಸ ಮಾಡಿ ಲಗ್ನವಾದನು. ಮಕ್ಕಳು ಮರಿಗಳಾದವು. ಕೆಲವು ದಿನಗಳ ನಂತರ ದ್ಯಾಮವ್ವನಿಗೆ ನಿಜಸ್ಥಿತಿಯು ಅರಿವಾಯಿತು. ಹೊಲೆಯನ ಗುಟ್ಟು ರಟ್ಟಾಯಿತು. ದ್ಯಾಮವ್ವನು ಕುಪಿತಳಾದಳು. ಅತ್ತೆ ಮಕ್ಕಳಿಂದ ಕೂಡಿದ ಮನೆಯನ್ನು ಸುಟ್ಟಳು. ಕುಪಿತಳಾದ ದ್ಯಾಮವ್ವನಿಂದ ಪಾರಾಗಲು ಹೊಲೆಯನು ಕೋಣನ ರೂಪವನ್ನು ತಾಳಿ ಓಡಹತ್ತಿದನು. ಕೋಣನ ಕೂಡ ಹೋರಾಟ ಜರುಗಿತು. ದ್ಯಾಮವ್ವ ಕೋಣ-ಗಂಡ-ನನ್ನು ಕೊಂದು ಸೇಡುತೀರಿಸಿಕೊಂಡಳು. ದ್ಯಾಮವ್ವನ ಜಾತ್ರೆಯಲ್ಲಿಯೂ ಈ ಕಥೆಯ ಹಿನ್ನೆಲೆಯನ್ನು ಸೂಚಿಸುವ ಅವಶೇಷಗಳನ್ನು ಕಾಣಬಹುದು. ಗೊಬ್ಬರ ಮೈಲಿಬೇನೆಗಳ ಪ್ರತಿಬಂಧಕಾರ್ಥವಾಗಿ ಹಾಗು ಗ್ರಾಮವು ಸುರಕ್ಷಿತವಾಗಿರಬೇಕೆಂಬ ದೃಷ್ಟಿಯಿಂದ ದ್ಯಾಮವ್ವನ ಜಾತ್ರೆಯನ್ನು ಮಾಡುವರು. ದ್ಯಾಮವ್ವನನ್ನು ಸೀಮಾಕಟ್ಟಿಗೆ ಒಯ್ಯುವಾಗ ರಾಣಿಗ (ದ್ಯಾಮವ್ವನ ಗಂಡ) ನು ಅವಳನ್ನು ಬಾಯಿಗೆ ಬಂದಂತೆ ಬಯ್ಯುವನು. ಪೋತರಾಜನು ಕುರಿ (ದ್ಯಾಮವ್ವನ ಮಕ್ಕಳ)ಗಳ ಕುತ್ತಿಗೆಗಳನ್ನು ಹಲ್ಲಿನಿಂದ ಕಡಿದು ರಕ್ತಹೀರುವನು. ಕೋಣ (ಗಂಡ)ನನ್ನು ಮೆರೆಯಿಸಿ ಸುಣ್ಣದ ನೀರು ಕುಡಿಸಿ ಓಡಾಡಿಸಿತಂದು ದ್ಯಾಮವ್ವನ ಮುಂದೆ ಕಡಿಯುವರು. ಕುರಿ ಹಾಗೂ ಕೋಣದ ಮಾಂಸ ಹಾಗೂ ಮದ್ಯವನ್ನು ದ್ಯಾಮವ್ವನಿಗೆ ನೈವೇದ್ಯ ಸಲ್ಲಿಸುವರು. ಜಾತ್ರೆಯಲ್ಲಿ ದುರ್ಗವ್ವನಿಗೂ ಒಂದು ಸ್ಥಾನವಿದೆ.

---

* Village Deities are an all India phenomenon (Religion and Society among Kurjas page 179)

ದುರಗವ್ವನನ್ನು ವಾಹನದ ಮೇಲೆ ಕೂಡ್ರಿಸಿ ದ್ಯಾಮವ್ವನೊಡನೆ ಸೀಮಾಕಟ್ಟಿಗೆ ಒಯ್ಯುವರು. ಈ ಕಥೆಯುಲ್ಲಿ ಗಮನಾರ್ಹ ಸಂದರ್ಭಗಳು (೧) ಹೊಲೆಯನ ಕೂಡ ವಿವಾಹ (೨) ಕೋಣ (ಗಂಡ)ನ ಕೂಡ ಹೋರಾಟ ಹಾಗೂ ಅವನ ವಧ (೩) ಕುರಿ ಕೋಣ ಮಾಂಸದ ನೈವೇದ್ಯ (೪) ವೈಧವ್ಯಪ್ರಾಪ್ತಿ (೫) ದ್ಯಾಮವ್ವ ದುರಗವ್ವ ಸಂಬಂಧ. ಈ ಸಂದರ್ಭಗಳಲ್ಲಿ ಒಂದೊಂದು ಒಂದು ಕೂಟಪ್ರಶ್ನೆಯಾಗಿದೆ. ಅವುಗಳನ್ನು ಒಂದೊಂದಾಗಿ ಬಿಡಿಸೋಣ.

ದ್ಯಾಮವ್ವನ ಕಥೆಯನ್ನು ಹೋಲುವ ಸಂದರ್ಭಗಳು

ದ್ಯಾಮವ್ವನ ಈ ಕತೆಯನ್ನು ಹೋಲುವ ಅನೇಕ ಸಂದರ್ಭಗಳು ಪುರಾಣಗಳಲ್ಲಿರುವವು. ಕೋಣನ ಕೂಡ ಹೋರಾಟ ಹಾಗೂ ಅದರ ವಧ ಈ ಅಂಶವನ್ನು ದುರ್ಗೆಯ (ಮಹಿಷಾಸುರ ಮರ್ದಿನಿ) ತರಜು ಉಪಾಖ್ಯಾನಗಳಲ್ಲಿ (ಸ್ಕಂದ ಪುರಾಣ) ಕಾಣಬಹುದು. ಮಹಿಷಾಸುರ ಮರ್ದಿನಿಯಂತೂ ಸ್ವತಃ ಸ್ಪಷ್ಟಾರ್ಥವುಳ್ಳದ್ದಾಗಿರುವದು, ವಿವರಣೆಯ ಅವಶ್ಯಕತೆಯಿರುವದಿಲ್ಲ. ದುರ್ಗಾಮಾಹಾತ್ಮ್ಯದಲ್ಲಿಯ ಶಂಬಾಸುರ (ದುರ್ಗಮಾಸುರ)ನೂ ತುರಜಾ ಮಾಹಾತ್ಮ್ಯದಲ್ಲಿ ಕುಕುರನೂ ಮಹಿಷರೂಪವನ್ನು ತಾಳುವರು. ಮತ್ತು ದೇವಿಯು ಅವರನ್ನು ವಧಿಸುವಳು. ತುರಜಾ ಮಾಹಾತ್ಮ್ಯದಲ್ಲಿ (ಸ್ಕಂದ ಪುರಾಣ ಅಧ್ಯಾಯ ೨.) ಬರುವ ಒಂದು ಶ್ಲೋಕದ ಕನ್ನಡ ಅನುವಾದವನ್ನು ಗಮನಿಸಿರಿ.

ನೋಡಹೋದಳು ಮತ್ತಲೆ । ಗಾಢನೆ ಮಹಿಷವಾಗಿ ಬಂದಾ ಬರಿಯಲ್ಲೆ । . . .

ಶೃಂಗಗಳಿಂದಲೇ ಹೊಡೆವ ಶೃಂಗಗಳ ಹಿಡಿದಳು. ದೈತ್ಯ ಬಂದು ಬಿಡುವ. ನೋಡನೋಡುತ್ತಲೇ ಕುಕುರನೆಂಬ ದೈತ್ಯನು ತುರಜಾದೇವಿಯ ಬಳಿಯಲ್ಲಿ ಕೋಣರೂಪ ತಾಳಿ ಬಂದು ನಿಂತನು. ತುರಜಾ ದೇವಿಯು ಅವನ ಕೂಡ ಹೋರಾಡಿ ಅವನನ್ನು ವಧಿಸಿದಳು.

ಚೈತನ್ಯೀಕರಣ.

ಕೋಣ ದೇವತೆಗಳ ಹೋರಾಟದ ಅರ್ಥವೇನು? ನೋಡ, ನದಿ, ಪರ್ವತ, ಗಿಡಮರಗಳನ್ನು ಪೂಜಿಸುವದು ಹಿಂದುಸ್ತಾನದಲ್ಲಿ ಸಂಪ್ರದಾಯವಾಗಿ ಬಂದಿದೆ. ನಿಸರ್ಗ ಅನೇಕ ಶಕ್ತಿ (ಅಥವಾ) ಅಂಶಗಳಿಂದ ನೋಡ ನದಿ ಪರ್ವತ ಗಿಡಮರಗಳ ವಿಷಯದಲ್ಲಿ ಚೈತನ್ಯೀಕರಣ ಪಡೆದುದು ಕಾಣುವದು. ಉಷಃಕಾಲವನ್ನು ಸ್ತ್ರೀಯೆಂದೂ ಸೂರ್ಯನು ಪುರುಷನೆಂದೂ ಸಾಮಾನ್ಯ ನಿಸರ್ಗಘಟನೆಯನ್ನು –ಚೈತನ್ಯೀಕರಿಸಿ–ಋಗ್ವೇದದ ಅನೇಕ ಸೂತ್ರಗಳಲ್ಲಿ ವರ್ಣಿಸಿದ್ದುಂಟು. ರಾಹು ಕೇತುಗಳೆಂಬ ರಾಕ್ಷಸರು ಸೂರ್ಯಚಂದ್ರರನ್ನು ಗ್ರಹಿಸುತ್ತಾರೆಂದು ನಿಸರ್ಗಘಟನೆಗಳಾದ ಗ್ರಹಣಗಳನ್ನು ಚೈತನ್ಯೀಕರಿಸಿ ವಿವರಿಸಿದ್ದು ಉಂಟು. ಕೋಣ ದೇವತೆಗಳ ಹೋರಾಟವು ಕೂಡ ಇಂತಹ ಚೈತನ್ಯೀಕರಣದ ಉದಾಹರಣೆಯಾಗಿರಬಹುದಲ್ಲವೆ? ತುಳಜಾ ಮಾಹಾತ್ಮ್ಯಯಲ್ಲಿ (ಸ್ಕಂದಪುರಾಣ ಅಧ್ಯಾಯ ೩) ತುರಜಾ ದೇವಿಯು ಹಾಗೂ ಮಹಿಷರೂಪ ತಾಳಿದ ಕುಕುರ ರಾಕ್ಷಸನ ಹೋರಾಟ ಇಂತು ವರ್ಣಿತವಾಗಿದೆ.

ಭಕ್ತರಭಿಮಾನಿ ಶಿವಶಕ್ತಿಯೆಂಬುವ ಸೂರ್ಯ ।
ದೈತ್ಯವರನೆಂಬೊ ಕತ್ತಲಿಯ ಸಂಹರಿಸಿ ।
ಮುತ್ತುದಿತನಾಗಿರಲು ಇತ್ತ ಆ ಅನುಭೂತಿಯಾಗುತ್ತ ಮುಖಕಮಲ ಅರಳಿತಾಗ ।

ಇಲ್ಲಿ ರೂಪಕದಿಂದ ಹೋರಾಟ ವರ್ಣಿತವಾಗಿದೆ. ಶಿವಶಕ್ತಿ (ತುರಜಾದೇವಿ) ಸೂರ್ಯ : ದೈತ್ಯವರ್ಯ ಕುಕುರ : ಕತ್ತಲೆ : ಇವುಗಳ ನಡುವಿನ ಅನಾದಿಕಾಲದಿಂದ ನಡೆದುಬಂದ ಹೋರಾಟದ ನಿಸರ್ಗದ ಘಟನೆ (ವ್ಯಾಪಾರದ) ಯನ್ನು ಚೈತನ್ಯೀಕರಿಸಿದೆಯಲ್ಲವೆ? ಮಹಿಷಾಸುರನ ಕೂಡ ಹೋರಾಡಿದ ದುರ್ಗೆಗೂ ಕೋಣ (ಗಂಡ)ನ ಕೂಡ ಹೋರಾಡಿದ ದ್ಯಾಮವ್ವನಿಗೂ ಇದು ಅನ್ವಯಿಸುವದಿಲ್ಲವೆ? ದುರ್ಗೆಯು Moon-goddess (ಚಂದ್ರ) ಎಂದು ಕೆಲವರ ಮತ.

ಚಂದಲಾ ಪರಮೇಶ್ವರಿ ಇದನ್ನು ಸಮರ್ಥಿಸುತ್ತದೆ. ದುರ್ಗೆಯು ಸೂರ್ಯಛೆಯಾಗಲಿ (Sun light) ಚಂದ್ರಛೆಯಾಗಲಿ (Moon light) ಏನೇ ಆಗಲಿ ಆ ಛೇ (ಪ್ರಕಾಶ - light)ಯೆಂಬುದು ಸ್ಪಷ್ಟ. ಬನಶಂಕರಿಯನ್ನು ಸ್ಕಂದ ಪುರಾಣ ಬನ ಶಂಕರಿ ಮಾಹಾತ್ಮ್ಯೆ ಅಧ್ಯಾಯ ೪ ಶ್ಲೋಕ ೧೭ ರಲ್ಲಿ 'ಛಾಯೆ' ಯೆಂದು ಮುಂತಾಗಿ ವರ್ಣಿಸಿದ್ದಾಗಿದೆ. ದ್ಯಾಮವ್ವ ಶಬ್ದದಲ್ಲಿ ದ್ಯಾಮ ಪದವೂ ಪ್ರಕಾಶಾರ್ಥವಾಗಿದೆ. ದ್ಯಾವುಪಿತೃ, ದ್ಯೌಪಿತೃ, (ಗ್ರೀಕ ಜುಪಿಟರ) — ಹೊಳೆಯುವ ತಂದೆ (Shining Father) ಅದರ ಸ್ತ್ರೀಲಿಂಗ ರೂಪ ದ್ಯಾವು ಮಾತ್ರ. ಕನ್ನಡ ದ್ಯಾಮವ್ವ (Shining Mother) ದ್ಯಾಮ - ಜ್ಯೋತ್ - ಹೊಳೆಯುವ ಆಕಾಶ - ನಿಸರ್ಗದ ಒಂದು ಭಾಗವನ್ನು ಚೈತನ್ಯೀಕರಿಸಿ ದ್ಯಾವುಪಿತೃ (ಗ್ರೀಕ ಜ್ಯುಪಿಟರ) ದ್ಯಾವು ಮಾತೃ (ಕನ್ನಡ ದ್ಯಾಮವ್ವ) ಎಂದು ವರ್ಣಿಸಿರಬಹುದಷ್ಟೇ ? ದ್ಯಾಮವ್ವನು ಪ್ರಕಾಶವಾದರೆ ದ್ಯಾಮವ್ವನ ಕೋಣ (ಗಂಡ) ಕತ್ತಲೆಯಾಗಿರಲು ಸಾಕು. ದ್ಯಾಮವ್ವನ ಕತೆಯ ಹಿನ್ನೆಲೆ ಪ್ರಕಾಶ-ಕತ್ತಲೆಗಳ ಹೋರಾಟ ಹಾಗೂ ಕತ್ತಲೆಯ ಮೇಲೆ ಪ್ರಕಾಶದ ಅಂತಿಮ ವಿಜಯ ಎಂದು ಸ್ಪಷ್ಟವಾಗುವದು.

ಮಾನವೀಕರಣ (ಸಮಾಜೀಕರಣ)

ದ್ಯಾಮವ್ವನಿಗೆ ಕುರಿ ಕೋಣಗಳ ನೈವೇದ್ಯ ವೇಕೆ? ದ್ಯಾಮವ್ವನ ಕತೆಯು ದುರ್ಗೆಯ ಕಥೆಯಂತೆ ಸರಳವಾದ ಚೈತನ್ಯೀಕರಣ ಮಾತ್ರ ವಲ್ಲ. ಅದರಲ್ಲಿ ಪದರಿನ ಮೇಲೆ ಪದರುಗಳಿವೆ. ಪ್ರಕಾಶ-ಕತ್ತಲೆಗಳ ನಿಸರ್ಗದ ಹೋರಾಟದ ಚೈತನ್ಯೀಕರಣವು ಒಂದು ಹೆಜ್ಜೆ ಮುಂದೆ ಸಾಗಿ ಪರಿವರ್ತನ ಹೊಂದಿ ಒಂದು ಸಂಕೀರ್ಣ – ತೊಡಕಿನ - ಘಟನೆಯಾಗಿ ನಿಂತಿದೆ. ಅದರಲ್ಲಿ ಮಾನವೀಕರಣದ ಅಂಶಗಳನ್ನು, ಸಮಾಜೀಕರಣದ ಅಂಶಗಳನ್ನು ಕಾಣಬಹುದು ದೇವತೆಗಳು ಮಾನವನಿರ್ಮಾಪಕರಲ್ಲಿ, ಮಾನವನೇ ದೇವತೆಗಳನ್ನು ನಿರ್ಮಿಸುವನು. ಇದು ವಿರೋಧಾಭಾಸವಾಗಿ ಕಂಡರೂ ಅದರಲ್ಲಿ ಸತ್ಯವು ಒಳಗೊಂಡಿದೆ. ತನ್ನ ಸಂಸ್ಕೃತಿ (ಆಚಾರ ವಿಚಾರ ಉಚ್ಚಾರಗಳು) ಗೆ ಅನುಕೂಲವಾಗುವಂತೆ ದೇವರನ್ನು ನಿರ್ಮಿಸುವನು, ಮಾರ್ಪಡಿಸುವನು, ಸಮಾಜೀಕರಿಸುವನು. ದ್ಯಾಮವ್ವನು ಮದ್ಯಮಾಂಸ ಸೇವಿಸುವ ಹೀನ ಜಾತಿಯ ದೇವತೆಯಾಗಿ ಪರಿವರ್ತಿಸಲ್ಪಟ್ಟಿದ್ದಾಳೆ. ಮದ್ಯಮಾಂಸಗಳು - ಅಭಕ್ಷ್ಯ ಅಪೇಯಗಳು ಅವಳ ನೈವೇದ್ಯಗಳಾಗಿವೆ. ಉಚ್ಚ ಜಾತಿಯ ದೇವತೆಯು ನೀಚಜಾತಿಗೆ ಹೇಗೆ ಇಳಿದಳು ? ಕಾರಣಗಳೇನು ? ಇದಕ್ಕೆ ಸಮರ್ಪಕವಾದ ಉತ್ತರ ಅವಶ್ಯ. ಅದನ್ನು ಜಾತಿಪದ್ಧತಿಯ ನುಡಿಗಟ್ಟಿನಲ್ಲಿ ಕೆಳಗಿನಂತೆ ವಿವರಿಸಬಹುದು. ಅದನ್ನು ಸಮರ್ಥಿಸಲು ಒಂದು ಕತೆಯನ್ನು ಕಲ್ಪಿಸಬೇಕಾಯಿತು.§ ಹೀನ ಜಾತಿಯ ಹೊಲೆಯನೊಬ್ಬನು ಬ್ರಾಹ್ಮಣ ವೇಷ ತಾಳಿ ಮೋಸಮಾಡಿ ದ್ಯಾಮವ್ವನನ್ನು ಲಗ್ನವಾದನು. ಸೇಡು ತೀರಿಸಿಕೊಳ್ಳುವದರ ಸಲುವಾಗಿ ಅವಳು ತನ್ನ ಕೋಣ (ಗಂಡ) ನನ್ನು ತಾನೇ ಸ್ವತಃ ಕೊಲ್ಲಬೇಕಾಯಿತು. ಅದರ ಮಾಂಸವನ್ನು ತಿನ್ನಬೇಕಾಯಿತು ; ರಕ್ತವನ್ನು ಕುಡಿಯಬೇಕಾಯಿತು. ಹೀನ ಜಾತಿಗೆ ಇಳಿಯಬೇಕಾಯಿತು. ಅದ್ದರಿಂದ ಭರ್ತ್ಸನೆಯನ್ನು ಪಡೆಯಬೇಕಾಯಿತು. ದ್ಯಾಮವ್ವನ ಜಾತ್ರೆಯಲ್ಲಿ 'ರಾಣಿಗ' ನು ದ್ಯಾಮವ್ವನನ್ನು ಬಾಯಿಗೆ ಬಂದಂತೆ ಬಯ್ಯುವನೆಂಬ ಸಂದರ್ಭವನ್ನು ಇಲ್ಲಿ ಗಮನಿಸಬಹುದು. ರಾಹು–ಕೇತು ಕಥೆಯಲ್ಲಿ ಇದಕ್ಕೆ ಸಮನಾದ ಒಂದು ಅಂಶವನ್ನು ಕಾಣಬಹುದು. ಸೂರ್ಯಚಂದ್ರರು ಚಾಡಿ ಹೇಳಿದರು. ಹೀಗಾಗಿ ಅವರು ಸೇಡು ತೀರಿಸಿಕೊಳ್ಳುವದಕ್ಕಾಗಿ ಸೂರ್ಯ–ಚಂದ್ರರನ್ನು ಗ್ರಹಿಸುವರು. ಅಮೃತ ಮಂಥನದ ಕಥೆಯಲ್ಲಿ ಒಂದು ಪ್ರಸಂಗವನ್ನು ಕಲ್ಪಿಸಬೇಕಾಯಿತು; ದ್ಯಾಮವ್ವನ ಕಥೆಯಲ್ಲಿ ಇನ್ನೂ ಒಂದೆರಡು ಮಾನವೀಕರಣದ ಹಾಗೂ ಸಮಾಜೀಕರಣದ ಅಂಶಗಳು ಒಡಮೂಡಿರುವವು. ಪತಿಯ ವಧ ಮಾಡಿದ್ದರಿಂದ ವೈಧವ್ಯ ಪ್ರಾಪ್ತಿ, ಅಲ್ಲದೆ ಅವಳಿಗೆ ಅಕ್ಕ–ತಂಗೆಯರೂ ಇರುವರು. ದುರ್ಗೆ, ದುರಗವ್ವ ಒಬ್ಬಳು. ಈ ಸಂದರ್ಭದಲ್ಲಿ ದ್ಯಾಮವ್ವನ ಜಾತ್ರೆಯಲ್ಲಿ ದುರ್ಗವ್ವನನ್ನು ವಾಹನದಲ್ಲಿ ಕೂಡಿಸಿಕೊಂಡು ಹೋಗುವರೆಂಬ ಅಂಶವು ಅರ್ಥಪೂರ್ಣವಾಗುವದು.

ಅ. ದ್ಯಾಮವ್ವನು ಪಾರ್ವತಿಯ ರೂಪ

ಮೂಲಭೂತ ವಿಷಯವನ್ನು ಈಗ ಗಮನಿಸಬೇಕಾಗಿದೆ. ಮೇಲಿನ ವಿವೇಚನೆಗೆ ದ್ಯಾಮವ್ವನು ಯಾರು ? ಪಾರ್ವತಿಯೇ ಅಥವಾ ಪಾರ್ವತಿಯ ಒಂದು ಅವತಾರವೇ ? ಲಕ್ಷ್ಮಿಯೇ ಅಥವಾ ಲಕ್ಷ್ಮಿಯ ಅವತಾರವೇ ?

ಈ ಪ್ರಶ್ನೆಗಳಿಗೆ ಉತ್ತರಿಸುವದು ಕ್ರಮಪ್ರಾಪ್ತ. ಮೇಲಿನ ವಿಧಾನಗಳೆಲ್ಲ ದ್ಯಾಮವ್ವನು ಪಾರ್ವತಿಯ ಒಂದು ರೂಪವೆಂಬ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡರೆ ದ್ಯಾಮವ್ವನು ಪಾರ್ವತಿಯ ಅವತಾರ ಎಂಬುದನ್ನು ಕೆಳಗಿನ ಅಂಶಗಳು ಸಿದ್ಧಪಡಿಸುವವು.

ನಿರುಕ್ತಿಯ ಅನುಕೂಲ್ಯ

'ದ್ಯಾಮಿ' ('ದ್ಯಾಮವ್ವ') ಸಂಸ್ಕೃತ 'ದೇವಿ' ಶಬ್ದದ ತದ್ಭವ, 'ದೇವಿ' ಶಬ್ದದ ಮುಖಾಂತರ ಸಾಮಾನ್ಯವಾಗಿ 'ದೇವ'ವೆಂದರೆ ಶಿವ, 'ದೇವಿ' ಯೆಂದರೆ ಪಾರ್ವತಿ. ಉದಾಹರಣ ದೇವಿಪುರಾಣ. ಅದ್ದರಿಂದ ದ್ಯಾಮವ್ವನು ಪಾರ್ವತಿಯ ಒಂದು ರೂಪ.

ಬ. ಸಂಪ್ರದಾಯದ ಆಧಾರ

ದುರ್ಗಾ, ಮಾರಿ, ದ್ಯಾಮಿ, ಅಕ್ಕತಂಗಿಯರು ಎಂಬುದು ಸಾಮಾನ್ಯ ಸಾಂಪ್ರದಾಯಿಕ ಕಲ್ಪನೆಯಾಗಿದೆ. ದುರ್ಗಾ, ಮಾರಿ, ಇವರು ಕಾಲರು ಅಧಿದೇವತೆಯಾದರೆ ದ್ಯಾಮಿ (ದೇವಿ) ಎಂಬುದು ಮೈಲಿ ಬೇನೆಯ ಕೂಡ ತಾದಾತ್ಮ್ಯ ಹೊಂದಿದೆ. ದುರ್ಗಾಮಾರಿ ಇವರು ಪಾರ್ವತಿಯ ಅವತಾರ.

ಕ. ಮಹಿಷ ವಧ-ಸಾಮಾನ್ಯ ವಿಷಯ

ಮಹಿಷವಧವು ದುರ್ಗಾ–ತುರಜಾ–ದ್ಯಾಮವ್ವ ಕಥೆಗಳಲ್ಲಿ ಸಾಮಾನ್ಯ ವಿಷಯ. ದುರ್ಗೆ-ಪಾರ್ವತಿಯ ಒಂದು ರೂಪ.

ಡ. ಯಲ್ಲವ್ವನ ಕೂಡ ಹೋಲಿಕೆ

ಯಲ್ಲವ್ವನಂತೆ (ರೇಣುಕೆಯಂತೆ) ದ್ಯಾಮವ್ವನಿಗೂ ವೈಧವ್ಯ * ಪ್ರಾಪ್ತಿ ಇದರಲ್ಲಿ ಸಾಮ್ಯವಿದೆ. ಯಲ್ಲವ್ವನು ಪಾರ್ವತಿಯ ಅವತಾರ ಹಾಗೂ ತುರುಜಾದೇವಿಯ ಪೂರ್ವಾವತಾರ.

ಇ. ದ್ಯಾಮವ್ವನಿಗೂ ಲಕ್ಷ್ಮಿಗೂ ವೈಷಮ್ಯ

ದ್ಯಾಮವ್ವನು ಲಕ್ಷ್ಮಿಯ ಅವತಾರವಾಗಲಾರಳು. ಕೆಲವು ಗ್ರಾಮಗಳಲ್ಲಿ ದ್ಯಾಮವ್ವನಲ್ಲದೆ ಲಕ್ಕವ್ವ (ಲಕ್ಷ್ಮಿ)ವೆಂಬ ಗ್ರಾಮದೇವತೆಯೂ ಇರುವಳು. ಅವಳು ಸಂಪತ್ತು ಹಾಗೂ ಅಭಿವೃದ್ಧಿಗಳ ದೇವತೆಯು. ಅವಳಿಗೂ, ಮೈಲಿಬೇನೆ-ಕಾಲರಾಗಳ ಅಧಿದೇವತೆಯಾದ ದ್ಯಾಮವ್ವನಿಗೂ ಸಂಬಂಧವಿರಲಾರದು.

ದ್ಯಾಮವ್ವ ದುರಗವ್ವ ಇವರು ಅಕ್ಕತಂಗಿಯರು ಮಾತ್ರ. ಅವರಿಬ್ಬರೂ ಒಂದೆ ದೇವತೆಗಳಲ್ಲ; ಅದ್ದರಿಂದಲೇ ಪ್ರತಿಯೊಂದು ಗ್ರಾಮದಲ್ಲಿ ಎರಡೂ ದೇವತೆಗಳನ್ನು ಬೇರೆ ಬೇರೆಯಾಗಿ ಕಾಣಬಹುದು. ದುರ್ಗವ್ವನು ಉಗ್ರದೇವತೆ, ದ್ಯಾಮವ್ವ ಅತ್ಯುಗ್ರ ದೇವತೆ. ದುರಗವ್ವ–ದುರ್ಗದೇವತೆ (Fort goddess) ಕೊತ್ತಲಪ್ಪ (ಹನುಮಂತ) ನಂತೆ ಕೊತ್ತಲದಲ್ಲಿಯೇ ಸಾಮಾನ್ಯವಾಗಿ ಕಂಡು ಬರುವಳು. ದುರ್ಗದಲ್ಲಿರುವ ಸೈನಿಕರನ್ನು ಸಂರಕ್ಷಿಸುವದರಿಂದ ಮುಂದೆ ಆಕೆಯು ರಾಜಕೀಯ ದೇವತೆ (Political deity) ಯಾಗಿ ಪರಿಣಮಿಸಿದಳು. ದ್ಯಾಮವ್ವನು ಗ್ರಾಮದ ಸಾಮಾನ್ಯ ಜನರ ಹಿತ ರಕ್ಷಿಸುವವಳಾಗಿ ಗ್ರಾಮದೇವತೆಯಾಗಿಯೇ ಅಂದರೆ ಸಾಮಾಜಿಕ ದೇವತೆಯಾಗಿಯೇ ಉಳಿದಿರುವಳು.

---

§ A Deity who accepts animal sacrifice and liquor has lost its original high caste. Some such explanation enabling a high caste deity to become a deity of low castes which consume meat and toddy.

* ನೇಮಿಸ್ಕೊಂದಿನವು ಉದ್ದಾಮ ಕೃತವೀರ್ಯಜನು ಕಾಮಧೇನುವ ಬಯಸಿ ಆ ಮುನಿಯ ಕೊಂದಿರಲು
(ಸ್ಕಂದಪುರಾಣ ತುರಜಾ ಮಹಾತ್ಮೆ)

[ಇದೀಗ ಈ ದ್ಯಾಮವ್ವ ದುರ್ಗವ್ವ ಮಾರೀ ಜಾತ್ರೆಗಳು ಅಹಿಂಸಾಮಯ ನಡೆಯಹತ್ತಿವೆ. ಕೋಣಕುರಿ ಕಡಿಯುವದನ್ನು ನಿಲ್ಲಿಸಲಾಗಿದೆ. ಕಾಯಿ-ಕರ್ಪುರ, ಕಡಬು-ಹೋಳಿಗೆ ಮೊದಲಾದ ನೈವೇದ್ಯ ಕೋಡಲಾಗುತ್ತದೆ. ಮದ್ಯ ನೇವಿದ್ಯವೂ ನಿಂತಿದೆ.

— ಸಂ.]

ಹುಬ್ಬಳ್ಳಿ - [ವಿಡಂಬನ ರೂಪಕ]

ಲೇ: ಡಾ. ಎಚ್. ಕೆ. ರಂಗನಾಥ, ಎಂ.ಎ., ಪಿಎಚ್‌ಡಿ.
ಆಕಾಶವಾಣಿ, ಧಾರವಾಡ.

★

ಹೂವಿನ + ಬಳ್ಳಿ = ಹುಬ್ಬಳ್ಳಿ ಎಂದು ಒಬ್ಬ ಸಂಶೋಧಕರು ಹೇಳಿದರೆ ಇನ್ನೊಬ್ಬರು ಹುಬ್ಬ + ಬಳ್ಳಿ = ಹುಬ್ಬಳ್ಳಿ ಎಂದರು. ಆದರೆ ಮೂರನೆಯವರು ಉಬ್ಬ + ಹಳ್ಳಿ = ಉಬ್ಬಳ್ಳಿ = ಹುಬ್ಬಳ್ಳಿ ಹೀಗೆ ಬಂದಿರಬೇಕೆಂದು ವಾದಿಸುತ್ತಾರೆ. ಹೀಗೆ ಹುಬ್ಬಳ್ಳಿಯ ಬಗ್ಗೆ ಸಂಶೋಧಕರಲ್ಲಿ ನಡೆದ ಕಚ್ಚಾಟದ ವಿಷಯವನ್ನು ಡಾ. ರಂಗನಾಥರು ಇಲ್ಲಿ ತೋರಿಸಿರುವರು.

ಮೊದಲನೆಯ ಸಂಶೋಧಕ: ಅದು ಹಾಗೆ ಆಗೋದಕ್ಕೆ ಶಕ್ಯವಿಲ್ಲಪ್ಪಾ-ನಾನು ಹೇಳಿದ್ದೇ ಸರಿ ಅನ್ನುತ್ತೆ-ಹೂವಿನ + ಬಳ್ಳಿ = ಹೂಬಳ್ಳಿ = ಹುಬ್ಬಳ್ಳಿ ! ಇನ್ನೇನು !

ಎರಡನೆಯವ: ಸರೀ ಹೋಯ್ತು. ಅಲ್ಲ ಕಣಯ್ಯಾ ನೀ ಹೇಳಿದ್ದನ್ನೇ ಒಪ್ಪಿಕೊಂಡು ಕೋಲೆಬಸವನ ಹಾಗೆ ತಲೆ ಅಲ್ಲಾಡಿಸಿಬಿಟ್ಟರೆ ನಾವು ಯಾಕೆ ಇಲ್ಲಿ ಬೋರ್ಡ್ ಬಡಿದುಕೊಂಡು ಕೂತ್ಕೋಬೇಕು 'ಸಂಶೋಧಕ' ಅಂತ.

ಮೂರನೆಯವ: ಅದೇ ನಾ ಹೇಳೋದು–

ಮೊದಲನೆಯವ: ಏನು ನೀ ಹೇಳೋದು ?

ಮೂರನೆಯವ: ಅಲ್ಲ-ನಾ ಹೇಳೋದು . .

ಎರಡನೆಯವ: ನಿನಗಿಂತ ಮೊದಲೂ ನಾ ಹೇಳೀನಯ್ಯಾ ! ಹುಬ್ಬಳ್ಳಿ ಅನ್ನೋ ಪದ ಹುಬ್ಬು + ಬಳ್ಳಿ = ಹುಬ್ಬಳ್ಳಿ ಎಂದೇ ಬಂದಿರಬೇಕು. ಹಾಗಂದ್ರೆ–ಹಿಂದೆ ಅಲ್ಲಿನ ಜನತೇಗೆ ಹುಬ್ಬು ಬಳ್ಳೀ ಹಾಗೇ ವಾಲಿಕೊಂಡಿತ್ತೂ ಅಂತ !

ಮೊದಲನೆಯವ: ಅಂದರೆ ? ಈಗೇನು ಅವರ ಹುಬ್ಬುಗಳೆಲ್ಲಾ ನೆಟ್ಟಗೆ ನೆಟ್ಟಕೊಂಡು ನಿಂತಿರ್ತವೇನು ?

ಮೂರನೆಯವ: ಹು ! ಅದೇ ಪ್ರಶ್ನೇನೇ ನೀವು ಕೇಳದೆ ಇದ್ದಿದ್ರೆ, ನಾನು ಕೇಳಬೇಕೂಂತಿದ್ದೆ.

ಎರಡನೆಯವ: ಹಯ್ಯೋ ! ಯಾರು ಬೇಕಾದರೂ ಕೇಳಬಹುದು ಪ್ರಶ್ನೇನ ! ಅದು ಸರಿಯಾದ ಪ್ರಶ್ನೆಯಾದರೆ ಉತ್ತರ ಕೊಟ್ಟೇ ಕೊಡ್ತೇನೆ. ಈಗ–ನೋಡಿ ನಾನು ಸಂಶೋಧನೆ ಮಾಡಿದ್ದು ಆ ಅಮೇರಿಕಾದಲ್ಲಿ Canada ಅಂತಿರೋದರಿಂದ, ಆ ಕ್ಷೇತ್ರವೂ ಹಿಂದೆ ಒಂದಾನೊಂದು ಕಾಲದಲ್ಲಿ ಮಹಾಕನ್ನಡನಾಡಿನ ಒಂದು ಭಾಗವೇ ಆಗಿರಬೇಕೂಂತ ನಾನು ಒತ್ತೀ ಒತ್ತೀ ಹೇಳಿದರೂ ನಂಬದೆ—ದೇಶಸೇವೆ ಅಂತ ನಾನು ಮಾಡಿದರೇ, ಎಂತೆಂತಹ ಪ್ರಶ್ನೆಗಳನ್ನು ಕೇಳಿದರು ಕೃತಘ್ನರು ! "ಅದು ಹೇಗೆ ? ಅಲ್ಲೇನು ಕನ್ನಡ ಮಾತಾಡ್ತಾರೈ. ಅವರ ಬಣ್ಣ ನಮ್ಮ ಹಾಗಿದೆಯೆ? ಅವರ ರೀತಿ, ನಡೆ, ತಂಟೆ ತಕರಾರು ಎಲ್ಲ ನಮ್ಮ ಹಾಗೇ ಇರುತ್ತೇ ಅಂತ ಪ್ರಶ್ನೆಗಳನ್ನ ಕೇಳಿ ಕೇಳಿ ಹೊಟ್ಟೆ ಉರಸೀ-ಉರಸೀ—

ಮೊದಲನೆಯವ: ಈಗ ನಾವು ಸಂಶೋಧನೆ ಮಾಡಬೇಕೂಂತ ಇರೋದು ಹುಬ್ಬಳ್ಳಿ ವಿಷಯ.

ಎರಡನೆಯವ: ಅ್ಹಂ ?

ಮೂರನೆಯವ: ಹಾದು Canada ಅಲ್ಲಾ-ಹುಬ್ಬಳ್ಳೀಂತ-

ಎರಡನೆಯವ: ಅದೇ ಹೇಳಿದೆನಲ್ಲ ಹುಬ್ಬು + ಬಳ್ಳಿ = ಹುಬ್ಬಳ್ಳಿ !

ಮೊದಲನೆಯವ: ಅದು ಸಾಧ್ಯವಿಲ್ಲ-ಹೂವಿನ ಬಳ್ಳಿ = ಹೂಬಳ್ಳಿ = ಹುಬ್ಬಳ್ಳಿ ಹಾಗಾದರೇನೇ ಸರಿಹೋಗುತ್ತೆ !

ಎರಡನೆಯವ: ಅದು ಹೇಗೆ ಸರಿ ಹೋಗುತ್ತೆ?

ಮೂರನೆಯವ: ಹುಂ! ಅದೇ ಪ್ರಶ್ನೆನೇ ನಾನು ಕೇಳಬೇಕೂಂತಿದ್ದೆ- ನೀವು ಕೇಳದೆ ಇದ್ದಿದ್ರೆ-

ಮೊದಲನೆಯವ: ಕೇಳಿ ಅದಕ್ಕೇನು? ಎಂಥೆಂಥಾ ಪ್ರಶ್ನೆಗಳಿಗೇ ಬಗ್ಗಲಿಲ್ಲ ನಾನು. ಇದಕ್ಕೆ ಬೆದರ್ತೀನೆಯೆ ? ಹೂಂ ಕೇಳಿ !

ಎರಡನೆಯವ: ಏನ್ನ ?

ಮೊದಲನೆಯವ: ಪ್ರಶ್ನೇನ !

ಮೂರನೆಯವ: ಏನ್ ಪ್ರಶ್ನೆ ?

ಮೊದನೆಯವ: ಏನಾದ್ರೂ-ಸರಿ.

ಎರಡನೆಯವ: ಏನಾದ್ರೂ ಕೇಳಬಹುದೋ ?

ಮೊದಲನೆಯವ: ಓ ಯಸ್ !

ಎರಡನೆಯವ: ನೀವ್ಯಾಕೆ ನಮ್ಮಿಬ್ಬರಿಗೂ ಈಗ ಚಾ ಕೊಡಿಸಬಾರದು ?

ಮೂರನೆಯವ: ಹುಂ ! ಯಾಕೆ ಕೊಡಿಸಬಾರದು !

ಮೊದಲನೆಯವ: ಏನು ಪ್ರಶ್ನೇರೀ ಇದೂ ? ತಲೆ ಕೆಟ್ಟದೆಯೇನು ನಿಮಗೆ ? ಅಲ್ಲಾ ಏನಾದರೂ ದೊಡ್ಡ ಸಂಶೋಧನೆಮಾಡಿ, ಬಲವಾಗಿ ಪ್ರಿಂಟ್ ಹೊಡಿಸಿ, ಮಾರಿ, ಲಾಭಾ ಮಾಡಿಕೊಳ್ಳೋದಲ್ದೇ- ಹೆಸರು ಕೀರ್ತಿ ಹಬ್ಬಿಸಿ ಪ್ರಚಂಡರೂಂತ ಅನ್ನಿಸಿಕೊಳ್ಳೋಣಾಂದ್ರೆ- ಕಾಫಿ ಚಾ ಅಂತ ಈ mundane world ನಿಂದ ಮೇಲಕ್ಕೇ ಏಳೋದಿಲ್ಲಾಂತೀರಲ್ಲಾ ನೀವು. ಏನು ಗತಿ ಮಾಡಲಿ ?

ಎರಡನೆಯವ: ಅಲ್ಲ — for a change, ನೀವು ಚಾ ಕುಡಿಸಿ, ನಾವು ಕುಡಿದರೆ ಎಲ್ಲರ ಬುದ್ಧೀನೂ ಚುರುಕಾಗಬಹುದೂ ಅಂತ. ಅಷ್ಟೆ !

ಮೂರನೆಯವ: ಹಾಂ ! ಅದನ್ನೇ ನಾನು ಕೇಳಬೇಕೂಂತಿದ್ದೆ - ನೀವು ಕೇಳದೆ ಇದ್ದಿದ್ರೆ-

ಎರಡನೆಯವ: ಆಹಹ !! ಚಾ. . ಅಂದೊಡನೆ ....ಮಿದುಳಿಗೆ ಮಿಂಚು ಹೊಡೀತು ನನಗೇ! ... ಸ್ವಲ್ಪ ತಾಳಿ.... ಹಂ ಸ್ವಲ್ಪ ತಾಳೀ.......

ಮೊದಲನೆಯವ: ಅಲ್ಲಾ.......

ಎರಡನೆಯವ: ತಾಳೀ.........ತಾಳೀ.........idea ಬರ್‍ತಿದೇ........analyse ಮಾಡ್ತಿದೇನೇ........ ತಾಳೀ....

ಮೊದಲನೆಯವ: ತಾಳೋಣಾ.... ತಾಳೋಣಾ ....ತಾಳೋದೇ ನಮ್ಮ ಗುಣಾ !

ಎರಡನೆಯವ: ಹೊಳೀತು — ಹೊಳೀತು— ತಾಳೀ

ಮೂರನೆಯವ: ಆ್ಹಂ? 'ತಾಳೀ - ಹೊಳೀ' - ಅಂ? ತಾಳಿ + ಹೊಳಿ = ತಾಳಿಹೊಳಿ. ಆ್ಹಂ! ಹೌದು ನೋಡಿ. ತಾಳಿಹೊಳೆ ಅನ್ನೊ ಊರಿನ ಹೆಸರಿನ ಶಬ್ದ ಹೇಗೆ ಬಂತೂ ಅಂತ ಈಗ ಹೊಳೀತು ನನಗೆ!

ಎರಡನೆಯವ: ತಾಳ್ರೀ ಸ್ವಲ್ಪ! ಹಂ ನೋಡೀ ...'ಹುಬ್ಬಳ್ಳಿ' ಹೇಗೆ ಬಂತೂಂತ clear ಆಗಿ ಈಗ ತಿಳೀತು ನನಗೆ!

ಮೊದಲನೆಯವ: ಹೇಗೆ ಬಂತು?

ಎರಡನೆಯವ: ಉಬ್ಬು + ಹಳ್ಳಿ = ಉಬ್ಬಳ್ಳಿ = ಹುಬ್ಬಳ್ಳಿ!

ಮೊದಲನೆಯವ: ಅಂದರೇ!?

ಎರಡನೆಯವ: ಉಬ್ಬಿನಮೇಲೆ ಇರೋ ಹಳ್ಳಿ - ಉಬ್ಬು ಹಳ್ಳಿ — ಉಬ್ಬಳ್ಳಿಯಾದ ಮೇಲೆ ಈಚೀಚೆಗೆ ಹುಬ್ಬಳ್ಳಿಯಾಗಿರಬೇಕು!

ಮೊದಲನೆಯವ: ಹುಬ್ಬಳ್ಳಿ ಅಂದ್ರೆ ಹಳ್ಳಿ ಯೇನ್ರಿ?

ಮೂರನೆಯವ: ಹುಬ್ಬಳ್ಳಿ ಅಂದ್ರೆ ಉಬ್ಬಿನ ಮೇಲೆ ಇದೆಯೇನ್ರಿ?

ಎರಡನೆಯವ: ಹಿಂದೆ ಉಬ್ಬಿನಮೇಲೆ ಇದ್ದಿರಲೇ ಬೇಕು! ಈಗ ಸ್ವಲ್ಪ ತಗ್ಗಿದೆ ಅಷ್ಟೆ - ಜನಗಳ ಭಾರಕ್ಕೆ!

ಮೊದಲನೆಯವ: ಹಯ್ಯೋ ಅದೆಂದಿಗೂ ಸರಿಯಾಗೊದಿಲ್ಲರೀ - ಹಾಗೆ ಹೇಳಿದರೆ ಯಾರೂ ಒಪ್ಪೋದಿಲ್ಲ! ಇನ್ನು ನೋಡಿ ಹೀಗೆ ನಿರ್ಧರಿಸಬಹುದು ಬೇಕಾದರೆ. ಉಬ್ಬು + ಹಲ್ಲು = ಉಬ್ಬಲ್ಲು ಆಗಿ - ಹುಬ್ಬಲ್ಲು ಆಗಿ ಕಡೆಗೆ ಹುಬ್ಬಳ್ಳು ಆಗಿ ಅಲ್ಲಿಂದ ಹುಬ್ಬಳ್ಳಿ ಆಗಿರಬೇಕು -

ಎರಡನೆಯವ: ಹಯ್ಯೋ! ಉಬ್ಬು + ಹಲ್ಲು!! ಆದಕ್ಕೂ ಹುಬ್ಬಳ್ಳಿಗೂ ಏನ್ರೀ ಸಂಬಂಧ?

ಮೊದಲನೆಯವ: ಅಲ್ಲಿ ಹಿಂದೆ ಒಂದಾನೊಂದು ಕಾಲದಲ್ಲಿ ಒಬ್ಬ ರಾಜನೋ ಪಾಳಯಗಾರನೋ ಇದ್ದಿರಬಹುದು. ಅವನ ಉಬ್ಬುಹಲ್ಲು ಪ್ರಾಂತದಲ್ಲೆಲ್ಲಾ ಹೆಸರಾಗಿ ಅವನಿಂದಲೇ ಊರಿಗೆ ಈ ಹೆಸರು ಇಳಿದು ಬಂದಿರಬೇಕು. ಈಗ ನೋಡೀ...... ಹಾಗಿಲ್ಲದೇ ಹೋಗಿದ್ದರೆ ನನಗೆ ಯಾಕಪ್ಪಾ ಹೀಗೆ ಹೊಳೀಬೇಕು?

ಎರಡನೆಯವ: ಹೆ ಹೆ ಹೆ ಹೆ! ಎಂದಿಗೂ ಯಾರೂ ಒಪ್ಪೋದಿಲ್ಲ! ನಿಮ್ಮ ಬುರುಡೇಗೆ ಔಷಧಿ ಕೊಡಿಸುತ್ತಾರೆ ಅಷ್ಟೆ!

ಮೂರನೆಯವ: ಅಹ-ಹಹ! ಅದನ್ನೇ ನಾನು ಹೇಳೋಣಾ ಅಂತಿದ್ದೆ — ನೀವು ಹೇಳದೆ ಇದ್ದಿದ್ರೆ—

ಎರಡನೆಯವ: ಅವಕ್ಕೇನೀ! ನಾನು ನಿರ್ಧರಿಸಿದ್ದೇ ಸರಿ! ಹುಬ್ಬು + ಬಳ್ಳಿ! ...... ಅಂ? ಯಾಕೆ? ಸರಿಯಾಗೊಲ್ಲ ಅಂತೀರಾ?

ಮೊದಲನೆಯವ: ಯಾರು ಒಪ್ತಾರೆ ರೀ? ಹೀಗೆ ಹೇಳಿದರೆ??

ಎರಡನೆಯವ: ಸರಿ! ಯಾರೂ ಒಪ್ಪೋದಿಲ್ಲ!! — ಹಾಗಂದ್ರೆ ಇದು ಸಂಶೋಧನೆ ಅಲ್ಲವೇನು? ನಾನು ಹಿಂದೆ ಕಂಡುಹಿಡಿದ ಎಷ್ಟೋ ವಿಷಯಗಳನ್ನ ಒಪ್ಪಲಿಲ್ಲ! 'ಒಪ್ಪೋದಿಲ್ಲ' ಅಂದ್ರು ಜನ- ಆದರೆ ಸರಿಯಲ್ಲವೇನು ಅದು?

ಮೊದಲನೆಯವ: ಅದ್ಲೇಗ್ರೀ? ಸರಿಯಾದ ಪುರಾವೆ ಬೇಡ್ವೇನ್ರಪಾ?

ಎರಡನೆಯವ: ಪುರಾವೆ ಇನ್ನೇನು ಬೇಕು? ನೋಡಿ for example— 'ಶೇಷಪ್ಪಯ್ಯ'ನ್ನೇ — Shakespeare ಅಂತ ಮಾಡಿಕೊಂಡಿದಾರೆ ಅಂದೆ ನಾನು! 'ಕನ್ನಡಿಗ ಅವನು— ಹಿಂದಿನ ಕಾಲದಲ್ಲಿ ಇಂಗ್ಲೆಂಡಿಗೆ ಹೋಗಿ ತಣ್ಣಗಿದೆ ಹವ ಅಂತ ಅಲ್ಲೆ ಕೂತ್ಕೊಂಡು ಇಂಗ್ಲಿಷಿನಲ್ಲಿ ನಾಟಕಗಳನ್ನ ಬರೆದ ಅಂತ ಬಡುಕೊಂಡೆ! ಕೇಳಿದರೆ ಜನ?'

ಮೊದಲನೆಯವ: ಅದು ಸರೀರೀ! ಆದರೆ ಕನ್ನಡಿಗ ಇಂಗ್ಲಿಷಿನಲ್ಲೇಕೆ ಬರೆದಾ ಅಂತ?

ಮೂರನೆಯವ: ಆಹಹಹ! ಎಂತಹ ಪ್ರಶ್ನೆ! ನಾನೂ ಇದನ್ನೇ ಕೇಳಬೇಕೂಂತಿದ್ದೆ ನೀವು ಕೇಳದೆ ಇದ್ದಿದ್ರೆ!

ಎರಡನೆಯವ: ಕೇಳ್ರೀ ಕೇಳ್ರೀ... ಇದೇನು ಮಹಾ? ನಿಮ್ಮ ಪ್ರಶ್ನೆಯಿಂದ ಇನ್ನೊಂದು ಸುಳಿವೂ ತಿಳೀತು! ಹಿಂದಿನ ಕಾಲದಲ್ಲೂ ಕನ್ನಡಿಗರಿಗೆ ಇಂಗ್ಲಿಷ್ ಬರ್‍ತಿತ್ತೂ ಅಂತ!

ಮೊದಲನೆಯವ: ಸ್ಸರ್‍ರೀ.. ಒಪ್ಕೋಳ್ಳೋಣ. ಆದರೆ ಕನ್ನಡಿಗನಾದ ಶೇಷಪ್ಪಯ್ಯ ಕನ್ನಡದಲ್ಲಿ ಬರೀದೆ ಇಂಗ್ಲೀಷಿನಲ್ಲಿ ಯಾಕೆ ಬರೆದಾಂತ?

ಎರಡನೆಯವ: ಯಾಕೆ ಬರೀಬಾರದೂ ಅಂತ? ಈಗ ನೋಡಿ ನನಗೆ ಕನ್ನಡ ಬರುತ್ತೆ—ಇಂಗ್ಲೀಷೂ ಬರುತ್ತೆ - ಯಾವ ಭಾಷೇಲಿ ಬರೀತೀನಿ ನಾನು?

ಮೂರನೆಯವ: ಏನನ್ನ?

ಎರಡನೆಯವ: ಏನಾದ್ರೂ ಆಗಲಿ—ಯಾವ ಭಾಷೇಲಿ ಬರೀತಿನಿ ನಾನು? ಊಹಿಸಿ ಹೇಳಿ.

ಮೂರನೆಯವ: ಎರಡೂ ಭಾಷೆಲೂ ಬರೀತೀರಿ!

ಎರಡನೆಯವ: ಇಲ್ಲ!

ಮೂರನೆಯವ: ಕನ್ನಡದಲ್ಲಿ!

ಎರಡನೆಯವ: ಇಲ್ಲ!!!

ಮೂರನೆಯವ: ಹಾಗಾದರೆ ಇಂಗ್ಲಿಷಿನಲ್ಲಿ!

ಎರಡನೆಯವ: Exactly! Correct!! ನೀವು ಹೇಳಿದ್ದು Correct!!! ಈಗ ಊಹಿಸಿ ಹೇಳಿ-ಇಂಗ್ಲಿಷಿನಲ್ಲಿ ಯಾಕೆ ಬರೀತೀನಿ? ಹೇಳಿ.

ಮೂರನೆಯವ: ಕನ್ನಡದಲ್ಲಿ ಬರೆದರೆ ಅರ್ಥವಾಗೋದಿಲ್ಲ ಅಂತ!

ಎರಡನೆಯವ: Exactly! ಆ್ಞಂ? ಏನಂದ್ರಿ! NOT Exactly, ಊಹಿಸಿ ಹೇಳಿ ಮತ್ತೆ ನೋಡೋಣ.

ಮೊದಲನೆಯವ: ಇಂಗ್ಲಿಷಿನಲ್ಲಿ ಬರೆದರೂ ಅರ್ಥವಾಗುತ್ತೇಂತ ನೋಡೋಣ ಅನ್ನುವ ಚಪಲವಿರಬೇಕು.

ಎರಡನೆಯವ: Yes! Correct ಅಂದ್ರೆ Partly Correct! ಕನ್ನಡ ನೋಡಿ ಪ್ರತಿಯೊಬ್ಬನಿಗೂ ಅರ್ಥವಾಗುತ್ತೆ! ಆದರೆ ಎಷ್ಟು ಜನಕ್ಕೆ? only ಎರಡು ಕೋಟಿ ಜನ! ಇಂಗ್ಲಿಷಿನಲ್ಲಿ ಬರೆದರೆ? ಕೋಟ್ಯನುಕೋಟಿ! the whole world-ಬ್ರಹ್ಮಾಂಡಕ್ಕೇ ಗೊತ್ತಾಗ್ಹೋಗುತ್ತೆ! ಅದಕ್ಕೆ ಅಣ್ಣಾ-ಅದಕ್ಕೆ ಶೇಷಪ್ಪಯ್ಯ ಇಂಗ್ಲಿಷಿನಲ್ಲಿ ಬರೆದದ್ದು!

ಮೊದಲನೆಯವ: ಆದರೆ ಇಂಗ್ಲಿಷ್ ಬರದೆ ಇದ್ದೋರಿಗೆ ಅರ್ಥವಾಗೊಲ್ಲಲ್ಲ!

ಎರಡನೆಯವ: ಮತ್ತೆ ಕನ್ನಡದಲ್ಲಿ ಬರೆದಾಗಲೂ—ಕನ್ನಡ ಬರದವರಿಗೆ ಅರ್ಥವಾಗೋದಿಲ್ಲವಲ್ಲ!

ಮೂರನೆಯವ: ನಿಮ್ಮ ಕನ್ನಡವಂತೂ ಬರೋರಿಗೂ ಅರ್ಥವಾಗೋದಿಲ್ಲ!

ಎರಡನೆಯವ: ಹೀಗೆ ಮಾತನಾಡಕೂಡದು!

ಮೊದಲನೆಯವ: ಇದು ನನ್ನ ಮನೆ! ಏನು ಬೇಕಾದರೂ ಮಾತಾಡ್ತೀನಿ!

ಮೂರನೆಯವ: ನೀವ್ಯಾರು ಕೇಳೋದಕ್ಕೆ?

ಎರಡನೆಯವ: ಆ್ಞಂ?........ಆ..... ಆಹ...... ಹಾಗಾದರೆ, ನಮ್ಮ ಸಂಶೋಧನೆ ಸುಗಮವಾಗಿ ಸಾಗಬೇಕಾದರೆ ಮೊದಲು ಈ ಸ್ಥಳ ಬದಲಾಯಿಸಬೇಕು. ನಿಮ್ಮ ಮನೇಲಿ ಕೂತಿದೀವೀ ಅಂತ ನೀವು ಹೇಳಿದ್ದಕ್ಕೆಲ್ಲ 'ಹೂಂ' ಅಂತ ಹೌದಪ್ಪನವರಾಗಿ ನಾವು ಕೂತರೆ ಸಂಶೋಧನೆ ಎಲ್ಲ ನೆಗೆದುಬಿದ್ದ ಹಾಗೇ'

ಮೂರನೆಯವ: ಹು! ಅದನ್ನೇ ಕೇಳಬೇಕುಂತಿದ್ದೆ - ನೀವು ಕೇಳದೆ ಇದ್ದಿದ್ರೆ!

ಮೊದಲನೆಯವ: ಓಹೋ! ಬದಲಾಯಿಸಿ ಸ್ಥಳ! ಸ್ಥಳ ಬದಲಾಯಿಸಬೇಕಂತೆ! ನಿಮ್ಮ ಬುದ್ಧಿ ಬದಲಾಯಿಸುವರೆಗೂ ಏನು ಸಂಶೋಧನೆ ಮಾಡ್ತೀರಿ ನೀವು? ಶೇಷಪ್ಪಯ್ಯ ಅಂದ್ರೆ Shakespeare ಅಂತೆ! ಹುಬ್ಬಳ್ಳಿ ಅಂದ್ರೆ ಉಬ್ಬೋ ಹಳ್ಳಿ ಅಂತೆ!!

ಮೂರನೆಯವ: ಅದನ್ನೇ ಕೇಳಬೇಕೂಂತಿದ್ದೆ! ಅಲ್ಲಾ 'ಹುಬ್ಬಳ್ಳಿ' ಅಂತ ಒಂದು ಪದದ ವಿಷಯವಾಗಿಯೇ ಪ್ರತಿದಿನವೂ ನೂರಾನೂರಿ ಯಾಗ್ತಿದ್ರೇ...ಇನ್ನು ತಂಪಾಗಿ ಕೂತ್ಕೊಂಡೂ ...ಮಹಾ...ಮಹಾ ಸಂಶೋಧನೆ ಮಾಡೀ.. ಯಾವಾಗಾ? ಹೇಗೇ? ಎಲ್ಲೀ?

ಎರಡನೆಯವ: ಅದಕ್ಕೇ ಶೇಷಪ್ಪಯ್ಯನ ರೀತಿ ನಾವೂ ಇಂಗ್ಲೆಂಡಿಗೆ ಹೋದರೆ ಒಳ್ಳೆಯದರೀ... ಅಲ್ಲೇ ಕೂತ್ಕೊಂಡು ಕೂಲಾಗಿ consider ಮಾಡಬಹುದು ...... ಏಳಿ ಹೋಗೋಣ!

ಮೂರನೆಯವ: ಎಲ್ಲಿಗೆ?

ಎರಡನೆಯವ: ಇಲ್ಲಿಂದ ಮುಂಬೈಗೆ- ಅಲ್ಲಿಂದ ಇಂಗ್ಲೇಡಿಗೆ!

ಮೊದಲನೆಯವ: ನೀವು ಹೋಗಿ ಬೇಕಾದರೆ! ಹುಬ್ಬಳ್ಳಿ ಅನ್ನೋ ಹೆಸರಿನ ವಿಷಯ ಪೂರಾ ಸಂಶೋಧನೆ ಮಾಡಿ ಪುಸ್ತಕ ಪ್ರಿಂಟ್ ಹೊಡೆದು ಜಯಭೇರಿ ಬಢಾಯಿಸಿದ ಮೇಲೆ ಹುಬ್ಬಳ್ಳಿಯಿಂದ ಕಾಲು ತೆಗೆಯೋದು ನಾನು!

ಎರಡನೆಯವ: ಸರಿ ಹಾಗಿದ್ರೆ. ನೀವು ಇಲ್ಲಿಂದ ಕಾಲು ತೆಗೆಯೋದೇ ಇಲ್ಲ!

ಮೂರನೆಯವ: ಅದನ್ನೇ ಹೇಳೋಣಾಂತಿದ್ದೆ. ನೀವು ಹೇಳದೆ ಇದ್ದಿದ್ರೆ—

ಎರಡನೆಯವ: ಬಿಡ್ರಿ ನಾ ಹೇಳಿದೆನಲ್ಲ ... ನೀವೀಲ್ಲೇ ಹುಬ್ಬಳ್ಳೀ ಹುಬ್ಬಳ್ಳೀ ಅಂತ ಕೂತಿರಿ-ನಾವು ನಿಮಗಿಂತ ಮೊದಲೆ ಇಂಗ್ಲೆಂಡಿನಲ್ಲಿ ತಂಪಾಗಿ ಕೂತು ಬುದ್ಧಿ ಓಡಿಸಿ ಸಂಶೋಧನೆ ಮಾಡಿ Attlee ಕಡೇನೋ Churchil ಕಡೇನೋ Introduction ಹೊಡೆಸಿ—ಪುಸ್ತಕ ಪ್ರಿಂಟ್ ಬಡಿದು ಬರ್‍ತೇನೆ ...ಕೂತಿರಿ ಕಣ್ಬಿಡ್ತಾ....ಪಿಕಿ ಪಿಕಿ ಪಿಕಿ ಅಂತ. ಕಣ್ಬಿಡ್ತಾ..........

ಭಾರತೀಯ ಹಬ್ಬಗಳ ವೈಶಿಷ್ಟ್ಯ


ಲೇಖಕರು :
ಶ್ರೀ ಗೋವಿಂದಮೂರ್ತಿ ದೇಸಾಯಿ ಧಾರವಾಡ

★ ಭಾರತದಲ್ಲಿ ಹಿಂದುಗಳ ಹಬ್ಬಗಳು ಬಹಳ. ಅವರು ಇಷ್ಟೇಕೆ ಹಬ್ಬಗಳನ್ನು ಆಚರಿಸುತ್ತಾರೆ? ಯುಗಾದಿಯಿಂದ ಪ್ರಾರಂಭವಾಗಿ ದೀಪಾವಳಿ ವರೆಗೆ ಭಾರತವಾದ್ಯಂತ ಹತ್ತಾರು ಮುಖ್ಯ ಹಬ್ಬಗಳಿವೆ. ಈ ಹಬ್ಬಗಳ ಸಮಯದಲ್ಲಿ ಜನರು ಉಂಡುಟ್ಟು ಸುಖ ಸಂತೋಷಗಳಿಂದ ಕಾಲ ಕಳೆಯುವರು. ಬದಲಾಗುವ ಋತುಮಾನಕ್ಕನುಸರಿಸಿಯೇ ಈ ಹಬ್ಬಗಳನ್ನು ಏರ್ಪಡಿಸಿರುವದು ಅವುಗಳ ವೈಶಿಷ್ಟ್ಯವಾಗಿದೆ ★

★

ಅನಾದಿಕಾಲದಿಂದಲೂ ಭಾರತೀಯರು ಹಬ್ಬಗಳನ್ನು ಆಚರಿಸುತ್ತಲೇ ಬಂದಿದ್ದಾರೆ. ನಮ್ಮ ದೇಶದಲ್ಲಿ ಆಚರಿಸಿದಷ್ಟು ಹಬ್ಬ ಹುಣ್ಣಿಮೆಗಳನ್ನು ಬೇರೆ ಯಾವದೇ ದೇಶವು ಆಚರಿಸುವದಿಲ್ಲ. ಹಬ್ಬವು ಹುಟ್ಟಿದ್ದು ಪರ್ವ ಶಬ್ದದಿಂದ. ಪೂರ್ವ ಕಾಲದಲ್ಲಿ ಯಜ್ಞಯಾಗಾದಿಗಳನ್ನು ಮಾಡಿ, ಇಷ್ಟ ದೇವತೆಗಳನ್ನು ಆಹ್ವಾನಿಸಿ ಅವರ ಸಂತೃಪ್ತಿಗಾಗಿ ಬಲಿಯನ್ನು ಕೊಡುವದು ಪರಿಪಾಠ. ಪರ್ವವೆಂದರೆ ಬಲಿ, ಚರು ಅಥವಾ ಹವಿಸ್ಸು! ಯಜ್ಞಕ್ಕಾಹುತಿಯನ್ನೀಯಲು ಸಿದ್ಧಪಡಿಸಿದ ಚರುವನ್ನು ಅಥವಾ ಪರ್ವವನ್ನು ಯಜ್ಞಮುಗಿದೊಡನೆ ತಮ್ಮ ತಮ್ಮಲ್ಲಿ ತಿನ್ನುವ ಪರಿಪಾಠವಿತ್ತು. ಅಂತಲೇ ಈ ತಿನ್ನುವ ಪರಂಪರೆ ಹಬ್ಬವಾಯಿತು. ಮುಂದೆ ಪುರಾಣಕಾಲದಲ್ಲಿ ಪುಣ್ಯ ಪುರುಷರು ಅವತರಿಸಿದಾಗ ಅಥವಾ ಅವಸಾನ ಹೊಂದಿದಾಗ ಉತ್ಸವಗಳನ್ನು ಮಾಡುವ ಸಂಪ್ರದಾಯವು ಬೆಳೆದು ಬಂದಿತು. ಉತ್ಸವಗಳೆಂದರೆ ಏನನ್ನಾದರೂ ತಿನ್ನುವದು ಎಂಬುದಿಷ್ಟೇ ಹಬ್ಬದ ಪ್ರಧಾನ ಪ್ರತೀಕವಾಗಿ ಹಬ್ಬಕ್ಕೊಂದು ಸಂಕುಚಿತ ದೃಷ್ಟಿ ಬರತೊಡಗಿತು. ವೈದಿಕರು ಸುಸ್ಥಿತಿಯಲ್ಲಿರುವಾಗ ತಮ್ಮ ಸುಖ ಭೋಗಕ್ಕೆ ತಮಗೆ ಬೇಕಾದ ದಿವಸಗಳನ್ನು ಹಬ್ಬಗಳೆಂದು ಕರೆದು, ಅಂದು ತಿಂದು, ಆನಂದಬಟ್ಟಿದ್ದಾರೆ. ಅಂತಲೇ ಹಬ್ಬಗಳ ಸಂಖ್ಯೆ ಪ್ರತಿದಿನಕ್ಕೂ ಬೆಳೆಯುತ್ತಲೇ ಬಂದಿದೆ. ವಾರದಲ್ಲಿಯ ಏಳೂ ದಿವಸಗಳು ಒಬ್ಬೊಬ್ಬ ದೇವರಿಗೆ ಮೀಸಲಾಗಿವೆ. ಗಂಗೆ-ಗೌರಿ, ರಾಮ-ಕೃಷ್ಣ, ಹನುಮ-ಬಸವ ಎಂದು ವರುಷದ ೩೬೦ ದಿವಸವೂ ಹಬ್ಬಗಳನ್ನು ಆಚರಿಸುತ್ತಾರೆ. ಭಾರತೀಯರು ಭಾವಿಕರು. ಅವರಿಗೆ ದೇವರಮೇಲೆ, ಶಾಸ್ತ್ರಗಳಮೇಲೆ, ಪರಂಪರೆಯಲ್ಲಿ ಶ್ರದ್ಧೆ ಹೆಚ್ಚು. ಆ ನಂಬಿಗೆಯೇ ನಮ್ಮ ಪ್ರಾಚೀನ ಹಬ್ಬಗಳನ್ನು ಮಾಡಿಸುತ್ತದೆ. ಹಬ್ಬಗಳಿಗೆ ಅರ್ಥವಿದೆ, ಸಂಸ್ಕೃತಿಯಿದೆ ಮತ್ತು ಒಂದು ಪರಂಪರೆಯಿದೆ, 'ಭಾರತೀಯ ತತ್ವಜ್ಞಾನವು ನಿರಾಶಾವಾದವನ್ನೇ ಬೋಧಿಸುತ್ತದೆ' ಎಂಬ ಮಾತಿನಲ್ಲಿ ಅರ್ಥವಿಲ್ಲ. ಅವರು ಭಾರತೀಯ ಜನ ಜೀವನದತ್ತ ಹೊರಳಿ ನೋಡಬೇಕು. ಜೀವನದಲ್ಲಿ ರಸಾನುಭವ ಮಾಡಿ, ನಮ್ಮಷ್ಟು ಸುಖ ಸಂತೋಷಗಳಿಗೆ ಹಾತೊರೆಯುವಷ್ಟು ಪ್ರಪಂಚದ ಯಾವದೇ ಜನಾಂಗವು ಹಾತೊರೆಯಲಾರದು. ಹಬ್ಬಗಳೆಂದರೆ ಮಕ್ಕಳಿಗೆ ಆಟ-ಊಟ; ತರುಣ-ತರುಣಿಯರಿಗೆ ನೋಟ; ಹಿರಿಯರಿಗೆ ದೇವರ ಸೇವೆ! ಈ ರೀತಿ ಹಬ್ಬವೆಂದರೆ ಮನೆಯಲ್ಲಿ ಸಂತೋಷವು ನಲಿಯಬೇಕು. ಅಂತಲೇ ನಮ್ಮಲ್ಲಿ ಒಂದು ಗಾದೆಯಿದೆ "ಪರ್ವದಲ್ಲಿ ಹರ್ವೆ ತಿಂದರೂ ಸೊಕ್ಕು ಇಳಿದೀತೇ?" ಎಂದು. ಹಬ್ಬದಂಥ ಸುಖಪಡುವ ದಿನಗಳಲ್ಲಿ ಹರಿವೆಸೊಪ್ಪು ತಿಂದರೂ ಸೊಕ್ಕು ಇಳಿಯಲಾರದು ಈ ಮಾತಿನಲ್ಲಿ ಹಬ್ಬವೆಂದರೆ ಸುಖ, ಸಂತೋಷ, ಸಮಾಧಾನ ಪಡುವ ದಿವಸಗಳೆಂತಲೇ ಅರ್ಥ! ಯುಗಾದಿ; ನಾಗರ ಚೌತಿ, ರಕ್ಷಾಪೂರ್ಣಿಮೆ, ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ಶಿವರಾತ್ರಿ, ನವರಾತ್ರಿ, ದೀಪಾವಳಿ, ರಾಮನವಮಿ, ಸಂಕ್ರಮಣ ಹೀಗೆ ಒಂದಿಲ್ಲ ಒಂದು ವಿಧದ ಹಬ್ಬದದಿವಸಗಳು ಬರಲೇಬೇಕು. ಅಲ್ಲದೆ ಗಂಗೆ-ಗೌರಿ, ಯಾತ್ರೆ-ಜಾತ್ರೆ, ವರ್ಧಂತಿ-ಜಯಂತಿ, ಎಂದು ಜನರು ಹಬ್ಬಗಳನ್ನು ಆಚರಿಸುತ್ತಲೇ ಇರುತ್ತಾರೆ. ಋತುಮಾನಗಳಿಗೆ ತಕ್ಕ ಹಬ್ಬಗಳು ಬರುತ್ತಿವೆ. ನೆಲದಮಕ್ಕಳನಾಡಾದ ಈ ಭೂಮಿಯಲ್ಲಿ, ಅವಳ ಕಾರ್ಯಮುಗಿಸಿ ಅವಳಿಗೆ ಬಿಡುವು ದೊರೆತಾಗ ಅವಳನ್ನು ಪೂಜಿಸಲು ಬರುವಂತೆ ಹಬ್ಬಗಳನ್ನುನಮ್ಮ ಹಿರಿಯರು ಹಾಕಿಕೊಟ್ಟಿದ್ದಾರೆ. ಹಬ್ಬಗಳ ನಿಜವಾದ ಮಥಿತಾರ್ಥವನ್ನು ತಿಳಿದುಕೊಳ್ಳದೆ, ಕೇವಲ ಕುರುಡ ಪರಂಪರೆಯನ್ನು ನಂಬಿ, ಹಬ್ಬಗಳಲ್ಲಿದ್ದ ರಸ-ರುಚಿಗಳನ್ನು ಮರೆತು, ಅವುಗಳನ್ನು ಹದಗೆಡಿಸಿ ಬಿಟ್ಟಿದ್ದೇವೆ. ನಿಜವಾಗಿಯೂ ನಾವು ಅವುಗಳ ಮೂಲಭೂತ ತತ್ವಗಳ ಅರ್ಥಗಳನ್ನು ಮಾಡಿಕೊಂಡು ಆಚರಿಸಿದ್ದರೆ, ಭಾರತೀಯ ಕುಟುಂಬಗಳ ಮತ್ತು ಸಾಮಾಜಿಕರ ಪರಿಸ್ಥಿತಿ ಈ ಅವಸ್ಥೆಗೆ ಬರುತ್ತಿರಲಿಲ್ಲವೊ ಏನೋ?

ನಾವು ಪರತಂತ್ರರಾದಂತೆ ಆಳರಸರ ಸಂಸ್ಕೃತಿಯ ಪರಿಣಾಮದಿಂದ ನಮ್ಮ ಸಂಸ್ಕೃತಿಯನ್ನು ಮರೆತು ಪರಂಪರೆಯನ್ನು ಹೀಯಾಳಿಸಹತ್ತಿದ್ದೇವೆ. ಪರಂಪರೆಯ ಪ್ರತಿ ವಿಷಯವನ್ನು



ವಿಜ್ಞಾನಮಂದಿರದ ಪಾಶ್ಚಿಮಾತ್ಯ ತಕ್ಕಡಿಯಲ್ಲಿ ರಿಸಿ, ಚಿಕಿತ್ಸಕ ಬುದ್ಧಿಯನ್ನು ವ್ಯಯಿಸಿ, ಈ ಹಬ್ಬ ವನ್ನಾಚರಿಸಿದರೆ ಎಷ್ಟು ಲಾಭ ? ಎಂದು ತೂಗಿ ನೋಡುವದುಸರಿಯಲ್ಲ. ಹಬ್ಬಗಳನ್ನಾಚರಿಸುವದ ರಿಂದ ಬರುವ ಮನಸ್ಸಿನ ಆನಂದವನ್ನು ಇಂತಿ ಷ್ಟೆಂದು ತೂಗಿ ನೋಡುವದು ಸಾಧ್ಯವಿಲ್ಲ ಮತ್ತು ಯಾವ ಪಾಶ್ಚಿಮಾತ್ಯ ಸಂಸ್ಕೃತಿಯಾಗಲಿ ಅಥವಾ ವಿಜ್ಞಾನದ ಮದ್ದಾಗಲಿ ಆ ಆನಂದವನ್ನು ತಂದು ಕೊಡಲಾರವು. ವಿಜಯದಶಮಿ, ಸಂಕ್ರಮಣಗಳಂಥ ಸಾರ್ವಜನಿಕ ಹಬ್ಬಗಳಲ್ಲಿ ಜನರು ತಮ್ಮತಮ್ಮಲ್ಲಿದ್ದ ಸೇಡಿನ ಭಾವನೆ ಯನ್ನು ಮರೆತು ಅಂದು ಮಾತನಾಡಿ ಹೊಸ ಸಂಬಂಧವನ್ನು ಪ್ರಸ್ಥಾಪಿಸಬಲ್ಲರು. ಮನಸ್ಸಿನ ನಿರ್ಮಲತೆ, ಉತ್ಸಾಹ, ಆನಂದ, ಬೆಡಗು, ಕಲಾ ಕುಶಲತೆ ಹೀಗೆ ಒಂದಿಲ್ಲ ಒಂದು ರೀತಿಯ ಲಾಭ ವನ್ನು ನಾವು ನಮ್ಮ ಹಬ್ಬಗಳಿಂದ ಪಡೆಯ ಬಹುದು. ಭಾರತೀಯ ಹಬ್ಬಗಳ ಹಿನ್ನೆಲೆಗಳನ್ನು ಕುರಿತು ಈಗ ವಿವೇಚಿಸುವ.

ಯುಗಾದಿ :— ಯುಗಕ್ಕೆ ಆದಿಯಾದ ಹಬ್ಬ ವಿದು. ಸಂವತ್ಸರದಿಂದ ಸಂವತ್ಸರದ ವರೆಗಿನ ಕಾಲವು ಒಂದು ಯುಗ. ಅಂದು ದಕ್ಷಿಣ ಭಾರ ತೀಯರಿಗೆ ವರ್ಷಾರಂಭದ ದಿವಸ. ಇದು ಭಾರ ತೀಯರಿಗೆ ಒಂದು ರಾಷ್ಟ್ರೀಯ ದಿವಸ. ಶಕನೆಂಬ ದೊರೆ, ಸಿಂಧುನದಿಯ ಪಶ್ಚಿಮದಾಚೆಯಿಂದ ಭಾರತಕ್ಕೆ ಬಂದು ಕೊಲೆ ಸುಲಿಗೆ, ಸ್ತ್ರೀಯರ ಮಾನಹರಣ ಮೊದಲಾದ ದುಷ್ಕೃತ್ಯಗಳನ್ನು ಮಾಡಿ ತೊಂದರೆಯನ್ನೀಯಹತ್ತಿದನು. ಶಾಲಿ ವಾಹನನೆಂಬ ದೊರೆಯು ಯುಧಿಷ್ಠಿರ ಶಕ ೩೧೭೯ ರಲ್ಲಿ ಅಂದರೆ ವಿಕ್ರಮಶಕದ ೧೩೫ ವರ್ಷಗಳ ನಂತರ ಶಕನನ್ನು ಸೋಲಿಸಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದನು. ನಮಗೆ ಈ ಯುಗಾ ದಿಯು ಆಗಸ್ಟ ೧೫ ಇದ್ದಂತೆ. ಅಂದು ನಾವು ಸ್ವಾತಂತ್ರ್ಯವನ್ನು ದೊರಕಿಸಿದ ದಿನನೆಂದು ಬಹು ಆನಂದದಿಂದ ಕಳೆಯುತ್ತೇವೆ. ಇಂದೇ ಧರ್ಮ ರಾಜನು ತನ್ನ ಆಳಿಕೆಯನ್ನು ಪ್ರಾರಂಭಿಸಿದ್ದರಿಂದ ಇದಕ್ಕೆ ಯುಧಿಷ್ಠಿರ ಯುಗನೆಂತಲೂ ಕರೆಯು ತ್ತಾರೆ. ಇಂದು ಬೇವನ್ನು ತಿನ್ನುತ್ತಾರೆ. ಬೇವಿನಲ್ಲಿ ಅಮೃತವಿರುವದಂತೆ. ಬೇವನ್ನು ತಿಂದರೆ ಅಮರ ರಾಗುವರೆಂದು ಪ್ರತೀತಿ.

ನಾಗರಪಂಚಮಿ :— ಇದು ವಿಶೇಷವಾಗಿ ದ್ರಾವಿಡರ ಹಬ್ಬ. ಆರ್ಯರು ಭಾರತಕ್ಕೆ ಬಂದ ಪೂರ್ವದಲ್ಲಿ ನಾಗರಾಜನು ನಮ್ಮ ದೇವರುಗಳಲ್ಲಿ ಒಬ್ಬನಿದ್ದನು. ನಾಗಚತುರ್ಥಿ ಅವನ ಪೂಜೆ ಗಾಗಿ ಮೀಸಲಿಟ್ಟ ದಿವಸ. ಅಂದು ಉಪವಾಸಾದಿ ವ್ರತಗಳನ್ನು ಮಾಡುತ್ತಾರೆ. ಆರ್ಯರಿಗೆ ಪ್ರಥ ಮತಃ ನಾಗಪೂಜೆ ಸರಿಬರಲಿಲ್ಲ. ಆದರೆ ದೇಶ ದಲ್ಲಿ ಪಸರಿಸಿದ್ದ ಸಂಪ್ರದಾಯವನ್ನು ಅವರೂ ಅನುಸರಿಸಲೇಬೇಕಾಯಿತು. ಪೂರ್ವದ ಉಲ್ಲೇ ಖಗಳನ್ನು ನೋಡಿದರೆ, ನಾಗಪೂಜೆಯನ್ನು, ಉತ್ತರ ಅಮೇರಿಕೆಯ ರೆಡ್ ಇಂಡಿಯನ್ನರು ಮಾಡುತ್ತಿದ್ದರಂತೆ. ಮೆಕ್ಸಿಕೋ ಮತ್ತು ದಕ್ಷಿಣ ಅಮೇರಿಕೆಯಲ್ಲಿ ನಾಗಪೂಜೆಯ ಸಂಪ್ರದಾಯ ವಿದ್ದಿತಲ್ಲದೆ, ಇಜಿಪ್ತದ ಜನರು ಪೂಜಾರ್ಹದೇವ ರಲ್ಲಿ ನಾಗನನ್ನು ಇಂದಿಗೂ ಗಣಿಸುತ್ತಾರೆ. ಇಂದೇ ಏಕೆ ನಾಗರಾಜನನ್ನು ಪೂಜಿಸುತ್ತಾರೆ ಎಂಬ ಬಗ್ಗೆ ದಂತಕತೆಯೊಂದಿದೆ. ಒಮ್ಮೆ ಪಕ್ಷಿಗಳ ರಾಜನಾದ ಗರುಡನಿಗೂ ಸರ್ಪಗಳ ರಾಜನಾದ ತಕ್ಷಕನಿಗೂ ವ್ಯಾಜ್ಯವುಂಟಾಯಿತು. ಗರುಡನು ವಿಷ್ಣುವಿನ ವಾಹನವಾಗಿದ್ದರಿಂದ, ತನ್ನ ಆಶ್ರಯದಾತನನ್ನು ಯುದ್ಧದಲ್ಲಿ ಸಹಾಯ ಮಾಡಲು ಬಿನ್ನವಿಸಿ ಕೊಂಡನಂತೆ. ವಿಷ್ಣುವು ತಕ್ಷಕನನ್ನು ಕೆಳಕ್ಕೆ ಒಗೆ ಯಲು ಸಿದ್ಧನಾದನು. ಆದರೆ, ತಕ್ಷಕನು ತನ್ನ ದೇವರಾದ ಅನಲಕೋಟೇಶ್ವರನನ್ನು ಪ್ರಾರ್ಥಿಸಿ ದನು. ಆ ಅನಲಕೋಟೇಶ್ವರ ದೇವರು ತಕ್ಷಕ ಮತ್ತು ಗರುಡರಲ್ಲಿ ಮೈತ್ರಿಯನ್ನು ಬೆಳೆಯಿಸಿ ಗರುಡನ ಕೊರಳಲ್ಲಿ ತಕ್ಷಕನನ್ನು ಹಾಕಿದನು. ಅಂದಿನ ದಿವಸ ಅವರಲ್ಲಿ ಮೈತ್ರಿಯಾಯಿತಂತೆ. ಅದರ ಪ್ರತೀಕವೇ ಈ ಹಬ್ಬ. ನೇಪಾಳದಲ್ಲಿ ನಾವಿಂದಿಗೂ ಒಂದು ದೇವಾಲಯವನ್ನು ನೋಡುತ್ತೇವೆ. ಅಲ್ಲಿ ವಿಷ್ಣುವು ಗರುಡನಮೇಲೆ ಕುಳಿತಿದ್ದು ಮತ್ತು ಸರ್ಪವು ಅವನ ಕೊರಳಲ್ಲಿ ಇದ್ದುದನ್ನು ನಾವು ನೋಡುತ್ತೇವೆ.

ನಮ್ಮ ನಾಡಿನಲ್ಲಿ ಮಣ್ಣಿನ ನಾಗನನ್ನು ಮಾಡಿ ಪೂಜಿಸಿದರೆ, ಮಲಬಾರದಲ್ಲಿ ಜೀವಂತ ನಾಗರ ಹಾವುಗಳಿಗೆ ಹಾಲನ್ನು ಎರೆಯುತ್ತಾರೆ. ನಾಗ ಪಂಚಮಿಯ ದಿವಸ ನಾಗರ ಹಾವುಗಳ ಹುತ್ತು ಗಳಿಗೆ ಹೋಗಿ ಅವುಗಳನ್ನು ಪುಷ್ಪಗಳಿಂದ ಪೂಜಿಸಿ ಒಂದು ಪಾತ್ರೆಯ ತುಂಬ ನೈವೇದ್ಯವೆಂದು ಆಕಳ ಹಾಲನ್ನು ಇಡುತ್ತಾರೆ. ಜನರು ಹಾಲನ್ನಿಟ್ಟು ದೂರ ಸರಿದು ನಿಂತು ಹಾವುಗಳು ಒಳಗಿನಿಂದ ಬಂದು ಹಾಲು ಕುಡಿಯುವದನ್ನು ನೋಡುತ್ತಾರೆ. ಸರ್ಪ ಗಳು ಹುತ್ತಿನಿಂದ ಹೊರಕ್ಕೆ ಬಂದು ಯಥೇಚ್ಛ ವಾಗಿ ಹಾಲನ್ನು ಕುಡಿದು ಮರಳಿ ಹುತ್ತಿಗ ಹೋಗುತ್ತವೆ. ಹಿಂದುಗಳಲ್ಲದೆ, ಲಾಹೋರ, ಸಿಯಾಲಕೋಟ ಮತ್ತು ಫಿರೋಜಪುರ ಕಡೆಗಳಲ್ಲಿ ಕೆಲ ಮುಸಲ್ಮಾನರು ಈ ನಾಗಪಂಚಮಿಯನ್ನು ಆಚರಿಸುತ್ತಾರೆ. ಭಾರತೀಯರಿಗೆ ನಾಗರಹಾವು ಪೂಜ್ಯವಾದದ್ದು. ವೈದಿಕರಲ್ಲಿ ಯಾರಾದರೂ ತಪ್ಪಿ ನಾಗರಹಾವನ್ನು ಕೊಂದರೆ ಅವರು ತಮ್ಮ ತಂದೆ-ತಾಯಿಗಳು ತೀರಿದರೆ ಮಾಡಬೇಕಾದ ಕರ್ಮ ಗಳನ್ನೆಲ್ಲ ಮಾಡುತ್ತಾರೆ. ನಾಗನನ್ನು ಕೊಂದರೆ ಕೊಂದವರ ಮನೆತನವು ನಿರ್ನಾಮವಾಗುವದೆಂಬ ನಂಬಿಕೆ ನಮ್ಮಲ್ಲಿದೆ.

ರಕ್ಷಾಪೂರ್ಣಿಮೆ : — ಭಾರತದಲ್ಲಿ ಸಾರ್ವತ್ರಿಕ ಆಚರಿಸುತ್ತಿರುವ ಮಹತ್ವದ ಹಬ್ಬಗಳಲ್ಲಿ ಇದೊಂದು ಹಬ್ಬ. ನಮ್ಮ ಕಡೆಗೆ ಇದು ನೂಲ ಹುಣ್ಣಿಮೆಯಾದರೆ, ಉತ್ತರ ಭಾರತದಲ್ಲಿ ಇದು ರಕ್ಷಾಪೂರ್ಣಿಮೆ. ಸಮುದ್ರದ ದಂಡೆಯಲ್ಲಿದ್ದವರಿಗೆ ಇದು ನಾರಳಿಪೂರ್ಣಿಮೆ. ವೇದಗಳನ್ನು ಅಭ್ಯಾಸ ಮಾಡುವವರು ಇಂದು ಪ್ರಾರಂಭಿಸಬೇಕು. ವೇದಗಳನ್ನು ಅನುಸರಿಸುವವರು ಇಂದು ಹೊಸ ಯಜ್ಞೋಪವೀತವನ್ನು ಧಾರಣ ಮಾಡಿ ಅಗ್ನಿಸಾಕ್ಷಿಯಾಗಿ, ತಮ್ಮ ವೇದದಲ್ಲಿಯ ನಂಬಿಕೆಯನ್ನು ಪುನರುಚ್ಚರಿಸಬೇಕು. ಜೀವನ್ನೂ, ನಮ್ಮ ಪೂರ್ವಜರ ವೇದವನ್ನೇ ನಾನು ನಂಬಿ ಅದರಂತೆ ನಡೆಯುತ್ತೇನೆಂದು ಪ್ರತಿಜ್ಞೆ ಮಾಡಬೇಕು.

ಸಮುದ್ರ ತೀರದಲ್ಲಿ ವಾಸಿಸುವವರು ಸಮುದ್ರದ ಮೇಲೆ ತಮ್ಮ ವೃತ್ತಿಗಳನ್ನು ಸಾಗಿಸುತ್ತಾರೆ. ನಾರಳೀಪೂರ್ಣಿಮೆಯೆಂದರೆ ಸಾಮಾನ್ಯತಃ ವರ್ಷಋತುವಿನ ಕೊನೆಯ ದಿನ. ಅಂದಿನಿಂದ ಅವರು ತಮ್ಮ ನಾವೆಗಳನ್ನು ಸಮುದ್ರದಲ್ಲಿ ಬಿಡಲು ಪ್ರಾರಂಭಿಸುತ್ತಾರೆ. ಸಮುದ್ರರಾಜನ ಪ್ರೀತಿಯನ್ನು ಸಂಪಾದಿಸಲು ಅಂದು ಅವನನ್ನು ಪೂಜಿಸಿ ಅವನಿಗೆ ತೆಂಗಿನಕಾಯಿಗಳನ್ನು ಅರ್ಪಿಸುತ್ತಾರೆ. ತೆಂಗಿನಕಾಯಿಯೊಂದಿಗೆ ಅವನಿಗೆ ದಕ್ಷಿಣೆಯನ್ನೀಯುತ್ತಾರೆ. ಅದುವರೆಗೂ ಕೆಲ ದಿನ ಬಂದಾಗಿದ್ದ ವಾಣಿಜ್ಯವು ಪುನಃ ಪ್ರಾರಂಭವಾಯಿತೆಂದು ವ್ಯಾಪಾರಸ್ಥರು ಸಂಪ್ರೀತರಾಗಿ ದಕ್ಷಿಣೆಯನ್ನೀಯುತ್ತಾರೆ. ಹಿಂದಕ್ಕೆ ರತ್ನಾಗಿರಿಯ ವಾಣಿಜ್ಯಗಾರರು ಕನಕದ ನಾಣ್ಯಗಳನ್ನು ಅವನಿಗೆ ಅರ್ಪಿಸುತ್ತಿದ್ದರಂತೆ. ಉತ್ತರಭಾರತದಲ್ಲಿ ಈ ಹುಣ್ಣಿಮೆ 'ರಾಖೀಪೂರ್ಣಿಮೆ'! ರಾಖಿ ಅಂದರೆ ರಕ್ಷೆ. ಸೋದರಿಯರು ತಮ್ಮ ಸೋದರರ ಮುಂಗೈಗೆ ರೇಶಿಮೆಯ ರಕ್ಷೆ ಕಟ್ಟುತ್ತಾರೆ. ಅದರಿಂದ ಸಹೋದರರಿಗೆ ಯಾವ ರೀತಿಯ ಬಾಧೆ ತಟ್ಟಲಾರದು. ಯಾರಾದರೂ ಅಂದು ಸಹೋದರ ಸಹೋದರಿಯರಾಗಬೇಕಿದ್ದರೆ, ಈ ರಕ್ಷೆಯನ್ನು ಕಟ್ಟುತ್ತಾರೆ. ಈ ರಕ್ಷೆ ಅವರನ್ನು ಒಡಹುಟ್ಟಿದ ಸಹೋದರಿ ಸಹೋದರರಂತೆ ಬಂಧಿಸುತ್ತದೆ.

ಕೃಷ್ಣಾಷ್ಟಮಿ : — ಇಂದು ಕೃಷ್ಣನ ವರ್ಧಂತಿಯ ದಿವಸ. ದೇವರು ತನ್ನ ದಶಾವತಾರಗಳಲ್ಲಿ ಕೃಷ್ಣಾವತಾರದೊಳಗೆ ಪರಿಪೂರ್ಣನಾಗಿದ್ದಾನೆ. ಮಾನವನಾಗಿ, ಅವನು ಪಡಬೇಕಾದ ಸುಖದುಃಖಗಳನ್ನು ಅನುಭೋಗಿಸಿ ಮಾನವರಿಗೆ ದೇವರು ಒಂದು ಆದರ್ಶದ ಪಾಠವನ್ನು ಈ ಅವತಾರದಲ್ಲಿ ತೋರಿಸುತ್ತಾನೆ. ಅಂದು ಜನರು ಗೋಕುಲ ಪಟ್ಟಣವನ್ನು ರಚಿಸಿ ಅದರಲ್ಲಿ ಕೃಷ್ಣನನ್ನು ಮಲಗಿಸಿ ಪೂಜಿಸುತ್ತಾರೆ. ನಿಜಕ್ಕೂ ಈ ಹಬ್ಬಕ್ಕೆ ಒಂದು ಅರ್ಥವಿದೆ. ನಾವಿಂದು ಮಹಾನುಭಾವರ ವರ್ಧಂತಿಯನ್ನು ಆಚರಿಸಿ, ಅವರು ನ... ಮಹಾಕೃತ್ಯಗಳನ್ನು ನೆನೆಯುತ್ತೇವೆ. ... ನಮ್ಮ ಸಂಸ್ಕೃತಿ, ಧರ್ಮ ಮತ್ತು ... ಮಹಾವ್ಯಕ್ತಿ ಕೃಷ್ಣನ ಪೂಜೆ, ... ಸ್ತುತಿ ಮಾಡುವದರಲ್ಲಿ ಯಾವ ... ಧರ್ಮವೂ ಇಲ್ಲ.

ಗಣೇಶಚತುರ್ಥಿ :— ಬುದ್ಧಿಯ ಅಧಿದೇ... ಯಾದ ಗಣಪತಿಯನ್ನು ಶಕ್ತಿಯ ... ಪೆಟ್ಟಾದಂತೆ ಹೆಚ್ಚು ಪೂಜಿಸಹತ್ತಿದರು. ... ಪುರಾಣದ ಮೇರೆಗೆ ಗಣಪತಿಯು ಶಿವನ ... ಯಿಂದ ಉದ್ಭವಿಸಿದನೆಂದಿದ್ದರೆ, ಮತ್ಸ್ಯಪುರಾ... ಮೇರೆಗೆ ಪಾರ್ವತಿಯು ಮಜ್ಜನಗೈಯ... ಕಾಲಕ್ಕೆ ಲೇಪನ ಮಾಡಿಕೊಳ್ಳುತ್ತಿದ್ದ ತೈಲ... ದೇಹದ ಅಶುದ್ಧತೆಯಿಂದ ಹುಟ್ಟಿದ... ತಿಳಿದು ಬರುತ್ತದೆ. ಒಂದು ಆಗ... ಮೇರೆಗೆ ಶಿವಪಾರ್ವತಿಯರು ಆನೆಯ ... ವನ್ನು ಧರಿಸಿ ಗಣಪತಿಯನ್ನು ಹಡೆದರೆಂದು ... ಬರುತ್ತದೆ. ಶಿವಪುರಾಣದ ಮೇರೆಗೆ ಗಣಪತಿ... ಭಾದ್ರಪದ ಶುಕ್ಲ ಚತುರ್ಥಿಯ ದಿವಸ ಹುಟ್ಟಿ... ವದರಿಂದ ಅಂದು ನಾವು ಅವನ ಹುಟ್ಟುಹ... ವನ್ನು ಆಚರಿಸುತ್ತೇವೆ. ಗಣಪತಿಯ ಪೂ... ಕೇವಲ ಹಿಂದುಗಳಿಗಷ್ಟೇ ಮೀಸಲಾಗಿಲ್ಲ. ಭಾ... ಸಂಸ್ಕೃತಿಗೆ ಯಾರು ಎಷ್ಟೆಷ್ಟು ಶ್ರಮಿಸಿದ್ದಾರೆ...

...ರು ಅಷ್ಟಷ್ಟು ಪ್ರಮಾಣವುಳ್ಳ ಗಣಪತಿಯ
...ನೆಯನ್ನು ಸಮುದ್ರದಾಚೆ ಒಯ್ಯುತ್ತಾರೆ.
...ಸ್ತ್ರೀಯರ ಗಣೇಶಚತುರ್ಥಿಯೂ ಉಂಟು. ಇಂಥ
...ಗು ಜನಪದಗಳಲ್ಲಿ ಈ ಹಬ್ಬವಿದೆ. ಬಂಗಾಲದಲ್ಲಿ
...ತುಂಬ 'ಜೇಟ ಪ್ರಚಲಿತದಲ್ಲಿರುವ ಕತ್ತ
...ರು 'ಪತ್ರಧಾತು' ಮತ್ತು 'ಗರ್ಭಧಾತು'
...ವಿದರ ಮಂಡಲಗಳನ್ನು ಚಿತ್ರಿಸಿ ಅವುಗಳಲ್ಲಿ
...ಪತಿಗೆ ಹಿಡಿಸ್ಸ ಸ್ಥಾಪಿಸಿತ್ತು ಪೂಜಿಸುತ್ತಾರೆ.
...ಂಗಣೇಶ' ಎಂಬ ಅನೇಕ ಮುಖವುಳ್ಳ
...ರು ಪ್ರತಿಮಾಕೃತಿಗಳನ್ನು ಸ್ಥಾಪಿಸಿ ಪೂಜಿಸುತ್ತಾರೆ.
...ದು ಗಣಪತಿಯ ಕಲ್ಪನೆಯಿಂದಲೇ ಬಂದದ್ದು.

ನವರಾತ್ರಿ :— ನವರಾತ್ರಿಗಳ ಕೊನೆಯೇ ...ಜಯದಶಮಿ ಅಥವಾ ದಸರೆ ಇದನ್ನು ...ರತವಾದ್ಯಂತ ಜನರು ಬಹು ಹಿಂದಿನಿಂದ ಆಚ...ರಿಸುತ್ತಾರೆ. ಶಕ್ತಿಯ ಉಪಾಸನೆಗೆ ಈ ಹಬ್ಬ...ದಲ್ಲಿ ಹೆಚ್ಚು ಮಹತ್ವವಿದೆ. ದುರ್ಗಾದೇವಿಯ ...ರಾಧನೆಯನ್ನು ಮತ್ತು ಪ್ರಾರ್ಥನೆಯನ್ನು ನಾವು ...ಮಾಡುತ್ತೇವೆ. ಅಶ್ವಿನಮಾಸದ ಪರ್ಯಂತ ...ಶುಕ್ಲಪಕ್ಷ ಆಶ್ವಿನಯನ್ನು ಮಾಡಿ ...ಪ್ರಾರಂಭವಾಗುತ್ತದೆ. ಅಶ್ವಿನಶುಕ್ಲ ಪ್ರತಿ...ಪದೆಯೇ ನವರಾತ್ರಿಯ ಮೊದಲು ರಾತ್ರಿ. ...ತಲೇ, ನಮ್ಮ ದೇಶದ ಕೆಲ ಭಾಗಗಳಲ್ಲಿ ...ಯನ್ನು ಪ್ರತೀಕವೆಂದು ಪರಿಶುದ್ಧ ಮತ್ತು ...ದರ ಕುಮಾರಿಕೆಯರನ್ನು ಪ್ರತಿದಿವಸ ಒಬ್ಬೊ...ರನ್ನು ಕರೆದು ಪೂಜಿಸುತ್ತಾರೆ. ಕೆಲವರು ...ದೇ ದಿವಸ ಒಂಭತ್ತು ಕುಮಾರಿಕೆಯರನ್ನು ...ರಿದು ಪೂಜಿಸುವ ಪರಿಪಾಠವನ್ನು ಇಟ್ಟುಕೊಂಡಿ...ದ್ದಾರೆ. ಪಾರ್ವತಿಯೇ ಈ ಶಕ್ತಿಯ ವಿವಿಧ ...ರೂಪವನ್ನು ತಾಳುತ್ತಾಳಂತೆ. ಅವಳು ಮಹಾ ಕಾಳಿಯಾಗಿ, ಸಿಂಹವಾಹಿನಿ ಮಹಿಷಮರ್ದಿನಿಯಾಗಿ, ಚಾಮುಂಡಿಯಾಗಿ, ಕಾಳಿಯಾಗಿ, ನಂದಿನಿಯಾಗಿ, ರಕ್ತದಂತಿಯಾಗಿ, ಶಾಕಾಂಬರಿಯಾಗಿ, ದುರ್ಗೆಯಾಗಿ ಹೀಗೆ ಒಂಭತ್ತು ಅವತಾರ ತಾಳಿ, ದೇವರು ಕೊಲ್ಲಲು ಅಸಮರ್ಥರಾದಾಗ ರಾಕ್ಷಸರನ್ನು ಕೊಂದು ಲೋಕಕ್ಕೆ ಉಪಕಾರ ಮಾಡಿದ್ದಾಳೆ. ಅವಳ ಪೂಜೆಗೆ ಮತ್ತು ಒಂಭತ್ತು ಅವತಾರಗಳ ಸ್ಮರಣೆಗೆ ಒಂಭತ್ತು ದಿವಸ ಅವಳ ಪೂಜೆಯನ್ನು ಜನರು ಮಾಡುತ್ತಾರೆ.

ಮೈಸೂರಿನ ದಸರೆಯು ರಾಜಹಬ್ಬ. ರಾಜರು ಅಂದಿನವರೆಗೂ ಅಂದರೆ ಒಂಭತ್ತು ದಿವಸ ರಾಜ್ಯದಲ್ಲಿಯ ಸೇವೆಗಳನ್ನು ಗಣಿಸಿ, ತಮ್ಮ ವೈಭವವನ್ನು ಹಬ್ಬಗಳ ಆಚರಣೆಯಿಂದ ಪ್ರದರ್ಶಿಸಿ, ಹತ್ತನೆಯ ದಿವಸ ನಾಡಿನ ಗಡಿಯನ್ನು ದಾಟಿ ದಂಡಯಾತ್ರೆ ಮಾಡುತ್ತಿದ್ದರು. ದಂಡಯಾತ್ರೆ ಮಾಡಿ, ಸುಲಿದು ತಂದ ಸಂಪತ್ತನ್ನು ಪ್ರಜೆಗಳಲ್ಲಿ ಹಂಚುತ್ತಿದ್ದರೆಂದು ಪ್ರತೀತಿಯುಂಟು. ಅಂತಲೇ ನಾವಿಂದು ನಮ್ಮ ಗಡಿಯನ್ನು ದಾಟುವುದನ್ನು ಕಲಿಯುತ್ತೇವೆ. ನಮಗೆ ದಂಡಯಾತ್ರೆ ಮಾಡಿ ಕನಕವನ್ನು ಸುಲಿದು ತರಲಾಗದ್ದಕ್ಕೆ ಶಮಿಯನ್ನು ತರುತ್ತೇವೆ. ಅದರಿಂದ ಇಂದು ಪರಸ್ಪರರು ಶಮಿಯನ್ನಿತ್ತು ಹಿಂದೆ ರಾಜರು ಕೊಡುತ್ತಿದ್ದ ಕನಕದ ಕಲ್ಪನೆಯನ್ನು ಕಂಡುಕೊಳ್ಳುತ್ತೇವೆ. ಶಮೀವೃಕ್ಷದ ಎಲೆಗಳು ಅಂದು ಬಂಗಾರದ ಎಲೆಗಳಾಗಿರುತ್ತವಂತೆ. ಪೂರ್ವದಲ್ಲಿ ರಘುರಾಜನು ಒಬ್ಬ ಋಷಿಗೆ ಕೆಲ ಸಂಪತ್ತನ್ನು ಕೊಡಲು ವಚನವಿತ್ತು, ಭಾಂಡಾರಕ್ಕೆ ಬಂದು ನೋಡಿದಾಗ ವಚನವಿತ್ತಷ್ಟು ಸಂಪತ್ತು ಅವನ ಭಾಂಡಾರದಲ್ಲಿ ಇದ್ದಿರಲಿಲ್ಲ. ಆದರೆ ಋಷಿಗಿತ್ತ ವಚನವನ್ನು ಪೂರೈಸಲೇ ಬೇಕಿತ್ತು. ಬರುವಾಗಿ ಹೋಗಿ, ಇಂದ್ರನ ರಾಜಧಾನಿಯಾದ ಅಮರಾವತಿಯಲ್ಲಿ ಸಂಪತ್ತಿದೆಯೆಂದು ತಿಳಿದು ಒಂದು ದಿನ ಅಮರಾವತಿಯನ್ನು ಸುಲಿಯಲು ಸಿದ್ಧನಾದನು. ಈ ಮಾತೇ ಕೇಳಿ ಇಂದ್ರಕುಬೇರರಿಬ್ಬರೊಡನೆ ಕಾದಾಡಲು ಅಂಜಿದರು. ಅಂತಲೇ ಅಯೋಧ್ಯಾ ನಗರದಲ್ಲಿಯ ಶಮೀವೃಕ್ಷದಲ್ಲಿ ಬಂಗಾರದ ಮಳೆ ಕರೆದು, ಎಲೆಗಳೆಲ್ಲಾ ಬಂಗಾರದವುಗಳಾಗಿ ಮಾಡಿದನಂತೆ. ಅಂದಿನಿಂದ ಈ ಶಮಿಯು ನಮಗೆ ಬಂಗಾರವಾಗಿದೆ. ನಮ್ಮ ವಿಜಯನಗರದ ರಾಜರ ಕಾಲಕ್ಕೆ ಈ ಹಬ್ಬಕ್ಕೆ ಹೆಚ್ಚು ಮಹತ್ವವಿತ್ತು. ಅವರ ಬಳಿಯಿಂದ ರಾಜ್ಯಲಕ್ಷ್ಮಿ ಸ್ವಸ್ಥಳಕ್ಕೆ ಬಂದಮೇಲೆ ಅಲ್ಲಿನ ದೊರೆಗಳು ಬಹು ವಿಜೃಂಭಣೆಯಿಂದ ಇದನ್ನು ಆಚರಿಸುತ್ತಾರೆ.

ದೀಪಾವಳಿ :— ದೀಪಾವಳಿಯನ್ನು ನವರಾತ್ರಿಯಂತೆ ನಾಡಿನ ತುಂಬ ಆಚರಿಸುವದರಿಂದ ದೀಪಾವಳಿಯೆಂದರೆ ಎಲ್ಲ ಹಬ್ಬಗಳಿಗಿಂತಲೂ ಒಂದು ಸಂಭ್ರಮದ ಹಬ್ಬ. ಲೋಕಕಂಟಕನಾದ ನರಕಾಸುರನನ್ನು ಕೃಷ್ಣನು ಕೊಂದ ಸಂತೋಷಕ್ಕಾಗಿ ನರಕ ಚತುರ್ದಶಿಯನ್ನು ಆಚರಿಸುತ್ತೇವೆ. ಶ್ರೀರಾಮನು ತನ್ನ ಹದಿನಾಲ್ಕು ವರುಷಗಳ ವನವಾಸವನ್ನು ಕೊನೆಗೊಳಿಸಿ ದೀಪಾವಳಿಯಂದು ಅಯೋಧ್ಯೆಗೆ ಮರಳಿಬಂದು ಪಟ್ಟಾಭಿಷೇಕವನ್ನು ಮಾಡಿಸಿಕೊಂಡನಂತೆ. ಬಲಿಯು ದಾನಿಯಿದ್ದುದರಿಂದ ತನ್ನ ಸಾಮರ್ಥ್ಯ ಮತ್ತು ಉದಾರತೆಯ ಮೂಲಕ ಇಂದ್ರನ ಪಟ್ಟಣವನ್ನು ಆಕ್ರಮಿಸಿ ಅವನ ಸಿಂಹಾಸನವನ್ನೇರಲು ಹವಣಿಸಿದನು. ಬಲಿಯು ರಾಕ್ಷಸನಿದ್ದು, ಸ್ವರ್ಗಕ್ಕೆ ಹೋಗುವದನ್ನು ಕಂಡು ಸಹಿಸದ ದೇವತೆಗಳು, ವಿಷ್ಣುವನ್ನು ಬೇಡಿಕೊಳ್ಳಲು, ಅವನು ಬಲಿಯ ತಲೆಯಮೇಲೆ ಕಾಲಿಟ್ಟು ಪಾತಾಳಕ್ಕೆ ಅಟ್ಟಿದನು. ಲಕ್ಷ್ಮಿಯು ಬಲಿಯ ಸತ್ಕಾರ್ಯಕ್ಕೆ ಮೆಚ್ಚಿ ಅವನಿಗೆ ದಯೆತೋರಿಸಬೇಕೆಂದು ಬೇಡಿಕೊಂಡಳು. ಅದಕ್ಕೆ ವಿಷ್ಣುವು, ಮೂರು ದಿವಸ ಭೂಮಿಗೆ ಬಂದು ಆಳಲು ವರವನಿತ್ತನು. ಅಂತಲೇ ಬಲಿಪಾಡ್ಯವೆಂದು ನಾವು ಕರೆಯುತ್ತೇವೆ. ಅದರಂತೆ ಭಾವಬಿದಿಗೆ. ಅಂದು ಸಹೋದರರು ಸಹೋದರಿಯರ ಮನೆಗೆ ಹೋಗಿ ಅವರಲ್ಲಿ ಊಟಮಾಡಿ, ಆರತಿ ಮಾಡಿಸಿಕೊಂಡು ಬರುತ್ತಾರೆ. ಒಮ್ಮೆ ಯಮರಾಜ ತನ್ನ ತಂಗಿ ಯಮುನೆಯ ಮನೆಗೆ ಹೋದನು. ಅವಳು ಸಂಭ್ರಮದಿಂದ ಅವನನ್ನು ಬರಮಾಡಿಕೊಂಡು ಊಟಕ್ಕೆ ಹಾಕಿ ಹೋಗುವ ಮುಂದೆ ಆರತಿಮಾಡಿ ಅವನ ಹಣೆಗೆ ಕುಂಕುಮವಿಟ್ಟಳು. ಆ ತಿಲಕವು ಯಮರಾಜನಿಗೆ ರಕ್ಷೆಯಾಯಿತಂತೆ. ಅಂತಲೆ ಸೋದರಿಯರು ತಮ್ಮ ಸೋದರರಿಗೆ ತಿಲಕವಿಟ್ಟು ಅವರನ್ನು ಯಮನಬಾಧೆಯಿಂದ ಉಳಿಸುವರು. ಈ ರೀತಿ ಐದುದಿವಸಗಳ ಈ ಹಬ್ಬಕ್ಕೆ ಹೆಚ್ಚಿನ ಅರ್ಥವಿದೆ. ಪುರಾಣಯುಗದಲ್ಲಿ ಹೆಚ್ಚಿನ ದಂತಕತೆಗಳು ಹುಟ್ಟಿ, ಈ ಹಬ್ಬದ ಬಗ್ಗೆ ವಿವಿಧ ಕತೆಗಳನ್ನು ಹೆಣೆದಿದ್ದಾರೆ. ದೀಪಾವಳಿ ಲಕ್ಷ್ಮೀದೇವಿಯ ಪೂಜೆಗೆ ಮೀಸಲಿಟ್ಟ ಹಬ್ಬವೆನ್ನಬಹುದು. ದೀಪಾವಳಿಯ ಬಗ್ಗೆ ಅನೇಕ ದಂತಕತೆಗಳಿದ್ದರೂ, ಅವುಗಳ ಉದ್ದೇಶವು ಒಂದೇ. ದೀಪಾವಳಿಯು

ಕಾಲಕ್ಕೆ ಮನೆಗಳನ್ನು ಸ್ವಚ್ಛಗೊಳಿಸಿ, ದೀಪಗಳಿಂದ ಅಲಂಕರಿಸಿ ಲಕ್ಷ್ಮಿ ಮತ್ತು ವಿಷ್ಣುವನ್ನು ಪೂಜಿಸುವರು.

ಕಾರ್ತಿಕ ಪ್ರತಿಪದೆ, ಉತ್ತರ ಭಾರತೀಯರಿಗೆ ಯುಗಾದಿಯಂತೆ ವರ್ಷಾರಂಭದ ದಿನ. ಶಕನು ಭರ್ತೃಹರಿಯ ರಾಜ್ಯದಲ್ಲಿ ಹೊಕ್ಕು ತೊಂದರೆಯು ನ್ನಿತ್ತಾಗ ಅವನ ತಮ್ಮನಾದ ವಿಕ್ರಮಾದಿತ್ಯನು ಶಕನನ್ನು ಸೋಲಿಸಿ ಹೊರಗಟ್ಟಿದನು. ಭರ್ತೃಹರಿಯು ತನ್ನ ತಮ್ಮನಾದ ವಿಕ್ರಮನಿಗೆ ರಾಜ್ಯವನ್ನು ಕೊಟ್ಟು ತಾನು ತಪಸ್ಸಿಗೆ ಹೋದನು. ಮುಂದೆ ವಿಕ್ರಮನು ೧೦೦ ವರ್ಷಕಾಲ ರಾಜ್ಯವಾಳಿ ಸ್ವರ್ಗಕ್ಕೆ ಹೋದನು. ಭಾರತೀಯರು ೨೦೦೦ ವರ್ಷಗಳಿಂದಲೂ ಸ್ವಾತಂತ್ರ್ಯದ ಸಂಭ್ರಮಕ್ಕಾಗಿ ಈ ಪ್ರತಿಪದೆಯನ್ನು ಆಚರಿಸುತ್ತ ಬಂದಿದ್ದಾರೆ. ನರಕಚತುರ್ದಶಿ ಪ್ರತಿಪದೆ, ಯಮದ್ವಿತಿಯಾ, ಭಾವ ಬಿದಿಗೆ ದೀಪಾವಳಿಯ ಅರ್ಥಪೂರ್ಣ ಹಬ್ಬಗಳು.

ಸಂಕ್ರಮಣ:— ವಿಶಿಷ್ಟ ರೀತಿಯ ಹಬ್ಬವಾದ ಈ ಸಂಕ್ರಮಣವು ಬಹುಶಃ ಜಾನೇವರಿ ೧೪ ಕ್ಕೆ ಬರುತ್ತದೆ. ಇಲ್ಲಿ ಪೂರ್ವ ಪಶ್ಚಿಮ ಪಂಚಾಂಗಗಳ ಸಮ್ಮಿಲನವಿದೆಯೆಂದು ಅನಿಸುತ್ತದೆ. ಈ ಪರ್ವ ಕಾಲದಲ್ಲಿ ರವಿಯು ಮಕರರಾಶಿಯನ್ನು ಪ್ರವೇಶಿಸುತ್ತಾನೆ. ಅರ್ಥಾತ್ ರವಿಯು ತನ್ನ ಪ್ರದಕ್ಷಣೆಯ ದಿಶೆಯನ್ನು ಬದಲಿಸುತ್ತಾನೆ. ಅಂದು ಉತ್ತರಾಯಣ; ರವಿಗೆ ವರುಷದ ಮೊದಲನೇ ದಿವಸ. ರವಿಯಲ್ಲಿ ಈ ಬದಲಾವಣೆ ಅಂದಾಗುತ್ತದೆ. ಅಂತಲೇ ಈ ಸಂಕ್ರಮಣ ಹಬ್ಬವನ್ನು ಭಾರತದಲ್ಲಿ ಎಲ್ಲ ಪ್ರಾಂತೀಯರೂ ಆಚರಿಸುತ್ತಾರೆ. ಪುಷ್ಯ ಮಾಸದಲ್ಲಿ ಮೊದಲಿನ ೧೫ ದಿವಸ ಹಿಂದುಗಳು ಯಾವ ಮಂಗಲ ಕಾರ್ಯಗಳನ್ನೂ ಮಾಡಬಾರದೆಂಬ ಸಂಪ್ರದಾಯವಿದೆ. ಸಂಕ್ರಮಣದ ಪ್ರಾರಂಭವೆಂದರೆ ಅದರ ಕೊನೆ. ಮಂಗಲ ಕಾರ್ಯಗಳನ್ನು ಮಾಡಲು ಅಥವಾ ಅದರ ಬಗ್ಗೆ ವಿಚಾರ ಮಾಡಲಿಕ್ಕಾದರೂ ಸಮಯ ಪ್ರಾಪ್ತಿಯಾಗುವದೆಂದು ಜನರು ಆನಂದದಿಂದ ಈ ಹಬ್ಬವನ್ನು ಮಾಡುತ್ತಾರೆ. ಸಂಕ್ರಮಣದ ಜೊತೆ ಬರುವ ಹಬ್ಬ ಭೋಗಿ. ಇಂದ್ರದೇವನ ಪೂಜೆಗೆ ಮೀಸಲಿಟ್ಟ ದಿವಸ. ಮಳೆಯ ಅಧಿದೇವತೆಯಾದ ಇಂದ್ರನನ್ನು ಅಂದು ಆವ್ಹಾನಿಸಿ ಪೂಜಿಸುತ್ತಾರೆ. ಮಣ್ಣಿನ ಮಕ್ಕಳು ಅಂದು ಹೊಲದಲ್ಲಾಗಲಿ, ಕಣದಲ್ಲಿಯಾಗಲಿ ಯಾವ ಕಾರ್ಯ ಮಾಡದೇ, ತಮ್ಮ ಒಕ್ಕಲತನದ ಸಾಧನೆಗಳನ್ನು ಇಂದ್ರನ ಪ್ರತೀಕವೆಂದು ಪೂಜಿಸುತ್ತಾರೆ. ಇಂದು ಎಳ್ಳು-ಬೆಲ್ಲಗಳನ್ನು ಪ್ರೀತಿಯ ಪ್ರತೀಕವೆಂದು ಒಬ್ಬರಿಗೊಬ್ಬರು ವಿನಿಮಯಿಸುತ್ತಾರೆ.

ಈ ಹಬ್ಬಗಳಲ್ಲದೆ ಭಾರತದಲ್ಲಿ ಗಂಗೆ, ಗೌರಿ, ಹನುಮ, ರಾಮ, ಶಿವ, ಹೀಗೆ ನೂರೆಂಟು ದೇವರ ಹೆಸರಿನಲ್ಲಿ ಹಬ್ಬಗಳಾಗುತ್ತವೆ. ನಮ್ಮ ಹಬ್ಬಗಳಲ್ಲಿ ಕುರುಡ ನಂಬಿಕೆಗಳಿವೆಯೆಂದು ನಮಗನಿಸುತ್ತದೆ. ಆದರೆ ಅದರ ಮಥಿತಾರ್ಥ ತಿಳಿದು ಆಚರಿಸಿದರೆ ಅದರಲ್ಲಿ ಸ್ವಾರಸ್ಯವಿದೆ. ಮದುವೆಯಾಗದ ಹೆಣ್ಣುಮಕ್ಕಳು ಭಾದ್ರಪದ ಮೂರನೆಯ ದಿವಸ 'ಹರತಾಳ' ವೆಂಬ ಪೂಜೆ ಮಾಡುತ್ತಾರೆ. ಒಮ್ಮೆ ಪಾರ್ವತಿಯ ತಂದೆ, ಪಾರ್ವತಿಯನ್ನು ವಿಷ್ಣುವಿಗೆ ಮದುವೆಮಾಡಿಕೊಡಬೇಕೆಂದು ನಿಶ್ಚಯಿಸಿದನಂತೆ. ಆದರೆ ಪಾರ್ವತಿಗೆ ಶಿವನನ್ನು ಮದುವೆಯಾಗಬೇಕಿತ್ತು. ಅವಳು ಮನೆಯಿಂದ ಓಡಿ ಹೋಗಿ (ಹರತಾಳ ಮಾಡಿ) ಅಡವಿಯಲ್ಲಿ ಶಿವನನ್ನು ಕುರಿತು ತಪಸ್ಸನ್ನು ಮಾಡಿದಳು. ಶಿವನು ತಪಸ್ಸಿಗೆ ಒಲಿದು ಮದುವೆಯಾದನು. ಯಾರು ಅಂದು ಈ ವ್ರತವನ್ನು ಆಚರಿಸುತ್ತಾರೋ ಅವರಿಗೆ ಬಯಸಿದ ಪುರುಷನೇ ಪತಿಯಾಗಿ ದೊರೆಯುವನೆಂದು ಪ್ರತೀತಿ. ಈ ರೀತಿ ಪ್ರತಿ ಹಬ್ಬಕ್ಕೂ ಹಿನ್ನೆಲೆಯಿದೆ. ಆ ಹಿನ್ನೆಲೆಯಲ್ಲಿ, ಅರ್ಥವಿದೆ, ಆನಂದವಿದೆ, ಬಾಳನ್ನು ಸಾಗಿಸಲು ಬೇಕಾಗುವ ಚೇತನವನ್ನೀಯುವ ಶಕ್ತಿಯಿದೆ. ನಮ್ಮ ನಾಡು ವಿವಿಧ, ಭಾಷೆ, ವಿವಿಧ ಸಂಸ್ಕೃತಿ ಮತ್ತು ವಿವಿಧ ಸ್ವಭಾವಗಳಿಗೆ ತವರೂರೆನಿಸಿದೆ. ಬೇರೆ ಬೇರೆ ಪ್ರಾಂತೀಯರು ತಮ್ಮ ಮನೋಗತವನ್ನು ಭಾಷೆಯ ಮೂಲಕ ತಿಳಿಸಲು ಅಸಮರ್ಥರಿರುವರು. ಆದರೆ ಹಬ್ಬಗಳ ಆಚರಣೆಯನ್ನು ಕಂಡಾಗ, ನಮ್ಮ ಸಂಸ್ಕೃತಿ ಅಖಂಡವಾಗಿ, ಅವ್ಯಾಹತವಾಗಿ ಅನಂತ ಕಾಲಕ್ಕೂ ಸಾಗಬಲ್ಲದೆಂಬ ವಿಶ್ವಾಸ ಬರುತ್ತಿದೆ. ಸಂಸ್ಕೃತಿ ಹುರಿಮಾಡಿದ ಒಂದೇ ಹಗ್ಗವೆಂದು, ವಿವಿಧ ಪ್ರಾಂತೀಯರ ಹಬ್ಬಗಳನ್ನು ನೋಡಿದಾಗ ನಮಗೆ ಕಂಡು ಬರುತ್ತಿದೆ. ಪ್ರಾಂಜಲಮನಸ್ಸಿನಿಂದ ಭಾರತೀಯ ಹಬ್ಬಗಳನ್ನು ಅವಲೋಕಿಸಿದಾಗ, ಅವುಗಳಲ್ಲಿ ಅಡಗಿದ ಸ್ವಾರಸ್ಯಮಯ ಸಂಗತಿ, ಪುರಾಣಗಳು, ದಂತಕತೆಗಳು, ನಮ್ಮ ನಾಡಿನ ಪ್ರಾಚೀನ ಸಂಸ್ಕೃತಿ, ನಮ್ಮ ಹಿರಿಯರ ವಿಶಾಲಮತಿ, ಅವರ ಸಾಮಾಜಿಕ ನೀತಿ, ಅವರ ಸೌಹಾರ್ದ ಭಾವನೆಗಳು ಮತ್ತು ನಮ್ಮನ್ನು ಮಾರ್ಗದರ್ಶನ ಮಾಡುವ ತತ್ವಗಳು ಕಂಡು ಬರುತ್ತವೆ. ಅಂತಲೇ ಭಾರತೀಯ ಹಬ್ಬಗಳಿಗೆ ಒಂದು ವಿಶಿಷ್ಟ ಸ್ಥಾನವು ಎಂದಿನಿಂದಲೂ ವಿಶ್ವದಲ್ಲಿ ಮೀಸಲಾಗಿಟ್ಟಿದೆ!

—◆—

ಪ್ರೇಯಸಿಗೆ ಬರೆದ ಪತ್ರಗಳು

ಲೇ: ಶ್ರೀ ಸುರೇಂದ್ರ ದಾನಿ ಹುಬ್ಬಳ್ಳಿ

★

ಕಾದಂಬರಿ- ಕತೆಗಳಲ್ಲಿ ಪ್ರೇಮ ಪತ್ರಗಳ ವಿವಿಧ ಬಗೆಗಳನ್ನು ನೋಡಿರಬಹುದು. ಆದರೆ ರಾಜಕಾರಣಿ ತನ್ನ ಪ್ರೇಯಸಿಯನ್ನು ರಾಣಿಯೆಂದು ಕರೆದು ಅದನ್ನು ಸಮರ್ಥಿಸುವ ರೀತಿಯನ್ನು, ವಿಜ್ಞಾನಿಯು ತನ್ನ ಟೆಸ್ಟ ಟ್ಯೂಬುಗಳಿಂದ ಪ್ರೇಮವನ್ನು ಅಳೆಯ ಹೊರಟ ಬಗೆಯನ್ನು, ತತ್ವಜ್ಞಾನಿಯು ಪ್ರೇಯಸಿಗಾಗಿ ತತ್ವತ್ಯಾಗಕ್ಕೂ ಸಿದ್ಧನಾಗುವದಾಗಿ ನಿರೂಪಿಸಿದ ವೈಖರಿಯನ್ನು ಇಲ್ಲಿ ಕಾಣಬಹುದು.

೧ ರಾಜಕಾರಣಿಯಿಂದ

ನನ್ನ ರಾಣೀ,

ರಾಜ್ಯಸಾಮ್ರಾಜ್ಯಗಳೆಲ್ಲ ಮಣ್ಣುಮುಕ್ಕಿ ಅರಸುಗಿರಸು ರಾಜಮಹಾರಾಜರುಗಳೆಲ್ಲ ಹೇಳಹೆಸರಿಲ್ಲದೆ ಹೋಗುತ್ತಿರುವ ಈ ಕಾಲದಲ್ಲಿ ನಿನ್ನನ್ನು 'ರಾಣೀ' ಎಂದು ಸಂಬೋಧಿಸುವದು ಕಾಲಮಾನಗತಿಗನುಸರಿಸಿದ ಸಂಗತಿಯಾಗಲಿಕ್ಕಿಲ್ಲವೆನೋ ಎಂದು ಸಂದೇಹ ಬರುತ್ತದೆ. ಆದರೇನು ? ಇನ್ನು ಮೇಲೆ ಸ್ವಾತಂತ್ರ್ಯ ಸಮತೆಯ ಈ ರಾಷ್ಟ್ರದಲ್ಲಿ "ರಾಜ-ರಾಣಿ"ಯರು ದರ್ಪ ದಬ್ಬಾಳಿಕೆಗಳ ಪ್ರತೀಕರಾಗಿರದೆ ಪ್ರೇಮ, ನಲ್ಮೆಯ ಮೂರ್ತಿಗಳಾಗಿರಲೆಂದು ನನ್ನ ಅಭಿಮತ.

ನಾನು ನಿನಗೆ ಹಿಂದಿನ ಓಲೆ ಬರೆದು ೨೦ ದಿನಗಳು ಸಂದುಹೋದವು. ಈ ಅವಧಿಯಲ್ಲಿ ನಮ್ಮ ಶಾಖಾರಹಿತ ಮಂತ್ರಿಗಳಾದ ಶ್ರೀ ಕೃಷ್ಣ ಮೆನನ್ನರು ಮೂರು ಸಲ ಕೈರೋ-ಲಂಡನ-ನ್ಯೂಯಾರ್ಕಗಳಿಗೆ ಹೋಗಿ ಬಂದರು ನಮ್ಮ ದೇಶದ ನಕಾಶವನ್ನೇ ಬದಲಿಸುವ ರಾಜ್ಯಪುನರ್ರಚನಾ ಕಾಯದೆಗೆ ಕಾರ್ಯಸ್ವರೂಪ ಕೊಡುವದಕ್ಕೆ ಅನೇಕ ಸಂವಿಧಾನ ತಿದ್ದುಪಡಿ ಕಾಯದೆಗಳು ವಿವಿಧ ರಾಜ್ಯವಿಧಾನ ಸಭೆಗಳಲ್ಲಿ ಸ್ವೀಕರಿಸಲ್ಪಟ್ಟವು. ನಮ್ಮ ಭಾವೀ (ಇನ್ನೆಲ್ಲಿಯ ಭಾವೀ ? ಇಂದಿನ ಎಂದೆ ಬರೆಯಲೇ ?) ರಾಜಧಾನಿ ಬೆಂಗಳೂರಿನಲ್ಲಿಯ ರಸ್ತೆಸಾರಿಗೆಯು ರಾಷ್ಟ್ರೀಕರಿಸಲ್ಪಟ್ಟಿತು. ಪ್ರಧಾನ ಮಂತ್ರಿ ನೆಹರೂರವರು ಸೌದಿ ಅರೇಬಿಯದ ಸಂಚಾರವನ್ನು ಪೂರೈಸಿಕೊಂಡು ಬಂದರು. ಆದರೆ ನಿನ್ನಿಂದ ಒಂದು ಓಲೆ ಮಾತ್ರ ನನ್ನ ಕೈಸೇರಲಿಲ್ಲ. ಇದಕ್ಕೆ ಕಾರಣವೇನು? ಮತ್ತು ಹೊಣೆಗಾರರಾರು?

ನಿನಗಾಗಿ ನನ್ನಲ್ಲಿದ್ದ ಪ್ರೇಮದ ಬಗ್ಗೆ ಮಾತ್ರ ನೀನು ಸಂಶಯಪಟ್ಟಿಲ್ಲವಷ್ಟೇ? ಇದೇ ದೀಪಾವಳಿ ದಿನದಂದು ಹೊಸ ರಾಜ್ಯಗಳುದಯವಾಗುವದು ಎಷ್ಟೊಂದು ಸತ್ಯವೋ ಭಾರತದಲ್ಲಿ ಸಮಾಜವಾದೀ ಸ್ವರೂಪದ ಸಮಾಜ ನಿರ್ಮಿತವಾಗುವದು ಯಾವ ರೀತಿ ನಿಜವೋ ಇನ್ನು ಮುಂಬರುವ ಅನೇಕ ಚುನಾವಣೆಗಳಲ್ಲಿ ಕಾಂಗ್ರೆಸ್ಸೇ ಯಶಗಳಿಸುವದು ಹೇಗೆ ಶಾಶ್ವತವೊ ನಾನು ನಿನ್ನನ್ನು ಪ್ರೀತಿಸುವದು ಅಷ್ಟೇ ಸತ್ಯ ನಿಜ ಮತ್ತು ಶಾಶ್ವತವೆಂದು ನಂಬು. ಜಗತ್ತಿನಲ್ಲಿ ಮೂರನೇ ಮಹಾಯುದ್ಧ ಸಂಭವಿಸಬಹುದು ; ರಶಿಯ ಅಮೇರಿಕಗಳು ಮಿತ್ರರಾಷ್ಟ್ರಗಳಾಗಬಹುದು; ಬ್ರಿಟನ್ ಮತ್ತೊಂದು ಸಾಮ್ರಾಜ್ಯವನ್ನು ಸ್ಥಾಪಿಸಬಹುದು, ಹಿಟ್ಲರ ಮುಸಲೋನಿಗಳು ಮತ್ತೆ ತಲೆಯೆತ್ತಬಹುದು ; ಆದರೆ ರಾಣೀ ನಿನ್ನ ಮೇಲಿರುವ ನನ್ನ ಪ್ರೇಮ ಕಡಿಮೆಯಾದೀತೆಂಬುದು ಮಾತ್ರ ಅಸಂಭಾವ್ಯವೆಂಬದನ್ನು ನಾನು ಘಂಟಾಘೋಷವಾಗಿ ಸಾರಬಯಸುತ್ತೇನೆ.

ಭಾರತದ ರಾಷ್ಟ್ರಪತಿಸ್ಥಾನ ಮಹಿಳೆಗೆ ದೊರೆಯುವದು ಎಂದೊ ಏನೊ ! ಆದರೆ ನನ್ನ ಹೃದಯರಾಷ್ಟ್ರದಲ್ಲಿ ಅತ್ಯುಚ್ಚ ಗೌರವದ ಸ್ಥಾನವನ್ನು ನಿನಗೇ ಮೀಸಲಾಗಿರಿಸಿದ್ದೇನೆ. ನನ್ನ ಪ್ರೇಮ ಸಾಮ್ರಾಜ್ಯದ ಹೃದಯ ಮತದಾರ ಸಂಘದಲ್ಲಿ ನಾನು ಎಷ್ಟೇ ಸಲ ಚುನಾವಣೆ ಉಪಚುನಾವಣೆಗಳನ್ನು ನಡೆಸಿದರೂ ಅವುಗಳಲ್ಲಿ ಪ್ರತಿಸಲವೂ ನೀನೇ ಅವಿರೋಧವಾಗಿ ಚುನಾಯಿತಳಾಗಿ ಬಂದಿರುವಿ. ಇದು ಪ್ರಜಾಪ್ರಭುತ್ವ ತತ್ವಕ್ಕೊಂದು ಹೊಸ ಮಾದರಿಯಾಗಿದೆ.

ಮಳೆ ಬಂದತ್ತ ಕೊಡೆ ಹಿಡಿಯುವ ಕಮ್ಯುನಿಸ್ಟ ಗತ್ತುಗಾರಿಕೆಯಾಗಲಿ ಕೇವಲ ತತ್ವವಿವೇಚನೆಯಲ್ಲಿಯೇ ವೇಳೆಗಳೆದು ವಾಸ್ತವಿಕತೆಯ ಅರಿವಿಲ್ಲದ ಶುದ್ಧ ಸಮಾಜವಾದಿಗಳ ರೀತಿಯಾಗಲಿ ನನಗೆ ಸಮ್ಮತವಿಲ್ಲ. ಇದ್ದು ಬಿದ್ದ ಸಾಧನ ಸಲಕರಣೆಗಳನ್ನು ಸಂಗ್ರಹಿಸಿ ನಿರ್ದಿಷ್ಟ ಯೋಜನೆಯನ್ನಯ ಮುಂದಡಿ ಇಡಬೇಕೆಂಬದೇ ನನ್ನ ದೃಢ ಅಭಿಮತ. ಆದ್ದರಿಂದಲೇ ನೀನು ಹಾಗಾಯಿತು, ಹೀಗಾಯಿತು ಎಂದು - ಚುನಾವಣೆಯಲ್ಲಿ ಬಿದ್ದವನು ತನ್ನ ಸೋಲಿಗೆ ಕಾರಣ ಹುಡುಕುವಂತೆ— ಏನಾದರೂ ನೆವ ಹೇಳದೆ ನೇರವಾಗಿ ನನ್ನ ಪತ್ರಕ್ಕೆ

ಉತ್ತರ ಬರೆವ ಕಾರ್ಯಕ್ಕೆ ಉಜ್ಜುಗಲಾಗಬೇಕೆಂದು ಕೇಳುತ್ತೇನೆ. ಇದರಲ್ಲಿ ನೀನು ಯಾವದೇ ಸಂಕುಚಿತ ದೃಷ್ಟಿಯವರ ಇಲ್ಲವೆ ನಿಶಿಷ್ಟ ಹಿತಸಂಬಂಧಗಳುಳ್ಳವರ ಪ್ರಚೋದನೆಗೆ ಬಲಿಯಾಗಬೇಡ. ಅಜಾಗರೂಕಳಾದರೆ ತುಂಬಾ ಹಾನಿಗೀಡಾಗಬಹುದೆಂದು ಇನ್ನೊಮ್ಮೆ ಎಚ್ಚರಿಸಬಯಸುತ್ತೇನೆ. ನಮ್ಮ ದೈನಂದಿನ ಚಟುವಟಿಕೆಗಳಲ್ಲೆಲ್ಲವೂ ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿರುವ ಇಂದಿನ ದಿನಗಳಲ್ಲಿ ಸದಾ ಜಾಗರೂಕತೆಯೇ ನಾವದಕ್ಕೆ ತೆತ್ತಬೇಕಾಗಿರುವ ಅನೌಲ್ಯ ಬೆಲೆ.

ಪ್ರೇಮದಧಿದೇವತೆಯ ಅಧ್ಯಕ್ಷತೆಯಲ್ಲಿ ನಿನ್ನ ಹೃದಯಮತನಾರಸಂಘನಲ್ಲಿ ನಡೆವ ಚುನಾವಣೆಯಲ್ಲಿಯೂ ಸದಾ ಅವಿರೋಧ ಆಯ್ಕೆಯನ್ನೇ ಹಂಬಲಿಸುವ

ನಿನ್ನ
ರಾಜ

೨ ವಿಜ್ಞಾನಿಯಿಂದ

ನನ್ನ ಪರೀಕ್ಷಾನಲಿಕೆಸಮಪ್ರಿಯ ಪದ್ಮಿನೀ,

ಯಾವ ಹೆಸರಿನಿಂದ ಕರೆದರೇನು? ಮೂಲ ವಸ್ತುವು ಒಂದೇ ಅಲ್ಲವೇ? ನನ್ನ ನಿನ್ನ ಪ್ರೇಮವು ನೀರಿನಲ್ಲಿರುವ ಆಮ್ಲಜನಕ ಪ್ರಾಣವಾಯುಗಳಲ್ಲಿರುವ ಪ್ರೇಮಕ್ಕಿಂತಲೂ ಹಿರಿದಾಗಿದೆ. ನನ್ನ ಹೃದಯಪ್ರಯೋಗಶಾಲೆಯಲ್ಲಿ ನಡೆಸಿದ ಎಲ್ಲ ಪ್ರಯೋಗಗಳಲ್ಲಿಯೂ ನಿನ್ನ ಪ್ರೇಮವು ಯಶಸ್ವಿಯಾಗಿ ಅವಿಭಾಜ್ಯ ಮೂಲವಸ್ತುವೆಂದು ಸಿದ್ಧವಾಗಿದೆ. ಈ ಪ್ರೇಮವೆಂಬುದು ಇಂದ್ರಿಯಗೋಚರವಾದ ಮೂಲ ವಸ್ತುವೇ ಆಗಿದ್ದರೆ ಅದನ್ನು ನಾನು ಶೋಧಿಸಿ ತೆಗೆದು ಜಗತ್ತಿನಲ್ಲಿರುವ ೯೯ನೇ ಮೂಲ ಧಾತುವು ಇದೇ ಎಂದು ಸಾರಿ ನೋಬೆಲ್ ಪಾರಿತೋಷಕ ಪಡೆಯುತ್ತಿದ್ದೆ.

ಮೊನ್ನೆ ನಿನ್ನ ಓಲೆ ಕೈಗೆ ಬಂದಾಗ ನನಗಾದ ಆನಂದವನ್ನು ಎಂತಹ ಸೂಕ್ಷ್ಮಮಾಪಕ ಯಂತ್ರದಿಂದಲೂ ಅಳೆಯಲು ಸಾಧ್ಯವಿಲ್ಲ. ಅಂದು ನನಗಾದ ಆನಂದೋದ್ರೇಕದಿಂದ ಪ್ರಯೋಗಶಾಲೆಯ ತುಂಬ ಕುಣಿದಾಡಿದ್ದೇ ಕುಣಿದಾಡಿದ್ದು. ಆರ್ಕಿಮಿಡಿಸನು ಹೊಸ ತತ್ವವೊಂದನ್ನು ಅರಿತುಕೊಂಡಾಗ "ಯುರೇಕಾ ಯುರೇಕಾ" ಎಂದು ಮೈಮೇಲಿನ ಬಟ್ಟೆಗಳ ಅರಿವಿಲ್ಲದೆ ಕುಣಿದಾಡಿದನಂತೆ. ಆದರೆ ಹೊಸ ಯಂತ್ರ ಶೋಧನೆಗೊಂದು ವಿಷಯ ದೊರೆಯಿತೆಂಬ ಆನಂದಾತಿರೇಕದಲ್ಲಿ ನಾನು ಗೋಡೆ ಟೇಬಲ್ಲುಗಳ ಅರಿವಿಲ್ಲದೆ ಎಲ್ಲಕ್ಕೂ ಢಿಕ್ಕಿ ಹೊಡೆಯುತ್ತ ಕುಣಿದಾಡಿದೆ. ಆ ಭಾವಾವೇಶದಲ್ಲಿ ಮೊನ್ನೆ ತಾನೇ ಸಿದ್ಧಪಡಿಸಿಟ್ಟಿದ್ದ ಹೊಸ ಮಿಶ್ರಣಕ್ಕೂ ಅತಿ ಪ್ರಯಾಸದಿಂದ ಸಂಗ್ರಹಿಸಿಟ್ಟಿದ್ದ ಎರಡು ಕಷ್ಟಲಭ್ಯವಾಯುಗಳಿಗೂ ನಾನು ಎರವಾಗಬೇಕಾಯಿತಲ್ಲದೆ ಒಂದು ಸ್ಪ್ರಿಂಗ ಬ್ಯಾಲನ್ಸ ಸಹ ಕೆಳಗೆ ಬಿದ್ದು ಕೆಟ್ಟುಹೋಯಿತು.

ನಿನ್ನ ಓಲೆಗಳು ಬಂದಾಗ ಮತ್ತು ನಿನ್ನನ್ನು ಪ್ರತ್ಯಕ್ಷ ಕಂಡಾಗ ನನಗಾಗುವ ಆನಂದವನ್ನು ಬರಿ ಶಬ್ದಗಳಲ್ಲಿ ಮಾತ್ರ ಬಣ್ಣಿಸದೆ ಇನ್ನು ಮೇಲೆ ಗ್ರಾಫ ಕಾಗದಗಳಲ್ಲಿ ಗೆರೆ ಎಳೆದು ನಿಶ್ಚಿತವಾಗಿ ನಮೂದಿಸಿಡಬೇಕೆಂದು ನಿಶ್ಚಯಿಸಿದ್ದೇನೆ. ಉಷ್ಣತೆಯನ್ನಳೆಯಲು ಉಷ್ಣತಾಮಾಪಕ ಯಂತ್ರವಿದೆ; ಹನೆಯ ಭಾರವನ್ನಳೆಯಲು ಹನೆಯ ಭಾರಮಾಪಕವಿದೆ. ವಿದ್ಯುತ್ತಿನ ಪ್ರಮಾಣವನ್ನಳೆಯಲು ವಿದ್ಯುತ್ ಮಾಪಕವಿದೆ. ಆದರೆ ನಮಗುಂಟಾದ ಆನಂದವನ್ನಳೆಯಲು ಸಂತೋಷಮಾಪಕಯಂತ್ರವೆಲ್ಲಿದೆ? ಇಂತಹ ಹೊಸದೊಂದು ಯಂತ್ರವನ್ನು ಶೋಧಿಸಬೇಕೆಂಬ ವಿಚಾರವು ತಲೆಯಲ್ಲಿ ಹೊಳೆದೇ ನಾನು ಮೇಲೆ ವಿವರಿಸಿದಂತೆ ಹುಚ್ಚೆದ್ದು ಕುಣಿದಾಡಿದ್ದು. ಈ ಯಂತ್ರದಲ್ಲಿಯೇ ತುಸು ಮಾರ್ಪಾಟನ್ನು ಮಾಡಿ ಪ್ರೇಮಮಾಪಕಯಂತ್ರವನ್ನು ರಚಿಸಬಹುದೆಂದು ನನ್ನ ನಂಬಿಗೆಯಿದೆ. ಪ್ರೇಮಮಾಪಕಯಂತ್ರದಲ್ಲಿ ಶೂನ್ಯಾಂಶದ ಕೆಳಗೂ ದರ್ಶಕಾಂಕಗಳನ್ನು ಗುರುತಿಸಿದಲ್ಲಿ ಪ್ರೇಮದ ವಿರುದ್ಧವಾದ ವೈರವನ್ನು ಅಳೆಯುವದು ಸಾಧ್ಯವಾಗುವದು. ಈ ಯಂತ್ರದ ಆಕಾರವನ್ನು ಸಹ ಸಾಧ್ಯವಿದ್ದ ಮಟ್ಟಿಗೆ ಅತಿ ಚಿಕ್ಕದನ್ನಾಗಿ ಮಾಡುವ ಯೋಚನೆ ಇಟ್ಟುಕೊಂಡಿದ್ದೇನೆ. ಇದನ್ನು ಯಾವಾಗಲೂ ಕೊರಳಲ್ಲಿರಿಸಿಕೊಂಡು ಅಡ್ಡಾಡಲು ಎಲ್ಲರಿಗೂ ಸಾಧ್ಯವಾಗಬೇಕೆಂದೇ ನನ್ನ ಉದ್ದೇಶ. ಈ ಯಂತ್ರವನ್ನು ನನ್ನ ಎದೆಗೆ ಹಚ್ಚಿಕೊಂಡರಾಯಿತು. ಅದಕ್ಕೆ ತಂತಿಯಮೂಲಕ ಜೋಡಿಸಿ ಕಿಸೆಯಲ್ಲಿಟ್ಟಿರುವ ಗಡಿಯಾರಮಾಪಕವಾದ ಯಂತ್ರದಲ್ಲಿ ನಿಮ್ಮ ಹೃದಯದಲ್ಲಿಯ ಭಾವನೆಗಳು ಅಂಕಿ ಅಂಶಗಳಲ್ಲಿ ದರ್ಶಿತವಾಗುವವು.

ರಾಸಾಯನಿಕ ಮಿಶ್ರಣ ಮತ್ತು ಭೌತಿಕ ಮಿಶ್ರಣಗಳಲ್ಲಿಯ ಅಂತರವೇನೆಂಬದನ್ನು ಕೂಡ ಅರಿಯದ ನಿನಗೆ ಇದೆಂತಹ ಅದ್ಭುತ ಶೋಧನೆಂಬುದರ ಕಲ್ಪನೆ ಕೂಡ ಬಂದಿರಲಿಕ್ಕಿಲ್ಲ. ಇದನ್ನು ನಾನು ಶೋಧ ಮಾಡಿ ಜಗತ್ತಿನೆದುರು ಇಟ್ಟ ಮರುದಿನವೇ ರಾಷ್ಟ್ರ ರಾಷ್ಟ್ರಗಳಲ್ಲಿಯ ತಿಕ್ಕಾಟ, ಘರ್ಷಣೆ, ಯುದ್ಧ ಮಹಾಯುದ್ಧಗಳು ಕೊನೆಗೊಳ್ಳುತ್ತವೆ. ಯಾರೂ ಪರಸ್ಪರರಲ್ಲಿಯ ಪ್ರೇಮ-ವೈರಗಳನ್ನು ಈ ಯಂತ್ರದ ಸಹಾಯದಿಂದ ಕೂಡಲೇ ಅರಿತುಕೊಂಡು ಅದರ ಪರಿಹಾರಕ ಯೋಜನೆಗಳನ್ನು ಕೈಕೊಳ್ಳಬಹುದು. ದ್ವೇಷ ವೈರಗಳನ್ನು ಉಚ್ಚ ಮಟ್ಟಕ್ಕೆ ಬೆಳೆಯಗೊಟ್ಟು ಅದರ ಪರಿಣಾಮವಾಗಿ ಅಣುಬಾಂಬ, ಹೈಡ್ರೋಜನ ಬಾಂಬಗಳನ್ನು ಪ್ರಯೋಗಿಸಿ ಮಾನವ ಜನಾಂಗದ ವಿನಾಶಕ್ಕೇ ಕಾರಣರಾಗುವ ಪ್ರಸಂಗವೇ ಬರುವದಿಲ್ಲ. ಮೋಸ ದಂಭಾಚಾರಗಳಿಗೆ ಎಡೆಯೇ ಉಳಿಯುವದಿಲ್ಲ. ಇಂದಿನಂತೆ ಪ್ರೇಮಭಂಗ ಪ್ರಕರಣಗಳು ಜೀವಹರಣದಲ್ಲಿ ಪರಿಣಮಿಸುವದಿಲ್ಲ. ಇದು ಅಣು ಸ್ಫೋಟಕ್ಕಿಂತಲೂ ಹೆಚ್ಚು ಕ್ರಾಂತಿಕಾರಿಯಾದ ಶೋಧವೆನಿಸುವದು. ನನ್ನ ಪ್ರಯೋಗವು ಬಿಕಿನಿ ಪ್ರಯೋಗಕ್ಕಿಂತ ಹಿರಿದಾದ ಪ್ರಯೋಗವೆನಿಸುವದು. ಈ ಹೊಸ ಶೋಧದ ಹಿನ್ನೆಲೆ ಮತ್ತು ಕ್ರಮಗಳನ್ನೊಳಗೊಂಡ ನೀಳವಾದ ಪತ್ರವನ್ನು ಹಿಂದೀ ವಿಜ್ಞಾನ ಸಂಶೋಧನ ಶಾಲೆಯ ಅಧಿಪತಿಗಳಿಂದ ಪಂ. ನೆಹರೂರವರಿಗೆ ಕಳಿಸಿದ್ದೇನೆ. ಶೋಧವಾದನಂತರ ಇದರ ಪೂರ್ಣ ಒಡೆತನ ನನಗೇ ಸೇರಬೇಕೆಂದು ಭಾರತ ಸರಕಾರಕ್ಕೂ ಬರೆದಿದ್ದೇನೆ.

ಪದ್ಮಿನೀ, ಸಾಕ್ರೆಟಿಸ್, ಅರಿಸ್ಟಾಟಲ್, ವಿವೇಕಾನಂದರಂತಹ ತತ್ವಜ್ಞಾನಿಗಳಾಗಲಿ, ಕ್ರೈಸ್ತ, ಬುದ್ಧ, ಗಾಂಧಿಯವರಂತಹ ತತ್ವಜ್ಞಾನಿಗಳಾಗಲಿ, ಮಾರ್ಟಿನ್ ಲೂಥರ್, ಅಬ್ರಾಹಾಂ

ಲಿಂಕನ್, ರಾಜಾ ರಾಮಮನೋಹರರಾಯರಂತಹ ಸಮಾಜ ಸುಧಾರಕರಾಗಲಿ ಕೈಕೊಂಡು ವಿಫಲನಾದಂತಹ ಅದ್ಭುತ ಸಮಾಜಕ್ರಾಂತಿಯೊಂದನ್ನು ಹುಟ್ಟಿಸಬಲ್ಲ, ಮತ್ತು ಲೆನಿನ್, ವಿಲ್ಸನ್, ನೆಹರೂರವರು ಸ್ಥಾಪಿಸಲಸಾಧ್ಯವಾದ ಜಾಗತಿಕ ಶಾಂತಿಯನ್ನು ಪ್ರಸ್ಥಾಪಿಸಬಲ್ಲ ಹೊಸದೊಂದು ಯಂತ್ರದ ಶೋಧದ ಪ್ರಯೋಗದಲ್ಲಿ ನಾನಿನ್ನು ತೊಡಗುವವನಿದ್ದೇನೆ. ಆದ್ದರಿಂದ ಇನ್ನುಮೇಲೆ ಅದರಲ್ಲಿಯೇ ನನ್ನ ಲಕ್ಷ್ಯವು ಕೇಂದ್ರೀಕೃತವಾಗುವದು ಸ್ವಾಭಾವಿಕವಿದೆ. ಈ ಅವಧಿಯಲ್ಲಿ ನಾನು ನಿನಗೆ ಓಲೆ ಬರೆಯಲು ತಡಮಾಡಿದರೆ ಅಥವಾ ವಿಸ್ಮರಣೆಯಾದರೆ ನೀನು ಕೋಪಿಸಿಕೊಳ್ಳಬೇಡ. ನೀನು ಮಾತ್ರ ಆಗಾಗ ನಿನ್ನಲ್ಲಿ ಉಂಟಾಗುವ ಭಾವೋದ್ರೇಕಗಳನ್ನು ವಿವರಿಸಿ ಪತ್ರ ಬರೆಯುತ್ತಲೇ ಇರು. ಅವುಗಳನ್ನು ನನ್ನ ಪ್ರಯೋಗದ ಅಧಿಕೃತ ಅಂಕಿ ಸಂಖ್ಯೆಗಳೆಂದು ತಿಳಿದು ನಾನು ಪ್ರಯೋಗವನ್ನು ಮುಂದುವರಿಸುತ್ತೇನೆ.

ನಾನು ನಿನಗೆ ಓಲೆ ಬರೆಯದಿದ್ದರೂ ನಿನ್ನ ಪ್ರೇಮ ಅಯಸ್ಕಾಂತವು ನನ್ನ ಹೃದಯಲೋಹವನ್ನು ನಿರಂತರವಾಗಿ ಆಕರ್ಷಿಸುತ್ತಿಲ್ಲವೆಂದು ನಾನೆಂತು ಹೇಳಲಿ? ನಾನು ಕೈಕೊಂಡಿರುವ ಈ ಪ್ರಯೋಗವು ಮುಗಿದಕೂಡಲೇ ನಾವು ಮದುವೆಯಾಗಬಹುದೆಂದು ಆಶ್ವಾಸನ ಕೊಡುತ್ತೇನೆ.

ಪದಾರ್ಥಗಳಲ್ಲಿಯ ಅನನುಭೂತೋಷ್ಣತೆಯಂತೆ ಯಾವಾಗಲೂ ನಿನ್ನ ಹೃದಯದಲ್ಲಿಯೇ ಇರುವ

ನಿನ್ನ
ಅಭಿನವ ಐನ್‌ಸ್ಟೀನ್

೩ ತತ್ತ್ವಜ್ಞಾನಿಯಿಂದ

ತ್ರೈಲೋಕ್ಯಾತೀತ ಸುಂದರೀ,

ಈ ನಶ್ವರ ದೇಹದ ಸುಖಾಭಿಲಾಷೆಯಿಂದ ಇಂದ್ರಿಯಪಾಶದಲ್ಲಿ ಬಂಧಿತನಾಗಬಾರದೆಂಬದನ್ನು ಒಪ್ಪಿದರೂ ನಿನ್ನ ಬಗ್ಗೆ ಮಾತ್ರ ಅಪವಾದವುಂಟೆಂದು ನನ್ನ ನಂಬುಗೆ. 'ಸಂಶಯಾತ್ಮಾ ವಿನಶ್ಯತಿ' ಎಂದು ಶ್ರೀಕೃಷ್ಣ ಹೇಳಿದ್ದಾನೆ. ತದನುಸಾರವಾಗಿ ನನ್ನಲ್ಲಿ ನಿನ್ನ ಬಗ್ಗೆ ಸಂದೇಹ ಲವಲೇಶವಾದರೂ ಇಲ್ಲ.

ಪ್ರೇಮವು ಅರಿಷಡ್ವರ್ಗಗಳ ಮಾಲಿಕೆಯಲ್ಲಿಯ ಒಂದು ಮಣಿಯೋ, ಅಥವಾ ಪರೋಕ್ಷಜ್ಞಾನ ಪಥದರ್ಶಿಯೋ ಎಂಬ ವಿಚಾರ ಪುನಃ ಪುನಃ ನನ್ನ ತಲೆಯಲ್ಲಿ ಸುತ್ತುತ್ತಲೇ ಇರುತ್ತದೆ. ಇದೊಂದು ಅಗಮ್ಯ ಗಹನವಾದ ವಿಷಯವೆಂದೆನಿಸಿದರೂ ಸಾಧಕನಿಗೆ ಸಹಜಸಾಧ್ಯವಾದದ್ದಿರುತ್ತದೆ. ಊಹೆ ತರ್ಕಗಳಿಗೆ ನಿಲುಕಲಾರದ್ದಾದರೂ ನಿದಿಧ್ಯಾಸಗಳ ಅಳವಿನಲ್ಲಿರುತ್ತದೆ.

ಯೋಗಿಭಿರ್ಧ್ಯಾನಗಮ್ಯಂ ಎಂದು ಪರಮಾತ್ಮನ ವಿಷಯವಾಗಿ ಹೇಳಿರುವಂತೆ ನಾನು ನಿನ್ನ ಬಗ್ಗೆ ಹೇಳಬಲ್ಲೆ. ನೀನು ನನಗೆ ಧ್ಯಾನಗಮ್ಯಳಿರುವಿ. ನಾನು ಸದಾ ನಿನ್ನ ಧ್ಯಾನದಲ್ಲಿಯೇ ಇರಲು ನನ್ನ ಅಂತಶ್ಚಕ್ಷುಗಳಿಗೆ ನೀನು ನಿತ್ಯಗೋಚರಳಿರುತ್ತಿ, ಬಾಹ್ಯಚಕ್ಷುಗಳಿಗೆ ನೀನು ದೂರಳೆನಿಸಿದರೂ ನನ್ನ ಧ್ಯಾನಾಂತರ್ಗತಳಾಗಿ ಸದಾ ನನ್ನೆಡೆಯಲ್ಲಿಯೇ ನೀನು ವಾಸವಾಗಿರುವಿ.

ಅವರ್ಣನೀಯ ಸುಂದರೀ, ನಾನು ನೀನೆಂಬ ಅಹಂಭಾವ ಮಮಕಾರಗಳಿಗೆ ಅತೀತವಾದ ಪ್ರೇಮಲೋಕದಲ್ಲಿ ಅದ್ವೈತಭಾವದಿಂದ ಸೇರುವ ಈ ಎರಡು ಕಾತರ ಜೀವಗಳ ಅನುಭವವನ್ನು ಅದೆಂತು ವರ್ಣಿಸಲಿ? ತದೇಕಧ್ಯಾನ ಚಿತ್ತದಿಂದ ಸಾಕ್ಷಾತ್ಕಾರ ಪಡೆದ ಯೋಗಿಯಂತೆ, ನಿಷ್ಠುರ ತಪಸ್ಸಿನಿಂದ ಸಿದ್ಧಿಯನ್ನೈದ ತಪಸ್ವಿಯಂತೆ ಅನನ್ಯ ಭಕ್ತಿಯಿಂದ ಇಷ್ಟದೈವವನ್ನು ಪಡೆದ ಭಕ್ತನಂತೆ, ನಾನೊಂದು ಅನಿರ್ವಚನೀಯವಾದ ಆನಂದವನ್ನು ಅನುಭವಿಸುತ್ತಿರುವೆನೆಂದು ಮಾತ್ರ ಹೇಳಬಲ್ಲೆ.

ಐಹಿಕವನ್ನೂ ಇದರೊಡನೆ ನಮ್ಮನ್ನು ಬಂಧಿಸುವ ಈ ಪ್ರೇಮವನ್ನೂ ಮಾಯೆಯೆಂದು ಶಂಕರಾಚಾರ್ಯರು ಬರೆದಿದ್ದರೂ ಕ್ಷಣಿಕವೆಂದು ಬುದ್ಧನು ತೆಗಳಿದ್ದರೂ ನಶ್ವರವೆಂದು ಕ್ರೈಸ್ತನು ನಿರಾಕರಿಸಿದ್ದರೂ ನಾನು ಈ ಮಾಯನಶ್ವರ ಕ್ಷಣವೇ ನನಗೊಂದು ಯುಗವಾಗಿ ಪರಿಣಮಿಸಿದಂತೆ ಅನುಭವಿಸುತ್ತಿದ್ದೇನೆ. ಪ್ರೇಮವು ಮಾಯೆಯೆ?

ಕ್ಷಣಿಕವೇ ? ನಶ್ವರವೇ ? ನಾನೊಪ್ಪಲಾರೆ. ವಿಶ್ವ ವ್ಯಾಪಾರಕ್ಕೆಲ್ಲ " ಸೂತ್ರೆಮಣಿಗಣಾ ಇವ'' ಅದೇ ಸಂಯೋಜಕ ಶಕ್ತಿಯಾಗಿಲ್ಲವೇ ? ಈ ಪ್ರೇಮದಧಿದೇವತೆಯಾದ ನಿನ್ನನ್ನು ನನ್ನ ಹೃದಯಮಂದಿರದಿಂದ ಅದೆಂತು ತೆಗೆದು ಹಾಕಲಿ ? ಈಶಾವಾಸ್ಯಂ ಇದಂ ಸರ್ವಂ ಎಂದು ಋಷಿಗಳು ಹೇಳಿದರೆ ನನ್ನ ಈ ದೇಹವೆಲ್ಲ ನಿನ್ನಿಂದ, ನಿನ್ನ ಪ್ರೇಮದಿಂದ ಆವಾಸಿತವಾದದ್ದೆಂದು ನಾನು ಹೇಳುತ್ತೇನೆ. ಅಣುರೇಣು ತೃಣಕಾಷ್ಠಗಳಲ್ಲಡಕವಾಗಿದ್ದು ಜಗನ್ನಿಯಾಮಕನು ಈ ವಿಶ್ವದ ವ್ಯಾಪಾರಗಳನ್ನೆಲ್ಲ ನಡೆಸುತ್ತಿರುವಂತೆ ನಿನ್ನ ಪ್ರೇಮವೇ ನನ್ನ ಅಂಗೋಪಾಂಗಗಳಲ್ಲೆಲ್ಲ ವ್ಯಾಪಿಸಿಕೊಂಡು ನನ್ನ ಸರ್ವ ಚಟುವಟಿಕೆಗಳನ್ನು ನಿರ್ದೇಶಿಸುತ್ತದೆ. ಅದೇ ನನ್ನ ಸರ್ವಶಕ್ತಿಯ ಕೇಂದ್ರವಾಗಿದೆ ; ಅಧ್ಯಾತ್ಮದ ಅಧಿಷ್ಠಾನವಾಗಿದೆ ; ಜೀವನದ ಉಸಿರಾಗಿದೆ ; ಈ ದೇಹದ ನಾಡಿಗಳ ಸ್ಪಂದನವಾಗಿದೆ.

ಪತ್ರ ಬರೆಯಲು ವಿಲಂಬವಾಯಿತೆಂದೋ, ನೀನು ಕೇಳಿದ ವಸ್ತ್ರಾಭರಣಗಳನ್ನು ಸಕಾಲದಲ್ಲಿ ತರಲಿಲ್ಲವೆಂದೋ ಕೋಪಿಸಿಕೊಳ್ಳದಿರು ದೇವಿ ! ನಿನ್ನ ಈ ಆರ್ತ ಭಕ್ತನ ಮೇಲೆ ಕರುಣೆದೋರು ; ಕೃಪೆ ಮಾಡು ; ಅನುಗ್ರಹಿಸು. ಒಡಲುಗೊಂಡವ ಹಸಿವ, ಒಡಲುಗೊಂಡವ ಹಸಿವ .... ನೀನೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ ಎಂದು ದೇವರ ದಾಸಿಮಯ್ಯನು ಹೇಳಿದಂತೆ ನಾನೂ ನಿನ್ನಲ್ಲಿ ಸಾಷ್ಟಾಂಗ ದಂಡಪ್ರಣಿಪಾತೇನ ಕೇಳಿಕೊಳ್ಳುವದೇನಂದರೆ ನನ್ನ ಪರಿಸ್ಥಿತಿಯನ್ನು, ನನ್ನ ವಿಹ್ವಲತೆಯನ್ನು, ನನ್ನ ಕಾತರತೆಯನ್ನು ಮನನಂದು ನೀನು ಕೃಪಾದೃಷ್ಟಿಯಿಂದ ನನ್ನನ್ನು ನೋಡು. ನೀನು ಹೊರಿಸುವ ಸರ್ವ ಆರೋಪಗಳನ್ನು ನಾನು ಒಪ್ಪುತ್ತೇನೆ. 'ಸರ್ವಾಪರಾಧಿಯಾಂ ಕ್ಷಮಿಸೆನ್ನ ದೇವಿ' ಎಂದು ನಾನು ಆರ್ತನಾದದಿಂದ ಕೂಗುತ್ತಿರುವದು ನಿನಗೆ ಕೇಳಿಸುವದಿಲ್ಲವೇ ? ನನ್ನ ಈ ಹೀನ ಸ್ಥಿತಿಯನ್ನು ತಿಳಿದೂ ನಿನಗೆ ಕರುಣೆ ಬಾರದೆ ? ಓ ಗೊಡಬೇಕೆಂಬ ಮರುಕ ಉಂಟಾಗಲೊಲ್ಲದೆ ? ದರುಶನ ನೀಡಬೇಕೆಂದು ಮನವಾಗದೇ ? ಕರುಣೆದೋರು ದೇವಿ, ಕರುಣೆದೋರು. ಬೇಗನೇ ದರ್ಶನ ನೀಡಿ ನನ್ನನ್ನು, ನಿನ್ನೀ ಆರ್ತ ಭಕ್ತನನ್ನು ಪೂನೀತಗೊಳಿಸು. ಬೇಗನೆ ಬರುವಿಯಲ್ಲವೇ ?

ಕೊನೆಗೆ ಇನ್ನೊಂದು ಮಾತು ಹೇಳಬಯಸುತ್ತೇನೆ ; ವಿಶ್ವಒಡೆಯಲಿ, ಬ್ರಹ್ಮಾಂಡ ಬಿರಿಯಲಿ, ಮುಗಿಲು ಹರಿಯಲಿ, ನನ್ನ ನಿನ್ನ ಪ್ರೇಮವು ಮಾತ್ರ ತ್ರಿಕಾಲಾಬಾಧಿತ ಸತ್ಯವೆಂಬ ಬಗ್ಗೆ ಸಂದೇಹ ಪಡಬೇಡ.

ಇತಿ ನಿನ್ನ,
ಆರ್ತ ಭಕ್ತ

ವಿ. ಸೂ. : ಈ ಪತ್ರವನ್ನು ಬರೆದಿಟ್ಟು ತಿಂಗಳು ಕಳೆದುಹೋಗಿದ್ದರೂ ಇದನ್ನು ಕೈತಪ್ಪಿ ಎಲ್ಲಿಯೋ ಇಟ್ಟದ್ದರಿಂದ ಅಂಚೆ ಕಾಣದೆ ಹಾಗೇ ಉಳಿದಿತ್ತು. ನಿನ್ನೆ ತತ್ತ್ವದರ್ಶನ ಪುಸ್ತಕವೊಂದನ್ನು ಓದಲು ಕೈಗೆತ್ತಿಕೊಂಡಾಗ ಅಕಸ್ಮಾತ್ತಾಗಿ ಸಿಕ್ಕಿತು. ಮತ್ತೆ ಕಳೆದು ಹೋದೀತೆಂದು ಕೂಡಲೇ ಅಂಚೆಗೆ ಕಳಿಸಿದ್ದೇನೆ. ಅನ್ಯಥಾ ಭಾವಿಸಬಾರದು.

ಭವಿತವ್ಯಂ ಭವತ್ಯೇವ

ಇದು ಬಂತು ಬಂತಿದೊ
ನಮ್ಮ ಕನ್ನಡ ನಾಡು
ಈರ್ಕೋಟಿ ಜನರ ಸಂತಸದ ನೆಲೆವೀಡು
ಕಾವೇರಿಯಿಂದಮಾ ಭೀಮೆ ಪರಿಯಂತ
ಕೃಷ್ಣೆ ತುಂಗೆಯುರನೊಳಗೊಂಡ ಮುದವೀಡು.
ಬನಸಿರಿಯೆ, ಕಡಲೆ
ಗಿರಿ ದರಿ ಬಯಲೆ
ಉಕ್ಕು ಕಬ್ಬಿಣ ಚಿನ್ನಚಂದನ
ಪೀತವಸನ ಮಹಾರ್ಘರತುನ
ತೇಗು ಹೆದ್ದೇಗು ಸಿಮೆಂಟು
ಏನೇನೆಲ್ಲ ಇಲ್ಲುಂಟು
ಸಂಪತ್ತೋ ಸಂಪತ್ತು
'ಉಣಲಿಕ್ಕಿಲ್ಲ ಒಪ್ಪತ್ತು'
ಹುಶ್, ಹೇಳದಿರು, ಬಂದೀತು ಕುತ್ತು.
ಇದು ಬಂತು ಬಂತಿದೊ ನಮ್ಮ ಕನ್ನಡನಾಡು
ಅಟಮಟಿಸದಿರು, ಭಾಪು! ಕಣ್ದೆರೆದು ನೋಡು!

* * *

ಭರತವರ್ಷವನಾಳ್ದ ಚಾಲುಕ್ಯ ಪುಲಿಕೇಶಿ
ಗುರ್ಜರರನಿಕ್ಕಿದರ್ ಆ ರಾಷ್ಟ್ರಕೂಟರು
ಶಕಕರ್ತನಲ್ಲವೆ ಶ್ರೀ ವಿಕ್ರಮಾದಿತ್ಯ
ಎದ್ದ ತೆರೆ ಬಿದ್ದಂತೆ ಮತ್ತೆದ್ದು
ವಿಜಯನಗರದೊಳುದಿಸಿ ಹಾರಿತ್ತು
ಕನ್ನಡದ ಬಾವುಟವು
ಫಡಫಡಿಸಿ ಬಾನೆತ್ತರದೊಳು.
ಅಹಿತರಾರ್ಭಟವು
ಹಿಡಿಮಣ್ಣು ಮುಕ್ಕಿತ್ತಿಳೆಯೊಳು.
ವೀರ ನರಪತಿ ಕೃಷ್ಣರಾಯ-
ನೇನಲ್ಲವೆ!
ಕಲಿಂಗ ಗಜಪತಿವೇಂಟೆಕಾರ!
ಹಿಗ್ಗಿತ್ತು ನಲಿದಿತ್ತು ಕನ್ನಡದ
ರಾಜ್ಯವಾರಿಧಿಯಂದು
ಶ್ರೀಕೃಷ್ಣನೃಪ ಚಂದ್ರದರ್ಶನದಿಂದ!!
ಹಿಗ್ಗೆ ಕುಗ್ಗಾಯಿತ್ತು, ಕನ್ನಡವೆ ಬಿತ್ತು
ಮತ್ತೆಂದಿಗೇಳದಂತೆಯೆ ಬಿತ್ತು
ರಿಪುರಾಜರಡಿಗಳಿಗೆ.
ಇದೇಂ ಮಹಾ! ದುರ್ದೈವವೆಂಬುದಕೆ
ಇತಿಮಿತಿಯುದುಂಟೆ
ಭಾರತವೆ ದಾಸನಂತಾಯ್ತಲ, ಸಪ್ತ
ಸಾಗರೋತ್ತರದ ಆಂಗ್ಲೇಯರಿಗೆ
ಇದೊ ಬಂತು ನೋಡು ದುಃಸ್ಥಿತಿಗೆ ನಮ್ಮ ನಾಡು.

* * *

ಉಪ್ಪು ಹುಳಿಕಾರ ಉಂಡವರಲ್ಲವೆ
ನಮ್ಮದೆಂಬಭಿಮಾನ ನಮಗೇನಿಲ್ಲವೆ
ಇಷ್ಟು ದಿನ, ಶತಮಾನವೆರಡರ ಕಾಲ
ನಡೆಸಿದ್ದ ಸುಲಿಗೆ ಸಾಕಿನ್ನು
ಬಿಡುಗಡೆಯೆ ನಮಗೆ ಬೇಕಿನ್ನು
ಎಂದೆಂದು ಜನರೆದ್ದು ಮೈಮುರಿದೆದ್ದು
ಆಣೆಯಾಗಿ ದಾಸ್ಯರೋಗಕೆ ನೀಡೆ ಮದ್ದು
ಬಂದಿತ್ತು ಬಿಡುಗಡೆಯು
ಬೆಲೆಯರಿತು ತೆತ್ತರೊ ಪ್ರಾಣಗಳ
ಲಕ್ಷಸಂಖ್ಯೆಯಲಿ
ಬಿಡುಗಡೆಯುಕೊಂಡರೊ ಗಾಂಧಿಮಾರ್ಗದಲಿ
ವೀರಜಾಗ್ರತ ಜನರ ಫೂತ್ಕಾರದಿಂದಲೆ
ಸಾರಿ ಸಾಗರದಾಚೆ ತೊಲಗಿಬಿಟ್ಟಿತ್ತು
ಆಂಗ್ಲೇಯ ಜನ, ಅಹಿತ ಜನ.
ನಮ್ಮದೊ ನಮ್ಮದು ನಮ್ಮದೆಲ್ಲ
ಭಾರತವು ನಮ್ಮದೆಂಬುವ ಸೊಲ್ಲ
ಕರ್ಣಕಾಪ್ಯಾಯಮಾನವಾಗಿತ್ತು
ಇದೊ ಬಂತು ಬಂತಿದೊ ನೋಡು ಭಾರತನಾಡು
ಭಾರತೀಯರ ಗೂಡು ಸಕಲರಿಗೆ ಮುದವೀಡು

* * *

ನಮ್ಮದಿದು ಭಾರತ, ಇದರ ಸಿರಿಸಂಪತ್ತು
ನಮ್ಮದಾಗಿಹುದೀಗ!
ಅಲ್ಲವೆಂದವರಾರು! ತಡೆ, ಕೇಳು.
ಏನಿದೀ ಸೊಲ್ಲ!
ನಮ್ಮದಾಗಿಹ ಸಿರಿಯಲೆನ್ನ ಪಾಲೆನಿತು
ನಿನ್ನ ಪಾಲೆಷ್ಟಿಹುದು;
ಇದು ನನ್ನದೊ ಅದು ನನ್ನದು
ಛೀ, ಹುಚ್ಚಗೊಟ್ಟೆ
ನೀನೇಕೊ ಇಲ್ಲೆ, ಇದೊ ಕೊಟ್ಟೆ
ತೊಲಗೊ, ಬೇಕೇನು ಎರಡೇಟು
ಹಿರಿಯ ದನಿ ಗಂಭೀರವಾಗಿ ನುಡಿಯಿತು,
'ಕೊಡುವೆ ನಿಮನಿಮಗೆಲ್ಲ ನಿಮ್ಮ ಪಾಲು,
ಸುಮ್ಮನೆ ಕೊಳ್ಳಿರೊ, ಇಲ್ಲದಿರೆ ಗೋಳು'
ಇರಲಿ, ಸಾಕಿನಿತೆ, ಇಲ್ಲ, ಬೇಕಲ್ಲ,
ಇನ್ನಷ್ಟು, ಹೋಗಲಿ ಬಿಡು ಇಷ್ಟಾದರೂ ಆಯಿತಲ್ಲ.
ಇದು ನಮ್ಮ ರಾಜ್ಯ!
ಕರ್ನಾಟಕವೊ ಮೈಸೂರೊ
ಅಲ್ಲ, ಕನ್ನಡ ರಾಜ್ಯ
ಹೌದೊ, ನಾಮಧೇಯವದೇನೊ?
ಅದ ಕೇಳಲೇಕೊ,
ಆದಿ ಬುನಾದಿಯಿಂದ ಬಂದುದಲ್ಲವೆ
ಇದುವೆ ಕರ್ನಾಟಕ.
ಇರಬಹುದು, ವಿಶ್ವವಿಖ್ಯಾತವಾದುದರಿಂದ
ಇದು ಮೈಸೂರೇ
ನಾವ್ ಕರ್ನಾಟಕ, ನಾವ್ ಮೈಸೂರ
ನೋ ಕರ್ನಾಟಕ, ನೋ ಮೈಸೂರ
ನವಮೈಸೂರ ನವಮೈಸೂರ
ಕರ್ನಾಟಕರತ್ನಸಿಂಹಾಸನಾಧೀಶ್ವರ.
ರಾದರು ನಮ್ಮಯ ಪ್ರಭುವು
ಇಲ್ಲವು ಕರ್ನಾಟಕವು
ನವ ಮೈಸೂರ, ನವ ಮೈಸೂರ
ಏನೊ ಎಂತೊ ಬಂತೋ ಬಂತು
ನವ ಮೈಸೂರ, ನವ ಮೈಸೂರ
ಭವಿತವ್ಯಂ ಭವತ್ಯೇವ.

—ದ. ಅ. ಕೆರೂರ

ಕನ್ನಡ ಚಲಚ್ಚಿತ್ರರಂಗ

ಒಂದು ಸಿಂಹಾವಲೋಕನ

ಲೇ: ಎಸ್. ವಿ. ಪಾಟೀಲ, ಧಾರವಾಡ

ಕನ್ನಡ ಚಿತ್ರಪಟಗಳು ಹೆಚ್ಚಾಗಿ ಹೊರಡುತಿರುವದು ಅಭಿನಂದನೀಯವಾಗಿದ್ದರೂ ಕಲಾದೃಷ್ಟಿಯಿಂದ ಅವು ಪರಿಪೂರ್ಣವಾಗುವಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಅಲ್ಲದೆ ಅನವಶ್ಯಕ ಸ್ಪರ್ಧೆ ಹೆಚ್ಚದಂತೆ ದಕ್ಷತೆ ವಹಿಸಬೇಕಾಗಿದೆ. ಹೊರಗಿನ ಕಲಾವಿದರನ್ನು ಪ್ರೋತ್ಸಾಹಿಸಬಹುದಾದರೂ ನಮ್ಮಲ್ಲಿರುವ ಹೊಸ ಹೊಸ ಕಲಾವಿದರನ್ನು ಅರಿಸಿಕೊಳ್ಳುವದು ಅಗತ್ಯವಾಗಿದೆಂದು ಲೇಖಕರು ಈ ಲೇಖನದಲ್ಲಿ ಸ್ಪಷ್ಟಪಡಿಸಿರುವರು.

★

ವರ್ಷದಲ್ಲೊಂದು ಚಿತ್ರ ಹೊರಟರೆ ಕನ್ನಡಿಗರು ತಮ್ಮ ಮಹಾಭಾಗ್ಯವೆಂದು ತಿಳಿದುಕೊಳ್ಳಬೇಕಾಗಿದ್ದ ಪರಿಸ್ಥಿತಿ ಇಂದು ಕನ್ನಡ ಚಲಚ್ಚಿತ್ರ ರಂಗದಿಂದ ಮಾಯವಾಗಿ ಹತ್ತಾರು ಚಿತ್ರಗಳು ಹೊರಡುವಂತಾಗಿರುವದು. ಒಂದೇ ಒಂದು ಚಿತ್ರ ಹೊರಟಾಗ ಅದರಲ್ಲಿ ನಾವು ಇದುಸರಿ, ಇದುಕೆಟ್ಟ ಎಂದು ಆಯ್ಕೆ ಮಾಡುವದು ಹೇಗೆ ಸಾಧ್ಯ ? ಆಗ ಹೊರಟದ್ದೇ ಒಳ್ಳೆಯ ಚಿತ್ರವಾಗುತ್ತಿತ್ತು. ಆದರೆ ನಿಜವಾಗಿಯೂ ಅಗ ಒಳ್ಳೆಯ ಚಿತ್ರಗಳೇ ಹೊರಬಂದವೆಂಬುದನ್ನು ಯಾರೂ ಅಲ್ಲಗಳೆಯಲಾರರು. ಸಂಸಾರನೌಕಾ, ಹರಿಶ್ಚಂದ್ರ, ವಸಂತಸೇನೆ, ಜೀವನನಾಟಕ ಮೊದಲಾದ ಚಿತ್ರಗಳು ಉತ್ತಮ ಚಿತ್ರಗಳಾಗಿದ್ದವಲ್ಲದೆ ಹಣದ ದೃಷ್ಟಿಯಿಂದಲೂ ಯಶಸ್ವಿಯಾದ ಚಿತ್ರಗಳಾದವು.

ಆದರೆ ಇಂದು ಕನ್ನಡ ಚಿತ್ರರಂಗದಲ್ಲಿ ಸ್ಪರ್ಧೆಯು ಹೆಚ್ಚಿದೆ. ಹಾಗೆಯೇ ಬೇಗ ಬೇಗ ಚಿತ್ರವನ್ನು ಹೊರಡಿಸೋಣ. ಜನ ಹೇಗಾದರೂ ನೋಡುತ್ತದೆ, ರೊಕ್ಕ ಬರುತ್ತದೆ, ಎಂದು ಲೆಕ್ಕ ಹಾಕುವ ಪ್ರವೃತ್ತಿಯೂ ನಿರ್ಮಾಪಕರಲ್ಲಿ ಬೆಳೆಯತೊಡಗಿರುವದು. ಈ ವರ್ಷದ ಕೊನೆಯ ಭಾಗದಲ್ಲಿ ಆರು ಕನ್ನಡ ಚಿತ್ರಗಳು ಏಕಕಾಲಕ್ಕೆ ಪ್ರದರ್ಶನಕ್ಕೆ ಬರುವ ನಿರೀಕ್ಷೆಯಿರುವದರಿಂದ ಸ್ಪರ್ಧೆ ಎಷ್ಟಿದೆಯೆಂಬ ಅಂಶವು ವ್ಯಕ್ತವಾಗುವದು. ನಳದಮಯಂತಿ, ನಳಾಯಿಣಿ, ಮಾರ್ಕಂಡೇಯ, ಚಿಂತಾಮಣಿ ಹೀಗೆ ಅನೇಕ ಚಿತ್ರಗಳು ಪ್ರದರ್ಶನಕ್ಕಾಗಿ ಕಾಯುತ್ತಿರುವವು. ಅದೇ ರೀತಿ ಏಕಕಾಲಕ್ಕೆ ಒಂದೇ ಊರಲ್ಲಿ ಎರಡು ಮೂರು ಕನ್ನಡಚಿತ್ರಗಳು ಈಗ ಪ್ರದರ್ಶನಕ್ಕೆ ಬರುತ್ತಿರುವದನ್ನೂ ನಾವು ಲಕ್ಷಿಸಬೇಕು. ಸದ್ಯಕ್ಕೆ ಭಾಗ್ಯೋದಯ, ಓಹಿಲೇಶ್ವರ ಚಿತ್ರಗಳು ಉ. ಕನ್ನಡದಲ್ಲಿ ಏಕಕಾಲಕ್ಕೆ ಪ್ರದರ್ಶನಕ್ಕೆ ಬಂದಿದ್ದರೆ ಮೈಸೂರ ಭಾಗದಲ್ಲಿ ಕಚದೇವಯಾನಿ ಈ ಮಾಲೆಗೆ ಸೇರುತ್ತದೆ. ಈ ಎಲ್ಲ ವಿವರಣೆಯ ತಾತ್ಪರ್ಯವಿಷ್ಟೆ. ಇಂದು ಮೊದಲಿಗಿಂತ ಕನ್ನಡ ಚಿತ್ರಗಳು ಹೆಚ್ಚೆಚ್ಚಾಗೇ ಹೊರಬರತೊಡಗಿರುವವು ಮತ್ತು ಕನ್ನಡ ಚಲಚ್ಚಿತ್ರರಂಗದಲ್ಲೂ ತೀವ್ರವಾದ ಸ್ಪರ್ಧೆ ತಲೆದೋರಿರುವದು.

ಸ್ಪರ್ಧೆಯಾದಷ್ಟು ಒಳಿತೇ ಎಂದು ಹೇಳಬೇಕು. ಚಿತ್ರ ಉತ್ತಮವಾಗಿದ್ದರೆ ಮಾತ್ರ ಯಶಸ್ವಿಯಾದೀತು. ಹಣಗಳಿಸೀತು ಎಂಬ ಅಂಶ ನಿರ್ಮಾಪಕರಿಗೆ ಮನವರಿಕೆಯಾಗಲು ಇದಕ್ಕಿಂತ ಸಮರ್ಪಕವಾದ ಅಂಶ ಬೇರೊಂದಿಲ್ಲ. ಆದರೆ ಈ ಸ್ಪರ್ಧೆ ಅನವಶ್ಯಕ ಈರ್ಷೆಗೆ ಅವಕಾಶ ಕೊಡಕೂಡದೆಂಬುದನ್ನು ಮರೆಯಬಾರದು. ಶಿವಶರಣೆಯೊಬ್ಬಳ ಜೀವನವನ್ನು ತೆಗೆದುಕೋಡು ಎರಡು ಸಂಸ್ಥೆಗಳು ಚಿತ್ರ ನಿರ್ಮಿಸಿದ ಅಂಶವನ್ನು ಇಲ್ಲಿ ಲಕ್ಷಿಸಬಹುದು.



ಪಂಢರಿಬಾಯಿ

ಮಹಾತ್ಮಾರವರು ಶಿವಶರಣೆ ನಂಬಿಯಕ್ಕ ಪದ್ಮಿನಿ ಪಿಕ್ಚರ್ಸದವರು ಶಿವಶರಣೆ ನಂಬೆಕ್ಕ ಎಂಬ ಚಿತ್ರಗಳನ್ನು ಸಿದ್ಧಪಡಿಸಿದರು. ಮಹಾತ್ಮಾ ಸಂಸ್ಥೆಯು ವಾಡಿಕೆಯಂತೆ ಅದನ್ನು ಬೇಗ ಮುಗಿಸಿ ಬೇಗ ಪ್ರದರ್ಶನಕ್ಕೆ ತಂದಿತು. ಅದು ಕರ್ನಾಟಕದಲ್ಲೆಲ್ಲ ಪ್ರದರ್ಶಿತವಾಗುವ ಹೊತ್ತಿಗೆ ಪದ್ಮಿನಿ ಪಿಕ್ಚರ್ಸದವರ ನಂಬೆಕ್ಕ ಬಂದಳು. ಎರಡನೆಯ ಚಿತ್ರ ಮೊದಲಿನದರಕ್ಕಿಂತಲೂ ಗುಣದ ದೃಷ್ಟಿಯಿಂದ ಉತ್ತಮವಾದುದಾಗಿದ್ದರೂ ಹಣದ ದೃಷ್ಟಿಯಿಂದ ಯಶಗಳಿಸಲಿಲ್ಲ. ಕನ್ನಡ ಚಿತ್ರರಂಗದ ಕ್ಷೇತ್ರ ಮಿತವಾದುದಾಗಿದ್ದು ಅಲ್ಲಿ ಒಂದೇ ಕಥೆಯಿಂದ ಎರಡು ಚಿತ್ರಗಳು ಸಿದ್ಧವಾದರೆ ನಿರ್ಮಾಪಕರಿಗೆ ಯಾವ ಪರಿಸ್ಥಿತಿ ಬರುವದೆಂಬ ಅಂಶವನ್ನು ಈ ಸಂಗತಿಯು ತೋರಿಸಿಕೊಟ್ಟಿತು. ಅನಂತರ ಬಸವಣ್ಣನವರ ಜೀವನವನ್ನು ಆಧರಿಸಿ ಚಿತ್ರ ತೆಗೆಯಲು ಮಹಾತ್ಮಾರವರು, ಗುಬ್ಬಿ ಫಿಲ್ಮ್ಸರವರು ಸಿದ್ಧತೆಯಲ್ಲಿರುವರೆಂಬ ಸುದ್ದಿ ಬಂದಿತ್ತು. ಆದರೆ ಮಹಾತ್ಮಾರವರು ಆ ವಿಚಾರವನ್ನು ಹಿಂದಿನಿಂದ ಬಿಟ್ಟುಕೊಟ್ಟರು. ಇದರಿಂದ ಅನವಶ್ಯಕ ಈರ್ಷೆಯನ್ನು ತಪ್ಪಿಸಿದ್ದಲ್ಲದೆ ಈಗ ತಾನೇ ಪ್ರಗತಿಪಥದಲ್ಲಿರುವ ಕನ್ನಡ ಚಿತ್ರರಂಗಕ್ಕೆ ಧಕ್ಕೆಯಾಗುವದನ್ನು ನಿವಾರಿಸಿದಂತಾಯಿತು.

ಕರ್ನಾಟಕ ಏಕೀಕರಣವಾಗಿ ಕನ್ನಡ ಪ್ರದೇಶಗಳೆಲ್ಲ ಈಗ ಒಂದೇ ಆಡಳಿತಕ್ಕೆ ಸೇರಿರುವದರಿಂದ



ದೈವಸಂಕಲ್ಪದಲ್ಲಿ ಒಂದು ದೃಶ್ಯ

ಉಳಿದೆಲ್ಲ ರಂಗಗಳಿಗೆ ದೊರೆಯುವ ಪ್ರಯೋಜನ ಚಿತ್ರರಂಗಕ್ಕೂ ದೊರೆಯುದಿರವು. ಬೇರೆ ಬೇರೆ ಪ್ರದೇಶಗಳು ಬೇರೆ ಬೇರೆ ಆಡಳಿತಗಳಿಗೆ ಸೇರಿದ್ದರೂ ಈ ಚಿತ್ರಗಳ ಪ್ರದರ್ಶನಕ್ಕೆ ಯಾವ ಆತಂಕವೂ ಬಂದಿರಲಿಲ್ಲ. ಆದರೆ ಹಂಚಿಕೆ ಸಂಸ್ಥೆಗಳು ಮಾತ್ರ ಬೇರೆ ಬೇರೆಯಾಗಿರಬೇಕಾಗುತ್ತಿದ್ದಿತು. ಮತ್ತು ಪ್ರದರ್ಶನವು ಬೇರೆ ಬೇರೆ ಭಾಗಗಳಲ್ಲಿ ಒಂದೆರಡು ದಿನ ಹೆಚ್ಚು ಕಡಿಮೆಯಾಗಬೇಕಾಗುತ್ತಿದ್ದಿತು. ಆದರೆ ಈಗ ಇಡೀ ರಾಜ್ಯಕ್ಕೆ ಒಂದೇ ಹಂಚಿಕೆ ಸಂಸ್ಥೆಯಿದ್ದರೂ ನಡೆಯುವಂತಿದೆ. ಮತ್ತು ಎಲ್ಲ ಭಾಗಗಳಲ್ಲಿ ಅದು ಏಕಕಾಲಕ್ಕೆ ಪ್ರದರ್ಶನಕ್ಕೆ ಬರುವಂತೆ ಹಂಚಿಕೆಗಾರನು ಒಬ್ಬನೆ ಆಗುವದರಿಂದ ನೋಡಿಕೊಳ್ಳಬೇಕಾಗುತ್ತದೆ. ಸರಕಾರದಿಂದಲೂ ಯೋಗ್ಯ ಪ್ರೋತ್ಸಾಹವನ್ನು ನಿರೀಕ್ಷಿಸಬಹುದಾಗಿದೆ.

ಈಗ ಚಲಚ್ಚಿತ್ರಗಳ ಸಂಖ್ಯೆ ಹೆಚ್ಚಿದೆಂಬೇನೋ ನಿಜ. ಆದರೆ ಅವು ಚೆನ್ನಾಗಿರುವವೆ? ಪ್ರಗತಿಪರವಾಗಿರುವವೆ? ತಾಂತ್ರಿಕ ದೃಷ್ಟಿಯಿಂದ ಯೋಗ್ಯ ಮಟ್ಟವನ್ನು ಸಾಧಿಸಿರುವವೆ? ಹಣ ಗಳಿಸಲು ಸಮರ್ಥವಾಗಿರುವವೆ? ಎಂಬ ಅಂಶವನ್ನು ವಿಚಾರಿಸುವದು ಅತ್ಯವಶ್ಯಕರುವದು.

ಈ ಒಂದು ವರುಷದಲ್ಲಿ- ಹೊರಟ ಸುಮಾರು ಹದಿನೇಳು ಚಿತ್ರಗಳಲ್ಲಿ ಲೋಕೇಶ್ವರಿಯವರ ಸ್ತ್ರೀರತ್ನ, ಮಹಾತ್ಮಾರವರ, ಶಿವಶರಣೆ ನಂಬಿಯಕ್ಕ, ಆಷಾಢಭೂತಿ, ದೈವಸಂಕಲ್ಪ, ಗುಬ್ಬಿ ಫಿಲ್ಮ್ಸರವರ ಗುಣಸಾಗರಿ, ರೆಡ್ಡಿಯವರ ರೇಣುಕಾ ಮಹಾತ್ಮೆ, ಶಂಕರ ಪ್ರೊಡಕ್ಶನರವರ ಸದಾರಮೆ, ಎ ವಿ ಎಂರವರ ಆದರ್ಶ ಸತಿ, ಜಯರಾಜ ಫಿಲ್ಮ್ಸರವರ ಭಕ್ತಮಲ್ಲಿಕಾರ್ಜುನ, ಪದ್ಮಿನಿ ಪಿಕ್ಚರ್ಸದವರ ಶಿವಶರಣೆ ನಂಬೆಕ್ಕ, ನಾಯಕಿ ಅ. ಪ್ರೋಡಕ್ಶನದವರ ಕೋಕಿಲವಾಣಿ, ವಿಶ್ವಕಲಾ ಅವರ ಹರಿಭಕ್ತ ಓಹಿಲೇಶ್ವರ, ಲಲಿತಕಲಾ ಫಿಲ್ಮ್ಸರವರ ಪಂಚರತ್ನ, ವಿಠ್ಠಲ ಪ್ರೊಡಕ್ಶನರವರ ಮುತ್ತೈದಿಭಾಗ್ಯ, ಉದಯರವರ ಭಾಗ್ಯೋದಯ ಮತ್ತು ಕಚದೇವಯಾನಿ - ಎಂಟು ಸಾಮಾಜಿಕ ಚಿತ್ರಗಳು ಆರು ಪೌರಾಣಿಕ ಚಿತ್ರಗಳು, ಶಿವಶರಣ ಶರಣೆಯರ ಜೀವನವನ್ನು ಆಧರಿಸಿದ ಚಿತ್ರಗಳು ಮೂರು ಇರುವವು. ಇನ್ನು ಬರಲಿರುವ ಚಿತ್ರಗಳನ್ನು ನೋಡಿದರೆ ಪೌರಾಣಿಕ ಚಿತ್ರಗಳ ಸಂಖ್ಯೆಯೇ ಹೆಚ್ಚಿರುವದು ಕಂಡು ಬರುತ್ತದೆ. ಈಗ ಹೊರಟಿರುವ ಸಾಮಾಜಿಕ ಚಿತ್ರಗಳಲ್ಲಿ ಸ್ತ್ರೀರತ್ನ ಮಹಿನ್ಯಾಚೇ ಬಾಂಗಡಿ ಎಂಬ ಮರಾಠಿ ಚಿತ್ರದ ರೂಪಾಂತರವಾಗಿರುವದು. ಮರಾಠಿ ಚಿತ್ರದಲ್ಲಿ ಅತ್ತಿಗೆ ತೀರಿಕೊಂಡರೆ ಕನ್ನಡ ಸ್ತ್ರೀರತ್ನದಲ್ಲಿ ಅತ್ತಿಗೆ ತೀರಿಕೊಳ್ಳುವದಿಲ್ಲ. ಇದರಲ್ಲಿ ಖಳನಾಯಕನ ಪಾತ್ರವೊಂದನ್ನು ಅನವಶ್ಯಕವಾಗಿ ಚಿತ್ರಿಸಿ ಚಿತ್ರದ ಉದ್ದವನ್ನು ಹೆಚ್ಚಿಸಲಾಗಿರುವದು. ಸದಾರಮೆ ಬಹುದಿನಗಳ ವರೆಗೆ ನಾಟಕವಾಗಿ ಚಿತ್ರರಂಗಕ್ಕೆ ಬಂದುದು. ಆಷಾಢಭೂತಿ ಪ್ರಭಾವಿ ಕಥೆಯಿಲ್ಲದೆ ಸಪ್ಪೆಯಾಗಿರುವ ಚಿತ್ರ. ಗುಣಸಾಗರಿ ಅಡಗೂಲಜ್ಜಿಯ ಕಥೆಯನ್ನು ನಿರೂಪಿಸುವಂಥದು. ದೈವಸಂಕಲ್ಪ ಹಿಂದಿ ವಚನಚಿತ್ರದ ಅಂಶಗಳನ್ನೊಳಗೊಂಡಿರುವಂಥದು. ಹೀಗಾಗಿ ಸಾಮಾಜಿಕ ಚಿತ್ರಗಳಲ್ಲಿ ಹೊಸ ದೃಷ್ಟಿಕೋನದಿಂದ ಕೂಡಿದ ಚಿತ್ರಗಳೆಂದರೆ ಮುತ್ತೈದಿ ಭಾಗ್ಯ ಹಾಗೂ ಭಾಗ್ಯೋದಯವೆಂದು ಹೇಳಬೇಕು. ಇನ್ನು ಪೌರಾಣಿಕ ಚಿತ್ರಗಳ ಕಥಾನಕದ ಬಗ್ಗೆ ವಿಚಾರಿಸೋಣ. ರೇಣುಕಾ ಮಹಾತ್ಮ್ಯೆ ಸ್ಥಳೀಯ ಮಾಹಾತ್ಮ್ಯಕ್ಕೆ ಕಾರಣ ತೋರದ, ಕೊನೆಯ ಭಾಗದಲ್ಲಿ ಮಾತ್ರ ಓಟದ ಕಥೆಯುಳ್ಳ ಚಿತ್ರ. ಆದರ್ಶ ಸತಿ, ನಾಗಪಂಚಮಿಯ ಕಥೆಯದು. ಪಂಚರತ್ನ ಉತ್ತಮ ಕಥೆಯಿಲ್ಲದೆ ಕಳೆಗೆಟ್ಟಿದೆ. ಕಚದೇವಯಾನಿಯಲ್ಲಿ ನಿರ್ದಿಷ್ಟ ಗುರಿಯನ್ನು ಕಥೆ ಒಳಗೊಂಡಿರುವದಿಲ್ಲ. ಶಿವಶರಣರ ಚಿತ್ರಗಳಲ್ಲಿಯೂ ಇದೇ ಬಗೆ. ಅವರ ಜೀವನವನ್ನು ಯಥಾವತ್ತಾಗಿ ನಿರೂಪಿಸುವದು ಕೆಲ ಮಟ್ಟಿಗೆ ಅಸಾಧ್ಯವಿದ್ದರೂ ಆ ಮಹಾನುಭಾವರ ಹಿರಿಮೆಗೆ ಭಂಗ ಬರದಂತೆ ಅದೇ ಹೊತ್ತಿಗೆ ಸಮಕಾಲಿನರ ಇಲ್ಲವೆ ಇತರ ಮಹಾನುಭಾವರ ಜೀವನದ ಅಂಶಗಳನ್ನು ಇವರಲ್ಲಿ ರೂಪಿಸಿ ಚಿತ್ರಿಸಲಾಗುತ್ತಿರುವದು. ಇದರಿಂದ ಚಿತ್ರಿತ ಮಹಾನುಭಾವರಿಗೆ ಹಾಗೂ ಇತರರಿಗೆ ಅನ್ಯಾಯ ಬಗೆದಂತಾಗುವದೆಂಬುದನ್ನೇ ಮರೆಯಲಾಗಿದೆ.

ಕಥಾನಕದ ಬಗ್ಗೆ ಸಾಕಷ್ಟು ಶ್ರದ್ಧೆ ತಾಳದೆ ಮೂಲ ವಸ್ತುಗಳ ಬಗ್ಗೆ ಪೂರ್ಣ ಸಂಶೋಧನೆ



ಆರ್. ನಾಗೇಂದ್ರ ರಾವ

ನಡೆಸದೆ, ಬೇರೆ ಬೇರೆ ಆಧಾರಗಳಿಂದ ಸಂಗತಿಗಳನ್ನು ಕಲೆಹಾಕದೆ ಪೌರಾಣಿಕ ಚಿತ್ರಗಳನ್ನಾಗಲಿ ಶಿವಶರಣರ ಚಿತ್ರಗಳನ್ನಾಗಲಿ ಚಿತ್ರಿಸುವ ಸಾಹಸಕ್ಕೆ ಇಳಿಯಬಾರದು. ಈಗ ಓಹಿಲೇಶ್ವರ ಚಿತ್ರದ ಉದಾಹರಣೆಯನ್ನೇ ಇಲ್ಲಿ ತೆಗೆದುಕೊಳ್ಳೋಣ. ಬುದ್ಧ ಹಾಗು ಬಸವಣ್ಣನವರ ಜೀವನದ ಪರಿಯನ್ನು ಓಹಿಲೇಶ್ವರನಲ್ಲಿ ರೂಪಿಸಿ ಚಿತ್ರಿಸಲಾಗಿದೆ. ಓಹಿಲೇಶ್ವರನ ಜೀವನದ ಪರಿಯನ್ನು ಹರಿಹರನು ಎಷ್ಟು ಉದಾತ್ತವಾಗಿ ಯಥಾವತ್ತಾಗಿ ನಿರೂಪಿಸಿದ್ದಾನೆಂಬುದನ್ನು ಕಥಾಲೇಖಕರು ಲಕ್ಷಿಸಿರುವದೇ ಇಲ್ಲ. ಹರಿಹರನು ತನ್ನ ಕಾಲದಲ್ಲಿಯ ದಂತಕಥೆಗಳನ್ನೂ ಸ್ಥಳೀಯ ಚರಿತ್ರೆಗಳನ್ನೂ ಆಧರಿಸಿ ಬರೆದಿರುವದರಿಂದ ಅದರಲ್ಲಿ ಹೆಚ್ಚಿನ ತಥ್ಯವಿರುವದು ಸ್ವಾಭಾವಿಕ. ಶಿವಶರಣರ ಚಿತ್ರ ನಿರ್ಮಿಸಬೇಕೆನ್ನುವ ನಮ್ಮ ನಿರ್ಮಾಪಕರು ಸಂಶೋಧಕ ಬುದ್ಧಿಯಿಂದ ಚಿಕಿತ್ಸಕ ಮನೋವೃತ್ತಿಯಿಂದ ಕಥೆಯನ್ನು ಕಂಡು ಬರೆಯಿಸಬೇಕು. ಇಲ್ಲವಾದರೆ ಅವು ನಿರಸ ಚಿತ್ರಗಳಾಗಿ ಚಿತ್ರಿತ ಮಹಾನುಭಾವರ ಜೀವನದ ಪರಿಗೆ ಅನ್ಯಾಯ ಬಗೆದಂತಾಗುವದು.

ಪೌರಾಣಿಕ ಚಿತ್ರಗಳಲ್ಲಿ ರೇಣುಕಾ ಮಹಾತ್ಮ್ಯೆ ಉತ್ತಮವೆನಿಸುವಂಥದ್ದಾದರೂ ಸ್ಥಳೀಯ ಪುರಾಣ ಸಂಗತಿಗಳನ್ನು ಲಕ್ಷಿಸದೆ ಚಿತ್ರಿಸಿದ್ದಾಗಿರುವದು. ಎಲ್ಲಮ್ಮನೆಂದು ಅಭಿಧಾನ ಏಕೆ ಬಂತು!

ಸಂವದತ್ತಿಯ ಬಳಿ ಆಕೆ ಏಕೆ ಪ್ರಸಿದ್ಧಿ ಪಡೆದಳು? ಇಷ್ಟೊಂದು ಭಕ್ತರು ಆಕೆಗೆ ಏಕೆ ನಡಕೊಳ್ಳು ವರು ಎಂಬುದರ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರುವ ದಿಲ್ಲ. ಹೀಗಾಗಿ ಆ ಚಿತ್ರ ಆಗಬೇಕಾದಷ್ಟು ಯಶಸ್ವೀ ಚಿತ್ರವಾಗಿರುವದಿಲ್ಲ. ಆದರ್ಶ ಸತಿ- ಹಿಂದಿ ನಾಗಪಂಚಮಿಯದೇ ಕಥೆ, ಕೆಲ ಬದಲಾ ವಣೆಗಳೊಂದಿಗೆ ಕನ್ನಡದಲ್ಲಿ ಚಿತ್ರಿತವಾಗಿರುವದು ಕಚದೇವಯಾನಿಯಲ್ಲಿ ಪ್ರೇಮದ ಹಿರಿಮೆಯನ್ನು ಮಹೋನ್ನತ ರೀತಿಯಲ್ಲಿ ಚಿತ್ರಿಸಿರುವದಿಲ್ಲ. ಹೀಗೆ ಇಲ್ಲಿಯೂ ಕಥಾನಕದ ಬಗೆಗೆ ಸಾಕಷ್ಟು ಲಕ್ಷ್ಯ ಕೊಡುತ್ತಿರುವದಿಲ್ಲ.

ಕಥಾನಕವು ಚಿತ್ರದ ಜೀವಾಳವೆಂಬ ಅಂಶವನ್ನು ನಮ್ಮ ನಿರ್ಮಾಪಕರು ಗಮನಿಸಬೇಕು. ಸಾಮಾಜಿಕ ಚಿತ್ರಗಳಲ್ಲಿ ಪ್ರಗತಿಪರ ದೃಷ್ಟಿಕೋನದ ಕಡೆಗೆ ವಿಶೇಷ ಗಮನಕೊಡಬೇಕು. ಕೇವಲ ಮನೋ ರಂಜನೆಯನ್ನು ಲಕ್ಷ್ಯದಲ್ಲಿರಿಸದೆ ವಿವಿಧ ಸಾಮಾ ಜಿಕ ಸಮಸ್ಯೆಗಳನ್ನು ಚಿತ್ರೀಕರಿಸಲು ಯತ್ನಿಸ ಬೇಕು. ಹಿಂದೀ ಚಿತ್ರಗಳ ಸ್ಪರ್ಧೆಯನ್ನು ಎದು ರಿಸಲು ಇದು ಅತ್ಯವಶ್ಯಕವಾಗಿರುವದು.

ತಾಂತ್ರಿಕ ದೃಷ್ಟಿಯಿಂದ ಮಾತ್ರ ಕನ್ನಡ ಚಿತ್ರ ರಂಗವು ಪ್ರಗತಿಪರವಾಗಿರುವದು. ಓಹಿಲೇಶ್ವರ ಮತ್ತು ಭಾಗ್ಯೋದಯಗಳನ್ನು ನೋಡಿದಾಗ ಕನ್ನಡಚಿತ್ರಗಳು ತಾಂತ್ರಿಕದೃಷ್ಟಿಯಿಂದ ಉತ್ತಮ ಮಟ್ಟವನ್ನು ಸಾಧಿಸಬಲ್ಲವೆಂಬುದು ಕಂಡು ಬರು ವದು. ಛಾಯಾಗ್ರಹಣ, ಧ್ವನಿಗ್ರಹಣ, ಈಗ ಒಂದು ಮಟ್ಟವನ್ನು ಮುಟ್ಟಿದಂತಾಗಿರುವದು. ಕಲಾದಿಗ್ದರ್ಶನವು ಸಹ ಮೇಲ್ಮಟ್ಟವನ್ನು ಪಡೆ ಯುತ್ತಿರುವದಕ್ಕೆ ಓಹಿಲೇಶ್ವರದಲ್ಲಿಯ ಸೋಮ ನಾಥ ದೇವಾಲಯದ ಸೆಟ್ಟಿಂಗುಗಳು ಸಾಕ್ಷಿಯಾ ಗಿವೆ. ಸಂಗೀತದ ಬಗ್ಗೆ ಹೇಳಬೇಕಾದರೆ ಅನುಕರಣೆ ಇನ್ನೂ ತಪ್ಪಿಲ್ಲವಾದರೂ ಕೆಲ ಚಿತ್ರಗಳು ಇಂಪಾದ ಗೀತಗಳನ್ನು ಒದಗಿಸಿರು ವದು ಗಮನಾರ್ಹವಾದ ಅಂಶವಾಗಿರುವದು. ದೈವಸಂಕಲ್ಪದ ಅನೇಕ ಗೀತಗಳು ಹಿಂದಿ ಗೀತ ಗಳ ಅನುಕರಣವಾಗಿವೆ. ಭಾಗ್ಯೋದಯದ ಒಂದೆರಡು ಗೀತಗಳಲ್ಲಿ ಅನುಕರಣೆ ಕಂಡುಬರು ವದು. ಆದರೆ ಇನ್ನುಳಿದ ಹಲವು ಚಿತ್ರಗಳಲ್ಲಿ ಕನ್ನಡ ಪರಂಪರೆ ಬೆಳೆದು ಬಂದಿರುವದು ಒಡೆದು ಕಾಣುತ್ತದೆ. ಇತ್ತೀಚೆಗಿನ ಚಿತ್ರಗಳಾದ ಭಾಗ್ಯೋ- ದಯ, ಮುತ್ತೈದೆಭಾಗ್ಯ, ಓಹಿಲೇಶ್ವರಗಳಲ್ಲಿ ತುಂಬ ಸೊಗಸಾದ ಹಾಗೂ ಇಂಪಾದ ಗೀತಗಳು ಹಿನ್ನೆಲೆಯ ಸಂಗೀತ ನಮಗೆ ಕೇಳಸಿಗುತ್ತವೆ. ಆದರೆ ನೃತ್ಯದ ಬಗ್ಗೆ ಮಾತ್ರ ಅಸಮಾಧಾನಕರ ಪರಿಸ್ಥಿತಿಯೇ ಇದೆ. ಶಾಸ್ತ್ರೀಯ ನೃತ್ಯಗಳಿಲ್ಲ ದಿದ್ದರೂ ಭಾವಪೂರ್ಣವಾದ ಗೀತಗಳಿಗನುಸಾರ ವಾಗಿಯಾದರೂ ಜಾನಪದ ನೃತ್ಯಗಳನ್ನು ಒಳ ಗೊಳ್ಳಬೇಕಾದುದು ಅವಶ್ಯ. ೧೯೫೫ರ ಕನ್ನಡದ ಉತ್ತಮ ಚಿತ್ರವೆಂದು ರಾಷ್ಟ್ರಪತಿಗಳಿಂದ ಪ್ರಶಸ್ತಿ ಪತ್ರ ಪಡೆದ ಮಹಾಕವಿ ಕಾಳಿದಾಸದಲ್ಲಿಯ ಕೋಲಾಟದ ನೃತ್ಯವು ತುಂಬ ಸೊಗಸಾಗಿರುವ ದನ್ನು ಲಕ್ಷಿಸಬೇಕು. ಅಂತಹ ಹಲವಾರು ನೃತ್ಯ ಗಳನ್ನು ಅತ್ತಿತ್ತ ಕಂಣು ಹೊರಳಿಸಿದಾಗ ನಾವು ಕಾಣುತ್ತೇವೆ. ಸುಗ್ಗಿಯ ಕುಣಿತ ಮೊದಲಾದವು ಬಹು ಸೊಗಸಾಗಿ ಕಾಣುತ್ತವೆ. ಅತ್ತೊಮ್ಮೆ ಇತ್ತೊಮ್ಮೆ ಕೈ ಮೈ ಹೊರಳಿಸಿದರೆ ಇಂದಿನ ನೃತ್ಯ ವಾಗುತ್ತದೆ. ಓಹಿಲೇಶ್ವರ ಓರ್ವ ಶಿವಶರಣನ ಚಿತ್ರ. ಅಲ್ಲಿ ಶುಕ ಗುರುವಿನ ಅವಕೃಪೆಗೆ ಪಾತ್ರ ವಾಗುವ ಸಂದರ್ಭದಲ್ಲಿಯ ನೃತ್ಯ ಅಸಹ್ಯಕರವಾದು ದಾಗಿದೆ. ಆ ಚಿತ್ರದ ಹಿರಿಮೆಗೆ ಅದೊಂದು ಕುಂದೆಂದು ಹೇಳಬಹುದು.

ಕನ್ನಡ ಚಿತ್ರರಂಗದಲ್ಲಿ ಪಂಢರಿಬಾಯಿ, ಬಿ. ಸರೋಜಾದೇವಿ, ಸಂಧ್ಯಾ, ರೇವತಿ, ವಿದ್ಯಾ, ಎಂ. ವಿ. ರಾಜಮ್ಮ, ಮೈನಾವತಿ, ಪ್ರತಿಮಾದೇವಿ, ರಾಜಕುಮಾರ, ಕಲ್ಯಾಣಕುಮಾರ, ಸಂಪತ್, ಅಶ್ವತ್ಥ, ಆರ್. ನಾಗೇಂದ್ರರಾವ, ಹೊನ್ನಪ್ಪ ಭಾಗವತರ, ಬಾಳಕೃಷ್ಣ, ಗುಬ್ಬಿ ವೀರಣ್ಣ, ನರ ಸಿಂಹರಾಜು, ಡಿಕ್ಕಿ ಮಾಧವರಾವ ಹೀಗೆ ಕೆಲವೇ ಉತ್ತಮ ನಟನಟಿಯರು ಇದ್ದಾರೆ. ಆದರೂ ಕನ್ನಡ ನಿರ್ಮಾಪಕರು ತಮಿಳು, ತೆಲುಗು ಭಾಷೆಗಳ ತಾರಾಗಣವನ್ನು ಕನ್ನಡ ಚಿತ್ರಗಳಲ್ಲಿ ಅಭಿನಯಿ ಸಲು ಆಮಂತ್ರಿಸುತ್ತಿರುವರು. ಸೂರ್ಯಕಲಾ, ಸಾಹುಕಾರ ಜಾನಕಿ, ಭಾನುಮತಿ, ಜಮುನಾ, ಟಿ. ಎ. ಮಧುರಂ ಹೀಗೆ ಅನೇಕರು ಕನ್ನಡ ಚಿತ್ರ ಗಳಲ್ಲಿ ಪ್ರಮುಖ ಪಾತ್ರಗಳನ್ನು ಪಡೆದವರಿರುವರು ಪಡೆಯುತ್ತಿರುವರು. ಬೇರೆ ಭಾಷೆಯ ತಾರಾಗಣ

ಆಮಂತ್ರಿಸಬಾರದೆಂದಲ್ಲ ಆದರೆ ಕರ್ನಾಟಕದ ಹೊಸ ಹೊಸ ಕಲಾವಿದರನ್ನು ಆರಿಸಿಕೊಳ್ಳಬೇಕಾಗಿರುವದು ಅವಶ್ಯವಿರುವದು. ಭಕ್ತ ಮಾರ್ಕಾಂಡೇಯ ಚಿತ್ರಕ್ಕೆ ಬೆಂಗಳೂರಿನ ಓರ್ವ ಶಾಲಾಬಾಲಕನನ್ನು ಮಾರ್ಕಂಡೇಯನ ಪಾತ್ರಕ್ಕೆ ಮೊದಲು ಗೊತ್ತುಮಾಡಿಕೊಂಡು ಹಿಂದಿನಿಂದ ಬೇರೊಬ್ಬನಿಗೆ ಅದನ್ನು ಕೊಡಲಾಯಿತು. ಓರ್ವ ಬಾಲಿಕೆ (ಬೇಬಿ ಉಮಾ) ಈಗ ಆ ಪಾತ್ರವನ್ನು ನಿರ್ವಹಿಸುತ್ತಿರುವಳು. ಇನ್ನೂ ಒಂದೆರಡು ಚಿತ್ರಗಳಲ್ಲಿ ಹೀಗೆ ಪಾತ್ರಗಳ ಬದಲಾವಣೆ ನಡೆದಿರುವದು. ಇದು ನಿರ್ಮಾಪಕರ ಚಂಚಲವೃತ್ತಿಯನ್ನೋ ಕಲಾವಿದರ ನಿರ್ಲಕ್ಷ್ಯವನ್ನೋ ವ್ಯಕ್ತಪಡಿಸುತ್ತಿದೆಯೆಂದು ಹೇಳಿದರೆ ತಪ್ಪೆನಿಸದು. ಹೊರಗಿನವರಿಗೆ ಅವಕಾಶ ಕೊಡಬಾರದೆಂದು ಯಾರೂ ಹೇಳುವದಿಲ್ಲ. ಆದರೆ ಅವರು ಕನ್ನಡ ಚಿತ್ರಗಳಿಂದ ಪ್ರಯೋಜನ ಪಡೆದು ಖ್ಯಾತಿ ಪಡೆದು ಕನ್ನಡದಲ್ಲಿ ಒಂದು ಶಬ್ದ ನಾಡಿದರೂ ತಮ್ಮ ಅಂತಃಸ್ಥಿಗೆ ಕುಂದು ಎಂದು ತಿಳಿಯುತ್ತಿರುವ ವರೆಗೆ ಅವರಿಗೆ ಪ್ರೋತ್ಸಾಹ ಕೊಡುವದೆಂದರೆ ನಮ್ಮನ್ನು ನಾವೇ ಅವಮಾನಮಾಡಿಕೊಂಡಹಾಗೆಯೇ ಸರಿ. ಜಮುನಾಳ ಉದಾಹರಣೆಯನ್ನು ಇಲ್ಲಿ ಲಕ್ಷಿಸಬಹುದಾಗಿದೆ. ಕರ್ನಾಟಕದ ಕಲಾವಿದರು ಅಭಿನಯದಲ್ಲಿ ಹಿಂದೆ ಬಿದ್ದಿಲ್ಲ ವೆಂಬುದನ್ನು ಪಂಢರಿಬಾಯಿ ರೇಣುಕಾಮಹಾತ್ಮ್ಯದಲ್ಲಿ, ಗುಣಸಾಗರಿಯಲ್ಲಿ, ಸರೋಜಾದೇವಿ ಪಂಚರತ್ನದಲ್ಲಿ ಎಂ. ವಿ. ರಾಜಮ್ಮ ಶಿವಶರಣೆ ನಂಬೆಕ್ಕದಲ್ಲಿ ರಾಜಕುಮಾರ ಓಹಿಲೇಶ್ವರದಲ್ಲಿ ಮುತ್ತೈದೆ ಭಾಗ್ಯದಲ್ಲಿ ಕಲ್ಯಾಣಕುಮಾರ ತೋರಿದ ಅಭಿನಯದಿಂದ ಕಂಡುಕೊಳ್ಳಬಹುದಾಗಿದೆ. ದಿಗ್ದರ್ಶಕರು ಅವರಿಗೆ ಕೊಡುವ ಅವಕಾಶವನ್ನು ಇದು ಅವಲಂಬಿಸಿರುವದು. ಓಹಿಲೇಶ್ವರದಲ್ಲಿ ಕಲ್ಯಾಣಕುಮಾರನು ಸುಧರ್ಮನಾಗಿ ನೀಡಿದ ಅಭಿನಯವು ಹಿಡಿಸುವಂಥದಲ್ಲ. ದಿಗ್ದರ್ಶಕರು ಅರಸರ ಭಾವವ್ಯೆದುನರೆಲ್ಲ ಸ್ವಲ್ಪ ಹುಚ್ಚಾಗಿಯೇ ಅಭಿನಯಿಸಬೇಕೆಂದು ಎಣಿಸಿಕೊಂಡು ಹಾಗೆಯೇ ಅಭಿನಯಿಸಲು ಅವನಿಗೆ ತಿಳಿಸಿದ್ದಿರಬೇಕು. ನಾವು ದಿಗ್ದರ್ಶಕರ ಕೈಗೊಂಬೆಗಳು ಎಂದು ಈಗ ಚಿತ್ರರಂಗದಿಂದ ಹಿಂದೆ ಸರಿಯಲೆತ್ನಿಸುತ್ತಿರುವ ಹರಿಣಿ ಒಮ್ಮೆ ಹೇಳಿದ್ದುಂಟು. ಇದರಿಂದ ಅಭಿನಯ ದಿಗ್ದರ್ಶಕರ ನಿರ್ದೇಶನವನ್ನೇ ಹೆಚ್ಚಾಗಿ ಅವಲಂಬಿಸಿದೆಯೆಂದರೆ ತಪ್ಪಾಗದು. ಅದಕ್ಕಾಗಿ ದಿಗ್ದರ್ಶಕರು ಈ ಈ ಪಾತ್ರಗಳು ಹೀಗೆಯೇ ಅಭಿನಯಿಸಬೇಕೆಂದು ಎಣಿಕೆ ಹಾಕಿಕೊಳ್ಳದೆ ಈ ಪ್ರಸಂಗದಲ್ಲಿ ಹೇಗೆ ಅಭಿನಯಿಸಬೇಕೋ ಹಾಗೆ ಅಭಿನಯಿಸೆಂದು ಕಲಾವಿದನಿಗೆ ಸ್ವಾತಂತ್ರ್ಯ ಕೊಟ್ಟು ಅವನ ಅಭಿನಯವನ್ನು ತಿದ್ದುತ್ತಹೋದರೆ ಅಭಿನಯ ಹೆಚ್ಚು ಸ್ವಾಭಾವಿಕ ರೀತಿಯಲ್ಲಿ ಬರಲು ಸಾಧ್ಯವಾದೀತು.

ಆರ್. ನಾಗೇಂದ್ರರಾವ, ಎಚ್. ಎಲ್. ಎನ್. ಸಿಂಹ, ಡಿ. ಶಂಕರಸಿಂಗ, ಬಿ. ವಿ. ಆಚಾರ್ಯ, ಮಂಜುನಾಥ, ಗಣೇಶಸಿಂಗ, ಟಿ. ವಿ. ಸಿಂಗಠಾಕೂರ ಇವರು ನಮ್ಮ ಚಿತ್ರರಂಗದ ಕೆಲ ದಿಗ್ದರ್ಶಕರು. ಇವರಲ್ಲಿ ಮೊದಲಿನ ನಾಲ್ವರು ಕಳೆದ ಹತ್ತಾರು ವರ್ಷಗಳಿಂದ ಚಿತ್ರಗಳಲ್ಲಿ ಶ್ರಮಿಸಿರುವರು. ಡಿ. ಶಂಕರಸಿಂಗ ಬೇಗ ಬೇಗ ಚಿತ್ರ ಕೊಡಬೇಕೆಂಬ ಹವಣಿಕೆಯವರು. ಬಿ. ವಿ. ಆಚಾರ್ಯರು ಸ್ವಲ್ಪ ತಡವಾದರೂ ಅಡ್ಡಿಯಿಲ್ಲ ತಕ್ಕಮಟ್ಟಿಗೆ ಉತ್ತಮಚಿತ್ರ ಕೊಡೋಣ ಎಂಬ ಪ್ರವೃತ್ತಿಯವರು. ಆದರೆ ಕನ್ನಡದಲ್ಲಿ ಅಧಿಕ ಸಂಖ್ಯೆಯಲ್ಲಿ ಚಿತ್ರಗಳು ಬರುತ್ತಿರುವದಕ್ಕೆ ಇವರೆಲ್ಲರೂ ಶ್ರಮಿಸಿರುವರು. ಆದರೆ ಈಗ ಉತ್ತಮವಾದ ಹಾಗೂ ಹಿಂದೀ ಚಿತ್ರಗಳ ಸ್ಪರ್ಧೆಯನ್ನು ಎದುರಿಸಬಲ್ಲ ಚಿತ್ರಗಳನ್ನು ಇವರು ನಿರ್ಮಿಸಬೇಕಾಗಿರುವದು.

ಹೀಗೆ ಸುಮಾರು ೧೯೩೪ರಲ್ಲಿ ಪ್ರಾರಂಭವಾದ ಕನ್ನಡ ಚಲಚ್ಚಿತ್ರ ರಂಗವು ಅನೇಕ ಕಷ್ಟನಷ್ಟಗಳನ್ನು ಎದುರಿಸಿ ಈಗ ಒಂದು ಮೂರ್ತಸ್ವರೂಪವನ್ನು ಪಡೆದಿದೆಯಲ್ಲದೆ ಪ್ರಗತಿಪರವಾದ ಮಾರ್ಗದಲ್ಲಿ ಸಾಗಿರುವದು. ಅದು ಹೀಗೆಯೇ ಉತ್ತರೋತ್ತರ ಪ್ರಗತಿ ಸಾಧಿಸುವಂತೆ ಮಾಡುವದು ಕರ್ನಾಟಕದಲ್ಲಿಯ ಪ್ರೇಕ್ಷಕರನ್ನು ಅವಲಂಬಿಸಿರುವದು. ಕನ್ನಡ ಚಿತ್ರಗಳು ಕನಿಷ್ಠ ಶತದಿನೋತ್ಸವವನ್ನಾದರೂ ಕಾಣುವಂತೆ ಅವರು ಮಾಡಿದಲ್ಲಿ ಹಾಗೆ ಕಾಣುವಂತೆ ನಿರ್ಮಾಪಕರು ಉತ್ತಮ ಚಿತ್ರಗಳನ್ನು ತಯಾರಿಸಿದಲ್ಲಿ ಕನ್ನಡ ಚಲಚ್ಚಿತ್ರ ರಂಗವು ಭರದಿಂದ ಅಭ್ಯುದಯ ಹೊಂದದಿರದು.

—◇—

ಶ್ರೇಷ್ಠ ಮಾನವನ ಮುಪ್ಪುರಿ ಜೀವನ

ಶ್ರೇಷ್ಠ ಮಾನವನ ಜೀವನದ ಪರಿಯು ಮುಪ್ಪುರಿದಾದುದು. ಅವನು ಸದ್ಗುಣಿಯಾಗಿರುವದರಿಂದ ಕಳವಳಗಳಿಂದ ಮುಕ್ತನಾಗಿರುವನು; ಅವನು ಜಾಣನಾಗಿರುವದರಿಂದ ದಿಗ್ಭ್ರಾಂತನಾಗಬೇಕಾಗಿಲ್ಲ; ಅವನು ದಿಟ್ಟನಾಗಿರುವದರಿಂದ ಭೀತಿಯಿಂದ ಮುಕ್ತನಾಗಿರುವನು.

—ಕಾನಫ್ಯುಶಸ್.

ಸಾಧಾರಣ ಬುದ್ಧಿವಂತಿಕೆಯುವರ ಟೀಕೆ

ಸಾಧಾರಣ ಬುದ್ಧಿವಂತಿಕೆಯ ಜನರು ತಮಗೆ ಎಟಕಲಾರದ್ದನ್ನೆಲ್ಲ ಸಾಮಾನ್ಯವಾಗಿ ಖಂಡಿಸಿರುವರು.

—ಲಾಕ್ ಫುಕಾಲ್ಟ್.

॥ ಓಂ ತತ್ಸತ್ ॥

ಆಸ್ತಿಕಾಭಿಮಾನಿಗಳಿಗೆ ಶುಭಶ್ರೈಲಿ !
ಅತ್ಯಾವಶ್ಯಕವಾದ ಸರಳ ಭಾಷಾ ! !

ಜಡಿ ಸಿದ್ಧಾಶ್ರಮದಲ್ಲಿ ಪ್ರಕಟವಾದ

ವೇದಾಂತ ಗ್ರಂಥಗಳು

(ಜ್ಞಾನಪರವಾದ ಅನೇಕ ಇತಿಹಾಸಯುಕ್ತ)
ದಶೋಪನಿಷದ್ಭಾಷ್ಯರತ್ನಮಾಲಾ ೪—೦—೦
(ಶ್ರೀಮನ್ನಿ ಜಗುಣಕೃತ)
ಕೈವಲ್ಯ ಪದ್ಧತಿ (ಸುಬೋಧ ಟೀಕಾ) ೪—೦—೦
(ದೃಷ್ಟಾಂತ ದ್ರಾಷ್ಟಾಂತ ಸುರಿಮಳೆ)
ಜ್ಞಾನವೈರಾಗ್ಯಪ್ರಕಾಶ, ೪—೦—೦
(ಟೀಕಾ ತಾತ್ಪರ್ಯ)
ತೈತ್ತಿರಿಯೋಪನಿಷತ್ ೧—೦—೦
ಅಪರೋಕ್ಷಾನುಭೂತಿ ೦—೮—೦
ಮಹಾವಾಕ್ಯವಿಚಾರ ೦—೮—೦

(ಟೀಕಾ ತಾತ್ಪರ್ಯ ಸಹಿತವಾಗಿ ಬರೆದ)
ಗ್ರಂಥಗಳು ಸಿಗುವ ಸ್ಥಳ :

ಸ್ವಾಮಿ ಶಂಕರಾನಂದ ಪರಮಹಂಸ

ಜಡಿ ಸಿದ್ಧಾಶ್ರಮ ಗಣೇಶಪೇಟ,
ಹುಬ್ಬಳ್ಳಿ

ನೂತನ ದೀಪಾವಳಿಯು ಸಕಲರಿಗೂ
ಸಮೃದ್ಧಿಯನ್ನೀಯಲಿ

ಫೋನ್ ನಂ. : ಆಫೀಸ್ 18–ರೆಸಿಡೆನ್ಸ್ 128
ಟೆಲಿಗ್ರಾಂ :- ' ಭಾರತ್ '

ಭಾರತ್ ಆಯಿಲ್ ಮಿಲ್ಸ್ ಲಿ.,


ಶೇಂಗಾ ಎಣ್ಣೆ ತಯಾರಕರು ಮತ್ತು
ಮಾರಾಟಗಾರರು
ಪೋಸ್ಟ್ ಬಾಕ್ಸ್ ನಂ. 28
ದಾವಣಗೆರೆ ಸಿಟಿ

ನಿಮಗೆ ಬೇಕಾಗುವ ಶ್ರೇಷ್ಠ ದರ್ಜೆಯ ಶೇಂಗಾ ಎಣ್ಣೆ ಮತ್ತು ಶೇಂಗಾ ಹಿಂಡಿಗಳನ್ನು ಅತ್ಯಂತ ಪ್ರಾಮಾಣಿಕ ರೀತಿಯಿಂದ ಪೇಟೆಯ ನ್ಯಾಯವಾದ ಬೆಲೆಗಳಲ್ಲಿ ಪೂರೈಸುತ್ತೇವೆ.
ಇಂದೇ ನಿಮ್ಮ ಆರ್ಡರಗಳನ್ನು ಕೊಟ್ಟು ವ್ಯವಹರಿಸಿರಿ.

ಮ್ಯಾನೇಜಿಂಗ್ ಏಜೆಂಟ್ಸ್ :
ಜಯ ಇಂಡಸ್ಟ್ರಿಯಲ್ ಏಜೆನ್ಸಿ,
ದಾವಣಗೆರೆ ಸಿಟಿ

ಪಾರ್ಟನರರು :
ಐನಳ್ಳಿ ಶರಣಪ್ಪ, ನವಲೆ ಬಸವಣ್ಣೆಪ್ಪ.

★ ಬಹುಜನಗಳ ಮೆಚ್ಚಿಗೆಯನ್ನು ಪಡೆದ ನಂಬರ್ ೨೦ ★



ಗೋಪಿ ಬೀಡಿಗಳನ್ನೇ ಸದಾ ಉಪಯೋಗಿಸಿರಿ !

ತ್ವರೆಮಾಡಿರಿ ! ಸ್ಥಾಪಿತ ೧೯೪೮ ತ್ವರೆಮಾಡಿರಿ !!

ದೀಪಾವಳಿಯು ಸರ್ವರಿಗೂ ಸುಖ-ಸಂಪದವನ್ನೀಯಲಿ !

ಏಕಮೇವ, ಆಧುನಿಕ, ಯಂತ್ರೋಪಕರಣಗಳಿಂದ
ಸುಸಜ್ಜಿತವಾದ ಒಂದೇ ಒಂದು ಲಾಂಡ್ರಿ

★

ನಿಮ್ಮ ಬೆಲೆಯುಳ್ಳ ಬಟ್ಟೆಗಳ ಸ್ವಚ್ಛತೆಗಾಗಿ ಒಮ್ಮೆ ಸಂದರ್ಶಿಸಿ ಖಾತ್ರಿ ಮಾಡಿಕೊಳ್ಳಿರಿ !
ನಮ್ಮ ಅತಿ ಕಡಿಮೆ ದರಗಳು :
ಊಲನ್ ಕೋಟ ೧—೮—೦ — ಊಲನ್ ಪ್ಯಾಂಟ ೧—೦—೦
ಉಲನ್ ಗ್ಯಾಬರಡಿನ್, ಸರ್ಜ ಮುಂತಾದ ಯಾವತ್ತು ಕಿಮ್ಮತ್ತಿನ ಅರಿವೆಗಳಿಗೆ
ಖಾತ್ರಿಯಿಂದ ಬಂಣ ಹಾಕುತ್ತೇವೆ !

ಗಾರಮೆಂಟ್ ಕ್ಲೀನಿಂಗ ವರ್ಕ್ಸ

ದುರ್ಗದ ಬೈಲ, ಕಿಲ್ಲೇದ ರಸ್ತೆ
ಹುಬ್ಬಳ್ಳಿ

ಖಾತೆಕಿರ್ದಿ ಮುದ್ರಾಸು ಲೆಡ್ಜರುಗಳು

§ ಸ್ಟೂಡೆಂಟು ನೋಟಬುಕ್ಸ್
§ ಯಕ್ಸರಸೈಜು ಮತ್ತು ಗ್ರಾಫ್ ಬುಕ್ಸ್
§ ಶಾಲೆ ಕಾಲೇಜಿನ ಎಲ್ಲ ಪುಸ್ತಕಗಳು
§ ಸಾಹಿತ್ಯ ಪುಸ್ತಕಗಳು ಮತ್ತು
§ ಎಲ್ಲ ವಿಧದ ಕಾಗದ, ರಟ್ಟು, ಸ್ಟೇಶನರಿಗಳಿಗೆ

ಯಜಮಾನ ಎಂಡ್ ಬ್ರದರ್ಸ್

ಕಾಗದ ಮತ್ತು ಪುಸ್ತಕ ವ್ಯಾಪಾರಿ — — **ಬ್ರಾಹ್ಮಣ ಬೀದಿ, ಬಳ್ಳಾರಿ**
Dealers of Mysore Paper Mills Products.

ನಮ್ಮ ಎಲ್ಲ ಗ್ರಾಹಕರಿಗೆ ದೀಪಾವಳಿಯು ಮಂಗಲದಾಯಕವಾಗಲಿ.

Licenced to post without prepayment

Regd. No. B 3148

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ " ಲೋಕಶಿಕ್ಷಣ ಟ್ರಸ್ಟಿನ " ಪರವಾಗಿ ಹ. ರಾ. ಪೊಹರೆಯವರು ಮುದ್ರಿಸಿ ಪ್ರಕಟಿಸಿದರು.